# ಸಮ್ಯಗ್ದರ್ಶನದ ವಿಧಿ

ಲೇಖಕರು :

ಶ್ರೀ ಸಿ. ಎ. ಜಯೇಶ ಮೋಹನಲಾಲ ಸೇಠ, ಬಿ.ಕಾಂ., ಎಫ್.ಸಿ.ಎ.

(ಬೋರಿವಿಲಿ)

ಕನ್ನಡ ಅನುವಾದಕರು :

ಬ್ರ. ಶ್ರೀ ರತನಚಂದ ನೇಮಿನಾಥ ಕೋಟಿ ಎಂ.ಎ.

ಯಾವ ಜೀವವು ರಾಗ ದ್ವೇಷ ರೂಪದಿಂದ
ಪರಿಣಮಿತವಾದ ಬಳಿಕವೂ ಸಹ ಕೇವಲ
ಶುದ್ಧಾತ್ಮನಲ್ಲಿಯೇ (ದ್ರವ್ಯಾತ್ಮನಲ್ಲಿ ಸ್ವಭಾವದಲ್ಲಿ)
ನನ್ನತನ (ಏಕತ್ವ) ಮಾಡುತ್ತಾನೆ ಮತ್ತು ಅದರದೇ
ಅನುಭವ ಮಾಡುತ್ತಾನೆ, ಆ ಜೀವವೇ ಸಮ್ಯಗ್ದೃಷ್ಟಿಯಿದೆ.
ಅರ್ಥಾತ್ ಇದುವೇ ಸಮ್ಯಗ್ದರ್ಶನದ ವಿಧಿ ಇದೆ.

ಪ್ರಕಾಶಕರು :

ಸಮ್ಯಕ್ತ್ವ ಪ್ರಕಾಶನ

ಅಷ್ಟಮ ನಂದೀಶ್ವರ ಅತಿಶಯ ಕ್ಷೇತ್ರ, ದೇವಲಾಪುರ

## ಜಿನವಾಣಿಯ ಪರಮ ಭಕ್ತರು

ಹೆಸರಿನ ಮೋಹರಹಿತರಾದ ಆತ್ಮೀಯ ಸಹೋದರಿಯೊಬ್ಬರು ಈ ಗ್ರಂಥವನ್ನು ಪ್ರಕಾಶನಗೊಳಿಸಿದ್ದಾರೆ. ಅವರಿಂದ ಇಂಥ ಧರ್ಮಕಾರ್ಯಗಳು ಇನ್ನೂ ಹೆಚ್ಚು ನಡೆಯಲಿ ಎಂದು ಹಾರ್ದಿಕವಾಗಿ ಅಭಿನಂದಿಸುತ್ತೇವೆ.

**31–3–2024** ಬ್ರ. ರತನಚಂದ ನೇ. ಕೋಟಿ

ಇಂಡಿ

# ಸಮ್ಯಗ್ದರ್ಶನದ ವಿಧಿ

ಲೇಖಕರು :
ಶ್ರೀ ಸಿ. ಎ. ಜಯೇಶ ಮೋಹನಲಾಲ ಸೇಠ ಬಿ.ಕಾಂ., ಎಫ್.ಸಿ.ಎ.
ಬೋರಿವಿಲಿ, ಮುಂಬಯಿ

ಕನ್ನಡ ಅನುವಾದಕರು :
ಬ್ರ. ಶ್ರೀ. ರತನಚಂದ ನೇಮಿನಾಥ ಕೋಟಿ ಎಂ.ಎ.
ಇಂಡಿ, ಜಿ. ವಿಜಯಪುರ

ಯಾವ ಜೀವವು ರಾಗ, ದ್ವೇಷ ರೂಪದಿಂದ ಪರಿಣಮಿತವಾದ ಬಳಿಕವೂ ಸಹ ಕೇವಲ ಶುದ್ಧಾತ್ಮನಲ್ಲಿಯೇ (ದ್ರವ್ಯಾತ್ಮನಲ್ಲಿ - ಸ್ವಭಾವದಲ್ಲಿ) ನನ್ನತನ (ಏಕತ್ವ) ಮಾಡುತ್ತಾನೆ ಮತ್ತು ಅದರದೇ ಅನುಭವ ಮಾಡುತ್ತಾನೆ. ಆ ಜೀವವೇ ಸಮ್ಯಗ್ದೃಷ್ಟಿ ಇದೆ. ಅರ್ಥಾತ್ ಇದುವೇ ಸಮ್ಯಗ್ದರ್ಶನದ ವಿಧಿ ಇದೆ.

೨೦೨೪

ಪ್ರಕಾಶಕರು :
ಸಮ್ಯಕ್ತ್ವ ಪ್ರಕಾಶನ
ಅಷ್ಟಮ ನಂದೀಶ್ವರ ಅತಿಶಯ ಕ್ಷೇತ್ರ, ದೇವಲಾಪುರ
ತಾ. ಬೈಲಹೊಂಗಲ ಜಿ. ಬೆಳಗಾವಿ

# ಕೃತಿ : ಸಮ್ಯಗ್ದರ್ಶನದ ವಿಧಿ

ಮೂಲ ಲೇಖಕರು :

**ಶ್ರೀ ಸಿ. ಎ. ಜಯೇಶ ಮೋಹನಲಾಲ ಸೇಠ** ಬಿ.ಕಾಂ., ಎಫ್.ಸಿ.ಎ.
ಬೋರಿವಿಲಿ, ಮುಂಬಯಿ

ಕನ್ನಡ ಅನುವಾದಕರು :

**ಶ್ರೀ ಬ್ರ. ರತನಚಂದ ನೇಮಿನಾಥ ಕೋಟಿ** ಎಂ.ಎ.
ರಾಷ್ಟ್ರ ಪ್ರಶಸ್ತಿ ವಿಭೂಷಿತ ನಿವೃತ್ತ ಶಿಕ್ಷಕರು
ವಿಶ್ರಾಂತ ಉಪನಿರ್ದೇಶಕರು
ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ
ಶ್ರವಣಬೆಳಗೊಳ, ಜಿ. ಹಾಸನ
ಮೊ. ನಂ ೯೪೪೮೩೪೧೫೭೪

ಪ್ರಕಾಶಕರು :
ಸಮ್ಯಕ್ತ್ವ ಪ್ರಕಾಶನ
ಅಷ್ಟಮ ನಂದೀಶ್ವರ ಅತಿಶಯ ಕ್ಷೇತ್ರ, ದೇವಲಾಪುರ
ತಾ. ಬೈಲಹೊಂಗಲ ಜಿ. ಬೆಳಗಾವಿ

ಆವೃತ್ತಿ : ಪ್ರಥಮ
ಪ್ರಕಟನೆಯ ವರ್ಷ : ೨೦೨೪
ಪುಟಗಳು : ೨೦ + ೧೯೬
ಬೆಲೆ : ರೂ. ೫೦/- ಮಾತ್ರ
ಪ್ರತಿಗಳು : ೧೦೦೮

ಮುದ್ರಣ :
ರವೀಂದ್ರ ಆಕಳವಾಡಿ
ಮನೋಹರ ಮುದ್ರಣಾಲಯ
ಮಾರ್ಕೆಟ್ - ಧಾರವಾಡ
ದೂರವಾಣಿ : ೦೮೩೬-೨೬೯೦೦೩೦, ೯೧೪೧೨೦೧೧೭೦

# ಅನುವಾದಕರ ನುಡಿಗಳು

ಜೀವನದಲ್ಲಿ ಎಲ್ಲರೂ ಸುಖವನ್ನು ಮತ್ತು ಕೊನೆಗೆ ಮೋಕ್ಷವನ್ನು ಬಯಸುತ್ತಾರೆ. ಆದರೆ ಅಜ್ಞಾನಿ ಜನರು ಸಂಸಾರದ ಸುಖಾಭಾಸವನ್ನೇ ನಿಜವಾದ ಸುಖವೆಂದು ಭಾವಿಸಿ ಜೀವಿಸುತ್ತಲಿದ್ದಾರೆ. ಇದರಿಂದ ಚತುರ್ಗತಿ ತಪ್ಪಿದ್ದಲ್ಲ. ಆದ್ದರಿಂದ ಯಥಾರ್ಥವಾದ ಸುಖ ಮತ್ತು ಮೋಕ್ಷಮಾರ್ಗ ಪ್ರಾಪ್ತವಾಗಬೇಕಾದರೆ ಮೊಟ್ಟಮೊದಲು ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳಬೇಕು. ಈ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳಬೇಕಾದರೆ ಮೋಹ, ಮಿಥ್ಯಾತ್ವಗಳನ್ನು ಬಿಡಲೇಬೇಕು. ಎಂಟು ಮೂಲಗುಣಗಳನ್ನು ಮೊದಲೇ ಪಡೆದು ಪಾಲಿಸುತ್ತಿರಬೇಕು. ಸಮಯಸಾರ, ನಿಯಮಸಾರ, ಪಂಚಾಸ್ತಿಕಾಯದಂಥ ಗ್ರಂಥಗಳನ್ನು ಸರಿಯಾಗಿ ಅಧ್ಯಯನ ಮಾಡಬೇಕು. ಇವುಗಳ ಅಧ್ಯಯನದಿಂದ ವಿಭಾವ-ಭಾವಗಳು ದೂರವಾಗುತ್ತವೆ. ಬಹಳ ಜನರು ಪೂಜಾದಿ ಕ್ರಿಯಾಕಾಂಡಗಳಿಂದಲೇ ಧರ್ಮವಾಗುವದೆಂದು ತಿಳಿದು ಅಷ್ಟಕ್ಕೇ ತೃಪ್ತಿ ಪಡೆದುಕೊಳ್ಳುತ್ತಾರೆ. ತಾವೇ ಧರ್ಮಾತ್ಮರೆಂದು ಅಹಂಕಾರ ಪಡುತ್ತಾರೆ. ಎಲ್ಲರಿಗಿಂತ ನಾವೇ ಶ್ರೇಷ್ಠರೆಂದು ಅಹಂಕಾರ ಪಡುತ್ತಾರೆ. ಇದು ಅಜ್ಞಾನದ ಅವಿನಯದ ಪರಮಾವಧಿಯಾಗಿದೆ.

ಸಮ್ಯಗ್ದರ್ಶನದಿಂದ ಮಾತ್ರ ಶುದ್ಧಾತ್ಮನ ಅನುಭವವಾಗುವದು. ಶುದ್ಧಾತ್ಮನಲ್ಲಿಯೇ ನನ್ನತನವಿದೆ. ಸದಾಚಾರದಿಂದ ನಡೆಯುತ್ತ ವಸ್ತು ಸ್ವರೂಪವನ್ನು ಹಾಗೂ ಜೀವಾದಿ ಏಳು ತತ್ವಗಳನ್ನು ಯಥಾರ್ಥವಾಗಿ ತಿಳಿದು ಶ್ರದ್ಧೆ ಮಾಡಬೇಕು. ಸಂಸಾರ, ಶರೀರ, ಭೋಗಗಳಿಂದ ಹಾಗೂ ಪರಿಗ್ರಹಗಳಿಂದ ಉದಾಸೀನರಾಗಬೇಕು. ಸ್ವ-ಪರವನ್ನು ಸರಿಯಾಗಿ ತಿಳಿಯಬೇಕು. ಸ್ವಾಧ್ಯಾಯ, ಧರ್ಮಧ್ಯಾನ, ಮಂದಕಷಾಯಿ, ಭೇದಜ್ಞಾನ, ಇಂದ್ರಿಯಗಳ ನಿಗ್ರಹ ಕಡಿಮೆ ಅಪೇಕ್ಷೆ, ಮುಂತಾದ ಎಲ್ಲ ಉತ್ತಮ ಕ್ರಿಯೆಗಳು ಹಾಗೂ ಭಾವಗಳು ನನ್ನ ಕಲ್ಯಾಣದ ಸಲುವಾಗಿ ಎಂದು ತಿಳಿದು ಪಾಲಿಸಬೇಕು. ಇವುಗಳ ಜೊತೆಗೆ ಗುರು, ಹಿರಿಯರಲ್ಲಿ ದೇವ, ಗುರು, ಶಾಸ್ತ್ರಗಳ ಎದುರು ಸರಳ, ಸಹಜವಾಗಿ ವಿನಯ ಗುಣ ಧರಿಸಬೇಕು. ಮೇಲಿಂದ ಮೇಲೆ ಶುದ್ಧಾತ್ಮನ ಗುಣಗಳ ಚಿಂತನೆ ಹಾಗೂ ಹನ್ನೆರಡು ಭಾವನೆಗಳ ಚಿಂತನೆ ಮಾಡಬೇಕು. ಆತ್ಮನ ಅನುಭವವು ಅತ್ಯಂತ ಶ್ರೇಷ್ಠವಾಗಿದೆ. ಅದನ್ನು ವರ್ಣಿಸಲು ಯಾರಿಂದಲೂ ಸಾಧ್ಯವಾಗುವದಿಲ್ಲ. ಪ್ರತಿಯೊಬ್ಬರಲ್ಲೂ ಆ ಅನುಭವ ಪಡೆಯುವ ಶಕ್ತಿ ಇದೆ. ಇದುವೇ ಪರಮಾತ್ಮನಾಗುವ ಉಪಾಯವಿದೆ.

ಈ ಪುಸ್ತಕದಲ್ಲಿ ಸಮ್ಯಗ್ದರ್ಶನದ ಪ್ರಾಪ್ತಿಯ ಸಮಸ್ತ ಉಪಾಯಗಳನ್ನು ಆಚಾರ್ಯ ಪರಮೇಷ್ಠಿಗಳ ಗ್ರಂಥಗಳ ಆಧಾರಗಳನ್ನು ಸಂಗ್ರಹಿಸಿ ಶ್ರೀ ಸಿ. ಎ.

ಜಯೇಶ ಸೇಠ ಮುಂಬಯಿ ಇವರು ಹಿಂದಿಯಲ್ಲಿ ರಚಿಸಿದ 'ಸಮ್ಯಗ್ದರ್ಶನ ಕಿ ವಿಧಿ' ಪುಸ್ತಕದಲ್ಲಿ ಸಂಪಾದಿಸಿದ್ದಾರೆ. ಕನ್ನಡ ನಾಡಿನ ಜನತೆಗೂ ಇದನ್ನು ಅನುವಾದಿಸಿ ಕಲ್ಯಾಣಮಾರ್ಗದ ಉಪಾಯಗಳನ್ನು ತಿಳಿಸಿರಿ ಎಂದು ನನಗೆ ಹೇಳಿದರು. ನನ್ನ ಬುದ್ಧಿಗೆ ತಿಳಿದಂತೆ ಸರಳವಾಗಿ ಯಥಾರ್ಥವಾಗಿ ಅನುವಾದಿಸಿದ್ದೇನೆ. ಅಕಸ್ಮಾತ್ ನನ್ನ ಕಲ್ಪನೆಗೆ ಮೀರಿ ಏನಾದರೂ ಲೋಪಗಳಾಗಿದ್ದರೆ ತಿದ್ದಿಕೊಂಡು ಓದಿರಿ, ತಿಳಿಸಿರಿ ಮತ್ತು ಜಿನವಾಣಿ ಮಾತೆಗೆ ಕ್ಷಮೆ ಬೇಡುತ್ತೇವೆ.

ಈ ಗ್ರಂಥವನ್ನು ಸೌ. ನೀತಾ ಮಹಾವೀರ ಬಣಜವಾಡ, ಎಂ.ಎ. (ಸಂಸ್ಕೃತ) ಇವರು ಸ್ವ ಇಚ್ಛೆಯಿಂದ ಪ್ರಕಾಶನಗೊಳಿಸಿ ಜಿನವಾಣಿಯ ಸೇವೆ ಮಾಡಿದ್ದಾರೆ. ಅವರಿಬ್ಬರಿಗೂ ಹೃದಯಪೂರ್ವಕ ಅಭಿನಂದನೆಗಳು.

ಈ ಕೃತಿಯನ್ನು ಸುಂದರವಾಗಿ ಮುದ್ರಿಸಿಕೊಟ್ಟ ಮನೋಹರ ಮುದ್ರಣಾಲಯ, ಧಾರವಾಡದ ಶ್ರೀ ರವೀಂದ್ರ ಆಕಳವಾಡಿಯವರಿಗೂ ಹಾಗೂ ಅವರ ಸಿಬ್ಬಂದಿಯವರಿಗೂ ಧನ್ಯವಾದಗಳು.

ಭವ್ಯಾತ್ಮರಾದ ತಾವೆಲ್ಲರೂ ಈ ಗ್ರಂಥವನ್ನು ೨-೩ ಸಲ ಓದಿ ಅರಗಿಸಿಕೊಂಡು ಆತ್ಮನ ಅನುಭೂತಿ ಪಡೆದು ಆತ್ಮಕಲ್ಯಾಣ ಹೊಂದಿ ಮೋಕ್ಷಮಾರ್ಗದಲ್ಲಿ ಪಯಣಿಸಿರಿ ಎಂಬ ಶುಭ ಭಾವನೆಯೊಂದಿಗೆ ಎಲ್ಲರಿಗೂ ಜಯ ಜಿನೇಂದ್ರಗಳು.

ಇಂಡಿ
೨೦-೨-೨೦೨೪

**ಬ್ರ. ಶ್ರೀ. ರತನಚಂದ ನೇಮಿನಾಥ ಕೋಟಿ** ಎಂ.ಎ.
ರಾಷ್ಟ್ರ ಪ್ರಶಸ್ತಿ ವಿಭೂಷಿತ ನಿವೃತ್ತ ಶಿಕ್ಷಕರು
ವಿಶ್ರಾಂತ ಉಪನಿರ್ದೇಶಕರು
ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ
ಶ್ರವಣಬೆಳಗೊಳ, ಜಿ. ಹಾಸನ
ಮೊ. ನಂ. ೯೪೪೪೮೩೪೧೩೭೪

# ಲೇಖಕರ ಹೃದಯೋದ್ಗಾರ

ನಾನು ಸಣ್ಣವನಿದ್ದಾಗಿನಿಂದಲೇ ನನ್ನಲ್ಲಿ ಸತ್ಯವನ್ನು ಶೋಧನೆ ಮಾಡಲು ಚಡಪಡಿಕೆ ಇತ್ತು. ಅದರ ಸಲುವಾಗಿ ಎಲ್ಲ ದರ್ಶನಗಳ ಅಧ್ಯಯನ ಮಾಡಿದೆನು ಮತ್ತು ಕೊನೆಯಲ್ಲಿ ಜೈನದರ್ಶನದ ಅಭ್ಯಾಸದ ನಂತರ ೧೯೯೯ ರಲ್ಲಿ ೩೮ ವರ್ಷದವನಿದ್ದಾಗ ನನಗೆ ಸತ್ಯದ ಪ್ರಾಪ್ತಿಯಾಯಿತು. ಅಂದರೆ ಅದಗ ಅನುಭವ / ಸಾಕ್ಷಾತ್ಕಾರವಾಯಿತು. ಅದರ ನಂತರ ಜೈನ ಶಾಸ್ತ್ರಗಳನ್ನು ಮೇಲಿಂದ ಮೇಲೆ ಸ್ವಾಧ್ಯಾಯ ಮಾಡುತ್ತ ಅನೇಕ ಸಲ ಸತ್ಯದ / ಶುದ್ಧಾತ್ಮನ ಅನುಭವವಾಯಿತು. ಅದರ ವಿಧಿಯನ್ನು ಈ ಪುಸ್ತಕದಲ್ಲಿ ಶಾಸ್ತ್ರಗಳ ಆಧಾರ ಸಹಿತ ಎಲ್ಲ ಆತ್ಮಾರ್ಥಿಗಳಿಗೆ ಲಾಭವಾಗಲಿ ಎಂಬುದಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸಲು ಪ್ರಯತ್ನ ಮಾಡಿದ್ದೇನೆ.

ಪ್ರತಿಯೊಂದು ಜೈನ ಸಂಪ್ರದಾಯದಲ್ಲಿ ಸಮ್ಯಗ್ದರ್ಶನದ ಸಂಬಂಧದಲ್ಲಿ ಅನೇಕ ಪುಸ್ತಕಗಳು ಹೊರಬಂದಿವೆ. ಅವುಗಳಲ್ಲಿ ಸಮ್ಯಗ್ದರ್ಶನದ ಪ್ರಕಾರಗಳು, ಸಮ್ಯಗ್ದರ್ಶನದ ಭೇದಗಳು, ಐದು ಲಬ್ಧಿಗಳು, ಸಮ್ಯಗ್ದರ್ಶನದ ಐದು ಲಕ್ಷಣಗಳು, ಸಮ್ಯಗ್ದರ್ಶನದ ಎಂಟು ಅಂಗಗಳು, ಇಪ್ಪತ್ತೈದು ದೋಷಗಳು ಮುಂತಾದ ವಿಷಯಗಳ ಮೇಲೆ ವಿಸ್ತಾರವಾಗಿ ವರ್ಣನೆ ಬಂದಿದೆ. ಆದರೆ ಅವುಗಳಲ್ಲಿ ಸಮ್ಯಗ್ದರ್ಶನದ ವಿಷಯದ ಮೇಲೆ ಚರ್ಚೆ ಬಹಳ ಕಡಿಮೆ ಎಂದು ನೋಡುವದರಲ್ಲಿ ತಿಳಿದು ಬರುತ್ತದೆ. ಆದ್ದರಿಂದ ನಾವು ಅದರ ಮೇಲೆ ಈ ಪುಸ್ತಕದಲ್ಲಿ ಸ್ವಲ್ಪ ಪ್ರಕಾಶ ಬೀರಲು ಪ್ರಯತ್ನ ಮಾಡಿದ್ದೇವೆ.

ನಾವು ಯಾವದೇ ಮತ, ಪಂಥದಲ್ಲಿ ಇರುವದಿಲ್ಲ. ನಾವು ಕೇವಲ ಆತ್ಮನಲ್ಲಿ ಇದ್ದೇವೆ. ಕೇವಲ ಆತ್ಮಧರ್ಮದಲ್ಲಿಯೇ ಇದ್ದೇವೆ. ಆದ್ದರಿಂದ ಇಲ್ಲಿ ನಾವು ಯಾವದೇ ಮತಪಂಥದ ಪುಷ್ಟೀಕರಣ ಅಥವಾ ಖಂಡನೆ ಮಾಡದೇ ಕೇವಲ ಯಾವುದು ಆತ್ಮಾರ್ಥಕ್ಕಾಗಿ ಉಪಯೋಗವಿದೆ, ಅದನ್ನೇ ತಿಳಿಸಲು ಪ್ರಯತ್ನ ಮಾಡಿದ್ದೇವೆ. ಆದ್ದರಿಂದ ಎಲ್ಲರೂ ಇದನ್ನು ಈ ಅಪೇಕ್ಷೆಯಿಂದ ತಿಳಿದುಕೊಳ್ಳಿರಿ. ಇದು ನಮ್ಮ ಆಗ್ರಹವಿದೆ.

ನಾವು ಈ ಪುಸ್ತಕದಲ್ಲಿ ಯಾವುದನ್ನು ಹೇಳಿದ್ದೇವೆ, ಅದು ಶಾಸ್ತ್ರದ ಆಧಾರದಿಂದ ಮತ್ತು ಅನುಭವ ಮಾಡಿ ಹೇಳಿದ್ದೇವೆ. ಆದಾಗ್ಯೂ ಒಂದು ವೇಳೆ ಯಾರಿಗಾದರೂ ನಮ್ಮ ಮಾತು ಕಲ್ಪನೆಯದೆಂದು ಅನಿಸಿದರೆ ಅಂಥವರು ಈ ಪುಸ್ತಕದಲ್ಲಿ ಹೇಳಲಾದ ವಿಷಯವನ್ನು ಯಾವದೇ ಶಾಸ್ತ್ರದೊಂದಿಗೆ ತುಲನೆ ಮಾಡಿ ನೋಡಿರಿ ಅಥವಾ ಸ್ವತಃ ಅನುಭವ ಮಾಡಿ ಪ್ರಮಾಣಿಸಿ ನೋಡಿರಿ. ಈ ಎರಡರ ಹೊರತಾಗಿ ಬೇರೆ ಯಾವ ಪರೀಕ್ಷಿಸುವ ವಿಧಿ ಇಲ್ಲ. ಯಾರು ತಮ್ಮ ವಿಚಾರಕ್ಕೆ

ಅನುಕೂಲವಾಗದಿರುವದರಿಂದ ನಮ್ಮನ್ನು ಬೇರೆ ಮನ್ನಿಸಿದರೆ ಅದರಲ್ಲಿ ನಮ್ಮದು ಸ್ವಲ್ಪವೂ ಹಾನಿ ಇರುವದಿಲ್ಲ. ಏಕೆಂದರೆ ಅದರಿಂದ ನಮ್ಮ ಆನಂದದ ಏರುವಿಕೆಯಲ್ಲಿ ಸ್ವಲ್ಪವೂ ಕಡಿಮೆ ಆಗುವದಿಲ್ಲ. ತಮಗೆ ಹೀಗೆ ಅನಿಸಿದರೆ ಏನಂದರೆ ತಾವು ಯಾವುದನ್ನು ಮನ್ನಿಸಿದ್ದೀರೋ ಅದುವೇ ಸತ್ಯವಿದೆ ಅಂದರೆ ತಮಗೆ ನಾವು ಹೇಳುವದೇನೆಂದರೆ ತಾವು ತಮ್ಮ ವಿಚಾರದ ಅನುಸಾರ ಆತ್ಮಾನುಭೂತಿ ಮಾಡಿಕೊಳ್ಳಿರಿ. ಇದು ಬಹಳ ಒಳ್ಳೆಯದು. ಒಂದು ವೇಳೆ ತಾವು ತಮ್ಮ ನಂಬಿಗೆಯ ಅನುಸಾರ ವರ್ಷಗಳ ತನಕ ಪ್ರಯತ್ನ ಮಾಡಿದ ನಂತರವೂ ಸಹ ಭಾವಭಾಸನ / ತತ್ವ ನಿರ್ಣಯದ ತನಕ ತಲುಪದಿದ್ದರೆ ಮತ್ತು ತತ್ವದ ಚರ್ಚೆ ಹಾಗೂ ವಾದ ವಿವಾದವನ್ನೇ ಮಾಡುತ್ತ ಕುಳಿತರೆ, ತಾವು ಈ ಪುಸ್ತಕದಲ್ಲಿ ತೋರಿಸಿದ ವಿಷಯದ ಮೇಲೆ ಅವಶ್ಯವಾಗಿ ವಿಚಾರ ಮಾಡಿರಿ. ಒಂದು ವೇಳೆ ತಾವು ವಿಚಾರ ಮಾಡಿದರೆ ತತ್ವದ ನಿರ್ಣಯವಂತೂ ಭ್ರಮೆರಹಿತವೇ ಆಗುವದು. ಹೀಗೆ ನಮಗೆ ವಿಶ್ವಾಸವಿದೆ. ಆದ್ದರಿಂದ ಈ ಪುಸ್ತಕದಲ್ಲಿ ಯಾವ ವಿಷಯ ಹೇಳಲಾಗಿದೆ, ಅದರ ಮೇಲೆ ಎಲ್ಲರಿಂದ ವಿಚಾರ ಮಾಡುವ ಸಲುವಾಗಿ ನಮ್ಮ ಆಗ್ರಹವಿದೆ. ನಾವು ಯಾವುದೇ ವಾದ-ವಿವಾದದಲ್ಲಿ ಬೀಳಲು ಬಯಸುವದಿಲ್ಲ. ಆದ್ದರಿಂದ ಯಾರಿಗೆ ಈ ಮಾತು ತಿಳಿವಳಿಕೆಯಲ್ಲಿ ಬರದಿದ್ದರೆ ಅಥವಾ ರುಚಿಸದಿದ್ದರೆ ಅಂಥವರು ನಮ್ಮನ್ನು ಕ್ಷಮಿಸಿರಿ. 'ಮಿಚ್ಛಾಮಿ ದುಕ್ಕಡಂ' ಉತ್ತಮ ಕ್ಷಮಾ.

ವರ್ತಮಾನ ಕಾಲದಲ್ಲಿ ಜೈನ ಸಮಾಜವು ಎರಡು ಭಾಗವಾಗಿ ಹೋಗಿದೆ. ಒಂದು ವಿಭಾಗವು 'ಕೇವಲ ವ್ಯವಹಾರ ನಯವನ್ನೇ ಮನ್ನಿಸುತ್ತಾರೆ ಮತ್ತು ಕೇವಲ ಅದಕ್ಕೇನೇ ಮುಖ್ಯತೆ ಕೊಡುತ್ತಾರೆ ಹಾಗೂ ಕೇವಲ ಅದರಿಂದಲೇ ಮೋಕ್ಷವಾಗುವದೆಂದು' ಮನ್ನಿಸುತ್ತಾರೆ. ಇನ್ನೊಂದು ವಿಭಾಗವು 'ಕೇವಲ ನಿಶ್ಚಯ ನಯವನ್ನೇ ಮನ್ನಿಸುತ್ತಾರೆ ಮತ್ತು ಕೇವಲ ಅದಕ್ಕೇನೇ ಪ್ರಾಧಾನ್ಯತೆ ಕೊಡುತ್ತಾರೆ ಹಾಗೂ ಕೇವಲ ಅದರಿಂದಲೇ ಮೋಕ್ಷವಾಗುವದೆಂದೂ' ಮನ್ನಿಸುತ್ತಾರೆ.

ಆದರೆ ನಿಜವಾದ ಮೋಕ್ಷಮಾರ್ಗವು ನಿಶ್ಚಯ ಮತ್ತು ವ್ಯವಹಾರದ ಯೋಗ್ಯ ಒಪ್ಪಂದದಲ್ಲಿಯೇ ಇರುತ್ತದೆ. ಈ ಮಾತು ಯಾರೋ ವಿರಳರು ತಿಳಿದಿರುತ್ತಾರೆ. 'ಪುರುಷಾರ್ಥ ಸಿದ್ಧ್ಯುಪಾಯ' ಶ್ಲೋಕ ೮ ರಲ್ಲಿಯೂ ಸಹ ಹೇಳಿದ ಪ್ರಕಾರ - 'ಯಾವ ಜೀವನು ವ್ಯವಹಾರ ನಯ ಮತ್ತು ನಿಶ್ಚಯ ನಯವನ್ನು ವಸ್ತು ಸ್ವರೂಪದ ಮೂಲಕ ಯಥಾರ್ಥ ರೂಪದಿಂದ ತಿಳಿದುಕೊಂಡು ಮಾಧ್ಯಸ್ಥನಾಗುತ್ತಾನೆ. ಅಂದರೆ ನಿಶ್ಚಯ ನಯ ಮತ್ತು ವ್ಯವಹಾರ ನಯದ ಪಕ್ಷಪಾತದಿಂದ ರಹಿತನಾಗುತ್ತಾನೆ. ಅವನೇ ಉಪದೇಶದ ಸಂಪೂರ್ಣ ಫಲವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ. ಅಂದರೆ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಂಡು ಮೋಕ್ಷ ಪ್ರಾಪ್ತ ಮಾಡಿಕೊಳ್ಳುತ್ತಾನೆ.

ವರ್ತಮಾನ ಕಾಲದಲ್ಲಿ ಜೈನ ಸಮಾಜದ ಬಹುಭಾಗವು ವ್ಯವಹಾರ ನಯಕ್ಕೇನೇ ಮುಖ್ಯತೆಯನ್ನು ಕೊಡುತ್ತಾರೆ ಮತ್ತು ನಿಶ್ಚಯ ನಯವನ್ನು ಭಯಂಕರ

ವಿರೋಧ ಮಾಡುತ್ತಾರೆ. ಅದರಿಂದ ಅವರು ತಿಳಿದೋ ತಿಳಿಯದೆಯೋ ಏಕಾಂತ ಮತಾವಲಂಬಿಗಳಾಗುತ್ತಾರೆ. ಇನ್ನೊಂದು ಭಾಗವು ನಿಶ್ಚಯ ನಯಕ್ಕೇನೇ ಮುಖ್ಯತೆ ಕೊಡುತ್ತಾರೆ ಮತ್ತು ವ್ಯವಹಾರ ನಯದ ಘೋರ ವಿರೋಧ ಮಾಡುತ್ತಾರೆ. ಇವರದೂ ಸಹ ತಿಳಿದೋ ತಿಳಿಯದೆಯೋ ಏಕಾಂತ ಮತ ರೂಪವಿದೆ.

ನಾವು ಈ ಪುಸ್ತಕದಲ್ಲಿ ನಿಶ್ಚಯ ವ್ಯವಹಾರದ ಯೋಗ್ಯ ಒಪ್ಪಂದ ತಿಳಿಸುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಅದನ್ನು ಸಂಪೂರ್ಣ ಜೈನ ಸಮಾಜವು ಯೋಗ್ಯ ರೀತಿಯಿಂದ ತಿಳಿದುಕೊಂಡು ಆರಾಧನೆ ಮಾಡಿದರೆ ಜೈನಧರ್ಮದಲ್ಲಿ ಸಂಪೂರ್ಣ ಕ್ರಾಂತಿಯು ಬರುವದು ಮತ್ತು ಈಗ ಯಾವ ಏಕಾಂತ ಪ್ರರೂಪಣೆಗಳು ನಡೆದಿರುತ್ತವೆ, ಅವೆಲ್ಲ ಪಾಖಂಡ ಮತರೂಪ ಇವೆ. ಅದನ್ನು ತಡೆಯಬಹುದಾಗಿದೆ.

ಕೇವಲ ವ್ಯವಹಾರ ನಯವನ್ನೇ ಮಾನ್ಯ ಮಾಡಿ, ಅದಕ್ಕೇನೇ ಪ್ರಾಧಾನ್ಯತೆ ಕೊಡುವ ಒಂದು ಉದಾಹರಣೆ ನೋಡಿ. ಸಮ್ಯಗ್ದರ್ಶನದ ಸ್ವರೂಪ – ಕೇವಲ ವ್ಯವಹಾರ ನಯಕ್ಕೇನೇ ಮನ್ನಿಸುವಂಥ ಬಹಳಷ್ಟು ಜೈನರು ಏಳು / ಒಂಬತ್ತು ತತ್ವಗಳ (ಸ್ವಾನುಭೂತಿ ರಹಿತ) ಶ್ರದ್ಧೆ ಅಥವಾ ನಿಜವಾದ ದೇವ-ಶಾಸ್ತ್ರ-ಗುರುಗಳ (ಸ್ವಾನುಭೂತಿ ರಹಿತ) ಶ್ರದ್ಧೆಯೇ ಸಮ್ಯಗ್ದರ್ಶನವೆಂದು ಮನ್ನಿಸುತ್ತಾರೆ. ಸಮ್ಯಗ್ದರ್ಶನದ ಈ ವ್ಯಾಖ್ಯೆಯು ವ್ಯವಹಾರ ನಯದ ಪಕ್ಷದ್ದಾಗಿದೆ. ಆದರೆ ನಿಶ್ಚಯ ನಯದ ಮತದಿಂದ ಯಾರು ಆತ್ಮನನ್ನು ತಿಳಿಯುತ್ತಾರೆ, ಅವರೇ ಎಲ್ಲವನ್ನು ಅಂದರೆ ಏಳು / ಒಂಬತ್ತು ತತ್ವಗಳನ್ನು ಹಾಗೂ ನಿಜವಾದ ದೇವ-ಶಾಸ್ತ್ರ-ಗುರುಗಳನ್ನು ತಿಳಿಯುತ್ತಾರೆ. ಏಕೆಂದರೆ ಒಂದು ಆತ್ಮನನ್ನು ತಿಳಿಯುತ್ತಲೇ ಆ ಜೀವನು ನಿಜವಾದ ದೇವರ ತತ್ವದ ಅಂಶತಃ ಅನುಭವ ಮಾಡುತ್ತಾನೆ ಮತ್ತು ಅದರಿಂದ ಅವನು ನಿಜವಾದ ದೇವರನ್ನು ಅಂತಃಕರಣದಿಂದ ಪರಿಚಯ ಮಾಡಿಕೊಳ್ಳುತ್ತಾನೆ ಹಾಗೂ ನಿಜವಾದ ದೇವರನ್ನು ತಿಳಿಯುತ್ತಲೇ ಅಂದರೆ (ಸ್ವಾನುಭೂತಿ ರಹಿತ) ಶ್ರದ್ಧೆ ಆಗುತ್ತಲೇ ಆ ಜೀವವು ಹಾಗೆಯೇ ದೇವನಾಗುವ ಮಾರ್ಗದಲ್ಲಿ ಗತಿಶೀಲರಾದ ನಿಜವಾದ ಗುರುವನ್ನು ಸಹ ಅಂತಃಕರಣದಿಂದ ಗುರುತಿಸುತ್ತಾನೆ ಮತ್ತು ಜೊತೆಜೊತೆಗೆ ಆ ಜೀವವು ಹಾಗೆಯೇ ದೇವನಾಗುವ ಮಾರ್ಗವನ್ನು ತಿಳಿಸುವಂಥ ನಿಜವಾದ ಶಾಸ್ತ್ರವನ್ನು ಸಹ ಗುರುತಿಸುತ್ತಾನೆ.

ನಿಶ್ಚಯ ಸಮ್ಯಗ್ದರ್ಶನದ ನಿಜವಾದ ವ್ಯಾಖ್ಯೆಯು ಹೀಗೆ ಇದ್ದರೂ ಸಹ ವ್ಯವಹಾರ ನಯದ ಪಕ್ಷದವರಿಗೆ ಸಮ್ಯಗ್ದರ್ಶನದ ಇಂಥ ನಿಜವಾದ ವ್ಯಾಖ್ಯೆ ಮಾನ್ಯವಾಗುವದಿಲ್ಲ ಅಥವಾ ಅವರು ಇಂಥ ವ್ಯಾಖ್ಯೆಯದೇ ವಿರೋಧ ಮಾಡುತ್ತಾರೆ ಮತ್ತು ಅದರಿಂದ ಅವರು ಸಮ್ಯಗ್ದರ್ಶನ ಅಂದರೆ ಏಳು / ಒಂಭತ್ತು ತತ್ವಗಳ (ಸ್ವಾತ್ಮಾನುಭೂತಿ ರಹಿತ) ಶ್ರದ್ಧೆ ಹಾಗೂ ನಿಜವಾದ ದೇವ-ಶಾಸ್ತ್ರ-ಗುರುಗಳ ಕುರಿತು ಹೇಳಲಾಗುವ (ಸ್ವಾತ್ಮಾನುಭೂತಿ ರಹಿತ) ಶ್ರದ್ಧೆಯನ್ನು ಮನ್ನಿಸುವದರಿಂದ ಅವರಿಗೆ ಸ್ವಾತ್ಮಾನುಭೂತಿ ರಹಿತದ ಶ್ರದ್ಧೆ ಮತ್ತು 'ಸ್ವಾತ್ಮಾನುಭೂತಿ ಸಹಿತದ ಶ್ರದ್ಧೆಗಳ

ನಡುವಿನ ಅಂತರದ ಎಚ್ಚರವೇ ಆಗುವದಿಲ್ಲ ಅಥವಾ ಅವರು ತಿಳಿಯಲು ಬಯಸುವದಿಲ್ಲ. ಆದ್ದರಿಂದ ಅವರು ಧರ್ಮದ ತಳಹದಿಯಾದ ಸಮ್ಯಗ್ದರ್ಶನದ ವಿಷಯದಲ್ಲಿ ಅಪರಿಚಿತ ಇದ್ದುಕೊಂಡೇ ಸಂಪೂರ್ಣ ಜೀವನ ಕ್ರಿಯೆ ಧರ್ಮವನ್ನು ಉತ್ತಮ ರೀತಿಯಿಂದ ಪಾಲಿಸುವ ಬದಲು ಸಂಸಾರದ ಕೊನೆಗಾಣಿಸುವಂಥ ಸತ್ಯಧರ್ಮವನ್ನು ಪ್ರಾಪ್ತ ಮಾಡಿಕೊಳ್ಳುವದಿಲ್ಲ.

ಇದೇ ಪ್ರಕಾರ ಯಾರು ಕೇವಲ ನಿಶ್ಚಯ ನಯಕ್ಕೇನೇ ಮಾನ್ಯ ಮಾಡಿ ಅದಕ್ಕೇನೇ ಮುಖ್ಯತೆ ಕೊಡುತ್ತಾರೆ. ಅವರ ಜ್ಞಾನವು ಸಹ ಶುಷ್ಕ ಮಾತುಗಳಲ್ಲಿಯೇ ಇರುತ್ತದೆ ಮತ್ತು ಆತ್ಮನ ಯೋಗ್ಯತೆಯ ವಿಷಯದಲ್ಲಿ ಅಥವಾ ಕೇವಲ ತಳರೂಪವಾದ ಸದಾಚಾರದ ವಿಷಯಕ್ಕೆ ಸಹ ಭಯಂಕರ ತಿರಸ್ಕಾರ ಮಾಡಿ ಅವರೂ ಸಹ ಸಂಸಾರದ ಕೊನೆ ಮಾಡಿಸುವ ಧರ್ಮದಿಂದ ದೂರವೇ ಇರುತ್ತಾರೆ. ಅದರ ನಂತರ ಇಂಥ ಜನರು ಬಹುಶಃ ಸ್ವಚ್ಛಂದತೆಯ ಕಾರಣ ಅಂದರೆ ಪುಣ್ಯವನ್ನು ಏಕಾಂತವಾಗಿ ಹೇಯವೆಂದು ಮನ್ನಿಸುವ ಕಾರಣ ಪುಣ್ಯದ್ದು ಸಹ ಅಭಾವವಾಗುವದರಿಂದ ಇವರ ಭವದ ಅಭಾವವಾಗುವದೇ ಇಲ್ಲ. ಮೇಲೆ ಹೇಳಿದ ಎರಡೂ ಮಾತುಗಳು ದಯನೀಯ ಇರುತ್ತವೆ.

ಇನ್ನೊಂದು ಪ್ರಕಾರದ ಸಣ್ಣ ಗುಂಪು ವಸ್ತು ವ್ಯವಸ್ಥೆಯನ್ನೇ ವಿಕೃತಗೊಳಿಸಿದ್ದಾರೆ. ಅವರು ದ್ರವ್ಯ ಮತ್ತು ಪರ್ಯಾಯವನ್ನು ಬೇರೆ ಬೇರೆ ಎಂದು ತಿಳಿಯುತ್ತಾರೆ. ಅವೆರಡೂ ಬೇರೆ ಬೇರೆಯಾಗಿ ಹೇಗೆ ಇರಲು ಸಾಧ್ಯವಿದೆ. ಅಭೇದವಾಗಿರುತ್ತವೆ. ಗುಣ, ಪರ್ಯಾಯವನ್ನು ಸಹ ಬೇರೆ ಬೇರೆ ಎಂದು ತಿಳಿಯುತ್ತಾರೆ. ದ್ರವ್ಯದ ಸಮ್ಯಕ್ ಸ್ವರೂಪವನ್ನು ತಿಳಿಸುವ ಸಲುವಾಗಿ ದ್ರವ್ಯದ ಅಪೇಕ್ಷೆಯಿಂದ ಗುಣ ಪರ್ಯಾಯದಿಂದ ಬೇರೆ ಎಂದು ಹೇಳಲಾಗಿದೆ. ಈ ಮಾತನ್ನು ಅವರು ನಿಜವಾದ ರೂಪದಿಂದ ಭಿನ್ನವೆಂದು ತಿಳಿಯುತ್ತಾರೆ. ದ್ರವ್ಯ ಮತ್ತು ಪರ್ಯಾಯವನ್ನು ಎರಡು ಭಾವವೆಂದು ಮನ್ನಿಸದೇ ಅವರು ಅದನ್ನು ಎರಡು ಭಾಗ ರೂಪವೆಂದು ಮನ್ನಿಸುವ ತನಕದ ಪ್ರರೂಪಣೆ ಮಾಡುತ್ತಾರೆ. ಮುಂದೆ ಅದರಲ್ಲಿಯೂ ಸಹ ಸಾಮಾನ್ಯ ವಿಶೇಷ ಹೀಗೆ ಎರಡು ಭಾಗದ ಕಲ್ಪನೆ ಮಾಡುತ್ತಾರೆ. ಈ ಪ್ರಕಾರ ವಸ್ತು ವ್ಯವಸ್ಥೆಯ ವಿಕೃತ ರೀತಿಯಿಂದ ಪ್ರರೂಪಣೆ ಮಾಡಿ ಅವರೂ ಸಹ ಮೋಕ್ಷ ನೀಡುವಂಥ ಧರ್ಮದಿಂದ ದೂರವೇ ಇರುತ್ತಾರೆ. ಇಂತಹ ಜನರೂ ಸಹ ಬಹುಶಃ ಸ್ವಚ್ಛಂದತೆಯ ಕಾರಣ ಹಾಗೂ ಪುಣ್ಯದ ಅಭಾವವಾಗಿರುವ ಕಾರಣ ಅವರ ಮುಂದಿನ ಭವದ ಸ್ಥಳವು ನಿಶ್ಚಿತ ಇರುವದಿಲ್ಲ. ಈ ಮಾತು ಸಹ ದಯನೀಯವೇ ಇದೆ.

ಇನ್ನು ಜೈನ ಸಮಾಜದಲ್ಲಿ ಪ್ರಚಲಿತವಿರುವ ತತ್ವಗಳ ಕುರಿತು ಇರುವ ತಪ್ಪು ತಿಳುವಳಿಕೆಯನ್ನು ದೂರ ಮಾಡುವ ಸಲುವಾಗಿಯೇ ನಾವು ನಮ್ಮ ಆತ್ಮನ ಅನುಭೂತಿಯ ವಿಚಾರವನ್ನು ಶಾಸ್ತ್ರಗಳ ಆಧಾರ ಸಹಿತ ಈ ಪುಸ್ತಕದಲ್ಲಿ ಸಿದ್ಧ

ಮಾಡುತ್ತಿದ್ದೇವೆ. ನಮಗೆ ವಿಶ್ವಾಸವಿದೆ, ಈ ವಿಚಾರಗಳ ಮೇಲೆ ಚಿಂತನ-ಮನನವನ್ನು ತಾವೂ ಸಹ ತೆರೆದ ಮನಸ್ಸಿನಿಂದ ಮತ್ತು 'ಒಳ್ಳೆಯದು ಅದುವೇ ನನ್ನದು' ಮತ್ತು 'ಶುದ್ಧವಾದುದೇ ನನ್ನದು' ಹೀಗೆ ಅನುಸಂಧಾನ ಮಾಡೋಣ. ಆದರೆ ಅವಶ್ಯವಾಗಿ ತಾವೂ ಸಹ ತತ್ವದ ತಿಳಿವಳಿಕೆಯನ್ನು ನಿಸ್ಸಂದೇಹವಾಗಿ ಮಾಡಿಕೊಳ್ಳಿರಿ. ಇಲ್ಲಿ ತಮ್ಮ ಸಲುವಾಗಿ ನಾವು ನಿಮಗೆ ಸಂಬೋಧನೆಯ ಪ್ರಯೋಗ ಮಾಡಿದ್ದೇವೆ. ಅದು ಯಾವದೇ ಮಾನವಾಚಕ ಶಬ್ದವೆಂದು ತಿಳಿಯಬೇಡಿರಿ. ಅದರ ಅರ್ಥವು ತ್ರೈಕಾಲಿಕ ಆತ್ಮಾನುಭವಿ ಇರುತ್ತದೆ. ಏಕೆಂದರೆ ತ್ರಿಕಾಲವರ್ತಿ ಆತ್ಮಾನುಭವಿಗಳ ಸ್ವಾತ್ಮಾನುಭೂತಿ ಒಂದೇ ಸಮಾನವೇ ಆಗುತ್ತದೆ.

ಪಂಚಪರಮೇಷ್ಠಿ ಭಗವಂತರಿಗೆ ನಮಸ್ಕಾರ ಮಾಡಿ, ಶಾಸ್ತ್ರ ಮತ್ತು ಸ್ವಾನುಭೂತಿಯ ಆಧಾರದ ಮೇಲೆ ಸಮ್ಯಗ್ದರ್ಶನ, ಸಮ್ಯಗ್ದರ್ಶನ ವಿಧಿ, ಸಮ್ಯಗ್ದರ್ಶನದ ಸಲುವಾಗಿ ಆವಶ್ಯಕ ಭಾವ, ಸಮ್ಯಗ್ದರ್ಶನದ ಸಲುವಾಗಿ ಚಿಂತನ-ಮನನದ ವಿಷಯ ಅದರ ಸ್ಪಷ್ಟೀಕರಣದ ಸಲುವಾಗಿ ದ್ರವ್ಯ, ಗುಣ, ಪರ್ಯಾಯಮಯ ಸತ್‌ರೂಪ ವಸ್ತುವನ್ನು ಹೇಗೆ ಉತ್ಪಾದ, ವ್ಯಯ, ಧ್ರೌವ್ಯ ರೂಪ ಸಹ ಇವೆ ಮತ್ತು ಅದರ ವಿಷಯದಲ್ಲಿ ವಿಶೇಷ ಸ್ಪಷ್ಟೀಕರಣ ಸಹಿತ ತಿಳಿಸಿ ಹೇಳುವ ಪ್ರಯತ್ನ ನಾವು ಈ ಪುಸ್ತಕದಲ್ಲಿ ಮಾಡಿದ್ದೇವೆ. ಈ ಪುಸ್ತಕವು ನಮ್ಮ ಮೊದಲಿನ ಕೃತಿಯಾಗಿದೆ. ದೃಷ್ಟಿಯ ವಿಷಯದಲ್ಲಿ ಕೆಲವು ಹೊಸ ಚಿಂತನೆಗಳನ್ನು ಜೋಡಿಸಿಕೊಂಡು ತಯಾರಿಸಿದ್ದೇವೆ.

ಮುಮುಕ್ಷು ಜೀವಗಳಿಗೆ ನಮ್ಮ ಆಗ್ರಹವಿದೆ. ಅವರು ಈ ಪುಸ್ತಕವನ್ನು ಪ್ರಾರಂಭದಿಂದ ಕೊನೆಯ ತನಕ ಅಧ್ಯಯನ ಮಾಡಿ ನಿಮ್ಮ ಅಭಿಪ್ರಾಯ ತಿಳಿಸಿರಿ. ಒಂದು ವೇಳೆ ಅರ್ಧ ಅಥವಾ ಕೆಲವು ಭಾಗಗಳನ್ನು ಓದಿ ನಿಮ್ಮ ಅಭಿಪ್ರಾಯ ಉಂಟು ಮಾಡಿಕೊಂಡರೆ ಅದು ನಿಮ್ಮ ಸ್ವಂತಕ್ಕಾಗಿ ಮಾಡಿಕೊಂಡ ಹಟವಾಗುತ್ತದೆ.

ಈ ಪುಸ್ತಕ ಬರೆಯುವಲ್ಲಿ ನಾವು ಯಾವ ಯಾವ ಗ್ರಂಥಗಳ ಆಧಾರ ತೆಗೆದುಕೊಂಡಿದ್ದೇವೆ. ಅವರ ಸಲುವಾಗಿ ನಾವು ಅವುಗಳ ಲೇಖಕರಿಗೆ, ಆಚಾರ್ಯ ಭಗವಂತರಿಗೆ, ಆ ಗ್ರಂಥಗಳ ಟೀಕೆಗಳನ್ನು ಬರೆದವರಿಗೆ, ಅನುವಾದಕರಿಗೆ ಹಾಗೂ ಪ್ರಕಾಶಕರಿಗೆ ಹೃದಯಪೂರ್ವಕವಾಗಿ ಆಭಾರಿ ಇದ್ದೇವೆ. ಪ್ರತಿಯೊಂದು ಗ್ರಂಥದ ಗಾಥೆಯ ಅನ್ವಯಾರ್ಥ ಮತ್ತು ಭಾವಾರ್ಥ ಕೊಡಲಾಗಿದೆ. ಈ ಪುಸ್ತಕದ ರಚನೆಯಲ್ಲಿ ಅನೇಕ ಜನರು ಬೇರೆ ಬೇರೆ ರೀತಿಯಿಂದ ಸಹಯೋಗ ನೀಡಿದ್ದಾರೆ. ನಾವು ಆ ಎಲ್ಲರಿಗೆ ಋಣಿಯಾಗಿದ್ದೇವೆ. ಆ ಎಲ್ಲರಿಗೂ ನಾವು ಹೃದಯಪೂರ್ವಕವಾಗಿ ಆಭಾರ ಮನ್ನಿಸುತ್ತೇವೆ. ವಿಶೇಷವಾಗಿ ಡಾ. ಜಯಕುಮಾರ ಜಲಜಜಿಯವರು ಪ್ರಸ್ತಾವನೆ ಬರೆದಿರುವ ಸಲುವಾಗಿ ಮತ್ತು ಮನೀಷ ಮೋದಿಜಿಯವರು ಸಂಪಾದನೆ ಮಾಡಿರುವ ಸಲುವಾಗಿ ಅವರೀರ್ವರಿಗೂ ಹೃದಯಪೂರ್ವಕವಾಗಿ ಉಪಕಾರ ಮನ್ನಿಸುತ್ತೇವೆ.

ನಮ್ಮ ಆತ್ಮನ ಅನುಭೂತಿಯ ವಿಚಾರಗಳನ್ನು ತಾವು ಪರೀಕ್ಷೆ ಮಾಡಿ ಮತ್ತು ಇಲ್ಲಿ ಪ್ರಸ್ತುತ ಶಾಸ್ತ್ರದ ಆಧಾರದಿಂದ ಸ್ವೀಕಾರ ಮಾಡಿ ಸಮ್ಯಗ್ದರ್ಶನ ಪ್ರಕಟ ಮಾಡಿಕೊಳ್ಳಿರಿ. ಅದರಿಂದ ತಾವೂ ಸಹ ಧರ್ಮರೂಪವಾಗಿ ಪರಿಣಮಿಸಿರಿ ಮತ್ತು ಮೋಕ್ಷಮಾರ್ಗದ ಮೇಲೆ ಮುಖ್ಯಸ್ಥರಾಗಿರಿ. ಕೊನೆಯಲ್ಲಿ ಸಿದ್ಧತ್ವವನ್ನು ಪ್ರಾಪ್ತ ಮಾಡಿರಿ ಎಂದು ಬಯಸುತ್ತೇವೆ.

ಈ ಪುಸ್ತಕದಲ್ಲಿ ತಿಳಿದೋ - ತಿಳಿಯದೆಯೋ ನಮ್ಮಿಂದ ಕೆಲವು ದೋಷಗಳಾಗಿದ್ದರೆ ಜಿನಾಜ್ಞೆಯ ವಿರುದ್ಧ ಬರೆಯಲ್ಪಟ್ಟರೆ ಮನ, ವಚನ, ಕಾಯದಿಂದ ಕ್ಷಮೆ ಬೇಡುತ್ತೇವೆ. ಕ್ಷಮಿಸಿರಿ.

ಮುಂಬಯಿ ಶ್ರೀ ಸಿ. ಎ. ಜಯೇಶ ಮೋಹನಲಾಲ ಸೇಠ<br>
೧೨-೧೨-೨೦೨೪ ಬೋರಿವಿಲಿ, ಮುಂಬಯಿ

# ಮೊದಲ ಮುನ್ನುಡಿ

ಮೊದಲು ನಾವು ನಮ್ಮ ಅನಾದಿ ಕಾಲದ ಕಥೆಯನ್ನು ತಿಳಿಯೋಣ. ಅದರ ಸಲುವಾಗಿ ನಮಗೆ ಮೊದಲಿನ ಕಾಲಗಣನೆಯನ್ನು ತಿಳಿಯುವದು ಆವಶ್ಯಕವಿದೆ. ನಾವು ಕಾಲವನ್ನು ನಿಮಿಷ, ತಾಸು ಮುಂತಾದ ರೂಪದಿಂದ ತಿಳಿಯುತ್ತೇವೆ. ಆದರೆ ನಮ್ಮ ಕಥೆಯನ್ನು ತಿಳಿಯುವ ಸಲುವಾಗಿ ನಮಗೆ ಉಪಮಾಕಾಲ ಯಾವದು ಅಂದರೆ ಅಸಂಖ್ಯಾತ ವರ್ಷಗಳದು ಆಗುತ್ತದೆ, ಅದನ್ನು ತಿಳಿಯುವದು ಆವಶ್ಯಕ ಇರುತ್ತದೆ.

ಆದ್ದರಿಂದ ಮೊದಲು ನಾವು ಸಾದೃಶ್ಯಕಾಲದ ವ್ಯಾಖ್ಯೆಯನ್ನು ಮಾಡುತ್ತೇವೆ. ಅದರಲ್ಲಿ ಶ್ವೇತಾಂಬರ – ದಿಗಂಬರ ಆಮ್ನಾಯದಲ್ಲಿ ಸ್ವಲ್ಪ ಅಂತರ ಆಗಬಹುದಾಗಿದೆ. ಆದ್ದರಿಂದ ಇಲ್ಲಿ ಹೇಳಲಾದ ವ್ಯಾಖ್ಯೆಯಿಂದ ಯಾವದೇ ಏಕಮತ ಆಗದಿದ್ದರೂ ಸಹ ತೊಂದರೆ ಇಲ್ಲ. ತಾವು ಇದನ್ನು ಶಬ್ದ ಅಥವಾ ಅಂಕಿಯ ರೂಪದಲ್ಲಿ ಸ್ವೀಕಾರ ಮಾಡಬೇಡಿ ಮತ್ತು ಈ ವ್ಯಾಖ್ಯೆಯು ಸರಿ–ತಪ್ಪು ಎಂಬ ವಿವಾದದಲ್ಲಿಯೂ ಬೀಳಬೇಡಿರಿ. ಆ ಕಾಲ ಗಣನೆಯ ಭಾವಭಾಸನವನ್ನು ಅವಶ್ಯವಾಗಿ ಮಾಡಬೇಕು. ಹೀಗೆ ತಮ್ಮೆಲ್ಲರಿಗೆ ನಮ್ಮ ವಿನಮ್ರ ನಿವೇದನೆಯಿದೆ.

ಅಂದಾಜು ಆರು ಸಾವಿರ ಕಿಲೋಮೀಟರ ಉದ್ದ, ಅಷ್ಟೇ ಅಗಲ ಮತ್ತು ಅಷ್ಟೇ ಆಳವಾದ ಬಾವಿಯನ್ನು ತೋಡಬೇಕು. ಅದನ್ನು ಉತ್ತಮ ಭೋಗ ಭೂಮಿಯ ಏಳು ದಿನಗಳ ಹಿಂದೆ ಜನ್ಮ ಹೊಂದಿದ ಕುರಿಮರಿಯ ಕೂದಲುಗಳನ್ನು ತಂದು ಅವುಗಳನ್ನು ಇನ್ನೊಮ್ಮೆ ಕತ್ತರಿಸಲು ಬಾರದಷ್ಟು ಸಣ್ಣಸಣ್ಣವಾಗಿ ಕತ್ತರಿಸಿ ಬಾವಿಯಲ್ಲಿ ಒತ್ತಿ ಒತ್ತಿ ತುಂಬಬೇಕು. ಪ್ರತಿ ನೂರು ವರ್ಷಗಳ ನಂತರ ಆ ಬಾವಿಯಿಂದ ಒಂದು ಕೂದಲಿನ ತುಕಡಿಯನ್ನು ಹೊರಗೆ ತೆಗೆಯುತ್ತ ಹೋಗಬೇಕು. ಯಾವಾಗ ಆ ಬಾವಿಯು ಪೂರ್ಣ ಖಾಲಿ ಆಗುವದು, ಆ ಕಾಲಕ್ಕೆ ಒಂದು ವ್ಯವಹಾರ ಪಲ್ಯೋಪಮ ಅನ್ನುತ್ತಾರೆ. ಆ ಒಂದು ವ್ಯವಹಾರ ಪಲ್ಯೋಪಮಕ್ಕೆ ಅಸಂಖ್ಯಾತದಿಂದ ಗುಣಿಸಿದ ಬಳಿಕ ಯಾವ ಸಂಖ್ಯೆ ಬರುವದು ಅಷ್ಟು ಕಾಲಕ್ಕೆ ಒಂದು ಉದ್ಧಾರ ಪಲ್ಯೋಪಮ ಅನ್ನುತ್ತಾರೆ. ಆ ಒಂದು ಉದ್ಧಾರ ಪಲ್ಯೋಪಮಕ್ಕೆ ಅಸಂಖ್ಯಾತದಿಂದ ಗುಣಿಸಿದರೆ ಯಾವ ಸಂಖ್ಯೆ ಬರುವದು ಅಷ್ಟು ಕಾಲಕ್ಕೆ ಒಂದು ಅದ್ಧೋಪಲ್ಯೋಪಮವೆಂದು ಅನ್ನುತ್ತಾರೆ. ಇಂತಹ ಒಂದು ಕೋಟಿ ಅದ್ಧೋಪಲ್ಯೋಪಮಕ್ಕೆ ಹತ್ತು ಕೋಟಿ ಅದ್ಧೋಪಲ್ಯೋಪಮದಿಂದ ಗುಣಿಸಿದ ಬಳಿಕ ಯಾವ ಸಂಖ್ಯೆ ಬರುವದು ಅಷ್ಟು ಕಾಲಕ್ಕೆ ಒಂದು ಸಾಗರೋಪಮ ಕಾಲ ಎನ್ನುವರು.

ಈ ಪ್ರಕಾರ ಒಂದು ಕೋಟಿ ಸಾಗರೋಪಮವನ್ನು ೨೦ ಕೋಟಿ ಸಾಗರೋಪಮದಿಂದ ಗುಣಿಸಿದ ಬಳಿಕ ಯಾವ ಸಂಖ್ಯೆ ಬರುವದು, ಅಷ್ಟು ಕಾಲಕ್ಕೆ ಒಂದು ಕಾಲಚಕ್ರ ಅನ್ನುತ್ತಾರೆ. ಇಂತಹ ಅನಂತಾನಂತ ಕಾಲಚಕ್ರಗಳು ಕಳೆದ ಬಳಿಕ ಒಂದು ಪುದ್ಗಲ ಪರಾವರ್ತನ ಕಾಲದ ಅನಂತ ಭಾಗದಲ್ಲಿಯ ಒಂದು ಭಾಗ ಕಳೆದುಹೋಗುತ್ತದೆ. ಕಾಲವು ಇಷ್ಟು ದೊಡ್ಡದು ಇದೆ, ಈ ಒಂದು ಪುದ್ಗಲ ಪರಾವರ್ತನ ಕಾಲವು ಒಂದು ಪುದ್ಗಲ ಪರಾವರ್ತನ ಕಾಲದ ಅನಂತವೇ ಭಾಗದಲ್ಲಿ ಅನಂತಾನಂತ ಆಗುತ್ತವೆ.

ಈಗ ನಾವು ನಮ್ಮ ಕಥೆಯನ್ನು ತಿಳಿಯೋಣ. ಅನಾದಿಯಿಂದ ನಾವು ಈ ಸಂಸಾರದಲ್ಲಿ ವ್ಯರ್ಥ ಅಲೆದಾಡುತ್ತಿದ್ದೇವೆ. ಇಲ್ಲಿ ಹೇಗೆ ನಮ್ಮ ಮನೆ ಇರುತ್ತದೆ ಮತ್ತು ನಾವು ಎಲ್ಲಿಗಾದರೂ ಯಾತ್ರೆಗೆ ಹೋಗಿ ಮತ್ತೆ ಮನೆಗೆ ಮರಳಿ ಅವಶ್ಯವಾಗಿ ಬರುತ್ತೇವೆ. ಇದೇ ಪ್ರಕಾರ ನಮ್ಮ ಆತ್ಮನದು ಅನಾದಿಯಿಂದ ಒಂದೇ ನಿವಾಸ ಸ್ಥಾನವಿದೆ. ಅದರ ಹೆಸರು ನಿಗೋದವಿದೆ. ನಿಗೋದ ಅಂದರೆ ಅನಂತಾನಂತ ಆತ್ಮಗಳು ಒಂದೇ ಶರೀರದಲ್ಲಿ ಇರುತ್ತವೆ ಮತ್ತು ಒಟ್ಟಾಗಿಯೇ ಆ ಎಲ್ಲವುಗಳ ಜನ್ಮ-ಮರಣ ಆಗುತ್ತದೆ. ಅವುಗಳ ಆಯು ತೀರ ಕಡಿಮೆ ಅಂದರೆ ನಮ್ಮ ಒಂದು ಶ್ವಾಸೋಚ್ಛ್ವಾಸದಲ್ಲಿ ೧೮ ಸಲ ಹುಟ್ಟಿ ಸಾಯುತ್ತವೆ. ಅಂದರೆ ಅವುಗಳದು ಬಿಟ್ಟುಬಿಡದೇ ಜನ್ಮ-ಮರಣ ಆಗುತ್ತಲೇ ಇರುತ್ತದೆ. ನಮ್ಮ ಶರೀರದ ೩.೫ ಕೋಟಿ ಕೂದಲುಗಳನ್ನು ಕಾಯ್ದ ಸೂಜಿಯಿಂದ ಚುಚ್ಚಿ ಶರೀರವನ್ನು ಮಣ್ಣಲ್ಲಿ ತಿಕ್ಕಿದರೆ ಆಗ ಎಷ್ಟು ದುಃಖ ಆಗುವದು, ಅಷ್ಟೇ ದುಃಖ ಭಗವಾನನು ಜನ್ಮದ ದುಃಖವೆಂದು ಹೇಳಿದ್ದಾರೆ ಮತ್ತು ಮರಣದ ದುಃಖವು ಅದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಆಗುತ್ತದೆ. ಹೀಗೆ ಜನ್ಮ ಮರಣದ ದುಃಖವನ್ನು ನಿಗೋದದ ಜೀವಕ್ಕೆ ಒಂದೇ ಸವನೆ ಆಗುತ್ತದೆ. ನಗೋದ ಜೀವಕ್ಕೆ ಏಳನೇ ನರಕದ ಜೀವಕ್ಕಿಂತಲೂ ಎಷ್ಟೋ ಪಟ್ಟು ಹೆಚ್ಚು ದುಃಖವಾಗುವದೆಂದು ಭಗವಾನರು ಹೇಳಿದ್ದಾರೆ.

ಅನಾದಿಯಿಂದ ನಾವು ನಿಗೋದದಲ್ಲಿ ಇಂತಹ ದುಃಖವನ್ನು ಸಹಿಸುತ್ತ ಬಂದಿದ್ದೇವೆ. ಅದನ್ನು ಅವ್ಯವಹಾರ ರಾಶಿ ಅಥವಾ ನಿತ್ಯ ನಿಗೋದವೆಂದೂ ಸಹ ಕರೆಯುತ್ತಾರೆ. ಇಂಥ ಎಷ್ಟೋ ಭವ್ಯಜೀವಗಳಿರುತ್ತವೆ. ಅವು ನಿತ್ಯ ನಿಗೋದದಿಂದ ಎಂದೂ ಹೊರಗೆ ಬರುವದೇ ಇಲ್ಲ. ಯಾವಾಗ ಒಂದು ಜೀವದ ಮೋಕ್ಷವಾಗುತ್ತದೆ, ಆಗ ಒಂದು ಜೀವವು ಆ ಅವ್ಯವಹಾರ ರಾಶಿಯಿಂದ ವ್ಯವಹಾರ ರಾಶಿಯಲ್ಲಿ ಬರುತ್ತದೆ. ಈ ಪ್ರಕಾರ ನಾವು ಅನಂತಾನಂತ ಪುದ್ಗಲ ಪರಾವರ್ತನ ಕಾಲ ಕಳೆದ ಮೇಲೆ ನಿಗೋದದಲ್ಲಿಂದ ಹೊರಟು ಎರಡು ಇಂದ್ರಿಯಾದಿ ಗತಿಯಲ್ಲಿ ಪ್ರವೇಶ ಪಡೆಯುತ್ತೇವೆ. ಇದು ನಮ್ಮ ಸಲುವಾಗಿ ಎಲ್ಲಕ್ಕಿಂತ ದೊಡ್ಡ ಪುರಸ್ಕಾರವಿದೆ.

ನಿಗೋದದಿಂದ ಹೊರಗೆ ಬಂದ ಬಳಿಕ ಏಕೇಂದ್ರಿಯ, ಎರಡಿಂದ್ರಿಯ, ಮೂರು ಇಂದ್ರಿಯ, ನಾಲ್ಕು ಇಂದ್ರಿಯ, ಅಸಂಜ್ಞಿ ಪಂಚೇಂದ್ರಿಯ, ನರಕ, ಯುಗಲ ಮನುಷ್ಯ, ಪಂಚೇಂದ್ರಿಯ ತಿರ್ಯಂಚ ಪಂಚೇಂದ್ರಿಯ ತಿರ್ಯಂಚ

ಯುಗಲಿಯಾಗಳು, ದೇವ ಮುಂತಾದ ಗತಿಗಳಲ್ಲಿ ಅಸಂಖ್ಯಾತ ಅಸಂಖ್ಯಾತ ಕಾಲ ಕಳೆದ ಬಳಿಕ ನಾವು ಕರ್ಮಭೂಮಿಯಲ್ಲಿ ಮನುಷ್ಯ ರೂಪದಲ್ಲಿ ಜನ್ಮ ಪಡೆಯುತ್ತೇವೆ.

ಇಂತಹ ಎಷ್ಟೋ ಮನುಷ್ಯ ಜನ್ಮ ಪಡೆದ ನಂತರ ಯಾವಾಗಲಾದರೊಮ್ಮೆ ಒಂದು ಸಲ ನಮ್ಮ ಜನ್ಮವು ಆರ್ಯ ಕ್ಷೇತ್ರದಲ್ಲಿ ಮನುಷ್ಯ ಜನ್ಮ ಪಡೆದ ಬಳಿಕ ಯಾವಾಗಲೋ ಒಂದು ಸಲ ನಮ್ಮ ಜನ್ಮವು ಉಚ್ಚಕುಲದಲ್ಲಿ ಆಗುತ್ತದೆ. ಹೀಗೆ ಎಷ್ಟೋ ಸಲ ಉಚ್ಚಕುಲದಲ್ಲಿ ಮನುಷ್ಯ ಜನ್ಮ ಪಡೆದ ಬಳಿಕ, ಯಾವಾಗಲೋ ಒಂದು ಸಲ ನಮಗೆ ಇಂದ್ರಿಯಗಳ ಪರಿಪೂರ್ಣತೆಯು ಮತ್ತು ನಿರೋಗಿ ಶರೀರ ದೊರಕುತ್ತವೆ. ಹೀಗೆ ಎಷ್ಟೋ ಸಲ ಆದಬಳಿಕ ಯಾವಾಗಲಾದರೊಮ್ಮೆ ಒಂದು ಸಲ ನಮಗೆ ದೀರ್ಘಾಯು ದೊರಕುತ್ತದೆ. ಇಂತಹ ದೀರ್ಘಾಯು ಎಷ್ಟೋ ಸಲ ಪಡೆದ ಬಳಿಕ ಯಾವಾಗಲೋ ಒಂದು ಸಲ ನಮಗೆ ಸತ್ಯಧರ್ಮ ದೊರಕುತ್ತದೆ. ಹೀಗೆ ಎಷ್ಟೋ ಸಲ ನಮಗೆ ಸತ್ಯಧರ್ಮ ದೊರೆತಿರುವ ನಂತರ ಒಂದು ಸಲ ನಮಗೆ ಆ ಸತ್ಯಧರ್ಮದಲ್ಲಿ ರುಚಿ ಜಾಗ್ರತಗೊಳ್ಳುತ್ತದೆ. ಹೀಗೆ ಎಷ್ಟೋ ಸಲ ನಮಗೆ ಸತ್ಯಧರ್ಮದಲ್ಲಿ ರುಚಿ ಜಾಗ್ರತವಾದ ಬಳಿಕವೂ ಯಾವಾಗಲೋ ಒಂದು ಸಲ ನಮಗೆ ಆ ಸತ್ಯಧರ್ಮದ ಮೇಲೆ ಶ್ರದ್ಧೆ ಜಾಗ್ರತಗೊಳ್ಳುತ್ತದೆ. ಇಂತಹ ಶ್ರದ್ಧೆಯು ಪ್ರಾಪ್ತವಾಗುವದು ಪರಮ ದುರ್ಲಭವೆಂದು ಹೇಳಲಾಗಿದೆ.

ಈ ರೀತಿ ಮನುಷ್ಯ ಜನ್ಮದಿಂದ ಹಿಡಿದು ಸತ್ಯಧರ್ಮದಲ್ಲಿ ರುಚಿಯಾಗುವ ತನಕದ ಪ್ರಾಪ್ತಿಯು ಒಂದಕ್ಕಿಂತ ಒಂದು ಎಷ್ಟೋ ಪಟ್ಟು ದುರ್ಲಭ-ದುರ್ಲಭತರ, ದುರ್ಲಭತಮ ಎಂದು ಹೇಳಲಾಗಿದೆ. ಇಂಥ ದುರ್ಲಭತಮ ವಸ್ತುವನ್ನು ಪಡೆದು ನಮ್ಮ ಸಲುವಾಗಿ ಅದರ ಉಪಯೋಗವು ಪರಮ ದುರ್ಲಭವೆಂದು ಹೇಳಲಾಗಿದೆ. ಇಂಥ ಶ್ರದ್ಧೆಯನ್ನು ಪಡೆಯುವಲ್ಲಿ ಮತ್ತು ಅದರ ಫಲಸ್ವರೂಪ ವೈರಾಗ್ಯ ಪ್ರಾಪ್ತ ಮಾಡುವಲ್ಲಿ ತೊಡಗುವದು ಯೋಗ್ಯವಿದೆ. ಆ ಯೋಗ್ಯತೆಯ ಪ್ರಾಪ್ತಿಯು ಸಹ ಕೇವಲ ಒಂದೇ ಆತ್ಮ ಪ್ರಾಪ್ತಿಯ (ಸಮ್ಯಗ್ದರ್ಶನದ ಪ್ರಾಪ್ತಿ) ಲಕ್ಷ್ಯದಿಂದ ಆಗಬೇಕಾಗುವದು. ಬೇರೆ ಯಾವದೇ ರೀತಿಯಿಂದ ಆಗಲಾರದು. ಏಕೆಂದರೆ ಕೇವಲ ಸಮ್ಯಗ್ದರ್ಶನದ ಪ್ರಾಪ್ತಿಯಾಗದ ಕಾರಣ ನಾವು ಅನಂತಾನಂತ ಕಾಲದಿಂದ ಈ ಸಂಸಾರದಲ್ಲಿ ಅನಂತ ದುಃಖ ಸಹಿಸುತ್ತ ಅಲೆದಾಡುತ್ತಿದ್ದೇವೆ. ಸಮ್ಯಗ್ದರ್ಶನವೇ ಮೋಕ್ಷದ ಅನುಮತಿ ಪತ್ರವಿದೆ.

ಈ ಪ್ರಕಾರ ನಾವು ಅನಂತಾನಂತ ಸಲ ದುರ್ಲಭವಾದ ಇಂಥ ಮನುಷ್ಯ ಜನ್ಮಗಳನ್ನು ಪ್ರಾಪ್ತ ಮಾಡಿಕೊಂಡರೂ ಸಹ ಒಂದು ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳದೇ ಅನಂತ ಕಾಲ ನಿಗೋದದಲ್ಲಿ ಕಾಲ ಕಳೆದಿದ್ದೇವೆ. ಏಕೆಂದರೆ ಒಂದು ಸಲ ನಾವು ನಿಗೋದದಿಂದ ಹೊರಟು ೨೦೦೦ ಸಾಗರೋಪಮದಲ್ಲಿ ಮೋಕ್ಷ ಪ್ರಾಪ್ತ ಮಾಡಿಕೊಳ್ಳದಿದ್ದರೆ ನಮಗೆ ನಿಯಮದಿಂದ ಮತ್ತೆ ನಿಗೋದದಲ್ಲಿ ಹೋಗಬೇಕಾಗುತ್ತದೆ.

ಒಂದು ಜೀವವು ನಿಗೋದದಲ್ಲಿ ಇರಬೇಕಾದ ಕೆಲವು ೨.೫ ಪುದ್ಗಲ ಪರಾವರ್ತನದಷ್ಟು ಕಾಲ ಇದೆ. ಅಂದರೆ ಆ ಜೀವವು ೨.೫ ಪುದ್ಗಲ ಪರಾವರ್ತನ ಕಾಲದ ತನಕ ಒಂದೇ ಸವನೆ ನಿಗೋದದಲ್ಲಿಯೇ ಜನ್ಮ-ಮರಣ ಮಾಡುತ್ತ ಇರಬೇಕಾಗುತ್ತದೆ. ೨.೫ ಪುದ್ಗಲ ಪರಾವರ್ತನ ಕಾಲದ ನಂತರ ಆ ಜೀವವು ಸ್ವಲ್ಪ ಕಾಲದ ಸಲುವಾಗಿ ಒಂದು ವೇಳೆ ಪ್ರತ್ಯೇಕ ಏಕೇಂದ್ರಿಯದಲ್ಲಿ ಹೋಗಿ ಮರಳಿ ನಿಗೋದದಲ್ಲಿ ಬಂದರೆ ಎರಡನೆಯ ಸಲ ಮತ್ತೆ ೨.೫ ಪುದ್ಗಲ ಪರಾವರ್ತನ ಕಾಲದ ತನಕ ಆ ಜೀವವು ನಿಗೋದದಲ್ಲಿಯೇ ಜನ್ಮಮರಣ ಮಾಡುತ್ತ ಇರಬೇಕಾಗುವದು. ಯಾವದೋ ಒಂದು ಜೀವಕ್ಕೆ ಇದು ಅಸಂಖ್ಯಾತ ಸಲ ಆಗಬಹುದಾಗಿದೆ. ಅಂದರೆ ಯಾವದೇ ಒಂದು ಜೀವವು ಅಸಂಖ್ಯಾತ ಪುದ್ಗಲ ಪರಾವರ್ತನ ಕಾಲದ ತನಕ ಏಕೇಂದ್ರಿಯದಲ್ಲಿ ಇರಬಹುದಾಗಿದೆ. ಇದರಿಂದ ಆ ಜೀವಕ್ಕೆ ಅನಂತಾನಂತ ಕಾಲದ ತನಕ ಅನಂತಾನಂತ ದುಃಖಗಳನ್ನು ಸಹಿಸಬೇಕಾಗುತ್ತದೆ.

ನಿಗೋದದಿಂದ ಹೊರಟು ಮತ್ತೆ ಮನುಷ್ಯ ಜನ್ಮ ಪಡೆಯುವದು ಅತ್ಯಂತ ದುರ್ಲಭವಿದೆ. ಚಿಂತಾಮಣಿ ರತ್ನದ ಪ್ರಾಪ್ತಿಗಿಂತಲೂ ಹೆಚ್ಚು ದುರ್ಲಭವೆಂದು ಹೇಳಿದ್ದಾರೆ. ಈ ರಹಸ್ಯವನ್ನು ನೆನಪಿನಲ್ಲಿಟ್ಟು ವರ್ತಮಾನ ಜೀವನವು ಕೇವಲ ಆತ್ಮಪ್ರಾಪ್ತಿಯಲ್ಲಿಯೇ ತೊಡಗಿಸುವದು ಯೋಗ್ಯವೆಂದು ತಿಳಿಯೋಣ. ಈ ಮಾತನ್ನು ಪ್ರತಿ ದಿವಸ ನೆನಪಿಟ್ಟುಕೊಳ್ಳಬೇಕು. ಎಂದೂ ಮರೆಯಬಾರದು.

ಈ ಕಾರಣದಿಂದ ನಾವು ಈ ಪುಸ್ತಕದಲ್ಲಿ ಮುಕ್ತಿಯನ್ನು ಬಯಸುವಂಥ ಮುಮುಕ್ಷು ಜೀವಗಳ ಸಲುವಾಗಿ ಸಮ್ಯಗ್ದರ್ಶನದ ವಿಧಾಯ ಕುರಿತಾದ ವರ್ಣನೆ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ.

ಇಚ್ಛೆಯು ದುಃಖದ ಕಾರಣವಿದೆ. ಆದ್ದರಿಂದ ಎಲ್ಲಿಯತನಕ ಎಲ್ಲ ಇಚ್ಛೆಗಳು ಯಥಾರ್ಥವಾಗಿ ನಾಶವಾಗುವದಿಲ್ಲ. ಅಲ್ಲಿಯವರೆಗೆ ಸುಖ ಸಿಗುವದು ಅಸಂಭವವೇ ಇದೆ. ಇಚ್ಛೆಗಳನ್ನು ನಾಶ ಮಾಡುವದು, ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳುವ ಸಲುವಾಗಿ ಯೋಗ್ಯತಾ ರೂಪವೂ ಸಹ ಇದೆ. ಇಚ್ಛೆಗಳ ನಾಶದಿಂದಲೇ ವೈರಾಗ್ಯದ ಜನ್ಮವಾಗುತ್ತದೆ. ಎಲ್ಲಿಯ ತನಕ ಒಂದೇ ಒಂದು ಸಂಸಾರದ ಇಚ್ಛೆ ಇದ್ದರೆ ಅಲ್ಲಿಯತನಕ ಸಂಸಾರದ ನಾಶ ಆಗುವದಿಲ್ಲ. ಇಚ್ಛೆಯು ಮನಸ್ಸಿನಲ್ಲಿ ಉತ್ಪನ್ನವಾಗುತ್ತದೆ. ಈ ಕಾರಣ ಮೊದಲೇ ಮನಸ್ಸಿನಲ್ಲಿದ್ದ ಸಂಸಾರದ ನಾಶ ಮಾಡುವದು ಅವಶ್ಯಕವಿದೆ. ಮನಸ್ಸಿನಲ್ಲಿದ್ದ ಸಂಸಾರದ ನಾಶವಾಗುತ್ತಲೇ ಹೊರಗೆ ಮಾತ್ರ ಯಂತ್ರದಂತೆ ಕಾರ್ಯಗಳು ಆಗುತ್ತಲೇ ಇರುತ್ತವೆ. ಅಂದರೆ ಸಂಸಾರದ ಆಂತರಿಕ ಚಾಲಕ ಶಕ್ತಿಯು ನಾಶವಾಗುತ್ತದೆ.

ಇಚ್ಛೆಯು ಈ ಸಂಸಾರದ ಇಂಜಿನ ಇದೆ. ಅನಾದಿಯಿಂದ ಈ ಜೀವವು ಇಚ್ಛೆಗಳನ್ನು ಪೂರ್ತಿ ಮಾಡಿಕೊಳ್ಳಲು ಓಡುತ್ತಲೇ ಇದೆ. ಆದರೆ ಇವತ್ತಿನ ವರೆಗೂ

ಜೀವದ ಇಚ್ಛೆ ಪೂರ್ತಿ ಆಗೇ ಇಲ್ಲ. ಏಕೆಂದರೆ ಎಲ್ಲಿಯತನಕ ಯಾವದೇ ಒಂದು ಇಚ್ಛೆಯ ಪೂರ್ತಿ ಆದೊಡನೆ ತಕ್ಷಣ ಅಲ್ಲಿ ಬೇರೊಂದು ಹೊಸ ಇಚ್ಛೆ ಜನ್ಮ ಪಡೆಯುತ್ತದೆ. ಈ ಪ್ರಕಾರ ಈ ಜೀವವು ಅನಾದಿಯಿಂದ ಇಚ್ಛೆಗಳನ್ನು ಪೂರ್ತಿಗೊಳಿಸುವ ಪ್ರಯತ್ನದ ಕಾರಣ ಅನಂತ ಸಂಸಾರದಲ್ಲಿ ಅಲೆದಾಡುತ್ತಿದೆ. ಒಂದು ವೇಳೆ ಈ ಜನ್ಮದಲ್ಲಿಯೇ ನಾವು ಇಚ್ಛೆಗಳನ್ನು ಯಥಾರ್ಥವಾಗಿ ನಾಶ ಮಾಡದಿದ್ದರೆ ಬಹಳ ಕಾಲದ ತನಕ ನಾವು ಈ ಸಂಸಾರದಲ್ಲಿ ತಿರುಗಾಡಬೇಕಾಗುತ್ತದೆ ಎಂಬುದರ ಪತ್ತೆಯೇ ಇಲ್ಲ. ಇಚ್ಛೆಗಳು ಪೂರ್ತಿಯಾಗುವಲ್ಲಿ ಸಹಾಯಕವಾಗಿ ರಾಗ ಅಥವಾ ದ್ವೇಷ ಆಗುತ್ತವೆ. ಆ ರಾಗ-ದ್ವೇಷಗಳು ಸಹ ಸಂಸಾರವನ್ನು ಹೆಚ್ಚಿಸುವ ಮತ್ತು ಅನಂತ ದುಃಖಗಳ ಕಾರಣವಾಗಿರುತ್ತವೆ.

ಅನಾದಿಯಿಂದ ನಮ್ಮ ಆತ್ಮನು ಈ ಸಂಸಾರದಲ್ಲಿ ಸಮ್ಯಗ್ದರ್ಶನದ ಅಭಾವದ ಕಾರಣವೇ ಅಂಡಲೆಯುತ್ತಿದೆ. ಅಂದರೆ ಅನಂತ ಪುದ್ಗಲ ಪರಾವರ್ತನದಿಂದ ನಮ್ಮ ಆತ್ಮವು ಈ ಸಂಸಾರದಲ್ಲಿ ಅನಂತ ದುಃಖವನ್ನು ಸಹನ ಮಾಡುತ್ತ ತಿರುಗಾಡುತ್ತಿದೆ ಮತ್ತು ಅದರ ಮುಖ್ಯ ಕಾರಣ ಮಿಥ್ಯಾತ್ವ ಅಂದರೆ ಸಮ್ಯಗ್ದರ್ಶನದ ಅಭಾವವಿದೆ. ಈ ಮಿಥ್ಯಾತ್ವವು ನಮ್ಮ ಮಹಾನ್ ಶತ್ರು ಇದೆ. ಹೀಗೆ ತಿಳಿಯದ ಕಾರಣ ಬಹಳಷ್ಟು ಜೀವಗಳು ಬೇರೆ ಬೇರೆ ಕಲ್ಪನೆ ಮಾಡಿ ತಮ್ಮ ತಮ್ಮಲ್ಲಿ ಹೊಡೆದಾಡುತ್ತಿವೆ. ಇದರಲ್ಲಿಯೇ ಈ ಅಮೂಲ್ಯ ಜೀವನವನ್ನು ಪೂರ್ಣ ಮಾಡಿ ಮತ್ತೆ ಅನಂತ ಕಾಲದ ದುಃಖಗಳಿಗೆ ಆಮಂತ್ರಣ ಕೊಡುತ್ತಿದ್ದೇವೆ. ಪರಮಾತ್ಮ ಪ್ರಕಾಶದ ಗಾಥೆ ೬೫ ರಲ್ಲಿಯೂ ಸಹ ಹೇಳಿದ ಪ್ರಕಾರ – ಈ ಜಗತ್ತಿನಲ್ಲಿ ನಾವು ಹುಟ್ಟದೇ ಇರುವ ಅಂಥ ಯಾವ ಪ್ರದೇಶವೂ ಉಳಿದಿಲ್ಲ. ಎಲ್ಲ ೮೪ ಲಕ್ಷ ಜೀವಯೋನಿಗಳಲ್ಲಿ ಉತ್ಪನ್ನವಾಗಿಯೂ ಭೇದಾಭೇದ ರತ್ನತ್ರಯದ ಪ್ರತಿಪಾದಕ ಜಿನವಚನವನ್ನು ಪ್ರಾಪ್ತ ಮಾಡದಿದ್ದರೆ ಈ ಜೀವವು ಅನಾದಿ ಕಾಲದಿಂದ ಭ್ರಮಣೆಯಲ್ಲಿಯೇ ತಿರುಗುವದಾಗುತ್ತದೆ.

ಆತ್ಮನು ಸ್ವಭಾವದಿಂದ ಸುಖಸ್ವರೂಪನಾಗಿರುವ ಕಾರಣ ಎಲ್ಲ ಜೀವಗಳು ಸುಖವನ್ನೇ ಬಯಸುತ್ತವೆ. ಆದಾಗ್ಯೂ ನಿಜವಾದ ಸುಖದ ತಿಳಿವಳಿಕೆಯು ಅಥವಾ ಅನುಭವ ಇಲ್ಲದಿರುವ ಕಾರಣ ಅನಾದಿಯಿಂದ ನಮ್ಮ ಆತ್ಮನು ಶಾರೀರಿಕ ಇಂದ್ರಿಯ ಜನ್ಯ ಸುಖವನ್ನೇ ನಂಬಿದ್ದಾನೆ. ನಿಜವಾಗಿಯೂ ಇದು ಸುಖವಲ್ಲ. ಕೇವಲ ಸುಖಾಭಾಸ ರೂಪವೇ ಇದೆ. ಕೇವಲ ದುಃಖರೂಪವೇ ಇದೆ. ಅದರ ಸೇವನೆ ಮಾಡುತ್ತಲೇ ಇರುತ್ತಾನೆ. ಆ ಸುಖವು ಇಂದ್ರಿಯಗಳ ಆಕುಲತಾ ರೂಪ ದುಃಖವನ್ನು / ವೇಗವನ್ನು ಶಾಂತಗೊಳಿಸುವದಕ್ಕಾಗಿಯೇ ಸೇವನೆ ಮಾಡಲಾಗುತ್ತದೆ. ಆದಾಗ್ಯೂ ಆ ಸುಖವು ಬೆಂಕಿಯಲ್ಲಿಯ ಇಂಧನ ರೂಪವೇ ಆಗುತ್ತದೆ. ಅಂದರೆ ಆ ಸುಖವು ಮೇಲಿಂದ ಮೇಲೆ ಅದರ ಇಚ್ಛಾರೂಪ ದುಃಖವನ್ನು ಜಾಗೃತ ಮಾಡುವ ಕಾರ್ಯವನ್ನು ಮಾಡುತ್ತದೆ. ಆ ಸುಖವನ್ನು ಭೋಗಿಸುತ್ತ ಅವನು ಹೊಸ ಪಾಪವನ್ನು ಬಂಧಿಸಿಕೊಳ್ಳುತ್ತಾನೆ. ಅದು ಹೊಸ ದುಃಖಗಳ ಕಾರಣವಾಗುತ್ತದೆ. ಅಂದರೆ

ಅಂಥ ಸುಖವು ದುಃಖಪೂರ್ವಕ ಮತ್ತು ದುಃಖಫಲ ಸಹಿತವಾಗಿಯೇ ಆಗುತ್ತದೆ. ಆದರೂ ಸಹ ಮನುಷ್ಯನು ಅದರ ಹಿಂದೆಯೇ ಹುಚ್ಚನಾಗಿ ಓಡುತ್ತಿದ್ದಾನೆ. ಎರಡನೆಯದಾದ ಶಾರೀರಿಕ ಇಂದ್ರಿಯ ಜನ್ಯ ಸುಖವು ಕ್ಷಣಿಕವಿದೆ. ಏಕೆಂದರೆ ಆ ಸುಖವು ಇಂತಿಷ್ಟು ಕಾಲದ ನಂತರ ನಿಯಮದಿಂದ ಹೋಗುವಂಥದ್ದಿದೆ. ಅಂದರೆ ಜೀವನಿಗೆ ಇಂಥ ಸುಖವು ಕೇವಲ ತ್ರಸಪರ್ಯಾಯದಲ್ಲಿಯೇ ದೊರೆಯುತ್ತದೆ. ಅದು ಹೇಗೆಂದರೆ ಬಹಳ ಸ್ವಲ್ಪ ಕಾಲದ ಸಲುವಾಗಿ ಆಗುತ್ತದೆ. ನಂತರ ಆ ಜೀವವು ನಿಯಮದಿಂದ ಏಕೇಂದ್ರಿಯದಲ್ಲಿ ಹೋಗುತ್ತದೆ. ಅಲ್ಲಿ ಅನಂತಕಾಲದ ತನಕ ಅನಂತ ದುಃಖ ಅನುಭವಿಸಬೇಕಾಗುತ್ತದೆ. ಏಕೇಂದ್ರಿಯದಲ್ಲಿಂದ ಹೊರಗೆ ಹೊರಡುವದು ಸಹ ಭಗವಾನರು ಚಿಂತಾಮಣಿ ರತ್ನದ ಪ್ರಾಪ್ತಿಗಿಂತಲೂ ಸಹ ಹೆಚ್ಚು ದುರ್ಲಭ ಎಂದು ಹೇಳಿದ್ದಾರೆ.

ಇಂದ್ರಿಯಗಳ ವಿಷಯಗಳಿಂದಾದ ಪ್ರೀತಿಯು ಸಹ ಸಂಸಾರದ ಕಾರಣವಿದೆ. ನಾವು ಅನಂತ ಭವಗಳಿಂದ ಅನಂತಾನಂತ ಸಲ ಇಂದ್ರಿಯಗಳ ವಿಷಯಗಳನ್ನು ಅನುಭವಿಸಿದ್ದೇವೆ. ಆದರೆ ಇಂದ್ರಿಯಗಳ ವಿಷಯಗಳನ್ನು ಅನುಭವಿಸುವದರಿಂದ ಎಂದಿಗೂ ಮನಸ್ಸು ತೃಪ್ತಿ ಹೊಂದುವುದಿಲ್ಲ. ಹೊರತಾಗಿ ಆ ಭೋಗೇಚ್ಛೆಯು ಮತ್ತಷ್ಟು ಹೆಚ್ಚು ಬಲವಾನವೇ ಆಗುತ್ತದೆ ಮತ್ತು ಇನ್ನೂ ಹೆಚ್ಚು ಬಯಸುತ್ತದೆ. ಯಾವ ಪ್ರಕಾರ ಬೆಂಕಿಯಲ್ಲಿ ಕಟ್ಟಿಗೆ ಹಾಕುವದರಿಂದ ಅದು ಹೆಚ್ಚು ಬಲವಾನ ಆಗುತ್ತದೆ, ಅದೇ ಪ್ರಕಾರ ಇಂದ್ರಿಯಗಳಿಗೆ ಎಷ್ಟು ಹೆಚ್ಚೆಚ್ಚು ಭೋಗ ಸಾಮಗ್ರಿಗಳನ್ನು ಕೊಡುವಿರೋ ಅಷ್ಟು ಅವುಗಳ ಅಭಿಲಾಷೆಯು ಕಡಿಮೆ ಆಗುವದಿಲ್ಲ. ಬದಲಾಗಿ ಹೆಚ್ಚಾಗುತ್ತದೆ.

ಆತ್ಮಾನುಶಾಸನ ಶ್ಲೋಕ ೫೧ರಲ್ಲಿ ಆಚಾರ್ಯರು ಹೇಳಿರುವದೇನೆಂದರೆ ಕೃಷ್ಣನಾಗಸರ್ಪದ ಸಮಾನ ಪ್ರಾಣ ಹರಣ ಮಾಡುವಂಥ ಈ ಭೋಗ ಭೋಗಿಸುವ ತೀವ್ರ ಅಭಿಲಾಷೆ ಇರುವಂಥ ನೀನು ಭವಿಷ್ಯ ಭವವನ್ನು ವ್ಯರ್ಥವಾಗಿ ಘಾತ ಮಾಡುತ್ತಲಿರುವೆ ಮತ್ತು ನೀನು ಸ್ವಯಂ ಅವಿವೇಕಿ, ಪರಲೋಕದ ಭಯದಿಂದ ರಹಿತ, ನಿರ್ದಯೀ ಮತ್ತು ಕಠೋರ ಪರಿಣಾಮಿಯಿರುವಿ. ಯಾವ ಯಾವ ವಸ್ತುಗಳನ್ನು ಸಾಧುಪುರುಷರು ನಿಂದ್ಯವೆಂದರೋ ನೀನು ಅವುಗಳ ಅಭಿಲಾಷೆ ಉಳ್ಳವನಾಗಿರುವಿ. ಕಾಮ ಪುರುಷರಿಗೆ ಧಿಕ್ಕಾರವಿರಲಿ! ಯಾರ ಮನಸ್ಸು ಕಾಮ, ಕ್ರೋಧ, ಹಟಾಗ್ರಹದ ವಶೀಭೂತವಾಗಿದೆ. ಅವರು ಏನೇನು ಮಾಡುವದಿಲ್ಲ. ಅಂದರೆ ಸಮಸ್ತ ಅಕಾರ್ಯಗಳನ್ನು ಮಾಡುತ್ತಾರೆಂದು ನನಗೆ ಅನಿಸುತ್ತದೆ.

ಅನಾದಿಯಿಂದ ಒಂದು ವೇಳೆ ಯಾರಾದರೂ ನನಗೆ ಎಲ್ಲರಿಗಿಂತ ದೊಡ್ಡ ವೈರಿ ಇದ್ದಾನೆಂದರೆ ಅವನು ನಾನೇ. ಅಂದರೆ ನನಗೆ ನಾನೇ ವೈರಿ ಇದ್ದೇನೆ. ಅನಾದಿಯಿಂದ ಒಂದು ವೇಳೆ ಯಾವನೋ ನನಗೆ ಎಲ್ಲರಿಗಿಂತ ಹೆಚ್ಚು ಮೋಸಗಾರನಿದ್ದರೆ ಅವನು ನಾನೇ ಸ್ವತಃ ಇದ್ದೇನೆ. ಅನಾದಿಯಿಂದ ನಾನು ಸ್ವತಃ ತಪ್ಪು ವಿಚಾರಗಳಲ್ಲಿ, ಪಕ್ಷಗಳಲ್ಲಿ, ಆಗ್ರಹದಲ್ಲಿ, ಹಠಾಗ್ರಹದಲ್ಲಿ, ಕೆಟ್ಟ ಆಗ್ರಹದಲ್ಲಿ

ಮೋಸ ಹೋಗಿದ್ದೇನೆ. ಈ ಕಾರಣ ನಾನು ನನಗೇನೇ ಸ್ವಚ್ಛಂದತೆಯಿಂದ ಮುಕ್ತಿ ಪಡೆಯುವಲ್ಲಿ ಅಸಫಲನಿದ್ದೇನೆ ಮತ್ತು ಹೀಗೆಯೇ ನಮ್ಮಿಂದ ನಮಗೇನೇ ಹಟ ಮಾಡುತ್ತಿದ್ದೇವೆ. ನಾವು ಈ ಎಲ್ಲವನ್ನು ಬಿಟ್ಟು ನಮ್ಮ ಮಿತ್ರನೂ ಸಹ ಆಗಬಹುದಾಗಿದೆ. ಅದರ ರೀತಿಯು ಬಹಳ ಸುಲಭವಿದೆ. ನಾವು ನಮ್ಮ ತಪ್ಪು ತರ್ಕ, ಪಕ್ಷಾಗ್ರಹ, ಹಠಾಗ್ರಹ, ಕೆಟ್ಟ ಆಗ್ರಹ ಮತ್ತು ಸ್ವಚ್ಛಂದತೆ ಇವುಗಳನ್ನು ಬಿಟ್ಟು ಸತ್ಯವಾದದ್ದು 'ಅದುವೇ ನನ್ನದು ಮತ್ತು ಒಳ್ಳೆಯದೇ ನನ್ನದು' ಈ ಸೂತ್ರವನ್ನು ನನ್ನದಾಗಿಸಿಕೊಂಡು ನನ್ನ ಪರಮ ಮಿತ್ರ ಆಗುವದಿದೆ.

ಮುಂದೆ ಆತ್ಮಾನುಶಾಸನ ಶ್ಲೋಕ ೫೪ ರಲ್ಲಿಯೂ ಸಹ – "ಹೇ ಜೀವ ! ನೀನು ಅನಂತ ಸಲ ಜನ್ಮಧಾರಣ ಮಾಡಿದರೂ ಸಹ ಇನ್ನೂ ಅಜ್ಞಾನಿಯೇ ಇರುವಿ. ಅನೇಕ ಮಹಾದೋಷ ರೂಪವಿರುವ ಧಾತು ಹಾಗೂ ಮಲಮೂತ್ರಗಳಿಂದ ಯುಕ್ತವಿರುವ ದೇಹಧಾರಣ ಮಾಡಿರುವಿ. ಕ್ರೋಧ, ಮಾನ, ಮಾಯೆ, ಲೋಭಗಳಿಂದ ತುಂಬಿಹೋದ ನೀನು ಮನಸ್ಸಿನ ಚಿಂತೆ ಹಾಗೂ ದೇಹದ ವ್ಯಾಧಿಯಿಂದ ಪೀಡಿತನಿರುವಿ. ಅಭಕ್ಷ್ಯ ಭಕ್ಷಣೆ, ಅಯೋಗ್ಯ ಆಚರಣೆಯಿಂದ ದುರಾಚಾರಿ ಇರುವಿ. ನಿನ್ನನ್ನೇ ನೀನು ವಂಚಿಸುತ್ತಿರುವಿ. ನೀನು ಜನ್ಮ ಮರಣಗಳ ಮುಖದಲ್ಲಿ ಬಿದ್ದುಕೊಂಡಿರುವಿ. ಮುಪ್ಪಾವಸ್ಥೆಯಿಂದ ದುಃಖಿತನಾಗಿರುವಿ. ವ್ಯರ್ಥವಾಗಿ ಉನ್ಮತ್ತನಾಗುತ್ತಿರುವಿ. ಆದುದರಿಂದ ನೀನೇನು ಆತ್ಮಕಲ್ಯಾಣದ ಶತ್ರುವಾಗಿರುವಿಯೋ ಅಥವಾ ಅಕಲ್ಯಾಣದ ಇಚ್ಛೆ ಉಳ್ಳವನಾಗಿರುವಿಯೋ ಹೇಗೆ ?

ಎಷ್ಟೋ ಜೀವಗಳು – 'ಪುಣ್ಯಾರ್ಜನೆಗೇನೇ ಮೋಕ್ಷಮಾರ್ಗವೆಂದು ಮನ್ನಿಸುತ್ತಾರೆ. ಅವರು ನಿಶ್ಚಯ ಸಮ್ಯಗ್ದರ್ಶನದ ಪ್ರಾಪ್ತಿಯ ಲಕ್ಷ್ಯ ಬಿಟ್ಟು ಬೇರೆಯೇ ಪುಣ್ಯಾರ್ಜನದಲ್ಲಿ ತೊಡಗಿರುತ್ತಾರೆ ಮತ್ತು ಅದರಿಂದಲೇ ಮೋಕ್ಷವೆಂದು ತಿಳಿಯುತ್ತಾರೆ. ಇಂತಹ ಬಾಲ ಜೀವಗಳ ಮೇಲೆ ಕರುಣೆ ತೋರಿಸಿ ಯೋಗಸಾರ ದೋಹಾ ೧೫ ರಲ್ಲಿ ಆಚಾರ್ಯ ಭಗವಂತರು ಹೀಗೆ ಹೇಳಿದ್ದಾರೆ – ಒಂದು ವೇಳೆ ನೀನು ಆತ್ಮನನ್ನು ತಿಳಿದುಕೊಳ್ಳದೇ ಕೇವಲ ಪುಣ್ಯಕರ್ಮವನ್ನೇ ಮಾಡುತ್ತಿರುವಿ. ಅಂದರೆ ಸಿದ್ಧಸುಖವನ್ನು ಪಡೆಯಲಾರೆ. ಅಂದರೆ ಸಮ್ಯಗ್ದರ್ಶನದ ಹೊರತು ಶಿವಸುಖದ (ಮೋಕ್ಷ) ಪ್ರಾಪ್ತಿಯು ಸಾಧ್ಯವೇ ಇಲ್ಲವೆಂದಾಯಿತು.

ಮುಂದೆ ಇದೇ ಯೋಗಸಾರ ದೋಹಾ ೫೩ರಲ್ಲಿ – 'ಎಷ್ಟೋ ಶಾಸ್ತ್ರಗಳನ್ನು ಓದಿದರೂ ಸಹ ಯಾರು ತಮ್ಮ ಆತ್ಮನನ್ನು ತಿಳಿಯುವದಿಲ್ಲ. (ಯಾರಿಗೆ ಸಮ್ಯಗ್ದರ್ಶನ ಇರುವದಿಲ್ಲ.) ಅವರೂ ಸಹ ಅಜ್ಞಾನಿಗಳಿದ್ದಾರೆ. ಈ ಕಾರಣದಿಂದ ಆ ಜೀವರುಗಳೂ ನಿಶ್ಚಯದಿಂದ ನಿರ್ವಾಣಕ್ಕೆ ಪ್ರಾಪ್ತರಾಗುವದಿಲ್ಲ. ಅಂದರೆ ಮಿಥ್ಯಾತ್ವವು ಅನಂತ ಸಂಸಾರದ ಮೂಲ ಕಾರಣವಿದೆ. ಎಲ್ಲ ಪಾಪಗಳ ರಾಜನಂತಿದೆ. ಈ ಮಿಥ್ಯಾತ್ವವು ಸಮ್ಯಗ್ದರ್ಶನದಿಂದ ನಾಶವಾಗುತ್ತದೆ. ಸಮ್ಯಗ್ದರ್ಶನವು ನಿರ್ವಾಣವನ್ನು ಪ್ರಾಪ್ತ ಮಾಡಿಕೊಳ್ಳುವ ಸಲುವಾಗಿ, ಅಂದರೆ ಶಾಶ್ವತ ಸುಖದ ಪ್ರಾಪ್ತಿಯ ಸಲುವಾಗಿ ಪರಮ ಅವಶ್ಯಕವಿದೆ.

ಇದರಿಂದಲೇ ಸ್ವಾಮಿ ಕಾರ್ತಿಕೇಯಾನುಪ್ರೇಕ್ಷೆ ಗಾಥಾ ೨೯೦ ರಿಂದ ೨೯೭ರಲ್ಲಿ ಹೀಗೆ ಹೇಳಿದ್ದಾರೆ – "ಮನುಷ್ಯ ಗತಿ, ಆರ್ಯಖಂಡ, ಉಚ್ಚಕುಲ, ಸಂಪತ್ತು, ಇಂದ್ರಿಯಗಳ ಪರಿಪೂರ್ಣತೆ, ನಿರೋಗಿ ಶರೀರ, ದೀರ್ಘಾಯು, ಭದ್ರಪರಿಣಾಮ, ಸರಳ ಸ್ವಭಾವ, ಸಾಧುಪುರುಷರ ಸಂಗತಿ, ಸಮ್ಯಗ್ದರ್ಶನ, ಸತ್‌ಶ್ರದ್ಧಾನ, ಜ್ಞಾನ ಚಾರಿತ್ರ ಮುಂತಾದವುಗಳು ಒಂದರಕ್ಕಿಂತಲೂ ಒಂದು ಹೆಚ್ಚು ದುರ್ಲಭ ಇವೆ.

ಆತ್ಮಾನುಶಾಸನ ಶ್ಲೋಕ ೭೫ರಲ್ಲಿ ಹೀಗೆ ಹೇಳಿದ್ದಾರೆ – ವಿಧಿ ರೂಪದ ಮಂತ್ರಿಯು ಈ ಮನುಷ್ಯನನ್ನು ಅನೇಕ ಪ್ರಕಾರದಿಂದ ರಕ್ಷಣೆ ಮಾಡಿದ್ದಾರೆ. ದುಷ್ಟಪರಿಣಾಮಿ ನರಕದ ಜೀವಗಳನ್ನು ಕೆಳಭಾಗದಲ್ಲಿ ಮತ್ತು ದೇವತೆಗಳನ್ನು ಮೇಲ್ಭಾಗದಲ್ಲಿ ಇಟ್ಟಿದ್ದಾನೆ. ಲೋಕದ ನಾಲ್ಕೂ ಕಡೆಗೆ ಅನೇಕ ಮಹಾನ್ ಅಲಂಘ್ಯಸಮುದ್ರ ಹಾಗೂ ಅವುಗಳ ನಾಲ್ಕೂ ಕಡೆಗೆ ಘನೋದಧಿ, ಘನ ಮತ್ತು ತನು ಈ ಹೆಸರಿನ ಮೂರು ಗಾಳಿಗಳಿಂದ ಸುತ್ತಲೂ ಕೋಟೆಯನ್ನು ರಚಿಸಿದ್ದಾನೆ. ಮಧ್ಯದಲ್ಲಿ ಮನುಷ್ಯ ಪ್ರಾಣಿಯನ್ನು ಇಟ್ಟಿದ್ದಾನೆ. ಆದರೂ ಇವರಿಗೆ ಮರಣವು ತಪ್ಪಿದ್ದಲ್ಲ. ಇಂದ್ರ, ಧರಣೇಂದ್ರ ಚಕ್ರವರ್ತಿ ಯಾರೂ ಇವನನ್ನು ಮರಣದಿಂದ ರಕ್ಷಿಸಲು ಸಾಧ್ಯವಿಲ್ಲ. ಮರಣ ಆಗೇ ಆಗುವದು.

ಕಾರ್ತಿಕೇಯಾನುಪ್ರೇಕ್ಷೆ ಗಾಥೆ ೨೯೭ ರಲ್ಲಿ ಹೇಗೆ ಮಹಾನ್ ಸಮುದ್ರದಲ್ಲಿ ಬಿದ್ದಂಥ ರತ್ನವು ಮತ್ತೊಮ್ಮೆ ಪ್ರಾಪ್ತವಾಗುವದು ದುರ್ಲಭವಿದೆ. ಅದೇ ಪ್ರಕಾರ ಈ ಮನುಷ್ಯತನವು ಮತ್ತೊಮ್ಮೆ ಪ್ರಾಪ್ತವಾಗುವದು ದುರ್ಲಭವಿದೆ. ಇದು ನಿಶ್ಚಯವಿದೆ. ಹೇ ಭವ್ಯ ಜೀವಿಗಳೇ! ಈ ಮಿಥ್ಯಾತ್ವ ಮತ್ತು ಕಷಾಯಗಳನ್ನು ಬಿಟ್ಟು ಬಿಡಿರಿ ಎಂದು ಶ್ರೀ ಗುರುಗಳ ಉಪದೇಶ ಇರುತ್ತದೆ.

ಆದ್ದರಿಂದ ಈ ಅಮೂಲ್ಯವಾದ ಹಾಗೂ ದುರ್ಲಭವಾದ ಮನುಷ್ಯ ಜನ್ಮವು ಕೇವಲ ಶಾರೀರಿಕ ಇಂದ್ರಿಯ ಜನ್ಯ ಸುಖ ಮತ್ತು ಅವುಗಳ ಪ್ರಾಪ್ತಿಯ ಸಲುವಾಗಿ ಖರ್ಚು ಮಾಡುವದು ಯೋಗ್ಯವಲ್ಲ. ಜೀವನದ ಒಂದು ಕ್ಷಣವೂ ಸಹ ವ್ಯರ್ಥ ಕಳೆಯದೇ ಶೀಘ್ರತೆಯಿಂದ ಶಾಶ್ವತ ಸುಖದ ಅಂದರೆ ಆತ್ಮೀಕ ಸುಖದ (ಸಮ್ಯಗ್ದರ್ಶನದ) ಪ್ರಾಪ್ತಿಯ ಸಲುವಾಗಿ ತೊಡಗುವದು ಯೋಗ್ಯವಿದೆ. ಒಂದು ವೇಳೆ ಈ ಭವವು ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳದೇ ಹೊರಟುಹೋದರೆ ಮತ್ತೆ ಅನಂತಕಾಲದ ತನಕ ಇಂತಹ ಸಮ್ಯಗ್ದರ್ಶನ ಪಡೆಯುವ ಯೋಗ್ಯ ಭವದ ಪ್ರಾಪ್ತಿಯಾಗುವದು ಬಹಳ ದುರ್ಲಭವಿದೆ. ಆದ್ದರಿಂದ ಎಲ್ಲ ಜನರಲ್ಲಿ ನಮ್ಮ ಆಗ್ರಹವಿದೆ. ಏನಂದರೆ ನಿಮ್ಮ ವರ್ತಮಾನ ಪೂರ್ಣ ಜೀವನವನ್ನು ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳುವ ಸಲುವಾಗಿಯೇ ತೊಡಗಿಸಿರಿ. ಆದ್ದರಿಂದ ನಾವು ಈ ಪುಸ್ತಕದಲ್ಲಿ ಸಮ್ಯಗ್ದರ್ಶನ ಪ್ರಾಪ್ತ ಮಾಡುವ ವಿಧಿ / ರೀತಿ ಮತ್ತು ಅದರ ಸಲುವಾಗಿ ಯಾವ ವಿಷಯದ ಮನನ – ಚಿಂತನ ಮಾಡಿ ಅದರಲ್ಲಿಯೇ ಏಕತ್ವ ಹೊಂದಲು ಯೋಗ್ಯವಿದೆ. ಅಂತಹ ಸಮ್ಯಗ್ದರ್ಶನದ ವಿಷಯ ವಿವೇಚನೆ ಮುಂದೆ

# ಪರಿವಿಡಿ


| | | |
|---|---|---|
| | ಅನುವಾದಕರ ನುಡಿಗಳು | ೩ |
| | ಲೇಖಕರ ಹೃದಯೋದ್ಗಾರ | ೫ |
| | ಮೊದಲ ಮುನ್ನುಡಿ | ೧೧ |
| ೧. | ಸಮ್ಯಗ್ದರ್ಶನ | ೧ |
| ೨. | ದ್ರವ್ಯ-ಗುಣ ವ್ಯವಸ್ಥೆ | ೫ |
| ೩. | ದ್ರವ್ಯ ಪರ್ಯಾಯ ವ್ಯವಸ್ಥೆ | ೮ |
| ೪. | ಉತ್ಪಾದ-ವ್ಯಯ-ಧ್ರುವ ರೂಪ ವ್ಯವಸ್ಥೆ | ೧೧ |
| ೫. | ದೃಷ್ಟಿ ಭೇದದಿಂದ ಭೇದ | ೧೩ |
| ೬. | ಪಂಚಾಧ್ಯಾಯಿ ಗ್ರಂಥದಲ್ಲಿ ತಿಳಿಸಿದ ವಸ್ತು ವ್ಯವಸ್ಥೆ | ೧೫ |
| ೭. | ಸಮ್ಯಗ್ದರ್ಶನದ ಸ್ವರೂಪ | ೩೦ |
| ೮. | ಸಮ್ಯಗ್ದರ್ಶನದ ವಿಷಯ (ದೃಷ್ಟಿಯ ವಿಷಯ) | ೩೫ |
| ೯. | ಪಂಚಾಧ್ಯಾಯಿ ಪೂರ್ವಾರ್ಧದಲ್ಲಿ ತಿಳಿಸಿರುವ ಸಮ್ಯಗ್ದರ್ಶನದ ವಿಷಯ | ೩೮ |
| ೧೦. | ಆತ್ಮಜ್ಞಾನರೂಪಿ ಸ್ವಾತ್ಮಾನುಭೂತಿಯು ಪರೋಕ್ಷವಿದೆಯೇ ಅಥವಾ ಪ್ರತ್ಯಕ್ಷವಿದೆಯೇ ? | ೪೧ |
| ೧೧. | ಸ್ವಾತ್ಮಾನುಭೂತಿಯು ಆತ್ಮನ ಯಾವ ಪ್ರದೇಶದಲ್ಲಿ ಆಗುತ್ತದೆ ? | ೪೨ |
| ೧೨. | ಇಂದ್ರಿಯ ಜ್ಞಾನವು ಜ್ಞಾನವಲ್ಲವೇ ? | ೪೪ |
| ೧೩. | ಪರ್ಯಾಯವು ಪರಮಪಾರಿಣಾಮಿಕ ಭಾವದಿಂದಲೇ ಉಂಟಾಗಿರುತ್ತದೆ (ಪಂಚಾಧ್ಯಾಯಿ ಉತ್ತರಾರ್ಧ) | ೪೬ |
| ೧೪. | ಸ್ವಭಾವ ಪರ್ಯಾಯ ಮತ್ತು ವಿಭಾವ ಪರ್ಯಾಯ | ೪೯ |
| ೧೫. | ಒಂಬತ್ತು ತತ್ವಗಳ ನಿಜವಾದ ಶ್ರದ್ಧೆಯ ಸ್ವರೂಪ (ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ) | ೫೧ |
| ೧೬. | ಸಮ್ಯಗ್ದರ್ಶನದ ಲಕ್ಷಣ | ೫೬ |
| ೧೭. | ಸಮ್ಯಗ್ದೃಷ್ಟಿಗೆ ಭೋಗವು ಬಂಧದ ಕಾರಣವಿಲ್ಲ | ೫೮ |
| ೧೮. | ನಿಮಿತ್ತ ಉಪಾದಾನದ ಸ್ಪಷ್ಟತೆ | ೬೦ |
| ೧೯. | ಉಪಯೋಗ ಮತ್ತು ಲಬ್ಧಿರೂಪ ಸಮ್ಯಗ್ದರ್ಶನ (ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ) | ೬೨ |

೨೦. ಸ್ವಾನುಭೂತಿರಹಿತ ಶ್ರದ್ಧೆ ೬೩
೨೧. ಸಮ್ಯಗ್ದೃಷ್ಟಿ ಜೀವದ ನಿರ್ವಿಚಿಕಿತ್ಸಾ ಗುಣ ೬೫
**೨೨. ಸಮ್ಯಗ್ದರ್ಶನದ ಸಲುವಾಗಿ ಯೋಗ್ಯತೆ** ೬೬
೨೩. ಶುಭೋಪಯೋಗವು ನಿರ್ಜರೆಯ ಕಾರಣವಿಲ್ಲ
(ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ) ೧೧೧
೨೪. ಸಮ್ಯಗ್ದರ್ಶನ ರಹಿತ ದ್ರವ್ಯಚಾರಿತ್ರ ೧೧೩
೨೫. ಸ್ವ-ಪರ ವಿಷಯದ ಉಪಯೋಗ ಮಾಡುವಂಥವನೂ
ಸಹ ಆತ್ಮಜ್ಞಾನಿ ಆಗುತ್ತಾನೆ. ೧೧೪
೨೬. ಪ್ರವಚನ ಸಾರದ ಅನುಸಾರ ಸಮ್ಯಗ್ದರ್ಶನದ ವಿಷಯ ೧೧೬
೨೭. ನಿಯಮಸಾರ ಟೀಕೆಯಲ್ಲಿ ಸಮ್ಯಗ್ದರ್ಶನದ ವಿಷಯ ೧೧೭
೨೮. ಧ್ಯಾನದ ವಿಷಯ ೧೨೦
**೨೯. ಸಾಧಕನಿಗೆ ಸಲಹೆಗಳು** ೧೨೩
೩೦. ನಿಯಮಸಾರದ ಅನುಸಾರ ಸಮ್ಯಗ್ದರ್ಶನ ಮತ್ತು
ಧ್ಯಾನದ ವಿಷಯ ೧೨೯
೩೧. ಪಂಚಾಸ್ತಿಕಾಯ ಸಂಗ್ರಹದ ಗಾಥೆಗಳು ೧೪೨
೩೨. ಅಷ್ಟಪಾಹುಡದ ಗಾಥೆಗಳು ೧೪೩
೩೩. ಸಮ್ಯಗ್ದರ್ಶನ ಮತ್ತು ಮೋಕ್ಷಮಾರ್ಗ ೧೪೫
೩೪. ಸಮಯಸಾರದ ಅನುಸಾರ ಸಮ್ಯಗ್ದರ್ಶನದ ವಿಷಯ ೧೪೭
೩೫. ಸಮಯಸಾರದ ಅಧ್ಯಾಯಗಳ ಪಕ್ಷಿನೋಟ ೧೫೭
೩೬. ಸಮಯಸಾರದ ಪರಿಶಿಷ್ಟದಲ್ಲಿಂದ ಅನೇಕಾಂತದ ಸ್ವರೂಪ ೧೭೦
೩೭. ಹನ್ನೆರಡು ಭಾವನೆಗಳು ೧೭೨
೩೮. ದಿನಾಲು ಚಿಂತಿಸಬೇಕಾದ ಬೀಜ ವಾಕ್ಯಗಳು ೧೭೫
೩೯. ಸಮ್ಯಗ್ದೃಷ್ಟಿಯ ಕೆಲವು ಸಾಮಾನ್ಯ ಲಕ್ಷಣಗಳು ೧೮೪
೪೦. ರಾತ್ರಿಭೋಜನದ ಕುರಿತು ೧೮೬
೪೧. ಸಮಾಧಿ ಮರಣ – 'ಚಿಂತನ' ೧೮೮
೪೨. ನಿಸರ್ಗದ ನಿಯಮ – ಯುನಿವರ್ಸಲ್ ಲಾ ೧೯೦

ದಪ್ಪಕ್ಷರಗಳಲ್ಲಿ ತೋರಿಸಿದ ಪ್ರಕರಣಗಳನ್ನು ಮೇಲಿಂದ ಮೇಲೆ ಓದಿರಿ

# ೧. ಸಮ್ಯಗ್ದರ್ಶನ

ಸಮ್ಯಗ್ದರ್ಶನವು ಮೋಕ್ಷಮಾರ್ಗದ ಬಾಗಿಲು ಇದೆ. ನಿಶ್ಚಯ ಸಮ್ಯಗ್ದರ್ಶನದ ಹೊರತು ಮೋಕ್ಷ ಮಾರ್ಗದಲ್ಲಿ ಪ್ರವೇಶವೇ ಆಗುವದಿಲ್ಲ. ಮತ್ತು ಮೋಕ್ಷಮಾರ್ಗದಲ್ಲಿ ಪ್ರವೇಶಿಸದೇ ಅವ್ಯಾಬಾಧ ಸುಖದ ಮಾರ್ಗವೇ ಸಾಧ್ಯವಾಗುವದಿಲ್ಲ. ಮೋಕ್ಷಮಾರ್ಗದಲ್ಲಿ ಪ್ರವೇಶ ಮತ್ತು ನಂತರದ ಪುರುಷಾರ್ಥದಿಂದಲೇ ಸಿದ್ಧತ್ವರೂಪ ಫಲವು ದೊರೆಯುತ್ತದೆ. ಇಲ್ಲವಾದರೆ ಇಲ್ಲ. ಸಮ್ಯಗ್ದರ್ಶನದ ಹೊರತು ಭವಭ್ರಮಣವೂ ಸಹ ನಿಲ್ಲುವದಿಲ್ಲ. ಏಕೆಂದರೆ ಸಮ್ಯಗ್ದರ್ಶನದ ಬಳಿಕವೇ ಜೀವವು ಅರ್ಧಪುದ್ಗಲ ಪರಾವರ್ತನ ಕಾಲದಿಂದ ಹೆಚ್ಚು ಕಾಲ ಸಂಸಾರದಲ್ಲಿ ಇರುವದಿಲ್ಲ. ಅವನು ಅರ್ಧಪುದ್ಗಲ ಪರಾವರ್ತನ ಕಾಲದಲ್ಲಿ ಅವಶ್ಯವಾಗಿ ಸಿದ್ಧತ್ವವನ್ನು ಪ್ರಾಪ್ತ ಮಾಡೇ ಮಾಡುತ್ತಾನೆ. ಈ ಮನುಷ್ಯಭವದಲ್ಲಿ ಪ್ರಾಪ್ತ ಮಾಡಲು ಏನಾದರೂ ಯೋಗ್ಯವಾದುದು ಇದ್ದರೆ ಅದು ಕೇವಲ ನಿಶ್ಚಯ ಸಮ್ಯಗ್ದರ್ಶನವಾಗಿದೆ. ಅದರಿಂದ ನನಗೇನೇ ಮೋಕ್ಷಮಾರ್ಗದಲ್ಲಿ ಪ್ರವೇಶ ದೊರಕುವದು ಮತ್ತು ಪುರುಷಾರ್ಥವು ಪ್ರಸ್ಫುಟಿತಗೊಂಡು ಮುಂದೆ ಸಿದ್ಧಪದದ ಪ್ರಾಪ್ತಿಯಾಗುವದು.

ಸತ್ಯ ದೇವ-ಶಾಸ್ತ್ರ-ಗುರುಗಳ ಕುರಿತು ಶ್ರದ್ಧಾರೂಪ ಅಥವಾ ಒಂಬತ್ತು ತತ್ವಗಳ ಶ್ರದ್ಧಾರೂಪವೇ ಸಮ್ಯಗ್ದರ್ಶನವಿದೆ. ಇದು ಕೇವಲ ವ್ಯವಹಾರಿಕ (ಉಪಚಾರ ರೂಪ) ಸಮ್ಯಗ್ದರ್ಶನ ಎಂದಾಗುತ್ತದೆ. ಇದು ಮೋಕ್ಷಮಾರ್ಗದಲ್ಲಿ ಪ್ರವೇಶ ಮಾಡುವ ಸಲುವಾಗಿ ಕಾರ್ಯಕಾರಿ ಇಲ್ಲವೆಂದು ಮನ್ನಿಸಲಾಗಿದೆ. ಏಕೆಂದರೆ ನಿಶ್ಚಯನಯದ ಮತದಿಂದ ಯಾವ ಆತ್ಮನನ್ನು ತಿಳಿಯುತ್ತಾನೆ ಅವನೇ ಎಲ್ಲವನ್ನು ಅಂದರೆ ಏಳು/ ಒಂಬತ್ತು ತತ್ವಗಳನ್ನು ಮತ್ತು ನಿಜವಾದ ದೇವ-ಶಾಸ್ತ್ರ-ಗುರುಗಳನ್ನು ತಿಳಿಯುತ್ತಾನೆ. ಆತ್ಮನನ್ನು ತಿಳಿಯುತ್ತಲೇ ಆ ಜೀವವು ನಿಜವಾದ ದೇವತತ್ವದ ಆಂಶಿಕ ಅನುಭವ ಮಾಡುತ್ತಾನೆ. ಇದರಿಂಪ ಅವನು ನಿಜವಾದ ದೇವನನ್ನು ಅಂತಃಕರಣದಿಂದ ಗುರುತಿಸುತ್ತಾನೆ ಮತ್ತು ನಿಜವಾದ ದೇವನನ್ನು ತಿಳಿಯುತ್ತಲೇ ಅಂದರೆ ಶ್ರದ್ಧೆಯಾಗುತ್ತಲೇ ಆ ಜೀವವು ದೇವನಾಗುವ ಮಾರ್ಗವನ್ನು ಹೇಳುವಂಥ ನಿಜವಾದ ಶಾಸ್ತ್ರವನ್ನು ಸಹ ಗುರುತಿಸುತ್ತಾನೆ. ಈ ಪ್ರಕಾರ ಸ್ವಾನುಭೂತಿ (ಸ್ವ-ಅನುಭೂತಿ) ಸಹಿತ ಸಮ್ಯಗ್ದರ್ಶನ ಅಂದರೆ ಭೇದಜ್ಞಾನ ಸಹಿತವಾದ ಸಮ್ಯಗ್ದರ್ಶನವನ್ನೇ ನಿಶ್ಚಯ ಸಮ್ಯಗ್ದರ್ಶನ ಎಂದು ಹೇಳುತ್ತಾರೆ. ಇದರ ಹೊರತು ಮೋಕ್ಷಮಾರ್ಗದಲ್ಲಿ ಪ್ರವೇಶ ಸಾಧ್ಯವಿಲ್ಲ. ಈ ಸಮ್ಯಗ್ದರ್ಶನವನ್ನೇ ನಿಶ್ಚಯ ಸಮ್ಯಗ್ದರ್ಶನ ಎಂದು ತಿಳಿಯಬೇಕು.

ಜೈನ ಸಮಾಜದಲ್ಲಿ ಸಮ್ಯಗ್ದರ್ಶನದ ಮೇಲೆ ಬಹಳಷ್ಟು ಲೇಖನಗಳನ್ನು ಬರೆದಿದ್ದಾರೆ. ಆದರೆ ನಿಶ್ಚಯ ಸಮ್ಯಗ್ದರ್ಶನದ ದುರ್ಲಭತೆಯಿಂದ ಅದನ್ನು ಅನುಭವಿಸಿದವರ ರೀತಿಯು ನೋಡುವಲ್ಲಿ ಕಡಿಮೆ ಬರುತ್ತದೆ. ಸಮ್ಯಗ್ದರ್ಶನದ ಸಲುವಾಗಿ ಅನೇಕ ಸಂಪ್ರದಾಯಗಳಲ್ಲಿ ನಾವು ಅನೇಕ ಮುಮುಕ್ಷು ಜೀವಗಳು ಗಂಭೀರತೆಯಿಂದ ಪ್ರಯತ್ನಿಸುವದನ್ನು ನೋಡಿದ್ದೇವೆ. ಆದರೆ ಅವರಿಗೆ ಯೋಗ್ಯ ಮಾರ್ಗದರ್ಶನ ದೊರೆಯದಿರುವದರಿಂದ ಆ ಜೀವಗಳು ಕೆಲವು ಕಾಲದ ತನಕ ತುಂಬ ಪ್ರಯತ್ನ ಮಾಡಿ ನಿರಾಶೆ ಆಗುತ್ತಾರೆ. ಆಗ ಇಂಥ ಜನರು ನಿರಾಶೆಯಿಂದ ಬೀಳುತ್ತಾರೆ ಮತ್ತು ಎಷ್ಟೋ ಜೀವರುಗಳು ಅದನ್ನು ತಮ್ಮ ಭಾಗ್ಯದ ಮೇಲೆ ಬಿಟ್ಟು ಬಿಡುತ್ತಾರೆ. ಕೆಲವು ಜನರು ತಮ್ಮ ಅಭಿರುಚಿಯ ಸಾಂಪ್ರದಾಯಿಕ ಕ್ರಿಯೆಗಳಲ್ಲಿ ಅಥವಾ ಕ್ರಮದಲ್ಲಿ ತೊಡಗುತ್ತಾರೆ. ಕೆಲವು ಜನರು ಆಶ್ರಮ, ಮಂದಿರ, ಸ್ಥಾನಕ, ತೀರ್ಥ ಅಥವಾ ಸಾಂಪ್ರದಾಯಿಕ ವ್ಯವಸ್ಥೆಯ ಕಾರ್ಯಗಳಲ್ಲಿ ತೊಡಗುತ್ತಾರೆ. ಅವರ ಕಾರ್ಯ ತಪ್ಪು ಇರುವದಿಲ್ಲ. ಆದರೆ ಆತ್ಮನ ಲಕ್ಷ್ಯ ಮರೆತು ಅದನ್ನೇ ಧರ್ಮವೆಂದು ಮನ್ನಿಸುವದು ತಪ್ಪು ಇದೆ. ಕೆಲವು ಜನರು ದೇವರಿಗೆ ಪ್ರಸನ್ನಗೊಳಿಸುವ ಆರಾಧನೆಯಲ್ಲಿ ತೊಡಗುತ್ತಾರೆ ಮತ್ತು ಅದನ್ನೇ ಧರ್ಮವೆಂದು ಮನ್ನಿಸತೊಡಗುತ್ತಾರೆ. ಕೆಲವು ಜನರು ದೇವರ ಆರಾಧನೆಯಿಂದ ಉತ್ಪನ್ನವಾದ ಯಾವದೋ ಸಾಮಾನ್ಯ ಸಿದ್ಧಿಯಲ್ಲಿ ಬಂಧಿಸಿಕೊಳ್ಳುತ್ತಾರೆ. ಅದನ್ನೇ ಧರ್ಮ ಮತ್ತು ಧರ್ಮದ ಪ್ರಭಾವನೆ ಎಂದು ಮನ್ನಿಸುತ್ತಾರೆ. ಅದರಿಂದ ತಮ್ಮ ಅಹಂಕಾರವನ್ನು ಪುಷ್ಟಿಗೊಳಿಸಿಕೊಳ್ಳುತ್ತಾರೆ. ಕೆಲವು ಜನರು ಪ್ರಾಪ್ತವಾದ ಕ್ಷಯೋಪಶಜ್ಞಾನದಲ್ಲಿಯೇ ನಿಂತುಬಿಡುತ್ತಾರೆ. ಅದರಿಂದ ಇವರೂ ತಮ್ಮ ಅಹಂಕಾರ ಪುಷ್ಟಿ ಮಾಡುತ್ತಾರೆ. ಕೆಲವು ಜನರು ಧ್ಯಾನ (ಆರ್ತಧ್ಯಾನ)ದ ಹಿಂದೆ ಬೀಳುತ್ತಾರೆ. ಅಂದರೆ ಧ್ಯಾನದಿಂದಲೇ ಸಮ್ಯಗ್ದರ್ಶನ ದೊರೆಯುವದೆಂದು ಒಪ್ಪಿ ಆತ್ಮನ ಅನುಭವ ಆಗದ ಕಾರಣ ದೇಹಾದಿಕದ್ದೇ ಧ್ಯಾನ ಮಾಡತೊಡಗುತ್ತಾರೆ. ಇದನ್ನು ಶಾಸ್ತ್ರದಲ್ಲಿ ಆರ್ತಧ್ಯಾನವೆಂದು ಹೇಳಲಾಗಿದೆ. ಇದು ತಿರ್ಯಂಚಗತಿಗೆ ಕಾರಣವೆಂದು ಮನ್ನಿಸಲಾಗಿದೆ. ಉಳಿದ ಕೆಲವರು ಕುರುಡ ಭಕ್ತಿಯಲ್ಲಿ ತೊಡಗುತ್ತಾರೆ.

ಯಥಾರ್ಥ ಭಕ್ತಿ ಹೀಗೆ ಇರುತ್ತದೆ – ಯಾವುದರಲ್ಲಿ ಮುಮುಕ್ಷು ಜೀವವು ಭಗವಾನರ ಅಥವಾ ಸತ್ಪುರುಷರ ವಚನಗಳ ಮೇಲೆ ನಡೆಯುವ ಪ್ರಯತ್ನ ಮಾಡುತ್ತಾರೆ ಮತ್ತು ಭಗವಾನರ ಅಥವಾ ಸತ್ಪುರುಷರ ಸ್ತುತಿ ಮಾಡುತ್ತ ಪರದ ಹಾಗೂ ಪರದ್ರವ್ಯದ ಮೇಲಿನ ಮೋಹ ಕಡಿಮೆ ಮಾಡುತ್ತ ಆತ್ಮನ ಮೇಲೆ ಪವಿತ್ರ ಶ್ರದ್ಧೆ ಹೊಂದುವರೋ ಆಗ ಉಂಟಾಗುವದು ನಿಜವಾದ ಭಕ್ತಿಯಾಗಿದೆ.

ಕೆಲವು ಜನರು ಸಮ್ಯಗ್ದರ್ಶನದ ಕುರಿತು ಹೇಳುತ್ತ ಅವರು ಕೇವಲ ವ್ಯವಹಾರ ಸಮ್ಯಗ್ದರ್ಶನವನ್ನೇ ನಿಜವಾದ ಸಮ್ಯಗ್ದರ್ಶನ ಎಂದು ತಿಳಿದುಕೊಂಡು ಆನಂದ ಪಡುತ್ತಾರೆ ಮತ್ತು ಅವರು ತಮ್ಮಷ್ಟಕ್ಕೆ ತಾವೇ ಮೋಕ್ಷಮಾರ್ಗಿ ಎಂದು ತಿಳಿಯತೊಡಗುತ್ತಾರೆ. ಇದೇ ರೀತಿಯಿಂದ ಅನಾದಿಯಾಗಿ ನಾವು ಸ್ವಂತಕ್ಕೆ ಮೋಸ ಮಾಡಿಕೊಂಡಿದ್ದೇವೆ. ಎಲ್ಲಿಯತನಕ ಹೀಗೆ ಮೋಸ ಮಾಡಿಕೊಳ್ಳುವದು ? ಈ

ಮಾತಿನ ವಿಚಾರ ಮಾಡಿ. ಸ್ವಂತದ ಮೇಲೆ ಕರುಣೆ ತೋರಿಸಿರಿ. ಅಂದರೆ ದಯೆ ಮಾಡಿರಿ. ಅನಾದಿಯಿಂದ ದುಃಖಮಯ ಸಂಸಾರದಲ್ಲಿ ಅಲೆದಾಡುತ್ತಿರುವ ನಮ್ಮನ್ನು ನಾವೇ ಈ ಸಂಸಾರದಿಂದ ಬಿಡುಗಡೆ ಪಡೆಯಬೇಕಾಗಿದೆ. ಮುಕ್ತಿ ಪಡೆಯಬೇಕಾಗಿದೆ. ಇದೇ ಕಾರಣದಿಂದ ನಿಶ್ಚಯ ಸಮ್ಯಗ್ದರ್ಶನದ ಪ್ರಾಪ್ತಿಯ ಅವಶ್ಯಕತೆಯಿದೆ.

ಸಮಗ್ರ ರೂಪದಿಂದ ಶಾಸ್ತ್ರಗಳ ಅಧ್ಯಯನದ ಅಭಾವದ ಕಾರಣ ವಸ್ತು ಸ್ವರೂಪವನ್ನು ತಿಳಿಯುವಲ್ಲಿ ಎಷ್ಟೋ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಶಾಸ್ತ್ರಗಳನ್ನು ಸಂಪೂರ್ಣ ಸರಿಯಾಗಿ ತಿಳಿಯದ ಜನರು ಯಾವುದೋ ಬೇರೆ ಶಬ್ದಗಳನ್ನು ಹಿಡಿದುಕೊಂಡು ಅದರದೇ ಶಾಬ್ದಿಕ ಅರ್ಥವನ್ನು ಅನಾದರ ಮಾಡುತ್ತಾರೆ. ಅವರು ಅದರ ಯಥಾರ್ಥ ಅರ್ಥವನ್ನು ಗ್ರಹಣ ಮಾಡುವದೇ ಇಲ್ಲ. ಅಂದರೆ ಅವರು ಶಬ್ದದ ಅರ್ಥ ಸ್ವೀಕರಿಸಿ ಏಕಾಂತರೂಪ ಅಥವಾ ವಿಕೃತ ರೂಪದಿಂದಲೂ ತಿಳಿದು ಪರಿವರ್ತಿತರಾಗುತ್ತಾರೆ. ನಾವು ಎಲ್ಲವನ್ನು ತಿಳಿದುಕೊಂಡಿದ್ದೇವೆ ಎಂದು ಭಾವಿಸಿ ಅನುಮಾನದಲ್ಲಿ ಅವರು ಬೇರೆ ಯಾವುದೇ ಸತ್ಯ ಮಾತು ತಮ್ಮ ಮತದ ಅನುಕೂಲ ಆಗದಿದ್ದರೆ ಅದನ್ನು ಮನ್ನಿಸುವದಿಲ್ಲ. ಅವುಗಳ ಶಾಬ್ದಿಕ ಅರ್ಥ ಸ್ವೀಕರಿಸಿ ಅದನ್ನೇ ಹಿಡಿದುಕೊಂಡು ತಮ್ಮ ಮಾತಿನ ಮೇಲೆ ಸ್ಥಿರ ಇರುವ ಸಲುವಾಗಿ ಅವರಿಗೆ ಆಗ್ರಹಿಯನ್ನಾಗಿ ಮಾಡುತ್ತದೆ. ಮತ್ತು ಮುಂದೆ ಹೋಗಿ ಅವನಿಗೆ ಆಗ್ರಹ, ಹಟಾಗ್ರಹ, ದುರಾಗ್ರಹ ಮತ್ತು ಏಕಾಂತ ರೂಪಿ ಆಗ್ರಹವಾಗುತ್ತದೆ.

ಸಮ್ಯಗ್ದರ್ಶನದ ವಿಷಯ ಅರ್ಥಾತ್ ಪರ್ಯಾಯ ರಹಿತ ದ್ರವ್ಯ ಈ ಕಥನದ ಶಾಬ್ದಿಕ ಅರ್ಥವನ್ನು ತಿಳಿದುಕೊಂಡು ಅಭೇದ ದ್ರವ್ಯದಲ್ಲಿಂದ ಪರ್ಯಾಯವನ್ನು ಭೌತಿಕ ರೀತಿಯಿಂದ ಹೊರ ತೆಗೆಯುವ ಕಾರ್ಯ ಮಾಡುತ್ತಾರೆ. ಇದಂತೂ ಎಲ್ಲಕ್ಕಿಂತ ಬಹಳ ತಪ್ಪಾಗುತ್ತದೆ. ಏಕೆಂದರೆ ಅಭೇದ ಮತ್ತು ಅಖಂಡ ವಸ್ತು ಅಥವಾ ದ್ರವ್ಯದಲ್ಲಿಂದ ಒಂದು ವೇಳೆ ಅಂಶ ಕೂಡ ಹೊರ ತೆಗೆಯುವ ಕಾರ್ಯ ಮಾಡಿದ ಮೇಲೆ ಪೂರ್ಣ ವಸ್ತುವಿನದೇ ಲೋಪವಾಗುತ್ತದೆ. ಅಭೇದ ನಯವು ಸಮ್ಯಗ್ದರ್ಶನದ ಸಲುವಾಗಿ ಕಾರ್ಯಕಾರಿಯಿದೆ. ಆದರೆ ವರ್ತಮಾನದಲ್ಲಿ ಮು ಮುಕ್ಷು ಜೀವಗಳು ಯಾರಾದರೂ ಒಬ್ಬರು ಭೇದವನ್ನು ಮನ್ನಿಸಿ, ಭೇದದಲ್ಲಿಯೇ ಆನಂದಿಸುತ್ತಾರೆ. ಮತ್ತು ಇದರಲ್ಲಿಯೇ ವಸ್ತುವಿನ ನಿರ್ಣಯ ಮಾಡುವ ಕಾರ್ಯ ಮಾಡುತ್ತಾರೆ. ಇದರಿಂದ ಅವರಿಗೆ ಅಭೇದ ವಸ್ತುವಿನ ಪ್ರಾಪ್ತಿ (ಅನುಭವ) ಅಸಂಭವವಾಗಿಯೇ ಉಳಿಯುತ್ತದೆ. ಇದನ್ನೇ ಪೂರ್ತಿಗೊಳಿಸುವ ಉದ್ದೇಶದಿಂದ ನಾವು ಈ ಪುಸ್ತಕದಲ್ಲಿ ವಸ್ತುವಿನ ಭೇದಾಭೇದ ಸ್ವರೂಪ ತಿಳಿಸುವ ಪ್ರಯತ್ನ ಮಾಡಿದ್ದೇವೆ. ಆ ಅಭೇದವು ಅನುಭೂತಿಯಲ್ಲಿ ಬರುವಂಥ ವಸ್ತು (ದ್ರವ್ಯ)ವನ್ನು ಯಾವ ಪ್ರಕಾರ ಪಡೆಯಬಹುದು. ಎಂಬ ಆ ಮಾತು ನಾವು ಬೇರೆ ಕೆಲವು ಪ್ರಕರಣಗಳಲ್ಲಿ ತಿಳಿಸುವ ಪ್ರಯತ್ನ ಮಾಡಿದ್ದೇವೆ. ಈ ಎಲ್ಲವೂ ಅನಂತ ಕಾಲದ ನಂತರ ಬರುವಂಥ ಹುಂಡಾವಸರ್ಪಿಣಿ ಪಂಚಮ ಕಾಲದ ಪ್ರಭಾವವೇ ಇದೆ. ಏನಂದರೆ ಭಗವಾನರ ಉಪಸ್ಥಿತಿಯ ೨೬೦೦ ವರ್ಷಗಳ ನಂತರವೇ

ಹೆಚ್ಚಾಗಿ ಸಂಪ್ರದಾಯಗಳಲ್ಲಿ, ಕೇವಲ ಧರ್ಮದ ಹೊರಗಿನ ಸ್ವರೂಪವೇ ಉಳಿದಿದೆ. ಮತ್ತು ಧರ್ಮದ ಪ್ರಾಣ ಅಂದರೆ ನಿಶ್ಚಯ ಸಮ್ಯಗ್ದರ್ಶನದ ಮಾತು ಬಹಳ ಕಡಿಮೆ ಜನರು ಹೇಳುತ್ತಾರೆ ಮತ್ತು ಮನ್ನಿಸುತ್ತಾರೆ.

ಸಮ್ಯಗ್ದರ್ಶನದ ಸಲುವಾಗಿ ಭೇದಜ್ಞಾನದ ಅವಶ್ಯಕತೆ ಇದೆ. ಅಂದರೆ ಪುದ್ಗಲ ಮತ್ತು ಅದರ ಲಕ್ಷ್ಯದಿಂದ ಉಂಟಾಗುವ ಭಾವನೆಗಳಿಂದ ಆತ್ಮನ ಭೇದಜ್ಞಾನವು ಜರೂರ ಇದೆ. ದ್ರವ್ಯ-ಗುಣ-ಪರ್ಯಾಯಗಳ ತಿಳಿವಳಿಕೆಯ ಅವಶ್ಯಕತೆ ಇಲ್ಲದಿದ್ದರೂ ಸಹ ಯಾರು ಆ ದ್ರವ್ಯ-ಗುಣ-ಪರ್ಯಾಯ ಸ್ವರೂಪ ವಸ್ತು ವ್ಯವಸ್ಥೆಯನ್ನು ಅಥವಾ ಉತ್ಪಾದ-ವ್ಯಯ-ಧ್ರುವ್ಯರೂಪ ವಸ್ತು ವ್ಯವಸ್ಥೆಯನ್ನು ವಿಪರೀತ ರೂಪದಿಂದ ಧರಿಸಿದರೆ ಅದರ ಸಲುವಾಗಿ ಇಲ್ಲಿ ಮೊದಲು ದ್ರವ್ಯ-ಗುಣ-ಪರ್ಯಾಯ ರೂಪ ಮತ್ತು ಉತ್ಪಾದ-ವ್ಯಯ-ಧ್ರುವ್ಯರೂಪ ವಸ್ತು ವ್ಯವಸ್ಥೆಯನ್ನು ಸಮ್ಯಕ್‌ರೂಪದಿಂದ ಹೇಳುತ್ತೇವೆ. ಅದರ ಮೇಲೆ ವಿಚಾರ ಮಾಡುವದು ಅವಶ್ಯಕವಿದೆ ಮತ್ತು ಅದು ಹೇಗೆ ಇದೆಯೋ ಹಾಗೆಯೇ ಮೊದಲು ಸ್ವೀಕಾರ ಮಾಡುವದು ಪರಮ ಅವಶ್ಯಕವಿದೆ. ಏಕೆಂದರೆ ಜೈನ ಸಮಾಜದಲ್ಲಿ ಒಂದು ವರ್ಗ ಹೀಗೂ ಇದೆ. ಹೇಗೆಂದರೆ ಯಾವನು ವಸ್ತು ವ್ಯವಸ್ಥೆಯನ್ನೇ ವಿಕೃತಗೊಳಿಸಿದ್ದಾನೆ. ಅವನು ದ್ರವ್ಯ ಮತ್ತು ಪರ್ಯಾಯವನ್ನು ಈ ಸೀಮೆಯ ತನಕ ಬೇರೆ ತಿಳಿಯುತ್ತಾನೆ. ಹೇಗೆಂದರೆ ಅವು ಎರಡೂ ಬೇರೆ ದ್ರವ್ಯಗಳಿವೆ! ಅವು ಒಂದು ಅಭೇದ ದ್ರವ್ಯದಲ್ಲಿ ಕಲ್ಪನೆ ಮಾಡಿ ಹೇಳಲಾದ ಗುಣ ಪರ್ಯಾಯವನ್ನು ಸಹ ಬೇರೆ ಎಂದು ತಿಳಿಯುತ್ತಾನೆ. ಆಚಾರ್ಯರು ದ್ರವ್ಯದ ಸಮ್ಯಕ್‌ಸ್ವರೂಪ ತಿಳಿಸುವ ಸಲುವಾಗಿ ದ್ರವ್ಯವನ್ನು ಗುಣ ಮತ್ತು ಪರ್ಯಾಯಗಳಿಂದ ಬೇರೆ ಎಂದು ಹೇಳಿದ್ದಾರೆ. ಅದನ್ನು ಅವರು ನಿಜವಾಗಿಯೂ ಬೇರೆ ಎಂದು ತಿಳಿಯುತ್ತಾರೆ. ದ್ರವ್ಯ ಮತ್ತು ಪರ್ಯಾಯವನ್ನು ಎರಡು ಭಾವ ಎಂದು ಮನ್ನಿಸದೇ ಅವರು ಅವುಗಳನ್ನು ಎರಡು ಭಾಗ ರೂಪ ಎಂದು ತಿಳಿಯುವ ತನಕವೇ ಪ್ರರೂಪಣೆ ಮಾಡುತ್ತಾರೆ ಮತ್ತು ಮುಂದೆ ಅದರಲ್ಲಿಯೂ ಸಹ ಸಾಮಾನ್ಯ ವಿಶೇಷ ಹೀಗೆ ಎರಡು ಭಾಗದ ಕಲ್ಪನೆ ಮಾಡುತ್ತಾರೆ. ಈ ಪ್ರಕಾರ ಇರುವ ವಸ್ತುವ್ಯವಸ್ಥೆಯನ್ನೇ ವಿಕೃತರೂಪದಿಂದ ಸ್ವೀಕರಿಸಿ ಹಾಗೂ ವಿಕೃತ ರೂಪದಿಂದ ಪ್ರರೂಪಣೆ ಮಾಡಿ ಅವರು ಸ್ವತಃ ಸಂಸಾರದ ಕೊನೆ ಮಾಡುವಂಥ ಧರ್ಮದಿಂದ ದೂರವೇ ಇರುತ್ತಾರೆ. ಅವರು ತಿಳಿದೋ ತಿಳಿಯದೆಯೋ ಅನೇಕ ಜನರಿಗೂ ಸಹ ಸಂಸಾರದ ಕೊನೆಯಿಂದ ದೂರ ಇಡುತ್ತಾರೆ. ಈ ಮಾತು ಅತ್ಯಂತ ಕರುಣೆಯನ್ನು ಹುಟ್ಟಿಸುವಂಥದ್ದಿದೆ. ಆದ್ದರಿಂದ ಇಲ್ಲಿ ಪ್ರಥಮವಾಗಿ ನಾವು ವಸ್ತು ವ್ಯವಸ್ಥೆಯ ಮೇಲೆ ವಿಸ್ತಾರವಾಗಿ ಪ್ರಕಾಶ ಹಾಕುತ್ತೇವೆ.

ಅದರ ನಂತರ ನಾವು ನಿಶ್ಚಯ ಸಮ್ಯಗ್ದರ್ಶನದ ವಿಧಿಯನ್ನು ಸಹ ತಿಳಿಸುವ ಪ್ರಯತ್ನ ಮಾಡುತ್ತೇವೆ. ಆದರೆ ನಾವು ಸ್ವಲ್ಪವೇ ವ್ಯವಹಾರ ಧರ್ಮದ ವಿರೋಧಿ ಇದ್ದೇವೆಂದು ಯಾರೂ ತಿಳಿಯಬಾರದು. ವ್ಯವಹಾರ ಧರ್ಮವು ನಮ್ಮನ್ನು ನಿಶ್ಚಯ ಧರ್ಮದ ಕಡೆಗೆ ತೆಗೆದುಕೊಂಡು ಹೋದರೆ ಅದು ಎಲ್ಲವೂ ವ್ಯವಹಾರ ಧರ್ಮ

ಎಂದು ಸಂಜ್ಞೆ ಪಡೆಯುವ ಅಧಿಕಾರಿ ಇದೆ. ಹೀಗೆ ಜಿನಶಾಸನದ ಅನೇಕಾಂತಮಯ ವಸ್ತು ವ್ಯವಸ್ಥೆ ಇದೆ. ಇದನ್ನು ನಾವು ಎಂದೂ ಮರೆಯಬಾರದು. ಇದುವೇ ವಿಧಿ ಇರುತ್ತದೆ. ನಾವು ಮುಂದೆ ತತ್ವನಿರ್ಣಯದ ಕುರಿತು ತಿಳಿಸುವ ಪ್ರಯತ್ನ ಮಾಡುತ್ತೇವೆ. ಈಗ ದ್ರವ್ಯ ಗುಣಗಳ ಯಥಾರ್ಥ ವ್ಯವಸ್ಥೆಯನ್ನು ತಿಳಿಸುವ ಪ್ರಯತ್ನ ಮಾಡುತ್ತೇವೆ.

★★★

## ೨. ದ್ರವ್ಯ–ಗುಣ ವ್ಯವಸ್ಥೆ

ಗುಣಗಳ ಸಮೂಹವೇ ದ್ರವ್ಯವಿದೆ ಮತ್ತು ಆ ದ್ರವ್ಯದ ವರ್ತಮಾನ ಅವಸ್ಥೆಗೆ ಪರ್ಯಾಯ ಎಂದು ಹೇಳಲಾಗುತ್ತದೆ. ಸಕ್ಕರೆಯಲ್ಲಿ ಸಿಹಿ, ಬಿಳಿ, ದಪ್ಪ, ಭಾರ ಮುಂತಾದ ಗುಣಗಳಿವೆ. ಈ ಗುಣಗಳು ದ್ರವ್ಯದ ಸಂಪೂರ್ಣ ಭಾಗದಲ್ಲಿ ಅದರ ಪ್ರತಿಯೊಂದು ಪ್ರದೇಶದಲ್ಲಿ (ಕ್ಷೇತ್ರದ ಅತ್ಯಂತ ಸಣ್ಣ ಅಂಶ) ಆ ದ್ರವ್ಯದ ಸಮಸ್ತ ಗುಣಗಳು ಇರುತ್ತವೆ. ಇನ್ನೊಂದು ರೀತಿಯಾಗಿ ಹೇಳಲಾಗುತ್ತದೆ. ಒಂದು ಅಖಂಡ ದ್ರವ್ಯದಲ್ಲಿ ಇರುವಂಥ ಅನಂತಾನಂತ ವಿಶೇಷತೆಗಳನ್ನು ಆ ದ್ರವ್ಯದ ಅನಂತಾನಂತ ಗುಣರೂಪದಿಂದ ವರ್ಣಿಸಲಾಗಿದೆ. ಆ ಎಲ್ಲ ವಿಶೇಷತೆಗಳ ಸಮೂಹಕ್ಕೆ ದ್ರವ್ಯ (ವಸ್ತು) ರೂಪದಿಂದ ಹೇಳಲಾಗಿದೆ. ಆ ವಸ್ತು (ದ್ರವ್ಯ)ವಂತೂ ಅಭೇದ ಒಂದೇ ಇರುತ್ತದೆ. ಆದರೆ ಅದರ ವಿಶೇಷತೆಗಳನ್ನು ತೋರಿಸುವ ಸಲುವಾಗಿಯೇ ಅದರಲ್ಲಿ ಗುಣಭೇದ ಮಾಡಿದ್ದಾರೆ. ಅಲ್ಲಿ ಬೇರೆ ಯಾವ ಕ್ಷೇತ್ರ ಭೇದ, ಗುಣಭೇದ ರೂಪ ಇರುವದೇ ಇಲ್ಲ. ಅಲ್ಲಿಯಂತೂ ಕೇವಲ ಒಂದು ವಸ್ತುವಿನಲ್ಲಿ ಇದ್ದಂಥ ಅನಂತಾನಂತ ವಿಶೇಷತೆಗಳನ್ನು ಹೇಳುವ ಸಲುವಾಗಿಯೇ ಗುಣಭೇದದ ಆಸರೆ ತೆಗೆದುಕೊಂಡಿದ್ದಾರೆ. ಆ ವಸ್ತುವಿನಲ್ಲಿ ನಿಜವಾಗಿ ಯಾವ ಭೇದವೂ ಇರುವದೇ ಇಲ್ಲ. ಏಕೆಂದರೆ ವಸ್ತು ಅಭೇದವೇ ಇದೆ. ಆದ್ದರಿಂದ ಅದನ್ನು ಕಥಂಚಿತ್ ಭೇದ–ಅಭೇದ ರೂಪ ಎಂದು ಹೇಳಿದ್ದಾರೆ. ಅಂದರೆ ಅಲ್ಲಿ ಎಲ್ಲ ಬಗೆಯಿಂದಲೂ ಭೇದವೂ ಇಲ್ಲ ಮತ್ತು ಅಭೇದವೂ ಇಲ್ಲ. ವಸ್ತು ಅಪೇಕ್ಷೆಯಿಂದ ಅಭೇದವಿದೆ ಮತ್ತು ಗುಣಗಳ ಅಪೇಕ್ಷೆಯಿಂದ ಭೇದವಿದೆ. ಆದ್ದರಿಂದ ಅದನ್ನು ಕಥಂಚಿತ್ ಭೇದ–ಅಭೇದ ರೂಪ ಹೇಳಿದ್ದಾರೆ. ಇದರ ಅರ್ಥ ಏನಂದರೆ ಆ ವಸ್ತುವಿನಲ್ಲಿ ಅನಂತಾನಂತ ವಿಶೇಷತೆಗಳು ಅಂದರೆ ಗುಣಗಳು ಇರುತ್ತವೆ. ಈ ಅಪೇಕ್ಷೆಯಿಂದಲೇ ಭೇದ ಹೇಳುತ್ತಾರೆ. ಆದರೆ ವಸ್ತುವಿನಲ್ಲಿ ಸ್ವಲ್ಪವೂ ಸಹ ಭೇದ ಇಲ್ಲ. ಈ ಅಪೇಕ್ಷೆಯಿಂದ ಅಭೇದವೆಂದು ಹೇಳಲಾಗುತ್ತದೆ. ಆದ್ದರಿಂದ ಅಭೇದ ನಯವನ್ನು ಕಾರ್ಯಕಾರಿ ಎಂದು ಹೇಳಿದ್ದಾರೆ ಮತ್ತು ಭೇದನಯವು ಕೇವಲ ವಸ್ತುವಿನ ಸ್ವರೂಪವನ್ನು ತಿಳಿಸುವ ಸಲುವಾಗಿ ಹೇಳಲಾಗಿದೆ. ಭೇದವು ವ್ಯವಹಾರ ಮಾತ್ರವಿದೆ. ಏಕೆಂದರೆ ನಿಶ್ಚಯದಿಂದ ವಸ್ತುವು ಒಂದು ಅಭೇದವೇ ಇದೆ.

ಈಗ ಪಂಚಾಧ್ಯಾಯಿ ಪೂರ್ವಾರ್ಧದ (ಪಂ. ದೇವಕೀನಂದನಜೀ ನಾಯಕ ಕೃತ ಹಿಂದಿ ಟೀಕೆಯ ಆಧಾರದಿಂದ) ಶ್ಲೋಕಗಳ ಕುರಿತು ವಿಚಾರ ಮಾಡೋಣ.

**ಶ್ಲೋಕ ೩೫ :** ವಸ್ತುವು ಅಖಂಡ, ಅನೇಕ ಪ್ರದೇಶೀ ವಸ್ತು ಎಂದು ಮನ್ನಿಸುವಲ್ಲಿ ನಿಶ್ಚಯದಿಂದ ಯಾವ ಗುಣಗಳ ಪರಿಣಮನ ಆಗುತ್ತದೆ. ಅದು ದ್ರವ್ಯದ ಎಲ್ಲ ಪ್ರದೇಶಗಳಲ್ಲಿ ಸಮಾನವಾಗಿರುತ್ತದೆ ಮತ್ತು ಅದು ಸರಿಯಾಗಿಯೇ ಇದೆ. ಏಕೆಂದರೆ ಅಲುಗಾಡಿಸಿದ ಒಂದು ಬಿದಿರು ತನ್ನ ಎಲ್ಲ ಗಂಟುಗಳಲ್ಲಿಯೂ ಅಲುಗಾಡುತ್ತದೆ. ಈ ಪ್ರಕಾರ ದ್ರವ್ಯವು ಅಖಂಡ ಇರುತ್ತದೆ. ಎಲ್ಲ ಪ್ರದೇಶಗಳಲ್ಲಿ ಇದ್ದಂಥ ಎಲ್ಲ ಗುಣಗಳು ಎಲ್ಲ ಪ್ರದೇಶಗಳಲ್ಲಿ ಪರಿಣಮನ ಮಾಡುತ್ತವೆ.

**ಶ್ಲೋಕ ೩೯ :** ಈ ಎಲ್ಲ ಗುಣಗಳ ಆತ್ಮನೇ ದ್ರವ್ಯ ಇದೆ. ಏಕೆಂದರೆ ಈ ಗುಣಗಳು ದ್ರವ್ಯದಿಂದ ಬೇರೆ ಸತ್ತಾ ಉಳ್ಳದ್ದಿರುವದಿಲ್ಲ. ನಿಶ್ಚಯದಿಂದ ದ್ರವ್ಯದಲ್ಲಿ ವಿಶೇಷ (ಗುಣ) ಇರುವದಿಲ್ಲ. ಆದರೆ ಅವು ವಿಶೇಷ ಗುಣದ ಮೂಲಕವೇ ದ್ರವ್ಯದಂತೆ ಗುಣಮಯ ಎಂದು ತಿಳಿದು ಬರುತ್ತವೆ. ಅಂದರೆ ಯಾವ ಗುಣಗಳಿವೆ. ಅದುವೇ ದ್ರವ್ಯವಿದೆ. ಬೇರೆ ಯಾವ ದ್ರವ್ಯವೂ ಇರುವದಿಲ್ಲ.

**ಶ್ಲೋಕ ೪೫ :** ಆದ್ದರಿಂದ ಇದುವೇ ನಿರ್ದೋಷ ಕಥನವಿದೆ. ಏಕೆಂದರೆ ಈ ನಿರ್ವಿಶೇಷ ನಿರ್ಗುಣ ದ್ರವ್ಯದ ವಿಶೇಷವೇ ಗುಣ ಎಂದು ಹೇಳುತ್ತಾರೆ ಮತ್ತು ಅವು ಪ್ರತಿಕ್ಷಣ ಕಥಂಚಿತ್ ಪರಿಣಮನಶೀಲ ಇವೆ.

ದ್ರವ್ಯದಲ್ಲಿ ಗುಣಗಳ ಹೊರತು ಬೇರೆ ಏನೂ ಇರುವದಿಲ್ಲ ಮತ್ತು ಆ ಎಲ್ಲ ಗುಣಗಳು ಶಾಶ್ವತ ಮತ್ತು ಪರಿಣಮಿತ ಇರುತ್ತವೆ. ಅಂದರೆ ಯಾವವು ಶಾಶ್ವತ ಇವೆ ಅವೇ ಸ್ಥಿರವಿದ್ದು ಪರಿಣಮಿಸುತ್ತವೆ. ಅವು ಕೂಟಸ್ಥ ಇರುವದಿಲ್ಲ. ಕಥಂಚಿತ್ ಅಂದರೆ ಯಾವುದು ಶಾಶ್ವತ ಇದೆ. ಅದುವೇ ಪರಿಣಮಿಸುತ್ತದೆ. ಕೇವಲ ಅಪೇಕ್ಷೆಯಿಂದ ಶಾಶ್ವತ ಮತ್ತು ಪರಿಣಮನ ಹೇಳುತ್ತಾರೆ. ಅಂದರೆ ಯಾವುದು ಶಾಶ್ವತ ಇದೆ. ಅದರ ವರ್ತಮಾನ ಅದುವೇ ಅದರ ಪರಿಣಮನ ಮತ್ತು ಅದರಲ್ಲಿ ಯಾವದೂ ನಿಜವಾದ ಭೇದ ಇಲ್ಲವಾದ್ದರಿಂದ ಅದನ್ನು ಕಥಂಚಿತ್ ಎಂದು ಹೇಳಿದ್ದಾರೆ.

**ಶ್ಲೋಕ ೧೧೫ :** ಅನಂತ ಗುಣಗಳ ಸಮುದಾಯದ ಹೆಸರು ದ್ರವ್ಯ ಇದೆ. ದ್ರವ್ಯದ ಸಂಪೂರ್ಣ ಪ್ರದೇಶಗಳಲ್ಲಿ ಹೇಗೆ ಒಂದು ಅರ್ಥೈಸುವ ಗುಣ ಇರುತ್ತದೆ, ಅದೇ ರೀತಿ ದ್ರವ್ಯದ ಎಲ್ಲ ಗುಣಗಳು ಸಹ ಆ ದ್ರವ್ಯದ ಅದರದೇ ಎಲ್ಲ ಪ್ರದೇಶಗಳಲ್ಲಿ ಯುಗಪತ್ (ಒಟ್ಟುಗೂಡಿ) ಇರುತ್ತವೆ. ಆದ್ದರಿಂದ ದ್ರವ್ಯದ ಎಲ್ಲ ಗುಣಗಳು ಸಮಾನ ಪ್ರದೇಶವುಳ್ಳ ಅಂದರೆ ಅಭಿನ್ನ ಇರುತ್ತವೆ. ಇವುಗಳಲ್ಲಿ ಯಾವದೇ ಭೇದ ಇರುವದಿಲ್ಲ. ಆದಾಗ್ಯೂ ಶ್ರುತಜ್ಞಾನದ ಅಂತರ್ಗತ ನಯಜ್ಞಾನದಿಂದ ಭಿನ್ನ ಭಿನ್ನ ಮಾಡಿದ ಬಳಿಕ ಅವುಗಳ ಬೇರೆ ಬೇರೆ ಶ್ರೇಣಿಗಳು ಆಗುತ್ತವೆ. ಏಕೆಂದರೆ ವಸ್ತುವಿನಲ್ಲಿ ಅಪೂರ್ಣತನದ ಕಲ್ಪನೆಯು ನಯಜ್ಞಾನದ ಕಾರಣದಿಂದಲೇ ಆಗುತ್ತದೆ.

**ಶ್ಲೋಕ ೪೯೧ :** ಎಲ್ಲ ಗುಣಗಳ ಸತ್ತಾ ಒಂದೇ ಆಗಿರುವದರಿಂದ ಎಲ್ಲ ಗುಣಗಳಲ್ಲಿ ಪೂರ್ಣತ್ವತನವು ಪ್ರತ್ಯಕ್ಷವಾಗಿ ಪ್ರಮಾಣದಿಂದ ಸಿದ್ಧವಾಗುತ್ತದೆ.

**ಶ್ಲೋಕ ೫೨೪ :** ಅನಂತ ಧರ್ಮವುಳ್ಳ ಒಬ್ಬ ಧರ್ಮಿಯ ವಿಷಯದಲ್ಲಿ ಆಸ್ತಿಕ್ಯ ಬುದ್ಧಿ ಇರುವದು. ಅದುವೇ ಈ ವ್ಯವಹಾರ ನಯದ ಫಲವಿದೆ. ಅಂದರೆ ವ್ಯವಹಾರ ರೂಪ ಭೇದ ಮಾತ್ರ ಆಸ್ತಿಕ್ಯಬುದ್ಧಿ ಆಗುವ ಸಲುವಾಗಿಯೇ ಇದೆ. ಬೇರೆ ಇಲ್ಲ.

**ಭಾವಾರ್ಥ :** ಮೊದಲು ಹೇಳಿದ ಪ್ರಕಾರದ ವ್ಯವಹಾರವನ್ನು ಮನ್ನಿಸುವ ಪ್ರಯೋಜನ ಇದು ಇರುತ್ತದೆ. ಏನಂದರೆ ವಸ್ತುವು ಅನಂತ ಧರ್ಮಿಯಾದರೂ ಸಹ ಅದು ಒಂದು ಅಖಂಡ ವಸ್ತುವಿದೆ. ಹೀಗೆ ಪ್ರತೀತಿ ಮಾಡಬೇಕು. ಅಂದರೆ ಗುಣ-ಗುಣಿಗಳು ಅಭೇದವಾಗಿ ಇರುವದರಿಂದ ಗುಣಗಳನ್ನು ತಿಳಿದ ಮೇಲೆ ಗುಣಿಯ ಪರಿಚಯ ಜೀವನಕ್ಕೆ ಆದರೆ ಇದು ವ್ಯವಹಾರ ನಯದ ಯಥಾರ್ಥ ಫಲ ಬಂದಿತೆಂದು ಹೇಳುತ್ತಾರೆ. ವ್ಯವಹಾರದ ಆಶ್ರಯದ ಫಲ ವಿಕಲ್ಪ ರಾಗ-ದ್ವೇಷ ಇರುತ್ತವೆ. ಆದ್ದರಿಂದ ಭೇದದ ಆಶ್ರಯ ಮಾಡದೇ ಅಂದರೆ ಈ ನಯದ ಮೂಲಕ ಹೇಳಲಾದ ಗುಣಗಳ ಭೇದದಲ್ಲಿ ನಿಲ್ಲದೇ ಅಭೇದ ದ್ರವ್ಯದ ಪ್ರಸಿದ್ಧಿ (ಜ್ಞಾನ) ಮಾಡುವದು ಅದು ಈ ನಯದ ಜ್ಞಾನದ ಫಲವಿದೆ. ಈ ಫಲವು ಬರದಿದ್ದರೆ ಆ ನಯಜ್ಞಾನವು ಯಥಾರ್ಥ ಇರುವದಿಲ್ಲ.

**ಶ್ಲೋಕ ೬೩೪-೬೩೫ :** ನಿಶ್ಚಯದಿಂದ ವ್ಯವಹಾರ ನಯವು ಅಬೂತಾರ್ಥವಿದೆ. (ಅಂದರೆ ಸಮ್ಯಗ್ದರ್ಶನದ ಸಲುವಾಗಿ ಅಂದರೆ ಆತ್ಮನ ಅಭೇದ ಅನುಭೂತಿಯ ಸಲುವಾಗಿ ಕಾರ್ಯಕಾರಿ ಇರುವದಿಲ್ಲ.) ಅದರಲ್ಲಿರುವ ಸೂತ್ರದಲ್ಲಿ ಯಾವ ದ್ರವ್ಯವನ್ನು ಗುಣವುಳ್ಳದ್ದೆಂದು ಹೇಳಿದ್ದಾರೆ, ಅದರ ಅರ್ಥ ಮಾಡುವದರಿಂದ ಇಲ್ಲಿ ಗುಣ ಬೇರೆ, ದ್ರವ್ಯ ಬೇರೆ ಇದೆ. ಹೀಗೆ ಅರ್ಥ ಸಿದ್ಧವಾಗುವದು. ಗುಣದ ಯೋಗದಿಂದ ದ್ರವ್ಯವು ಗುಣವುಳ್ಳದ್ದೆಂದು ಹೇಳುತ್ತಾರೆ. ಆದರೆ ಇದು ಸರಿಯಲ್ಲ. ಏಕೆಂದರೆ ಗುಣವಿಲ್ಲ, ದ್ರವ್ಯವಿಲ್ಲ. ಎರಡೂ ಇಲ್ಲ. ಈ ಎರಡರ ಯೋಗ ಇದೆ. ಆದರೆ ಕೇವಲ ಅದ್ವೈತ ಸತ್ (ಅಭೇದ ದ್ರವ್ಯ) ಇದೆ. ಹಾಗೂ ಅದೇ ಸತ್‌ನ್ನು ಬೇಕಾದರೆ ಗುಣ ಎನ್ನಿರಿ ಅಥವಾ ದ್ರವ್ಯ ಎನ್ನಿರಿ. ಆದರೆ ಅವು ಭಿನ್ನ ಇಲ್ಲ. ಅಂದರೆ ನಿಶ್ಚಯದಿಂದ ಅಭಿನ್ನವೇ ಇರುತ್ತವೆ.

**ಶ್ಲೋಕ ೬೩೯ :** ಯಾವದು ವ್ಯವಹಾರ ನಯವಿದೆ. ಅದು ಅಭೂತಾರ್ಥವಿದೆ ಹಾಗೂ ನಿಜವಾಗಿಯೂ ಅದರ ಅನುಭವ ಮಾಡುವಂಥವನೂ ಸಹ ಮಿಥ್ಯಾದೃಷ್ಟಿ ಇದ್ದಾನೆ. ಅವನೂ ಸಹ ಅಪೂರ್ಣವೇ ಇದ್ದಾನೆ. ಅಂದರೆ ಯಾವ ದ್ರವ್ಯಕ್ಕೆ ಅಭೇದ, ಅಖಂಡ ಅನುಭವ ಮಾಡುವದಿಲ್ಲ. ಅವರು ನಿಯಮದಿಂದ, ಭ್ರಮದಿಂದ ಕೂಡಿದ ಮಿಥ್ಯಾದೃಷ್ಟಿ ಇದ್ದಾರೆ ಎಂದು ತಿಳಿಯಬೇಕು.

**ಶ್ಲೋಕ ೬೩೮-೬೩೯ :** ಈ ಪ್ರಕಾರ ಹೇಳುವದು ಸರಿಯಲ್ಲ. ಏಕೆಂದರೆ ಇಲ್ಲಿ ಎರಡು ಪ್ರಕಾರದ ಮಾನ್ಯತೆಯಾದ ಬಳಿಕ ಹಾಗೂ ಸಂಶಯದ ಆಪತ್ತು ಬಂದ ಬಳಿಕ ಮತ್ತು ವಸ್ತುವಿನ ವಿಚಾರ ಮಾಡುವಲ್ಲಿ ಬಲಪೂರ್ವಕವಾಗಿ ವ್ಯವಹಾರ ನಯವು ಉಂಟಾಗುತ್ತದೆ. ಅಥವಾ ಯಾವ ಜ್ಞಾನವು ಎರಡೂ ನಯಗಳ ಅವಲಂಬನ ಮಾಡುವಂಥದ್ದಿದೆಯೊ ಅದುವೇ ಪ್ರಮಾಣವೆಂದು ಹೇಳುತ್ತಾರೆ. ಆದ್ದರಿಂದ ಪ್ರಸಂಗ ವಶ ಅದು ವ್ಯವಹಾರ ನಯವು ಯಾರ ಸಲುವಾಗಿಯೂ ಮೇಲಿನ (ಮೇಲೆ ಹೇಳಿದ) ಕಾರ್ಯಗಳ ಸಲುವಾಗಿ ಆಶ್ರಯ ಮಾಡಲು ಯೋಗ್ಯ ಇವೆ. ಆದರೆ ಸವಿಕಲ್ಪ ಜ್ಞಾನವುಳ್ಳವರ ಭ್ರಮೆಯು ನಿರ್ವಿಕಲ್ಪ ಜ್ಞಾನ ಉಳ್ಳವರಿಗೆ ಅದು ಕಲ್ಯಾಣಕಾರಿ ಇರುವದಿಲ್ಲ. ಅಂದರೆ ಮಿಥ್ಯಾತ್ವಿಗೆ ತತ್ವ ತಿಳಿಯಲು / ತಿಳಿಸುವ ಸಲುವಾಗಿ ವ್ಯವಹಾರ ನಯವು ಆಶ್ರಯ ಮಾಡಲು ಯೋಗ್ಯವಿದೆ. ಆದರೆ ಸಮ್ಯಗ್ದೃಷ್ಟಿಗಳಿಗೆ ಅನುಭವ ಕಾಲದಲ್ಲಿ ಅದರ ಆಶ್ರಯ ಆಗುವದಿಲ್ಲ. ಅಂದರೆ ಅದು ಕಲ್ಯಾಣಕಾರಿ ಇರುವದಿಲ್ಲ. ಏಕೆಂದರೆ ಯಾವ ವಿಕಲ್ಪವಿದೆ. ಅದು ವ್ಯವಹಾರವಿದೆ. ಯಾವುದು ನಿರ್ವಿಕಲ್ಪವಿದೆ ಅದು ನಿಶ್ಚಯವಿದೆ. ಈಗ ನಾವು ಮುಂದೆ ದ್ರವ್ಯ ಪರ್ಯಾಯಗಳ ಯಥಾರ್ಥ ವ್ಯವಸ್ಥೆಯನ್ನು ತಿಳಿಸುವ ಪ್ರಯತ್ನ ಮಾಡುತ್ತೇವೆ.

★★★

## ೩. ದ್ರವ್ಯ ಪರ್ಯಾಯ ವ್ಯವಸ್ಥೆ

ದ್ರವ್ಯ ಮತ್ತು ಗುಣದ ವ್ಯವಸ್ಥೆ ತಿಳಿದುಕೊಂಡಿರಿ. ಈಗ ಪರ್ಯಾಯದ ಕುರಿತಾದ ವಿಷಯದಲ್ಲಿ ವಿಚಾರ ಮಾಡೋಣ.

**ಪ್ರಶ್ನೆ : ಗುಣಗಳ ಸಮುದಾಯ ರೂಪವು ಅಭೇದ ದ್ರವ್ಯ (ವಸ್ತು) ಇದೆ. ಆದರೆ ಅದರಲ್ಲಿ ಪರ್ಯಾಯವು ಎಲ್ಲಿ ಇರುತ್ತದೆ ?**

**ಉತ್ತರ :** ಪರ್ಯಾಯವು ದ್ರವ್ಯದ ಎಲ್ಲ ಪ್ರದೇಶಗಳಲ್ಲಿ (ಪೂರ್ಣ ಕ್ಷೇತ್ರದಲ್ಲಿ) ಇರುತ್ತದೆ. ಏಕೆಂದರೆ ಗುಣಗಳ ಸಮೂಹ ರೂಪ ಅಭೇದ ದ್ರವ್ಯದ ಯಾವ ವರ್ತಮಾನ ಇದೆ ಅಂದರೆ ಅದರ ಯಾವ ವರ್ತಮಾನ ಅವಸ್ಥೆ ಇದೆ. ಅಥವಾ ಪರಿಣಮನ ಇದೆಯೊ ಅದನ್ನೇ ಆ ದ್ರವ್ಯದ ಪರ್ಯಾಯ ಎಂದು ಹೇಳುವಲ್ಲಿ ಬರುತ್ತದೆ ಮತ್ತು ಆ ಅಭೇದ ಪರ್ಯಾಯದಲ್ಲಿಯೇ ವಿಶೇಷತೆಗಳ ಅಪೇಕ್ಷೆಯಿಂದ ಅಂದರೆ ಗುಣಗಳ ಅಪೇಕ್ಷೆಯಿಂದ ಅದರಲ್ಲಿ (ಅಭೇದ ಪರ್ಯಾಯದಲ್ಲಿ)ಯೇ ಭೇದ ಮಾಡಿ ಅದನ್ನು ಗುಣಗಳ ಪರ್ಯಾಯ ಎಂದು ಹೇಳಲಾಗುತ್ತದೆ. ಈ ಕಾರಣದಿಂದ ಹೇಳಲು ಬರುತ್ತದೆ. ಏನಂದರೆ ಎಷ್ಟು ಕ್ಷೇತ್ರವು ದ್ರವ್ಯದ್ದಿದೆ ಅದು ಮತ್ತು ಅಷ್ಟೇ ಕ್ಷೇತ್ರವು ಗುಣಗಳದ್ದೂ ಇದೆ ಮತ್ತು ಅದು ಹಾಗೂ ಅಷ್ಟೇ ಕ್ಷೇತ್ರವು

ಪರ್ಯಾಯದಲ್ಲೂ ಸಹ ಇದೆ. ಆದ್ದರಿಂದಲೇ ದ್ರವ್ಯ ಪರ್ಯಾಯಗಳಿಗೆ ವ್ಯಾಪ್ಯ-ವ್ಯಾಪಕ ಸಂಬಂಧ ಹೇಳಲಾಗುತ್ತದೆ.

ಇದೇ ಮಾತನ್ನು ಪ್ರವಚನ ಸಾರ ಗಾಥೆ ೧೧೪ ರಲ್ಲಿಯೂ ಸಹ ಹೇಳಿದ್ದಾರೆ. ಏನಂದರೆ 'ದ್ರವ್ಯಾರ್ಥಿಕ' ನಯದ ಮೂಲಕ ಪೂರ್ಣದ್ರವ್ಯವಿದೆ ಮತ್ತು ಪುನಃ ಪರ್ಯಾಯಾರ್ಥಿಕ ನಯದ ಮೂಲಕ ಆ ದ್ರವ್ಯ ಬೇರೆ ಬೇರೆ ಇದೆ. ಏಕೆಂದರೆ ಆ ಕಾಲದಲ್ಲಿ ತನ್ಮಯವಾದ ಕಾರಣ (ದ್ರವ್ಯವು ಪರ್ಯಾಯದಿಂದ) ಸ್ವತಂತ್ರ ಇದೆ.

**ಪ್ರಶ್ನೆ : ದ್ರವ್ಯ ಮತ್ತು ಪರ್ಯಾಯದ ಪ್ರದೇಶಗಳು ಬೇರೆ ಬೇರೆ ಇವೆ ಎಂದು ಹೇಳುವದು ಯಾವ ಪ್ರಕಾರವಾಗುತ್ತದೆ ?**

ಉತ್ತರ : ಭೇದ ವಿವಕ್ಷೆಯಲ್ಲಿ ಯಾವಾಗ ಒಂದು ಅಭೇದ ಅಖಂಡ ದ್ರವ್ಯದಲ್ಲಿ ಭೇದ ಉತ್ಪನ್ನ ಮಾಡಿ ತಿಳಿಸಲಾಗುತ್ತದೆ, ಆಗ ದ್ರವ್ಯ ಮತ್ತು ಪರ್ಯಾಯ ಹೀಗೆ ವಸ್ತುವಿನ ಎರಡು ಭಾವಗಳನ್ನು ತಮ್ಮ ತಮ್ಮ ಭಾವದ ಅಪೇಕ್ಷೆಯಿಂದ ಹೀಗೆ ಹೇಳಲಾಗುತ್ತದೆ. ಏನೆಂದರೆ ಎರಡರ ಪ್ರದೇಶಗಳು ಬೇರೆ ಬೇರೆ ಇವೆ. ಆದರೆ ವಾಸ್ತವದಲ್ಲಿ ಅಲ್ಲಿಯ ಯಾವ ಭಿನ್ನತೆಯೂ ಇರುವದಿಲ್ಲ. ಅವು ಎರಡೂ ಅಭೇದವೇ ಇವೆ. ತನ್ಮಯವಾಗಿಯೇ ಇವೆ. ಅಂದರೆ ಒಂದೇ ಆಕಾರ ಪ್ರಭೇದಗಳನ್ನು ಅವಕಾಶವಾಗಿ ಪಡೆದಿರುತ್ತವೆ. ಹೀಗೆಯೇ ಕಾರ್ತಿಕೇಯಾನುಪ್ರೇಕ್ಷೆ ಗಾಥೆ ೨೭೭ರಲ್ಲಿಯೂ ಹೇಳಿದ್ದಾರೆ. ಏನಂದರೆ ವಸ್ತು ಯಾವ ಕಾಲದಲ್ಲಿ ಯಾವ ಸ್ವಭಾವದಿಂದ ಪರಿಣಮನ ರೂಪ ಆಗುತ್ತದೆ. ಆ ಕಾಲದಲ್ಲಿ ಆ ಪರಿಣಾಮದಿಂದ ತನ್ಮಯವಾಗುತ್ತದೆ. ಪಂಚಾಸ್ತಿಕಾಯ ಗ್ರಂಥದ ಗಾಥೆಯಲ್ಲಿಯೂ ಸಹ ಹೇಳಿದ್ದಾರೆ. ಏನಂದರೆ ಆಯಾ ಸದ್ಭಾವ ಪರ್ಯಾಯಗಳಿಗೆ ಯಾವುದು ದ್ರವಿಸುತ್ತದೆ. ಪ್ರಾಪ್ತವಾಗುತ್ತದೆ, ಅದನ್ನು ಸರ್ವಜ್ಞರ ಮೂಲಕ ದ್ರವ್ಯವೆಂದು ಹೇಳಲಾಗುತ್ತದೆ. ಏಕೆಂದರೆ ಅದು ಸತ್ತೆಯಿಂದ (ದ್ರವ್ಯದಿಂದ) ಅನನ್ಯ ಭೂತವಿದೆ.

ಈ ಅಭೇದ ಪರ್ಯಾಯವನ್ನು ಆಕಾರದ ಅಪೇಕ್ಷೆಯಿಂದ ವ್ಯಂಜನ ಪರ್ಯಾಯ ಅಥವಾ ದ್ರವ್ಯ ಪರ್ಯಾಯ ಎಂದು ಹೇಳಲಾಗುತ್ತದೆ ಮತ್ತು ಅದೇ ಅಭೇದ ಪಯಾಯಕ್ಕೆ ವಿಶೇಷತೆಗಳ ಅಪೇಕ್ಷೆಯಿಂದ ಗುಣ ಪರ್ಯಾಯ ಅಥವಾ ಅರ್ಥ ಪರ್ಯಾಯ ಎಂದೂ ಸಹ ಹೇಳಲಾಗುತ್ತದೆ. ಇಲ್ಲಿ ತಿಳಿಯುವದು ಏನಂದರೆ ಯಾವ ಗುಣಗಳ ಸಮೂಹ ರೂಪ ದ್ರವ್ಯವಿದೆ, ಅದರದು ಯಾವುದಾದರೂ ಒಂದು ಆಕಾರ ಅವಶ್ಯವಾಗಿ ಆಗುವದು ಮತ್ತು ಯಾವುದಾದರೂ ಒಂದು ರೂಪ ಮತ್ತು ಕಾರ್ಯವು ಸಹ ಅವಶ್ಯವಾಗಿ ಆಗುವದು. ಅಂದರೆ ಅದರಲ್ಲಿ ಯಾವ ಆಕಾರವಿದೆ ಅದನ್ನು ಆ ದ್ರವ್ಯದ ದ್ರವ್ಯ ಪರ್ಯಾಯ ಅಥವಾ ವ್ಯಂಜನ ಪರ್ಯಾಯ ಎಂದು ಹೇಳಲಾಗುತ್ತದೆ ಮತ್ತು ಯಾವುದು ಅದರ ವರ್ತಮಾನ ಕಾರ್ಯವಿದೆ (ಪರಿಣಾಮ ಅಥವಾ ಅವಸ್ಥೆ ಇದೆ) ಅದನ್ನು ಆ ದ್ರವ್ಯದ ಗುಣ ಪರ್ಯಾಯ ಅಥವಾ ಅರ್ಥ ಪರ್ಯಾಯ ಎಂದು ಹೇಳಲಾಗುತ್ತದೆ.

ನಾವು ಮೊದಲು ಹೇಗೆ ನೋಡಿದ್ದೆವು, ಹಾಗೆಯೇ ಭೇದರೂಪ ವ್ಯವಹಾರವು ಅಭೂತಾರ್ಥವಿದೆ. ಅದು ಕೇವಲ ತತ್ವ ತಿಳಿಯಲು ಅಥವಾ ತಿಳಿಸುವ ಸಲುವಾಗಿ ಪ್ರಯೋಗದಲ್ಲಿ ತೆಗೆದುಕೊಳ್ಳಲಾಗುತ್ತದೆ. ಬೇರೆ ಕಡೆ ಅದು ಕಾರ್ಯಕಾರಿ ಇರುವದಿಲ್ಲ. ವಸ್ತುವಿನ ಸ್ವರೂಪವಂತೂ ಅಭೇದವೇ ಇದೆ ಮತ್ತು ಅದುವೇ ಭೂತಾರ್ಥವಿದೆ. ಆದ್ದರಿಂದ ಎಲ್ಲ ಕಥನವು ಅಪೇಕ್ಷೆಯಿಂದ ಸ್ವೀಕರಿಸಲು ಯೋಗ್ಯವಿದೆ. ವಿಪರೀತ ಅರ್ಥದಿಂದ ಅನರ್ಥವಾಗುತ್ತದೆ. ಅಂದರೆ ಅದನ್ನು ಯಾವದೇ ಏಕಾಂತದಿಂದ ಗ್ರಹಣ ಮಾಡಿದರೆ ಅಥವಾ ತಿಳಿಸಿದರೆ ಅವನು ಮಿಥ್ಯಾದೃಷ್ಟಿ ಇದ್ದಾನೆ ಮತ್ತು ಅವನು ನಾಶವಾಗುತ್ತಾನೆ. ಅಂದರೆ ಮನುಷ್ಯಭವದಿಂದ ಸೋತಿದ್ದಾನೆ.

ಪ್ರತಿಯೊಂದು ವಸ್ತುವಿನ ಕಾರ್ಯವು ವಸ್ತುವಿನಿಂದ ಅಭೇದವಾಗುತ್ತದೆ. ಅದನ್ನೇ ಅದರ ಉಪಾದಾನ ರೂಪ ಪರಿಣಮನ ಎಂದು ಹೇಳಲಾಗುತ್ತದೆ. ಆ ಕಾರ್ಯಕ್ಕೆ ಅಥವಾ ಅವಸ್ಥೆಗೆ ವರ್ತಮಾನ ಸಮಯ ಅಪೇಕ್ಷೆಯಿಂದ ವರ್ತಮಾನ ಪರ್ಯಾಯ ಎಂದು ಹೇಳಲಾಗುತ್ತದೆ. ಭೇದ ನಯದಿಂದ ಹೀಗೆ ಹೇಳಬಹುದಾಗಿದೆ. ಏನಂದರೆ ಪರ್ಯಾಯವು ದ್ರವ್ಯದಲ್ಲಿಂದ ಬರುತ್ತದೆ ಮತ್ತು ದ್ರವ್ಯದಲ್ಲಿಯೇ ಹೋಗುತ್ತದೆ. ಏಕೆಂದರೆ ಯಾವದೇ ದ್ರವ್ಯದ (ವಸ್ತುವಿನ) ಕಾರ್ಯವು ಅದರಿಂದ ಅಭೇದವೇ ಆಗುತ್ತದೆ. ಆದಾಗ್ಯೂ ಭೇದನಯದಿಂದ ಹೀಗೆ ಕಥನ ಮಾಡಲಾಗುತ್ತದೆ. ಹೇಗೆಂದರೆ ಅವು ಎರಡೂ ಬೇರೆ ಬೇರೆ ಇವೆ. ದ್ರವ್ಯ ಮತ್ತು ಪರ್ಯಾಯವನ್ನು ಕಥಂಚಿತ್ ಭಿನ್ನವೆಂದು ಇದೇ ಅಪೇಕ್ಷೆಯಿಂದ ಹೇಳಲಾಗುತ್ತದೆ.

ಯಾವ ದ್ರವ್ಯವಿದೆ ಅದು ನಿತ್ಯವಿದೆ. ಆದರೆ ಕೂಟಸ್ಥ ನಿತ್ಯ ಇರುವದಿಲ್ಲ. ಏಕೆಂದರೆ ಒಂದು ವೇಳೆ ಆ ವಸ್ತುವಿನ ಯಾವದೇ ಕಾರ್ಯವನ್ನು ಮನ್ನಿಸಲಾಗಲಿಲ್ಲ ಎಂದಾದರೆ ಆ ವಸ್ತುವಿನದೇ ಅಭಾವ ಆಗುವದು. ಆದ್ದರಿಂದ ಪ್ರತಿಯೊಂದು ನಿತ್ಯ ವಸ್ತುವಿನ ಯಾವ ವರ್ತಮಾನ ಕಾರ್ಯವಿದೆ ಅದನ್ನೇ ಅದರ ಪರ್ಯಾಯವೆಂದು ಹೇಳುವಲ್ಲಿ ಬರುತ್ತದೆ ಮತ್ತು ಹೀಗೆ ಭೂತ ಭವಿಷತ್ ಮತ್ತು ವರ್ತಮಾನದ ಪರ್ಯಾಯಗಳ ಸಮೂಹವೇ ದ್ರವ್ಯ (ವಸ್ತು) ಇದೆ. ಅಂದರೆ ಕ್ರಮವಾಗಿ ರಚಿತ ಪರ್ಯಾಯಗಳ ಸಮೂಹವೇ ದ್ರವ್ಯ ಇದೆ.

ಯಾವದು ಯಾವಾಗಲೂ ಇದ್ದುಕೊಂಡು ಪರಿವರ್ತಿತವಾಗುತ್ತದೆ. ಅದುವೇ ಆ ವಸ್ತುವಿನ ಸ್ವಭಾವವಿದೆ. ಆದ್ದರಿಂದ ಆ ವಸ್ತುವಿನಲ್ಲಿ ಒಂದು ಸ್ಥಿರತಾಭಾವ ಇರುತ್ತದೆ ಮತ್ತು ಒಂದು ಪರಿವರ್ತನದ ಭಾವ ಇರುತ್ತದೆ. ಯಾವುದು ಸ್ಥಿರತಾಭಾವವಿದೆ ಅದನ್ನು ನಿತ್ಯ ರೂಪ ಅಂದರೆ ದ್ರವ್ಯವೆಂದು ಹೇಳಲಾಗುತ್ತದೆ. ತ್ರಿಕಾಲ ಧ್ರುವವೆಂದೂ ಹೇಳಲಾಗುತ್ತದೆ. ಯಾವುದು ಪರಿವರ್ತನದ ಭಾವವಿದೆ, ಅದನ್ನು ಪರ್ಯಾಯ ಎಂದು ಹೇಳಲಾಗುತ್ತದೆ. ಆದರೂ ಸಹ ವಸ್ತುವಿನಲ್ಲಿ ಒಂದು ಸ್ಥಿರತೆಯ ಭಾಗ ಮತ್ತು ಒಂದು ಪರಿವರ್ತನೆಯ ಭಾಗ ಹೀಗೆ ಎರಡು ಭಾಗಗಳು ಅಂದರೆ

ವಿಭಾಗ ಇರುವದಿಲ್ಲ. ಒಂದು ವೇಳೆ ಯಾವದೇ ವಿಭಾಗವು ಮನ್ನಿಸುವಲ್ಲಿ ಬಂದರೆ ವಸ್ತು ಒಂದು ಅಖಂಡ ಅಭೇದ ಇರದೇ ಎರಡು ಮತ್ತು ಬೇರೆ ಎಂದಾಗುವದು. ಮತ್ತೆ ದ್ರವ್ಯದ ಒಂದು ಭಾಗವು ಕೂಟಸ್ಥ ಮತ್ತು ಎರಡನೇ ಭಾಗವು ಕ್ಷಣಿಕವಾಗುವದು. ಅಂದರೆ ದ್ರವ್ಯವು ಕೂಟಸ್ಥ ಮತ್ತು ಕ್ಷಣಿಕವಾಗುವದು. ಹೀಗೆ ಆಗುವದರಿಂದ ವಸ್ತುವಿನ ಸಿದ್ಧಿಯೇ ಆಗುವದಿಲ್ಲ. ಏಕೆಂದರೆ ಮೇಲೆ ಹೇಳಿದ ಅನುಸಾರ ಯಾವದೇ ದ್ರವ್ಯವು ಕಾರ್ಯದ ಹೊರತು ಕೂಟಸ್ಥವಾಗಿ ಆಗಲಾರದು ಮತ್ತು ಯಾವದೇ ದ್ರವ್ಯ ಕ್ಷಣಿಕವಾದರೆ ಆ ದ್ರವ್ಯದ ಅಭಾವವೇ ಆಗುವದು. ಇದರಿಂದ ಹೀಗೆ ಎರಡೂ ದೋಷಗಳು ಕಾರಣ ವಸ್ತು ವ್ಯವಸ್ಥೆಯು ತಿಳಿಯದೇ ಇರುವದರಿಂದ ಬರುತ್ತದೆ ಮತ್ತು ವಸ್ತುವಿನ ಸಿದ್ಧಿಯೇ ಆಗುವದಿಲ್ಲ.

ಆದ್ದರಿಂದ ಮೊದಲು ಹೇಳಿದ ಅನುಸಾರ ವಸ್ತುವಿನ ಯಾವ ವರ್ತಮಾನ ಸ್ಥಿತಿ ಇರುತ್ತದೆ. ಅಂದರೆ ಅದರ ಯಾವ ಅವಸ್ಥೆಯಿದೆ, ಅದನ್ನೇ ಪರ್ಯಾಯವೆಂದು ತಿಳಿಯುವದು ಅತ್ಯಂತ ಅವಶ್ಯಕವಿದೆ. ಯಾವಾಗ ಹೇಳಿತೆಂದರೆ ಪರ್ಯಾಯವಂತೂ ದ್ರವ್ಯದಲ್ಲಿಂದಲೇ ಬರುತ್ತದೆ ಮತ್ತು ದ್ರವ್ಯದಲ್ಲಿಯೇ ಹೋಗುತ್ತದೆ. ಆದರೆ ಹೀಗಿರುವ ಕಥನವನ್ನು ಮೇಲೆ ಹೇಳಿದ ಅನುಸಾರ ಅಪೇಕ್ಷೆಯಿಂದ ಕೇವಲ ವ್ಯವಹಾರ ಅಂದರೆ ಉಪಚಾರ ಕಥನವೆಂದು ಮಾತ್ರ ತಿಳಿಯಬೇಕು. ನಿಜವಾದದ್ದು ಅಲ್ಲ, ಈಗ ಮುಂದೆ ನಾವು ಉತ್ಪಾದ ವ್ಯಯ ದ್ರವ್ಯ ಇವುಗಳ ಯಥಾರ್ಥ ವ್ಯವಸ್ಥೆಯನ್ನು ತಿಳಿಸುವ ಪ್ರಯತ್ನ ಮಾಡುತ್ತೇವೆ.

★★★

## ೪. ಉತ್ಪಾದ-ವ್ಯಯ-ಧ್ರುವ ರೂಪ ವ್ಯವಸ್ಥೆ

ಈಗ ಉತ್ಪಾದ-ವ್ಯಯ-ಧ್ರೌವ್ಯದಿಂದಲೂ ಸಹ ಇದೇ ಭಾವವನ್ನು ತಿಳಿಸುತ್ತೇವೆ. ಯಾವ ಉತ್ಪಾದ-ವ್ಯಯ ಇದೆ, ಅದು ಪರ್ಯಾಯವಿದೆ. ಮತ್ತು ಯಾವದು ಧ್ರುವ ಇದೆ ಅದು ದ್ರವ್ಯವಿದೆ. ಅಂದರೆ ಯಾವುದು ದ್ರವ್ಯ ಇದೆ, ಅದು ನಿತ್ಯವಿದೆ. ಮತ್ತು ಅದರಿಂದಲೇ 'ಇದು ಅದೇ ಇದೆ' ಹೀಗೆ ನಿರ್ಣಯವಾಗುತ್ತದೆ. ಆದ್ದರಿಂದ ಅದನ್ನೇ ಧ್ರುವಭಾವ ಅಥವಾ ಅಪರಿಣಾಮಿ ಭಾವವೆಂದೂ ಸಹ ಹೇಳಲಾಗುತ್ತದೆ.

ಜೈನಧರ್ಮದಲ್ಲಿ ಧ್ರುವಭಾವವು ಏಕಾಂತ ಅಪರಿಣಾಮಿ ಅಂದರೆ ಕೂಟಸ್ಥ ಇಲ್ಲ. ಆದರೆ ಪರಿಣಮನಶೀಲ ವಸ್ತು ಇದೆ. ಕಾರ್ತಿಕಾಯಾನುಪ್ರೇಕ್ಷೆ ಗಾಥೆ ೨೨೬ರಲ್ಲಿ ಹೇಳಿದ್ದಾರೆ. ಏನಂದರೆ ಮತ್ತು ಏಕಾಂತ ಸ್ವರೂಪ ದ್ರವ್ಯ ಇದೆ. ಅದು ಸ್ವಲ್ಪವೂ

ಸಹ ಕಾರ್ಯ ಮಾಡುವದಿಲ್ಲ ಹಾಗೂ ಯಾವದು ಕಾರ್ಯ ಮಾಡುವದಿಲ್ಲ. ಅದು ದ್ರವ್ಯ ಹೇಗಾಗುವದು ? ಅದಂತೂ ಶೂನ್ಯರೂಪದಂತಿದೆ.

ಭಾವಾರ್ಥ : ಯಾವುದು ಅರ್ಥಕ್ರಿಯಾ ರೂಪವಿದೆ ಅದನ್ನೇ ಪರಮಾರ್ಥ ವಸ್ತು ಎಂದು ಹೇಳಿದ್ದಾರೆ. ಆದರೆ ಯಾವದು ಅರ್ಥಕ್ರಿಯಾ ರೂಪ ಇಲ್ಲ ಅದಂತೂ ಆಕಾಶದ ಹೂವಿನಂತೆ ಶೂನ್ಯರೂಪವಿದೆ. ಅಂದರೆ ಯಾವದು ತನ್ನ ಕಾರ್ಯಸಹಿತ ವಸ್ತು ಇದೆ, ಅದರ ಯಾವ ಸ್ಥಿರತಾಭಾವವಿದೆ, ಅದುವೇ ಧ್ರುವಭಾವ ಅಥವಾ ಅಪರಿಣಾಮಿ ಭಾವವಿದೆ ಮತ್ತು ಆ ವಸ್ತುವಿನ ಯಾವ ಕಾರ್ಯವಿದೆ ಅಂದರೆ ಅದರ ಯಾವ ವರ್ತಮಾನ ಭಾವ ಅಥವಾ ಅದರ ವರ್ತಮಾನ ಅವಸ್ಥೆಯಿದೆ ಅದರಿಂದಲೇ ಅದರ ಪರಿಣಮತಾ ಭಾವ ಹೇಳಲಾಗಿದೆ. ಅದನ್ನೇ ಉತ್ಪಾದ-ವ್ಯಯ ಎಂದು ಹೇಳಲಾಗುತ್ತದೆ. ಅದು ಈ ಪ್ರಕಾರದ ಹಳೆಯ ಪರ್ಯಾಯದ ಕ್ಷಯ ಮತ್ತು ಹೊಸ ಪರ್ಯಾಯದ ಉತ್ಪಾದವಾಗುತ್ತದೆ. ಅದು ಈ ಪ್ರಕಾರದ ಹಳೆಯ ಪರ್ಯಾಯದ ಕ್ಷಯ ಮತ್ತು ಹೊಸ ಪರ್ಯಾಯದ ಉತ್ಪಾದವಾಗುತ್ತದೆ. ಈ ಉತ್ಪಾದ-ವ್ಯಯಗಳು ಯಾವದೇ ಹೊಸ ವಸ್ತುವಿನ ಉತ್ಪಾದ-ವ್ಯಯ ರೂಪ ಇರುವದಿಲ್ಲ. ಅದು ಕೇವಲ ಒಂದು ವಸ್ತುವಿನ (ದ್ರವ್ಯದ) ಒಂದು ಸಮಯ ಮೊದಲಿನ ರೂಪದ ವ್ಯಯ ಮತ್ತು ವರ್ತಮಾನ ಸಮಯದ ರೂಪದ ಉತ್ಪಾದವೇ ಇರುತ್ತದೆ. ಒಂದು ಅಭೇದ-ಅಖಂಡ-ಅಭಿನ್ನ ವಸ್ತುವಿನ ಸಮಯದ ಅಪೇಕ್ಷೆಯಿಂದ ಕಾರ್ಯ (ಪರಿಣಮನ) ಅದುವೇ ಅದರ ಉತ್ಪಾದ-ವ್ಯಯ ರೂಪ ಪರ್ಯಾಯ ಎಂದು ಹೇಳಲಾಗುತ್ತದೆ.

ಇಲ್ಲಿ ಯಾವುದೋ ನಿಜವಾದ ಉತ್ಪಾದ-ವ್ಯಯ ಅಥವಾ ಬರುಹೋಗುವದು ಇರುವದಿಲ್ಲ. ಆದರೆ ವಸ್ತು ನಿತ್ಯ ಪರಿಣಮಿತಿ ಇರುತ್ತದೆ. ಅಂದರೆ ಕ್ರಮದಿಂದ ರಚಿತ ಪರ್ಯಾಯಗಳ ಸಮೂಹ, ಅದುವೇ ವಸ್ತು ಮತ್ತು ಅದರಲ್ಲಿ ಸಮಯ ಅಪೇಕ್ಷೆಯಿಂದ ಉತ್ಪಾದ-ವ್ಯಯವೆಂದು ಹೇಳಲಾಗುತ್ತದೆ. ಅಂದರೆ ಅದೇ ವಸ್ತುವಿಗೆ ವರ್ತಮಾನದಿಂದ ನೋಡಿದ ಮೇಲೆ ಅದನ್ನು ಆ ದ್ರವ್ಯದ ವರ್ತಮಾನ ಅವಸ್ಥೆ ಅಂದರೆ ಪರ್ಯಾಯವೆಂದು ಕರೆಯಲಾಗುತ್ತದೆ. ವಸ್ತುವಿನಲ್ಲಿ ಉತ್ಪಾದ-ವ್ಯಯ-ಧ್ರುವ ಹೀಗೆ ವಾಸ್ತವಿಕ ಭೇದ ಆಗದಿದ್ದರೂ ಸಹ ಕೇವಲ 'ವ್ಯವಹಾರ'ದಿಂದಲೇ ಭೇದನಯದ ಅಪೇಕ್ಷೆಯಿಂದ ಹೀಗೂ ಹೇಳಲಾಗುತ್ತದೆ. ಅದರ ಫಲ ಕೇವಲ ವಸ್ತುವಿನ ಸ್ವರೂಪ ತಿಳಿಸುವ ತನಕ ಇರುತ್ತದೆ. ಭೇದದಲ್ಲಿಯೂ ಇಲ್ಲ ಕೇವಲ ತೊಡಕಾಗಿರುವ ಸಲುವಾಗಿ ಇದೆ. ಭೇದದಲ್ಲಿಯೇ ತಡೆಯುವದರಿಂದ ವಸ್ತುವಿನ ಅಭೇದ ಸ್ವರೂಪವು ಯಾವ ಸ್ವಾತ್ಮಾನುಭೂತಿಯ ಸಲುವಾಗಿ ಕಾರ್ಯಕಾರಿ ಇದೆ. ಈಗ ನಾವು ಮುಂದೆ ಭೇದ- ಅಭಾಗ ಸ್ವರೂಪವು ಯಾವ ಅಪೇಕ್ಷೆಯಿಂದ ಪ್ರಾಪ್ತವಾಗುತ್ತದೆ. ಅದರ ಯಥಾರ್ಥ ವಿಧಿ ತಿಳಿಸುವ ಪ್ರಯತ್ನ ಮಾಡುತ್ತೇವೆ.

★★★

# ೫. ದೃಷ್ಟಿ ಭೇದದಿಂದ ಭೇದ

ಎಷ್ಟೋ ಜನರು ಸಂಸಾರಿ ಜೀವರುಗಳಿಗೆ ಏಕಾಂತವಾದಿ, ಅಶುದ್ಧ ಎಂದು ಮನ್ನಿಸುತ್ತಾರೆ. ಅವರು ಪರ್ಯಾಯದೃಷ್ಟಿ ಜೀವರುಗಳೆಂದು ಹೇಳುತ್ತಾರೆ ಆ ಜನರು ನಾಲ್ಕನೇ ಗುಣಸ್ಥಾನದಲ್ಲಿ ಶುದ್ಧಾತ್ಮನ ಅನುಭವದ ಮಾತನ್ನೂ ಸಹ ಮನ್ನಿಸುವದಿಲ್ಲ. ಸಂಸಾರಿ ಜೀವವು ಶುದ್ಧ ನಯ / ದ್ರವ್ಯಾರ್ಥಿಕ ನಯದ ಅಪೇಕ್ಷೆಯಿಂದ ಪರಮ ಶುದ್ಧವೇ ಇದ್ದಾರೆ. ಅವರ ಆತ್ಮಗಳು ತ್ರಿಕಾಲವೂ ಶುದ್ಧ ಇವೆ. ಈ ಮಾತು ಅನೇಕ ಶಾಸ್ತ್ರಗಳಲ್ಲಿ ಹೇಳಲಾಗಿದೆ. ಸಮ್ಯಗ್ದರ್ಶನದ ಪ್ರಾಪ್ತಿಯ ಸಮಯ ಯಾವ ಶುದ್ಧಾತ್ಮನ ಅನುಭವವಾಗುತ್ತದೆ ಅದು ಈ ತ್ರಿಕಾಲ ಶುದ್ಧಾತ್ಮನಿಗೆ ಅನುಭವ ಆಗುತ್ತದೆ. ಆತ್ಮನ ಮಧ್ಯದ ಎಂಟು ರುಚಕ ಪ್ರದೇಶಗಳ ಅನುಭವ ಇಲ್ಲ. ಆ ಶುದ್ಧಾತ್ಮನಿಗೆ ಕಾರಣ ಪರಮಾತ್ಮ ಅಥವಾ ಕಾರಣ ಸಮಯಸಾರವೆಂದೂ ಹೇಳುತ್ತಾರೆ. ಆ ಕಾರಣ ಪರಮಾತ್ಮನು ತ್ರಿಕಾಲ ಶುದ್ಧನೇ ಇದ್ದಾನೆ. ಅವರಿಗೆ ಅನುಭಾವದಿಂದಲೇ ಕಾರ್ಯ ಪರಮಾತ್ಮತನವು ಪ್ರಾಪ್ತವಾಗುತ್ತದೆ. ಈ ಮಾತನ್ನು ನಾವು ಮುಂದೆ ವಿಸ್ತಾರವಾಗಿ ತಿಳಿಸುತ್ತೇವೆ. ಅದನ್ನು ಯಥಾಯೋಗ್ಯ ತಿಳಿದುಕೊಂಡು ಮೊದಲು ಅದರ ನಿರ್ಣಯ ಮಾಡುವದು ಅಂದರೆ ಭಾವಭಾಸನ ಮಾಡುವದಿದೆ. ಏಕೆಂದರೆ ಅದರ ಅನುಭವ ನಮ್ಮ ಯೋಗ್ಯತೆಯ ಅನುಸಾರ ಆಗಬಹುದಾಗಿದೆ.

ವಸ್ತುವಿನಲ್ಲಿ ಎಲ್ಲವೂ ಭೇದದೃಷ್ಟಿ ಅಪೇಕ್ಷೆಯಿಂದ ಇರುತ್ತವೆ. ವಾಸ್ತವಿಕತೆಯಿಂದ ಇರುವದಿಲ್ಲ. ಹೇಗೆ ಅಂದರೆ ಪ್ರಮಾಣ ದೃಷ್ಟಿಯಿಂದ ನೋಡಿದ ಮೇಲೆ ವಸ್ತು ದ್ರವ್ಯ ಪರ್ಯಾಯಮಯ ಇದೆ. ಅಂದರೆ ಉತ್ಪಾದ-ವ್ಯಯ-ಧ್ರೌವ್ಯ ರೂಪವೇ ಇದೆ. ಯಾವಾಗ ಅದೇ ವಸ್ತುವನ್ನು ಪರ್ಯಾಯ ದೃಷ್ಟಿಯಿಂದ ನೋಡಿದರೆ ಅಂದರೆ ಅದನ್ನು ಕೇವಲ ಅದರ ವರ್ತಮಾನ ಕಾರ್ಯದಿಂದ, ಅವಸ್ಥೆಯಿಂದ ನೋಡಿದರೆ ಅದು ಕೇವಲ ಅಷ್ಟೇ ಇರುತ್ತದೆ. ಪೂರ್ಣದ್ರವ್ಯವು ಆ ಸಮಯ ಮಾತ್ರ ವರ್ತಮಾನ ಅವಸ್ಥಾರೂಪವೇ ತಿಳಿದು ಬರುತ್ತದೆ. ಆ ವರ್ತಮಾನ ಅವಸ್ಥೆಯಲ್ಲಿಯೇ ಪೂರ್ಣ ದ್ರವ್ಯವು ಅಡಗಿರುತ್ತದೆ. ಈ ಭಾವವು ಸಮಯಸಾರ ಗಾಥೆ ೧೩ ರಲ್ಲಿ ತೋರಿಸಲಾಗಿದೆ. ಅಂದರೆ ವರ್ತಮಾನ ತ್ರಿಕಾಲದ್ದೇ ಮಾಡಲಾಗಿದೆ. ಕಾರ್ತಿಕೇಯಾನುಪ್ರೇಕ್ಷೆ ಗಾಥೆ ೨೬೯ರಲ್ಲಿಯೂ ಹೇಳಿದ್ದಾರೆ. ಏನಂದರೆ ಯಾವ ನಯವು ವಸ್ತುವನ್ನು ಕೇವಲ ವಿಶೇಷ ರೂಪದಿಂದ (ಪರ್ಯಾಯದಿಂದ) ಅವಿನಾಭೂತ (ಅಂದರೆ ಪರ್ಯಾಯರಹಿತ ದ್ರವ್ಯಕ್ಕೆ ಇಲ್ಲ. ಆದರೆ ಪರ್ಯಾಯ ಸಹಿತ ದ್ರವ್ಯಕ್ಕೆ ಸಾಮಾನ್ಯ ರೂಪವನ್ನು ಅನೇಕ ಪ್ರಕಾರದ ಯುಕ್ತಿಯ ಬಲದಿಂದ (ಅಂದರೆ ಪರ್ಯಾಯವನ್ನು ಗೌಣ ಮಾಡಿ ದ್ರವ್ಯವನ್ನು ಸಿದ್ಧಿಸಿದರೆ ಅದು ದ್ರವ್ಯಾರ್ಥಿಕ ನಯ (ದ್ರವ್ಯದೃಷ್ಟಿ) ಇರುತ್ತದೆ.

**ಭಾವಾರ್ಥ :** ವಸ್ತುವಿನ ಸ್ವರೂಪವು ಸಾಮಾನ್ಯ ವಿಶೇಷಾತ್ಮಕ ಇರುತ್ತದೆ. ವಿಶೇಷದ ಹೊರತು ಸಾಮಾನ್ಯವಾಗುವದಿಲ್ಲ ಮತ್ತು ಗಾಥೆ ೨೭೦ರಲ್ಲಿಯೂ ಸಹ

ಹೇಳಿದ್ದಾರೆ. ಏನಂದರೆ ಯಾವ ನಯವು ಅನೇಕ ಪ್ರಕಾರದಿಂದ ಸಾಮಾನ್ಯ ಸಹಿತ ಎಲ್ಲ ವಿಶೇಷವನ್ನು ಅದರ ಸಾಧನದ ಯಾವ ಲಿಂಗ (ಚಿಹ್ನ)ವು ಅದರ ವಶದಿಂದ ಸಾಧಿಸುತ್ತದೆ. ಅದು ಪರ್ಯಾಯಾರ್ಥಿಕ ನಯ (ಪರ್ಯಾಯ ದೃಷ್ಟಿ) ಇರುತ್ತದೆ.

**ಭಾವಾರ್ಥ** : ಸಾಮಾನ್ಯ (ದ್ರವ್ಯ) ಸಹಿತ ಅದರ ವಿಶೇಷಗಳನ್ನು (ಪರ್ಯಾಯಗಳನ್ನು) ಹೇತುಪೂರ್ವಕವಾಗಿ ಸಿದ್ಧಿಸಿದರೆ (ಅಂದರೆ ದ್ರವ್ಯವನ್ನು ಗೌಣ ಮಾಡಿ ಪರ್ಯಾಯವನ್ನು ಗ್ರಹಣ ಮಾಡಿದರೆ) ಅದು ಪರ್ಯಾಯಾರ್ಥಿಕ ನಯ (ಪರ್ಯಾಯ ದೃಷ್ಟಿ) ಇದೆ. ಅಂದರೆ ಪೂರ್ಣದ್ರವ್ಯವು ಯಾವಾಗ ಕೇವಲ ವರ್ತಮಾನ ಅವಸ್ಥಾರೂಪ ಪರ್ಯಾಯ ರೂಪವೇ ತಿಳಿದು ಬರುತ್ತದೆ. ಅದನ್ನೇ ಪರ್ಯಾಯ ದೃಷ್ಟಿ ಎಂದು ಹೇಳಲಾಗುತ್ತದೆ. ಮತ್ತು ಆ ಸಮಯ ಆವರ್ತಮಾನ ಪರ್ಯಾಯದಲ್ಲಿಯೇ ಪೂರ್ಣದ್ರವ್ಯವು ಅಡಗಿರುತ್ತದೆ.

ಆದ್ದರಿಂದ ಒಂದು ವೇಳೆ ಹೀಗೆ ಹೇಳಲಾರದೆ ಅಂದರೆ ವರ್ತಮಾನ ಪರ್ಯಾಯವು ಸಮ್ಯಗ್ದರ್ಶನದ ವಿಷಯದಲ್ಲಿ ಸಮಾವೇಶ ಇಲ್ಲ. ಆದರೆ ಅಲ್ಲಿ ತಿಳಿಸಲೇಬೇಕಾಗುವದು. ಏನಂದರೆ ಯಾವುದೇ ದ್ರವ್ಯದ ವರ್ತಮಾನ ಪರ್ಯಾಯದ ಲೋಪವಾಗುತ್ತಲೇ ಪೂರ್ಣದ್ರವ್ಯದ್ದೇ ಲೋಪವಾಗುವದು. ಅಲ್ಲಿ ವಸ್ತುವಿನದೇ ಅಭಾವವಾಗುವದು. ಆದ್ದರಿಂದ ದೃಷ್ಟಿಯ ವಿಷಯದಲ್ಲಿ (ಸಮ್ಯಗ್ದರ್ಶನದ ವಿಷಯದಲ್ಲಿ) ವರ್ತಮಾನ ಪರ್ಯಾಯದ ಅಭಾವ ಮಾಡದೇ ಕೇವಲ ಅದರಲ್ಲಿ ಇರತಕ್ಕಂಥ ಅಶುದ್ಧಿಯನ್ನು (ವಿಭಾವಭಾವಗಳನ್ನು) ಗೌಣ ಮಾಡುವದು ಒಳ್ಳೆಯದಿರುತ್ತದೆ. ಅದನ್ನು ನಾವು ಮುಂದೆ ಸ್ಪಷ್ಟ ಮಾಡೋಣ.

ಒಂದು ವೇಳೆ ಪೂರ್ಣ ವಸ್ತುವಿಗೆ ದ್ರವ್ಯ ದೃಷ್ಟಿಯಿಂದ ನೋಡಿದರೆ ಅದು ಸಂಪೂರ್ಣ ವಸ್ತು ಕೇವಲ ದ್ರವ್ಯರೂಪವೇ ಧ್ರುವ ರೂಪವೇ ಅಪರಿಣಾಮ ರೂಪವೇ ತಿಳಿದು ಬರುತ್ತದೆ. ಅಲ್ಲಿ ಪರ್ಯಾಯವು ತಿಳಿದು ಬರುವದೇ ಇಲ್ಲ. ಏಕೆಂದರೆ ಆಗ ಪರ್ಯಾಯವು ಆ ದ್ರವ್ಯದಲ್ಲಿ ಅಂತರ್ಭೂತ ಆಗಿಬಿಡುತ್ತದೆ. ಪರ್ಯಾಯವು ಗೌಣವಾಗಿ ಬಿಡುತ್ತದೆ ಮತ್ತು ಪೂರ್ಣವಸ್ತು ಧ್ರುವರೂಪ ದ್ರವ್ಯರೂಪವಾಗಿಯೇ ತಿಳಿದು ಬರುತ್ತದೆ. ಆದ್ದರಿಂದಲೇ ದ್ರವ್ಯದೃಷ್ಟಿ ಕಾರ್ಯಕಾರಿ ಇದೆ. ಇದೇ ಮಾತನ್ನು ನಾವು ಮುಂದೆ ವಿಸ್ತಾರದಿಂದ ಹೇಳುತ್ತೇವೆ.

ಇಲ್ಲಿ ಹೇಳಿದ ಅನುಸಾರ ದ್ರವ್ಯ-ಗುಣ-ಪರ್ಯಾಯ ಮತ್ತು ಉತ್ಪಾದ-ವ್ಯಯ-ಧ್ರೌವ್ಯರೂಪ ವಸ್ತು ವ್ಯವಸ್ಥೆಯು ಸಮ್ಯಕ್‌ರೂಪದಿಂದ ತಿಳಿದುಬರುವದಿಲ್ಲ ಅಥವಾ ವಿಪರೀತ ರೂಪದಿಂದ ಧಾರಣವಾಗುವದು. ಆದರೆ ಎಲ್ಲಕ್ಕಿಂತ ಮೊದಲು ಅದನ್ನು ಸಮ್ಯಕ್‌ರೂಪದಿಂದ ತಿಳಿದುಕೊಳ್ಳುವದು ಅತ್ಯಂತ ಆವಶ್ಯಕವಿದೆ. ಏಕೆಂದರೆ ಅದರ ಹೊರತು ಸಮ್ಯಗ್ದರ್ಶನದ ವಿಷಯ (ದೃಷ್ಟಿಯ ವಿಷಯ) ತಿಳಿಯುವದು ಅಶಕ್ಯವಿದೆ. ಆದ್ದರಿಂದ ಈಗ ನಾವು ಇದೇ ಭಾವಗಳನ್ನು ಶಾಸ್ತ್ರಗಳ ಆಧಾರದಿಂದಲೂ ಸಹ ದೃಢ ಮಾಡೋಣ.

★★★

## ೬. ಪಂಚಾಧ್ಯಾಯಿ ಗ್ರಂಥದಲ್ಲಿ ತಿಳಿಸಿದ ವಸ್ತು ವ್ಯವಸ್ಥೆ

ಶ್ಲೋಕ ೬೭ : ಆತ್ಮನು ಪರಿಣಮನಶೀಲನಾದಾಗ್ಯೂ ಜ್ಞಾನಗುಣತನದಿಂದ ಅವಸ್ಥಿತನೇ ಇರುತ್ತಾನೆ. ಆದರೂ ಜ್ಞಾನ ಗುಣದ ತರತಮರೂಪ (ಹೆಚ್ಚು ಕಡಿಮೆ)ದಿಂದ ತನ್ನ ಅಪೇಕ್ಷೆಯಿಂದ ಅನವಸ್ಥಿತ ಇರುತ್ತಾನೆ.

ಅಂದರೆ ಆತ್ಮನು (ದ್ರವ್ಯ) ಪರಿಣಮನಶೀಲನಿದ್ದಾನೆ. ಆದರೂ ಸಹ ಅದನ್ನು ಜ್ಞಾನ ಗುಣದಿಂದ ಜ್ಞಾಯಕ ಭಾವದಿಂದ ನೋಡುವಲ್ಲಿ ಬಂದರೆ ಅದು ಹೇಗಿದೆಯೋ ಹಾಗೆಯೇ ತಿಳಿದು ಬರುತ್ತದೆ. ಅಂದರೆ ಅವಸ್ಥಿತವಿದೆ ಮತ್ತು ಒಂದು ವೇಳೆ ಜ್ಞಾನಗುಣದ್ದೇ ಹೆಚ್ಚು ಕಡಿಮೆ ಅವಸ್ಥೆಯಿಂದ ಅಂದರೆ ವಿಕಲ್ಪರೂಪ ಜ್ಞೇಯರೂಪ ಅವಸ್ಥೆಯಿಂದ ನೋಡುವಲ್ಲಿ ಬಂದರೆ ಅದು ಹೇಗಿದೆಯೋ ಹಾಗೆ ಇರುವದಿಲ್ಲ. ಅಂದರೆ ಅನವಸ್ಥಿತವಾಗಿ ತಿಳಿದು ಬರುತ್ತದೆ. ಇದುವೇ ಅನುಕ್ರಮದಿಂದ ದ್ರವ್ಯದೃಷ್ಟಿ ಮತ್ತು ಪರ್ಯಾಯದೃಷ್ಟಿ ಇದೆ.

ಶ್ಲೋಕ ೬೮-೬೯ : ದ್ರವ್ಯಾರ್ಥಿಕ ನಯದಿಂದ ವಸ್ತು ಅನವಸ್ಥಿತ ಇದೆ. ಈ ಪ್ರಕಾರ (ವಸ್ತುವಿನಲ್ಲಿ) ಪ್ರತೀತಿಯಾಗುವದರಿಂದ ಗುಣ-ಗುಣಾಂಶದ ಕಲ್ಪನೆ ಸಾರ್ಥಕವಿದೆ. ಹೀಗೆ ಮೊದಲೇ ಸಿದ್ಧ ಮಾಡಲಾಗಿದೆ. ಈಗ ಅದೇ ವಸ್ತು ಸ್ವರೂಪವನ್ನು ದೃಢ ಮಾಡುವ ಸಲುವಾಗಿ ಭೇದರೂಪದಿಂದ ತರ್ಕವಿತರ್ಕ ಮಾಡಲಾಗುತ್ತದೆ. ಏನಂದರೆ ಒಂದು ವೇಳೆ ಗುಣ-ಗುಣಾಂಶಗಳ ಕಲ್ಪನೆಯನ್ನು ಮನ್ನಿಸುವಲ್ಲಿ ಬಂದಿದ್ದರೆ ದ್ರವ್ಯದ ಸ್ವರೂಪದಲ್ಲಿ ನಾಲ್ಕು ಅನಿಷ್ಟ ಪಕ್ಷಗಳು ಉತ್ಪನ್ನವಾಗುವ ಪ್ರಸಂಗ ಬರುವದು ಮತ್ತು ಅವು ಈ ಪ್ರಕಾರ ಇರುತ್ತವೆ.

೧. ಒಂದು ಗುಣಾಂಶದ ಪ್ರಕಾರ ದ್ರವ್ಯವನ್ನು ನಿರಂಶಮನ್ನಿಸಬೇಕಾಗುವದು.
೨. ದ್ರವ್ಯದಲ್ಲಿ ಕೇವಲ ಗುಣಗಳದೇ ಸದ್ಭಾವ ಮನ್ನಿಸುವದರಿಂದ ಕೂಟದ ಪ್ರಕಾರ ಅದನ್ನು ಕೂಟಸ್ಥ ಎಂದು ಅಂದರೆ ಅಪರಿಣಾಮಿ ಎಂದು ಮನ್ನಿಸಬೇಕಾಗುವದು.
೩. ಗುಣಗಳ ಹೊರತಾಗಿ ಕೇವಲ ಗುಣಾಂಶದ ಕಲ್ಪನೆಯನ್ನೇ ಮನ್ನಿಸಿದ ಮೇಲೆ ಅದನ್ನು (ದ್ರವ್ಯವನ್ನು) ಕ್ಷಣಿಕ ಎಂದು ಮನ್ನಿಸಬೇಕಾಗುವದು.
೪. ಗುಣಗಳ ಅನಂತ ಅಂಶ ಮನ್ನಿಸಿದ ಬಳಿಕವೂ ಸಹ ಅವುಗಳ ಸಮಾನ ಪರಿಣಮನವನ್ನು ಮನ್ನಿಸಬೇಕಾಗುವದು. ಆದರೆ ಹೆಚ್ಚು ಕಡಿಮೆ ಅಂಶರೂಪ ಮನ್ನಿಸಲಾಗುವದಿಲ್ಲ.

ಶ್ಲೋಕ ೮೩-೮೪ : ಹೇಗೆ ಮಾವಿನಹಣ್ಣಿನಲ್ಲಿ ಸ್ಪರ್ಶ, ರಸ, ಗಂಧ ಮತ್ತು ವರ್ಣ ಈ ನಾಲ್ಕು ಪುದ್ಗಲ ದ್ರವ್ಯದ ಗುಣಗಳು ತಮ್ಮ ತಮ್ಮ ಲಕ್ಷಣಗಳಿಂದ ಬೇರೆ ಬೇರೆ ಇವೆ ಹಾಗೂ ನಿಶ್ಚಯದಿಂದ ಅವು ಎಲ್ಲವೂ ಅಖಂಡ ದ್ರವ್ಯ ಆಗಿರುವದರಿಂದ

ಯಾವುದೇ ಪ್ರಕಾರದಿಂದ ಬೇರೆಯಾಗಿ ಮಾಡಲು ಸಾಧ್ಯವಾಗುವದಿಲ್ಲ. ಯಾವದು ವಿಶೇಷ ಅಪೇಕ್ಷೆಯಿಂದ ಪರ್ಯಾಯವಿದೆ. ಅದುವೇ ಸಾಮಾನ್ಯ ಅಪೇಕ್ಷೆಯಿಂಧ ದ್ರವ್ಯ ಇದೆ. ಹೇಗೆಂದರೆ ಉಪಾದಾನವು ಸ್ವತಃ ಕಾರ್ಯರೂಪವಾಗಿ ಪರಿಣಮಿಸುತ್ತದೆ. ಈ ಮಾತು ಎಲ್ಲರಿಗೂ ಗೊತ್ತೇ ಇದೆ. ಅದರಲ್ಲಿ ಉಪಾದಾನ ಅದೇ ದ್ರವ್ಯವಿದೆ ಮತ್ತು ಕಾರ್ಯ ಪರ್ಯಾಯವಿದೆ. ಇದರಿಂದ ದ್ರವ್ಯವು ಸ್ವತಃ ಪರಿಣಮನ ಮಾಡುತ್ತದೆ, ಮತ್ತು ದ್ರವ್ಯವು ಸ್ವತಃ ವರ್ತಮಾನ ಅವಸ್ಥೆಯ ಅಪೇಕ್ಷೆಯಿಂದ ಪರ್ಯಾಯ ಎಂದು ಕರೆಯಲ್ಪಡುತ್ತದೆ. ಇದರಿಂದ ಈ ಮಾತು ಸಿದ್ಧವಾಯಿತು.

ಹೇಗೆ ಮಣ್ಣಿನ ಪಿಂಡವು ನಾಶವಾಗಿ ಮಣ್ಣಿನ ಕೊಡ ರೂಪವಾಗುವದರಿಂದ ಮಣ್ಣುರೂಪ ದ್ರವ್ಯದ ಒಂದು ಪರ್ಯಾಯದ ನಾಶವಾಯಿತು ಮತ್ತು ಹೊಸ ಪರ್ಯಾಯದ ಉತ್ಪಾದವಾಯಿತು. ಆದರೆ ಎರಡರಲ್ಲಿ ಮಣ್ಣುತನವಂತೂ ಸ್ಥಿರವೇ ಇದೆ. ನಿತ್ಯವೇ ಇದೆ. ಈ ಅಪೇಕ್ಷೆಯಿಂದ ಕೂಟಸ್ಥವಿದೆ. ಅಪರಿಣಾಮಿ ಇದೆ. ಮಣ್ಣುರೂಪ ದ್ರವ್ಯವು ಯಾವುದೇ ಬೇರೆ ದ್ರವ್ಯರೂಪ ಪರಿಣಮನ ಮಾಡಲಿಲ್ಲ. ಆದ್ದರಿಂದ ಅದನ್ನು ಈ ಅಪೇಕ್ಷೆಯಿಂದಲೂ ಸಹ ಕೂಟಸ್ಥ ಅಥವಾ ಅಪರಿಣಾಮಿ ಎಂದು ಹೇಳಬಹುದಾಗಿದೆ. ಮತ್ತು ಎರಡನೇ ಆ ಪಿಂಡ ಮತ್ತು ಕೊಡದಲ್ಲಿ ಮಣ್ಣುತನ ಹೇಗಿದೆಯೋ ಹಾಗೆಯೇ ಇದೆ. ಈ ಅಪೇಕ್ಷೆಯಿಂದ ಅದನ್ನು ಕಥಂಚಿತ್ ಕೂಟಸ್ಥ ಅಥವಾ ಕಥಂಚಿತ್ ಅಪರಿಣಾಮಿ ಎಂದು ಹೇಳಲಾಗುತ್ತದೆ. ಏಕಾಂತದಿಂದ ಅಪರಿಣಾಮಿ ಎಂದು ಹೇಳಿದ ಮೇಲಂತೂ ಅಲ್ಲಿ ಒಂದು ಭಾಗ ಅಪರಿಣಾಮಿ ಮತ್ತು ಇನ್ನೊಂದು ಭಾಗ ಪರಿಣಾಮಿ ಹೀಗೆ ಮನ್ನಿಸುವದರಿಂದ ದ್ರವ್ಯದ್ದೇ ನಾಶವಾಗುವದು. ಆ ದ್ರವ್ಯವು ಕರಗಿಯೂ ಇಲ್ಲ. ಆದ್ದರಿಂದ ಅದರ ಕೆಲವು ಕಾರ್ಯಗಳನ್ನೇ ಮನ್ನಿಸದಿದ್ದರೆ ದ್ರವ್ಯತನದ ನಾಶವಾಗುವದು. ಈ ಪ್ರಕಾರ ಉಪಾದಾನದಿಂದ ಕಾರ್ಯವನ್ನು ಬೇರೆ ಎಂದು ಮನ್ನಿಸುವದರಿಂದ ಆಕಾಶದ ಹೂವಿನಂತೆ ದ್ರವ್ಯದ ಅಸ್ತಿತ್ವ ಉಳಿಯುವದಿಲ್ಲ ಮತ್ತು ಅದರ ಕಾರ್ಯದ್ದೂ ಸಹ ಅಸ್ತಿತ್ವ ಇರುವದಿಲ್ಲ.

ಆದ್ದರಿಂದ ಇದೇ ಪ್ರಕಾರ ತಿಳಿಯಬೇಕು. ಉಪಾದಾನವು ಸ್ವತಃ ಕಾರ್ಯ ರೂಪ ಪರಿಣಮಿತವಾಗುತ್ತದೆ ಮತ್ತು ಈ ಕಾರಣದಿಂದ ಆ ಪರಿಣಾಮದಲ್ಲಿ ಪೂರ್ಣ ಉಪಾದಾನವು ಉಪಸ್ಥಿತ ಇದೆ. ಪರಿಣಾಮವು (ಕಾರ್ಯ) ಸ್ವತಃ ಉಪಾದಾನದ್ದೇ ಆಗಿದೆ. ಅಂದರೆ ಯಾವ ಪರ್ಯಾಯವಿದೆ ಅದು ದ್ರವ್ಯದಿಂದಲೇ ಮಾಡಿದ್ದಾಗಿದೆ. ಏಕೆಂದರೆ ಆ ದ್ರವ್ಯವು ವರ್ತಮಾನವಿದೆ. ಆದ್ದರಿಂದಲೇ ಅದನ್ನು ದ್ರವ್ಯದೃಷ್ಟಿಯಿಂದ ನೋಡಿದ ಬಳಿಕ ಅಲ್ಲಿ ಕೇವಲ ದ್ರವ್ಯವೇ ತಿಳಿದುಬರುತ್ತದೆ. ತ್ರಿಕಾಲಿ ಧ್ರುವವೇ ತಿಳಿದುಬರುತ್ತದೆ. ಅಲ್ಲಿ ಅದರ ವರ್ತಮಾನ ಅವಸ್ಥೆ (ಪರ್ಯಾಯ)ಯು ಗೌಣವಾಗುತ್ತದೆ ಮತ್ತು ಅದನ್ನೇ ದ್ರವ್ಯದೃಷ್ಟಿ ಎಂದು ಹೇಳಲಾಗುತ್ತದೆ. ಯಾವಾಗ ಪರ್ಯಾಯ ದೃಷ್ಟಿಯಲ್ಲಿ ಅದೇ ದ್ರವ್ಯವನ್ನು ಅದರ ವರ್ತಮಾನ ಅವಸ್ಥೆಯಿಂದ ಅಂದರೆ ಪರ್ಯಾಯದಿಂದಲೇ ನೋಡಿದ ಮೇಲೆ

ದ್ರವ್ಯವು ಗೌಣವಾಗುತ್ತದೆ. ದ್ರವ್ಯವು ತಿಳಿದು ಬರುವದಿಲ್ಲ. ಪೂರ್ಣ ದ್ರವ್ಯವು ಕೇವಲ ಪರ್ಯಾಯ ರೂಪವೇ ಭಾಸವಾಗುತ್ತದೆ. ಹೀಗೆಯೇ ಮುಖ್ಯ ಗೌಣದ ವ್ಯವಸ್ಥೆಯಿದೆ. ಇದರ ಹೊರತಾಗಿಯೂ ಎರಡನೆಯದರ ಯಾವದೇ ಅಭಾವದ ವ್ಯವಸ್ಥೆಯೇ ಇರುವದಿಲ್ಲ. ಏಕೆಂದರೆ ಅಖಂಡ ಅಭೇದ ದ್ರವ್ಯದಲ್ಲಿ ಯಾವುದರದೇ ಸಹ ಅಂಶದ ಅಭಾವ ಬಯಸಿದ ಮೇಲೆ ಪೂರ್ಣ ದ್ರವ್ಯದ್ದೇ ಅಭಾವ ಅಂದರೆ ಲೋಪವಾಗುತ್ತದೆ. ಆದ್ದರಿಂದ ಅಭಾವ ಅಂದರೆ ಮುಖ್ಯ ಗೌಣ ಬೇರೆ ಏನೂ ಇಲ್ಲ.

**ಶ್ಲೋಕ ೮೯ :** ಹೇಗೆ ವಸ್ತು ಸ್ವತಃ ಸಿದ್ಧವಿದೆ, ಅದೇ ಪ್ರಕಾರ ಅದು ಸ್ವತಃ ಪರಿಣಮನಶೀಲವೂ ಸಹ ಇರುತ್ತದೆ. ಆದ್ದರಿಂದ ಇಲ್ಲಿ ಅದು ಸತ್‌ನಿಯಮದಿಂದ ಉತ್ಪಾದ, ವ್ಯಯ ಮತ್ತು ಧ್ರೌವ್ಯ ಸ್ವರೂಪವಿದೆ.

**ಭಾವಾರ್ಥ :** ಜೈನದರ್ಶನದಲ್ಲಿ ಹೇಗೆ ವಸ್ತುವಿನ ಸದ್‌ಭಾವವು ಸ್ವತಃ ಸಿದ್ಧ ಎಂದು ಮನ್ನಿಸಲಾಗಿದೆ. (ಅಂದರೆ ಆ ವಸ್ತುವಿನದು ಎಂದೂ ನಾಶವಾಗುವದಿಲ್ಲ ಮತ್ತು ಈ ಅಪೇಕ್ಷೆಯಿಂದ ಅದು ಧ್ರುವ ಇದೆ ನಿತ್ಯವಿದೆ.) ಹಾಗೆಯೇ ಅದನ್ನು ಪರಿಣಮನಶೀಲ ಎಂದೂ ಸಹ ಮನ್ನಿಸಲಾಗಿದೆ. (ದ್ರವ್ಯವು ಸ್ವತಃ ಪರ್ಯಾಯ ರೂಪವಾಗಿ ಪರಿಣಮಿಸುತ್ತದೆ.) ಆದ್ದರಿಂದ ಸತ್‌ಸ್ವತಃ ನಿಯಮದಿಂದ ಉತ್ಪಾದ ಸ್ಥಿತಿ ಭಂಗಮಯ (ಮಣ್ಣು ಸ್ವಯಂ ಪಿಂಡತನವನ್ನು ಬಿಟ್ಟು ಕೊಡ ರೂಪವಾಗುತ್ತದೆ.) ಅಂದರೆ ಸತ್ ಸ್ವತಃ ಸಿದ್ಧವಾಗುವದರಿಂದ ಧ್ರೌವ್ಯಮಯ ಮತ್ತು ಪರಿಣಮನಶೀಲ ಆಗುವದರಿಂದ ಉತ್ಪಾದ-ವ್ಯಯಮಯವಿದೆ. ಈ ಪ್ರಕಾರ ಪ್ರತಿಯೊಂದು ವಸ್ತುವು ತ್ರಿತಿಯಾತ್ಮಕ (ಉತ್ಪಾದ-ವ್ಯಯ-ಧ್ರೌವ್ಯಮಯ) ಆಗಿರುವದು.

ಒಂದು ವೇಳೆ ದ್ರವ್ಯವನ್ನೇ ಪರಿಣಾಮ ರೂಪ ಮನ್ನಿಸಿದರೆ ಪರಿಣಾಮದ ನಾಶದಿಂದ ದ್ರವ್ಯದ್ದೂ ಸಹ ನಾಶವಾಗುವದು. ಹೀಗಂತೂ ಇಲ್ಲ. ಏಕೆಂದರೆ ಉತ್ಪಾದ ವ್ಯಯಗಳು ದ್ರವ್ಯದ್ದಲ್ಲ. ದ್ರವ್ಯದ ಅವಸ್ಥೆಯ (ಪರ್ಯಾಯ)ದ್ದಿವೆ. ಅದು ದ್ರವ್ಯವೇ ಸ್ವತಃ ಪಿಂಡತನವನ್ನು ಬಿಟ್ಟು ಕೊಡ ರೂಪ ಧರಿಸುತ್ತದೆ. ಮತ್ತು ಅಲ್ಲಿ ಪಿಂಡದ ವ್ಯಯ ಮತ್ತು ಕೊಡದ ಉತ್ಪಾದ ಎಂದು ಹೇಳಲಾಗುತ್ತದೆ. ಆದರೆ ಆ ಎರಡರಲ್ಲೂ ಇದ್ದಂಥ ಮಣ್ಣುತನದ ನಾಶವು ಯಾವ ಕಾಲದಲ್ಲೂ ಆಗುವದಿಲ್ಲ ಮತ್ತು ಆದ್ದರಿಂದ ಅದನ್ನು ತ್ರಿಕಾಲ ಧ್ರುವ ಅಥವಾ ಅಪರಿಣಾಮಿ ಎಂದು ಹೇಳಲಾಗುತ್ತದೆ. ಬೇರೆ ಯಾವ ಪ್ರಕಾರದಿಂದಲೂ ಇಲ್ಲ.

**ಶ್ಲೋಕ ೯೦ :** ಸತ್ ಸಹ ಪರಿಣಾಮದ ಹೊರತು ಉತ್ಪಾದ ಸ್ಥಿತಿ, ಭಂಗರೂಪ ಆಗಲಾರದು. ಏಕೆಂದರೆ ಹೀಗೆ ಮನ್ನಿಸಿದರೆ ಜಗತ್ತಿನಲ್ಲಿ ಅಸತ್‌ದ ಜನ್ಮ (ಆಕಾಶದ ಹೂವಿನ ಜನ್ಮ) ಮತ್ತು ಸತ್‌ದ ನಾಶ (ಗಿಡದ ಹೂಗಳ ನಾಶ)ವನ್ನು ತಡೆಯಲು ಕಷ್ಟವಾಗುವದು.

**ಭಾವಾರ್ಥ :** ಸತ್ ಕೇವಲ ಸ್ವತಃ ಸಿದ್ಧ ಮತ್ತು ಪರಿಣಮನಶೀಲವಾಗುವ ಕಾರಣವೇ ಉತ್ಪಾದ, ಸ್ಥಿತಿ ಹಾಗೂ ಭಂಗಮಯ ಎಂದು ಮನ್ನಿಸುವಲ್ಲಿ ಬಂದಿದೆ.

ಅಂದರೆ ಈ ಮೂರೂ ಅವಸ್ಥೆಗಳು ಇರುತ್ತವೆ. ಏಕೆಂದರೆ ಪ್ರತಿ ಸಮಯ ಸತ್‌ದ ಅವಸ್ಥೆಗಳಲ್ಲಿ ಉತ್ಪಾದ, ವ್ಯಯ, ಧ್ರೌವ್ಯಗಳು ಆಗುತ್ತವೆ. ಆದರೆ ಕೇವಲ ಸತ್‌ದಲ್ಲಿ ಇಲ್ಲ. ಆದ್ದರಿಂದ (ಭೇದನಯದಿಂದ) ಉತ್ಪಾದ, ವ್ಯಯ, ಧ್ರೌವ್ಯವನ್ನು ಸತ್‌ದ ಪರಿಣಾಮವೆಂದು ಹೇಳುವಲ್ಲಿ ಬರುತ್ತದೆ. ಒಂದು ವೇಳೆ ಹೀಗೆ ಮನ್ನಿಸದೇ ಸತ್‌ದಲ್ಲಿಯೇ ಉತ್ಪಾದ, ವ್ಯಯ ಮತ್ತು ಧ್ರೌವ್ಯಗಳನ್ನು ಮನ್ನಿಸುವದರಲ್ಲಿ ಬಂದರೆ ಅಸತ್‌ದ ಉತ್ಪತ್ತಿ ಹಾಗೂ ಸತ್‌ದ ವಿನಾಶವನ್ನು ತಡೆಯಲು ಕಷ್ಟವೆಂದು ಮನ್ನಿಸಬೇಕಾಗುವದು.

**ಶ್ಲೋಕ ೧೦೮ :** ಇದು ಜೈನಧರ್ಮದ ಸಿದ್ಧಾಂತವಿದೆ. ಏನಂದರೆ ಹೇಗೆ ದ್ರವ್ಯವು ನಿತ್ಯ ಅನಿತ್ಯಾತ್ಮಕವಿದೆ, ಅದೇ ಪ್ರಕಾರ ಗುಣವು ಸಹ ತನ್ನ ದ್ರವ್ಯದಿಂದ ಅಭಿನ್ನವಾಗಿರುವ ಕಾರಣ ನಿತ್ಯ ಅನಿತ್ಯಾತ್ಮಕ ಇದೆ. ಹೀಗೆ ತಿಳಿಯಬೇಕು. ದ್ರವ್ಯದೃಷ್ಟಿಯಿಂದ ಆ ಗುಣಗಳು ಪರಸ್ಪರದಲ್ಲಿ ಹಾಗೂ ದ್ರವ್ಯದಿಂದ ಅಭಿನ್ನವೇ ಇವೆ.

**ಶ್ಲೋಕ ೧೧೧ :** ಮಾವಿನಹಣ್ಣಿನಲ್ಲಿಯ ಗುಣವು ಪರಿಣಮನ ಮಾಡುತ್ತ ಹಸಿರಿನಿಂದ ಹಳದಿಯಾಗುತ್ತದೆ. ಏನು ಅದರ ಬಣ್ಣವು ನಾಶವಾಯಿತೇ ? ಆಗಿಲ್ಲ, ಬದಲಾಯಿತು. ಆದ್ದರಿಂದ ಬಣ್ಣವು ನಿತ್ಯವಿದೆ. ಜೈನಸಿದ್ಧಾಂತದ ಪ್ರಕಾರ ತ್ರಿಕಾಲ ಧ್ರುವ ಇದೆ.

**ಭಾವಾರ್ಥ :** ಸಾಮಾನ್ಯ ರೂಪದಿಂದ ಪುದ್ಗಲದ ವರ್ಣತನ ಇದ್ದೇ ಇದೆ. ಅದು (ವರ್ಣ ಸಾಮಾನ್ಯತನ) ಎಂದೂ ನಾಶವಾಗುವದಿಲ್ಲ. ವರ್ಣವು ಸಾಮಾನ್ಯ ಅಪೇಕ್ಷೆಯಿಂದ ನಿತ್ಯವೇ ಇದೆ. ಸಾಮಾನ್ಯ ಅಪೇಕ್ಷೆಯಿಂದ ಅದನ್ನು ಕೂಟಸ್ಥ ಅಥವಾ ಅಪರಿಣಾಮಿ ಎಂದು ಹೇಳಬಹುದಾಗಿದೆ. ಬೇರೆ ಮನ್ನಿಸಿದರೆ ಜೈನ ಸಿದ್ಧಾಂತದ ವಿರುದ್ಧ ಅಂದರೆ ಬೇರೆ ಮತೀಯ ಮಿಥ್ಯಾತ್ವರೂಪ ಪರಿಣಾಮ ಬರುವದು. ಅದು ಅನಂತ ಸಂಸಾರದ ಕಾರಣವಾಗುವದು.

**ಶ್ಲೋಕ ೧೧೨ :** ಹೇಗೆ ದ್ರವ್ಯವು, ಪರಿಣಮನಶೀಲವಿದೆ, ಹಾಗೆಯೇ ದ್ರವ್ಯದಿಂದ ಅಭಿನ್ನ ಇರುವಂಥ ಗುಣವೂ ಸಹ ಪರಿಣಮನಶೀಲ ಇರುತ್ತದೆ ಮತ್ತು ಅವು ಪರಿಣಮನಶೀಲ ಆಗುವದರಿಂದ ಅವುಗಳಲ್ಲಿ ಪ್ರತಿ ಸಮಯ ಉತ್ಪಾದ, ವ್ಯಯ (ಯಾವದಾದರೂ ಒಂದು ಕಾರ್ಯ)ವೂ ಸಹ ಆಗೇ ಆಗುತ್ತದೆ ಮತ್ತು ಈ ಯುಕ್ತಿಯಿಂದ ಗುಣಗಳಲ್ಲಿ ಉತ್ಪಾದ, ವ್ಯಯ ಆಗುವದರಿಂದ ಅದನ್ನು ಸಹ ಒಮ್ಮೊಮ್ಮೆ ಅನಿತ್ಯ ಎಂದು ಹೇಳುವಲ್ಲಿ ಬರುತ್ತದೆ.

**ಶ್ಲೋಕ ೧೧೩ :** ಹೇಗೆ ಜ್ಞಾನ ಹೆಸರಿನ ಗುಣವು ಸಾಮಾನ್ಯರೂಪದಿಂದ ನಿತ್ಯ ಇದೆ ಹಾಗೂ ಅದೇ ಪ್ರಕಾರ ಕೊಡವನ್ನು ಬಿಟ್ಟು ವಸ್ತ್ರವನ್ನು ತಿಳಿದ ಮೇಲೆ, ಜ್ಞಾನವು ನಾಶ ಮತ್ತು ಉತ್ಪನ್ನ ರೂಪವೂ ಆಯಿತು. ಅಂದರೆ ನಿತ್ಯ ಅನಿತ್ಯವು ಇದೆ. ಯಾವ ಉಪಾದಾನ ಇದೆ ಅಂದರೆ ಯಾವ ದ್ರವ್ಯವು ಅಥವಾ ಗುಣವಿದೆ ಅದು

ಸ್ವತಃ ಕಾರ್ಯರೂಪ ಪರಿಣಮನ ಮಾಡುತ್ತದೆ ಮತ್ತು ಆ ಕಾರ್ಯದ ಅಪೇಕ್ಷೆಯಿಂದ ಅದು ಅನಿತ್ಯ ಇದ್ದರೂ ಉಪಾದಾನದ ಅಪೇಕ್ಷೆಯಿಂದ ನಿತ್ಯ ಇದೆ. ನಿತ್ಯ-ಅನಿತ್ಯದ ಸ್ವರೂಪ ಹೀಗಿದೆ - ಒಂದು ವೇಳೆ ಯಾರಾದರೂ ಈ ಸ್ವರೂಪದಿಂದ ವಿಪರೀತ ಧಾರಣಾಸಹಿತ ಇದ್ದು ಸ್ವಂತಕ್ಕೆ ಸಮ್ಯಗ್ದೃಷ್ಟಿ ಎಂದು ತಿಳಿದುಕೊಳ್ಳುತ್ತಾರೆ, ಅವರು ನಿಯಮದಿಂದ ಭ್ರಮೆಯಲ್ಲಿಯೇ ಇದ್ದಾರೆ. ಏಕೆಂದರೆ ಭ್ರಮೆಯೂ ಸಹ ಶಾಂತಿ ಮತ್ತು ಆನಂದ ವೇದನದಲ್ಲಿ ಬರುತ್ತದೆ. ಒಂದು ವೇಳೆ ಅನಂತ ಸಂಸಾರದಿಂದ ಉಳಿಯಬೇಕಾದರೆ ತಾವು ತಮ್ಮ ಧಾರಣೆಯನ್ನು ಸಮ್ಯಕ್‌ರೂಪವಾಗಿ ಮಾಡಿಕೊಳ್ಳಿ ಮತ್ತು ಸಂಸಾರಿ ಜೀವವು ಪರ್ಯಾಯಾರ್ಥಿಕ ನಯದಿಂದ ಅವಶ್ಯವಾಗಿ ಅಶುದ್ಧವಿದೆ. ಆದರೆ ಅದೇ ಸಂಸಾರಿ ಜೀವವು ದ್ರವ್ಯಾರ್ಥಿಕ ನಯದಿಂದ ಅವಶ್ಯವಾಗಿ ಪರಮಶುದ್ಧವಿದೆ. ಅಂದರೆ ತ್ರಿಕಾಲಶುದ್ಧವಿದೆ. ಹೀಗೆಯೇ ಇದೆ. ವಸ್ತು ಸ್ವರೂಪವು ಜಿನಶಾಸನದ ಯಾವ ಏಕಾಂತ ನಯಗಳಿಂದ ತಿಳಿಸಲಾಗುವದಿಲ್ಲ. ದ್ರವ್ಯಾರ್ಥಿಕ ನಯದಿಂದ ಯಾವದೇ ಆತ್ಮನಲ್ಲಿ ರಾಗಾದಿಗಳ ಅಸ್ತಿತ್ವವು ಇರುವದಿಲ್ಲ. ಆದರೆ ಪರ್ಯಾಯಾರ್ಥಿಕ ನಯದಿಂದ ಅಜ್ಞಾನಿ ಆತ್ಮನು ನಿಯಮದಿಂದ ರಾಗಾದಿರೂಪ ಪರಿಣಮಿತ ಇರುತ್ತಾನೆ. ಜಿನಶಾಸನದ ಅನೇಕಾಂತವು ಹೀಗೆಯೇ ಇದೆ. ಯಾರಿಗೆ ಈ ಅನೇಕಾಂತಮಯ ಸ್ವರೂಪವು ಯಥಾರ್ಥ ರೂಪದಿಂದ ತಿಳಿವಳಿಕೆಯಲ್ಲಿ ಬರುವದಿಲ್ಲ. ಅವರು ತಮಗೆ ತಾವೇ ಜಿನಶಾಸನದಿಂದ ಹೊರಗೆನೇ ಇದ್ದೇನೆಂದು ತಿಳಿಯಬೇಕು.

**ಶ್ಲೋಕ ೧೧೭ :** ಗುಣಗಳು ನಿತ್ಯ ಇವೆ. ಆದರೂ ಸಹ ಅವು ನಿಶ್ಚಯದಿಂದ ತಮ್ಮ ಸ್ವಭಾವದಿಂದಲೇ ಪ್ರತಿಯೊಂದು ಸಮಯ ಪರಿಣಮನ ಮಾಡುತ್ತಿರುತ್ತವೆ ಮತ್ತು ಆ ಪರಿಣಮನವೂ ಸಹ ಆ ಗುಣಗಳದೇ ಅವಸ್ಥೆ ಇದೆ. ಆದರೆ ಗುಣಗಳ ಸತ್ತೆಯಿಂದ ಅವುಗಳ ಸತ್ತೆಯು ಎಲ್ಲಿಯೂ ಬೇರೆ ಇರುವದಿಲ್ಲ.

ಆದ್ದರಿಂದ ಗುಣಗಳದು ಪ್ರತಿಸಮಯ ಉಂಟಾಗುವಂಥ ಅವಸ್ಥೆಯ ಹೆಸರು ಪರ್ಯಾಯವಿದೆ. ಪರ್ಯಾಯಗಳ ಸತ್ತಾ (ಸತ್) ಕಥನವು ಗುಣಗಳಿಂದ ಭಿನ್ನ ಇರುವದಿಲ್ಲ. ಆದ್ದರಿಂದ ದ್ರವ್ಯದ ಪ್ರಕಾರ ಆ ಗುಣಗಳು ಸಹ ಗುಣದ ದೃಷ್ಟಿಯಿಂದ ನಿತ್ಯ ಹಾಗೂ ತಮ್ಮ ಪರ್ಯಾಯ ರೂಪ ಅವಸ್ಥೆಗಳಿಂದ ಉತ್ಪನ್ನ ಹಾಗೂ ನಷ್ಟವಾಗುವ ಕಾರಣದಿಂದ ಅನಿತ್ಯವೆಂದು ಹೇಳುವಲ್ಲಿ ಬರುತ್ತವೆ. ಒಂದು ವೇಳೆ ಯಾವದೋ ದ್ರವ್ಯ ಮತ್ತು ಪರ್ಯಾಯದ ಪ್ರದೇಶಗಳು ಭಿನ್ನವೆಂದು ಮನ್ನಿಸಿದರೆ ಅವನು ತನ್ನ ಭಾವನೆಯ ಅಪೇಕ್ಷೆಯಿಂದ ಹೇಳುತ್ತಾನೆ. ಆದರೆ ನಿಜವಾಗಿ ಪ್ರದೇಶ ಭೇದ ಇರುವದಿಲ್ಲ. ಆದ್ದರಿಂದ ಇಂತಹ ಏಕಾಂತ ಧರಿಸಿದ ಜೀವನಿಗೆ ಮಿಥ್ಯಾದೃಷ್ಟಿ ಅನ್ನುತ್ತಾರೆ. ಇಂತಹ ಮಾತುಗಳು ಅನೇಕ ಜನಗಳ ಅಧಃಪತನದ ಕಾರಣವಾಗುತ್ತವೆ. ಆದ್ದರಿಂದ ಇಂತಹ ಏಕಾಂತ ಪ್ರರೂಪಣೆಯನ್ನು ಬಯಸುವ ಮಿಥ್ಯಾದೃಷ್ಟಿಗಳಿಂದ ದೂರ ಇರಬೇಕು. ಇಲ್ಲವಾದರೆ ತಾವೂ ಸಹ ಸ್ವತಃ ಅನಂತ ಸಂಸಾರಿ ಮಿಥ್ಯಾದೃಷ್ಟಿ ರೂಪರಾಗಿ ಅನಂತ ದುಃಖದ ಮನೆಯಾಗುತ್ತೀರಿ.

ಏಕಾಂತವನ್ನು ಆಗ್ರಹಿಸುವಂತಹ ಜನರಿಂದ ನಮ್ಮ ಆಗ್ರಹವಿದೆ. ಏನಂದರೆ ತಾವು ಯಾವುದೇ ವಿಧಾನದ ಅಪೇಕ್ಷೆಯನ್ನು ತಿಳಿದುಕೊಳ್ಳದೇ ಅದನ್ನು ಏಕಾಂತದಿಂದ ಗ್ರಹಣ ಮಾಡಿ, ಏಕಾಂತದ ಆಗ್ರಹ ಇಟ್ಟುಕೊಂಡು ಒಂದು ವೇಳೆ ಜಿನಶಾಸನದ ಏಳಿಗೆಯನ್ನು ಬಯಸಿದರೆ ಅದು ತಮ್ಮ ಮಹಾನ್ ಮರೆವು ಇದೆ. ಅದಂತೂ ಜಿನಶಾಸನದ ಅಧಃಪತನಕ್ಕೆ ನಿಮಿತ್ತವಾಗುವದು ಮತ್ತು ಎಷ್ಟೋ ಜೀವಗಳ ಅಧಃಪತನದ ಕಾರಣವೂ ಆಗುವದು. ಈ ಎಲ್ಲ ಅಧಃಪತನದ ಜವಾಬ್ದಾರಿಯು ಇಂಥ ಏಕಾಂತ ರೂಪಣಾ ಮತ್ತು ಏಕಾಂತದ ಆಗ್ರಹ ಮಾಡುವವರದೇ ಇದೆ. ಆದ್ದರಿಂದ ಅವರ ದಶೆಯ ವಿಷಯದಲ್ಲಿ ವಿಚಾರ ಮಾಡಿ ನಮಗೆ ಬಹಳ ಕರುಣೆ ಉತ್ಪನ್ನವಾಗುತ್ತದೆ ಮತ್ತು ಇದೇ ಕಾರಣದಿಂದ ನಮಗೆ ಇಲ್ಲಿ ಇಷ್ಟೊಂದು ಹೆಚ್ಚು ಸ್ಪಷ್ಟೀಕರಣ ಮಾಡುವ ಅವಶ್ಯಕತೆ ಉಂಟಾಯಿತು.

**ಶ್ಲೋಕ ೧೧೯ :** ಸತ್‌ದ ಸಂಪೂರ್ಣ ಅವಸ್ಥೆಗಳೇ ಮೇಲಿಂದ ಮೇಲೆ ಪ್ರತಿಪಾದಿತವಾಗಿ ವಸ್ತುವೆಂದು ಹೇಳುತ್ತಾರೆ. (ಅಂದರೆ ಸಂಪೂರ್ಣ ಪರ್ಯಾಯಗಳ ಸಮೂಹವೇ ವಸ್ತುವಿದೆ, ದ್ರವ್ಯವಿದೆ.) ಆದರೆ ವಸ್ತು ತನ್ನ ಅವಸ್ಥೆಗಳಿಂದ ಎಲ್ಲಿಯೂ ಭಿನ್ನ ಇರುವದಿಲ್ಲ. ಆದ್ದರಿಂದ ಹೇಗೆ ಗುಣಮಯ ದ್ರವ್ಯವಾಗಿರುವದರಿಂದ ದ್ರವ್ಯ ಮತ್ತು ಗುಣಗಳಲ್ಲಿ ಸ್ವರೂಪ ಭೇದ ಆಗುವದಿಲ್ಲ, ಅದೇ ಪ್ರಕಾರ ದ್ರವ್ಯದ ಅವಸ್ಥೆಗಳೇ ಗುಣದ ಅವಸ್ಥೆಗಳೆಂದು ಹೇಳುತ್ತಾರೆ. ಆದ್ದರಿಂದ ದ್ರವ್ಯವು ಸಹ ಅದರ ಪರ್ಯಾಯಗಳಿಂದ ಭಿನ್ನ ಇರುವದಿಲ್ಲ. (ಪ್ರದೇಶ ಭೇದ ಇರುವದಿಲ್ಲ.) ಆದ್ದರಿಂದ ಗುಣವನ್ನು ಅಪರಿಣಾಮಿ ಹಾಗೂ ಅವಸ್ಥಾಂತರಗಳನ್ನು ಪರ್ಯಾಯವೆಂದು ಮನ್ನಿಸಿ ಈ ಎರಡರ ಯಾವದೇ ಮಧ್ಯವರ್ತಿಯನ್ನು ಬೇರೆ ದ್ರವ್ಯವೆಂದು ಮನ್ನಿಸುವದು ಸರಿಯಲ್ಲ.

**ಶ್ಲೋಕ ೧೨೩ :** ಈ ಮಣ್ಣು ಪಾತ್ರೆಯ ರೂಪವಾದ ಬಳಿಕ ಅದರ ಮಣ್ಣುತನದ್ದು ನಾಶವಾಗುತ್ತದೆಯೇ ? ಒಂದು ವೇಳೆ ಮಣ್ಣುತನವು ನಾಶವಾಗದಿದ್ದರೆ ಅದು ನಿತ್ಯರೂಪ ಏಕೆ ಆಗುವದಿಲ್ಲ ? ಅಂದರೆ ಈ ಅಪೇಕ್ಷೆಯಿಂದ ದ್ರವ್ಯ ನಿತ್ಯವಿದೆ, ಧ್ರುವ ಇದೆ.

**ಭಾವಾರ್ಥ :** ಹಸಿಮಣ್ಣನ್ನು ಸುಟ್ಟ ಬಳಿಕ ಮೊದಲಿನ ಮಣ್ಣಿನ ಸಂಬಂಧಿ (ಎಲ್ಲ) ಗುಣಗಳು ನಾಶವಾಗಿ ಹೊಸ ಪಕ್ವ ಗುಣಗಳು ಹುಟ್ಟುತ್ತವೆ. ಈ ಪ್ರಕಾರ ಮನ್ನಿಸುವವನ ಸಲುವಾಗಿ ಈ ಉತ್ತರವು ಸರಿ ಇದೆ. ಹೇಗೆಂದರೆ ಮಣ್ಣಿನ ಕೊಡ ಮುಂತಾದ ಅವಸ್ಥೆಯಾದ ಬಳಿಕ ನಾಶವಾಗುವದಿಲ್ಲವಾದರೆ ಆ ಮಣ್ಣುತನವು ನಿತ್ಯ ಅಲ್ಲವೇ ? ಅಂದರೆ ನಿತ್ಯವೇ ಇದೆ. ಈ ಅಪೇಕ್ಷೆಯಿಂದ ದ್ರವ್ಯವನ್ನು ನಿತ್ಯ ಧ್ರುವವೆಂದು ಹೇಳಲಾಗಿದೆ.

**ಶ್ಲೋಕ ೧೩೫ :** ನಿಶ್ಚಯದಿಂದ ಗುಣವು ಸ್ವಯಂ ಸಿದ್ಧವಿದೆ ಹಾಗೂ ಪರಿಣಾಮಿ ಸಹ ಇದೆ. ಆದ್ದರಿಂದ ಅದು ನಿತ್ಯ ಮತ್ತು ಅನಿತ್ಯ ರೂಪವಾಗುವದರಿಂದ ಒಳ್ಳೆ ಪ್ರಕಾರ ಉತ್ಪಾದ ವ್ಯಯ ಮತ್ತು ಧ್ರೌವ್ಯಾತ್ಮಕವು ಸಹ ಇರುತ್ತದೆ.

ಅನಾದಿ ಸಂತಾನ ರೂಪದಿಂದ ಯಾವ ದ್ರವ್ಯದ ಜೊತೆಗೆ ಅನುಗಮನ ಮಾಡುತ್ತದೆ. ಅದು ಗುಣವಿದೆ. ಇಲ್ಲಿ 'ಅನಾದಿ' ಈ ವಿಶೇಷಣದಿಂದ ಸ್ವಯಂಸಿದ್ಧ ಸಂತಾನರೂಪ ಈ ವಿಶೇಷಣದಿಂದ ಪರಿಣಮನಶೀಲ ಹಾಗೂ 'ಅನುಗತಾರ್ಥ' ಈ ವಿಶೇಷತೆಯಿಂದ ನಿರಂತರ ದ್ರವ್ಯದ ಜೊತೆಗೆ ಇರುವಂಥದ್ದೆಂದು ಹೀಗೆ ಅರ್ಥ ಸಿದ್ಧವಾಗುತ್ತದೆ. ಸಾರಾಂಶ ಏನೆಂದರೆ ಪ್ರತಿಯೊಂದು ದ್ರವ್ಯದ ಗುಣಗಳು ಸ್ವಯಂ ಸಿದ್ಧ ಮತ್ತು ನಿರಂತರ ದ್ರವ್ಯದ ಜೊತೆಗೆ ಇರುವಂಥದ್ದಿದೆ. ಆದ್ದರಿಂದ ಅದನ್ನು ನಿತ್ಯ ಅರ್ಥಾತ್ ಧ್ರೌವ್ಯಾತ್ಮಕವೆಂದು ಹೇಳಲಾಗುತ್ತದೆ ಮತ್ತು ಪ್ರತಿ ಸಮಯ ಪರಿಣಮನಶೀಲ ಇರುತ್ತವೆ. ಆದ್ದರಿಂದ ಅದನ್ನು ಅನಿತ್ಯ ಮತ್ತು ಉತ್ಪಾದ ವ್ಯಯಾತ್ಮಕವೆಂದೂ ಸಹ ಹೇಳಲಾಗುತ್ತಿದೆ. ಈ ಪ್ರಕಾರ ಸಂಪೂರ್ಣ ಗುಣಗಳು ಉತ್ಪಾದ-ವ್ಯಯ ಮತ್ತು ಧ್ರೌವ್ಯಾತ್ಮಕವಿದೆ. ಜೈನಸಿದ್ಧಾಂತದ ವಸ್ತು ವ್ಯವಸ್ಥೆಯು ಹೀಗೆಯೇ ಇದೆ.

**ಶ್ಲೋಕ ೧೭೮ :** ದ್ರವ್ಯವು ಸ್ವತಃ ಸಿದ್ಧವಿರುವದರಿಂದ ನಿತ್ಯ-ಅನಾದಿ-ಅನಂತ ಇದೆ. ಅದರ ಅನುಸಾರ ಅದು ಪರಿಣಮನಶೀಲ ಆಗಿರುವದರಿಂದ ದೀಪದ ಶಿಕೆಯಂತೆ ಪ್ರತಿ ಸಮಯ ಪರಿಣಮನ ಸಹ ಮಾಡುತ್ತಲೇ ಇರುತ್ತದೆ. ಆದ್ದರಿಂದ ಅದು ಅನಿತ್ಯವೂ ಸಹ ಇರುತ್ತದೆ ಮತ್ತು ಅದರ ಪರಿಣಮನವು ಮೊದಮೊದಲಿನ ಭಾವದ ವಿನಾಶಪೂರ್ವಕ (ಮಣ್ಣಿನ ಪಿಂಡದ ವಿನಾಶಪೂರ್ವಕ) ಹಾಗೂ ಮುಂದುಮುಂದಿನ ಭಾವದ ಉತ್ಪಾದದಿಂದ (ಮಣ್ಣಿನ ಕೊಡದ ಉತ್ಪಾದದಿಂದ( ಆಗುತ್ತಿರುತ್ತದೆ. ಆದ್ದರಿಂದ ದ್ರವ್ಯವು ಕಥಂಚಿತ್ ನಿತ್ಯ-ಅನಿತ್ಯಾತ್ಮಕವೆಂದು ಹೇಳುವಲ್ಲಿ ಬರುತ್ತದೆ. (ಒಂದೇ ವಸ್ತುವಿನಲ್ಲಿ ಎರಡು ಅಥವಾ ಹೆಚ್ಚು ಸ್ವಭಾವಗಳಿರುತ್ತವೆ. ಅಂದರೆ ಒಂದು ವಸ್ತುವಿನ ಎರಡು ಭಾಗಗಳು ಒಂದು ನಿತ್ಯ ಮತ್ತು ಇನ್ನೊಂದು ಅನಿತ್ಯ ಹೀಗೆ ಭಾಗ ರೂಪ ಮನ್ನಿಸುವದರಿಂದ ಮಿಥ್ಯಾತ್ವದ ದೋಷ ಬರುತ್ತದೆ.) ಹೇಗೆಂದರೆ ಜೀವವು ಮನುಷ್ಯನಿಂದ ದೇವಪರ್ಯಾಯವನ್ನು ಪ್ರಾಪ್ತ ಮಾಡಿದ ಮೇಲೆ ದ್ರವ್ಯಾರ್ಥಿಕ ದೃಷ್ಟಿಯಿಂದ ಅದರ ಪ್ರತಿಯೊಂದು ಪರ್ಯಾಯಗಳಲ್ಲಿ ಜೀವತ್ವವು ಸಮಾನ ರೂಪ ಇದ್ದರೂ ಸಹ (ಅಂದರೆ ಪರ್ಯಾಯದ ಸಾಮಾನ್ಯ, ಅದೇ ಜೀವತ್ವ ಅಂದರೆ ದ್ರವ್ಯ) ಪರ್ಯಾಯಾರ್ಥಿಕ ದೃಷ್ಟಿಯಿಂದ ಪ್ರತಿಯೊಂದು ಪರ್ಯಾಯದಲ್ಲಿ (ಅದರ ಒಂದು - ಒಂದು ಪರ್ಯಾಯದಲ್ಲಿ) ಅದು ಕಥಂಚಿತ್ ಭಿನ್ನತೆಗೆ ಧಾರಣ ಮಾಡುತ್ತದೆ. ಅದೇ ಪ್ರಕಾರ ಪ್ರತಿ ಸಮಯ ಉಂಟಾಗುವ ಕ್ರಮದಲ್ಲಿಯೂ ಸಹ ದ್ರವ್ಯಾರ್ಥಿಕ ನಯದಿಂದ ಸದೃಶ್ಯತೆ ಇದ್ದರೂ ಸಹ (ಅಂದರೆ ಆ ಕ್ರಮರೂಪ ಪರ್ಯಾಯದಲ್ಲಿ ಸಾಮಾನ್ಯಭಾವ ರೂಪದಿಂದ ದ್ರವ್ಯವು ಉಪಸ್ಥಿತ ಇರುತ್ತದೆ. ಆದರೆ ಪರ್ಯಾಯಾರ್ಥಿಕ ನಯದಿಂದ ಕಥಂಚಿತ್ ಅನ್ಯಥಾತನವು ಸಹ ನೋಡುವಲ್ಲಿ ಬರುತ್ತದೆ. (ಅಂದರೆ ಆ ಕ್ರಮದಲ್ಲಿ ಉಂಟಾಗುವ ಪರ್ಯಾಯದಲ್ಲಿ ವಿಶೇಷ ಭಾವರೂಪದಿಂದ ಬೇರೆ ಬೇರೆ ಭಾವ ಸಹ ನೋಡುವಲ್ಲಿ ಬರುತ್ತವೆ.) ಈ ವಿಷಯದಲ್ಲಿ ಎರಡನೇ ದೃಷ್ಟಾಂತ ಗೋರಸ

ಸಹ ಹೇಳಬಹುದು. ಹೇಗೆ ಹಾಗಲು, ಮೊಸರು, ಮಜ್ಜಿಗೆ, ತುಪ್ಪ ಮುಂತಾದವು ಹಾಲಿನ ಅವಸ್ಥೆಗಳಲ್ಲಿ ದ್ರವ್ಯಾರ್ಥಿಕ ನಯದಿಂದ ಗೋರಸತನದ ಸದೃಶತೆಯು ಉಂಟಾದ ಮೇಲೆಯೂ ಸಹ ಪರ್ಯಾಯಾರ್ಥಿಕ ನಯದಿಂದ ಹಾಲಿನಿಂದ ಮೊಸರು ಮುಂತಾದ ಅವಸ್ಥೆಗಳಲ್ಲಿ ಕಥಂಚಿತ್ ಬೇರೆತನವೂ ಸಹ ನೋಡುವಲ್ಲಿ ಬರುತ್ತದೆ. ಈ ಪ್ರಕಾರ ಅನುಮಾನದಿಂದ ಅಥವಾ ಸ್ವಾನುಭವ ಪ್ರತ್ಯಕ್ಷದಿಂದ ನಿತ್ಯ-ಅನಿತ್ಯದ ಪ್ರತೀತಿ ಆಗುವದರಿಂದ ಕ್ರಮದಲ್ಲಿಯೂ ಸಹ ಕಥಂಚಿತ್ ಸದೃಶತಾ - ವಿಸದೃಶತಾ ಎರಡೂ ಆಗುತ್ತವೆ. ಆದರೆ ಹೀಗೆ ಆದ ಬಳಿಕವೂ ಸಹ ಕೇವಲ ಅವುಗಳ ಕಾಲ ಸೂಕ್ಷ್ಮ ಸಮಯವರ್ತಿ ಆಗಿರುವದರಿಂದ ಆ ಕ್ರಮವು ಪ್ರತಿ ಸಮಯ ಲಕ್ಷ್ಯದಲ್ಲಿ ಬರುವದಿಲ್ಲ. ಆದ್ದರಿಂದ ಅದರಲ್ಲಿ ಇದು ಹಾಗೆಯೇ ಇಲ್ಲ ಮತ್ತು ಇದು ಹಾಗೆಯೇ ಇದೆ ಎಂಬ ವಿವಕ್ಷೆಯನ್ನೇ ಮಾಡಲಾಗುವದಿಲ್ಲ.

ಯಾವ ಸಮಯ ಜ್ಞಾನವು ಕೇವಲ ಕೊಡದ ಆಕಾರವಿದೆ. ಆ ಸಮಯ ಕೊಡವನ್ನು ತಿಳಿಯುವ ಯೋಗ್ಯತೆಯಿಂದ ಮತ್ತು ಅದೇ ಸಮಯ ಲೋಕಾಲೋಕವನ್ನು ತಿಳಿಯುತ್ತಾನೆ. ಆ ಸಮಯ ಇರುವಂಥ ಯೋಗ್ಯತೆಯಿಂದ ಜ್ಞಾನಗುಣದಲ್ಲಿ ಹೆಚ್ಚು ಕಡಿಮೆ ಆಗುವದಿಲ್ಲ. ಕೇವಲ ಅಗುರುಲಘು ಗುಣದ ಫಲವೆಂದು ತಿಳಿಯುವದು ಯೋಗ್ಯವಿದೆ.

**ಶ್ಲೋಕ ೧೯೬ :** ಹೇಗೆ ಬಂಗಾರದ ಅಸ್ತಿತ್ವದಲ್ಲಿಯೇ ಅದರ ಕುಂಡಲ-ಕಡಗ ಮುಂತಾದ ಅವಸ್ಥೆಗಳು ಸಿದ್ಧವಾಗುತ್ತವೆ. ಏಕೆಂದರೆ ಆ ಅವಸ್ಥೆಗಳು ಉಂಟಾಗುವದರಿಂದಲೇ ಬಂಗಾರದಲ್ಲಿ ಉತ್ಪಾದ ಮುಂತಾದವು ಆಗುತ್ತವೆ. ಅಂದರೆ ಬಂಗಾರದ ಬಂಗಾರತನವು ದ್ರವ್ಯದೃಷ್ಟಿಯಿಂದ ಅದರದೇ ಅವಸ್ಥೆ ಇದ್ದರೂ ಸಹ ಪರ್ಯಾಯಾರ್ಥಿಕ ದೃಷ್ಟಿಯಿಂದ ಕುಂಡಲ-ಕಂಕಣ ಮುಂತಾದವುಗಳ ಉತ್ಪಾದ ಮುಂತಾದವು ಆಗುತ್ತವೆ. ಆದರೆ ಒಂದು ವೇಳೆ ನಿಜವಾಗಿ ವಿಚಾರ ಮಾಡಿದರೆ ಆ ಕುಂಡಲ ಮುಂತಾದ ಅವಸ್ಥೆಗಳಲ್ಲಿ ಕೇವಲ ಆಕಾರದಿಂದ ಆಕಾರಾಂತರವೇ ಇರುತ್ತವೆ. ಆದರೆ ಅಸತ್‌ದ ಉತ್ಪತ್ತಿ ಮತ್ತು ಸತ್‌ದ ವಿನಾಶ ಇರುವದಿಲ್ಲ. ಆದ್ದರಿಂದ ಶಂಕಾಕಾರನು ಕಥಂಚಿತ್ ನಿತ್ಯ ಅನಿತ್ಯಾತ್ಮಕ ಪದಾರ್ಥಗಳಲ್ಲಿ ಉತ್ಪಾದಾದಿಕ ಆಗುವದಿಲ್ಲ. ಹೀಗೆ ಹೇಳುವದು ಯುಕ್ತಿ ಸಂಗತ ಇರುವದಿಲ್ಲ. ಕಾರಣಕಾರ್ಯಭಾವವೂ ಸಹ ಸಿದ್ಧವಾಗುತ್ತದೆ.

**ಶ್ಲೋಕ ೧೯೭ :** ಪದಾರ್ಥಗಳನ್ನು ನಿತ್ಯ-ಅನಿತ್ಯಾತ್ಮಕ ಮನ್ನಿಸುವದರಿಂದಲೇ ಕಾರ್ಯಕಾರಣಭಾವವು ಸಹಸಿದ್ಧವಾಗುತ್ತದೆ. ಆದರೆ ಸರ್ವಥಾ ನಿತ್ಯ ಅಥವಾ ಅನಿತ್ಯ ಪದಾರ್ಥಗಳಲ್ಲಿ ಇಲ್ಲ. ಏಕೆಂದರೆ ಸರ್ವಥಾ ನಿತ್ಯ ಪಕ್ಷದಲ್ಲಿ ಪರಿಣಾಮದ ಹೊರತು ಕಾರ್ಯಕಾರಣಭಾವ ಉಂಟಾಗುವದಿಲ್ಲ ಹಾಗೂ ಸರ್ವಥಾ ಅನಿತ್ಯಪಕ್ಷದಲ್ಲಿ ಪದಾರ್ಥವು ಕೇವಲ ಕ್ಷಣವರ್ತಿ ಎಂದು ಸಿದ್ಧವಾಗುವದರಿಂದ ಮತ್ತು ಅವುಗಳನ್ನು ಪ್ರತಿ ಸಮಯ ನಿರನ್ವಯ ನಾಶ ಎಂದು ಮನ್ನಿಸುವದರಿಂದ ನಿತ್ಯಶಕ್ತಿಯು ಪಿಂಡರೂಪ ಸತ್ (ದ್ರವ್ಯ) ಕಾರಣ ಇದೆ.

ದ್ರವ್ಯ ಮತ್ತು ಪರ್ಯಾಯಗಳು ವಸ್ತುವಿನ ಎರಡು ಭಾವಗಳಿರುತ್ತವೆ. ಎರಡು ಭಾಗಗಳಲ್ಲ. ಆದ್ದರಿಂದಲೇ ಅದನ್ನು ಕಥಂಚಿತ್ ನಿತ್ಯ ಅನಿತ್ಯ ಎಂದು ಹೇಳಲಾಗುತ್ತದೆ ಹಾಗೂ ಸರ್ವಥಾ ನಿತ್ಯಅನಿತ್ಯವೆಂದೂ ಹೇಳುವದಿಲ್ಲ. ಅಥವಾ ಮನ್ನಿಸುವದಿಲ್ಲ. ಆದ್ದರಿಂದ ಯಾವುದೇ ದ್ರವ್ಯವನ್ನು ಏಕಾಂತದಿಂದ ನಿತ್ಯ ಅಪರಿಣಾಮಿ ಮತ್ತು ಪರ್ಯಾಯವನ್ನು ಏಕಾಂತದಿಂದ ಅನಿತ್ಯ ಪರಿಣಾಮಿ ಎಂದು ಮನ್ನಿಸಿದರೆ ಅವುಗಳದು ಇಲ್ಲಿ ನಿರಾಕರಣ ಮಾಡಿದಂತಾಯಿತು. ಆದ್ದರಿಂದ ಇಂಥ ಯಾವುದರ ಧಾರಣವಿದೆಯೋ ಅವುಗಳಿಂದ ತನ್ನ ಧಾರಣೆಯನ್ನು ಸುಧಾರಿಸಿಕೊಳ್ಳಲು ಆಗ್ರಹವಿದೆ.

**ಶ್ಲೋಕ ೨೦೦ :** ನಿಶ್ಚಯದಿಂದ ಉತ್ಪಾದ-ವ್ಯಯ-ಧ್ರೌವ್ಯ ಈ ಮೂರೂ ಪರ್ಯಾಯಗಳಲ್ಲಿ ಆಗುತ್ತವೆ. ಆದರೆ ಸತ್‌ದಲ್ಲಿ ಆಗುವದಿಲ್ಲ. ಏಕೆಂದರೆ ಉತ್ಪಾದ ಮುಂತಾದ ಪರ್ಯಾಯಗಳೇ ದ್ರವ್ಯ ಇರುತ್ತವೆ. ಆದ್ದರಿಂದ ದ್ರವ್ಯವನ್ನು ಉತ್ಪಾದ ಮುಂತಾದ ತ್ರಯಗಳುಳ್ಳದ್ದೆಂದು ಹೇಳಲಾಗುತ್ತದೆ.

ಇಲ್ಲಿ ಅಂಶ-ಅಂಶಿ ರೂಪ ಭೇದವು ನಯದ ಅಪೇಕ್ಷೆಯಿಂದ ಉತ್ಪಾದ-ವ್ಯಯ-ಧ್ರೌವ್ಯ ಈ ಮೂರನ್ನೂ ಭೇದ ರೂಪ ಪರ್ಯಾಯವೆಂದು ಸಿದ್ಧ ಮಾಡಲಾಗಿದೆ. ಏಕೆಂದರೆ ಅಂಶ-ಅಂಶಿ ರೂಪ ಭೇದ ಮಾಡದಿದ್ದರೆ ಸತ್‌ದ ನಾಶ, ಸತ್‌ದ ಉತ್ಪಾದ ಮತ್ತು ಸತ್‌ದ ಧ್ರೌವ್ಯ ಹೀಗೆ ವಿರುದ್ಧತಾ ಉದ್ಭವಿಸುತ್ತದೆ. ಆದ್ದರಿಂದ ಭೇದನಯದಿಂದ ತಿಳಿಸಿದ್ದಾರೆ. ಏನಂದರೆ ಸತ್‌ವಂತೂ ನಯದಿಂದ ಈ ಮೂರು ಅದರ ಪರ್ಯಾಯ ಎಂದು ಹೇಳಲಾಗುತ್ತದೆ. ಇಲ್ಲಿ ಪ್ರಶ್ನ ಏಳುತ್ತದೆ. ಏನಂದರೆ ಉತ್ಪಾದದ ಸ್ವರೂಪ ಮತ್ತು ಉತ್ಪಾದವು ಯಾರದಾಗುತ್ತದೆ ? ಎಲ್ಲಿಗೆ ಹೋಗುತ್ತದೆ ? ಉತ್ತರ ಮುಂದಿದೆ.

**ಶ್ಲೋಕ ೨೦೧ :** ತದ್‌ಭಾವ (ಇದು ಅದೇ ಇದೆ) ಮತ್ತು ಅತದ್‌ಭಾವ (ಇದು ಅದು ಅಲ್ಲ)ವನ್ನು ವಿಷಯ ಮಾಡುವಂಥ ನಯದ ಅಪೇಕ್ಷೆಯಿಂದ (ಅಂದರೆ ದ್ರವ್ಯಾರ್ಥಿಕ ನಯದ ಮತ್ತು ಪರ್ಯಾಯಾರ್ಥಿಕ ನಯದ ಅಪೇಕ್ಷೆಯಿಂದ) ಸತ್‌ಸದ್‌ಭಾವ ಮತ್ತು ಅಸದ್‌ಭಾವದಿಂದ ಕೂಡಿರುತ್ತದೆ. ಆದ್ದರಿಂದ ಅದು ಉತ್ಪಾದ ಮುಂತಾದವುಗಳಲ್ಲಿ ಹೊಸ ರೂಪದಿಂದ ಪರಿಣಮಿತ ಆ ಸತ್‌ದ ಅವಸ್ಥೆ ಹೆಸರು ಉತ್ಪಾದ ಇರುತ್ತದೆ.

ಅರ್ಥಾತ್ ದ್ರವ್ಯದ ಅವಸ್ಥೆಯು ಬದಲಾಗುತ್ತದೆ. ಅದನ್ನೇ ಉತ್ಪಾದವೆಂದು ಹೇಳಿದ್ದಾರೆ ಮತ್ತು ಮೊದಲಿನ ಅವಸ್ಥೆಗೆ ವ್ಯಯ ಎಂದು ಹೇಳಿದ್ದಾರೆ. ವ್ಯಯದ ಸ್ವರೂಪ ಮತ್ತು ಅದು ಯಾವುದರದು ಆಗುತ್ತದೆ ? ಉತ್ತರ ಹೀಗಿದೆ.

**ಶ್ಲೋಕ ೨೦೨ :** ವ್ಯಯವು ಸಹ ಸತ್‌ದ್ದು ಆಗುವದಿಲ್ಲ. ಸತ್‌ದ ಅವಸ್ಥೆಯ ನಾಶವನ್ನು ವ್ಯಯವೆಂದು ಕರೆಯುತ್ತಾರೆ. ಅಪೇಕ್ಷೆಯಿಂದ ಕೆಲವು ಸಲ ಹೇಳಬಹುದಾಗಿದೆ. ಉಪಾದಾನ ರೂಪ ದ್ರವ್ಯವು ಸ್ವಯಂ ಕಾರ್ಯ ರೂಪವಾಗಿ

ಪರಿಣಮಿಸುತ್ತದೆ ಮತ್ತು ಅದನ್ನೇ ಆ ದ್ರವ್ಯದ ಉತ್ಪಾದ ಎಂದು ಹೇಳಲಾಗುತ್ತದೆ ಮತ್ತು ಮೊದಲಿನ ಸಮಯವರ್ತಿ ಕಾರ್ಯವನ್ನು ಆ ದ್ರವ್ಯದ ವ್ಯಯವೆಂದು ಹೇಳಲಾಗುತ್ತದೆ. ಆ ಎರಡೂ ಕಾರ್ಯರೂಪ ಪರಿಣಮಿಸಿದ ಯಾವ ಉಪಾದಾನ ರೂಪ ದ್ರವ್ಯವಿದೆ ಅದುವೇ ಧ್ರೌವ್ಯ ಇದೆ. ಧ್ರೌವ್ಯದ ಸ್ವರೂಪ ಮತ್ತು ಅದು ಯಾರದಾಗುತ್ತದೆ ? ಅದೂ ಸಹ ಪರ್ಯಾಯಾರ್ಥಿಕ ನಯದಿಂದ ಧ್ರೌವ್ಯವು ಸಹ ಕಥಂಚಿತ್ ಸತ್‌ದ್ದು ಆಗುತ್ತದೆ. ಈ ಪ್ರಕಾರ ಉತ್ಪಾದ ವ್ಯಯ ಧ್ರೌವ್ಯಗಳು ಮೂರೂ ಸತ್‌ದ್ದೇ ಒಂದು ಅಂಶವಿದೆ. ಆದರೆ ಸರ್ವ ದೇಶ ಇಲ್ಲ. ಏಕೆಂದರೆ ಅವು ಸತ್‌ದ್ದೇ ಎಂದು ಮನ್ನಿಸಿದರೆ ದ್ರವ್ಯವು ಕೂಟಸ್ಥ / ಅಪರಿಣಾಮಿ ಎಂದು ವರ್ಣಿಸಲ್ಪಟ್ಟಿದ್ದಾರೆ. ಅದು ಇದು ಇರುವದಿಲ್ಲ.

**ಶ್ಲೋಕ ೨೧೩ :** ತೆರೆಗಳಿಂದ ವ್ಯಾಪಿಸಿದ ಸಮುದ್ರದ ಪ್ರಕಾರ ನಿಶ್ಚಯದಿಂದ ಯಾವದೋ ಗುಣದ ಪರಿಣಾಮಗಳಿಂದ ಅಂದರೆ ಪರ್ಯಾಯಗಳಿಂದ ಸತ್‌ದ ಅಭಿನ್ನತೆ ಆಗಿರುವದರಿಂದ ಅಸತ್‌ದ ತನ್ನ ಪರಿಣಾಮಗಳಿಂದ ಸ್ವಲ್ಪವೂ ಭೇದ ಇರುವದಿಲ್ಲ. ಅಂದರೆ ಯಾವ ಪರ್ಯಾಯವಿದೆ ಅದು ದ್ರವ್ಯದ ವರ್ತಮಾನವೇ ಆಗಿರುವದರಿಂದ ದ್ರವ್ಯದಿಂದಲೇ ಉಂಟಾಗಿರುವದರಿಂದ (ತೆರೆಗಳಲ್ಲಿ ಸಮುದ್ರವೇ ಇರುವದರಿಂದ) ನಿಜವಾಗಿಯೂ ಯಾವದೇ ಭೇದ ಇರುವದಿಲ್ಲ. ಆದರೆ ಭೇದನಯದಿಂದ ಭೇದ ಹೇಳುವಲ್ಲಿ ಬರುತ್ತದೆ. ಆದ್ದರಿಂದ ಅದನ್ನು ಕಥಂಚಿತ್ ಭೇದ ಅಭೇದ ಎಂದೂ ಸಹ ಹೇಳಲಾಗುತ್ತದೆ.

**ಶ್ಲೋಕ ೨೧೪ :** ಯಾವ ಸಮುದ್ರವಿದೆ ಅದುವೇ ತೆರೆಗಳು ಆಗುತ್ತವೆ. ಏಕೆಂದರೆ ಆ ಸಮುದ್ರವೇ ಸ್ವತಃ ತೆರೆಗಳ ರೂಪದಲ್ಲಿ ಪರಿಣಮನ ಮಾಡುತ್ತದೆ. ಅಂದರೆ ದ್ರವ್ಯದ (ಅವ್ಯಕ್ತವೇ) ಪರ್ಯಾಯ ರೂಪದಿಂದ (ವ್ಯಕ್ತ ರೂಪದಿಂದ) ವ್ಯಕ್ತವಾಗುತ್ತದೆ. ಪರಿಣಮನ ಮಾಡುತ್ತದೆ.

**ಶ್ಲೋಕ ೨೧೫ :** ಸತ್ ಇದು ಸ್ವತಃ ಉತ್ಪಾದ, ವ್ಯಯ ಹಾಗೂ ಧ್ರೌವ್ಯ ಇದೆ. ಏಕೆಂದರೆ ಸತ್(ದ್ರವ್ಯ)ದಿಂದ ಬೇರೆ ಯಾವ ಉತ್ಪಾದ, ವ್ಯಯ ಅಥವಾ ಧ್ರೌವ್ಯ ಇರುವದಿಲ್ಲ. ದ್ರವ್ಯ, ಗುಣ, ಪರ್ಯಾಯ ಮತ್ತು ಉತ್ಪಾದ, ವ್ಯಯ, ಧ್ರೌವ್ಯ ಈ ವ್ಯವಸ್ಥೆಯನ್ನು ತಿಳಿಯುವ ಸಲುವಾಗಿ ಈ ಗಾಥೆಯ ಮರ್ಮ ತಿಳಿಯುವದು ಅತ್ಯಂತ ಅವಶ್ಯಕವಿದೆ. ಏಕೆಂದರೆ ವಾಸ್ತವದಲ್ಲಿ ದ್ರವ್ಯವು ಅಭೇದವಿದೆ. ಭೇದವು ಕೇವಲ ತಿಳಿಸುವ ಸಲುವಾಗಿಯೇ ಇದೆ.

**ಶ್ಲೋಕ ೨೧೬ :** ಶುದ್ಧತೆಯನ್ನು ವಿಷಯ ಮಾಡುವಂಥ ನಯದ ಅಪೇಕ್ಷೆಯಿಂದ ಉತ್ಪಾದವಿಲ್ಲ, ವ್ಯಯವೂ ಇಲ್ಲ ಹಾಗೂ ಧ್ರೌವ್ಯವೂ ಇಲ್ಲ. ಗುಣ, ಪರ್ಯಾಯವೂ ಇಲ್ಲ. ಆದರೆ ಕೇವಲ ಒಂದು ಸತ್ ಮಾತ್ರವೇ ಇದೆ. ಅರ್ಥಾತ್ ಶುದ್ಧನಯದಿಂದ ಒಂದು ಮಾತ್ರ ಪಂಚಮ ಭಾವ ರೂಪ, ಪರಮ ಪಾರಿಣಾಮಿಕಭಾವ ರೂಪ ಸತ್‌ವೇ ಇದೆ. ಅದು ಹೇಗಿದೆಯೋ ಹಾಗೆಯೇ ಪರಿಣಮಿಸುತ್ತದೆ.

ಶುದ್ಧ ದ್ರವ್ಯಾರ್ಥಿಕ ನಯದ ಅಪೇಕ್ಷೆಯಿಂದ ಯಾವ ಭೇದವೂ ಇಲ್ಲ. ಎಲ್ಲವುಗಳ ಸಮುದಾಯ ರೂಪ ಒಂದು ಸತ್ ಪದಾರ್ಥವೇ ಇದೆ. ಶುದ್ಧ ದ್ರವ್ಯಾರ್ಥಿಕ ನಯವು ಯಾವುದೇ ಪ್ರಕಾರದ ಭೇದವನ್ನು ವಿಷಯವನ್ನಾಗಿ ಮಾಡುವದಿಲ್ಲ. ಆದ್ದರಿಂದ ಶುದ್ಧ ದ್ರವ್ಯಾರ್ಥಿಕ ನಯದಿಂದ ನಿರಂತರ ಎಲ್ಲ ಅವಸ್ಥೆಗಳಲ್ಲಿ ಸತ್‌ವೇ ಪ್ರತೀತಿಮಾನ ಆಗುತ್ತದೆ.

**ಶ್ಲೋಕ ೨೨೨** : ಯಾವ ಸಮಯ ಧ್ರೌವ್ಯ ರೂಪದಿಂದ ಪರಿಣತ ಸತ್‌ವು ಧ್ರೌವ್ಯದ ಮೂಲಕ ಲಕ್ಷ್ಯಮಾನ ಆಗುತ್ತದೆ. ಆ ಸಮಯ ಉತ್ಪಾದ-ವ್ಯಯ ಪ್ರಕಾರ ಅದರದೇ ಅದು ಸತ್‌ಧ್ರೌವ್ಯ ಮಾತ್ರ ಇರುತ್ತದೆ. ಹೀಗೆಯೇ ಪ್ರತೀತವಾಗುತ್ತದೆ.

ಮೊದಲು ಹೇಳಿದ ಪ್ರಕಾರ ದ್ರವ್ಯಾರ್ಥಿಕ ಚಕ್ಷು ಉಳ್ಳವನಿಗೆ ಎಲ್ಲ ಪ್ರಮಾಣ ರೂಪ ದ್ರವ್ಯವು ಕೇವಲ ಸಾಮಾನ್ಯ ರೂಪವೇ ತಿಳಿದುಬರುತ್ತದೆ. ಅಂದರೆ ಧ್ರುವರೂಪವೇ ತಿಳಿದುಬರುತ್ತದೆ. ಅಲ್ಲಿ ಪರ್ಯಾಯಾರ್ಥಿಕ ಚಕ್ಷುವುಳ್ಳವನಿಗೆ ಅದೇ ಪ್ರಮಾಣರೂಪ ದ್ರವ್ಯವು ಕೇವಲ ಪರ್ಯಾಯ ರೂಪವೇ ತಿಳಿದುಬರುತ್ತದೆ. ಅಂದರೆ ಉತ್ಪಾದ, ವ್ಯಯ ರೂಪವೇ ತಿಳಿದು ಬರುತ್ತದೆ ಮತ್ತು ಪ್ರಮಾಣ ಚಕ್ಷುವಿನಿಂದ ನೋಡುವಲ್ಲಿ ಬಂದ ಮೇಲೆ ಅದುವೇ ಪ್ರಮಾಣರೂಪ ದ್ರವ್ಯವು ಉಭಯರೂಪ ಅರ್ಥಾತ್ ದ್ರವ್ಯ ಪರ್ಯಾಯ ರೂಪವೆಂದು ತಿಳಿದುಬರುತ್ತದೆ. ಅಂದರೆ ಉತ್ಪಾದ ವ್ಯಯ ಧ್ರೌವ್ಯ ರೂಪ ತಿಳಿದುಬರುತ್ತದೆ. ಆದ್ದರಿಂದ ಜೈನ ಸಿದ್ಧಾಂತದಲ್ಲಿ ಪ್ರತೀಯ ಕಥನವು ವಿವಕ್ಷಾ ವಶದಿಂದಲೇ ಅಂದರೆ ಅಪೇಕ್ಷೆಯಿಂದಲೇ ಹೇಳಲಾಗುತ್ತದೆ. ಏಕಾಂತದಿಂದ ಆಗುವದಿಲ್ಲ. ಆದ್ದರಿಂದ ಯಾವಾಗ ಇಂಥ ಪ್ರಶ್ನೆ ಆಗುತ್ತದೆ ಎಂದರೆ ಪರ್ಯಾಯವು ದ್ರವ್ಯದ ವರ್ತಮಾನವೇ ಇದೆ. ಯಾವದೇ ವರ್ತಮಾನವು ಸಹ ದ್ರವ್ಯದಿಂದಲೇ ತಯಾರಾಗಿರುತ್ತದೆ. ಜೈನ ಸಿದ್ಧಾಂತದ ಅನುಸಾರ ತ್ರಿಕಾಲ ಧ್ರುವ ವಸ್ತುವಿನ ಸ್ವರೂಪ ಬೇರೆ ಇಲ್ಲ. ಬೇರೆ ಎಂದು ತೆಗೆದುಕೊಂಡರೆ ಅದು ಜಿನಮತದಿಂದ ಹೊರಗೆ ಇರುತ್ತದೆ.

**ಶ್ಲೋಕ ೨೨೫** : ವೃಕ್ಷದಲ್ಲಿ ಹೂ, ಹಣ್ಣು ಹಾಗೂ ಎಲೆಗಳ ಪ್ರಕಾರ ಯಾವದೇ ಅಂಶರೂಪ ಒಂದು ಭಾಗದಿಂದ ಸತ್‌ದ ಉತ್ಪಾದ, ವ್ಯಯ ಹಾಗೂ ಧ್ರೌವ್ಯ ಇರುವದಿಲ್ಲ. ಅಂದರೆ ವಾಸ್ತವದಲ್ಲಿ ದ್ರವ್ಯದಲ್ಲಿ ಧ್ರುವ ಮತ್ತು ಪರ್ಯಾಯ ಹೀಗೆ ಎರಡು ಭಾಗಗಳು ಇರುವದಿಲ್ಲ. ಅವುಗಳ ಕ್ಷೇತ್ರ ಭೇದವು (ಭಿನ್ನ ಪ್ರದೇಶ) ಸಹ ಇರುವದಿಲ್ಲ. ಆದರೆ ಒಂದೇ ವಸ್ತುವನ್ನು ಅಪೇಕ್ಷೆಯಿಂದ ಭೇದನಯದಿಂದ ಹೀಗೆ ಹೇಳಲಾಗುತ್ತದೆ.

**ಪ್ರಶ್ನೆ : ಉತ್ಪಾದ ಮುಂತಾದ ಮೂರೂ ಅಂಶಗಳು ದ್ರವ್ಯದ ಸತ್ತಾತ್ಮಕ ಅಂಶ ಇರುತ್ತವೆಯೋ ಅಥವಾ ಅಸತ್ತಾತ್ಮವೋ ? ಇದಕ್ಕೆ ಸಮಾಧಾನ ಹೀಗಿದೆ –**

**ಶ್ಲೋಕ ೨೨೭** : ಹೀಗೆ ಹೇಳುವದು ಸರಿಯಲ್ಲ. ಏಕೆಂದರೆ ಜೈನ ಸಿದ್ಧಾಂತದಲ್ಲಿ ನಿಶ್ಚಯದಿಂದ ಅನೇಕಾಂತವೇ ಬಲವಾನ ಇದೆ. ಏಕಾಂತವು ಬಲವಾನ ಇರುವದಿಲ್ಲ.

ಆದ್ದರಿಂದ ಅನೇಕಾಂತ ಪೂರ್ವಕ ಸಮಸ್ತ ಕಥನವು ಅವಿರುದ್ಧ ಆಗುತ್ತದೆ ಹಾಗೂ ಅನೇಕಾಂತದ ಹೊರತು ಸಮಸ್ತ ಕಥನವು ವಿರೋಧಾಭಾಸಪೂರ್ಣ ಆಗತೊಡಗುತ್ತದೆ.

ಅಂದರೆ ಕೇವಲ ಶಬ್ದಗಳನ್ನು ಹಿಡಿದುಕೊಂಡು ಎಂದೂ ಏಕಾಂತ ಅರ್ಥವನ್ನು ತೆಗೆಯಬಾರದು. ಏಕೆಂದರೆ ಜೈನ ಸಿದ್ಧಾಂತದಲ್ಲಿ ಪ್ರತಿಯೊಂದು ಶಬ್ದವು, ಪ್ರತಿಯೊಂದು ವಾಕ್ಯವು ಒಂದಿಲ್ಲ ಒಂದು ಅಪೇಕ್ಷೆಯ ಜೊತೆಗೇನೇ ಆಗುತ್ತದೆ. ಆದ್ದರಿಂದ ಆ ಶಬ್ದಗಳು ಅಥವಾ ವಾಕ್ಯಗಳನ್ನು ಆಯಾ ಅಪೇಕ್ಷೆಯ ಅನುಸಾರ ತಿಳಿದುಕೊಂಡು ಸ್ವೀಕಾರ ಮಾಡುವದು ಅವಶ್ಯಕವಿದೆ. ಅನೇಕಾಂತ ಸ್ವರೂಪವು ಜೈನ ಸಿದ್ಧಾಂತದ ಅನುಸಾರವೇ ಅರ್ಥವನ್ನು ತಿಳಿಯುವದು ಯೋಗ್ಯವಿದೆ. ಹೊರತು ಏಕಾಂತದ ದೋಷದಿಂದ ಮಿಥ್ಯಾತ್ವದ ದೋಷ ಅವಶ್ಯವಾಗಿ ಬರುತ್ತದೆ. ಯಾವದೆಂದರೆ ಅನಂತ ಭವಭ್ರಮಣ ಹೆಚ್ಚಿಸುವ ಸಲುವಾಗಿ ಶಕ್ತಿಮಾನ ಇದೆ. ಆದ್ದರಿಂದ ಏಕಾಂತ ಗ್ರಹಣ ಮತ್ತು ಏಕಾಂತದ ಆಗ್ರಹದಿಂದ ಉಳಿದುಕೊಂಡು ಪ್ರಸ್ತುತ ಯಾವದೇ ವಿಧಾನವನ್ನು ಅನೇಕಾಂತ ಸ್ವರೂಪ ತಿಳಿಸಿರುವ ಅನುಸಾರ ಗ್ರಹಣ ಮಾಡಿ ಬೇಗನೇ ಸಂಸಾರದಿಂದ ಮುಕ್ತನಾಗಬೇಕು. ಮೋಕ್ಷಮಾರ್ಗದ ಮೇಲೆ ನಡೆಯುವ ಸಲುವಾಗಿ ಅನೇಕಾಂತವೇ ಸಹಾಯಕವಿದೆ.

**ಶ್ಲೋಕ ೨೩೮ :** ನ್ಯಾಯ ಬಲದಿಂದ ಇದು ಉತ್ಪಾದ, ವ್ಯಯ, ಧ್ರೌವ್ಯ ಈ ಮೂರೂ ಒಂದು ಕಾಲವರ್ತಿ ಇರುತ್ತವೆ. ಏಕೆಂದರೆ ಯಾವುದು ವ್ಯಕ್ಷತನವಿದೆ. ಅದುವೇ ಅಂಕುರ ರೂಪದಿಂದ ಉತ್ಪನ್ನ ಮತ್ತು ಬೀಜರೂಪದಿಂದ ನಾಶವಾಗುವಂಥದ್ದು ಇರುತ್ತದೆ. ಅಂದರೆ ಪೂರ್ಣದ್ರವ್ಯದ್ದೇ ಒಂದು ಪರ್ಯಾಯದಿಂದ ನಾಶವಾಗಿ ಬೇರೆ ಪರ್ಯಾಯ ರೂಪ ಪರಿವರ್ತಿತ ಆಗುತ್ತಿರುತ್ತದೆ ಮತ್ತು ಆದ್ದರಿಂದಲೇ ಅದನ್ನು ಧ್ರುವ ಎಂದು ಕರೆಯಲಾಗುತ್ತದೆ. ಅದರ ಮೊದಲಿನ ಪರ್ಯಾಯಕ್ಕೆ ವ್ಯಯರೂಪ ಮತ್ತು ವರ್ತಮಾನ ಪರ್ಯಾಯಕ್ಕೆ ಉತ್ಪಾದರೂಪ ಎಂದು ಯಾವುದೇ ಬೇರೆ ಬೇರೆ ಅಂಶಗಳು ಇರುವದಿಲ್ಲ. ಕೇವಲ ವಸ್ತು ವ್ಯವಸ್ಥೆಯನ್ನು ತಿಳಿಸುವ ಸಲುವಾಗಿ ಹೀಗೆ ಭೇದ ಮಾಡಿ ಹೇಳಿದ್ದಾರೆ. ಏನಂದರೆ ಯಾವುದೇ ದ್ರವ್ಯವಿರಲಿ ಅದು ಪ್ರವಹಿಸುತ್ತದೆ. ಅಂದರೆ ಪರಿಣಮಿತವಾಗುತ್ತದೆ. ಅಂದರೆ ಪರಿವರ್ತನೆ ಆಗುತ್ತಲೇ ಇರುತ್ತದೆ ಮತ್ತು ಅದು ಪರಿವರ್ತಿತವಾಗುತ್ತಿರುವ ದ್ರವ್ಯವನ್ನು ಧ್ರುವವೆಂದು ಕರೆಯಲಾಗುತ್ತದೆ. ಯಾವಾಗ ಅದರ ಪರಿಣಮಕ್ಕೆ ಅವಸ್ಥೆಗೆ ಪರ್ಯಾಯ (ಉತ್ಪಾದ ವ್ಯಯ) ರೂಪ ಹೇಳಲಾಗುತ್ತದೆ.

**ಶ್ಲೋಕ ೨೪೭ :** ಪರ್ಯಾಯಾರ್ಥಿಕ ನಯದ ಅಪೇಕ್ಷೆಯಿಂದ ಉತ್ಪಾದವಿದೆ, ವ್ಯಯವಿದೆ ಹಾಗೂ ಧ್ರೌವ್ಯವಿದೆ. ಆದರೆ ದ್ರವ್ಯಾರ್ಥಿಕ ನಯದ ಅಪೇಕ್ಷೆಯಿಂದ ಉತ್ಪಾದವೂ ಇಲ್ಲ, ವ್ಯಯವೂ ಇಲ್ಲ, ಧ್ರೌವ್ಯವೂ ಇಲ್ಲ. ಆದ್ದರಿಂದ ನಾವು ಯಾವಾಗ ದ್ರವ್ಯ ಪರ್ಯಾಯ ಸ್ವರೂಪ ವಸ್ತುವನ್ನು ಅರ್ಥಾತ್ ಪ್ರಮಾಣ ರೂಪ ದ್ರವ್ಯವನ್ನು

ಕೇವಲ ದ್ರವ್ಯಾರ್ಥಿಕ ನಯದ ಅಪೇಕ್ಷೆಯಿಂದ ತ್ರಿಕಾಲ ಧ್ರುವ ಎಂದು ಹೇಳುತ್ತಾರೆ. ಆಗ ಯಾರಿಗಾದರೂ ಪ್ರಶ್ನೆ ಉಂಟಾಗಬಹುದು. ಏನಂದರೆ ಇದರಲ್ಲಿ ಪ್ರಮಾಣದ ದ್ರವ್ಯವನ್ನು ಏಕೆ ತೆಗೆದುಕೊಳ್ಳಲಾಗುತ್ತದೆ ? ಆದರೆ ಅದರ ಉತ್ತರ ಹೀಗಿದೆ – ಏನಂದರೆ ತಮ್ಮ ದೃಷ್ಟಿ ಹೇಗೆ ಆಗುವದು ಹಾಗೆಯೇ ದ್ರವ್ಯವು ತಮಗೆ ಕಾಣುವದು. ಯಾರು ದ್ರವ್ಯವನ್ನು ಪ್ರಮಾಣ ದೃಷ್ಟಿಯಿಂದ ನೋಡುತ್ತಾರೆ ಅವರಿಗೆ ಆ ದ್ರವ್ಯವು ವಸ್ತು ಪ್ರಮಾಣ ರೂಪವಾಗಿ ಕಾಣುವದು. ಯಾರು ಪರ್ಯಾಯ ದೃಷ್ಟಿಯಿಂದ ನೋಡುತ್ತಾರೆ, ಅವರಿಗೆ ಆ ದ್ರವ್ಯವು ಕೇವಲ ಪರ್ಯಾಯ ರೂಪವಾಗಿ ತಿಳಿಯುವದು ಮತ್ತು ಅದೇ ಪ್ರಮಾಣದ ದ್ರವ್ಯವನ್ನು ಒಂದು ವೇಳೆ ದ್ರವ್ಯಾರ್ಥಿಕನಯದ ಚಕ್ಷುವಿನಿಂದ ನೋಡಿದರೆ ಅದು ಪೂರ್ಣವಸ್ತು (ಪೂರ್ಣದ್ರವ್ಯ) ಕೇವಲ ತ್ರಿಕಾಲ ಧ್ರುವರೂಪವೇ ತಿಳಿದುಬರುವದು. ಹೇಗೆಂದರೆ ಯಾವದು ಪರ್ಯಾಯದಿಂದ ನಿರಪೇಕ್ಷ ರೂಪ ಸಾಮಾನ್ಯ ಮಾತ್ರವೇ ಇದೆ, ಇದುವೇ ಜೈನಸಿದ್ಧಾಂತದ ವಿಲಕ್ಷಣತೆಯಿದೆ. ಅದ್ಭುತ ಕಾರ್ಯವಿದೆ ಮತ್ತು ಪರ್ಯಾಯ ರಹಿತ ದ್ರವ್ಯ ಪಡೆಯುವ ವಿಧಿ ಇದುವೇ ಇದೆ. ಆದ್ದರಿಂದ ಎಲ್ಲರಿಗೂ ನಮ್ಮ ನಿವೇದನೆಯಿದೆ. ಮೊಟ್ಟ ಮೊದಲು ತಾವು 'ಹೇಗಿದೆಯೋ ಹಾಗೆಯೇ' ವಸ್ತು ವ್ಯವಸ್ಥೆಯನ್ನು ತಿಳಿಯಬೇಕು. ಆಗ ತಮ್ಮ ಪ್ರಶ್ನೆಯ ಉತ್ತರ ತಮಗೆ ತಮ್ಮಿಂದಲೇ ದೊರೆಯುವದು. ವಸ್ತು ವ್ಯವಸ್ಥೆಯು ಮತ್ತು ಸ್ಯಾದ್ವಾದ ಶೈಲಿ ತಿಳಿಯದ ಹೊರತು ಶಬ್ದ ಮತ್ತು ವಾಕ್ಯಗಳ ಅರ್ಥ ತಿಳಿಯುವದು ಅತ್ಯಂತ ಕಠಿಣವಿದೆ. ಆದರೆ ಅನೇಕಾಂತ ಸ್ವರೂಪ ವಸ್ತುವ್ಯವಸ್ಥೆಯು ತಿಳಿದಬಳಿಕ ಅದು ಬಹಳ ಸರಳವಾಗುವದು.

**ಶ್ಲೋಕ ೨೫೪ :** ವಸ್ತು ಸಾಮಾನ್ಯ ವಿಶೇಷಾತ್ಮಕ ಇರುತ್ತದೆ. ವಿಶೇಷ ನಿರಪೇಕ್ಷ ಸಾಮಾನ್ಯ ಹಾಗೂ ಸಾಮಾನ್ಯ ನಿರಪೇಕ್ಷ ವಿಶೇಷ ಅದು ಯಾವದೇ ವಸ್ತುವೇ ಸಿದ್ಧವಾಗುವದಿಲ್ಲ. ಧ್ರೌವ್ಯ ಸಾಮಾನ್ಯ ರೂಪವಿದೆ ಮತ್ತು ಉತ್ಪಾದ-ವ್ಯಯ ಹೊರತು ಧ್ರೌವ್ಯವುಸಹ ಉಂಟಾಗಲಾರದು. ಏಕೆಂದರೆ ಉತ್ಪಾದ ವ್ಯಯಾತ್ಮಕ ವಿಶೇಷ ಹೊರತು ಧ್ರೌವ್ಯಾತ್ಮಕ ಸಾಮಾನ್ಯದ್ದು ಸಹ ಸಿದ್ಧಿಯಾಗಲಾರದು.

**ಶ್ಲೋಕ ೨೫೫ :** ಈ ಪ್ರಕಾರ ಇಲ್ಲಿ ಉತ್ಪಾದ ಮುಂತಾದ ಮೂರೂ ವ್ಯವಸ್ಥೆಗಳು ಬಹಳ ಸುಂದರ ಇವೆ. ಆದರೆ ಆ ಉತ್ಪಾದಾದಿಕ ಮೂರರಲ್ಲಿಂದ ಯಾವದೇ ಒಂದರ ನಿಷೇದವನ್ನು ಹೇಳುವಂಥ ತಮ್ಮ ಪಕ್ಷದ್ದು ಸಹ ಘಾತಕ ಆಗುತ್ತದೆ. ಆದ್ದರಿಂದ ಉತ್ಪಾದ, ವ್ಯಯ, ಧ್ರೌವ್ಯದಲ್ಲಿಂದ ಕೇವಲ ಒಂದೇ ವ್ಯವಸ್ಥೆಯನ್ನು ಮನ್ನಿಸುವದು ಸರಿ ಇರುವದಿಲ್ಲ.

ಒಂದು ವೇಳೆ ಯಾರಾದರೂ ಅಭೇದ ದ್ರವ್ಯದಲ್ಲಿಂದ ಪರ್ಯಾಯವನ್ನು ಬೇರೆ ಮಾಡುವ ಪ್ರಯತ್ನ ಮಾಡಿದರೆ ಅಂದರೆ ಯಾವುದನ್ನು ಪರ್ಯಾಯ ರಹಿತ ದ್ರವ್ಯವು ಇಷ್ಟವಾದರೆ ಅವನ ಸಲುವಾಗಿ ಪೂರ್ಣದ್ರವ್ಯದ್ದು ಲೋಪವಾಗುವದು. ಅಂದರೆ ಅವನು ಕೇವಲ ಭ್ರಮೆಯಲ್ಲಿಯೇ ಇರಬೇಕಾಗುವದು. ಪರ್ಯಾಯ

ರಹಿತ ದ್ರವ್ಯ ಪಡೆಯುವ ವಿಧಿಯನ್ನು ದ್ರವ್ಯಾರ್ಥಿಕ ನಯದ ಚಕ್ಷುವಿನಿಂದ ಅಂದರೆ ದ್ರವ್ಯದೃಷ್ಟಿಯಿಂದ ಇದ್ದು ಕೇವಲ ದ್ರವ್ಯವನ್ನೇ ಧ್ಯಾನದಲ್ಲಿ ತೆಗೆದುಕೊಳ್ಳುವದರಿಂದ ಅದು ಪೂರ್ಣದ್ರವ್ಯದ ಪ್ರಾಪ್ತಿಯ ಉಪಾಯವಾಗಿದೆ. ಅದರದೇ ಲಕ್ಷ್ಯ ಮಾಡಬೇಕು. ಪರ್ಯಾಯಗಿಂತ ದ್ರವ್ಯ ಬೇಕೆಂದರೆ ಕೇವಲ ಅದರದೇ ಧ್ಯಾನ, ಲಕ್ಷ್ಯ ಮಾಡಲೇಬೇಕು.

**ಶ್ಲೋಕ ೩೦೭ :** ವಿಧಿಯು ಸ್ವತಃ (ದ್ರವ್ಯವೇ ಸ್ವಯಂ, ಧ್ರುವವೇ ಸ್ವತಃ) ಯುಕ್ತಿವಶದಿಂದ (ಪರ್ಯಾಯಾರ್ಥಿಕ ನಯದಿಂದ) ನಿಶ್ಚಯದಿಂದ ನಿಷೇಧ ರೂಪ ಆಗುತ್ತದೆ ಹಾಗೂ ಅದೇ ತರಹ ನಿಷೇಧವೂ ಸಹ ಸ್ವತಹವೇ ಯುಕ್ತಿವಶದಿಂದ (ದ್ರವ್ಯಾರ್ಥಿಕ ನಯದಿಂದ) ವಿಧಿರೂಪ (ದ್ರವ್ಯರೂಪ) ಆಗುತ್ತದೆ.

ವಸ್ತುವ್ಯವಸ್ಥೆಯನ್ನು ತಿಳಿಯುವ ಸಲುವಾಗಿ ಈಗ ಈ ಗಾಥೆಯಿಂದ ಹೆಚ್ಚು ಪ್ರಮಾಣ ಏನು ಬಯಸುತ್ತೀರಿ ? ಇಲ್ಲಿ ಅದನ್ನೇ ಹೇಳಿದ್ದಾರೆ. ಏನಂದರೆ ದ್ರವ್ಯದೃಷ್ಟಿ ಅಥವಾ ಪರ್ಯಾಯ ದೃಷ್ಟಿಯ ಅನುಸಾರ ಒಂದೇ ವಸ್ತು ಕ್ರಮದಿಂದ ದ್ರವ್ಯರೂಪ ಅಥವಾ ಪರ್ಯಾಯ ರೂಪ ತಿಳಿದು ಬರುತ್ತದೆ. ಯಾವದೇ ಕ್ಷೇತ್ರದ ಅಪೇಕ್ಷೆಯಿಂದ ವಿಭಾಗವಿಲ್ಲ. ಇದುವೇ ವಿಧಿ ಇದೆ. ಜೈನಸಿದ್ಧಾಂತದ ಪರ್ಯಾಯರಹಿತ ದ್ರವ್ಯವನ್ನು ನೋಡುವದು ಮುಖ್ಯವಿದೆ.

**ಶ್ಲೋಕ ೩೦೮ :** ಈ ಪ್ರಕಾರ ಇಲ್ಲಿ ತತ್ವವನ್ನು ತಿಳಿಯುವಂಥ ಯಾವನೇ ಜೈನ ತತ್ವಜ್ಞಾನಿಯನ್ನು ಸ್ಯಾದ್ವಾದಿ ಎಂದು ಕರೆಯುತ್ತಾರೆ. ಹಾಗೂ ಇದನ್ನು ಬೇರೆ ತಿಳಿಯುವಂಥವನಿಗೆ ಸಿಂಹ ಮಾಣವಕ (ಬೆಕ್ಕಿಗೆ ಸಿಂಹವೆಂದು ತಿಳಿಯುವವ)ನೆಂದು ಕರೆಯುತ್ತಾರೆ.

ಈ ಪ್ರಕಾರ ಅನೇಕಾಂತಾತ್ಮಕ ತತ್ವವನ್ನು ವಿವಕ್ಷಾವಶ ವಿಧಿ ಮತ್ತು ನಿಷೇಧ ರೂಪ ತಿಳಿಯುವಂಥ ಯಾವನೇ ನಿಜವಾದ ತತ್ವಜ್ಞಾನಿ ಜೈನನಿಗೆ ಸ್ಯಾದ್ವಾದಿ ಎಂದು ಕರೆಯುತ್ತಾರೆ. ಇದರಿಂದ ಬೇರೆ ಪ್ರಕಾರದಿಂದ ವಸ್ತು ಸ್ವರೂಪವನ್ನು ತಿಳಿಯುವಂಥ ಪುರುಷನಿಗೆ ನಿಜವಾದ ತತ್ವಜ್ಞಾನಿ ಅಥವಾ ಸ್ಯಾದ್ವಾದಿ ಎಂದು ಹೇಳಲಾಗುವದಿಲ್ಲ. ಅವನನ್ನು ಸಿಂಹ ಮಾಣವಕನೆಂದು ಕರೆಯುತ್ತಾರೆ. ಅಂದರೆ ಹೇಗೆ ಬೆಕ್ಕಿಗೆ ಸಿಂಹವೆಂದು ಕರೆಯುತ್ತಾರೆ, ಆದರೆ ನಿಜವಾಗಿಯೂ ಅದು ಸಿಂಹವಲ್ಲ, ಬೆಕ್ಕೇ ಇದೆ. ಮೇಲೆ ಹೇಳಿದ ಅನುಸಾರ ತತ್ವವನ್ನು ತಿಳಿಯದೇ ಬೇರೆ ಪ್ರಕಾರದಿಂದ ತಿಳಿಯುವಂಥ ಪುರುಷರಿಗೂ ಸಹ ಉಪಚಾರದಿಂದಲೇ ತತ್ವಜ್ಞಾನಿ ಎಂದು ಕರೆಯಲಾಗುತ್ತದೆ. ನಿಜವಾಗಿಯೂ ಅಲ್ಲ. ಆದ್ದರಿಂದ ವಿಧಿಪೂರ್ವಕವಾಗಿ ವಸ್ತುವ್ಯವಸ್ಥೆಯನ್ನು ಮನ್ನಿಸುವದಿಲ್ಲ. ಅವನನ್ನು ನಿಯಮದಿಂದ ಮಿಥ್ಯಾತ್ವಿ ಎಂದು ತಿಳಿಯಬೇಕು.

**ಶ್ಲೋಕ ೩೩೮ :** ಸತ್ ಸ್ವತಃ ಸಿದ್ಧವಿದೆ, ನಿತ್ಯವಿದೆ. ಅದೇ ಪ್ರಕಾರ ಅದು ಪರಿಣಮನಶೀಲ ಸಹ ಇದೆ. (ಉತ್ಪಾದ-ವ್ಯಯರೂಪ=ಅನಿತ್ಯವೂ ಸಹ ಇದೆ) ಆದ್ದರಿಂದ ಒಂದು ಸತ್‌ವು ಎರಡು ಸ್ವಭಾವ ಉಳ್ಳದ್ದಾಗುವದರಿಂದ (ಎರಡು

ಭಾಗವುಳ್ಳದ್ದು ಎಂದು ತಿಳಿಯಬೇಡಿ.) ಅದು ನಿತ್ಯ ಹಾಗೂ ಅನಿತ್ಯ ರೂಪವಿದೆ. ಹೀಗೆ ಇಲ್ಲ. ಏಕೆಂದರೆ ಒಂದು ಭಾಗವು ಅಪರಿಣಾಮಿ ಮತ್ತು ಒಂದು ಭಾಗವು ಪರಿಣಾಮಿ ಇದೆ. ಈ ಅಪೇಕ್ಷೆಯಿಂದ ಧ್ರುವವನ್ನು ಅಪರಿಣಾಮಿ ಎಂದು ಹೇಳಲಾಗುತ್ತದೆ. ಆದರೆ ಹಾಗೆ ಮನ್ನಿಸಲು ಬರುವದಿಲ್ಲ.

**ಶ್ಲೋಕ ೪೧೧ :** ನಿಶ್ಚಯದಿಂದ ಅಭಿನ್ನ ಪ್ರದೇಶವಾಗಿರುವದರಿಂದ ಕಥಂಚಿತ್ ಸತ್ (ಧ್ರುವ=ದ್ರವ್ಯ) ಮತ್ತು ಪರಿಣಾಮದಲ್ಲಿ ಅದ್ವೈತತಾ ಇದೆ ಹಾಗೂ ದೀಪಕ ಮತ್ತು ಪ್ರಕಾಶದ ಪ್ರಕಾರ ಸಂಜ್ಞಾ-ಲಕ್ಷಣ ಮುಂತಾದವುಗಳ ಮೂಲಕ ಭೇದವಾಗುವದರಿಂದ ಸತ್ ಮತ್ತು ಪರಿಣಾಮದಲ್ಲಿ ದ್ವೈತ ಸಹ ಇದೆ. ಅಂದರೆ ದ್ರವ್ಯ ಮತ್ತು ಪರ್ಯಾಯ ಈ ಎರಡೂ ಅಭಿನ್ನ ಪ್ರದೇಶ ಆಗಿರುವದರಿಂದ ಅಭೇದ ರೂಪ ಇವೆ ಮತ್ತು ಲಕ್ಷಣದ ಮೂಲಕ ಭೇದ ಮಾಡಿದ ಬಳಿಕ ಭೇದರೂಪ ಸಹ ಇದೆ. ಆದ್ದರಿಂದ ಕಥಂಚಿತ್ ಭೇದ-ಕಥಂಚಿತ್ ಅಭೇದ ರೂಪ ಎಂದು ಹೇಳಲಾಗುತ್ತದೆ.

**ಶ್ಲೋಕ ೪೧೨ :** ಸತ್ ಮತ್ತು ಪರಿಣಾಮದ ದ್ವೈತತೆಯು ನೀರು ಮತ್ತು ಅದರ ತರಂಗಗಳ ಪ್ರಕಾರ ಅಭಿನ್ನ ಹಾಗೂ ಭಿನ್ನ ಸಹ ಇದೆ. ಏಕೆಂದರೆ ನೀರು ಹಾಗೂ ತರಂಗಗಳಲ್ಲಿಂದ ಯಾವ ಸಮಯ ತರಂಗಗಳ ಅಪೇಕ್ಷೆಯಿಂದ ವಿಚಾರ ಮಾಡಲಾಗುತ್ತದೆ. ಆ ಸಮಯ ತರಂಗಗಳು ಏಳುತ್ತವೆ ಹಾಗೂ ವಿಲೀನ ಸಹ ಆಗುತ್ತವೆ. ಆದ್ದರಿಂದ ಅವು ನೀರಿನಿಂದ ಕಥಂಚಿತ್ ಭಿನ್ನ ಇರುತ್ತವೆ ಹಾಗೂ ಯಾವ ಸಮಯ ನೀರಿನ ಅಪೇಕ್ಷೆಯಿಂದ ವಿಚಾರ ಮಾಡಲಾಗುತ್ತದೆ. ಆ ಸಮಯ ತರಂಗಗಳು ಉದಯಮಾನ ಹಾಗೂ ವಿಲಯಮಾನವೇ ಆಗುವದಿಲ್ಲ. ಆದರೆ ಕೇವಲ ನೀರೇ ನೀರು ಕಂಡುಬರುತ್ತದೆ. ಆದ್ದರಿಂದ ಅವು ನೀರಿನಿಂದ ಕಥಂಚಿತ್ ಅಭಿನ್ನವೂ ಸಹ ಇವೆ. ಈ ಪ್ರಕಾರ ಸತ್ (ಧ್ರುವ) ಮತ್ತು ಪರಿಣಾಮವೂ ಸಹ ಕಥಂಚಿತ್ ಭಿನ್ನ ಹಾಗೂ ಕಥಂಚಿತ್ ಅಭಿನ್ನ ಇರುತ್ತವೆ. ಇದುವೇ ವಿಧಿ ಇದೆ. ತ್ರಿಕಾಲಿ ಧ್ರುವ ಭಗವಾನ ಆತ್ಮನ ಪ್ರಾಪ್ತಿ ಮಾಡಿಕೊ. ಬೇರೇನೂ ಬೇಡ. ಇದರಿಂದ ಬೇರೆ ಮನ್ನಿಸುವದರಿಂದ ಮಿಥ್ಯಾತ್ವದ ದೋಷ ಬರುತ್ತದೆ.

**ಶ್ಲೋಕ ೫೯೧ :** ನಯಗಳ ಪರಸ್ಪರ ಸಾಪೇಕ್ಷತೆಯು ಅದು ನಯಗಳ ಬೇರೆ ರೂಪದಿಂದ ಉಂಟಾಗದೇ ಇರುವ ಅವಿನಾಭಾವದ ದ್ಯೋತಕವಿದೆ. ಏಕೆಂದರೆ ಯಾವುದರ ಹೊರತು ಯಾವುದರ ಸಿದ್ಧಿ ಆಗದೇ ಇದ್ದರೆ ಅದನ್ನು ಅವಿನಾಭಾವಿ ಎಂದು ಹೇಳುತ್ತಾರೆ. ಸಾಮಾನ್ಯದ ಹೊರತು ವಿಶೇಷದ ಹಾಗೂ ವಿಶೇಷದ ಹೊರತು ಸಾಮಾನ್ಯದ ಸಿದ್ಧಿ ಆಗಲಾರದು. ಆದ್ದರಿಂದ ಸಾಮಾನ್ಯವನ್ನು ವಿಷಯ ಮಾಡುವಂಥ ಯಾವ ದ್ರವ್ಯಾರ್ಥಿಕ ನಯವಿದೆ ಹಾಗೂ ವಿಶೇಷವನ್ನು ವಿಷಯ ಮಾಡುವಂಥ ಯಾವ ಪರ್ಯಾಯಾರ್ಥಿಕ ನಯವಿದೆ ಹಾಗೂ ವಿಶೇಷವನ್ನು ವಿಷಯ ಮಾಡುವಂಥ ಯಾವ ಪರ್ಯಾಯಾರ್ಥಿಕ ನಯವಿದೆ ಆ ಎರಡರಲ್ಲಿ ಪರಸ್ಪರ ಸಾಪೇಕ್ಷ ಇದೆ.

ಜೈನ ಸಿದ್ಧಾಂತದ ಅನುಸಾರ ವಸ್ತುವಿನ ಸ್ವರೂಪವನ್ನು ಸರಿಯಾಗಿ ತಿಳಿಯದ ಹೊರತು ವಿಕೃತ ಧಾರಣೆಗಳು ಕೊನೆಯಾಗಲು ಸಾಧ್ಯವೇ ಇಲ್ಲ. ವಿಕೃತ ಧಾರಣೆಗಳ ಕೊನೆಯು ಮೋಕ್ಷ ಮಾರ್ಗದ ಪ್ರವೇಶದ ಸಲುವಾಗಿ ಅತ್ಯಂತ ಅವಶ್ಯಕವಿದೆ. ಸಮ್ಯಗ್ದರ್ಶನ ಪ್ರಾಪ್ತ ಮಾಡುವ ಸಲುವಾಗಿ ವಿಕೃತ ಧಾರಣೆಗಳನ್ನು ಕೊನೆ ಮತ್ತು ಸಮ್ಯಕ್‌ಧಾರಣೆಯ ಸ್ವೀಕಾರ ಮಾಡುವದು ಬಹಳ ಜರೂರ ಇವೆ.

ಇಲ್ಲಿ ದ್ರವ್ಯ, ಗುಣ, ಪರ್ಯಾಯದಿಂದ ಕೂಡಿದ ಸತ್‌ಸ್ವರೂಪ ವಸ್ತು ಅರ್ಥಾತ್ ಉತ್ಪಾದ-ವ್ಯಯ-ಧ್ರೌವ್ಯ ಸ್ವರೂಪ ಸತ್‌ರೂಪ ದ್ರವ್ಯದ ವ್ಯವಸ್ಥೆಯನ್ನು ಪೂರ್ಣವಾಗಿ ತಿಳಿಸಲಾಗಿದೆ. ಅದನ್ನು ಸರಿಯಾಗಿ ತಿಳಿದುಕೊಳ್ಳಿರಿ ಎಂಬ ನಮ್ಮ ಆಶೆಯಿದೆ. ಎಲ್ಲರೂ ಸಮ್ಯಗ್ದರ್ಶನದ ವಿಧಿ ಮತ್ತು ಅದರ ಪ್ರಾಪ್ತಿಯ ಸಲುವಾಗಿ ಪುರುಷಾರ್ಥ ಮಾಡಿರಿ. ಈಗ ಸಮ್ಯಗ್ದರ್ಶನದ ವಿಷಯದ (ದೃಷ್ಟಿಯ ವಿಷಯ) ಮೇಲೆ ಸ್ವಲ್ಪ ವಿಚಾರ ಮಾಡೋಣ ಮತ್ತು ಅದರ ಕುರಿತು ಶಾಸ್ತ್ರೀಯ ಆಧಾರ ಹೇಗಿದೆ ಎಂಬುದನ್ನು ತಿಳಿಯೋಣ.

★★★

## ೭. ಸಮ್ಯಗ್ದರ್ಶನದ ಸ್ವರೂಪ

ಸಮ್ಯಗ್ದರ್ಶನವು ಮೋಕ್ಷಮಾರ್ಗದ ಬಾಗಿಲು ಸಮಾನವಿದೆ. ಪೂರ್ಣ ಭೇದಜ್ಞಾನ ಸ್ವರೂಪ ಸ್ವಾತ್ಮಾನುಭೂತಿ ರೂಪ ಸಮ್ಯಗ್ದರ್ಶನ ಆಗದ ಹೊರತು ಮೋಕ್ಷಮಾರ್ಗದಲ್ಲಿ ಪ್ರವೇಶವು ಸಾಧ್ಯವೇ ಇಲ್ಲ. ಇಂಥ ಭೇದಜ್ಞಾನದಿಂದ ಕೂಡಿದ ಸ್ವಾತ್ಮಾನುಭೂತಿಯುಕ್ತ ಸಮ್ಯಗ್ದರ್ಶನವನ್ನೇ ನಿಶ್ಚಯ ಸಮ್ಯಗ್ದರ್ಶನ ಎಂದು ಹೇಳಲಾಗುತ್ತದೆ. ಅದುವೇ ಮೋಕ್ಷಮಾರ್ಗದ ಪ್ರವೇಶದ ಸಲುವಾಗಿ ನಿಜವಾದ ಅನುಮತಿ ಪತ್ರ ಇರುತ್ತದೆ ಮತ್ತು ಈ ಅನುಮತಿ ಪತ್ರ ದೊರೆತ ನಂತರ ಆ ಜೀವವು ನಿಯಮದಿಂದ ಅರ್ಧ ಪುದ್ಗಲ ಪರಾವರ್ತನ ಕಾಲದಲ್ಲಿ ಸಿದ್ಧರಾಗಿಯೇ ಆಗುತ್ತದೆ. ಈ ಕಾರಣದಿಂದ ಈ ಜೀವನದಲ್ಲಿ ಎಲ್ಲಕ್ಕಿಂತ ಮೊದಲು ಏನಾದರೂ ಪ್ರಾಪ್ತ ಮಾಡಲು ಯೋಗ್ಯ ಇದ್ದರೆ ಅದು ಸಮ್ಯಗ್ದರ್ಶನವೇ ಇರುತ್ತದೆ.

ಮೊಟ್ಟ ಮೊದಲು ನಾವು ಸಮ್ಯಗ್ದರ್ಶನದ ಸ್ವರೂಪವನ್ನು ತಿಳಿಯೋಣ. ಸಮ್ಯಗ್ದರ್ಶನ ಅರ್ಥಾತ್ ದೇವ-ಶಾಸ್ತ್ರ-ಗುರುಗಳ ಸ್ವರೂಪ ಹೇಗಿದೆಯೋ ಹಾಗೆಯೇ ತಿಳಿಯುವದು. ಎಲ್ಲಿಯತನಕ ಯಾವದೇ ಆತ್ಮನು ತನ್ನ ಯಥಾರ್ಥ ಸ್ವರೂಪವನ್ನು ತಿಳಿಯುವದಿಲ್ಲ. ಅಂದರೆ 'ಸ್ವ'ದ ಅನುಭೂತಿ ಮಾಡುವದಿಲ್ಲ. ಅಲ್ಲಿಯವರೆಗೆ ದೇವ-ಶಾಸ್ತ್ರ-ಗುರುಗಳದೂ ಯಥಾರ್ಥ ಸ್ವರೂಪವೂ ಸಹ ತಿಳಿಯುವದಿಲ್ಲ. ಆದರೆ ಅವನು ದೇವ-ಶಾಸ್ತ್ರ-ಗುರುಗಳ ಕೇವಲ ಬಾಹ್ಯ ಸ್ವರೂಪದ ಶ್ರದ್ಧೆ ಮಾಡುತ್ತಾನೆ. ಅವನು ಅದನ್ನೇ ಸಮ್ಯಗ್ದರ್ಶನ ಎಂದು ತಿಳಿಯುತ್ತಾನೆ. ಆದರೆ ದೇವ-ಶಾಸ್ತ್ರ-

ಗುರುಗಳ ಬಾಹ್ಯ ಸ್ವರೂಪದ ಶ್ರದ್ಧೆ ಯಥಾರ್ಥ ಶ್ರದ್ಧೆ ಇರುವದಿಲ್ಲ ಮತ್ತು ಅದರಿಂದ ಅದು ನಿಶ್ಚಯ ಸಮ್ಯಗ್ದರ್ಶನದ ಲಕ್ಷಣವೂ ಅಲ್ಲ. ಏಕೆಂದರೆ ಯಾರು ಆತ್ಮನನ್ನು ತಿಳಿಯುತ್ತಾರೋ ಅವರು ಜೀವ, ಅಜೀವಾದಿ ಒಂಬತ್ತು ತತ್ವಗಳನ್ನು ಮತ್ತು ದೇವ, ಶಾಸ್ತ್ರ, ಗುರುಗಳ ಯಥಾರ್ಥ ಸ್ವರೂಪವನ್ನು ತಿಳಿಯುತ್ತಾರೆ. ಆದರೆ ಅದು ಬೇರೆ ಇದ್ದರೆ ಅದು ವ್ಯವಹಾರ (ಉಪಚಾರ) ಕಥನವಿದೆ ಮತ್ತು ಅದು ಸಮ್ಯಗ್ದರ್ಶನದ ಪ್ರಾಪ್ತಿಯ ಸಲುವಾಗಿ ಕಾರ್ಯಕಾರಿ ಇರುವದಿಲ್ಲ. ತನ್ನ ಆತ್ಮನನ್ನು ತಿಳಿಯುವದರಿಂದಲೇ ಆ ಜೀವವು ನಿಜವಾದ ದೇವತತ್ವದ ಅಂಶಿಕ ಅನುಭವ ಮಾಡುತ್ತಾನೆ ಮತ್ತು ಅದರಿಂದ ಅವನು ನಿಜವಾದ ದೇವರನ್ನು ಅಂತಃಕರಣದಿಂದ ಗುರುತಿಸುತ್ತಾನೆ. ಹೀಗೆ ನಿಜವಾದ ದೇವನನ್ನು ತಿಳಿಯುತ್ತಲೇ (ಸ್ವಾತ್ಮಾನುಭೂತಿ ಸಹಿತ) ಶ್ರದ್ಧೆ ಆಗುತ್ತಲೇ ಆ ಜೀವವು ದೇವನಾಗುವ ಮಾರ್ಗದಲ್ಲಿ ಗಮನಶೀಲರಾದ ನಿಜವಾದ ಗುರುವನ್ನು ಸಹ ಅಂತಃಕರಣದಿಂದ ಗುರುತಿಸುತ್ತಾನೆ ಮತ್ತು ಜೊತೆಯಲ್ಲಿಯೇ ಆ ಜೀವನು ದೇವನಾಗುವ ಮಾರ್ಗವನ್ನು ತಿಳಿಸುವಂಥ ನಿಜವಾದ ಶಾಸ್ತ್ರವನ್ನು ಸಹ ಗುರುತಿಸುತ್ತಾನೆ.

ಮೊದಲು ಶರೀರಕ್ಕೆ ಆತ್ಮನೆಂದೂ, ನಾನು ಎಂದೂ ತಿಳಿಯಬಾರದು ಮತ್ತು ಆತ್ಮನಿಗೆ ಶರೀರವೆಂದು ತಿಳಿಯಬಾರದು. ಅಂದರೆ ಶರೀರದಲ್ಲಿ ಆತ್ಮಬುದ್ಧಿ ಆಗುವದು. ಅದು ಮಿಥ್ಯಾತ್ವವಿದೆ. ಶರೀರವಂತೂ ಪುದ್ಗಲ (ಜಡ) ದ್ರವ್ಯದಿಂದ ತಯಾರಾಗಿದೆ ಮತ್ತು ಆತ್ಮನು ಬೇರೆಯೇ ಚೇತನ ದ್ರವ್ಯನಾಗಿರುವದರಿಂದ ಪುದ್ಗಲಕ್ಕೆ ಆತ್ಮನೆಂದು ತಿಳಿಯುವದು ಅಥವಾ ಆತ್ಮನಿಗೆ ಪುದ್ಗಲವೆಂದು ತಿಳಿಯುವದು ಇದು ವಿಪರೀತ ತಿಳಿವಳಿಕೆ ಆಗಿದೆ. ನಿಜವಾಗಿಯೂ ಪುದ್ಗಲದಿಂದ ಭೇದಜ್ಞಾನ ಮತ್ತು ಸ್ವದ ಅನುಭವ ರೂಪವೇ ನಿಜವಾದ ಸಮ್ಯಗ್ದರ್ಶನವಾಗಿದೆ ಮತ್ತು ಅದು ಕರ್ಮದಿಂದ ನೋಡುವಲ್ಲಿ ಬಂದರೆ ಕರ್ಮಗಳ / ಐದು ಏಳು ಪ್ರಕೃತಿಗಳ ಉಪಶಮ, ಕ್ಷಯೋಪಶಮ ಅಥವಾ ಕ್ಷಯವನ್ನು ಸಮ್ಯಗ್ದರ್ಶನ ಎಂದು ಹೇಳಲಾಗುತ್ತದೆ. ಆದರೆ ಛದ್ಮಸ್ಥನಿಗೆ ಕರ್ಮಗಳ ಜ್ಞಾನವೇ ಆಗುವದಿಲ್ಲ. ಆದ್ದರಿಂದ ತನ್ನನ್ನು ಮೊದಲು ಒರೆಗಲ್ಲಿನಿಂದ ಅಂದರೆ ಪುದ್ಗಲದಿಂದ ಭೇದಜ್ಞಾನ ಮತ್ತು ಸ್ವಾನುಭವರೂಪ (ಆತ್ಮಾನುಭೂತಿ ರೂಪ)ವಾಗಿ ತಿಳಿಯುವದು ಸಮ್ಯಗ್ದರ್ಶನವಾಗಿದೆ.

**ಪ್ರಶ್ನ : ಸಮ್ಯಗ್ದರ್ಶನದ ಸಲುವಾಗಿ ಏನು ಮಾಡುವದು ಅವಶ್ಯಕವಿದೆ ?**

ಉತ್ತರ : ಭಗವಾನರು ಹೇಳಿದ್ದಾರೆ – ಏನಂದರೆ ಎಲ್ಲ ಜೀವರುಗಳು ಸ್ವಭಾವದಿಂದ ಸಿದ್ಧಸಮಾನವೇ ಇದ್ದಾರೆ. ಆದರೆ ಈ ಮಾತು ತಿಳಿಯುವದು ಅವಶ್ಯಕವಿದೆ. ನಿಯಮಸಾರ ಶ್ರೀ ಪದ್ಮಪ್ರಭ ಮಲಧಾರಿದೇವ ಕೃತ ಟೀಕೆಯಲ್ಲಿ ಹೇಳಿದ್ದಾರೆ. ಏನಂದರೆ –

**ಗಾಥಾ ೪೭ :** ಯಾವ ಪ್ರಕಾರ ಸಿದ್ಧ ಆತ್ಮರುಗಳು ಇದ್ದಾರೆ, ಅದೇ ಪ್ರಕಾರ ಸಂಸಾರಿ ಜೀವರುಗಳು ಇವೆ. ಅದರಿಂದ ಸಂಸಾರಿ ಜೀವರುಗಳೂ ಸಹ ಸಿದ್ಧರಂತೆ ಜನ್ಮ ಮರಣದಿಂದ ರಹಿತ ಮತ್ತು ಎಂಟು ಗುಣಗಳಿಂದ ಅಲಂಕೃತರಿದ್ದಾರೆ.

**ಗಾಥಾ ೪೮ :** ಯಾವ ಪ್ರಕಾರ ಲೋಕಾಗ್ರದಲ್ಲಿ ಸಿದ್ಧ ಭಗವಂತರುಗಳು ಅಶರೀರಿ, ಅವಿನಾಶಿ, ಅತೀಂದ್ರಿಯ, ನಿರ್ಮಲ ಮತ್ತು ವಿಶುದ್ಧ ಆತ್ಮರಿದ್ದಾರೆ, ಅದೇ ಪ್ರಕಾರ ಸಂಸಾರದಲ್ಲಿಯ ಎಲ್ಲ ಜೀವರುಗಳನ್ನು ತಿಳಿಯಬೇಕು. ಈ ಮಾತು ಶುದ್ಧ ದ್ರವ್ಯಾರ್ಥಿಕ ನಯದ ಅಪೇಕ್ಷೆಯಿಂದ ಇರುತ್ತದೆ. ಯಾಕೆಂದರೆ ಸಮ್ಯಗ್ದರ್ಶನದ ಸ್ವರೂಪ ತಿಳಿಸುವ ಸಲುವಾಗಿ ಉಪಯೋಗಿ ಇರುತ್ತದೆ.

**ಗಾಥಾ ೧೫ :** ಮನುಷ್ಯ, ನಾರಕ, ತಿರ್ಯಂಚ ಮತ್ತು ದೇವರೂಪ ಪರ್ಯಾಯಗಳು ಇವೆ. ಅವನ್ನು ವಿಭಾವ ಪರ್ಯಾಯಗಳೆಂದು ಹೇಳಲಾಗಿದೆ ಮತ್ತು ಕರ್ಮಗಳ ಉಪಾಧಿರಹಿತವಾದ ಪರ್ಯಾಯಗಳಿವೆ. ಅವನ್ನು ಸ್ವಭಾವ ಪರ್ಯಾಯಗಳೆಂದು ಹೇಳಲಾಗುತ್ತದೆ.

**ಗಾಥಾ ೪೯ :** ಮೊದಲು ಹೇಳಿದ ಎಲ್ಲ ಭಾವಗಳು ನಿಜವಾಗಿಯೂ ವ್ಯವಹಾರ ನಯದ ಆಶ್ರಯದಿಂದ (ಸಂಸಾರಿ ಜೀವರುಗಳಲ್ಲಿ ಇರುವಂಥ) ಹೇಳಲಾಗುತ್ತದೆ. ಶುದ್ಧ ನಯದಿಂದ ಸಂಸಾರದಲ್ಲಿ ಇರುವ ಎಲ್ಲ ಜೀವರುಗಳು ಸಿದ್ಧಸ್ವಭಾವದವರು ಇದ್ದಾರೆ.

**ಶ್ಲೋಕ ೨೩ :** ಶುದ್ಧ ನಿಶ್ಚಯ ನಯದಿಂದ ಮುಕ್ತಿಯಲ್ಲಿ ಹಾಗೂ ಸಂಸಾರದಲ್ಲಿ ಅಂತರ ಇರುವದಿಲ್ಲ. ನಿಜವಾಗಿಯೂ ಹೀಗೆಯೇ ತತ್ವ ವಿಚಾರ ಮಾಡಿದ ಮೇಲೆ ಪರಮಾರ್ಥ ವಸ್ತು ಸ್ವರೂಪದ ವಿಚಾರ ಅಥವಾ ನಿರೂಪಣ ಮಾಡಿದ ಮೇಲೆ) ಶುದ್ಧತತ್ವದ ಜ್ಞಾನಿ ಪುರುಷನೆಂದು ಹೇಳುತ್ತಾರೆ.

**ಗಾಥೆ ೫೦ :** ಮೊದಲು ಹೇಳಿದ ಎಲ್ಲ ಭಾವಗಳು ಪರಸ್ವಭಾವಗಳು ಇರುತ್ತವೆ. ಪರದ್ರವ್ಯ ಇರುತ್ತವೆ. ಆದ್ದರಿಂದ ಹೇಯ ಇರುತ್ತವೆ. ಅಂತಃತತ್ವದಂಥ ಸ್ವದ್ರವ್ಯವು ಆತ್ಮವೇ ಉಪಾದೇಯವಿದೆ.

**ಗಾಥೆ ೧೦೬ :** ಈ ಪ್ರಕಾರ ಯಾವನು ಯಾವಾಗಲೂ ಜೀವ ಮತ್ತು ಕರ್ಮದ ಭೇದದ ಅಭ್ಯಾಸ ಮಾಡುತ್ತಾನೆ. ಆ ಸಂಯತನು ನಿಯಮದಿಂದ ಪ್ರತ್ಯಾಖ್ಯಾನ ಧರಿಸುವಲ್ಲಿ ಸಮರ್ಥ ಇರುತ್ತಾನೆ.

**ಗಾಥೆ ೧೦ :** ಜೀವವು ಉಪಯೋಗಮಯವಿದೆ. ಉಪಯೋಗವು ಜ್ಞಾನ ಮತ್ತು ದರ್ಶನವಿದೆ. ಜ್ಞಾನೋಪಯೋಗವು ಸ್ವಭಾವ ಜ್ಞಾನ ಮತ್ತು ವಿಭಾವ ಜ್ಞಾನವೆಂದು ಎರಡು ಪ್ರಕಾರವಾಗಿರುತ್ತದೆ.

**ಯೋಗಸಾರ ಶ್ಲೋಕ ೨೨ :** ಯಾವನು ಪರಮಾತ್ಮನಿದ್ದಾನೆ – ಅವನೇ ನಾನು ಇದ್ದೇನೆ ಮತ್ತು ಯಾವ ನಾನು ಇದ್ದೇನೆ – ಅವನೇ ಪರಮಾತ್ಮ ಇದ್ದೇನೆ. ಹೀಗೆ ತಿಳಿದುಕೊಂಡು ಹೇ ಯೋಗಿ! ಬೇರೆ ವಿಕಲ್ಪ ಮಾಡಬೇಡ.

**ಪ್ರಶ್ನೆ : ಮೇಲೆ ಹೇಳಲಾದ ಗಾಥೆಗಳ ಸಂದರ್ಭದಲ್ಲಿ ವಿಚಾರ ಮಾಡಿದರೆ ತೋರುವ ರೂಪದಿಂದ ಜೀವಗಳು ಶರೀರಸ್ಥ ಇವೆ ಮತ್ತು ಸಿದ್ಧರ ಜೀವಗಳು ಮುಕ್ತ ಇವೆ. ಆದರೆ ಸಂಸಾರಿಗೆ ಸಿದ್ಧರಂತೆ ಎಂದು ಯಾವ ಅಪೇಕ್ಷೆಯಿಂದ ಹೇಳಲಾಗಿದೆ ?**

ಉತ್ತರ : ಇದನ್ನು ಶುದ್ಧ ದ್ರವ್ಯಾರ್ಥಿಕ ನಯದ ಅಪೇಕ್ಷೆಯಿಂದ ಹೇಳಲಾಗಿದೆ. ಹೇಗೆಂದರೆ ಸಂಸಾರಿ ಜೀವರುಗಳು ಶರೀರಸ್ಥ ಇದ್ದರೂ ಸಹ ಅವರ ಆತ್ಮವು ಒಂದು ಜೀವತ್ವರೂಪ ಪಾರಿಣಾಮಿಕಭಾವ ರೂಪ ಇರುತ್ತದೆ. ಅದು ಜೀವತ್ವರೂಪ ಭಾವವು ಛದ್ಮಸ್ಥನಿಗೆ (ಅಶುದ್ಧ ದ್ರವ್ಯಾರ್ಥಿಕ ನಯದಿಂದ) ಅಶುದ್ಧ ಆಗುತ್ತದೆ ಮತ್ತು ಆ ಅಶುದ್ಧ ಜೀವತ್ವ ಭಾವವು ಅರ್ಥಾತ್ ಅಶುದ್ಧರೂಪದಿಂದ ಪರಿಣಮಿತ ಆತ್ಮನಲ್ಲಿಂದ ಅಶುದ್ಧಿಯನ್ನು (ವಿಭಾವ ಭಾವವನ್ನು) ಗೌಣ ಮಾಡುತ್ತಲೇ ಯಾವ ಜೀವತ್ವರೂಪ ಭಾವ ಉಳಿದಿರುತ್ತದೆ. ಅದನ್ನೇ ಪರಮ ಪಾರಿಣಾಮಿಕ ಭಾವ, ಧ್ರುವಭಾವ, ಶುದ್ಧಾತ್ಮ, ಕಾರಣ ಪರಮಾತ್ಮ, ಕಾರಣಶುದ್ಧ ಪರ್ಯಾಯ, ಸಿದ್ಧಸದೃಶಭಾವ, ಸ್ವಭಾವಭಾವ ಮುಂತಾದ ಅನೇಕ ಹೆಸರುಗಳಿಂದ ಗುರುತಿಸಲಾಗುತ್ತದೆ. ಆ ಭಾವದ ಅಪೇಕ್ಷೆಯಿಂದಲೇ ಎಲ್ಲ ಜೀವಗಳು ಸ್ವಭಾವದಿಂದ ಸಿದ್ಧ ಸಮಾನವೇ ಇರುತ್ತವೆ ಎಂದು ಹೇಳಲಾಗುತ್ತದೆ. ಈಗ ನಾವು ಇದೇ ಮಾತನ್ನು ದೃಷ್ಟಾಂತದ ಮೂಲಕ ನೋಡೋಣ.

ದೃಷ್ಟಾಂತ ೧ – ಹೇಗೆ ಹೊಲಸು ನೀರಲ್ಲಿ ಶುದ್ಧ ನೀರು ಅಡಗಿರುತ್ತದೆ. ಹಾಗೆಯೇ ನಿಶ್ಚಯದಿಂದ ಯಾರು ಅದರಲ್ಲಿ ಪಟಕವನ್ನು ತಿರುಗಿಸಿದರೆ ಸ್ವಲ್ಪ ಸಮಯದ ನಂತರ ನೀರಲ್ಲಿ ಇರುವಂಥ ಹೊಲಸು ರೂಪದ ಮಣ್ಣು ತಳದಲ್ಲಿ ಕುಳಿತುಕೊಳ್ಳುವದರಿಂದ ಮೊದಲಿನ ಹೊಲಸು ನೀರು ಈಗ ಸ್ವಚ್ಛ ರೂಪದಿಂದ ಕಂಡುಬರುತ್ತದೆ. ಇದೇ ಪ್ರಕಾರ ಯಾವ ಅಶುದ್ಧ ರೂಪ (ರಾಗ–ದ್ವೇಷ ರೂಪ) ಪರಿಣಮಿತ ಆತ್ಮನಿದ್ದಾನೆ. ಅದರಲ್ಲಿ ವಿಭಾವರೂಪ ಅಶುದ್ಧ ಭಾವವನ್ನು ಪ್ರಜ್ಞಾರೂಪಿ ಉಳಿಯಿಂದ ಬುದ್ಧಿಪೂರ್ವಕವಾಗಿ ಬೇರೆ ಮಾಡುತ್ತಲೇ ಯಾವ ಶುದ್ಧಾತ್ಮನು ಧ್ಯಾನದಲ್ಲಿ ಬರುತ್ತಾನೆ. ಅಂದರೆ ಜ್ಞಾನದಲ್ಲಿ ವಿಕಲ್ಪರೂಪ ಬರುತ್ತದೆ. ಅದನ್ನು ಭಾವಭಾಸನವೆಂದು ಹೇಳುತ್ತಾರೆ ಮತ್ತು ಆ ಶುದ್ಧಾತ್ಮನ ಅನುಭೂತಿ ಆಗುತ್ತಲೇ ಜೀವನಿಗೆ ಸಮ್ಯಗ್ದರ್ಶನ ಆಗುತ್ತದೆ. ಆ ಜೀವವು ಮೊದಲು ಶರೀರದಲ್ಲಿ ಏಕತ್ವಬುದ್ಧಿ ಮಾಡುತ್ತಿದ್ದನು. ಈಗ ಶುದ್ಧ ಆತ್ಮರೂಪದಲ್ಲಿ (ಸ್ವಭಾವದಲ್ಲಿ–ಸ್ವರೂಪದಲ್ಲಿ) ಏಕತ್ವ ಮಾಡುತ್ತಲೇ 'ನನ್ನತನ' ಮಾಡುತ್ತಲೇ ಸಮ್ಯಗ್ದರ್ಶನದ ಅಧಿಕಾರಿ ಆಗುತ್ತಾನೆ. ಇದುವೇ ಸಮ್ಯಗ್ದರ್ಶನದ ವಿಧಿ ಇರುತ್ತದೆ. ಅಂದರೆ ಯಾವ ಜೀವನು ರಾಗದ್ವೇಷರೂಪ ಪರಿಣಮಿತವಾದ ಬಳಿಕವೂ ಸಹ ಕೇವಲ ಶುದ್ಧಾತ್ಮನಲ್ಲಿಯೇ (ದ್ರವ್ಯಾತ್ಮನಲ್ಲಿಯೇ – ಸ್ವಭಾವದಲ್ಲಿಯೇ) ನನ್ನತನ (ಏಕತ್ವ) ಮಾಡುತ್ತಾನೆ ಮತ್ತು ಅದರದೇ ಅನುಭವ ಮಾಡುತ್ತಾನೆ. ಆ ಜೀವವೇ ಸಮ್ಯಗ್ದೃಷ್ಟಿ ಇದೆ. ಸಾಕು, ಇದುವೇ ಸಮ್ಯಗ್ದರ್ಶನದ ವಿಧಿ ಇರುತ್ತದೆ.

ದೃಷ್ಟಾಂತ ೨ : ಹೇಗೆ ಕನ್ನಡಿಯಲ್ಲಿ ಬೇರೆ ಬೇರೆ ಪ್ರಕಾರದ ಅನೇಕ ಪ್ರತಿಬಿಂಬಗಳು ಆಗುತ್ತವೆ. ಆದರೆ ಆ ಪ್ರತಿಬಿಂಬಗಳನ್ನು ಗೌಣ ಮಾಡುತ್ತಲೇ ಸ್ವಚ್ಛ ಕನ್ನಡಿಯು ದೃಷ್ಟಿಯಲ್ಲಿ ಬರುತ್ತದೆ. ಇದೇ ಪ್ರಕಾರ ಆತ್ಮನಲ್ಲಿ ಅಂದರೆ ಜ್ಞಾನದಲ್ಲಿ ಯಾವ ಜ್ಞೇಯಗಳು ಬರುತ್ತವೆಯೋ ಆ ಜ್ಞೇಯಗಳನ್ನು ಗೌಣ ಮಾಡುತ್ತಲೇ ನಿರ್ವಿಕಲ್ಪ ರೂಪ ಜ್ಞಾನದ ಅಂದರೆ 'ಶುದ್ಧಾತ್ಮ'ನ ಅನುಭಾವ ಆಗುತ್ತದೆ. ಇದುವೇ ಸಮ್ಯಗ್ದರ್ಶನದ ವಿಧಿ ಇರುತ್ತದೆ. ಇದೇ ವಿಧಿಯಿಂದ ಅಶುದ್ಧ ಆತ್ಮನಲ್ಲಿಯೂ ಸಹ ಸಿದ್ಧ ಸಮಾನ ಶುದ್ಧಾತ್ಮನ ನಿರ್ಣಯ ಮಾಡುವದು ಮತ್ತು ಅದರದೇ ಜೊತೆಗೆ ಏಕತ್ವ ಮಾಡುವದರಿಂದ ಸಮ್ಯಗ್ದರ್ಶನ ಪ್ರಕಟವಾಗುತ್ತದೆ.

ಕೆಲವರು ಹೀಗೆ ಮನ್ನಿಸಿದ್ದಾರೆ. ಹೇಗೆಂದರೆ ದ್ರವ್ಯದಲ್ಲಿ ಶುದ್ಧ ಭಾಗ ಮತ್ತು ಅಶುದ್ಧ ಭಾಗ ಹೀಗೆ ಎರಡು ಭಾಗಗಳು ಆಗುತ್ತವೆ. ಯಾವದು ಶುದ್ಧ ಭಾಗವಿದೆ. ಅದು ದ್ರವ್ಯವಿದೆ ಹಾಗೂ ಯಾವದು ಅಶುದ್ಧ ಭಾಗವಿದೆ, ಅದು ಪರ್ಯಾಯವಿದೆ. ಹೀಗೆ ಇರುವದಿಲ್ಲ ಈ ಮಾತು ನಾವು ಪ್ರಥಮವಾಗಿ ಶಾಸ್ತ್ರದ ಗಾಥೆಗಳಿಂದ ನಿಃಸಂದೇಹವಾಗಿ ಸಿದ್ಧ ಮಾಡಲಾಗಿದೆ. ಏನಂದರೆ ದ್ರವ್ಯವನ್ನು ಅಪೇಕ್ಷೆಯಿಂದ ತಿಳಿಯುವದರಿಂದ ದ್ರವ್ಯದಲ್ಲಿ ಎರಡು ಭಾಗ ಇಲ್ಲ. ಆದರೆ ಎರಡು ಭಾವಗಳು ಆಗುತ್ತವೆ. ಅವೆರಡೂ ಭಾವಗಳು ಈ ಪ್ರಕಾರ ಇರುತ್ತವೆ. ಯಾವದು ವಿಶೇಷವಿದೆ. ಅದನ್ನು ಪರ್ಯಾಯ ಎಂದು ಕರೆಯುತ್ತಾರೆ ಮತ್ತು ಅದು ವಿಭಾವ ಸಹಿತ ಇರುವದರಿಂದ ಅಶುದ್ಧವೆಂದು ಕರೆಯುತ್ತಾರೆ. ಯಾವದು ಅದರದೇ ಸಾಮಾನ್ಯ ಭಾವ ಇದೆ. ಅದು ಪರಮ ಪಾರಿಣಾಮಿಕ ಭಾವರೂಪ ದ್ರವ್ಯವಿದೆ. ಇದು ತ್ರಿಕಾಲದ ಶುದ್ಧವೇ ಇರುತ್ತದೆ. ಈ ಅಪೇಕ್ಷೆಯಿಂದ ದ್ರವ್ಯ ಶುದ್ಧ ಮತ್ತು ಪರ್ಯಾಯ ಅಶುದ್ಧ ಎಂದು ಹೇಳಲಾಗುತ್ತದೆ. ಆದರೆ ದ್ರವ್ಯದಲ್ಲಿ ಎರಡು ಭಾಗಗಳು ಇರುವದಿಲ್ಲ.

ಛದ್ಮಸ್ಥ ಜೀವಗಳ ಆತ್ಮನ ಪ್ರತಿಯೊಂದು ಪ್ರದೇಶದಲ್ಲಿಯೂ ಅನಂತಾನಂತ ಕರ್ಮವರ್ಗಣೆಗಳು ಇರುತ್ತವೆ ಮತ್ತು ಆ ಕರ್ಮವರ್ಗಣೆಗಳು ಆತ್ಮನ ಎಲ್ಲ ಪ್ರದೇಶಗಳ ಜೊತೆಗೆ ಕ್ಷೀರ ನೀರಿನ (ಹಾಲಿನಲ್ಲಿಯ ನೀರಿನಂತೆ) ಸಂಬಂಧದಿಂದ ಬಂಧವಾಗುವ ಅಪೇಕ್ಷೆಯಿಂದ ಆತ್ಮನ ಯಾವ ಪ್ರದೇಶವೂ ಶುದ್ಧ ಇರುವದಿಲ್ಲ. ಅಂದರೆ ಯಾರೋ ಹೀಗೆ ಹೇಳಿದರು, ಏನಂದರೆ ಆತ್ಮನ ಮಧ್ಯದ ಎಂಟು ರುಚಕ ಪ್ರದೇಶಗಳಂತೂ ನಿರಾವರಣವೇ ಆಗಿರುತ್ತವೆ. ಆದರೆ ಅವನ್ನು ನಾವು ಹೇಳುತ್ತೇವೆ, ಏನಂದರೆ ಒಂದು ವೇಳೆ ಆತ್ಮನ ಕೇವಲ ಒಂದೇ ಪ್ರದೇಶವು ನಿರಾವರಣವಾದರೆ ಆ ಪ್ರದೇಶದಲ್ಲಿ ಬಹಳ ಶಕ್ತಿ ಇರುತ್ತದೆ. ಎಷ್ಟೆಂದರೆ ಅದು ಸಂಪೂರ್ಣ ಲೋಕಾಲೋಕವನ್ನು ತಿಳಿಯುತ್ತದೆ. ಏಕೆಂದರೆ ಒಂದೇ ಪ್ರದೇಶವು ನಿರಾವರಣವಾದರೆ ಆ ಪ್ರದೇಶದಲ್ಲಿ ಕೇವಲಜ್ಞಾನ ಮತ್ತು ಕೇವಲದರ್ಶನಗಳಿವೆ ಎಂದು ಮನ್ನಿಸುವ ಪ್ರಸಂಗ ಬರುವದು ಮತ್ತು ಇದರಿಂದ ಆತ್ಮನು ಸಂಪೂರ್ಣ ಲೋಕಾಲೋಕವನ್ನು ಸಹಜ ರೀತಿಯಿಂದ ತಿಳಿಯುವಂಥವನು ಆಗುವನು. ಆದರೆ ಪ್ರಕಟವಾಗುವಲ್ಲಿ ನೋಡುವದರಿಂದ ಇದು ತಿಳಿದು ಬರುತ್ತದೆ. ಏನಂದರೆ ಹೀಗಾದರೆ

ಯಾವದೇ ಜೀವದಲ್ಲಿ ಪ್ರಕಟವಾದರೂ ಕಾಣಿಸುವದಿಲ್ಲ. ಈ ಕಾರಣ ಜೀವದ ನಡುವಿನ ಎಂಟು ರುಚಕ ಪ್ರದೇಶಗಳು ನಿರಾವರಣ ಆಗಿರುತ್ತವೆ ಎಂಬ ಮಾತಿನ ನಿರಾಕರಣವಾಗುತ್ತದೆ. ಈ ಮಾತಿನದು ಸಹ ದೂರೀಕರಣವಾಗುತ್ತದೆ ಈ ಮಾತು ಸತ್ಯ ಇರುವದಿಲ್ಲ. ಅದರ ಪ್ರಮಾಣವಿದೆ. ಧವಲ ಪುಸ್ತಕ ೧೨ರಲ್ಲಿ ಪುಟ ಸಂಖ್ಯೆ ೩೬೫ ರಿಂದ ೩೬೮ರ ತನಕ ಕೃಪೆ ಮಾಡಿ ಓದಿ ಅರ್ಥೈಸಿಕೊಳ್ಳಿರಿ.

ಕೆಲವು ಜನರು ನಯ ವಿವಕ್ಷಾ ತಿಳಿಯದಿರುವ ಕಾರಣ ಹೀಗೂ ಸಹ ಪ್ರರೂಪಣಾ ಮಾಡುತ್ತಾರೆ. ಏನಂದರೆ ಈ ಎಂಟು ನಿರಾವರಣ ಪ್ರದೇಶಗಳ ಅಪೇಕ್ಷೆಯಿಂದ ಎಲ್ಲ ಜೀವಗಳು ಸಿದ್ಧಸಮಾನ ಇವೆ. ಹೀಗೆ ಶಾಸ್ತ್ರದ ಕಥನವಿದೆ. ಆದರೆ ನಿಜವಾಗಿಯೂ ಎಲ್ಲ ಜೀವಗಳು ಸಿದ್ಧಸಮಾನವೇ ಇವೆ. ಈ ಕಥನವು ದ್ರವ್ಯಾರ್ಥಿಕ ನಯದ ಅಪೇಕ್ಷೆಯಿಂದ ಇದೆ. ಈ ಮಾತು ನಯಗಳ ಯಥಾರ್ಥ ತಿಳಿವಳಿಕೆ ಆಗದಿರುವದರಿಂದ ಹಬ್ಬಿದೆ ಮತ್ತು ಇಂಥ ಜನರು ಆ ನಿರಾವರಣ ಪ್ರದೇಶಗಳ (ಸಂಸಾರಿ ಜೀವಕ್ಕೆ ಆಗುವದಿಲ್ಲ.) ಅನುಭವವನ್ನು ಶುದ್ಧಾತ್ಮನ ಅನುಭವವೆಂದು ಮನ್ನಿಸುತ್ತಾರೆ. ಅವರಿಗೆ ದ್ರವ್ಯದ ಅಭೇದತೆಯ ಮತ್ತು ನಯಗಳದೂ ಸಹ ಯಥಾರ್ಥ ಆಗುವದಿಲ್ಲ. ಇದು ಅತ್ಯಂತ ಕರುಣಾಜನಕ ಮಾತು ಇದೆ.

★★★

## ೮. ಸಮ್ಯಗ್ದರ್ಶನದ ವಿಷಯ (ದೃಷ್ಟಿಯ ವಿಷಯ)

**ಪ್ರಶ್ನ : ಛದ್ಮಸ್ಥ ಆತ್ಮನ ಪ್ರತಿಯೊಂದು ಪ್ರದೇಶದಲ್ಲಿ ಅನಂತ ಕರ್ಮವರ್ಗಣೆಗಳು ಇರುವದರಿಂದ ಆತ್ಮನು ಅಶುದ್ಧ ಆತ್ಮರೂಪದಿಂದಲೇ ಪರಿಣಮಿತನಾಗುತ್ತಾನೆ. ಆದರೆ ಅದರಲ್ಲಿ ಈ ಶುದ್ಧಾತ್ಮನು ಎಲ್ಲಿ ಇರುತ್ತಾನೆ ?**

ಉತ್ತರ : ಜೀವದ ಲಕ್ಷಣದಿಂದ ಜೀವನನ್ನು ಗ್ರಹಣ ಮಾಡುವದರಿಂದ ಮತ್ತು ಪುದ್ಗಲದ ಲಕ್ಷಣದಿಂದ ಪುದ್ಗಲವನ್ನು ಗ್ರಹಣ ಮಾಡುವದರಿಂದ ಹಾಗೂ ಮತ್ತೆ ಅವುಗಳಲ್ಲಿ ಪ್ರಜ್ಞಾರೂಪಿ ಉಳಿಯಿಂದ (ತೀವ್ರ ಬುದ್ಧಿಯಿಂದ) ಭೇದಜ್ಞಾನ ಮಾಡುವದರಿಂದ ಶುದ್ಧಾತ್ಮನ ಪ್ರಾಪ್ತಿ ಆಗುತ್ತದೆ.

ಮೊದಲು ಪ್ರಕಟ ಆತ್ಮನ ಲಕ್ಷಣದಿಂದ ಅಂದರೆ ಜ್ಞಾನರೂಪದಿಂದ ನೋಡುವ, ತಿಳಿಯುವ ಲಕ್ಷಣದಿಂದ ಆತ್ಮನನ್ನು ಸ್ವೀಕಾರ ಮಾಡುತ್ತಲೇ ಕೇವಲ ಪುದ್ಗಲದ ಜೊತೆ ಭೇದಜ್ಞಾನವಾಗುತ್ತದೆ ಮತ್ತು ಮತ್ತೆ ಅದರಿಂದ ಮುಂದೆ ಹೋದ ಮೇಲೆ ಜೀವದ ಯಾ ನಾಲ್ಕು ಭಾವಗಳಾದ ಉದಯಾಭಾವ, ಉಪಶಮ ಭಾವ, ಕ್ಷಯೋಪಶಮ ಭಾವ ಮತ್ತು ಕ್ಷಾಯಿಕ ಭಾವ ಈ ನಾಲ್ಕು ಭಾವಗಳು ಕರ್ಮದ ಅಪೇಕ್ಷೆಯಿಂದ ಹೇಳಲಾಗಿದೆ ಮತ್ತು ಕರ್ಮಗಳು ಪುದ್ಗಲರೂಪವೇ ಆಗುತ್ತವೆ.

ಆದ್ದರಿಂದ ಈ ನಾಲ್ಕು ಭಾವಗಳನ್ನು ಸಹ ಪುದ್ಗಲದ ಖಾತೆಯಲ್ಲಿ ಹಾಕಿ, ಪ್ರಜ್ಞಾರೂಪಿ ಬುದ್ಧಿಯಿಂದ ಅಂದರೆ ಈ ನಾಲ್ಕು ಭಾವನೆಗಳನ್ನು ಜೀವದಲ್ಲಿಂದ ಗೌಣ ಮಾಡುತ್ತಲೇ, ಯಾವ ಜೀವ ಭಾವ ಶೇಷ ಇರುತ್ತದೆ, ಅದನ್ನೇ ಪರಮ ಪಾರಿಣಾಮಿಕ ಭಾವ, ಶುದ್ಧಾತ್ಮ, ಕಾರಣ ಶುದ್ಧ ಪರ್ಯಾಯ, ಸ್ವಭಾವ ಭಾವ, ಸಹಜಜ್ಞಾನರೂಪಿ ಸಾಮ್ರಾಜ್ಯ, ಶುದ್ಧ ಚೈತನ್ಯಭಾವ, ಸ್ವಭಾವ ದರ್ಶನೋಪಯೋಗ, ಕಾರಣ ಸ್ವಭಾವ ದರ್ಶನೋಪಯೋಗ, ಕಾರಣಸ್ವಭಾವ ಜ್ಞಾನೋಪಯೋಗ, ಕಾರಣ ಸಮಯಸಾರ, ಕಾರಣ ಪರಮಾತ್ಮ, ನಿತ್ಯಶುದ್ಧ ನಿರಂಜನ ಜ್ಞಾನಸ್ವರೂಪ, ದರ್ಶನ ಜ್ಞಾನ - ಚಾರಿತ್ರ ರೂಪ ಪರಿಣಮತಾ ಹೀಗೆ ಚೈತನ್ಯ ಸಾಮಾನ್ಯ ರೂಪ, ಚೈತನ್ಯ ಅನುವಿಧಾಯಿ ಪರಿಣಾಮ ರೂಪ, ಸಹಜ ಗುಣಮಣಿಯ ಖಣಿ, ಸಮ್ಯಗ್ದರ್ಶನದ ವಿಷಯ, ದೃಷ್ಟಿಯ ವಿಷಯ ಮುಂತಾದ ಅನೇಕ ಹೆಸರುಗಳಿಂದ ಪರಿಚಯಿಸಿಕೊಳ್ಳಲಾಗುತ್ತದೆ ಮತ್ತು ಅದರ ಅನುಭವದಿಂದಲೇ ನಿಶ್ಚಯ ಸಮ್ಯಗ್ದರ್ಶನವೆಂದು ಕರೆಯುತ್ತಾರೆ. ಈ ಭಾವದ ಅಪೇಕ್ಷೆಯಿಂದಲೇ ಎಲ್ಲ ಜೀವಗಳು ಸ್ವಭಾವದಿಂದಲೇ ಸಿದ್ಧಸಮಾನವೇ ಇವೆ ಎಂದು ಹೇಳಲಾಗುತ್ತದೆ. ಅದರ ಅನುಭವವನ್ನೇ ನಿರ್ವಿಕಲ್ಪ ಅನುಭೂತಿ ಎಂದು ಹೇಳಲಾಗುತ್ತದೆ. ಏಕೆಂದರೆ ಅದು ಸಾಮಾನ್ಯಭಾವ ಸ್ವರೂಪವಾಗಿರುವದರಿಂದ ಅದರಲ್ಲಿ ಯಾವುದೇ ವಿಕಲ್ಪಕ್ಕೆ ಆಸ್ಪದವೇ ಇರುವದಿಲ್ಲ. ಆದ್ದರಿಂದ ಅದರ ಅನುಭೂತಿ ಆಗುತ್ತಲೇ ಅಂಶತಃ ಸಿದ್ಧತ್ವದ್ದು ಸಹ ಅನುಭವವಾಗುತ್ತದೆ.

ಭೇದಜ್ಞಾನ (ಸಮ್ಯಗ್ದರ್ಶನ)ದ ವಿಧಿಯು ಹೇಗಿದೆ ಎಂದರೆ ಯಾವುದರಲ್ಲಿ ಜೀವದ ನಾಲ್ಕು ಭಾವಗಳನ್ನು ಗೌಣ ಮಾಡಿದ ಬಳಿಕ ಶುದ್ಧ ಜೀವತ್ವ ಪ್ರಾಪ್ತವಾಗುವದು. ಈ ಅಪೇಕ್ಷೆಯಿಂದ ಅದರ ಪರ್ಯಾಯರಹಿತ ದ್ರವ್ಯದೃಷ್ಟಿಯ ವಿಷಯವಿದೆ. ಅದನ್ನು ಹೀಗೂ ಸಹ ಹೇಳುತ್ತಾರೆ. ಅರ್ಥಾತ್ ದ್ರವ್ಯದಲ್ಲಿಂದ ಸ್ವಲ್ಪವೂ ಸಹ ತೆಗೆಯುವದು ಇರುವದಿಲ್ಲ. ಕೇವಲ ವಿಭಾವ ಭಾವಗಳನ್ನು ಗೌಣ ಮಾಡುವದಿದೆ ಮತ್ತು ಆ ಅಪೇಕ್ಷೆಯಿಂದ ಹೇಳುತ್ತಾರೆ. ಏನಂದರೆ ವರ್ತಮಾನ ಪರ್ಯಾಯದ ಹೊರತಾಗಿ ಪೂರ್ಣ ದ್ರವ್ಯವು ಅದು ದೃಷ್ಟಿಯ ವಿಷಯವಾಗಿದೆ. ಅಂದರೆ ಕಥನವು ಯಾವದೇ ಇರಲಿ. ಆದರೆ ವ್ಯವಸ್ಥೆಯನ್ನು ಇಲ್ಲಿ ಹೇಳಿದೆ. ಅಂದರೆ ಗೌಣ ಮಾಡುವ ಮತ್ತು ಮುಖ್ಯ ಮಾಡುವದೇ ಇದೆ.

ಕೆಲವರು ಹೇಳುತ್ತಾರೆ ಏನಂದರೆ ತಾವಂತೂ ದೃಷ್ಟಿಯ ವಿಷಯದಲ್ಲಿ ಪ್ರಮಾಣದ ದ್ರವ್ಯವನ್ನು ತೆಗೆದುಕೊಂಡರೆ ದೋಷ ಬರುವದು. "ಹೀಗೆ ಹೇಳುವವರಿಗೆ ನಾವು ಹೇಳುತ್ತೇವೆ, ಏನೆಂದರೆ ಪೂರ್ವದಲ್ಲಿ ವಿಸ್ತಾರದಿಂದ ತಿಳಿಸಿದ ಪ್ರಕಾರ ದ್ರವ್ಯದ ಎಷ್ಟು ಪ್ರದೇಶ (ಕ್ಷೇತ್ರ) ಪ್ರಮಾಣದ್ದು ಇದೆ. ಅಷ್ಟೇ ಪ್ರದೇಶವು ಪರಮ ಪಾರಿಣಾಮಿಕ ಭಾವರೂಪ ದೃಷ್ಟಿಯ ವಿಷಯದ್ದಿರುತ್ತದೆ. ಅಂದರೆ ಅಷ್ಟೇ ಪ್ರದೇಶಗಳು ಶುದ್ಧಾತ್ಮನವು ಇವೆ. ಇನ್ನೊಂದು ಆ ಪ್ರಮಾಣದ ದ್ರವ್ಯವನ್ನು ನಾವು ಶುದ್ಧ ದ್ರವ್ಯಾರ್ಥಿಕ ನಯದ ಚಕ್ಷುವಿನಿಂದ ನೋಡುತ್ತೇವೆ ಮತ್ತು ಈ ಕಾರಣದಿಂದ ನಾವು ಅದನ್ನೇ ಪರಮಪಾರಿಣಾಮಿಕ ಭಾವವೆಂದು ಹೇಳುತ್ತೇವೆ. ಏನಂದರೆ ಯಾರಿಗೆ ತಮ್ಮ

ಪ್ರಮಾಣ ಚಕ್ಷುವಿನಿಂದ ನೋಡಿದ ಮೇಲೆ ಪ್ರಮಾಣದ ವಿಷಯ ಹೇಳುತ್ತಾರೆ ಮತ್ತು ಆ ಪ್ರಮಾಣದ ವಿಷಯದಲ್ಲಿ ತಾವು ಶುದ್ಧ ಮತ್ತು ಅಶುದ್ಧ ಭಾವ ಇರುವದಿಲ್ಲ. ಆದರೆ ಭಾಗ ಮನ್ನಿಸುತ್ತೀರಿ. ಆದ್ದರಿಂದ ತಮ್ಮ ದೃಷ್ಟಿಯಲ್ಲಿ ದೋಷವಿದೆ. ಅದರಲ್ಲಿ ನಮ್ಮದು ಯಾವ ದೋಷವೂ ಇರುವದಿಲ್ಲ. ನಾವಂತೂ ಅದನ್ನೇ ಅರ್ಥಾತ್ ಪ್ರಮಾಣದ ದ್ರವ್ಯವನ್ನೇ ಶುದ್ಧ ದ್ರವ್ಯಾರ್ಥಿಕ ನಯದಿಂದ ಪರಮಶುದ್ಧ, ಪರಮ ಪಾರಿಣಾಮಿಕ ಭಾವದ ಅನುಭವ ಮಾಡುತ್ತೇವೆ ಮತ್ತು ಪರಮ ಸುಖದ ಅನುಭವ ಮಾಡುತ್ತೇವೆ. ಆದ್ದರಿಂದ ತಾವೂ ಸಹ ದೃಷ್ಟಿಯನ್ನು ಬದಲಿಸಿ ಅದನ್ನೇ ಶುದ್ಧವೆಂದು ನೋಡಿರಿ. ತಾವೂ ಸಹ ಅದರ ಅಂದರೆ ಸತ್-ಚಿತ್-ಆನಂದ ಸ್ವರೂಪದ ಆನಂದ ತೆಗೆದುಕೊಳ್ಳಿರಿ. ಹೀಗೆ ನಮ್ಮ ಆಗ್ರಹವಿದೆ. ಇದುವೇ ಸಮ್ಯಗ್ದರ್ಶನದ ಸ್ವರೂಪವಿದೆ ಮತ್ತು ಇದುವೇ ಸಮ್ಯಗ್ದರ್ಶನದ ವಿಧಿ ಇದೆ. ಸ್ಥೂಲದಿಂದಲೇ ಸೂಕ್ಷ್ಮದಲ್ಲಿ ಪ್ರಕಟತೆಯಿಂದಲೇ ಅಪ್ರಕಟತೆಯಲ್ಲಿ ಮತ್ತು ವ್ಯಕ್ತದಿಂದಲೇ ಅವ್ಯಕ್ತದಲ್ಲಿ ಹೋಗಬೇಕಾಗುತ್ತದೆ. ಇದುವೇ ನಿಯಮವಿದೆ.

ಈ ಕಾರಣವಾಗಿ ನಮ್ಮದು ಆಗ್ರಹವಿದೆ. ಏನಂದರೆ ಹೇಗಿದೆಯೋ ಹಾಗೆಯೇ ವಸ್ತು ವ್ಯವಸ್ಥೆಯನ್ನು ತಿಳಿದುಕೊಂಡು ಪ್ರಮಾಣದ ವಿಷಯ ಹೇಗಿದೆಯೋ ಹಾಗೆಯೇ ಇದನ್ನು ತಿಳಿದುಕೊಂಡು ಮತ್ತೆ ಅದರಲ್ಲಿಯೇ ಶುದ್ಧ ದ್ರವ್ಯಾರ್ಥಿಕ ನಯದ ವಿಷಯವನ್ನು ಗ್ರಹಣ ಮಾಡಲು ಯೋಗ್ಯವಿದೆ. ಆದರೆ ಇಲ್ಲಿ ಹೇಳಲಾದ ಯುಕ್ತಿ ಅನುಸಾರ ದೃಷ್ಟಿಯ ವಿಷಯ ಮನ್ನಿಸದೇ ಬೇರೆ ಗ್ರಹಣ ಮಾಡುತ್ತಾರೆ. ಅದು ಶುದ್ಧ ನಯಾಭಾಸರೂಪ ಏಕಾಂತ ಶುದ್ಧಾತ್ಮನನ್ನು ಬೋಧಿಸುತ್ತ ಮನ್ನಿಸುತ್ತಾರೆ. ಅವರು ಕೇವಲ ಭ್ರಮರೂಪವಾಗಿ ಪರಿಣಮಿಸುತ್ತಾರೆ. ಅಂಥ ಏಕಾಂತ ಶುದ್ಧಾತ್ಮನು ಕಾರ್ಯಕಾರಿ ಇರುವದಿಲ್ಲ. ಏಕೆಂದರೆ ಹಾಗೆಯೇ ಏಕಾಂತ ಶುದ್ಧಾತ್ಮನ ಪ್ರಾಪ್ತಿಯೇ ಆಗುವದಿಲ್ಲ. ಈ ಕಾರಣ ಆ ಜೀವವು ಭ್ರಮದಲ್ಲಿಯೇ ಇದ್ದುಕೊಂಡು ಅನಂತ ಸಂಸಾರ ವೃದ್ಧಿಸಿಕೊಂಡು ಅನಂತ ದುಃಖಗಳನ್ನು ಪಡೆದುಕೊಳ್ಳುತ್ತಾನೆ. ಜಿನಶಾಸನದ ನಯದ ಅಜ್ಞಾನದ ಕಾರಣ ಮತ್ತು ತಿಳಿಯದ ಹೊರತು ಕೇವಲ ಶಬ್ದಗಳೇ ಗ್ರಹಣ ಮಾಡಿ ಮತ್ತು ಅದರದೇ ಆಗ್ರಹದ ಕಾರಣ ಇಂಥ ಸ್ಥಿತಿ ಆಗುತ್ತದೆ. ಇದು ಅತ್ಯಂತ ಕರುಣಾಜನಕ ಮಾತು ಇದೆ.

ಇಲ್ಲಿ ತಿಳಿಸಲಾದ ಶುದ್ಧ ದ್ರವ್ಯಾರ್ಥಿಕ ನಯದ ವಿಷಯವೇ ಉಪಾದೇಯ ರೂಪ ಶುದ್ಧಾತ್ಮ ಇರುವನು ಮತ್ತು ಅದುವೇ ಸಮ್ಯಗ್ದರ್ಶನದ ವಿಷಯವಿದೆ. (ದೃಷ್ಟಿ ವಿಷಯ) ಆದ್ದರಿಂದ ಭೇದಜ್ಞಾನ ಮಾಡಿಸುವದು ಮತ್ತು ಶುದ್ಧಾತ್ಮನ ಅನುಭವ ಮಾಡಿಸುವ ಸಲುವಾಗಿ ನಿಯಮಸಾರ ಮತ್ತು ಸಮಯಸಾರದಂಥ ಆಧ್ಯಾತ್ಮಿಕ ಶಾಸ್ತ್ರಗಳಲ್ಲಿ ಅದರದೇ ಮಹಿಮೆಯನ್ನು ಹಾಡಿದ್ದಾರೆ ಮತ್ತು ಅದನ್ನೇ ಮಹಿಮಾ ಮಂಡಿತ ಮಾಡಿದ್ದಾರೆ. ಆ ಶಾಸ್ತ್ರಗಳಲ್ಲಿ ಪ್ರಮಾನದ ವಿಷಯಭೂತ ಆತ್ಮನಲ್ಲಿಂದ ಎಷ್ಟು ಭಾವ ಪುದ್ಗಲಾಶ್ರಿತ ಇವೆ. ಅಂದರೆ ಎಷ್ಟು ಭಾವಗಳು ಕರ್ಮಾಶ್ರಿತ (ಕರ್ಮದ ಅಪೇಕ್ಷಾ ಇಟ್ಟುಕೊಳ್ಳುವಂಥ) ಇವೆ. ಆ ಭಾವನೆಗಳನ್ನು ಪರಭಾವ

ರೂಪದಿಂದ ವರ್ಣನೆ ಮಾಡಿದ್ದಾರೆ. ಅಂದರೆ ಅವುಗಳನ್ನು ಸೋಗಿನ ರೂಪ ಭಾವಗಳ ರೂಪದಲ್ಲಿ ವರ್ಣನೆ ಮಾಡಿದ್ದಾರೆ. ಈ ಭಾವವು ಹೇಯವಿದೆ. ಅಂದರೆ 'ನನ್ನತನ' ಮಾಡುವದು ಯೋಗ್ಯವಲ್ಲ. ಇದೇ ಅಪೇಕ್ಷಾಸಹಿತ ಈಗ ನಾವು ಕೆಲವು ಶ್ಲೋಕಗಳನ್ನು ನೋಡೋಣ.

★★★

## ೬. ಪಂಚಾಧ್ಯಾಯಿ ಪೂರ್ವಾರ್ಧದಲ್ಲಿ ತಿಳಿಸಿರುವ ಸಮ್ಯಗ್ದರ್ಶನದ ವಿಷಯ

**ಶ್ಲೋಕ ೫೩೨ :** ಈ ಅದ್ಭುತ ವ್ಯವಹಾರನಯವನ್ನು ತಿಳಿಯುವದರ ಫಲವು ಏನಿದೆ ಎಂದರೆ ಪರಾಶ್ರಿತ ರೂಪದಿಂದ ಉಂಟಾಗುವ ಕ್ರೋಧ ಮುಂತಾದ ಭಾವಗಳನ್ನು ಬಿಟ್ಟು ಅದರಲ್ಲಿ ಉಳಿದವು (ಜೀವದ) ಶುದ್ಧಗುಣಗಳು ಇರುತ್ತವೆ. ಹೀಗೆ ಮನ್ನಿಸಿ ಭಾವಿಸಿ ಯಾವದೇ ಪುರುಷನು ಸಮ್ಯಗ್ದೃಷ್ಟಿ ಆಗಬಹುದಾಗಿದೆ. ಈ ಗಾಥೆಯಲ್ಲಿ ಸಮ್ಯಗ್ದರ್ಶನದ ವಿಷಯ ಹೇಳಲಾಗಿದೆ ಮತ್ತು ಅದರ ಅನುಭವದಿಂದ ಜೀವವು ಸಮ್ಯಗ್ದೃಷ್ಟಿ ಆಗಬಹುದಾಗಿದೆ ಎಂಬುದನ್ನು ಹೇಳಿದ್ದಾರೆ.

**ಭಾವಾರ್ಥ :** ಅಸದ್‌ಭೂತ ವ್ಯವಹಾರ ನಯದ ಪ್ರಯೋಜನ ಏನಿದೆ ಎಂದರೆ ಯಾವವು ಜೀವದ್ದಿವೆ, ಅವು ಅಸದ್‌ಭೂತ-ವ್ಯವಹಾರನಯದಿಂದ ಇರುತ್ತವೆ. ಆದರೆ ನಿಶ್ಚಯದಿಂದ ಇಲ್ಲ. (ನಿಶ್ಚಯದಿಂದ ಯಾವ ಭಾವವು ಯಾವುದರ ಲಕ್ಷ್ಯದಿಂದ ಇವೆ. ಆ ಭಾವಗಳು ಅದರವೇ ಎಂದು ತಿಳಿಯಬೇಕು. ಆದ್ದರಿಂದ ಯಾವ ದ್ರವ್ಯದ ರಾಗಾದಿ ಭಾವಗಳು ಪುದ್ಗಲ ರೂಪ ಇವೆ. ಅವು ಕರ್ಮದ್ದಿರುತ್ತವೆ ಮತ್ತು ಜೀವದ ಯಾವ ರಾಗಾದಿ ಭಾವಗಳು ಇವೆ, ಅವು ಜೀವದ್ದಾದರೂ ಸಹ ಕರ್ಮದ ಉದಯದ ಕಾರಣವಾಗಿರುವದರಿಂದ ಅವನ್ನು ಕರ್ಮದ ಖಾತೆಯಲ್ಲಿ ಹಾಕಿ, ನಿಶ್ಚಯದಿಂದ ಅವನ್ನು ಪರಭಾವವೆಂದು ಹೇಳಲಾಗುತ್ತದೆ. ಏಕೆಂದರೆ ಆ ಭಾವಗಳು ಸಮ್ಯಗ್ದರ್ಶನದ ಸಲುವಾಗಿ 'ನನ್ನತನ' ಮಾಡಲು ಯೋಗ್ಯಭಾವ ಇರುವದಿಲ್ಲ.) ಈ ಕಾರಣ ಯಾವನೇ ಭವ್ಯಾತ್ಮನು ಪದವಿ ಮಾತ್ರ ಅಂಶವನ್ನು ಬಿಟ್ಟು (ಈ ಉಪಾಧಿರೂಪ ಅಂಶ ಬಿಡುವ ವಿಧಿಯನ್ನು ಪ್ರಜ್ಞಾರೂಪ ಬುದ್ಧಿಯಿಂದ ಅದನ್ನು ಗೌಣ ಮಾಡುವದಿದೆ. ಬೇರೆ ಏನೂ ಇಲ್ಲ.) ನಿಶ್ಚಯ ತತ್ವವನ್ನು ಸ್ವೀಕರಿಸುವ ಇಚ್ಛೆ ಉಳ್ಳವನಾದರೆ ಸಮ್ಯಗ್ದೃಷ್ಟಿ ಆಗಬಹುದು. ಏಕೆಂದರೆ ಎಲ್ಲ ನಯಗಳಲ್ಲಿ ನಿಶ್ಚಯ ನಯವೇ ಉಪಾದೇಯವಿದೆ. ಆದರೆ ಉಳಿದ ಯಾವ ನಯವೂ ಇಲ್ಲ. ಉಳಿದ ನಯವಂತೂ ಕೇವಲ ಪರಿಸ್ಥಿತಿಯ ವಶದಿಂದ ನಿರೂಪಿಸಿದ ವಿಷಯದ ನಿರೂಪಣೆ ಮಾತ್ರ ಮಾಡುತ್ತದೆ. ಆದ್ದರಿಂದ ಒಂದು ನಿಶ್ಚಯನಯವೇ ಕಲ್ಯಾಣಕಾರಿಯಿದೆ.

**ಶ್ಲೋಕ ೫೪೫ :** ಜ್ಞೇಯ ಜ್ಞಾಯಕ ಭಾವದಲ್ಲಿ ಸಂಭವಿಸಬಹುದಾದ ಸಂಕರ ದೋಷದ ಭ್ರಮೆಯ ಕ್ಷಯ ಮಾಡುವದು ಅಥವಾ ಅವಿನಾಭಾವದಿಂದ ಸಾಮಾನ್ಯದ ಸಾಧ್ಯ ಮತ್ತು ವಿಶೇಷದ ಸಾಧಕವಾಗುವದು. ಅದುವೇ ಈ ಉಪಚರಿತ ಅಸದ್‌ಭೂತ ವ್ಯವಹಾರ ನಯದ ಪ್ರಯೋಜನವಿದೆ.

ಅಂದರೆ ಪರವನ್ನು ತಿಳಿಯುವದರಿಂದ ಸಂಕರ ದೋಷವಾಗುತ್ತದೆ. ಇಂತಹ ಭ್ರಮೆಯ ನಾಶ ಮಾಡುವದು, ಅದು ಪ್ರಯೋಜನವಿದೆ ಮತ್ತು ಜೊತೆ ಜೊತೆಗೆ ಹೀಗೂ ಸಹ ಹೇಳಿದ್ದಾರೆ. ಏನಂದರೆ ಪರವನ್ನು ತಿಳಿಯುವದು ಅದು ಸ್ವವನ್ನು ತಿಳಿಯುವದರ ಪಾವಟಿಗೆಯಿದೆ. ಏಕೆಂದರೆ ಸ್ಥೂಲದಿಂದ ಸೂಕ್ಷ್ಮದಲ್ಲಿ, ಪ್ರಕಟದಿಂದ ಅಪ್ರಕಟದಲ್ಲಿ, ವ್ಯಕ್ತದಿಂದ ಅವ್ಯಕ್ತದಲ್ಲಿ ಹೋಗಬಹುದಾಗಿದೆ. ಇದುವೇ ನಿಯಮವಿದೆ. ಅಂದರೆ ಪರವನ್ನು ತಿಳಿಯುವದು ಅದು ಸಮ್ಯಗ್ದರ್ಶನ ಆಗುವಲ್ಲಿ ಸಹಾಯ ರೂಪ ಆಗುವದಿಲ್ಲ. ಅಡ್ಡಿರೂಪವಾಗುವದು ಮತ್ತು ಪರವನ್ನು ತಿಳಿಯುವದರಿಂದ ಆತ್ಮನು ಮಿಥ್ಯಾದೃಷ್ಟಿ ಆಗುವನು. ಹೀಗೆ ಮನ್ನಿಸುವ ಯಾವ ಕಾರಣವೂ ಇಲ್ಲ. ಏಕೆಂದರೆ ಇದುವೇ ಜ್ಞಾನದ ಸ್ವಭಾವವಿದೆ. ಕಾರ್ತಿಕೇಯಾನುಪ್ರೇಕ್ಷಾ ಗಾಥೆ ೨೪೭ರಲ್ಲಿ ಹೇಳಿದ್ದಾರೆ. ಏನಂದರೆ ಸಮಸ್ತ ವಸ್ತುಗಳು ಒಂದು ಜ್ಞಾನವೇ ಇವೆ ಮತ್ತು ಅದುವೇ ಅನೇಕ ರೂಪಗಳಲ್ಲಿ ಸ್ಥಿರವಿರುತ್ತದೆ. ಆದರೆ ಹೀಗೆ ಮನ್ನಿಸಿದ ಮೇಲೆ ಜ್ಞೇಯವು ಸ್ವಲ್ಪವೂ ಕೂಡ ಸಿದ್ಧವಾಗಲಿಲ್ಲ ಮತ್ತು ಜ್ಞೇಯದ ಹೊರತು ಜ್ಞಾನವೇ ಯಾವ ಪ್ರಕಾರ ಸಿದ್ಧವಾಗುವದು ? ಜ್ಞೇಯವನ್ನು ತಿಳಿಯುವದಕ್ಕೇನೇ ಜ್ಞಾನ ಎನ್ನುತ್ತಾರೆ. ಆದರೆ ಜ್ಞೇಯದ ಹೊರತು ಜ್ಞಾನವಿಲ್ಲ. ಭೇದಜ್ಞಾನದ ಸಲುವಾಗಿ, ಸಮ್ಯಗ್ದರ್ಶನದ ಸಲುವಾಗಿ ಹೇಳಲಾಗುತ್ತದೆ, ಏನಂದರೆ ಹೇಗೆ ಮಹಲದ ಕಿಡಕಿಯಿಂದ ನೋಡುತ್ತಿರುವ ಪುರುಷನು ಸ್ವತಃ ಜ್ಞೇಯಗಳನ್ನು ನೋಡುತ್ತಾನೆ. ಕಿಡಕಿ ನೋಡುವದಿಲ್ಲ. ಅದೇ ಪ್ರಕಾರ ಈ ಕಿಡಕಿ ರೂಪಿ ಕಣ್ಣಿನಿಂದ ಜ್ಞೇಯಗಳನ್ನು ನೋಡುತ್ತಾನೆ. ಅವನು ಜ್ಞಾಯಕ ಸ್ವತಃ ಕಣ್ಣಿನಿಂದಲೂ ಇಲ್ಲ. ಆ ನೋಡುವವನು ನಾನೇ ಇದ್ದೇನೆ. 'ಸೋಹಂ' ಅದು ಜ್ಞಾನ ಮಾತ್ರ ಸ್ವರೂಪವೇ ನಾನು ಇದ್ದೇನೆ. ಅಂದರೆ ನಾನು ಕೇವಲ ನೋಡುವವ ತಿಳಿಯುವವ, ಜ್ಞಾಯಕ –ಜ್ಞಾನ ಮಾತ್ರ – ಶುದ್ಧಾತ್ಮನೇ ಇದ್ದೇನೆ. ಹೀಗೆ ಲಕ್ಷ್ಯದಲ್ಲಿ ತೆಗೆದುಕೊಳ್ಳುವದರಿಂದ ಜ್ಞಾಯಕ ರೂಪ ಸಾಮಾನ್ಯ ಜ್ಞಾನ ಸಾಧ್ಯವಾಗುತ್ತದೆ ಮತ್ತು ಪರವನ್ನು ತಿಳಿಯುವದು ಅದು ಸಾಧನರೂಪ (ಪಾವಟಿಗೆ ರೂಪ) ಆಗುತ್ತದೆ. ಏನಂದರೆ ಯಾವ ಅರ್ಥವು ವಿಕಲಾತ್ಮಕ ಜ್ಞಾನವಿದೆ. ಇದುವೇ ಸಮ್ಯಗ್ದರ್ಶನದ ವಿಧಿ ಇದೆ. ಜೀವನಿಗೆ ಪರವನ್ನು ತಿಳಿಯುವಂಥವನೆಂದು ಹೇಳಿ ಅದರಲ್ಲಿಂದ ಪ್ರಯೋಜನ ಸಿದ್ಧ ಮಾಡಿದ ನಂತರ ಈಗ ಜೀವನಿಗೆ ಕ್ರೋಧ ಮುಂತಾದವುಗಳು ಏನೆಂದು ಹೇಳುವದರಿಂದ ಏನು ಪ್ರಯೋಜನ ಸಿದ್ಧವಾಗುತ್ತದೆ. ರಾಗವು ಜೀವದಲ್ಲಿ ಆಗುತ್ತದೆ. ಅದರಿಂದ ಯಾವ ಪ್ರಯೋಜನವಿದೆ ? ಎಂದು ಕೇಳುತ್ತಾರೆ.

**ಶ್ಲೋಕ ೫೬೫ :** (ಕ್ರೋಧಾದಿ ಭಾವಗಳು ಜೀವದ್ದೆಂದು ಹೇಳುವದು ಅದು ನಯಾಭಾಸವೇ ಇದೆ.) ಮೇಲೆ ಹೇಳಿದ ಸಂಶಯವು ಸರಿಯಾದುದಲ್ಲ. ಏಕೆಂದರೆ ಆ ಕ್ರೋಧಾದಿ ಭಾವಗಳು ಜೀವದಲ್ಲಿ ಉಂಟಾಗುವ ಔದಾಯಿಕ ಭಾವರೂಪ ಇರುತ್ತವೆ. ಆದ್ದರಿಂದ ಅವುಗಳ ಜೀವದ ತದ್‌ಗುಣ (ಜೀವದ ಪರಿಣಮನ) ಇದೆ ಮತ್ತು ಅವು ಜೀವದ ನೈಮಿತ್ತಿಕ ಭಾವವಾಗಿರುವದರಿಂದ ಅವುಗಳನ್ನು ಸರ್ವಥಾ ಪುದ್ಗಲದ್ದೆಂದು ಹೇಳಲು ಸಾಧ್ಯವಾಗುವದಿಲ್ಲ. ಆದರೆ ಜೀವನಿಗೆ ವರ್ಣಾದಿವುಳ್ಳವನೆಂದು ಹೇಳುವಲ್ಲಿ ಬಂದಿದೆ. ಅಲ್ಲಿಯಂತೂ ವರ್ಣಾದಿಗಳು ಸರ್ವಥಾ ಪುದ್ಗಲದ್ದೇ ಆಗಿರುವದರಿಂದ ಅವುಗಳನ್ನು ಜೀವದ್ದೆಂದು ಯಾವ ಪ್ರಕಾರ ಹೇಳಬಹುದಾಗಿದೆ.

ಕ್ರೋಧಾದಿ ಭಾವಗಳು ಜೀವದ್ದೆಂದು ಹೇಳುವಲ್ಲಿ ಯಾವ ಪ್ರಯೋಜನವಿದೆ ? ಪರಲಕ್ಷ್ಯದಿಂದ ಉಂಟಾಗುವಂಥ ಕ್ರೋಧಾದಿ ಭಾವಗಳು ಕ್ಷಣಿಕವಾಗಿರುವದರಿಂದ ಮತ್ತು ಆತ್ಮನ ಸ್ವಭಾವವಲ್ಲದಿರುವದರಿಂದ ಅವು ಉಪಾದೇಯ ಇರುವದಿಲ್ಲ. ಆದ್ದರಿಂದ ಅವುಗಳನ್ನು ಅಭಾವಗೊಳಿಸಬೇಕು. ಅಂದಾಗ ಸಮ್ಯಕ್‌ಜ್ಞಾನ ಆಗುತ್ತದೆ. (ಕೆಲವರು ಏಕಾಂತದಿಂದ ಶುದ್ಧತೆಯ ಭ್ರಮೆಯಲ್ಲಿ ಇರುತ್ತಾರೆ. ಅವರು ಕ್ರೋಧಾದಿ ಮಾಡಿದರೂ ಸಹ ತಮ್ಮನ್ನೇ ಮನ್ನಿಸದೇ ಸ್ವಚ್ಛಂದಿಯಾಗುತ್ತಾರೆ. ಅದು ಸಮ್ಯಕ್‌ಜ್ಞಾನ ಅಲ್ಲ, ಅದು ಮಿಥ್ಯಾಜ್ಞಾನ ಇದೆ.) ಆದ್ದರಿಂದ ಕ್ರೋಧವು ಜೀವದ್ದೆಂದು ಹೇಳುವಲ್ಲಿ ಮೇಲೆ ಹೇಳಿದ ಸಮ್ಯಕ್‌ನಯವು ಅನ್ವಯಿಸುತ್ತದೆ. ನಾವು ಮೊದಲು ಸಮ್ಯಗ್ದರ್ಶನದ ವಿಧಿಯ ಸಂದರ್ಭದಲ್ಲಿ ಚರ್ಚೆ ಮಾಡುವ ಸಮಯ ನಿರ್ವಿಕಲ್ಪ ಅನುಭೂತಿ ರೂಪ ಸಮ್ಯಗ್ದರ್ಶನ ಹೇಳಲಾಗಿದೆ. ಅದೇ ಭಾವ ವಿಶೇಷವಾಗಿ ಸ್ಪಷ್ಟ ಮಾಡುತ್ತ ಯಾವದೇ ನಯದ ಅವಲಂಬನೆ ಆಗ ಇರುವದಿಲ್ಲ ಎಂದು ತಿಳಿಸುತ್ತೇವೆ.

ಸಮ್ಯಗ್ದರ್ಶನದ ವಿಷಯವು ಪಕ್ಷಾತೀತವಿದೆ, ನಯಾತೀತವಿದೆ. ಆದ್ದರಿಂದ ಪ್ರತಿಯೊಂದು ಪ್ರಕಾರದ ಪಕ್ಷ ಮತ್ತು ಆಗ್ರಹವನ್ನು ಬಿಡದ ಹೊರತು ಸಮ್ಯಗ್ದರ್ಶನ ಆಗುವದು ಸಾಧ್ಯವೇ ಇಲ್ಲ. ಬೇರೆ ವಸ್ತುಗಳು ಹೇಗಿವೆಯೋ ಹಾಗೆಯೇ ತಿಳಿಯಬೇಕು. ಅಂದರೆ ಆತ್ಮನಲ್ಲಿ ರಾಗಾದಿಗಳು ಆಗುತ್ತವೆ. ಆದರೆ ಅವು ಯಾವ ಅಪೇಕ್ಷೆಯಿಂದ ಮತ್ತು ನಿಯಮಸಾರ ಹಾಗೂ ಸಮಯಸಾರ ಇಂಥ ಆಧ್ಯಾತ್ಮಿಕ ಶಾಸ್ತ್ರಗಳಲ್ಲಿ ಹೀಗೆ ಹೇಳಿದ್ದಾರೆ – ಆ ರಾಗಾದಿಕಗಳು ಜೀವದ್ದಿರುವದಿಲ್ಲ. ಆದರೆ ಅವು ಸಹ ಯಾವದೇ ಅಪೇಕ್ಷೆಯಿಂದಲೇ ಎಂದು ಹೇಳಿದ್ದಾರೆ. ಏಕಾಂತದಿಂದ ಅಲ್ಲ. ಕೇವಲ ಸಮ್ಯಗ್ದರ್ಶನದ ವಿಷಯದ ಮೇಲೆ ದೃಷ್ಟಿ ಮಾಡುವವನಿಗೆ ಅಂದರೆ ಸಮ್ಯಗ್ದರ್ಶನ ಮಾಡುವವನಿಗೇನೇ ಹೇಳಿದ್ದಾರೆ. ಯಾರು ಅದನ್ನು ಏಕಾಂತದಿಂದ ಹಿಡಿದು ಸ್ವಚ್ಛಂದತಾ ರೂಪ ಪರಿಣಮಿಸಿದರೆ ಅದು ಅವರ ಮಹಾನ್ ಮರೆವು ಇದೆ. ಅದರ ಫಲ ಅನಂತ ಸಂಸಾರವಿದೆ. ಇದೇ ಮಾತನ್ನು ಮುಂದೆ ಹೇಳುತ್ತೇವೆ.

**ಶ್ಲೋಕ ೬೬೩ :** ಆಧ್ಯಾತ್ಮಿಕ ಶಾಸ್ತ್ರಗಳ ಯಾವದೇ ವಸ್ತುವನ್ನು ಏಕಾಂತದಿಂದ ಪ್ರರೂಪಿತ ಮಾಡುವ ಆಶಯ ಸ್ವಲ್ಪವೂ ಆಗುವದಿಲ್ಲ. ಅದನ್ನು ಏಕಾಂತದಿಂದ

ಹಾಗೆ ತೆಗೆದುಕೊಳ್ಳಬಾರದು. ಆದರೆ ಅದು ಆಶಯ ಮಾತ್ರ ಸಮ್ಯಗ್ದರ್ಶನದ ಯಾವ ವಿಷಯವಿದೆ ಅದು ಆತ್ಮಭಾವನೆಯಲ್ಲಿ (ಪರಮಪಾರಿಣಾಮಿಕ ಭಾವರೂಪ ಶುದ್ಧಾತ್ಮನಲ್ಲಿ ಕಾರಣಶುದ್ಧ ಪರ್ಯಾಯದಲ್ಲಿ ಕಾರಣ ಪರಮಾತ್ಮನಲ್ಲಿ) 'ನನ್ನತನ' ಮಾಡುವದು ಮತ್ತು ಉಳಿದ ಎಲ್ಲ ಭಾವಗಳಲ್ಲಿಂದ 'ನನ್ನತನ'ದ ಯಾವ ಭಾವವಿದೆ. ಅಂದರೆ ಯಾವದು ಬಂಧನದ ಕಾರಣ ಇದೆ, ಅದನ್ನು ದೂರ ಮಾಡಬೇಕು. ಜೀವನಿಗೆ ಆ ಬಂಧದ ಕಾರಣಗಳಲ್ಲಿ ಅಥವಾ ಬಂಧದ ಫಲದಲ್ಲಿ 'ನನ್ನತನ' ಮಾಡುವದರಿಂದ ತಡೆಯುವದು ಮತ್ತು ಪರಮ ಪಾರಿಣಾಮಿಕ ಭಾವರೂಪ ಜೀವದಲ್ಲಿ 'ನನ್ನತನ'ವನ್ನು ಮಾಡಿಸಿ ಅವನನ್ನು ಸಮ್ಯಗ್ದೃಷ್ಟಿಯನ್ನಾಗಿ ಮಾಡುವದು, ಮೋಕ್ಷ ಮಾರ್ಗದಲ್ಲಿ ಪ್ರವೇಶ ಮಾಡಿಸುವದು. ಕೇವಲ ಇದೇ ಅಪೇಕ್ಷೆಯಿಂದ ಈ ಶಾಸ್ತ್ರಗಳಲ್ಲಿ ರಾಗಾದಿ ಭಾವಗಳು ಜೀವದ್ದಿರುವದಿಲ್ಲ ಎಂದು ಹೇಳಿದ್ದಾರೆ. ಇದನ್ನು ಏಕಾಂತದಿಂದ ತಿಳಿಯಬಾರದು.

**ಶ್ಲೋಕ ೬೨೩ :** ಒಮ್ಮೆಲೆ ಸಾಮಾನ್ಯ ವಿಶೇಷವನ್ನು ವಿಷಯವನ್ನಾಗಿ ಮಾಡುವಂಥ ಜ್ಞಾನವನ್ನು ಸಮ್ಯಕ್‌ಜ್ಞಾನ ಎಂದು ಹೇಳುತ್ತಾರೆ. ಏಕೆಂದರೆ ಜ್ಞಾನವು ಕನ್ನಡಿಯ ಸಮಾನವಿದೆ ಹಾಗೂ ಜ್ಞೇಯವು ಪ್ರತಿಬಿಂಬದ ಸಮಾನ ಇದೆ.

**ಭಾವಾರ್ಥ :** ಹೇಗೆ ಕನ್ನಡಿ ಮತ್ತು ಕನ್ನಡಿಯಲ್ಲಿ ಇರುವಂಥ ಪ್ರತಿಬಿಂಬದ ಜೋಡಿ ಪ್ರತಿಭಾಸವಾಗುತ್ತದೆ. ಇದೇ ಪ್ರಕಾರ ಸಾಮಾನ್ಯ ವಿಶೇಷವನ್ನು ಯುಗಪತ್ ವಿಷಯವನ್ನಾಗಿ ಮಾಡುವಂಥ ಜ್ಞಾನವನ್ನು ಸಮ್ಯಕ್‌ಜ್ಞಾನ ಎಂದು ಕರೆಯುತ್ತಾರೆ. ಜ್ಞಾನವನ್ನು ಕನ್ನಡಿಯ ಸಮಾನ ಹಾಗೂ ಅದರಲ್ಲಿ ಇರುವಂಥ ವಿಷಯವನ್ನು ಅಂದರೆ ಜ್ಞೇಯವನ್ನು ಪ್ರತಿಬಿಂಬದ ಸಮಾನ ಮನ್ನಿಸುವಲ್ಲಿ ಬರುವದು.

ಕೆಲವರು ಜ್ಞಾನವು ಪರವನ್ನು ತಿಳಿಯುವದಿಲ್ಲ ಎಂದು ಹೇಳುತ್ತಾರೆ. ಅಂದರೆ ಇಂಥ ಜ್ಞಾನವನ್ನು ಸಮ್ಯಕ್‌ಜ್ಞಾನ ಎಂದು ಕರೆಯುವದಿಲ್ಲ. ಹೀಗೆ ವಿಪರೀತ ಭಾವಿಸಿದರೆ ನಾವು ವಿಭ್ರಮದಲ್ಲಿ ಇದ್ದುಕೊಂಡು ನಮ್ಮದೇ ಪರಮ ಅಹಿತ ಮಾಡಿಕೊಳ್ಳುತ್ತೇವೆ.

★★★

## ೧೦. ಆತ್ಮಜ್ಞಾನರೂಪಿ ಸ್ವಾತ್ಮಾನುಭೂತಿಯು ಪರೋಕ್ಷವಿದೆಯೇ ಅಥವಾ ಪ್ರತ್ಯಕ್ಷವಿದೆಯೇ ?

ಕೆಲವರ ಪ್ರಶ್ನೆ ಹೀಗಿದೆ – ಯಾವ ಸ್ವಾತ್ಮಾನುಭೂತಿಯ ವರ್ಣನೆ ಮಾಡಲಾಗಿದೆ ಮತ್ತು ಯಾವ ನಿಶ್ಚಯ ಸಮ್ಯಗ್ದರ್ಶನ ಇದೆ ಅದು ಪ್ರತ್ಯಕ್ಷ ಇದೆ ಅಥವಾ ಪರೋಕ್ಷ ಇದೆ ? ಅದು ಯಾವ ಪ್ರಕಾರದ ಕ್ಷಾಯೋಪಶಮಿಕ ಜ್ಞಾನದಿಂದ ಆಗುತ್ತದೆ ? ಅದರ ಉತ್ತರ ಹೀಗಿದೆ –

**ಪಂಚಾಧ್ಯಾಯಿ ಪೂರ್ವಾರ್ಧದ ಶ್ಲೋಕ :**

**ಶ್ಲೋಕ ೭೦೬ :** ಸ್ವಾತ್ಮಾನುಭೂತಿಯ ಸಮಯದಲ್ಲಿ ಮೊದಲು ಮತಿಜ್ಞಾನ ಮತ್ತು ಶ್ರುತಜ್ಞಾನ ಇವು ಎರಡೂ ಇರುತ್ತವೆ. ಈ ಎಲ್ಲವೂ ಸಾಕ್ಷಾತ್ ಪ್ರತ್ಯಕ್ಷದ ಪ್ರಕಾರ ಪ್ರತ್ಯಕ್ಷ ಇರುತ್ತವೆ. ಪರೋಕ್ಷವಲ್ಲ.

**ಭಾವಾರ್ಥ :** ಈ ಮತಿ ಮತ್ತು ಶ್ರುತಜ್ಞಾನಗಳಲ್ಲಿ ಇಷ್ಟು ವಿಶೇಷತೆ ಇದೆ ಎಂದರೆ (ಮೊದಲು ಈ ಎರಡೂ ಜ್ಞಾನಗಳನ್ನು ಪರೋಕ್ಷ ರೂಪದಿಂದ ಪ್ರತಿಪಾದಿತ ಮಾಡಲಾಗಿದೆ. ಈಗ ಇವುಗಳ ವಿಶೇಷತೆಯನ್ನು ಹೇಳುತ್ತಾರೆ. ಅಂದರೆ ಅಪವಾದ ಹೇಳುತ್ತಾರೆ.) ಯಾವ ಸಮಯ ಈ ಎರಡರಲ್ಲಿಂದ ಯಾವದೇ ಒಂದು ಜ್ಞಾನದ ಮೂಲಕ ಸ್ವಾತ್ಮಾನುಭೂತಿ ಆಗುತ್ತದೆ. ಆ ಸಮಯ ಈ ಎರಡೂ ಜ್ಞಾನಗಳು ಸಹ ಅತೀಂದ್ರಿಯ ಸ್ವ ಆತ್ಮನಿಗೆ ಪ್ರತ್ಯಕ್ಷ ಮಾಡುತ್ತವೆ. ಆದ್ದರಿಂದ ಈ ಎರಡೂ ಜ್ಞಾನಗಳು ಸಹ ಸ್ವಾತ್ಮಾನುಭೂತಿಯ ಸಮಯದಲ್ಲಿ ಪ್ರತ್ಯಕ್ಷರೂಪ ಇರುತ್ತವೆ. ಪರೋಕ್ಷ ಇರುವದಿಲ್ಲ.

ಅಂದರೆ ಸಮ್ಯಗ್ದರ್ಶನವು ಅನಂತಾನುಬಂಧಿ ಕಷಯಾ ಚೌಕಡಿ ಮತ್ತು ದರ್ಶನ ಮೋಹದ ಉಪಶಮ, ಕ್ಷಾಯೋಪಶಮ ಅಥವಾ ಕ್ಷಯದಿಂದ ಆಗುತ್ತದೆ. ಆದರೆ ಅದರೊಂದಿಗೆ ನಿಯಮದಿಂದ ಸಮ್ಯಗ್ದರ್ಶನ ರೂಪ ಶುದ್ಧೋಪಯೋಗವು ಉತ್ಪನ್ನವಾಗುವದರಿಂದ ಆ ಶುದ್ಧೋಪಯೋಗವನ್ನೇ ಸ್ವಾತ್ಮಾನುಭೂತಿ ಎಂದು ಹೇಳಲಾಗುತ್ತದೆ. ಏನಂದರೆ ಜ್ಞಾನಾವರಣೀಯದ ಕ್ಷಯೋಪಶಮ ರೂಪ ಆಗುತ್ತದೆ ಮತ್ತು ಅದು ಶುದ್ಧೋಪಯೋಗ ಅರ್ಥಾತ್ ಸ್ವಾತ್ಮಾನುಭೂತಿ ವಿಭಾವರಹಿತ ಆತ್ಮನ ಅರ್ಥಾತ್ ಶುದ್ಧಾತ್ಮನದಾಗುವದರಿಂದ ಅದನ್ನು ನಿರ್ವಿಕಲ್ಪ ಸ್ವಾತ್ಮಾನುಭೂತಿ ಎಂದು ಹೇಳಲಾಗುತ್ತದೆ. ಸ್ವಾತ್ಮಾನುಭೂತಿಯ ಕಾಲದಲ್ಲಿ ಮನೋಯೋಗವಾದರೂ ಸಹ ಆಗ ಮನಸ್ಸು ಕೂಡ ಅತೀಂದ್ರಿಯ ರೂಪ ಪರಿಣಮನದಿಂದ ಅದನ್ನು ನಿರ್ವಿಕಲ್ಪ ಸ್ವಾತ್ಮಾನುಭೂತಿ ಎಂದು ಹೇಳಲಾಗುತ್ತದೆ.

★★★

## ೧೧. ಸ್ವಾತ್ಮಾನುಭೂತಿಯು ಆತ್ಮನ ಯಾವ ಪ್ರದೇಶದಲ್ಲಿ ಆಗುತ್ತದೆ ?

**ಪ್ರಶ್ನೆ :** ಸ್ವಾತ್ಮಾನುಭೂತಿ ರೂಪ ಅನುಭವ ಅಂದರೆ ಶುದ್ಧಾತ್ಮನೊಂದಿಗೆ ಏಕತ್ವಭಾವ ಅರ್ಥಾತ್ ಅತೀಂದ್ರಿಯ ಜ್ಞಾನವು ಶರೀರದ ಯಾವ ಭಾಗದಲ್ಲಿ ಉಂಟಾಗುತ್ತದೆ ?

**ಉತ್ತರ :** ಪಂಚಾಧ್ಯಾಯಿ ಪೂರ್ವಾರ್ಧದ ಆರು ಶ್ಲೋಕಗಳಲ್ಲಿ ಹೇಳಲಾಗಿದೆ. ಏನೆಂದರೆ ಹೃದಯಕಮಲದಲ್ಲಿ ಇರುವಂಥ ಭಾವಮನ ಮತ್ತು ದ್ರವ್ಯಮನದಲ್ಲಿ ಆಗುತ್ತದೆ.

**ಶ್ಲೋಕ ೭೧೧-೧೨ :** ಶುದ್ಧಾತ್ಮಾನುಭೂತಿಯ ಸಮಯದಲ್ಲಿ ಸ್ಪರ್ಶನ, ರಸನ, ಘ್ರಾಣ, ಚಕ್ಷು ಮತ್ತು ಶ್ರೋತ್ರ ಈ ಪ್ರಕಾರ ಐದೂ ಇಂದ್ರಿಯಗಳು ಉಪಯೋಗಿ ಎಂದು ಮನ್ನಿಸಿಲ್ಲ. ಆದರೆ ಅಲ್ಲಿ ಕೇವಲ ಮನಸ್ಸೇ ಉಪಯೋಗಿ ಎಂದು ಮನ್ನಿಸುವಲ್ಲಿ ಬಂದಿದೆ ಹಾಗೂ ಇಲ್ಲಿ ನಿಶ್ಚಯದಿಂದ ತಮ್ಮ ಉಪಯೋಗದ ಅಪೇಕ್ಷೆಯಿಂದ ನೋ ಇಂದ್ರಿಯ ಇದೆ. ಎರಡನೆಯ ಹೆಸರು ಮನಸ್ಸು. ಇದು ದ್ರವ್ಯಮನ ಹಾಗೂ ಭಾವಮನವೆಂದು ಈ ಪ್ರಕಾರ ಎರಡು ಪ್ರಕಾರವಾಗಿರುತ್ತವೆ.

**ಶ್ಲೋಕ ೭೧೩ :** ಹೃದಯಕಮಲದಲ್ಲಿ ಘನಾಂಗುಲದ ಅಸಂಖ್ಯಾತವೇ ಭಾಗ ಮಾತ್ರ ಇದೆ. ಪ್ರಮಾಣವು ಯಾವುದರ ಆ ದ್ರವ್ಯಮನವಾಗುತ್ತದೆ, ಅದು ಅಚೇತನವಾದರೂ ಸಹ ಜ್ಞಾನದ ವಿಷಯವನ್ನು ಗ್ರಹಣ ಮಾಡುವ ಸಮಯ ಭಾವ ಮನಸ್ಸಿಗೆ ಸಹಾಯ ಮಾಡುವಲ್ಲಿ ಸಮರ್ಥವಾಗುತ್ತದೆ. ಅಂದರೆ ದ್ರವ್ಯಮನವು ಭಾವಮನಸ್ಸಿಗೆ ಸಹಾಯ ಮಾಡುವಲ್ಲಿ ಸಮರ್ಥವಾಗುತ್ತದೆ. ಅಂದರೆ ದ್ರವ್ಯ ಮನವು ಭಾವಮನಸ್ಸಿಗೆ ಸಹಾಯ ಮಾಡುತ್ತದೆ.

ಕೆಲವರು ನನಗೆ ಅನುಭವವು ಹೃದಯದ ಭಾಗದಲ್ಲಿಯೇ ಆಗುತ್ತದೆ. ಆದರೆ ಹೀಗೆ ಏಕಾಂತದಿಂದ ಇರುವದಿಲ್ಲ. ಏಕೆಂದರೆ ದ್ರವ್ಯಮನವು ಹೃದಯಕಮಲದಲ್ಲಿ ಇದ್ದರೂ ಸಹ, ಭಾವಮನರೂಪ ಆತ್ಮನ ಕ್ಷಯೋಪಶಮವಾದ ಇದು ಆತ್ಮನ ಎಲ್ಲ ಪ್ರದೇಶಗಳಲ್ಲಿ ಆಗುವದರಿಂದ ಅನುಭೂತಿಯು ಸಂಪೂರ್ಣ ಆತ್ಮನದೇ ಆಗುತ್ತದೆ ಮತ್ತು ಅದು ಎಲ್ಲ ಪ್ರದೇಶಗಳಲ್ಲಿ ಆಗುತ್ತದೆ.

**ಶ್ಲೋಕ ೭೧೪ :** ಸ್ವ ಆವರಣವು ಕ್ರಮಪೂರ್ವಕ ಉದಯಾಭಾವ ವಿಷಯದಿಂದಲೇ ಲಬ್ಧಿ ಮತ್ತು ಉಪಯೋಗ ಸಹಿತ ಯಾವ ಕೇವಲ ಆತ್ಮ ಉಪಯೋಗ ರೂಪವೇ ಆತ್ಮನ ಪರಿಣಾಮವಿದೆ, ಅದು ಭಾವಮನ ಇರುತ್ತದೆ. ಅಂದರೆ ಭಾವಮನವು ಆತ್ಮನ ಎಲ್ಲ ಪ್ರದೇಶಗಳಲ್ಲಿ ಇರುತ್ತದೆ.

**ಶ್ಲೋಕ ೭೧೫-೧೬ :** ಸ್ಪರ್ಶ, ರಸನ, ಘ್ರಾಣ, ಚಕ್ಷು, ಶ್ರೋತೃ ಈ ಐದೂ ಇಂದ್ರಿಯಗಳು ಮೂರ್ತಿಕ ಪದಾರ್ಥಗಳನ್ನು ತಿಳಿಯುವಂಥವಾಗಿವೆ ಹಾಗೂ ಮನಸ್ಸು ಮೂರ್ತಿಕ ಮತ್ತು ಅಮೂರ್ತಿಕ ಎರಡೂ ಪದಾರ್ಥಗಳನ್ನು ತಿಳಿಯುವಂಥದ್ದಿದೆ. ಆದ್ದರಿಂದ ಇಲ್ಲಿ ಈ ಕಥನವು ನಿರ್ದೋಷವಿದೆ. ಏನಂದರೆ ಸ್ವ ಆತ್ಮನ ಗ್ರಹಣದಲ್ಲಿ ನಿಶ್ಚಯದಿಂದ ಮನಸ್ಸೇ ಉಪಯೋಗಿ ಇರುತ್ತದೆ. ಆದರೆ ಇಷ್ಟು ವಿಶೇಷವಿದೆ. ಏನಂದರೆ ವಿಶಿಷ್ಟ ಸ್ಥಿತಿಯಲ್ಲಿ (ಅತೀಂದ್ರಿಯ ಜ್ಞಾನದಲ್ಲಿ – ಸ್ವಾತ್ಮಾನುಭೂತಿಯಲ್ಲಿ) ಆ ಮನಸ್ಸು ಸ್ವತಃ ಜ್ಞಾನರೂಪವಾಗುತ್ತದೆ.

ಇಲ್ಲಿ ತಿಳಿಯುವದು ಏನಂದರೆ ಯಾವ ಭಾವಮನ ಹೇಳಲಾಗಿದೆ. ಅದು ಆತ್ಮನ ಜ್ಞಾನದ್ದೇ ಕ್ಷಯೋಪಶಮ ರೂಪ ಒಂದು ಉಪಯೋಗ ವಿಶೇಷವಿದೆ. ಬೇರೆ ಏನೂ ಇಲ್ಲ. ಅಜೀವ ದ್ರವ್ಯವು ಅದು ಭಗವಾನ ಆತ್ಮನಲ್ಲಿ ವಿಶಿಷ್ಟ ಕ್ಷಯೋಪಶಮ

ಆಗುವದರಿಂದ ಆತ್ಮನ ಎಲ್ಲ ಪ್ರದೇಶಗಳಲ್ಲಿ ಆಗುತ್ತದೆ. ಆದರೆ ದ್ರವ್ಯಮನಸ್ಸು ಹೃದಯಕಮಲದಲ್ಲಿ ಇರುವದರಿಂದ ಆ ಅಪೇಕ್ಷೆಯಿಂದ ಸ್ವಾತ್ಮಾನುಭೂತಿ ರೂಪ ಅನುಭವ ಹೃದಯಕಮಲದಲ್ಲಿ ಆಗುತ್ತದೆ ಎಂದು ಹೇಳಿದ್ದಾರೆ.

★★★

## ೧೨. ಇಂದ್ರಿಯ ಜ್ಞಾನವು ಜ್ಞಾನವಲ್ಲವೇ ?

ಇಂದ್ರಿಯ ಜ್ಞಾನವು ಅಂದರೆ ಇಂದ್ರಿಯ ಜನಿತ ಜ್ಞಾನವನ್ನು ಬಹಳ ಜನರು ಹೀಗೆ ಮನ್ನಿಸುತ್ತಾರೆ. ಹೇಗೆಂದರೆ ಇಂದ್ರಿಯ ಜ್ಞಾನವಂತೂ ಜ್ಞಾನವೇ ಇರುವದಿಲ್ಲ. ಆದರೆ ಅದರಲ್ಲಿ ತಿಳಿಯುವದೇನಿದೆ ಎಂದರೆ ಯಾವ ದ್ರವ್ಯವು ಇಂದ್ರಿಯ ಮತ್ತು ನೋಇಂದ್ರಿಯ ರೂಪ ಮನಸ್ಸು ಇದೆ. ಅದು ಪುದ್ಗಲದಿಂದ ತಯಾರು ಮಾಡಿರುವದರಿಂದ ಆ ಅಪೇಕ್ಷೆಯಿಂದ ಹೀಗೆ ಹೇಳಲಾಗುತ್ತದೆ. ಹೇಗೆಂದರೆ ಇಂದ್ರಿಯ ಜ್ಞಾನವಂತೂ ಜ್ಞಾನವೇ ಅಲ್ಲ ಅಥವಾ ಇಂದ್ರಿಯ ಜ್ಞಾನವು ಖಂಡ ಖಂಡ ಜ್ಞಾನರೂಪ ಆಗಿರುವದರಿಂದ ಆ ಅಪೇಕ್ಷೆಯಿಂದಲೂ ಸಹ ಹೀಗೆ ಹೇಳಬಹುದಾಗಿದೆ. ಹೇಗೆಂದರೆ ಇಂದ್ರಿಯ ಜ್ಞಾನವಂತೂ ಜ್ಞಾನವೇ ಅಲ್ಲ, (ಅಖಂಡ ಜ್ಞಾನ ಇಲ್ಲ.) ವಾಸ್ತವದಲ್ಲಿ ನೋಡಿದ ಬಳಿಕ ಅದು ಪುದ್ಗಲ ರೂಪ ಅಜೀವ ಇಂದ್ರಿಯಗಳು ಜ್ಞಾನದ ನಿಮಿತ್ತ ಮಾತ್ರ ಇವೆ. ಆದರೆ ಜ್ಞಾನವಂತೂ ಆತ್ಮನ ಲಕ್ಷಣ ಆಗಿರುವದರಿಂದ ಬೇರೆ ಯಾವದೂ ಸಹ ದ್ರವ್ಯದಲ್ಲಿ ಆಗುವದೇ ಇಲ್ಲ.

**ಪ್ರಶ್ನೆ : ಇಂದ್ರಿಯ ಜ್ಞಾನವಾಗುವದು ಯಾವ ಪ್ರಕಾರ ಇದೆ ?**

**ಉತ್ತರ :** ನಿಜವಾಗಿಯೂ ಯಾವ ಭಾವೇಂದ್ರಿಯ ಮತ್ತು ಭಾವ ನೋ ಇಂದ್ರಿಯ ರೂಪ ಆತ್ಮನ ಜ್ಞಾನದ ಕ್ಷಯೋಪಶಮ ರೂಪ ವಿಶಿಷ್ಟ ಪರಿಣಮನ ಇರುತ್ತದೆ. ಅದೇ ಜ್ಞಾನ ಮಾಡಿಸುತ್ತದೆ ಮತ್ತು ಆ ಜ್ಞಾನವನ್ನು ಇಂದ್ರಿಯ ಅಪೇಕ್ಷೆಯಿಂದ ಆತ್ಮನೇ ಮಾಡಿದ ಜ್ಞಾನವನ್ನು ಇಂದ್ರಿಯಜ್ಞಾನ ಮತ್ತು ನೋಇಂದ್ರಿಯ ಜ್ಞಾನ, ಹೀಗೆ ಸಂಜ್ಞಾ ಪ್ರಾಪ್ತವಾಗುತ್ತದೆ. ವಾಸ್ತವದಲ್ಲಿ ಜ್ಞಾನವಂತೂ ಆತ್ಮನ ಲಕ್ಷಣವಿದೆ. ಉಳಿದ ಬೇರೆ ಯಾವ ದ್ರವ್ಯವೂ ಜ್ಞಾನ ಮಾಡುವದೇ ಇಲ್ಲ. ಆತ್ಮನಿಂದ ತಿಳಿಯುವದು ಇದೆ ಹೇಗೆಂದರೆ ಕೇವಲ ಅದು ಶರೀರದಲ್ಲಿರುವ ಆತ್ಮನೇ ಜ್ಞಾನ ಮಾಡುತ್ತಾನೆ. ಹೇಗೆಂದರೆ ಯಾವ ಮಾತು ಪರಮಾತ್ಮ ಪ್ರಕಾಶ ಗಾಥಾ ೪೫ರಲ್ಲಿ ಹೀಗೆ ಹೇಳಿದೆ – ಯಾವ ಆತ್ಮಾರಾಮನು ಶುದ್ಧ ನಿಶ್ಚಯದಿಂದ ಅದ್ವಿತೀಯ ಜ್ಞಾನಮಯ ಇದೆ, ಆದರೂ ಸಹ ಅನಾದಿಬಂಧದ ಕಾರಣ ವ್ಯವಹಾರನಯದಿಂದ ಇಂದ್ರಿಯಮಯ ಶರೀರವನ್ನು ಗ್ರಹಣ ಮಾಡಿ ತನ್ನ ಐದು ಇಂದ್ರಿಯಗಳ ಮೂಲಕ ರೂಪಾದಿ ಐದೂ ವಿಷಯಗಳನ್ನು ತಿಳಿಯುತ್ತದೆ. ಅಂದರೆ ಇಂದ್ರಿಯ ಜ್ಞಾನರೂಪ ಪರಿಣಮನ ಮಾಡಿ ಇಂದ್ರಿಯಗಳಿಂದ ರೂಪ, ರಸ, ಗಂಧ, ಶಬ್ದ, ಸ್ಪರ್ಶಗಳನ್ನು ತಿಳಿಯುತ್ತದೆ.

ಇದೇ ಅಪೇಕ್ಷೆಯಿಂದ ಇಂದ್ರಿಯ ಜ್ಞಾನವೆಂದು ಕರೆಯುತ್ತಾರೆ. ಆದ್ದರಿಂದ ಯಥಾರ್ಥದಲ್ಲಿ ಇಂದ್ರಿಯ ಜ್ಞಾನವು ಜ್ಞಾನದ ಅಪೇಕ್ಷೆಯಿಂದ ಆತ್ಮನೇ ಇದ್ದಾನೆ. ಬೇರೇನೂ ಇಲ್ಲ. ಆದ್ದರಿಂದ ಇಂದ್ರಿಯ ಜ್ಞಾನ ಜ್ಞಾನವೇ ಇದೆ. ಇದೇ ಮಾತನ್ನು ಮುಂದೆ ದೃಢ ಮಾಡುತ್ತೇವೆ.

**ಶ್ಲೋಕ ೭೧೭-೭೧೮ :** ಇಂದ್ರಿಯ ಜ್ಞಾನವಿರಲಿ ಅಥವಾ ಅತೀಂದ್ರಿಯ ಜ್ಞಾನವಿರಲಿ ಜ್ಞಾನವು ನಿಯಮದಿಂದ ಆತ್ಮನದೇ ಇರುತ್ತದೆ. ಬೇರೆ ಯಾವ ದ್ರವ್ಯದ್ದೂ ಇಲ್ಲ. ಏಕೆಂದರೆ ಜ್ಞಾನವು ಆತ್ಮನ ಲಕ್ಷಣ ಇರುತ್ತದೆ. ಆದ್ದರಿಂದ ಇಂದ್ರಿಯ ಜ್ಞಾನವು ಸ್ವದಲ್ಲಿ ಹೋಗಲು ಪಾವಟಿಗೆ ಇದೆ. ಏಕೆಂದರೆ ಇಂದ್ರಿಯವು ಪುದ್ಗಲ ರೂಪ ಅಜೀವವಿದೆ. ಆದರೆ ಅದರ ನಿಮಿತ್ತದಿಂದ ಯಾವ ಜ್ಞಾನವಾಗುತ್ತದೆ. ಆ ವಿಶೇಷ ಜ್ಞಾನವನ್ನು ಅರ್ಥಾತ್ ಆ ಜ್ಞಾನಾಕಾರವನ್ನು ಗೌಣ ಮಾಡುತ್ತಲೇ ಅಲ್ಲಿ ಸಾಮಾನ್ಯ ಜ್ಞಾನ ಅಂದರೆ ಜ್ಞಾಯಕನು ಉಪಸ್ಥಿತ ಇರುತ್ತಾನೆ. ಏನಂದರೆ ಅದರಲ್ಲಿ ನನ್ನತನ ಮಾಡುವದರಿಂದಲೇ ಸಮ್ಯಗ್ದರ್ಶನವು ಪ್ರಕಟವಾಗುತ್ತದೆ. ಏಕೆಂದರೆ ಸ್ಥೂಲದಿಂದ ಸೂಕ್ಷ್ಮದಲ್ಲಿ ಹೋಗೇಹೋಗುತ್ತದೆ. ಪ್ರಕಟದಿಂದಲೇ ಅಪ್ರಕಟದಲ್ಲಿ ಹೋಗುತ್ತದೆ. ವ್ಯಕ್ತದಿಂದಲೇ ಅವ್ಯಕ್ತದಲ್ಲಿ ಹೋಗುತ್ತದೆ. ಇದೇ ನಿಯಮ ಇರುತ್ತದೆ.

**ಭಾವಾರ್ಥ :** ಸ್ವ ಆತ್ಮರಸದಲ್ಲಿ ನಿಮಗ್ನವಾಗುವಂಥ ಭಾವಮನವು ಸ್ವಯಂ ಸ್ವಯಂ ಅಮೂರ್ತನಾಗಿರುವದರಿಂದ ಸ್ವಾನುಭೂತಿಯ ಸಮಯದಲ್ಲಿ ಆತ್ಮನನ್ನು ಪ್ರತ್ಯಕ್ಷ ಮಾಡುವಂಥವನೆಂದು ಹೇಳುವಲ್ಲಿ ಬಂದಿದೆ. ಹೇಗೆ ಶ್ರೇಣಿ ಏರುವ ಸಮಯ ಜ್ಞಾನದ ಯಾವ ನಿರ್ವಿಕಲ್ಪ ಅವಸ್ಥೆಯಿದೆ, ಆ ನಿರ್ವಿಕಲ್ಪ ಅವಸ್ಥೆಯಲ್ಲಿ ಧ್ಯಾನದ ಅವಸ್ಥೆಯು ಸಂಪನ್ನ ಶ್ರುತಜ್ಞಾನ ಅಥವಾ ಆ ಶ್ರುತಜ್ಞಾನದ ಮೊದಲಿನ ಮತಿಜ್ಞಾನವು ಅತೀಂದ್ರಿಯ ಪ್ರತ್ಯಕ್ಷ ಆಗುತ್ತದೆ. ಅದೇ ಪ್ರಕಾರ ಸಮ್ಯಗ್ದೃಷ್ಟಿ ಜೀವವು ನಾಲ್ಕನೇ ಗುಣಸ್ಥಾನದಿಂದ ಹಿಡಿದು ಏಳನೇ ಗುಣಸ್ಥಾನವರ್ತಿ ಇರುತ್ತಾನೆ. ಅವನ ಮತಿ, ಶ್ರುತ ಜ್ಞಾನಾತ್ಮಕ ಭಾವಮನವು ಸಹ ಸ್ವಾನುಭೂತಿಯ ಸಮಯದಲ್ಲಿ ವಿಶೇಷ ದಶಾಸಂಪನ್ನ ಆಗುವದರಿಂದ ಶ್ರೇಣಿಯ ಹಾಗೆ ಇರುವದಿಲ್ಲ. ಆದರೆ ಅವುಗಳ ಭೂಮಿಕೆಯು ಯೋಗ್ಯ ನಿರ್ವಿಕಲ್ಪ ಆಗುತ್ತದೆ. ಆದ್ದರಿಂದ ಆ ಮತಿ, ಶ್ರುತ ಜ್ಞಾನಾತ್ಮಕ ಭಾವಮನವನ್ನು ಸ್ವಾನುಭೂತಿಯ ಸಮಯದಲ್ಲಿ ಪ್ರತ್ಯಕ್ಷ ಮನ್ನಿಸುವಲ್ಲಿ ಬರುತ್ತದೆ. ಅಲ್ಲಿ ಇದೇ ಕಾರಣವಿದೆ. ಏನಂದರೆ ಮತಿಶ್ರುತಜ್ಞಾನದ ಹೊರತು ಕೇವಲಜ್ಞಾನದ ಉತ್ಪತ್ತಿ ಆಗುವದಿಲ್ಲ. ಆದರೆ ಅವಧಿ ಮನಃ ಪರ್ಯಾಯ ಜ್ಞಾನದ ಹೊರತು ಆಗಬಹುದಾಗಿದೆ. ಯಾವುದು ಅನುಭವದ ವಿಧಿ ಇದೆ. ಅರ್ಥಾತ್ ಅದುವೇ ಸಮ್ಯಗ್ದರ್ಶನದ ಪದ್ಧತಿ ಇದೆ.

**ಶ್ಲೋಕ ೪೬೧-೬೨ :** ಇಂದ್ರಿಯ ಜನ್ಯ ಜ್ಞಾನವು ದೇಶ ಪ್ರತ್ಯಕ್ಷ ಆಗಿರುವದರಿಂದ ಯಥಾರ್ಥದಲ್ಲಿ ಅದು ಆಸ್ತಿಕ್ಯ, ಆತ್ಮನ ಸುಖಾದಿಯ ತರಹ

ಸ್ವಸಂವೇದನ ಪ್ರತ್ಯಕ್ಷ ಯಾವ ಪ್ರಕಾರ ಆಗಬಹುದಾಗಿದೆ? ಸರಿ ಇದೆ. ಆದರೆ ಮೊದಲಿನ ಮತಿ, ಮತ, ಶ್ರುತ ಈ ಎರಡೂ ಜ್ಞಾನಗಳು ಪರ ಪದಾರ್ಥಗಳನ್ನು ತಿಳಿಯುವ ಸಮಯ ಪರೋಕ್ಷ ಇವೆ ಮತ್ತು ದರ್ಶನ ಮೋಹನೀಯದ ಉಪಶಮ, ಕ್ಷಯ ಹಾಗೂ ಕ್ಷಯೋಪಶಮವಾಗುವ ಕಾರಣ ಸ್ವಾನುಭವ ಕಾಲದಲ್ಲಿ ಪ್ರತ್ಯಕ್ಷ ಇವೆ.

**ಶ್ಲೋಕ ೧೧೧ಆ :** ಯಾವ ಇಂದ್ರಿಯಗಳ ಸಂಬಂಧದಿಂದ ಪದಾರ್ಥದ ಜ್ಞಾನವಾಗುತ್ತದೆ. ಆ ಜ್ಞಾನವು ಅಸಂಯಮಜನಕ ಆಗುವದಿಲ್ಲ. ಆದರೆ ಆ ವಿಷಯಗಳಲ್ಲಿ ಯಾವ ರಾಗಾದಿ ಬುದ್ಧಿ ಉತ್ಪನ್ನವಾಗುತ್ತದೆ. ಅದನ್ನು ಆಗಗೊಡಬಾರದು. ಅದುವೇ ಇಂದ್ರಿಯ ಸಂಯಮ ಇದೆ. ಯಾರೂ ಇಂದ್ರಿಯ ಜ್ಞಾನದಿಂದ ಹೆದರಬೇಕಾಗಿಲ್ಲ. ಇಂದ್ರಿಯ ಜ್ಞಾನವನ್ನು ನಿರ್ಬಲಗೊಳಿಸುವ ಅವಶ್ಯಕತೆ ಇಲ್ಲ. ಏಕೆಂದರೆ ಅದು ಆತ್ಮನದೇ ಉಪಯೋಗ ವಿಶೇಷ ಇರುತ್ತದೆ ಮತ್ತು ಅದರಿಂದ ಆ ಜ್ಞಾನವು ಅಸಂಯಮ ಜನಕ ಆಗುವದಿಲ್ಲ. ಆದರೆ ಜ್ಞಾನದ ವಿಷಯದಲ್ಲಿ ಯಾವ ರಾಗಾದಿ ಬುದ್ಧಿ ಉತ್ಪನ್ನವಾಗುತ್ತದೆ ಅದನ್ನು ಆಗಗೊಡದಿರುವದೇ ಸಂಯಮವಿದೆ ಮತ್ತು ಕರ್ತವ್ಯವೂ ಸಹ ಇದೆ.

★★★

## ೧೩. ಪರ್ಯಾಯವು ಪರಮಪಾರಿಣಾಮಿಕ ಭಾವದಿಂದಲೇ ಉಂಟಾಗಿರುತ್ತದೆ (ಪಂಚಾಧ್ಯಾಯಿ ಉತ್ತರಾರ್ಧ)

**ಶ್ಲೋಕ ೧೧ :** ಸ್ವತಃ ಅನಾದಿ ಸಿದ್ಧ ಸತ್‌ದಲ್ಲಿ (ಆತ್ಮನಲ್ಲಿ)ಯೂ ಸಹ ಪಾರಿಣಾಮಿಕ ಶಕ್ತಿಯಿಂದ (ಭಾವದಿಂದ) ಸ್ವಾಭಾವಿಕ ಕ್ರಿಯೆಗಳು ಹಾಗೂ ವೈಭವದ ಕ್ರಿಯೆಗಳು ಆಗುತ್ತವೆ.

**ಭಾವಾರ್ಥ :** ಆಗಮದಲ್ಲಿ ಜೀವದ ಐದು ಭಾವಗಳನ್ನು ಹೇಳಿದ್ದಾರೆ. ಅವುಗಳಲ್ಲಿ ಒಂದು ಪಾರಿಣಾಮಿಕ ಭಾವ ಇದೆ. ಅದನ್ನು ಪಾರಿಣಾಮಿಕ ಶಕ್ತಿ ಎಂದೂ ಸಹ ಹೇಳಲಾಗುತ್ತದೆ. ಅದರ ಎರಡು ಪ್ರಕಾರದ ಪರ್ಯಾಯಗಳು ಆಗುತ್ತವೆ. ಒಂದು ಸ್ವಾಭಾವಿಕ ಹಾಗೂ ಇನ್ನೊಂದು ವೈಭಾವಿಕ ಎಂದು (ಇಲ್ಲಿ ಯಾವ ಒಂದು ದ್ರವ್ಯದ ಎರಡು ಪರ್ಯಾಯಗಳನ್ನು ಹೇಳಿದ್ದಾರೆ. ಅದು ಅಪೇಕ್ಷೆಯಿಂದ ಎರಡು ಇವೆ. ಯಥಾರ್ಥದಲ್ಲಿ ಎರಡು ಎಂದು ತಿಳಿಯಬಾರದು. ಏಕೆಂದರೆ ಒಂದು ದ್ರವ್ಯದ ಒಂದೇ ಪರ್ಯಾಯವು ಆಗುತ್ತದೆ. ಆದರೆ ಅದನ್ನು ಸಾಮಾನ್ಯ ಮತ್ತು ವಿಶೇಷ ಹೀಗೆ ಎರಡು ಅಪೇಕ್ಷೆಯಿಂದ ಎರಡು

ಪರ್ಯಾಯಗಳೆಂದು ಹೇಳಲಾಗಿದೆ. ಅವುಗಳಲ್ಲಿ ಸಾಮಾನ್ಯವನ್ನು ಸ್ವಾಭಾವಿಕ ಪರ್ಯಾಯ ಎನ್ನುತ್ತಾರೆ ಮತ್ತು ವಿಶೇಷವನ್ನು ವೈಭಾವಿಕ ಪರ್ಯಾಯ ಎಂದು ಹೇಳುತ್ತಾರೆ. ಆ ವಿಶೇಷ ಪರ್ಯಾಯವು ಸಾಮಾನ್ಯ ಭಾವದಿಂದ ತಯಾರಾಗಿರುವದರಿಂದಲೇ ಅದು ಪರಮ ಪಾರಿಣಾಮಿಕ ಭಾವದಿಂದ ಉಂಟಾಗಿರುವದರಿಂದ ಯಥಾರ್ಥದಲ್ಲಿ ಪರ್ಯಾಯ ಒಂದೇ ಆಗುತ್ತದೆ.) ಜೀವದ ಅಪೇಕ್ಷೆಯಿಂದ ಈ ಎರಡೂ ಪಾರಿಣಾಮಿಕ ಭಾವ ಇವೆ. ಇದು ನಿಶ್ಚಯ ಕಥನವಿದೆ ಮತ್ತು ಕರ್ಮದ ಉದಯದ ಅಪೇಕ್ಷೆ ಎಂದು ಹೇಳುವ ಸಲುವಾಗಿ ಜೀವದ ವಿಕಾರಿ ಭಾವವನ್ನು (ಅಂದರೆ ವಿಭಾವಭಾವರೂಪ ವಿಶೇಷ ಭಾವವನ್ನು) ಔದಯಿಕ ಭಾವ ಎಂದು ಹೇಳಲಾಗುತ್ತದೆ. ಇದು ವ್ಯವಹಾರ ಕಥನವಿದೆ.

ಇಲ್ಲಿ ತಿಳಿಯುವದೇನೆಂದರೆ ನಿಶ್ಚಯನಯದ (ಅಭೇದ ನಯದಿಂದ) ಜೀವವನ್ನು ಕೇವಲ ಒಂದು ಪಾರಿಣಾಮಿಕ ಭಾವವೇ ಆಗುತ್ತದೆ. ಆದರೆ ವ್ಯವಹಾರ ನಯದಿಂದ (ಭೇದ ನಯದಿಂದ) ಅದೇ ಭಾವವನ್ನು ಸಾಮಾನ್ಯ ಅಪೇಕ್ಷೆಯಿಂದ ಪರಮ ಪಾರಿಣಾಮಿಕ ಭಾವ ಮತ್ತು ವಿಶೇಷ ಅಪೇಕ್ಷೆಯಿಂದ ಔದಯಿಕ ಮುಂತಾದ ನಾಲ್ಕು ಭಾವರೂಪ ಪರ್ಯಾಯವು ಸಾಮಾನ್ಯ ಭಾವದಿಂದಲೇ ಉಂಟಾಗಿರುತ್ತದೆ. ಅದು ಪರಮ ಪಾರಿಣಾಮಿಕ ಭಾವದಿಂದಲೇ ಉಂಟಾಗಿರುತ್ತದೆ. ಅಂದರೆ ಔದಯಿಕ ಮುಂತಾದ ಸರ್ವ ವಿಶೇಷ ಭಾವರೂಪ ನಾನು = ಪರಮ ಪಾರಿಣಾಮಿಕ ಭಾವವೇ ಪರಿಣಮಿಸುತ್ತೇನೆ ಮತ್ತು ಆದ್ದರಿಂದ ನನಗೆ – ಪರಮ ಪಾರಿಣಾಮಿಕ ಭಾವವನ್ನೇ ನನ್ನಲ್ಲಿ = ಪರಮ ಪಾರಿಣಾಮಿಕ ಭಾವದಲ್ಲಿ ಜಾಗ್ರತಿ ಇಡಬೇಕು. ಮತ್ತು ಸ್ವಂತಕ್ಕೆ ಕ್ರೋಧ, ಮಾನ, ಮಾಯಾ, ಲೋಭ, ಭಯ, ಪರಿಗ್ರಹ, ವಾಸನೆ ಇತ್ಯಾದಿಗಳಿಂದ ಉಳಿಯುವದಿದೆ. ಇದನ್ನೇ ಸಂವರ ಭಾವವೆಂದು ಹೇಳಲಾಗುತ್ತದೆ. ಇದರಿಂದಲೇ ನಿರ್ಜರೆಯಾಗುತ್ತದೆ.

**ಶ್ಲೋಕ ೬೩-೬೪ :** ಯಾವದು ಅನಾದಿ ಸತ್‌ದಲ್ಲಿ ವೈಭಾವಿಕ ಕ್ರಿಯಾ (ವಿಭಾವ ರೂಪ ಊದಯಿಕಾದಿ ಭಾವ) ಸಹ ಪರಿಣಮನಶೀಲತೆಯಿಂದ ಆಗುತ್ತದೆ. ಅಂದರೆ ಆ ಭಾವ ಸಹ ಪಾರಿಣಾಮಿಕ ಭಾವವೇ ಆಗುತ್ತದೆ. ಆದರೆ ನಿಯಮದಿಂದ ಅದರಲ್ಲಿ ಸ್ವಾಭಾವಿಕ ಕ್ರಿಯೆಯಿಂದ (ಅಂದರೆ ಪರಮ ಪಾರಿಣಾಮಿಕ ಭಾವದಿಂದ) ವಿಶೇಷತೆಯನ್ನು ಇಡುವದರಿಂದ ಯಾವ ವಿಶೇಷ ಭೇದ ಇರುವದು ? ಹಾಗೂ ಪದಾರ್ಥಗಳನ್ನು ತಿಳಿಯುವಂಥ ಜ್ಞಾನವು ಆತ್ಮನ ಸ್ವಲಕ್ಷಣವಿದೆ. ಆದ್ದರಿಂದ ಆ ಜ್ಞಾನದ ಈ ಜ್ಞೇಯದ ಆಕಾರವಾದ ರೂಪ ಕ್ರಿಯೆಯು ಯಾವ ಪ್ರಕಾರ ವೈಭಾವಿಕ ಕ್ರಿಯೆ ಆಗಬಹುದಾಗಿದೆ ? ಸಮಯಸಾರ ಗಾಥೆ ಆರರಲ್ಲಿ ತಿಳಿಯುವಂಥ ಆತ್ಮನು ಯಾವಾಗ ಪರವನ್ನು ತಿಳಿಯುತ್ತಾನೆ. ಆಗ ಯಾವ ಜ್ಞೇಯಾಕಾರವಿದೆ, ಅದು ಯಥಾರ್ಥದಲ್ಲಿ ಜ್ಞಾನಾಕಾರವೇ ಇದೆ. ಮತ್ತು ಆ ಜ್ಞಾನಾಕಾರದಲ್ಲಿಯೂ ಸಹ ಯಾವಾಗ ಆಕಾರ ರೂಫ ವಿಕಲ್ಪವನ್ನು ಗೌಣ ಮಾಡಿದರೆ ಅದು ಜ್ಞಾಯಕವೇ

ಇದೆ. ಅಂದರೆ ಅದುವೇ ಪರಮ ಪಾರಿಣಾಮಿಕ ಭಾವ ಇರುತ್ತದೆ. ಕಾರಣ ಶುದ್ಧ ಪರ್ಯಾಯವಿದೆ.

ಇದೇ ಮಾತು ಆಚಾರ್ಯ ಅಮೃತಚಂದ್ರ ಟೀಕಾಕೃತ ಸಮಯಸಾರ ಶ್ಲೋಕ ೨೭೧ ರಲ್ಲಿಯೂ ಸಹ ಹೇಳಿದ್ದಾರೆ. ಯಾವ ಈ ಜ್ಞಾನ ಮಾತ್ರವಾದ ಭಾವವೆಂದರೆ ನಾನಿದ್ದೇನೆ. ಅದು ಕೇವಲ ಜ್ಞೇಯಗಳ ಜ್ಞಾನ ಮಾತ್ರವೆಂದೇ ತಿಳಿದುಕೊಳ್ಳಬಾರದು. ಆದರೆ ಜ್ಞೇಯಗಳ ಆಕಾರದಿಂದ ಆಗುವಂಥ ಜ್ಞಾನದ ಅಲೆಗಳ ರೂಪದಲ್ಲಿ ಪರಿಣಮಿಸುತ್ತಿರುವ ಆ ಜ್ಞಾನ, ಜ್ಞೇಯಜ್ಞಾತಾಮಯವಾದ ವಸ್ತುಮಾತ್ರ ಎಂದು ತಿಳಿದುಕೊಳ್ಳಬೇಕು. ಅಂದರೆ ತಾನೇ ಜ್ಞಾನ, ತಾನೇ ಜ್ಞೇಯ, ತಾನೇ ಜ್ಞಾತಾ ಹೀಗೆ ಜ್ಞಾನ-ಜ್ಞೇಯ-ಜ್ಞಾತಾರೂಪದ ಮೂರು ಭಾವಗಳಿಂದ ಯುಕ್ತವಾದ ವಸ್ತುಮಾತ್ರ ಎಂದು ತಿಳಿದುಕೊಳ್ಳಬೇಕು.

ಜ್ಞಾನ (ಆತ್ಮ) ಸಾಮಾನ್ಯ ವಿಶೇಷಾತ್ಮಕ ಆಗುತ್ತದೆ. ಜ್ಞಾನ ಸಾಮಾನ್ಯ ಭಾವ (ಪರಮ ಪಾರಿಣಾಮಿಕ ಭಾವ) ನಿರ್ವಿಕಲ್ಪ ಆಗುತ್ತದೆ. ಯಾವಾಗಂದರೆ ಜ್ಞಾನ ವಿಶೇಷ ಭಾವವು (ನಾಲ್ಕು ಭಾವರೂಪ) ಸವಿಕಲ್ಪವಾಗುತ್ತದೆ. ಅದರಿಂದ ಜ್ಞಾನ ಸಾಮಾನ್ಯಭಾವ (ಪರಮ ಪಾರಿಣಾಮಿಕ ಭಾವ)ದಲ್ಲಿ ಏಕತ್ವಭಾವ ಮಾಡುತ್ತಲೇ ನಿರ್ವಿಕಲ್ಪ ಅನುಭೂತಿ ಆಗುತ್ತದೆ. ಇದುವೇ ಸಮ್ಯಗ್ದರ್ಶನದ ವಿಧಿ (ಪದ್ಧತಿ) ಇರುತ್ತದೆ.

ಶ್ಲೋಕ ೧೩೦ : ಪರಗುಣಗಳು ಆಕಾರ ರೂಪ ಪಾರಿಣಾಮಿಕ ಕ್ರಿಯೆಗೆ ಬಂಧ ಎಂದು ಹೇಳುತ್ತಾರೆ ಹಾಗೂ ಆ ಕ್ರಿಯೆ ಇರುವದರಿಂದಲೇ ಜೀವ ಮತ್ತು ಕರ್ಮ ಎರಡೂ ತಮ್ಮ ತಮ್ಮ ಗುಣಗಳಿಂದ ಚ್ಯುತವಾಗುತ್ತವೆ. ಅದು ಅಶುದ್ಧತೆ ಎಂದು ಕರೆಯುತ್ತಾರೆ. ಅಂದರೆ ಪಾರಿಣಾಮಿಕ ಭಾವರೂಪ (ಪರ್ಯಾಯ ರೂಪ) ಜೀವವೇ ಪರಿಣಮಿಸುತ್ತದೆ.

ಭಾವಾರ್ಥ : ಪ್ರತಿಯೊಂದು ದ್ರವ್ಯದಲ್ಲಿ ಪಾರಿಣಾಮಿಕ ಭಾವ ಆಗುತ್ತದೆ. ಜೀವ ಮತ್ತು ಪುದ್ಗಲದಲ್ಲಿ ಅದರಲ್ಲಿ ಎರಡು ಪ್ರಕಾರದ ಕ್ರಿಯೆಗಳು ಆಗುತ್ತವೆ. ಒಂದು ಶುದ್ಧ ಇನ್ನೊಂದು ಅಶುದ್ಧ ಪ್ರತಿಯೊಂದು ದ್ರವ್ಯವು, ಅದು ಕ್ರಿಯೆಯ ಕರ್ತಾ ಸ್ವತಃ ಆಗುವದರಿಂದ ಆ ಕ್ರಿಯೆಯ ಪಾರಿಣಾಮಿಕ ಭಾವರೂಪ ಇದೆ. ಹೇಗೆ ಜೀವದಲ್ಲಿ ಕ್ರೋಧ ಆಗುತ್ತದೆ. ಅದು ಸ್ವ ಅಪೇಕ್ಷೆಯಿಂದ ಪಾರಿಣಾಮಿಕ ಭಾವ (ಕ್ರಿಯೆ) ಇರುತ್ತದೆ. ಔದಯಿಕ ಭಾವವು ಯಥಾರ್ಥದಲ್ಲಿ ಪಾರಿಣಾಮಿಕ ಭಾವದಿಂದಲೇ ಉಂಟಾಗಿರುತ್ತದೆ. (ನೋಡಿರಿ ಜಯಧವಲಾ ಭಾಗ ೧ ಪುಟ ೩೧೯ ಹಾಗೂ ಶ್ರೀ ಷಟ್‌ಖಂಡಾಗಮ ಪುಸ್ತಕ ೫ ಪು-೧೯೭ ೨೪೨-೨೪೩) ಮತ್ತು ವಿಕಾರಿ ಭಾವಗಳಲ್ಲಿ ಕರ್ಮದ ಉದಯದ ಅಪೇಕ್ಷಾ ಹೇಳಲಾಗಿದೆ. ಆಗ ಆ ಪರ್ಯಾಯವನ್ನು ಔದಯಿಕಿ ಸಹ ಹೇಳಲಾಗುತ್ತದೆ.

ವಿಭಾವ ಭಾವಗಳು ಜೀವದಲ್ಲಿಂದಲೇ ಹೊರಡುವವು ನಿಜವಿದೆ. ಅದು ತನ್ನ ಸ್ವರೂಪ ಇಲ್ಲವಾದುದರಿಂದ ನಿಶ್ಚಯ ನಯದಿಂದ ಅದು ನನ್ನದಲ್ಲ. ಅದನ್ನು ಪರಭಾವ, ಪರಗುಣಾಕಾರ ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತದೆ. ಈ ಅಪೇಕ್ಷೆಯಿಂದ ಜೀವದ ವಿಕಾರ ಭಾವವನ್ನು ನಿಶ್ಚಯ ನಯದಿಂದ ಪುದ್ಗಲ ಪರಿಣಾಮ ಎಂದು ಹೇಳುವಲ್ಲಿ ಬಂದಿದೆ. ಏಕೆಂದರೆ ಅದು ಜೀವದ ಸ್ವಭಾವವಲ್ಲ ಮತ್ತು ಪುದ್ಗಲದ ಸಂಬಂಧದಿಂದ ಆಗುತ್ತದೆ. ಆದ್ದರಿಂದ ವಿಕಾರಿಭಾವವು ನಿಶ್ಚಯವಾಗಿ ಬಂಧವಿದೆ. ಅವಿಕಾರಿ ಪಾರಿಣಾಮಿಕ ಕ್ರಿಯೆ ಆದ ಬಳಿಕ ತನ್ನ ಗುಣದಿಂದ ಚ್ಯುತವಾಗುವದು ಅದು ಅಶುದ್ಧತೆ ಇರುತ್ತದೆ.

ಅಂದರೆ ಯಾವುದು ಜೀವದ ಪರಮ ಪಾರಿಣಾಮಿಕ ಭಾವ ಇದೆ. ಅಂದರೆ ಯಾವುದು ಜೀವದ ಸಹಜ ಪರಿಣಮನ ಇದೆ. ಅದುವೇ ಪರಲಕ್ಷ್ಯದಿಂದ ಅಶುದ್ಧತೆಯ ರೂಪ ಪರಿಣಮಿಸಿ ನಿಶ್ಚಯವಾಗಿ ಬಂಧರೂಪವಾಗುತ್ತದೆ. ಆದ್ದರಿಂದ ಆ ಅಶುದ್ಧತೆಯನ್ನು ಗೌಣ ಮಾಡುತ್ತಲೇ ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮನು ಅಂದರೆ ಸಮ್ಯಗ್ದರ್ಶನದ ವಿಷಯ ಇರುತ್ತದೆ, ಅದು ಪ್ರಕಟವಾಗುತ್ತದೆ. ಇದೇ ಅಪೇಕ್ಷೆಯಿಂದ ಸಮಯಸಾರ ಗಾಥಾ ೧೩ರಲ್ಲಿಯೂ ಸಹ ಹೇಳಿದ್ದಾರೆ. ಏನಂದರೆ ಒಂಬತ್ತು ತತ್ವಗಳಲ್ಲಿ ಅಡಗಿರುವಂಥ ಆತ್ಮಜ್ಯೋತಿ ಅಂದರೆ ಆ ಒಂಬತ್ತು ತತ್ವರೂಪ ಯಾವ ಜೀವದ ಪರಿಣಮನವಿದೆ (ಪರ್ಯಾಯವಿದೆ) ಅದರಲ್ಲಿಂದ ಅಶುದ್ಧಿಗಳನ್ನು ಗೌಣ ಮಾಡುತ್ತಲೇ ಯಾವದು ಉಳಿಯುತ್ತದೆ, ಅದುವೇ ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮನಿರುತ್ತಾನೆ. ಅದುವೇ ಕಾರಣಶುದ್ಧ ಪರ್ಯಾಯವಿದೆ, ಅದುವೇ ಸಮ್ಯಗ್ದರ್ಶನದ (ದೃಷ್ಟಿಯ) ವಿಷಯ ಇರುತ್ತದೆ.

★★★

## ೧೪. ಸ್ವಭಾವ ಪರ್ಯಾಯ ಮತ್ತು ವಿಭಾವ ಪರ್ಯಾಯ

ನಾವು ಮೊದಲು ಹೇಳಿದ್ದೇವೆ, ಏನಂದರೆ ಸ್ವಭಾವ ಪರ್ಯಾಯ ಮತ್ತು ವಿಭಾವ ಪರ್ಯಾಯ ಹೀಗೆ ಎರಡು ಪರ್ಯಾಯಗಳ ಅಪೇಕ್ಷೆಯಿಂದ ಹೇಳಲಾಗುತ್ತದೆ. ಅಂದರೆ ಎರಡೂ ಒಂದರದೇ ಪರ್ಯಾಯ (ವಸ್ತು-ದ್ರವ್ಯ)ಗಳು ಅನುಕ್ರಮವಾಗಿ ಸಾಮಾನ್ಯರೂಪ ಮತ್ತು ವಿಶೇಷರೂಪ ಇವೆ. ಆದರೆ ಸ್ವಾಭಾವಿಕ ಶಕ್ತಿ ಮತ್ತು ವೈಭಾವಿಕ ಶಕ್ತಿ ಒಂದೇ ಕಾಲದಲ್ಲಿ ಆಗುವದಿಲ್ಲ. ಏಕೆಂದರೆ ಹೀಗೆ ಮನ್ನಿಸಿದರೆ ಎರಡೂ ಪರ್ಯಾಯಗಳು ವಿಶೇಷ ರೂಪವಾಗುವದರಿಂದ ಒಂದು ದ್ರವ್ಯದ ಒಂದು ಕಾಲದಲ್ಲಿ ಎರಡು ಪರ್ಯಾಯಗಳ ಪ್ರಸಂಗ ಬರುವದು ಮತ್ತು ಕಾರ್ಯಕಾರಣ ಭಾವದ ನಾಶದ ಪ್ರಸಂಗ ಬರುವದು. ಯಾವುದರಿಂದ ಬಂಧ

ಮತ್ತು ಮೋಕ್ಷದ ಅಭಾವದ ಪ್ರಸಂಗ ಬರುವದು, ಅದುವೇ ಈಗ ಮುಂದೆ ಹೇಳುತ್ತೇವೆ.

**ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ :**

ಒಂದು ಕಾಲದಲ್ಲಿ ಇದು ಸ್ವಾಭಾವಿಕದ ಶಕ್ತಿಯ ಸದ್‌ಭಾವ ಮನ್ನಿಸಿದ ಮೇಲೆ ನ್ಯಾಯದಿಂದಲೂ ಸಹ ಬಹಳ ದೊಡ್ಡ ದೋಷ ಬರುವದು. ಏಕೆಂದರೆ ಏಕಕಾಲಕ್ಕೆ ಸ್ವಾಭಾವಿಕ ಮತ್ತು ವೈಭಾವಿಕ ಭಾವವನ್ನು ಮನ್ನಿಸುವದರಿಂದ ಕಾರ್ಯಕಾರಣ ಭಾವದ ನಾಶ ಹಾಗೂ ಬಂಧ-ಮೋಕ್ಷದ ನಾಶವಾಗುವ ಪ್ರಸಂಗ ಬರುತ್ತದೆ.

ಭಾವಾರ್ಥ : ವೈಭಾವ ಶಕ್ತಿಯ ವಿಭಾವ ಮತ್ತು ಸ್ವಭಾವ ರೂಪ ಎರಡು ಅವಸ್ಥೆಗಳನ್ನು ಮನ್ನಿಸುವದರಿಂದ ಬಂಧ ಮತ್ತು ಮೋಕ್ಷದ ವ್ಯವಸ್ಥೆಯು ಸಿದ್ಧವಾಗುತ್ತದೆ ಹಾಗೂ ವಿಭಾವ ಮತ್ತು ಸ್ವಭಾವ ಅವಸ್ಥೆಗಳು ಕ್ರಮವಾಗಿ ಇರುತ್ತವೆ. ಆದ್ದರಿಂದ ಬಂಧ ಮತ್ತು ಮೋಕ್ಷದ ಕಾರ್ಯ-ಕಾರಣ ಭಾವಗಳು ಬೇರೆ ಬೇರೆ ಇರುತ್ತವೆ. ಆದರೆ ಎರಡೂ ಶಕ್ತಿಗಳನ್ನು ಏಕಕಾಲಕ್ಕೆ ಮನ್ನಿಸುವದರಿಂದ ಕಾರ್ಯಕಾರಣ ಭಾವ ಉಂಟಾಗುವದಿಲ್ಲ. ಹಾಗೂ ಬಂಧ ಹಾಗೂ ಮೋಕ್ಷದ ವ್ಯವಸ್ಥೆಯೇ ಉಂಟಾಗುವದಿಲ್ಲ.

ಛದ್ಮಸ್ಥ ಜೀವದಲ್ಲಿ ಸ್ವಭಾವ ಪರ್ಯಾಯ ಮತ್ತು ವಿಭಾವ ಪರ್ಯಾಯ ಹೀಗೆ ಎರಡು ಪರ್ಯಾಯಗಳನ್ನು ಮನ್ನಿಸುವಲ್ಲಿ ಬಂದರೆ ಯಾವ ಕಾರ್ಯಕಾರಣ ರೂಪ ವ್ಯವಸ್ಥೆ ಇದೆ, ಅದು ಸಿದ್ಧವಾಗುವದೇ ಇಲ್ಲ. ಅಂದರೆ ಆತ್ಮನ ಪ್ರತಿಯೊಂದು ಪ್ರದೇಶದಲ್ಲಿ ಕರ್ಮಗಳು ಇವೆ ಮತ್ತು ಅವುಗಳ ನಿಮಿತ್ತದಿಂದ ಅದು ಅಶುದ್ಧತಾರೂಪ ಪರಿಣಮಿಸುತ್ತದೆ. ಹೀಗೆ ಕಾರ್ಯ-ಕಾರಣ ಭಾವ ಮತ್ತು ಆ ಕರ್ಮಗಳ ಅಭಾವವಾಗುತ್ತಲೇ ಆ ಜೀವವು ಶುದ್ಧರೂಪ ಪರಿಣಮಿಸುತ್ತದೆ. ಹಾಗೆಯೇ ಬಂಧ ಮತ್ತು ಮೋಕ್ಷವು ಸಹ ಸಿದ್ಧವಾಗುವದಿಲ್ಲ. ಆದ್ದರಿಂದ ಛದ್ಮಸ್ಥ ಜೀವದಲ್ಲಿ ವಿಶೇಷ ರೂಪವಾಗಿ ವಿಭಾವ ಪರಿಣಮನ ಮತ್ತು ಸಾಮಾನ್ಯ ರೂಪ ಸ್ವಭಾವ ಪರಿಣಮನವೇ ಮನ್ನಿಸಲು ಯೋಗ್ಯವಿದೆ. ಯಾವದೆಂದರೆ ಸಾಮಾನ್ಯ ರೂಪ ಸ್ವಭಾವ ಪರಿಣಮನದ ಬಲದಿಂದ ಆ ಜೀವವು ಕರ್ಮಗಳ ನಿಮಿತ್ತದಿಂದ ಉಂಟಾಗುವ ಭಾವದಲ್ಲಿ 'ನನ್ನತನ'ದಿಂದ ಬಿಡುಗಡೆಯಾಗಿ ಅಂದರೆ ಅವುಗಳಲ್ಲಿ 'ನನ್ನತನ' ಮಾಡದೇ ಕೇವಲ ಪರಮ ಪಾರಿಣಾಮಿಕ ಭಾವದಲ್ಲಿಯೇ 'ನನ್ನತನ' ಮಾಡುತ್ತಾನೆ ಮತ್ತು ಆ ವಿಭಾವರೂಪ ಭಾವಗಳನ್ನು ಕ್ಷಣಿಕ ಮತ್ತು ಹೇಯವೆಂದು ಮನ್ನಿಸಿ ಕರ್ಮಗಳನ್ನು ನಾಶಗೊಳಿಸುವ ಸಲುವಾಗಿ ಶಕ್ತಿ ಪ್ರಾಪ್ತ ಮಾಡುತ್ತಾನೆ. ಮುಂದೆ ಹಾಗೆಯೇ ಪುರುಷಾರ್ಥವನ್ನು ಮೇಲಿಂದ ಮೇಲೆ ಮಾಡಿ ಎಲ್ಲ ಕರ್ಮಗಳನ್ನು ನಾಶ ಮಾಡಿ, ಅಂಥ ಭಾವನೆಗಳಿಂದ ಸರ್ವಥಾ, ಸರ್ವಕಾಲದ ಸಲುವಾಗಿ ಬಿಡುತ್ತಾನೆ, ಮುಕ್ತನಾಗುತ್ತಾನೆ. ಇದುವೇ ಮೋಕ್ಷವಿದೆ.

★★★

# ೧೫. ಒಂಬತ್ತು ತತ್ವಗಳ ನಿಜವಾದ ಶ್ರದ್ಧೆಯ ಸ್ವರೂಪ (ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ)

ಶ್ಲೋಕ ೧೩೩-೧೩೫ : ಯಥಾರ್ಥದಲ್ಲಿ ಶುದ್ಧನಯದ ಅಪೇಕ್ಷೆಯಿಂದ ಜೀವವು ಸಹ ಶುದ್ಧವಿದೆ. (ಅಂದರೆ ಏಕಾಂತದಿಂದ ಶುದ್ಧವಿಲ್ಲ. ಅದರ ಒಂದು ಭಾಗ ಶುದ್ಧ ಮತ್ತು ಒಂದು ಭಾಗ ಅಶುದ್ಧ ಹೀಗೂ ಸಹ ಇಲ್ಲ. ಆದರೆ ಅಪೇಕ್ಷೆಯಿಂದ ಜೀವವು ಶುದ್ಧವಿದೆ.) ಹಾಗೂ ಒಮ್ಮೊಮ್ಮೆ ಬದ್ಧಾಬದ್ಧ ನಯ ಅಂದರೆ ವ್ಯವಹಾರ ನಯದಿಂದ ಜೀವವು ಅಶುದ್ಧವಿದೆ. ಸಂಪೂರ್ಣ ಶುದ್ಧನಯ, ಒಂದು ಅಭೇದ ಮತ್ತು ನಿರ್ವಿಕಲ್ಪವಿದೆ. ವ್ಯವಹಾರ ನಯವು ಅನೇಕ ಭೇದರೂಪ ಮತ್ತು ಸವಿಕಲ್ಪವಿದೆ. ಅದು ಶುದ್ಧನಯದ ವಿಷಯವು ಚೇತನಾತ್ಮಕ ಶುದ್ಧ ಜೀವವಾಚ್ಯವಿದೆ ಮತ್ತು ವ್ಯವಹಾರ ನಯದ ವಿಷಯರೂಪ ಜೀವಾದಿ ಒಂಬತ್ತು ಪದಾರ್ಥಗಳೆಂದು ಹೇಳುವಲ್ಲಿ ಬಂದಿರುತ್ತದೆ.

ನಾವು ಪ್ರಾರಂಭದಲ್ಲಿಯೇ ಯಾವದನ್ನು ತಿಳಿಸಿದ್ದೇವೆ. ಏನಂದರೆ ವಸ್ತುವೊಂದು ಅಭೇದ ಇರುತ್ತದೆ ಮತ್ತು ಅದನ್ನು ನೋಡುವ ದೃಷ್ಟಿಯ ಅನುಸಾರ ಅದೇ ವಸ್ತು ಶುದ್ಧ ಅಥವಾ ಅಶುದ್ಧ, ಅಭೇದ ಅಥವಾ ಭೇದ ರೂಪ ತಿಳಿದುಬರುತ್ತದೆ. ಅದೇ ಮಾತನ್ನು ಇಲ್ಲಿ ಸಿದ್ಧ ಮಾಡಲಾಗಿದೆ. ಈಗ ಸಮಯಸಾರ ಗಾಥೆ ೧೩ರ ಯಾವ ಭಾವವಿದೆ ಎಂದರೆ ಒಂಬತ್ತು ತತ್ವಗಳಲ್ಲಿ ಅಡಗಿರುವ ಆತ್ಮ (ಚೈತನ್ಯ) ಜ್ಯೋತಿ ಅದೇ ಭಾವ ಮುಂದಿನ ಶ್ಲೋಕದಲ್ಲಿ ಸ್ಪಷ್ಟಪಡಿಸಲಾಗಿದೆ.

ಶ್ಲೋಕ ೧೫೫ : ಒಂದು ಜೀವವು ಜೀವ-ಅಜೀವಾದಿ ಒಂಬತ್ತು ಪದಾರ್ಥರೂಪವಾಗಿ ವಿರಾಜಮಾನವಿದೆ ಮತ್ತು ಈ ಒಂಬತ್ತು ಪದಾರ್ಥಗಳ ಅವಸ್ಥೆಗಳಲ್ಲಿಯೂ ಸಹ ಒಂದು ವೇಳೆ ವಿಶೇಷ ಅವಸ್ಥೆಗಳ ಅರ್ಥ ಮಾಡದೇ ಹೋದರೆ (ವಿಶೇಷ ರೂಪ ವಿಭಾವ-ಭಾವಗಳನ್ನು ಗೌಣ ಮಾಡಿದರೆ) ಕೇವಲ ಶುದ್ಧ ಜೀವವೇ ಇರುತ್ತದೆ. (ಕೇವಲ ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮವೇ ಇರುತ್ತದೆ. ಅಂದರೆ ಅದು ಕೇವಲ ಕಾರಣಶುದ್ಧ ಪರ್ಯಾಯ ರೂಪ ದೃಷ್ಟಿಯ ವಿಷಯವೇ ಇರುತ್ತದೆ. ಇದರಿಂದ ವಿಶೇಷ ಅವಸ್ಥೆಗಳು ಪರ್ಯಾಯಗಳು ಪರಮ ಪಾರಿಣಾಮಿಕ ಭಾವದಿಂದಲೇ ಉಂಟಾಗಿವೆ.)

ಶ್ಲೋಕ ೧೬೨-೧೬೩ : ಒಂದು ವೇಳೆ ಅಶುದ್ಧರೂಪ ಪರಿಣಮಿತ ಜೀವ ಅರ್ಥಾತ್ ಅಶುದ್ಧ ಪರ್ಯಾಯದ ತ್ಯಾಗ ಮಾಡಿದರೆ ಅಲ್ಲಿ ಪೂರ್ಣ ದ್ರವ್ಯದ್ದೇ ತ್ಯಾಗವಾಗಿ ಸಂಪೂರ್ಣ ಶೂನ್ಯತೆ ಮುಂತಾದ ದೋಷ ಉಂಟಾಗುವದು. ಅಂದರೆ ಆ ಅಶುದ್ಧ ಪರ್ಯಾಯದಲ್ಲಿಯೇ ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮನು ಅಡಗಿರುವದರಿಂದ ಒಂದು ವೇಳೆ ಆ ಅಶುದ್ಧ ಪರ್ಯಾಯದ ತ್ಯಾಗ ಮಾಡಿದೆವೆಂದರೆ ಪೂರ್ಣ ದ್ರವ್ಯದ್ದೇ ಲೋಪವಾಗುವದು. ಆದ್ದರಿಂದ ಆ ಅಶುದ್ಧ

ಪರ್ಯಾಯದ ತ್ಯಾಗ ಮಾಡದೇ ಕೇವಲ ಅಶುದ್ಧಿಯನ್ನೇ ಗೌಣ ಮಾಡಬೇಕು ಮತ್ತು ಹೀಗೆ ಮಾಡುತ್ತ ಪರಮ ಪಾರಿಣಾಮಿಕ ಭಾವರೂಪ ಯಾವ ಶುದ್ಧಾತ್ಮ ಇರುವನು ಅವನೇ ದೃಷ್ಟಿಯ ವಿಷಯ ಇರುವನು. ಅವನೇ ಪ್ರಕಟವಾಗುವನು.

ಈಗ ಶುದ್ಧಾತ್ಮನ ಪ್ರಾಪ್ತಿಯ ವಿಧಿಯನ್ನು ಅಂದರೆ ಸಮ್ಯಗ್ದರ್ಶನದ ರೀತಿಯನ್ನು ಹೇಳುತ್ತೇವೆ – ಯಾವ ಸಮಯ ಆ ಅಶುದ್ಧ ಬಂಗಾರದ ರೂಪಗಳಲ್ಲಿ ಕೇವಲ ಶುದ್ಧ ಬಂಗಾರವು ದೃಷ್ಟಿಗೋಚರ ಮಾಡಲಾಗುತ್ತದೆ. (ಅಂದರೆ ಅಶುದ್ಧ ಪರ್ಯಾಯದಲ್ಲಿ ದ್ರವ್ಯದೃಷ್ಟಿಯಿಂದ ಕೇವಲ ಶುದ್ಧಾತ್ಮ – ಪರಮ ಪಾರಿಣಾಮಿಕ ಭಾವ ಕಣ್ಣಿಗೆ ಕಾಣುವ ಹಾಗೆ ಮಾಡುವಲ್ಲಿ ಬರುತ್ತದೆ.) ಆ ಸಮಯ ಪರದ್ರವ್ಯದ ಫಲ ಕಣ್ಣಿಗೆ ಕಾಣುವದಿಲ್ಲ. (ಅಂದರೆ ಪರ್ಯಾಯ ರೂಪ ಪರಿಣಮಿತ ದ್ರವ್ಯದ ಅಶುದ್ಧಿಯು ಗೌಣವಾಗುತ್ತಲೇ ಪೂರ್ಣ ಸಾಕ್ಷಾತ್ ಶುದ್ಧಾತ್ಮನೇ ತಿಳಿದು ಬರುತ್ತಾನೆ.) ಆದರೆ ಪ್ರತ್ಯಕ್ಷ ಪ್ರಮಾಣದಿಂದ ತಮ್ಮ ಅಭೀಷ್ಟ ಕೇವಲ ಶುದ್ಧ ಬಂಗಾರವೇ ಕಂಡುಬರುತ್ತದೆ. (ಆದ್ದರಿಂದ ಎರಡನೆಯವರಿಗೆ ಯಾವ ದ್ರವ್ಯ ಪ್ರಮಾಣವು ಪ್ರಕಾಶಿತವಾಗುತ್ತದೆ. ಅದೇ ದ್ರವ್ಯದಲ್ಲಿ ನಮಗೆ ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮನ ದರ್ಶನವಾಗುತ್ತದೆ. ಅದರಲ್ಲಿ ಎರಡನೆಯದರ ದೋಷವು ಕೇವಲ ದ್ರವ್ಯವನ್ನು ದ್ರವ್ಯಾರ್ಥಿಕ ನಯದಿಂದ ಗ್ರಹಣ ಮಾಡುವದಿದೆ. ಆಗ ಅವು ಅವನಿಗೆ ಪ್ರಮಾಣ ದೃಷ್ಟಿಯಿಂದಲೇ ಸ್ವೀಕಾರ ಮಾಡುತ್ತಾರೆ. ಏಕೆಂದರೆ ಅವುಗಳ ಗ್ರಹಿಕೆಯಲ್ಲಿ ದ್ರವ್ಯವು ಎರಡು ಭಾಗವುಳ್ಳದ್ದಿರುವದು. ಹೇಗೆಂದರೆ ಯಾವುದರಲ್ಲಿ ಒಂದು ಭಾಗ ಶುದ್ಧ ಮತ್ತು ಇನ್ನೊಂದು ಭಾಗ ಅಶುದ್ಧ ಇದೆ. ಎರಡನೆಯವರಿಗೆ ಇಂಥ ಮಾನ್ಯತೆಯು ಮರೆವಿನಿಂದ ಆಗುತ್ತದೆ. ಆಗ ಪೂರ್ಣದ್ರವ್ಯದ ಮಾತನಾಡುತ್ತೇವೆ. ಆಗ ಅವರಿಗೆ ಅದರಲ್ಲಿ ಪ್ರಮಾಣ ದ್ರವ್ಯದ್ದೇ ದರ್ಶನವಾಗುತ್ತದೆ. ಯಾವಾಗ ನಾವು ಅದೇ ಪ್ರಮಾಣ ದ್ರವ್ಯವನ್ನು ಶುದ್ಧ ದ್ರವ್ಯಾರ್ಥಿಕ ನಯದಿಂದ ಗ್ರಹಣ ಮಾಡಿ ಅದನ್ನು ಶುದ್ಧ ಆತ್ಮ = ಪರಮ ಪಾರಿಣಾಮಿಕ ಭಾವವೆಂದು ಹೇಳುತ್ತೇವೆ.

ಹೀಗೆ ಅಶುದ್ಧ ಸ್ವರ್ಣ ಮಾಲೆಯಲ್ಲಿ ಬೇರೆ ಧಾತುಗಳು ಸಂಯೋಗವಾದ ಬಳಿಕವೂ ಸಹ ಯಥಾರ್ಥದಲ್ಲಿ ಪರಸಂಯೋಗರಹಿತ ಭಿನ್ನ ರೂಪದಿಂದ ಶುದ್ಧ ಬಂಗಾರದ ಅಸ್ತಿತ್ವವು ಸಿದ್ಧವಾಗುತ್ತದೆ. ಇದೇ ಪ್ರಕಾರ ಜೀವಾದಿಕ ಒಂಬತ್ತು ಪದಾರ್ಥಗಳಲ್ಲಿ ಶುದ್ಧಜೀವದ ಅಸ್ತಿತ್ವವು ಸಿದ್ಧವಿದೆ.

**ಶ್ಲೋಕ ೧೬೬ :** ಇದರಲ್ಲಿ ಕೆಸರು ಸಹಿತ ನೀರಿನ ಉದಾಹರಣೆ ಇದೆ. ಆ ಕೆಸರು ಸಹಿತವಿರುವ ನೀರಿನಲ್ಲಿಯೇ ಶುದ್ಧ ನೀರು ಅಡಗಿರುತ್ತದೆ.

**ಶ್ಲೋಕ ೧೬೭ :** ಇದರಲ್ಲಿ ಬೆಂಕಿಯ ದೃಷ್ಟಾಂತವಿದೆ. ಉಪಚಾರದಿಂದ ಬೆಂಕಿಯ ಆಕಾರವು ಅದರ ಇಂಧನದ ಅನುಸಾರವಾದರೂ ಸಹ ಅದು ಕೇವಲ ಅಗ್ನಿಯೇ ಇದೆ. ಬೇರೆ ರೂಪ ಸ್ವಲ್ಪವೂ ಸಹ ಇಲ್ಲ. ಅಂದರೆ ಇಂಧನ ರೂಪ

ಇರುವದಿಲ್ಲ. ಇದೇ ಮಾತನ್ನು ಸಮಯಸಾರ ಗಾಥೆ ೬ ರಲ್ಲಿಯೂ ಹೇಳಲಾಗಿದೆ. ಜ್ಞಾನವು ಜ್ಞೇಯರೂಪ ಪರಿಣಮಿಸಿದರೂ ಸಹ ಅದು ಜ್ಞಾಯಕವೇ ಇದೆ.

**ಶ್ಲೋಕ ೧೬೮ :** ಕನ್ನಡಿಯಲ್ಲಿ ಬೇರೆ ಬೇರೆ ಪ್ರತಿಬಿಂಬಗಳು ಉಂಟಾದರೂ ಸಹ ಅವನ್ನು ಗೌಣ ಮಾಡುತ್ತಲೇ ಕೇವಲ ಸ್ವಚ್ಛ ಕನ್ನಡಿಯೇ ಇದೆ. ಯಥಾರ್ಥದಲ್ಲಿ ಬೇರೆ ಯಾವದೂ ಇಲ್ಲ.

**ಶ್ಲೋಕ ೧೬೯ :** ಸ್ಫಟಿಕದಲ್ಲಿ ಬೇರೆ ಪ್ರತಿಬಿಂಬವು ಬಿದ್ದಿದೆ. ಈ ಕಾರಣದಿಂದ ಅಲ್ಲಿ ಆ ಬಣ್ಣದ ಬಿಂಬವು ಕಾಣಿಸಿದ ಮೇಲೆಯೂ ಸಹ ಸ್ವರೂಪದಿಂದ ಅದು ಆ ಬಣ್ಣದ್ದಾಗುವದಿಲ್ಲ. ಸ್ವರೂಪದಿಂದ ಆ ಸ್ಫಟಿಕವು ಸ್ವಚ್ಛವೇ ಇದೆ.

**ಶ್ಲೋಕ ೧೭೦ :** ಜ್ಞಾನದ ದೃಷ್ಟಾಂತವಿದೆ. ಜ್ಞಾನವು ಜ್ಞೇಯವನ್ನು ತಿಳಿಯುತ್ತ ಜ್ಞೇಯರೂಪ ಆಗುವದಿಲ್ಲ. ಆದರೆ ಹೇಗೆ ಅದರಲ್ಲಿ ಜ್ಞೇಯವನ್ನು ಗೌಣ ಮಾಡಿದರೆ ಅಲ್ಲಿ ಜ್ಞಾಯಕವೇ ಉಪಸ್ಥಿತ ಇರುತ್ತದೆ. ಇದುವೇ ಸಮ್ಯಗ್ದರ್ಶನದ ರೀತಿ ಇದೆ. ಮಾತು ಸಮಯಸಾರದಲ್ಲಿಯೂ ಬಂದಿದೆ.

**ಶ್ಲೋಕ ೧೭೧ :** ಸಮುದ್ರದ ದೃಷ್ಟಾಂತವಿದೆ. ಸಮುದ್ರದ ತೆರೆಗಳು ಹವೆಯಿಂದ ಪ್ರೇರಿತವಾಗಿ ಎದ್ದ ಬಳಿಕವೂ ಸಹ ಅವು ಕೇವಲ ಸಮುದ್ರ ರೂಪವೇ ಇರುತ್ತವೆ. ವಾಯುರೂಪ ಆಗುವದಿಲ್ಲ.

**ಶ್ಲೋಕ ೧೭೨ :** ಉಪ್ಪಿನ ದೃಷ್ಟಾಂತವಿದೆ ಉಪ್ಪು ಅಡಿಗೆಯಲ್ಲಿ ಬೇರೆ ರೂಪ ಇರುವದಿಲ್ಲ. ಆದರೂ ಸಹ ಅಜ್ಞಾನಿ ಜೀವವು ಆ ಉಪ್ಪಿನ ಸ್ವಾದ ತೆಗೆದುಕೊಳ್ಳಲಾರದು. ಜ್ಞಾನಿ ಜೀವರುಗಳು ಭೇದಜ್ಞಾನದಿಂದ ಉಪ್ಪಿನ ಸ್ವಾದ (ಶುದ್ಧಾತ್ಮನ ಸ್ವಾದ) ತೆಗೆದುಕೊಳ್ಳುತ್ತಾರೆ. ಇದೇ ಮಾತನ್ನು ಮುಂದಿನ ಶ್ಲೋಕದಲ್ಲಿ ದೃಢ ಮಾಡಿಸುತ್ತಾರೆ.

**ಶ್ಲೋಕ ೧೮೬ :** ಶುದ್ಧತತ್ವವು (ಪರಮ ಪಾರಿಣಾಮಿಕ ಭಾವ) ಈ ಒಂಬತ್ತು ತತ್ವಗಳಿಂದ ಬೇರೆ ಇರುವದಿಲ್ಲ. ಆದರೆ ಕೇವಲ ಒಂಬತ್ತು ತತ್ವ ಸಂಬಂಧಿ ವಿಕಲ್ಪಗಳನ್ನು ಕಡಿಮೆ ಮಾಡುತ್ತಲೇ (ಅಂದರೆ ಗೌಣ ಮಾಡುತ್ತಲೇ) ಆ ಒಂಬತ್ತು ತತ್ವಗಳೇ ಶುದ್ಧ ಇವೆ.

ಅಂದರೆ ಆ ಒಂಬತ್ತು ತತ್ವಗಳೇ ಪರಮ ಪಾರಿಣಾಮಿಕ ಭಾವದಿಂದ ಮಾಡಿದವಾಗಿರುವದರಿಂದ ಅಂದರೆ ಧ್ರುವರೂಪ ಶುದ್ಧಾತ್ಮನೇ ಆ ಒಂಬತ್ತು ರೂಪ ಪರಿಣಮಿತವಾದವುಗಳಿಂದ ಅದು ಆ ಒಂಬತ್ತು ತತ್ವಗಳಲ್ಲಿ ಅಡಗಿರುತ್ತವೆ. ಅಂದರೆ ಆ ಒಂಬತ್ತು ತತ್ವಗಳಲ್ಲಿಂದ ಅಶುದ್ಧಿಯನ್ನು ಗೌಣ ಮಾಡುತ್ತಲೇ ದೃಷ್ಟಿಯ ವಿಷಯರೂಪ ಶುದ್ಧಾತ್ಮನು ಉಪಸ್ಥಿತನಾಗುತ್ತಾನೆ.

**ಶ್ಲೋಕ ೧೮೯ :** ಪುಣ್ಯ ಮತ್ತು ಪಾಪಗಳನ್ನು ಜೋಡಿಸಿ ಈ ಏಳು ತತ್ವಗಳನ್ನು ಒಂಬತ್ತು ಪದಾರ್ಥಗಳೆಂದು ಹೇಳಲಾಗಿದೆ ಹಾಗೂ ಭೂತಾರ್ಥ

ನಯದಿಂದ ಆಶ್ರಯ ಮಾಡಿದ ಸಮ್ಯಗ್ದರ್ಶನದ ನಿಜವಾದ ವಿಷಯ ಇರುತ್ತದೆ. ಅಂದರೆ ದೃಷ್ಟಿಯ ವಿಷಯರೂಪವಿದೆ.

**ಭಾವಾರ್ಥ :** ಮೊದಲು ಶ್ಲೋಕ ೧೮೬ರಲ್ಲಿ ಹೇಳಲಾಗಿತ್ತು. ಏನಂದರೆ ಒಂಬತ್ತು ತತ್ವಗಳಿಂದ ಶುದ್ಧಾತ್ಮನು ಬೇರೆ ಯಾವ ಪದಾರ್ಥ ಇರುವದಿಲ್ಲ. ಆದರೆ ಆ ಒಂಬತ್ತು ತತ್ವ ಸಂಬಂಧ ವಿಕಾರಗಳನ್ನು ಬಿಟ್ಟಬಳಿಕ (ಗೌಣ ಮಾಡಿದ ಬಳಿಕ) ಅವು ಒಂಬತ್ತು ತತ್ವಗಳೇ ಶುದ್ಧ ಇವೆ. (ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮ ಇರುವನು.) ಒಂಬತ್ತು ತತ್ವಗಳ ಸಂಬಂಧ ವಿಕಾರಗಳನ್ನು ಯಾವ ಪ್ರಕಾರ ಬಿಡಲಾಗುವದು ಅದರ ಉಪಾಯ ಈ ಗಾಥೆಯಲ್ಲಿ ತೋರಿಸಲಾಗಿದೆ. ಏನಂದರೆ ಭೂತಾರ್ಥನಯದ ಮೂಲಕ ಆ ಒಂಬತ್ತು ತತ್ವಗಳ ಆಶ್ರಯ ಮಾಡುವದು ಸಮ್ಯಗ್ದರ್ಶನದ ವಿಷಯವಿದೆ. ಸಮಯಸಾರ ಗಾಥೆ ೧೧ ರಲ್ಲಿಯೂ ಹೇಳಲಾಗಿದೆ. ಏನಂದರೆ ವ್ಯವಹಾರನಯವು ಅಭೂತಾರ್ಥವಿದೆ. ಹಾಗೂ ಶುದ್ಧನಯವು ಭೂತಾರ್ಥವಿದೆ. ಹೀಗೆ ಋಷೀಶ್ವರರು (ಭಗವಾನರು) ಹೇಳಿದ್ದಾರೆ. ಯಾವ ಜೀವವು ಭೂತಾರ್ಥದ ಆಶ್ರಯ ಮಾಡುತ್ತದೆ, ಅದು ನಿಶ್ಚಯನಯದಿಂದ ಸಮ್ಯಗ್ದೃಷ್ಟಿಯೇ ಇದೆ. ತದನಂತರ ಇದೇ ಶಾಸ್ತ್ರದ ಗಾಥೆ ೧೩ ರಲ್ಲಿ ಹೇಳಿದ್ದಾರೆ. ಭೂತಾರ್ಥ ನಯದಿಂದ ತಿಳಿದಿರುವ ಜೀವವು ಅಜೀವ ಪುಣ್ಯ, ಪಾಪ, ಆಸ್ರವ, ಸಂವರ, ನಿರ್ಜರಾ, ಬಂಧ ಮತ್ತು ಮೋಕ್ಷ ಈ ಒಂಬತ್ತು ತತ್ವಗಳು ಸಮ್ಯಕ್ತ್ವ ಇವೆ ಎಂದು ಹೇಳಿದ್ದಾರೆ. ಒಂಬತ್ತು ತತ್ವಗಳಲ್ಲಿ ಭೂತಾರ್ಥನಯದಿಂದ ಒಂದು ಜೀವವು ಪ್ರಕಾಶಮಾನವಿದೆ. ಹೀಗೆ ಆ ಏಕತ್ವವನ್ನು ಪ್ರಕಾಶಿತಗೊಳಿಸುತ್ತ ಶುದ್ಧನಯದ ಮೂಲಕ ಅನುಭವದಲ್ಲಿ ಬರುತ್ತದೆ ಮತ್ತು ಯಾವ ಅನುಭೂತಿ ಇದೆಯೋ ಅದು ಆತ್ಮಖ್ಯಾತಿಯೇ ಇರುತ್ತದೆ ಹಾಗೂ ಈ ಆತ್ಮಖ್ಯಾತಿಯೇ ಸಮ್ಯಗ್ದರ್ಶನ ಇವೆ. ಈ ಗಾಥೆಯಲ್ಲಿ ಭೂತಾರ್ಥನಯದ ಆಶ್ರಯ ಮಾಡಿದ ಒಂಬತ್ತು ಪದಾರ್ಥಗಳು ಸಮ್ಯಗ್ದರ್ಶನದ ವಾಸ್ತವಿಕ ವಿಷಯವಿದೆ ಎಂದು ಹೇಳಿದ್ದಾರೆ. ಆದರೆ ಅದು ಮಾತ್ರ ಕಥನ ಪದ್ಧತಿಯ ಭೇದವಿದೆ. ಇಚ್ಛೆಯ ಭೇದವಲ್ಲ. ಇಲ್ಲಿ ಭೂತಾರ್ಥನಯದಿಂದ ಆಶ್ರಯ ಮಾಡಿದ ಒಂಬತ್ತು ಪದಾರ್ಥಗಳು ಸಮ್ಯಗ್ದರ್ಶನದ ವಿಷಯವಿದೆ.

**ಶ್ಲೋಕ ೨೧೮-೨೧೯ :** ಶಂಕಾಕಾರನು ಮತ್ತೆ ಹೇಳುತ್ತಾನೆ. ಏನಂದರೆ ಯಾವಾಗ ಒಂಬತ್ತು ತತ್ವಗಳಲ್ಲಿ ಸಮ್ಯಗ್ದೃಷ್ಟಿಗೆ ನಿಶ್ಚಯದಿಂದ ಕೇವಲ ಆತ್ಮನ ಉಪಲಬ್ಧಿ ಆಗುತ್ತದೆ ಮತ್ತು ಅದುವೇ ಶುದ್ಧ ಉಪಲಬ್ಧಿ ಇರುತ್ತದೆ. ಮಿಥ್ಯಾದೃಷ್ಟಿ ಮತ್ತು ಸಮ್ಯಗ್ದೃಷ್ಟಿ ಇಬ್ಬರಿಗೂ ಒಂಬತ್ತು ಪದಾರ್ಥಗಳ ಅನುಭವವಂತೂ ಇದೆ. ಆದರೆ ಮಿಥ್ಯಾದೃಷ್ಟಿಗೆ ಅದು (ಅನುಭವ) ವಿಶೇಷ ರೂಪವಾಗಿ (ಅರ್ಥಾತ್ ವಿಭಾವ-ಭಾವರೂಪ, ಪರ್ಯಾಯ ರೂಪ) ಹಾಗೂ ಸಮ್ಯಗ್ದೃಷ್ಟಿಗೆ ಆ ಅನುಭವವು ಸಾಮಾನ್ಯ ರೂಪದಿಂದ (ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮ ರೂಪ) ಆಗುತ್ತದೆ. ಆದ್ದರಿಂದ ಆ ಇಬ್ಬರ ಅನುಭವದ ಸ್ವಾದದಲ್ಲಿ ಅಂತರವಿದೆ ಮತ್ತು ಈ ಮಾತು ಶ್ಲೋಕ ೨೨೪-೨೨೫ರಲ್ಲಿ ದೃಷ್ಟಾಂತದೊಂದಿಗೆ ಸಿದ್ಧ ಮಾಡಲಾಗಿದೆ.

ಒಂಬತ್ತು ತತ್ವಗಳಲ್ಲಿ ಸಾಮಾನ್ಯ ರೂಪದಿಂದ ಆತ್ಮನನ್ನು ಸಮ್ಯಗ್ದೃಷ್ಟಿ ಹೇಗೆ ತಿಳಿಯುತ್ತಾನೆ ಎಂದು ಶ್ಲೋಕ ೧೯೪ ರಿಂದ ೧೯೬ ರಲ್ಲಿ ಹೇಳಲಾಗಿದೆ. ಮತ್ತು ತದನಂತರ ಶುದ್ಧನಯದ ವಿಷಯರೂಪ ಆತ್ಮನ ಸ್ವರೂಪವು ಸಮಯಸಾರದ ಗಾಥೆಗಳನ್ನು ಅನುಸರಣ ಮಾಡಿ ಶ್ಲೋಕ ೧೯೪ ರಿಂದ ೨೯೭ ರಲ್ಲಿ ಕೊಡಲಾಗಿದೆ. ಸಮಯಸಾರದ ಗಾಥೆ ೪೦೩ ಹಾಗೂ ಪಂಚಾಧ್ಯಾಯಿಯ ಪೂರ್ವಾರ್ಧ ಶ್ಲೋಕ ೫೩೭ರ ಭಾವಾರ್ಥದಲ್ಲಿಯೂ ಸಹ ಶುದ್ಧನಯದ ಆಶ್ರಯದಿಂದಲೇ ಧರ್ಮವಾಗುತ್ತದೆ ಎಂದು ಹೇಳಲಾಗಿದೆ. ಧರ್ಮ ಅರ್ಥಾತ್ ಸಮ್ಯಗ್ದರ್ಶನ.

ಈ ಪ್ರಕಾರ ಭೂತಾರ್ಥನಯದ ಆಶ್ರಯದಿಂದಲೇ ಸಮ್ಯಗ್ದರ್ಶನವು ಪ್ರಕಟವಾಗುವದು. ಹೀಗೆ ಗಾಥೆಯಲ್ಲಿ ಹೇಳಿದ್ದಾರೆ. ಈ ಕಥನವು ಆಧ್ಯಾತ್ಮಿಕ ಭಾಷೆಯಲ್ಲಿಯೇ ಇದೆ. ಆಗಮಿಕ ಭಾಷೆಯಲ್ಲಿ ಉಪಾದಾನ ಹಾಗೂ ನಿಮಿತ್ತ ಎರಡನ್ನು ಹೇಳಲಾಗುತ್ತದೆ. ಆದ್ದರಿಂದ ಅಲ್ಲಿ 'ಜೀವ ಮತ್ತು ಕರ್ಮ' ಮುಂತಾದವುಗಳ ವ್ಯವಸ್ಥೆಯು ಹೇಗಾಗುವದು ? ಹೇಗೆ ಸಮ್ಯಗ್ದರ್ಶನ ಪ್ರಕಟವಾಗುವದು ? ಇದನ್ನು ಹೇಳಲಾಗುತ್ತದೆ. ಅರ್ಥಾತ್ ದೃಷ್ಟಿಯ ವಿಷಯರೂಪ ಶುದ್ಧಾತ್ಮನ ಉಪಲಬ್ಧಿಯು ಒಂಬತ್ತು ತತ್ವಗಳನ್ನು ತಿಳಿಯುವದರಿಂದ ಯಾವ ಪ್ರಕಾರ ಆಗುತ್ತದೆ ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

**ಶ್ಲೋಕ ೧೯೨ :** ಜೀವದ ಸ್ವರೂಪಕ್ಕೆ ಚೇತನಾ ಎಂದು ಹೇಳುತ್ತಾರೆ. ಆ ಚೇತನೆಯು ಇಲ್ಲಿ ಸಾಮಾನ್ಯ ರೂಪದಿಂದ ಅಂದರೆ ದ್ರವ್ಯ ದೃಷ್ಟಿಯಿಂದ ನಿರಂತರ ಒಂದು ಪ್ರಕಾರ ಆಗುತ್ತದೆ. (ಅದನ್ನೇ ಪರಮ ಪಾರಿಣಾಮಿಕ ಭಾವ, ಶುದ್ಧಾತ್ಮ, ಕಾರಣಶುದ್ಧ ಪರ್ಯಾಯ ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತದೆ. ಆ ವಸ್ತುವಿನ ಸಾಮಾನ್ಯ ಭಾವ ಇದೆ. ಅರ್ಥಾತ್ ವಸ್ತುವನ್ನು ಪರ್ಯಾಯದಿಂದ ನೋಡಿದ ಮೇಲೆ ಆ ಪರ್ಯಾಯದ ಸಾಮಾನ್ಯಭಾವ ಇದೆ.) ಹಾಗೂ ವಿಶೇಷ ರೂಪದಿಂದ ಅರ್ಥಾತ್ ಪರ್ಯಾಯ ದೃಷ್ಟಿಯಿಂದ ಅದು ಚೇತನಾ ಕ್ರಮಪೂರ್ವಕ ಎರಡು ಪ್ರಕಾರದ್ದಿದೆ. (ಅಂದರೆ ಔದಯಿಕ, ಉಪಶಮ, ಕ್ಷಯೋಪಶಮ ಭಾವ ರೂಪ ಅಶುದ್ಧ ಅಥವಾ ಕ್ಷಾಯಿಕ ಭಾವರೂಪ ಶುದ್ಧ ಹೀಗೆ ಎರಡು ಪ್ರಕಾರದ್ದು ಆಗುತ್ತದೆ.) ಆದರೆ ಅದು ಯುಗಪತ್ ಅಂದರೆ ಒಮ್ಮೆಲೆ ಆಗುವದಿಲ್ಲ. (ಅಂದರೆ ಯಾವಾಗ ಕ್ಷಾಯಿಕ ಭಾವ ವಿಶೇಷಭಾವರೂಪ ಆಗುತ್ತದೆ. ಆಗ ಅದು ಔದಯಿಕ ಇತ್ಯಾದಿ ರೂಪ ಆಗುವದಿಲ್ಲ. ಅಂದರೆ ಎರಡೂ ಒಮ್ಮೆಲೆ ಆಗುವದಿಲ್ಲ.
ಶುದ್ಧತತ್ವ ಅರ್ಥಾತ್ ಪರಮ ಪಾರಿಣಾಮಿಕ ಭಾವ ರೂಪ ಶುದ್ಧಾತ್ಮನು ಒಂಬತ್ತು ತತ್ವಗಳಿಂದ ಬೇರೆಯಿಲ್ಲ. ಕೇವಲ ಒಂಬತ್ತು ತತ್ವಗಳ ಸಂಬಂಧಿ ವಿಕಾರಗಳನ್ನು ಕಡಿಮೆಗೊಳಿಸುತ್ತ ಅಂದರೆ ಗೌಣ ಮಾಡುತ್ತಲೇ ಅವೇ ಒಂಬತ್ತು ತತ್ವಗಳೇ ಶುದ್ಧವಾಗುತ್ತವೆ. ಅರ್ಥಾತ್ ಅದುವೇ ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮನೇ ಇದ್ದಾನೆ. ಅದುವೇ ದೃಷ್ಟಿಯ ವಿಷಯವಿದೆ. ಅಂದರೆ ಈ ಅಪೇಕ್ಷೆಯಿಂದ ಒಂಬತ್ತು ತತ್ವಗಳನ್ನು ತಿಳಿದ ಮೇಲೆ ಸಮ್ಯಗ್ದರ್ಶನ ಎಂದು ಹೇಳಲಾಗುತ್ತದೆ. ಏಕೆಂದರೆ

ಸ್ಥೂಲದಿಂದಲೇ ಸೂಕ್ಷ್ಮದಲ್ಲಿ ಹೋಗಬಹುದಾಗಿದೆ. ಪ್ರಕಟದಿಂದಲೇ ಅಪ್ರಕಟದಲ್ಲಿ ಹೋಗಬಹುದಾಗಿದೆ. ವ್ಯಕ್ತದಿಂದಲೇ ಅವ್ಯಕ್ತದಲ್ಲಿ ಹೋಗಬಹುದಾಗಿದೆ. ಇದುವೇ ನಿಯಮವಿದೆ.

★★★

# ೧೬. ಸಮ್ಯಗ್ದರ್ಶನದ ಲಕ್ಷಣ

ಈಗ ಸಮ್ಯಗ್ದರ್ಶನದ ಲಕ್ಷಣ ಹೇಳುತ್ತೇವೆ. ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ ೨೧೫ : ಕೇವಲ ಆತ್ಮನ ಉಪಲಬ್ಧಿ (ಅಂದರೆ ನಾನು ಆತ್ಮನಿದ್ದೇನೆ 'ಹೀಗೆ ತಿಳಿಯಿರಿ.) ಸಹ ಸಮ್ಯಗ್ದರ್ಶನದ ಲಕ್ಷಣವಾಗುವದಿಲ್ಲ. ಆದರೆ ಆ ಉಪಲಬ್ಧಿಯು 'ಶುದ್ಧ' ವಿಶೇಷಣ ಸಹಿತ ಇದ್ದರೆ ಅಂದರೆ ಶುದ್ಧ ಆತ್ಮೋಪಲಬ್ಧಿಯಾದರೆ (ಅರ್ಥಾತ್ ಕೇವಲ 'ಶುದ್ಧಾತ್ಮ' ನಾನೇ 'ನನ್ನತನ' ಇರುವದು.) ಆಗ ಅದು ಸಮ್ಯಗ್ದರ್ಶನದ ಲಕ್ಷಣ ಆಗಬಹುದಾಗಿದೆ. ಒಂದು ವೇಳೆ ಅದು ಆತ್ಮೋಪಲಬ್ಧಿ ಅಶುದ್ಧವಾಗಿದ್ದರೆ ಅದು ಸಮ್ಯಗ್ದರ್ಶನದ ಲಕ್ಷಣವಾಗುವದಿಲ್ಲ.

ನಾವು ಯಾವ ಭೇದಜ್ಞಾನದ ಮಾತನ್ನು ಪೂರ್ವದಲ್ಲಿ ಮಾಡಿದ್ದೇವೆ. ಅದನ್ನೇ ಇಲ್ಲಿ ಹೇಳಲಾಗಿದೆ. ಭೇದಜ್ಞಾನರೂಪ ಸ್ವ-ಪರ ಎರಡರ ಅಪೇಕ್ಷೆಯಿಂದ ಆಗುತ್ತದೆ. ಒಂದು, ಪರದ್ರವ್ಯರೂಪ ಕರ್ಮ, ಶರೀರ, ಮನೆ, ಅಂಗಡಿ, ಪತ್ನಿ, ಪುತ್ರ ಮುಂತಾದವುಗಳಿಂದ ನಾನು ಭಿನ್ನನಿದ್ದೇನೆ. ಹೀಗೆ ಬೇರೆ ದ್ರವ್ಯದ ಜೊತೆಗಿರುವ ಭೇದಜ್ಞಾನ ರೂಪವು ಸ್ವ-ಪರ ಆಗುತ್ತದೆ ಮತ್ತು ಅದರ ನಂತರದ ಯಾವ ಎರಡನೇ ಸ್ವ-ಪರ ಇದೆ, ಅದುವೇ ಸಮ್ಯಗ್ದರ್ಶನದ ಕಾರಣ ಮತ್ತು ಲಕ್ಷಣ ಇದೆ ಮತ್ತು ಅದು ಎರಡನೇ ಭೇದಜ್ಞಾನರೂಪ ಸ್ವ-ಪರದಲ್ಲಿ ಸ್ವರೂಪ ಮಾತ್ರ ಶುದ್ಧಾತ್ಮವಿದ್ದು ಅದು ಸ್ವ ಮತ್ತು ಪರರೂಪ ಸಮಸ್ತ ಅಶುದ್ಧ ಭಾವವು ಯಾವ ಕರ್ಮದ (ಪುದ್ಗಲ) ನಿಮಿತ್ತದಿಂದ ಆಗುತ್ತದೆ. ಅವು ಅಶುದ್ಧ ಭಾವ ಆಗುತ್ತಿದ್ದರೆ ನನ್ನಲ್ಲಿಯೇ ಅರ್ಥಾತ್ ಆತ್ಮನು ಆ ಅಶುದ್ಧ ಭಾವರೂಪವಾಗಿ ಪರಿಣಮಿಸುತ್ತಾನೆ. ಆದರೆ ಆ ಭಾವಗಳಲ್ಲಿ 'ನನ್ನತನ' ಮಾಡಲು ಯೋಗ್ಯ ಇರುವದಿಲ್ಲ. ಏಕೆಂದರೆ ಅವು ಪರದ ನಿಮಿತ್ತದಿಂದ ಆಗುತ್ತವೆ. ಎರಡನೆಯದಾಗಿ ಅವು ಕ್ಷಣಿಕ ಇರುತ್ತವೆ. ಏಕೆಂದರೆ ಅವು ಸಿದ್ಧರ ಆತ್ಮನಲ್ಲಿ ಉಪಸ್ಥಿತ ಇರುವದಿಲ್ಲ. ಆದ್ದರಿಂದ ಆ ಭಾವಗಳು ತ್ರೈಕಾಲಿಕ ಇರುವದಿಲ್ಲ. ಆದ್ದರಿಂದ ಕೇವಲ ತ್ರಿಕಾಲ ಧ್ರುವರೂಪ ಶುದ್ಧಾತ್ಮನು ಮೂರೂ ಕಾಲಗಳಲ್ಲಿ ಪ್ರತಿಯೊಂದು ಜೀವಗಳಲ್ಲಿ ಉಪಸ್ಥಿತ ಇರುತ್ತದೆ ಮತ್ತು ಅದೇ ಅಪೇಕ್ಷೆಯಿಂದ ಎಲ್ಲ ಜೀವಗಳು ಸ್ವಭಾವದಿಂದ ಸಿದ್ಧಸಮಾನವೇ ಇವೆ ಎಂದು ಹೇಳಲಾಗುತ್ತದೆ. ಆ ಭಾವದಲ್ಲಿಯೇ ಅಂದರೆ ಆ ಶುದ್ಧಾತ್ಮನಲ್ಲಿಯೇ 'ನನ್ನತನ' (ಏಕತ್ವ-ತನ್ಮಯತನ) ಮಾಡುವದರಿಂದ ಸಮ್ಯಗ್ದರ್ಶನ ಪ್ರಕಟವಾಗುತ್ತದೆ. ಆದ್ದರಿಂದ ಶುದ್ಧ ಆತ್ಮನ ಉಪಲಬ್ಧಿಯನ್ನು ಸಮ್ಯಗ್ದರ್ಶನದ ಲಕ್ಷಣ ಎಂದು ಹೇಳಿದ್ದಾರೆ.

**ಶ್ಲೋಕ ೨೨೧ :** ಪೂರ್ಣ ವಸ್ತು ಸಮ್ಯಕ್‌ಜ್ಞಾನಿಗಳಿಗೆ ಸಾಮಾನ್ಯ ರೂಪದಿಂದ (ಪರಮ ಪಾರಿಣಾಮಿಕ ಭಾವರೂಪದಿಂದ, ಶುದ್ಧ ದ್ರವ್ಯಾರ್ಥಿಕ ನಯದ ವಿಷಯ ರೂಪದಿಂದ, ಶುದ್ಧಾತ್ಮನ ರೂಪದಿಂದ ಅಂದರೆ ಕಾರಣಶುದ್ಧ ಪರ್ಯಾಯ ರೂಪದಿಂದ) ಅನುಭವದಲ್ಲಿ ಬರುತ್ತದೆ. ಆದ್ದರಿಂದ ಆ ವಸ್ತು ಕೇವಲ ಸಾಮಾನ್ಯ ರೂಪದಿಂದ ಶುದ್ಧ ಎಂದು ಹೇಳಲಾಗುತ್ತದೆ ಹಾಗೂ ವಿಶೇಷ ಭೇದಗಳ ಅಪೇಕ್ಷೆಯಿಂದ ಅಶುದ್ಧ ಎಂದು ಹೇಳಲಾಗುತ್ತದೆ.

ಭಾವಾರ್ಥ : ಮಿಥ್ಯಾದೃಷ್ಟಿ ಜೀವನಿಗೆ ರಾಗ ಹಾಗೂ ಪರದ ಜೊತೆಗೆ ಏಕತ್ವಬುದ್ಧಿ ಇರುವದರಿಂದ ಪರವಸ್ತುವಿನಲ್ಲಿ ಇಷ್ಟ ಅನಿಷ್ಟತನದ ಕಲ್ಪನೆ ಮಾಡುತ್ತಾನೆ ಹಾಗೂ ಅವನು ಇಂಥ ಅಜ್ಞಾನಮಯ ರಾಗ-ದ್ವೇಷದ ಕಾರಣ ವಸ್ತುವಿನ ವಸ್ತುತನದ ಪ್ರತಿಭಾಸ ಮಾಡದೇ ಕೇವಲ ಇಷ್ಟ ಅನಿಷ್ಟತನದಿಂದಲೇ ಅಂದರೆ ಕೇವಲ ವಿಶೇಷ ಭಾವನೆಗಳನ್ನೇ ಅನುಭವ ಮಾಡುತ್ತಾನೆ. ಏಕೆಂದರೆ ಅವನು ಪರ್ಯಾಯ ದೃಷ್ಟಿಯವನೇ ಆಗುತ್ತಾನೆ.) ವಸ್ತುವಿನ ಅನುಭವ ಮಾಡುತ್ತಾನೆ. ಆಗ ಸಮ್ಯಗ್ದೃಷ್ಟಿ ಜೀವನಿಗೆ ಅಜ್ಞಾನಮಯ ರಾಗ-ದ್ವೇಷದ ಅಭಾವ (ಅಂದರೆ ಅವನಿಗೆ ಕೇವಲ ಶುದ್ಧ ದ್ರವ್ಯಾರ್ಥಿಕ ನಯದ ದೃಷ್ಟಿ ಆಗಿರುವದರಿಂದ ರಾಗ-ದ್ವೇಷಗಳನ್ನು ಗೌಣ ಮಾಡಿ ಶುದ್ಧವನ್ನೇ ಅನುಭವ ಮಾಡುತ್ತಾನೆ. ಆದ್ದರಿಂದ ಸಮ್ಯಗ್ದೃಷ್ಟಿ ಜೀವನಿಗೆ ಅಜ್ಞಾನಮಯ ರಾಗ-ದ್ವೇಷದ ಅಭಾವ) ಆಗುವದರಿಂದ ಅವನು ಪರವಸ್ತುವಿನಲ್ಲಿ ಇಷ್ಟ-ಅನಿಷ್ಟ ಕಲ್ಪನೆಯಿಂದ ರಹಿತನಾಗಿ ವಸ್ತುತ್ವವನ್ನೇ ಅನುಭವ ಮಾಡುತ್ತಾನೆ. (ಕೇವಲ ಶುದ್ಧಾತ್ಮನ ಸಾಮಾನ್ಯಭಾವದ್ದೇ ಅನುಭವ ಮಾಡುತ್ತಾನೆ.

**ಶ್ಲೋಕ ೨೩೪-೨೩೭ :** ಒಂದು ಜ್ಞಾನದ್ದೇ ಪಾತ್ರವಾಗುವದರಿಂದ ಹಾಗೂ ಬದ್ಧ ಸ್ಪೃಷ್ಟಾದಿಭಾವಗಳ ಅಪಾತ್ರವಾಗುವದರಿಂದ (ಅಂದರೆ ಅವುಗಳಲ್ಲಿ 'ನನ್ನತನ' ಆಗದಿರುವದರಿಂದ) ಸಮ್ಯಗ್ದೃಷ್ಟಿಯು ತನ್ನನ್ನು ಪ್ರತ್ಯಕ್ಷಪೂರ್ವಕ ಸ್ಪಷ್ಟ ಪ್ರಕಾರದಿಂದ ವಿಶೇಷ (ವಿಭಾವ-ಭಾವ) ರಹಿತ ಬೇರೆಯದರ ಸಂಯೋಗರಹಿತ, ಚಂಚಲರಹಿತ ಹಾಗೂ ಬೇರೆತನದಿಂದ ರಹಿತ (ಅಂದರೆ ಔದಯಿಕ ಮುಂತಾದ ಭಾವಗಳಿಂದ ರಹಿತ) ಸ್ವಾದದ ಆಸ್ವಾದನೆಯನ್ನು ಮಾಡುತ್ತಾನೆ ಹಾಗೂ ಬಂಧರಹಿತ ಹಾಗೂ ಅಸ್ಪಷ್ಟ, ಶುದ್ಧ, ಸಿದ್ಧಸಮಾನ (ಏಕೆಂದರೆ ಅದನ್ನು ನೋಡಿ ಸಿದ್ಧತ್ವದ ಅನುಭವ ಆಗುತ್ತದೆ.) ಶುದ್ಧವಾದ ಸ್ಫಟಿಕದ ಸಮಾನ ಯಾವಾಗಲೂ ಆಕಾಶ ಸಮಾನ ಪರಿಗ್ರಹರಹಿತ, ಇಂದ್ರಿಯಗಳಿಂದ ಉಪೇಕ್ಷಿತ, ಅನಂತ ಜ್ಞಾನ, ದರ್ಶನವೀರ್ಯಮಯ ಅತೀಂದ್ರಿಯ ಸುಖಾದಿಕ, ಅನಂತ ಸ್ವಾಭಾವಿಕ ಗುಣಗಳು ಸಹಿತ ತನ್ನ ಆತ್ಮನ ಶ್ರದ್ಧಾನ ಮಾಡುವಂಥವನೇ ಆಗುತ್ತಾನೆ. ಆದ್ದರಿಂದ ಯಥಾರ್ಥದಲ್ಲಿ ನಿರ್ಬಲತೆಯಿಂದ ಅವನಿಗೆ ಬೇರೆ ಪದಾರ್ಥಗಳದ್ದು ಸಹ ಇಚ್ಛೆಯಾಗಬಹುದು. ಆದಾಗ್ಯೂ ಅವನಿಗೆ ಕೃತಾರ್ಥ ಜೀವಗಳ ಹಾಗೆ ಪರಮ ತಿರಸ್ಕಾರ ಭಾವ ಇರುತ್ತದೆ.

ಪ್ರಶಮ, ಸಂವೇಗ, ನಿರ್ವೇದ, ಅನುಕಂಪಾ ಮತ್ತು ಆಸ್ತಿಕ್ಯ ಹೀಗೆ ಸಮ್ಯಗ್ದರ್ಶನದ ಲಕ್ಷಣಗಳಿಂದ ನಾವು ಎಲ್ಲರೂ ಸರಿಯಾಗಿ ಪರಿಚಿತರಿದ್ದೇವೆ.

ಆದರೆ ಶುದ್ಧ ಆತ್ಮೋಪಲಬ್ಧಿ ಅರ್ಥಾತ್ ಶುದ್ಧಾತ್ಮನ ಅನುಭೂತಿ ಇದು ಸಮ್ಯಗ್ದರ್ಶನದ ಲಕ್ಷಣ ಇದೆ. ಹೀಗೆ ಬಹಳ ಕಡಿಮೆ ಜನರು ತಿಳಿಯುತ್ತಾರೆ ಮತ್ತು ಮನ್ನಿಸುತ್ತಾರೆ. ಈ ಕಾರಣದಿಂದ ಈ ಮಾತು ಬಹಳ ಮಹತ್ವದ್ದಿದೆ. ಹೀಗೆ ಶುದ್ಧಾತ್ಮನ ಅನುಭೂತಿಯ ಲಕ್ಷಣವಿದೆ. ಯಾವದು ಸ್ವಂತಕ್ಕೆ ತಿಳಿದು ಬರುತ್ತದೆಯೋ ಅದು ಇದರಿಂದ ಯಾವ ಜೀವನಿಗೆ ಆತ್ಮನ ಅನುಭೂತಿ ಆಗುತ್ತದೆ. ಅವನಿಗೆ ಯಾರಿಂದಲೂ ಏನೂ ಕೇಳಲು ಬರುವಂತಿಲ್ಲ. ಮತ್ತು ಯಾರದೂ ಪ್ರಮಾಣ ಪತ್ರದ ಅವಶ್ಯಕತೆ ಇರುವದಿಲ್ಲ. ಶುದ್ಧಾತ್ಮನ ಅನುಭೂತಿ ಸಮ್ಯಗ್ದರ್ಶನದ ಪರಮಲಕ್ಷಣ ಇರುತ್ತದೆ.

ಯಥಾರ್ಥದಲ್ಲಿ ಸಮ್ಯಗ್ದೃಷ್ಟಿ ಜೀವವು ಜ್ಞಾನಮೂರ್ತಿ ಆಗಿರುತ್ತಾನೆ. ಆದರೂ ಸಹ ಪ್ರಸಂಗವಶಾತ್ ಅರ್ಥಾತ್ ಪುರುಷಾರ್ಥದ ನಿರ್ಬಲತೆಯಿಂದ ಅದನ್ನು ಬೇರೆ ಪದಾರ್ಥಗಳದ್ದು ಸಹ ಇಚ್ಛೆಯಾಗುತ್ತದೆ. ಆದ್ದರಿಂದ ಮುಂದೆ ನಾವು ಸಮ್ಯಗ್ದೃಷ್ಟಿಯ ಅನುಭವದ ಕುರಿತು ಸ್ವಲ್ಪ ಹೇಳುವ ಪ್ರಯತ್ನ ಮಾಡುತ್ತೇವೆ.

★★★

## ೧೭. ಸಮ್ಯಗ್ದೃಷ್ಟಿಗೆ ಭೋಗ ಬಂಧದ ಕಾರಣವಿಲ್ಲ

ನಾಲ್ಕನೇ ಮತ್ತು ಐದನೆಯ ಗುಣಸ್ಥಾನಗಳಲ್ಲಿ ಇರುವಂಥ ಜೀವವು ವಿಷಯ ಸುಖವನ್ನು ಅನುಭವಿಸುತ್ತಾನೆ. ಅಂದರೆ ಭೋಗಿಸುತ್ತಾನೆ. ಆದರೂ ಅವನಿಗೆ ಬಂಧವಿಲ್ಲ. ಇದನ್ನು ಯಾವ ಅಪೇಕ್ಷೆಯಿಂದ ಹೇಳಲಾಗುತ್ತದೆ ? ಈ ಪ್ರಶ್ನೆಗಳ ಸ್ಪಷ್ಟೀಕರಣವನ್ನು ಮಾಡುತ್ತಾರೆ.

ಇಂದ್ರಿಯ ಜನಿತ ಸುಖವು ಯಥಾರ್ಥದಲ್ಲಿ ದುಃಖವೇ ಇದೆ. ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ ೨೩೯ : ಸುಖವು ಇಂದ್ರಿಯಗಳ ಮೂಲಕ ತಿಳಿದುಬರುವಂಥದು. ಇದು ಇಂದ್ರಿಯ ಜನಿತ ಸುಖದುಃಖರೂಪ ಫಲವನ್ನು ಕೊಡುವಂಥದಾಗಿರುವದರಿಂದ ದುಃಖ ರೂಪವೇ ಇದೆ. ಈ ಕಾರಣದಿಂದ ಅವು ಸುಖಾಭಾಸ ಇವೆ ಮತ್ತು ತ್ಯಾಗ ಮಾಡಲು ಯೋಗ್ಯ ಇವೆ. ಸರ್ವಥಾ ಅನಿಷ್ಟ ಇವೆ. ಆ ದುಃಖಗಳಿಂದ ಕರ್ಮಾಸ್ರವ ಆಗುವದರಿಂದ ಈ ನಿಮಿತ್ತಗಳು ತ್ಯಾಗ ಮಾಡಲು ಯೋಗ್ಯ ಇವೆ. (ಅರ್ಥಾತ್ ದುಃಖಗಳ ನಿಮಿತ್ತ ಯಾವ ಕರ್ಮಗಳಿವೆ ಅವು ಸಹ ತ್ಯಾಗ ಮಾಡಲು ಯೋಗ್ಯ ಇವೆ.)

ಯಾವ ಜೀವಗಳು ಅಜ್ಞಾನಿ ಇವೆ ಅವುಗಳಿಗೆ ಇಂದ್ರಿಯ ಜನಿತ ಸುಖರೂಪ ಸುಖಾಭಾಸವು ಪ್ರಿಯವಾಗಿರುವದರಿಂದ ನಿಯಮದಿಂದ ದುಃಖ ರೂಪವೇ ಇವೆ. ಏಕೆಂದರೆ ದುಃಖದ ಯಾವ ಕಾರಣ ಇವೆ. ಹಾಗೆಯೇ ಕಲ್ಪನೆ ಮಾಡಿ ಭೋಗಿಸುವದರಿಂದ ಬಂಧಿಸುತ್ತವೆ. ಕೆಲಕಾಲದ ನಂತರ ಇವು ದುಃಖ

ಕೊಡುವಂಥವುಗಳೇ ಆಗುತ್ತವೆ. ಆತ್ಮಜ್ಞಾನಿಗಳು ಇಂಥ ಸುಖಗಳನ್ನು ತಿರಸ್ಕಾರ ಭಾವದಿಂದ ತನ್ನ ನಿರ್ಬಲತೆ ಎಂದು ತಿಳಿದು ಅನುಭವಿಸುತ್ತಾನೆ. ಈ ಕಾರಣ ಅವನಿಗೆ ಅಲ್ಪಬಂಧ ಆಗುತ್ತದೆ. ಆದರೆ ಆ ಅಲ್ಪವನ್ನು ಅಪೇಕ್ಷೆಯಿಂದ ಇಲ್ಲವೆಂದೇ ಹೇಳಲಾಗುತ್ತದೆ. ಅರ್ಥಾತ್ ಬಂಧವಾಗುವದಿಲ್ಲ. ಹೀಗೆಯೇ ಹೇಳಲಾಗುತ್ತದೆ. ಏಕೆಂದರೆ ಅವನಿಗೆ ಆ ಸುಖದಲ್ಲಿ 'ನನ್ನತನ' ಆಗುವದಿಲ್ಲ. ಹೇಗೆ ರೋಗಿಗೆ ಔಷಧದ ಕುರಿತು ಆದರ ಭಾವ ರೋಗ ಕಡಿಮೆಯಾಗುವ ತನಕ ಆಗುತ್ತದೆ, ಅದೇ ಪ್ರಕಾರ ಆತ್ಮಜ್ಞಾನಿಗೂ ಸಹ ಇಂದ್ರಿಯ ಜನಿತ ಸುಖದ ಆದರವು ತನ್ನ ಪುರುಷಾರ್ಥದ ನಿರ್ಬಲತೆಯಿಂದ ಇದೆ ಎಂದು ಅಲ್ಲಿಯ ತನಕವೇ ಆಗುತ್ತದೆ ಮತ್ತು ಆತ್ಮಜ್ಞಾನಿ ಇಂಥ ಸುಖ ಅನುಭವಿಸುತ್ತಲೂ ಸಹ ಅದು ತನ್ನ ಪುರುಷಾರ್ಥದ ಆ ಸುಖಗಳನ್ನು ಭೋಗಿಸಿದರೂ ಅವು ಅವನಿಗೆ ಬಂಧನಕಾರಕ ಇರುವದಿಲ್ಲ. ಹೀಗೆ ಹೇಳಲಾಗುತ್ತದೆ.

**ಶ್ಲೋಕ ೨೫೬ :** ಹೇಗೆ ಜಿಗಣಿಗೆ ಅಶುದ್ಧ ರಕ್ತವನ್ನು ಹೀರುವದರಿಂದ ಅದಕ್ಕೆ ತೃಷ್ಣೆಯ ಬೀಜಭೂತವಾದ ಆಸಕ್ತಿಯಿದೆ ಎಂದು ತಿಳಿದು ಬರುತ್ತದೆ. ಇದೇ ಪ್ರಕಾರ ಅಜ್ಞಾನಿ ಸಂಸಾರಿ ಜೀವಗಳಲ್ಲಿಯೂ ಸಹ ಆ ವಿಷಯಗಳಲ್ಲಿ ಸುಹಿತ ಎಂದು ಮನ್ನಿಸುವದರಿಂದ ತೃಷ್ಣೆಯ ಬೀಜಭೂತ ಆಸಕ್ತಿ ನೋಡುವಲ್ಲಿ ಬರುತ್ತದೆ. ವಿಷಯಗಳು ಇಂಥ ಆಸಕ್ತಿಗಳು ಬಿಡಲು ಯೋಗ್ಯ ಇವೆ. ಈ ಮಾತು ಅವಶ್ಯವಾಗಿ ಲಕ್ಷ್ಯದಲ್ಲಿಡಬೇಕು. ಏಕೆಂದರೆ –

**ಶ್ಲೋಕ ೨೫೮ :** ಸಂಪೂರ್ಣ ಕಥನದ ಸಾರಾಂಶ ಹೀಗಿದೆ. ಏನಂದರೆ ಇಲ್ಲಿ ಜಗತ್ತು ಯಾವುದಕ್ಕೆ ಸುಖ ಎಂದು ಹೇಳುತ್ತದೆ, ಅವೆಲ್ಲವೂ ದುಃಖವೇ ಇವೆ ಹಾಗೂ ಆ ದುಃಖಗಳು ಆತ್ಮನ ಧರ್ಮ ಇರುವದಿಲ್ಲ. ಆದುದರಿಂದ ಸಮ್ಯಗ್ದೃಷ್ಟಿಗೆ ಆ ದುಃಖರೂಪ ಸಂಸಾರದ ಸುಖಗಳ ಅಭಿಲಾಷೆ ಆಗುವದಿಲ್ಲ. ಅಂದರೆ ಸಮ್ಯಗ್ದೃಷ್ಟಿಗಳಿಗೆ ಸುಖದ ಆಕರ್ಷಣೆಯ ಅಭಿಪ್ರಾಯ ಆಗುವದಿಲ್ಲ.

**ಶ್ಲೋಕ ೨೬೧–೨೬೬ :** ಹೇಗೆ ರೋಗದ ಪ್ರತಿಕ್ರಿಯೆ ಮಾಡುತ್ತ ರೋಗಿ ಪುರುಷನು ಆ ರೋಗದ ಅವಸ್ಥೆಯಲ್ಲಿ ರೋಗದ ಪದವನ್ನು ಬಯಸುವದಿಲ್ಲ. ಅಂದರೆ ಸರೋಗ ಅವಸ್ಥೆಯನ್ನು ಬಯಸುವದಿಲ್ಲ. (ಅಂದರೆ ಜ್ಞಾನಿ ಸ್ವತಃ ತಿಳಿಯುತ್ತಾನೆ. ಏನಂದರೆ ಇದು ಯಾವ ನಾನು ರಾಗ–ದ್ವೇಷ ಮಾಡುತ್ತೇನೆ ಅದು ನನ್ನ ರೋಗಗ್ರಸ್ತ ಅವಸ್ಥೆಯಿದೆ. ಏಕೆಂದರೆ ಅವನು ಶುದ್ಧಾತ್ಮನ ಸ್ವಾದವನ್ನು ಅನುಭವ ಮಾಡಿದ್ದಾನೆ. ಆದರೆ ಮೇಲಿಂದ ಮೇಲೆ ಅವನು ಅಂಥ ರೋಗಗ್ರಸ್ಥ ಅವಸ್ಥೆಯನ್ನು ಏಕೆ ಬಯಸುವನು ?) ಆದರೆ ಮತ್ತೆ ಎರಡನೆಯ ಸಲ ರೋಗ ಉತ್ಪನ್ನವಾಗುವ ಇಚ್ಛೆಯ ವಿಷಯದಲ್ಲಿ (ಅಂದರೆ ಹೊಸ ಕರ್ಮಬಂಧವಾಗಲು ಅಂಥ ಕಾರಣಗಳಲ್ಲಿ ಅವನು ಏಕೆ ಪ್ರವರ್ತಿಸುವನು ? ಪುರುಷಾರ್ಥದ ಅಶಕ್ತತೆ ಇರದಿದ್ದರೆ ಪ್ರವರ್ತಿಸುವದಿಲ್ಲ.) ಆದರೆ ಹೇಳುವದೇನಿದೆ ? ಅಂದರೆ ಮತ್ತೆ ರೋಗದ ಉತ್ಪತ್ತಿಯನ್ನು ಅವನು ಬಯಸಲಾರನು. ಇದೇ ಪ್ರಕಾರ ಯಾವಾಗ ಭಾವನೆಯು

ಕರ್ಮಗಳ ಮೂಲಕ ತೊಂದರೆ ಅನುಭವಿಸುತ್ತ ಕರ್ಮಜನಿತ ಕಾರ್ಯಗಳನ್ನು ಮಾಡುವಂಥ ಜ್ಞಾನಿಯು ಯಾವದೇ ತರದ ಕರ್ಮಪದದ ಇಚ್ಛೆ ಮಾಡುವದಿಲ್ಲ. ಆದರೆ ಮತ್ತೆ ಅವನು ಇಂದ್ರಿಯಗಳ ವಿಷಯಗಳ ಅಭಿಲಾಷಿ ಇರುತ್ತಾನೆ. ಹೀಗೆ ಯಾವ ನ್ಯಾಯದಿಂದ ಹೇಳಲಾಗುತ್ತದೆ ? ಕೇವಲ ಕರ್ಮವನ್ನು ಬಯಸದ ಸಮ್ಯಗ್ದೃಷ್ಟಿಗೆ ವೇದನೆಯ ಪ್ರತೀಕಾರ ಸಹ ಅಸಿದ್ಧ ಇರುವದಿಲ್ಲ. (ಅಂದರೆ ಪ್ರತೀಕಾರ ಆಗುತ್ತದೆ.) ಏಕೆಂದರೆ ಕಷಾಯ ರೂಪ ರೋಗ ಸಹಿತ ಆ ಸಮ್ಯಗ್ದೃಷ್ಟಿಗೆ ವೇದನೆಯ ಪ್ರತೀಕಾರವು ಹೊಸ ರೋಗಾದಿಗಳನ್ನು ಉತ್ಪನ್ನ ಮಾಡುವಲ್ಲಿ ಕಾರಣರೂಪ ಎಂದು ಹೇಳಲಾಗುವದಿಲ್ಲ. (ಅಂದರೆ ಅವನಿಗೆ ಆ ವೇದನೆಯ ಪ್ರತೀಕಾರ ಅಂದರೆ ರೋಗವು ಔಷಧರೂಪದಿಂದ ಸೇವಿಸುವ ಭೋಗವು ಹೊಸ ಕರ್ಮಗಳ ಬಂಧರೂಪ ಇಲ್ಲವೆಂದು ಹೇಳಲಾಗುವದು. ಆ ಸಮ್ಯಗ್ದೃಷ್ಟಿಯು ಭೋಗಗಳನ್ನು ಅನುಭವಿಸುತ್ತ ಇದ್ದರೂ ಸಹ ಯಥಾರ್ಥದಲ್ಲಿ ಭೋಗಗಳ ಸೇವನೆಯನ್ನು ಮಾಡುವಂಥವನಲ್ಲ ಎಂದು ಹೇಳಲಾಗುವದು. ಏಕೆಂದರೆ ರಾಗರಹಿತ ಜೀವನಿಗೆ ಕರ್ತಾ ಬುದ್ಧಿಯ ಹೊರತು ಮಾಡಲಾದ ಕರ್ಮವು ರಾಗದ ಕಾರಣವಲ್ಲ. ಆದಾಗ್ಯೂ ಕೆಲವು ಸಮ್ಯಗ್ದೃಷ್ಟಿಗೆ ಕರ್ಮಚೇತನಾ ಹಾಗೂ ಕರ್ಮಫಲ ಚೇತನಾ ಆಗುತ್ತವೆ. (ಅಂದರೆ ಕರ್ತಾ-ಭೋಕ್ತಾ ಭಾವಗಳು ನೋಡಲು ದೊರೆಯುತ್ತವೆ.) ಆದರೂ ಸಹ ಯಥಾರ್ಥದಲ್ಲಿ ಅವನು ಜ್ಞಾನಚೇತನವೇ ಇರುವನು. ಕರ್ಮದಲ್ಲಿ ಹಾಗೂ ಕರ್ಮಫಲದಲ್ಲಿ ಇರುವಂಥ ಚೇತನೆಯ ಫಲಬಂಧವಾಗುತ್ತದೆ. ಆದರೆ ಆ ಸಮ್ಯಗ್ದೃಷ್ಟಿಗೆ ಅಜ್ಞಾನಮಯ ರಾಗದ ಅಭಾವವಾಗಿರುವದರಿಂದ ಬಂಧವಾಗುವದಿಲ್ಲ. ಆದ್ದರಿಂದ ಅದು ಜ್ಞಾನಚೇತನವೇ ಇದೆ.

ಸಮ್ಯಗ್ದರ್ಶನದ ಪೂರ್ವ ಭೂಮಿಕೆಯಲ್ಲಿ ಮತ್ತು ಸಮ್ಯಗ್ದರ್ಶನ ಪ್ರಾಪ್ತ ಮಾಡಿದ ಮೇಲೆ ಪ್ರತಿಯೊಂದು ಜೀವಿಗೆ ಪ್ರಥಮ ಕ್ಷಣದಿಂದಲೇ ಅಭಿಪ್ರಾಯದಲ್ಲಿ ಸಂಸಾರದ ಕುರಿತು ವಿರಕ್ತಿಯಾಗುತ್ತದೆ. ಇಂಥ ಜೀವವು ಒಂದು ವೇಳೆ ತನ್ನ ಪುರುಷಾರ್ಥದ ಅಶಕ್ತತೆಯ ಕಾರಣ ಭೋಗವನ್ನು ಅನುಭವಿಸುತ್ತಿರುವನೆಂದು ಕಾಣಿಸುತ್ತದೆ. ಆದರೂ ಸಹ ಅವನ ಅಭಿಪ್ರಾಯದಲ್ಲಿ ಭೋಗದ ಕುರಿತು ಯಾವ ಆಸಕ್ತಿ ಇಲ್ಲದಿರುವ ಕಾರಣ ಬಂಧ ಆಗದೇ ಇರುವ ಸಮಾನ ಆಗುತ್ತದೆ. ಹೀಗೆಯೇ ಇದೇ ರಹಸ್ಯ ಸಮ್ಯಗ್ದೃಷ್ಟಿಗೆ ಭೋಗವು ಬಂಧದ ಕಾರಣವಿಲ್ಲ.

★★★

## ೧೮. ನಿಮಿತ್ತ ಉಪಾದಾನದ ಸ್ಪಷ್ಟತೆ

**ಪ್ರಶ್ನೆ : ಸಮ್ಯಗ್ದರ್ಶನದ ಪ್ರಾಪ್ತಿ ಯಾವಾಗ ಆಗುತ್ತದೆ ?**

**ಶ್ಲೋಕ ೩೭೮ :** ಪಂಚಾಧ್ಯಾಯಿ ಉತ್ತರಾರ್ಧದಲ್ಲಿ ಹೇಳಿದ್ದಾರೆ. ದೈವ(ಕರ್ಮ) ಯೋಗದಿಂದ ಕಾಲ ಮುಂತಾದ ಲಬ್ಧಿಗಳ ಪ್ರಾಪ್ತಿ ಆದ ಬಳಿಕ ಸಂಸಾರ ಸಾಗರದ

ದಂಡೆಯು ಸಮೀಪ ಬಂದ ಬಳಿಕ ಅಥವಾ ಭವ್ಯಭಾವದ ವಿಪಾಕವಾದ ಬಳಿಕ ಜೀವವು ಸಮ್ಯಗ್ದರ್ಶನವನ್ನು ಪ್ರಾಪ್ತ ಮಾಡುತ್ತದೆ. ಇಲ್ಲಿ ಸಮ್ಯಗ್ದರ್ಶನದ ಯಥಾರ್ಥ ನಿಮಿತ್ತದ ಜ್ಞಾನ ಮಾಡಿಸಿದ್ದಾರೆ. ಅಂದರೆ ಕಾರ್ಯರೂಪದಿಂದ ಉಪಾದಾನವು ಸ್ವತಃ ಪರಿಣಮಿಸುತ್ತದೆ. ಆದರೆ ಆಗ ಯಥಾರ್ಥ ನಿಮಿತ್ತದ ಉಪಸ್ಥಿತಿಯು ನಿಯಮದಿಂದ ಆಗುತ್ತಲೇ ಇದೆ. ಆದ್ದರಿಂದ 'ಕಾರ್ಯವು ನಿಮಿತ್ತದಿಂದ ಆಗುವದೇ ಇಲ್ಲ. ಆದರೆ ನಿಮಿತ್ತದ ಹೊರತಾಗಿಯೂ ಸಹ ಆಗುವದಿಲ್ಲ' ಎಂದು ಹೇಳಿದ್ದಾರೆ. ಆದ್ದರಿಂದ ಜಿನಾಗಮದಲ್ಲಿ ಜೀವನಿಗೆ ಪತನದ ಕಾರಣಭೂತ ನಿಮಿತ್ತಗಳಿಂದ ದೂರ ಇರುವ ಉಪದೇಶವನ್ನು ಮೇಲಿಂದ ಮೇಲೆ ಕೊಡಲಾಗಿದೆ ಮತ್ತು ಅದು ಯೋಗ್ಯವೂ ಸಹ ಇದೆ.

ಆಚಾರ್ಯ ಅಮೃತಚಂದ್ರ ಕೃತ ಸಮಯಸಾರ ಟೀಕಾ ಶ್ಲೋಕ ೨೭೮-೨೭೯ : ಹೇಗೆ ಸ್ಫಟಿಕ ಮಣಿಯು ಶುದ್ಧವಾಗಿರುವದರಿಂದ (ಅಂದರೆ ಜ್ಞಾನಿಯು ಯಾವುದರಲ್ಲಿ 'ನನ್ನತನ' ಮಾಡುತ್ತಾನೆ. ಆ ಶುದ್ಧಾತ್ಮನು ಸ್ವಯಂ ಶುದ್ಧವಾಗಿರುವದರಿಂದ) ರಾಗಾದಿ ರೂಪದಿಂದ ತನ್ನಿಂದ ತಾನೇ ಪರಿಣಮಿಸುವದಿಲ್ಲ. ಆದರೆ ಬೇರೆ ರಾಗಾದಿ ದೋಷಗಳ ಮೂಲಕ (ಅಂದರೆ ಅದರ ಯೋಗ್ಯವಾದ ಕರ್ಮದ ಉದಯದ ನಿಮಿತ್ತ ಕಾರಣ) ಅವನು ರಾಗವಾಗುತ್ತಾನೆ. ಅಂದರೆ ಅವನು ತನ್ನ ಅಶಕ್ತತೆಯ ಕಾರಣ ರಾಗದ್ವೇಷವಾಗುತ್ತಾನೆ.

ಸಮಯಸಾರ ಶ್ಲೋಕ ೧೭೫ : ಸೂರ್ಯಕಾಂತ ಮಣಿಯಂತೆ (ಅಂದರೆ ಹೇಗೆ ಸೂರ್ಯಕಾಂತ ಮಣಿ ತನ್ನಿಂದಲೇ ಅಗ್ನಿರೂಪ ಪರಿಣಮಿಸುವದಿಲ್ಲ. ಅದು ಅಗ್ನಿರೂಪ ಪರಿಣಮಿಸುವಲ್ಲಿ ಸೂರ್ಯನ ಬಿಂಬವು ನಿಮಿತ್ತವಿದೆ.) ಅದೇ ಪ್ರಕಾರ ಆತ್ಮನು ತನ್ನನ್ನು ರಾಗಾದಿಗಳ ನಿಮಿತ್ತ ಎಂದೂ ಆಗುವದಿಲ್ಲ. (ಅಂದರೆ ಶುದ್ಧಾತ್ಮನು ಸ್ವತಃ ಶುದ್ಧನಾಗಿರುವದರಿಂದ ರಾಗಾದಿರೂಪ ತನ್ನಿಂದ ತಾನೇ ಎಂದೂ ಪರಿಣಮಿಸುವದಿಲ್ಲ. ಅದರಲ್ಲಿ ನಿಮಿತ್ತ ಪರಸಂಗವೇ (ಪರದ್ರವ್ಯದ ಸಂಗವೇ) ಇರುತ್ತದೆ. ಹೀಗೆ ವಸ್ತು ಸ್ವಭಾವವು ಪ್ರಕಾಶಮಾನವಿದೆ. (ಯಾವಾಗಲೂ ವಸ್ತುವಿನ ಸ್ವಭಾವವು ಹೀಗೆಯೇ ಇದೆ, ಅದನ್ನು ಯಾರೂ ಮಾಡಿರುವದಿಲ್ಲ.)

ವಸ್ತುವಿನ ಸ್ವಭಾವವು ಹೀಗೆಯೇ ಇದೆ. ಹೇಗೆಂದರೆ ಕೆಟ್ಟ ನಿಮಿತ್ತದಿಂದ ಅದರ ಪತನ ಆಗಬಹುದಾಗಿದೆ. ಹೀಗೆ ಜೈನ ಸಿದ್ಧಾಂತದ ಅನೇಕಾಂತವಾದ ಇದೆ. ಯಾವನೋ ನಿಮಿತ್ತವನ್ನು ಏಕಾಂತದಿಂದ ಅಕರ್ತಾ ಎಂದು ಮನ್ನಿಸಿದರೆ ಮತ್ತು ಹೀಗೆಯೇ ಪ್ರರೂಪಣೆ ಮಾಡಿದರೆ ಅದು ಜಿನಮತದಿಂದ ಹೊರಗಿದೆ. ಅಂದರೆ ಅದು ತನ್ನ ಮತ್ತು ಬೇರೆ ಅನೇಕರ ಪತನದ ಕಾರಣವಿದೆ. ಇದೇ ಮಾತನ್ನು ಈ ಶ್ಲೋಕದಲ್ಲಿಯೂ ಹೇಳಲಾಗಿದೆ. ಏನಂದರೆ ಶುದ್ಧಾತ್ಮನು ಸ್ವತಃ ಶುದ್ಧನಾಗಿರುವದರಿಂದ ರಾಗಾದಿ ರೂಪವಾಗಿ ತನ್ನಿಂದ ತಾನೇ ಎಂದೂ ಪರಿಣಮಿಸುವದಿಲ್ಲ. ಆದರೆ ಅದರಲ್ಲಿ ನಿಮಿತ್ತವು ಪರಸಂಗವೇ ಇದೆ. ಹೀಗೆ ವಸ್ತು ಸ್ವಭಾವವು ಪ್ರಕಾಶಮಾನವಿದೆ. ಅಂದರೆ ಯಾವಾಗಲೂ ವಸ್ತುವಿನ ಸ್ವಭಾವವು

ಹೀಗೆಯೇ ಇರುತ್ತದೆ. ಯಾರೂ ಇದನ್ನು ಮಾಡಿರುವದಿಲ್ಲ. ನಿಮಿತ್ತವು ಸ್ವತಃ ಉಪಾದಾನ ರೂಪದಿಂದ ಪರಿಣಮಿಸುವದಿಲ್ಲ. ಆದರೂ ಅದು ಸ್ವಲ್ಪ ಸಂಯೋಗಗಳಲ್ಲಿ ಉಪಾದಾನದ ಮೇಲೆ ಪರಿಣಾಮ ಮಾಡುತ್ತದೆ. ಅದನ್ನೇ ವಸ್ತು ಸ್ವಭಾವ ಎಂದು ಹೇಳಿದ್ದಾರೆ. ಆದ್ದರಿಂದ ಜೈನ ಸಿದ್ಧಾಂತವನ್ನು ವಿವೇಕದಿಂದ ಗ್ರಹಣ ಮಾಡಲಾಗುತ್ತದೆ ಮತ್ತು ಅಪೇಕ್ಷೆಯಿಂದ ತಿಳಿಯಲಾಗುತ್ತದೆ. ಏಕಾಂತದಿಂದಲ್ಲ. ತಿಳಿದರೆ ಮಹಾಅನರ್ಥಕ್ಕೆ ಕಾರಣವಾಗುವದು.

ಏಕಾಂತದಿಂದ ಹೀಗೆ ಮನ್ನಿಸಿದರೆ ಹೇಗೆಂದರೆ ನಿಮಿತ್ತವಂತೂ ಪರಮ ಅಕರ್ತಾ ಇದೆ ಮತ್ತು ಸ್ವಚ್ಛಂದತೆಯಿಂದ ಮನಬಂದಂತೆ ನಿಮಿತ್ತಗಳ ಸೇವನೆ ಮಾಡಿದರೆ ಅವರು ನಿಯಮದಿಂದ ಮಿಥ್ಯಾತ್ವ ಮತ್ತು ಅನಂತ ಸಂಸಾರಿ ಎಂದು ತಿಳಿಯಿರಿ. ಏಕೆಂದರೆ ಅವನಿಗೆ ನಿಮಿತ್ತದ ಯಥಾರ್ಥ ಜ್ಞಾನ ಇಲ್ಲವೇ ಇಲ್ಲ. ಆದ್ದರಿಂದ ಹೇಳಿದ್ದಾರೇನಂದರೆ - ನಿಶ್ಚಯದಿಂದ ಕಾರ್ಯವು ನಿಮಿತ್ತದಿಂದ ಆಗುವದೇ ಇಲ್ಲ. ಏಕೆಂದರೆ ಉಪಾದಾನವು ಸ್ವತಃ ಕಾರ್ಯ ರೂಪದಿಂದ ಪರಿಣಮಿಸುತ್ತದೆ. ಆದರೆ ಕಾರ್ಯ ನಿಮಿತ್ತದ ಹೊರತು ಆಗುವದೇ ಇಲ್ಲ. ಯಾವಾಗ ಯಾವದೇ ಕಾರ್ಯವು ಆಗಬೇಕಾದರೆ ಅದಕ್ಕೆ ಯೋಗ್ಯ ನಿಮಿತ್ತದ ಉಪಸ್ಥಿತಿಯು ಅವಶ್ಯವಾಗಿ ಆಗೇ ಆಗುತ್ತದೆ. ಅವಿನಾಭಾವ ರೂಪದಿಂದ ಆಗೇ ಆಗುತ್ತದೆ. ಆದ್ದರಿಂದ ಮುಮುಕ್ಷು ಜೀವವು ವಿವೇಕದಿಂದ ಯಾವಾಗಲೂ ನಿರ್ಬಲ ನಿಮಿತ್ತಗಳಿಂದ ಉಳಿದುಕೊಳ್ಳುವ ಪ್ರಯತ್ನ ಮಾಡುತ್ತದೆ. ಏಕೆಂದರೆ ಅವರು ಅದರ ಪತನದ ಕಾರಣರಾಗುತ್ತಾರೆ ಮತ್ತು ಇದುವೇ ನಿಮಿತ್ತ ಉಪಾದಾನದ ಯಥಾರ್ಥ ತಿಳಿವಳಿಕೆಯಿದೆ. ನಿಮಿತ್ತ ಉಪಾದಾನ ಇವುಗಳ ಮೇಲೆ ವಿಶೇಷ ಪ್ರಕಾಶವನ್ನು ಮುಂದೆ ಸಮಯಸಾರದ ನಿಮಿತ್ತ ಉಪಾದಾನದ ಅಧ್ಯಾಯದಲ್ಲಿಯೂ ಸಹ ಹಾಕೋಣ.

★★★

## ೧೯. ಉಪಯೋಗ ಮತ್ತು ಲಬ್ಧಿರೂಪ ಸಮ್ಯಗ್ದರ್ಶನ (ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ)

**ಶ್ಲೋಕ ೪೦೪ :** ವಿಶೇಷವೇನಂದರೆ ಸಮ್ಯಗ್ದರ್ಶನ ಮತ್ತು ಸ್ವಾನುಭವವು ಈ ಎರಡರಲ್ಲಿ ಅಸಮಾನ ತುಂಬಿರುತ್ತದೆ. ಏಕೆಂದರೆ ಸಮ್ಯಗ್ದರ್ಶನದ ಜೊತೆಯಲ್ಲಿ ಉಪಯೋಗ ರೂಪ ಸ್ವಾನುಭೂತಿಯು ಆಗೇ ಆಗುತ್ತದೆ. ಹೀಗೆ ಸಮವ್ಯಾಪ್ತಿ ಇರುವದಿಲ್ಲ. (ಅರ್ಥಾತ್ ಸಮ್ಯಗ್ದರ್ಶನದ ಉಪಸ್ಥಿತಿಯ ಸಮಯ ಸ್ವಾತ್ಮಾನುಭೂತಿ ರೂಪ ಅನುಭವವೂ ಸಹ ಆಗುತ್ತದೆ ಮತ್ತು ಆಗುವದೂ ಇಲ್ಲ. ಆದ್ದರಿಂದ ಸಮವ್ಯಾಪ್ತಿ ಅರ್ಥಾತ್ ಅವಿನಾಭಾವಿ ಉಪಸ್ಥಿತಿ ಆಗುವದಿಲ್ಲ.) ಆದರೆ ಲಬ್ಧಿಯಲ್ಲಿ

ಅರ್ಥಾತ್ ಲಬ್ಧಿರೂಪ (ಜ್ಞಾನದ ಲಬ್ಧ ಮತ್ತು ಉಪಯೋಗರೂಪಿ ಎರಡು ಅವಸ್ಥೆಗಳು ಆಗುತ್ತವೆ. ಅವುಗಳಲ್ಲಿ ಲಬ್ಧಿರೂಪ ಅವಸ್ಥೆಯಲ್ಲಿ) ಸ್ವಾನುಭೂತಿಯ ಜೊತೆಗೆ ಸಮ್ಯಗ್ದರ್ಶನದ ಸಮವ್ಯಾಪ್ತಿ (ಅರ್ಥಾತ್ ಸಮ್ಯಗ್ದರ್ಶನದ ಉಪಸ್ಥಿತಿಯಲ್ಲಿ ಜ್ಞಾನದಲ್ಲಿ ಲಬ್ಧಿರೂಪದಿಂದ ಸ್ವಾನುಭೂತಿಯ ಉಪಸ್ಥಿತಿಯು ಅವಿನಾಭಾವಿ ಅರ್ಥಾತ್ ನಿಯಮದಿಂದ ಆಗಿಯೇ ಆಗುತ್ತದೆ.

ಪೂರ್ವದಲ್ಲಿ ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ ೨೧೫ರಲ್ಲಿ ಹೇಳಿದ ಪ್ರಕಾರ ಆತ್ಮನ ಉಪಲಬ್ಧಿಯು 'ಶುದ್ಧ' ವಿಶೇಷಣ ಸಹಿತ ಆಗುತ್ತದೆ. ಅರ್ಥಾತ್ ಶುದ್ಧೋಪಯೋಗರೂಪಿ ಸ್ವಾತ್ಮಾನುಭೂತಿ ರೂಪ ಅನುಭವಸಹಿತ ಆಗುವದು. ಆಗ ಅದು ಸಮ್ಯಗ್ದರ್ಶನದ ಲಕ್ಷಣ ಆಗಬಹುದಾಗಿದೆ. ಒಂದು ವೇಳೆ ಆ ಆತ್ಮೋಪಲಬ್ಧಿಯು ಅಶುದ್ಧವಾದರೆ ಅದು ಸಮ್ಯಗ್ದರ್ಶನದ ಲಕ್ಷಣವಾಗುವದಿಲ್ಲ. ಒಳ್ಳೆಯ ಶುದ್ಧೋಪಯೋಗ ರೂಪಿ ಸ್ವಾತ್ಮಾನುಭೂತಿ ರೂಪಿ ಅನುಭವದ ಕ್ಷಣಿಕವೇ ಆಗಿರುತ್ತದೆ. ಆದರೆ ಅದರ ಸಾರರಹಿತ ಕ್ಷಣಿಕದಲ್ಲಿ ಆಗಿದ್ದು ಲಬ್ಧರೂಪವಾಗಿ ಸಮ್ಯಗ್ದರ್ಶನದ ಉಪಸ್ಥಿತಿಯ ಸಮಯ ನಿಯಮದಿಂದ ಆಗಿಯೇ ಆಗುತ್ತದೆ.

ಪೂರ್ವದಲ್ಲಿ ನಾವು ಶುದ್ಧಾತ್ಮಾನುಭೂತಿಯನ್ನು ಸಮ್ಯಗ್ದರ್ಶನದ ಲಕ್ಷಣದ ರೂಪದಲ್ಲಿ ಸ್ಥಾಪನೆ ಮಾಡಿದ್ದೇವೆ. ಆ ಲಕ್ಷಣವು ಉಪಯೋಗರೂಪ ಬಹಳ ಕಡಿಮೆ ಸಮಯದ ಸಲುವಾಗಿ ಇರುತ್ತದೆ. ಆದರೆ ಆ ಲಕ್ಷಣವು ಎಲ್ಲಿಯವರೆಗೆ ಸಮ್ಯಗ್ದರ್ಶನ ಆಗುತ್ತದೆ. ಅಲ್ಲಿಯವರೆಗೆ ಲಬ್ಧಿರೂಪದಿಂದ ಅದರ ಜೊತೆಗೇನೇ ಅವಶ್ಯವಾಗಿ ಇರುತ್ತದೆ. ಈ ಮಾತು ಯಾವ ಜನರು ನಾಲ್ಕನೇ ಗುಣಸ್ಥಾನದಲ್ಲಿ ಶುದ್ಧಾತ್ಮಾನುಭೂತಿ ಮನ್ನಿಸುವದಿಲ್ಲ, ಅವರಿಗೆ ತಿಳಿಸುವದು ಅತೀ ಅವಶ್ಯಕವಿದೆ.

★★★

## ೨೦. ಸ್ವಾನುಭೂತಿರಹಿತ ಶ್ರದ್ಧೆ

ಈಗ ಸ್ವಾತ್ಮಾನುಭೂತಿ ರಹಿತ ಶ್ರದ್ಧೆಯ ಕುರಿತು ಹೇಳುತ್ತೇವೆ. ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ ೪೨೩ರ ಅರ್ಥ : ಸ್ವಾನುಭೂತಿ ರಹಿತ ಶ್ರದ್ಧೆ (ಅರ್ಥಾತ್ ಯಾರೋ ಹೀಗೆ ಮನ್ನಿಸಿದರು. ಹೇಗೆಂದರೆ ಒಂಬತ್ತು ತತ್ವಗಳ ಶ್ರದ್ಧೆಯೇ ಸಮ್ಯಗ್ದರ್ಶನವಿದೆ ಅಥವಾ ನಿಜವಾದ ದೇವ-ಶಾಸ್ತ್ರ-ಗುರುಗಳ ಶ್ರದ್ಧೆಗೆ ಸಮ್ಯಗ್ದರ್ಶನ ಮನ್ನಿಸಿದರೆ ಅದರಂತೆಯೇ ಇದು ಸಹ ಸ್ವಾನುಭೂತಿ ರಹಿತ ಶ್ರದ್ಧೆ) ಸಮೀಚೀನ (ನಿಜವಾದ ಕಾರ್ಯಕಾರಿ) ಶ್ರದ್ಧೆ ಆಗುವದಿಲ್ಲ. ಆದ್ದರಿಂದ ಯಾವ ಸಮ್ಯಗ್ದರ್ಶನದ ಲಕ್ಷಣಾಭೂತ ಶ್ರದ್ಧೆಯು ಮಿಶ್ರಿತ ರೂಢಿ ನಿರುಕ್ತಿಯಿಂದ (ಅರ್ಥಾತ್ ಸ್ವಾನುಭೂತಿ ರೂಪಿ ಯೋಗಸಹಿತದ) ಸಿದ್ಧ ಅರ್ಥವುಳ್ಳದ್ದಿದೆ. (ಅಂದರೆ ಸತ್ಯವೇ ಇದೆ. ಕಾರ್ಯಕಾರಿ ಇದೆ.) ಅದೂ ಸಹ ಯಥಾರ್ಥದಲ್ಲಿ ಸ್ವಾನುಭೂತಿಯಂತೆ ಅವಿರುದ್ಧ

ಕಥನವಿದೆ. (ಆದ್ದರಿಂದ ಶ್ರದ್ಧಾರೂಪ ಸಮ್ಯಗ್ದರ್ಶನವು ಅದು ಸ್ವಾನುಭೂತಿ ರೂಪಿ ಸಮ್ಯಗ್ದರ್ಶನವೇ ಇರುತ್ತದೆ.)

ಸ್ವಾನುಭೂತಿ ರಹಿತ ಶ್ರದ್ಧೆಯು ಕಾರ್ಯಕಾರಿ ಇರುವದಿಲ್ಲ. ಕೇವಲ ವ್ಯವಹಾರ ನಯವನ್ನೇ ಮಾನ್ಯ ಮಾಡುವವರು ಹೆಚ್ಚಾಗಿ ಜನರು ಹೀಗೆಯೇ ಮನ್ನಿಸುತ್ತಾರೆ. ಹೇಗೆಂದರೆ ಸಮ್ಯಗ್ದರ್ಶನ ಅಂದರೆ ಏಳು/ಒಂಬತ್ತು ತತ್ವಗಳ (ಸ್ವಾತ್ಮಾನುಭೂತಿ ರಹಿತ) ಶ್ರದ್ಧೆ ಅಥವಾ ನಿಜವಾದ ದೇವ-ಗುರು-ಶಾಸ್ತ್ರಗಳ (ಸ್ವಾತ್ಮಾನುಭೂತಿ ರಹಿತ) ಶ್ರದ್ಧೆ. ಸಮ್ಯಗ್ದರ್ಶನದ ಈ ವ್ಯಾಖ್ಯೆಯು ವ್ಯವಹಾರ ನಯದ ಪಕ್ಷದ್ದಿರುತ್ತದೆ. ಅಂತಹ ಸ್ವಾನುಭೂತಿ ರಹಿತ ಶ್ರದ್ಧೆ ಸಮೀಚೀನ (ನಿಜವಾದ-ಕಾರ್ಯಕಾರಿ) ಆಗುವದಿಲ್ಲ. ಆದ್ದರಿಂದ ಯಾವದು ಸಮ್ಯಗ್ದರ್ಶನದ ಲಕ್ಷಣಭೂತ ಶ್ರದ್ಧೆ ಎಂಬುದನ್ನು ತಿಳಿಯಿರಿ. ಸ್ವಾತ್ಮಾನುಭೂತಿ ರೂಪಿ ಯೋಗ ಸಹಿತದ ಸಿದ್ಧ ಅರ್ಥ ಉಳ್ಳದ್ದಿದೆ. ಅದು ನಿಜವಾದದ್ದು ಇದೆ, ಕಾರ್ಯಕಾರಿ ಇದೆ ಮತ್ತು ಇದು ಸಮೀಚೀನ (ನಿಜವಾದ ಕಾರ್ಯಕಾರಿ) ಶ್ರದ್ಧೆಯೂ ಸಹ ಯಥಾರ್ಥದಲ್ಲಿ ಸ್ವಾನುಭೂತಿಯ ಪ್ರಕಾರ ಅವಿರುದ್ಧ ಕಥನವಿದೆ. ಅಂತಹ ಶ್ರದ್ಧಾರೂಪಿ ಸಮ್ಯಗ್ದರ್ಶನವು ಸ್ವಾನುಭೂತಿ ಸಮ್ಯಗ್ದರ್ಶನವೇ ಇರುವದು. ಅಂದರೆ ಆತ್ಮನನ್ನು ತಿಳಿಯುವವನೇ ಎಲ್ಲವನ್ನು ಅಂದರೆ ಏಳು / ಒಂಬತ್ತು ತತ್ವಗಳನ್ನು ಮತ್ತು ನಿಜವಾದ ದೇವ-ಗುರು-ಶಾಸ್ತ್ರಗಳನ್ನು ತಿಳಿಯುತ್ತಾನೆ. ಏಕೆಂದರೆ ಒಬ್ಬ ಆತ್ಮನಿಗೆ ತಿಳಿಯುತ್ತಲೇ ಆ ಜೀವವು ನಿಜವಾದ ದೇವರ ಹಾಗೂ ತತ್ವಗಳ ಅಂಶಿಕ ಅನುಭವ ಮಾಡುತ್ತಾನೆ ಮತ್ತು ಅದರಿಂದ ಅವನು ನಿಜವಾದ ದೇವರನ್ನು ಅಂತಃಕರಣದಿಂದ ಗುರುತಿಸುತ್ತಾನೆ. ಇಂಥ ನಿಜವಾದ ದೇವರಿಗೆ ತಿಳಿಯುತ್ತಲೇ ಅಂದರೆ ಸ್ವಾತ್ಮಾನುಭೂತಿ ಸಹಿತ ಶ್ರದ್ಧೆಯಾಗುತ್ತಲೇ ಆ ಜೀವವು ಹಾಗೆಯೇ ದೇವನಾಗುವ ಮಾರ್ಗದಲ್ಲಿ ಸಾಗುವಂಥ ನಿಜವಾದ ಗುರುವನ್ನು ಸಹ ಅಂತಃಕರಣದಿಂದ ಗುರುತಿಸುತ್ತಾನೆ ಮತ್ತು ಜೊತೆ ಜೊತೆಯಾಗಿ ಆ ಜೀವವು ಹಾಗೆಯೇ ದೇವನಾಗುವ ಮಾರ್ಗ ಹೇಳುವಂಥ ನಿಜವಾದ ಶಾಸ್ತ್ರಗಳನ್ನು ಸಹ ಗುರುತಿಸುತ್ತಾನೆ.

ನಿಶ್ಚಯ ಸಮ್ಯಗ್ದರ್ಶನದ ನಿಜವಾದ ವ್ಯಾಖ್ಯೆ ಹೀಗೆ ಆದ ಮೇಲೂ ಸಹ ವ್ಯವಹಾರ ನಯದ ಪಕ್ಷದವನಿಗೆ ಸಮ್ಯಗ್ದರ್ಶನದ ಇಂಥ ನಿಜವಾದ ವ್ಯಾಖ್ಯೆ ಮಾನ್ಯವಾಗುವದಿಲ್ಲ. ಅವರು ಇಂಥ ವ್ಯಾಖ್ಯೆಯದೇ ವಿರೋಧ ಮಾಡುತ್ತಾರೆ. ಆದ್ದರಿಂದ ಅವರು ಸಮ್ಯಗ್ದರ್ಶನ ಅರ್ಥಾತ್ ಏಳು/ಒಂಬತ್ತು ತತ್ವಗಳನ್ನು ಹೇಳುವಂಥ ಸ್ವಾತ್ಮಾನುಭೂತಿ ರಹಿತ ಶ್ರದ್ಧೆ ಅಥವಾ ನಿಜವಾದ ದೇವ-ಶಾಸ್ತ್ರ-ಗುರುವಿನ ಕುರಿತು ಹೇಳಲಾದ ಸ್ವಾತ್ಮಾನುಭೂತಿ ರಹಿತದ ಶ್ರದ್ಧೆ ಮತ್ತು ಸ್ವಾತ್ಮಾನುಭೂತಿ ಸಹಿತ ಶ್ರದ್ಧೆ ಈ ಎರಡರ ಅಂತರವೇ ತಿಳಿಯುವದಿಲ್ಲ. ಬಹುಶಃ ಅವರು ತಿಳಿಯಲು ಬಯಸುವದಿಲ್ಲ. ಆದ್ದರಿಂದ ಅವರು ಸಮ್ಯಗ್ದರ್ಶನದ ಯಾವ ಧರ್ಮದ ಮೂಲವಿದೆ. ಅದರ ವಿಷಯದಲ್ಲಿಯೇ ಅಪರಿಚಿತ ಇದ್ದುಕೊಂಡು ಪೂರ್ತಿ ಜೀವನವನ್ನು ಧರ್ಮ ಕಾರ್ಯಗಳನ್ನು ಉತ್ತಮ ರೀತಿಯಿಂದ ಮಾಡುತ್ತಿದ್ದರೂ ಸಹ ಸಂಸಾರದ

ಅಂತಗೊಳಿಸುವಂಥ ಧರ್ಮವನ್ನು ಪ್ರಾಪ್ತ ಮಾಡಿಕೊಳ್ಳುವದಿಲ್ಲ. ಇದು ಕರುಣೆಯನ್ನು ಉತ್ಪನ್ನ ಮಾಡುವಂಥ ಮಾತು ಇದೆ.

★★★

## ೨೧. ಸಮ್ಯಗ್ದೃಷ್ಟಿ ಜೀವದ ನಿರ್ವಿಚಿಕಿತ್ಸಾ ಗುಣ

ಸಮ್ಯಗ್ದೃಷ್ಟಿ ಜೀವವು, ಕೇವಲ ಶುದ್ಧಾತ್ಮನಲ್ಲಿಯೇ 'ನನ್ನತನ' (ಏಕತ್ವ) ಮಾಡಿದ ಮೇಲೂ ಸಹ ತನ್ನನ್ನು ಬೇರೆ ಸಂಸಾರಿ ಜೀವದಂತೆಯೇ ಅರ್ಥಾತ್ ಕರ್ಮಗಳಿಂದ ಮಲಿನಗೊಂಡ ಆತ್ಮರುಗಳ ಅನುಭವ ಮಾಡುತ್ತಾನೆ. ಆದ್ದರಿಂದ ಅವನು ತನ್ನನ್ನು ಬೇರೆ ಸಂಸಾರಿ ಜೀವಗಳಿಂದ ಶ್ರೇಷ್ಠವೆಂದು ತಿಳಿದು ಅವರ ಕುರಿತು ತಿರಸ್ಕಾರ ಮುಂತಾದ ಭಾವನೆಗಳನ್ನು ಮಾಡುವದಿಲ್ಲ. ಇದುವೇ ಅವನ ನಿರ್ವಿಚಿಕಿತ್ಸಾಗುಣ ಇರುತ್ತದೆ. ಅವನು ಬೇರೆ ಎಲ್ಲ ಸಂಸಾರಿ ಜೀವಗಳನ್ನು ಸಹ ತನ್ನಂತೆಯೇ ಅಂದರೆ ಸ್ವರೂಪದಿಂದ ಸಿದ್ಧಸಮಾನ ಎಂದೇ ತಿಳಿಯುತ್ತಾನೆ. ಪಂಚಾಧ್ಯಾಯಿ ಉತ್ತರಾರ್ಧ ಶ್ಲೋಕ ೫೮೪ : ಯಾವ ಪ್ರಕಾರ ನೀರಲ್ಲಿ ಸ್ವಲ್ಪ ಹೊಲಸು ಮಲಿನತೆ ಇರುತ್ತದೆ. ಸರಿಯಾಗಿ ಅದೇ ಪ್ರಕಾರ ಎಲ್ಲಿಯವರೆಗೆ ಜೀವದಲ್ಲಿ ಅಶುಚಿರೂಪಿ ಕರ್ಮ ಇರುವದು, ಅಲ್ಲಿಯವರೆಗೆ ನಾನು (ಸಮ್ಯಗ್ದೃಷ್ಟಿ ಜ್ಞಾನಿ) ಮತ್ತು ಆ ಎಲ್ಲ ಸಂಸಾರಿ ಜೀವಗಳು ಸಾಮಾನ್ಯರೂಪದಿಂದ (ಅರ್ಥಾತ್ ಸಮಾನ ರೀತಿಯಿಂದ) ನಿಶ್ಚಯಪೂರ್ವಕವಾಗಿ ಕರ್ಮಗಳಿಂದ ಮಲಿನ ಇರುತ್ತವೆ. (ಹೀಗೆ ಸಮ್ಯಗ್ದೃಷ್ಟಿಯ ನಿರ್ವಿಚಿಕಿತ್ಸಾಗುಣವಿದೆ) ಅಂದರೆ ಸಮ್ಯಗ್ದೃಷ್ಟಿಜ್ಞಾನಿ ಜೀವನಿಗೆ ಯಾವದೇ ಜೀವದ ಕುರಿತು ತುಚ್ಛತೆಯ ಭಾವ ಆಗುವದಿಲ್ಲ. ಆದರೆ ಎಲ್ಲ ಜೀವಗಳ ಕುರಿತು ಅವನಿಗೆ ಸಾಮ್ಯಭಾವ ಇರುತ್ತದೆ. ಇದುವೇ ಸಮ್ಯಗ್ದೃಷ್ಟಿ ಜೀವದ ನಿರ್ವಿಚಿಕಿತ್ಸಾ ಗುಣ ಇರುತ್ತದೆ.

ಆದ್ದರಿಂದ ಯಾರೇ ಏನೇ ಹೇಳಲಿ, ತಿಳಿದಿರುವಂಥ ಧಾರ್ಮಿಕ ವ್ಯಕ್ತಿಗೆ ತನ್ನಿಂದ ತಾನೇ ಉಳಿದ ಜೀವಗಳಿಗಿಂತ ಶ್ರೇಷ್ಠವೆಂದು ತಿಳಿದು ಉಳಿದ ಜೀವಗಳ ಜೊತೆಗೆ ತಿರಸ್ಕಾರಪೂರ್ವಕ ವ್ಯವಹಾರ ಮಾಡುವದು ಸರಿ ಇರುವದಿಲ್ಲ ಎಂದು ತಿಳಿದಿರುತ್ತಾನೆ.

★★★

## ೨೨. ಸಮ್ಯಗ್ದರ್ಶನದ ಸಲುವಾಗಿ ಯೋಗ್ಯತೆ

ಸಮ್ಯಗ್ದರ್ಶನದ ಸಲುವಾಗಿ ಜೀವದ ಯೋಗ್ಯತೆಯ ಸಂಬಂಧವಾಗಿ ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ ೭೨೪. ಅರ್ಥ : ಎಂಟು ಮೂಲಗುಣಗಳು ಸ್ವಭಾವದಿಂದ ಅಥವಾ ಪರಂಪರೆಯಿಂದ ಗೃಹಸ್ಥರಿಗೆ ಪ್ರಾಪ್ತವಾಗುತ್ತವೆ. ಈ ಮೂಲ

ಗುಣಗಳ ಹೊರತು ಜೀವಗಳಿಗೆ ಎಲ್ಲ ಪ್ರಕಾರದ ವ್ರತ ಹಾಗೂ ಸಮ್ಯಕ್ತ್ವ ಪ್ರಾಪ್ತವಾಗಲಾರದು. ಅಂದರೆ ಮೂಲ ಗುಣಗಳನ್ನು ಜೀವದ ಸಮ್ಯಗ್ದರ್ಶನದ ಸಲುವಾಗಿ ಯೋಗ್ಯತೆ ಉಂಟಾಗಲು ಹೇಳಲಾಗಿದೆ.

ರತ್ನಕರಂಡಕ ಶ್ರಾವಕಾಚಾರ ಶ್ಲೋಕ ೬೬ರ ಅನುಸಾರ ಗಣಧರರು ಹೇಳುತ್ತಾರೆ. ಏನಂದರೆ ಸೆರೆ, ಮಾಂಸ, ಜೇನುತುಪ್ಪ ಇವುಗಳ ತ್ಯಾಗದ ಜೊತೆಗೆ ಐದು ಅಣುವ್ರತಗಳ ಪಾಲನೆ ಇವು ಗೃಹಸ್ಥರ ಎಂಟು ಮೂಲ ಗುಣಗಳೆಂದು ಹೇಳಿದ್ದಾರೆ.

**ಶ್ಲೋಕ ೭೪೦ :** ಗೃಹಸ್ಥರಿಗೆ ತಮ್ಮ ಶಕ್ತಿಗೆ ಅನುಸಾರ ಪ್ರತಿಮೆಯನ್ನು ಸ್ವೀಕರಿಸಿ ಅಥವಾ ಪ್ರತಿಮೆಯಿಲ್ಲದೆ ತೆಗೆದುಕೊಂಡ ವ್ರತ ಸ್ವೀಕರಿಸಿ ಎರಡೂ ಪ್ರಕಾರದ ಸಂಯಮವನ್ನು ಪಾಲನೆ ಮಾಡಬೇಕು. ಅಂದರೆ ಎಲ್ಲರಿಗೂ ಕೇವಲ ಆತ್ಮಲಕ್ಷ್ಯದಿಂದ ಅಂದರೆ ಆತ್ಮಪ್ರಾಪ್ತಿಯ ಸಲುವಾಗಿ ಸಂಯಮ ಪಾಲನೆ ಮಾಡುವದು ಅವಶ್ಯಕವಿದೆ.

ಇದೇ ಮಾತು ಪರಮಾತ್ಮ ಪ್ರಕಾಶ ಮೋಕ್ಷಾಧಿಕಾರ ಗಾಥೆ ೬೪ರಲ್ಲಿ ಈ ಪ್ರಕಾರ ಹೇಳಲಾಗಿದೆ. ಏನಂದರೆ 'ಪಂಚಪರಮೇಷ್ಠಿಗಳಿಗೆ ವಂದನೆ, ತನ್ನ ಅಶುಭ ಕರ್ಮಗಳ ನಿಂದನೆ ಮತ್ತು ತನ್ನಿಂದಾದ ಅಪರಾಧಗಳ ಕುರಿತು ಪ್ರಾಯಶ್ಚಿತ್ತಾದಿ ಮುಂತಾದವುಗಳನ್ನು ನಿವೃತ್ತಿಗೊಳಿಸುವದು. ಇವು ಪುಣ್ಯದ ಕಾರಣ ಇವೆ. ಮೋಕ್ಷದ ಕಾರಣ ಇಲ್ಲ. ಆದ್ದರಿಂದ ಮೊದಲಿನ ಅವಸ್ಥೆಯಲ್ಲಿ ಪಾಶವನ್ನು ದೂರ ಮಾಡುವ ಸಲುವಾಗಿ ಜ್ಞಾನಿಪುರುಷರು ಈ ಎಲ್ಲವನ್ನು ಮಾಡುತ್ತಾರೆ. ಮಾಡಿಸುತ್ತಾರೆ ಮತ್ತು ಮಾಡುವವನಿಗೆ ಒಳ್ಳೆಯವನೆಂದು ಮನ್ನಿಸುತ್ತಾರೆ. ಆದರೂ ಸಹ ನಿರ್ವಿಕಲ್ಪ ಶುದ್ಧೋಪಯೋಗ ಅವಸ್ಥೆಯಲ್ಲಿ ಜ್ಞಾನಿ ಜೀವವು ಈ ಮೂರರಲ್ಲಿಂದ ಒಂದೂ ಸಹ ಮಾಡಲಿಲ್ಲ. ಏಕೆಂದರೆ ನಿರ್ವಿಕಲ್ಪ ಶುದ್ಧೋಪಯೋಗ ಅವಸ್ಥೆಯಲ್ಲಿ ಜ್ಞಾನಿಜೀವನಿಗೆ ಯಾವದೇ ವಿಕಲ್ಪವೇ ಆಗುವದಿಲ್ಲ. ಅಂದರೆ ಭೂಮಿಕೆಯ ಅನುಸಾರ ಉಪದೇಶ ಆಗುತ್ತದೆ. ಏಕಾಂತದಿಂದ ಇಲ್ಲ.

ಮೊದಲ ಅವಸ್ಥೆಯಲ್ಲಿ ಅಂದರೆ ಸಮ್ಯಕ್ತ್ವ ಸನ್ಮುಖ ಮಿಥ್ಯಾದೃಷ್ಟಿ ಜೀವನಿಗೆ ಪಾಪದಿಂದ ಮುಕ್ತನಾಗುವ ಮತ್ತು ಸಮತ್ವಭಾವ ಪ್ರಾಪ್ತ ಮಾಡುವ ಸಲುವಾಗಿ ಕೆಳಗೆ ಹೇಳಿದ ಪ್ರಕಾರದಿಂದ ಪ್ರಯೋಗಾತ್ಮಕ ಅಭ್ಯಾಸ ಮಾಡಬೇಕು. ಕೇವಲ ಓದುವ ಜ್ಞಾನದಿಂದ ತಮ್ಮ ಕಲ್ಯಾಣವಾಗುವದು ಬಹಳ ದುರ್ಲಭವಿದೆ. ಈ ಕಲ್ಯಾಣದಿಂದ ನಾವು ಮುಂದೆ ಪ್ರಯೋಗಾತ್ಮಕ ಸಾಧನೆಯನ್ನು ಹೇಳುತ್ತೇವೆ. ಎಲ್ಲರ ಸಲುವಾಗಿ ಯೋಗ್ಯತೆಯನ್ನು ಮಾಡುವ ಮತ್ತು ಯೋಗ್ಯತೆಯನ್ನು ಮಾಡಿಟ್ಟುಕೊಳ್ಳುವಲ್ಲಿ ಕಾರ್ಯಕಾರಿಯಿದೆ. ಕೆಲವು ಪ್ರಯೋಗಾತ್ಮಕ ಸಾಧನೆಗಳು ಸಮ್ಯಗ್ದರ್ಶನದ ಪ್ರಾಪ್ತ ಮಾಡಿಕೊಂಡ ಬಳಿಕವೂ ಸಹ ತನ್ನ ಭೂಮಿಕೆಯ ಅನುಸಾರ ಆಚರಿಸಿದವರು ಭಗವಾನರಾಗಬಹುದು.

ಎಲ್ಲಕ್ಕಿಂತ ಮೊದಲು ವಿಶ್ವದ ಎಲ್ಲ ಜೀವಗಳ ಕುರಿತು ನಮಗೆ ಕೆಳಗೆ ಬರೆದ ನಾಲ್ಕು ಭಾವಗಳನ್ನು ಮಾಡಬೇಕಾಗುವದು. ಅಂದರೆ ಎಲ್ಲರನ್ನು ಈ ನಾಲ್ಕು ಭಾವನೆಗಳಲ್ಲಿಯೇ ವರ್ಗೀಕೃತ ಮಾಡಬೇಕು. ಬೇರೆ ಮಾಡಿದ ಭಾವವು ನಮ್ಮ ಸಲುವಾಗಿ ಬಂಧನ ರೂಪವಾಗುತ್ತದೆ.

೧. ಮೈತ್ರಿಭಾವ : ಮೈತ್ರಿಯು ನಿಸ್ವಾರ್ಥ ಹಾಗೂ ಪರಮಕಲ್ಯಾಣಮಯವಿದೆ. ಲೋಕದ ಎಲ್ಲ ಜೀವಿಗಳ ಕುರಿತು ಪರಮಕಲ್ಯಾಣಮಯವಾದ ಮೈತ್ರಿಯ ಭಾವವು ಒಟ್ಟುಗೂಡಿಸುವಂಥದ್ದಿದೆ. ಅರ್ಥಾತ್ ಎಲ್ಲ ಜೀವಿಗಳ ಪರಮಕಲ್ಯಾಣ ಬಯಸುತ್ತದೆ. ಇದರಿಂದ ನಮ್ಮ ಮನಸ್ಸಿನಲ್ಲಿ ಯಾರ ಬಗ್ಗೆಯೂ ವೈರಭಾವ ಇರುವದಿಲ್ಲ ಮತ್ತು ಯಾರ ಬಗ್ಗೆಯೂ ಹೊಟ್ಟೆಕಿಚ್ಚು ಅಥವಾ ಈರ್ಷೆ ಇರುವದಿಲ್ಲ. ಯಾವಾಗ ನಮ್ಮ ಮನಸ್ಸಿನಲ್ಲಿ ಇನ್ನೊಬ್ಬರ ಕುರಿತು ವೈರತ್ವ ಅಥವಾ ಈರ್ಷೆ ಉಂಟಾಗುತ್ತದೆಯೋ ಆಗ ಯಾರ ಕುರಿತು ಇಂಥ ಭಾವ ಮಾಡಿರುವೆವೋ ಅವರಿಗೆ ಆ ಭಾವದಿಂದ ಲಾಭ ಅಥವಾ ಹಾನಿ ಆಗಬಹುದು ಅಥವಾ ಆಗಲಿಕ್ಕಿಲ್ಲ. ಆದರೆ ಭಾವಿಸಿದ ನಮಗೆ ಮಾತ್ರ ಬಹಳ ದೊಡ್ಡ ಹಾನಿ ಆಗುತ್ತದೆ.

೧. ನಮ್ಮ ಮನಸ್ಸಿನಲ್ಲಿ ಅವರ ನೆನಪು ಆಗುವದರಿಂದ ಚುಚ್ಚಿದಂತಾಗುತ್ತದೆ.
೨. ನಮ್ಮ ಶರೀರದ ಮೇಲೆ ಕೆಟ್ಟ ಪರಿಣಾಮ ಆಗುತ್ತದೆ.
೩. ನಮ್ಮ ಪ್ರಸನ್ನತೆಗೆ ವಿಘ್ನ ಉಂಟಾಗುತ್ತದೆ.
೪. ಅನಂತ ಕರ್ಮಗಳ ಬಂಧವಾಗುತ್ತದೆ.

ಇದರ ವಿರುದ್ಧ ಯಾವಾಗ ನಾವು ಎಲ್ಲ ಜೀವರುಗಳ ಕುರಿತು ಪರಮ ಮೈತ್ರಿಯ ಭಾವ ಭಾವಿಸುತ್ತೇವೆ, ಆಗ ನಮ್ಮ ಮನಸ್ಸು ಪ್ರಸನ್ನವಾಗುತ್ತದೆ ಮತ್ತು ವೈರತ್ವ ಅಥವಾ ಈರ್ಷೆ ಇಲ್ಲದಿರುವ ಕಾರಣ ಪಾಪಬಂಧದಿಂದಲೂ ಉಳಿದುಕೊಳ್ಳುತ್ತೇವೆ. ಯಾವ ಜೀವಿಗೆ ಮತ-ಪಂಥ-ಸಂಪ್ರದಾಯದ ಪಕ್ಷ-ಆಗ್ರಹ-ಹಠಾಗ್ರಹ ಅಥವಾ ದುರಾಗ್ರಹ ಆಗುವದು, ಆ ಜೀವದ ಸಲುವಾಗಿ ಎಲ್ಲರೊಂದಿಗೆ ಮೈತ್ರಿ ಮಾಡುವದು ಅಸಂಭವವೇ ಆಗುವದು. ಏಕೆಂದರೆ ಆ ಜೀವನಿಗೆ ತನ್ನ ಪರಕೀಯತನ ಮತ್ತು ಒಳಿತೆನಿಸುವಿಕೆ - ಒಳಿತೆನಿಸದೇ ಇರುವದು ಈ ತೀವ್ರ ಭಾವ ಉಂಟಾಗುವದರಿಂದ ಆ ಜೀವವು ಎಲ್ಲ ಜೀವಗಳನ್ನು ತನ್ನ ಮಿತ್ರನೆಂದು ತಿಳಿಯುವದೇ ಇಲ್ಲ. ಆ ಜೀವವು ತನ್ನ ಸಂಪ್ರದಾಯದವರಿಂದ ಬಹಳ ಪ್ರೇಮ ಮಾಡುವನು. ಆದರೆ ಉಳಿದವರಿಂದ ಅಷ್ಟೇ ತಿರಸ್ಕಾರದ ಭಾವ ಮಾಡುತ್ತಾನೆ. ಇಂತಹ ಭಾವನೆಯು ಅಧ್ಯಾತ್ಮದ ಘಾತಕವಾಗುವದರಿಂದಲೇ ಜ್ಞಾನಿಗಳು ಮತ, ಪಂಥ, ಸಂಪ್ರದಾಯಗಳ ಪಕ್ಷ, ಆಗ್ರಹ, ಹಠಾಗ್ರಹ ಅಥವಾ ದುರಾಗ್ರಹ ಸೇವನೆ ಮಾಡುವದನ್ನು ನಿಷೇಧ ಮಾಡಿದ್ದಾರೆ. ಆದರೂ ಸಹ ಒಂದು ವೇಳೆ ಯಾವದೋ ಜೀವ ಒಂದು ಸಂಪ್ರದಾಯ ವಿಶೇಷದ ಆಗ್ರಹ ಇಟ್ಟುಕೊಂಡು ಅದೇ ಸಂಪ್ರದಾಯ ವಿಶೇಷದಲ್ಲಿ ಸಮ್ಯಗ್ದರ್ಶನವಿದೆ. ಹೀಗೆ ಮನ್ನಿಸಿಕೊಂಡು ಆಧ್ಯಾತ್ಮ ಮಾರ್ಗದಲ್ಲಿ ಮುಂದುವರಿಯಲು ಬಯಸುತ್ತಾನೆ. ಆದರೆ ಇದು ಆ ಜೀವದ ಬಹಳ ದೊಡ್ಡ

ತಪ್ಪು ಆಗುತ್ತದೆ ಮತ್ತು ಅವನಿಗೆ ಆಧ್ಯಾತ್ಮ ಮಾರ್ಗವು ದೂರ ಉಳಿಯುವದು ಹಾಗೂ ಸಂಸಾರದಲ್ಲಿಯೂ ಶಾಂತಿ ಮತ್ತು ಪ್ರಸನ್ನತೆಯು ದೊರೆಯುವದು ಮತ್ತು ಇದರಲ್ಲಿಯೇ ಸ್ಥಿರವಿರುವದು ಬಹಳ ಕಠಿಣವಾಗುವದು.

**೨. ಪ್ರಮೋದ ಭಾವ :** ಗುಣ ಮತ್ತು ಗುಣವಂತರ ಕುರಿತು ಕನಿಕರಭಾವ, ಪಂಚಪರಮೇಷ್ಠಿಗಳ ಕುರಿತು ಭಕ್ತಿ, ಎಲ್ಲ ಉಪಕಾರಿ ಹಾಗೂ ಗುಣವಂತರ ಕುರಿತು, ಗುಣಗಳ ಕುರಿತು ಪ್ರಮೋದಾಭಾವದಿಂದ ಇರುವದು ಹಾಗೂ ಸಂತೋಷ ಭಾವದಿಂದ ಇರುವದು ನಮ್ಮ ಆ ಗುಣಗಳು ಅರಳುವದು ಸುಲಭವಾಗುತ್ತದೆ. ಪ್ರಕೃತಿಯ ವ್ಯವಸ್ಥೆಯು ಹೀಗೆಯೇ ಇದೆ, ಹೇಗೆಂದರೆ ನಮಗೆ ಗುಣಗಳ ಕುರಿತು ಆದರ ಭಾವವಾಗುವದರಿಂದ ನಮ್ಮ ಒಳಗೆ ಆ ಗುಣಗಳು ಪ್ರಕಟವಾಗುತ್ತವೆ ಮತ್ತು ನಮಗೆ ಆ ಜೀವಗಳ ಕುರಿತು ಎಂದೂ ಈರ್ಷಾಭಾವ ಬರುವದಿಲ್ಲ. ಎಲ್ಲ ಜೀವಗಳಲ್ಲಿ ಒಂದಲ್ಲ, ಒಂದು ಉತ್ತಮ ಗುಣ ಅವಶ್ಯವಾಗಿ ಇದ್ದೇ ಇರುತ್ತವೆ. ನಮ್ಮ ದೃಷ್ಟಿ ನಮಗೆ ಆ ಉತ್ತಮ ಗುಣಗಳ ಕುರಿತು ಶ್ರದ್ಧೆ ಇಟ್ಟಿರಬೇಕು. ಇನ್ನೊಬ್ಬರ ದುರ್ಗುಣಗಳ ಬಗ್ಗೆ ದೃಷ್ಟಿ ಇಡಬಾರದು. ಯಾವಾಗ ನಾವು ಯಾರಿಗಾದರೂ ನೆನಪಿಸಿಕೊಂಡೆವು, ಆಗ ನಮಗೆ ಅವನ ಉತ್ತಮ ಗುಣಗಳೇ ನೆನಪಿಗೆ ಬರಬೇಕು. ದುರ್ಗುಣಗಳಲ್ಲ. ಇದರಿಂದ ನಮ್ಮ ಮನಸ್ಸಿನಲ್ಲಿ ಯಾವದೇ ಜೀವದ ಕುರಿತು ತುಚ್ಛತನದ ಭಾವ ಬರುವದಿಲ್ಲ ಮತ್ತು ನಾವು ಪಾಪಬಂಧದಿಂದಲೂ ಸಹ ಉಳಿದುಕೊಳ್ಳುತ್ತೇವೆ. ನಮ್ಮ ಮನಸ್ಸು ಪ್ರಸನ್ನವಾಗಿರುವದು. ಆದರೆ ಯಾವ ಜೀವಿಗೆ ಮತ-ಪಂಥ-ಸಂಪ್ರದಾಯದ ಪಕ್ಷ, ಆಗ್ರಹ, ಹಠಾಗ್ರಹ ಅಥವಾ ದುರಾಗ್ರಹವಾದರೆ ಎಲ್ಲ ಜೀವಗಳ ಕುರಿತು ಅವನಲ್ಲಿ ಪ್ರಮೋದಭಾವ ಮಾಡುವದು ಅಸಂಭವವೇ ಆಗುವದು. ಏಕೆಂದರೆ ಆ ಜೀವಕ್ಕೆ ಒಳ್ಳೆಯದು, ಕೆಟ್ಟದ್ದು ತಿಳಿಯುವದೇ ಇಲ್ಲ. ತೀವ್ರ ಭಾವ ಉಂಟಾಗುವದು. ಎಲ್ಲ ಜೀವಗಳ ಗುಣಗಳಿಂದ ಪ್ರಮುದ್ರಿತವಾಗಲಾರದು. ಆ ಜೀವವು ತನ್ನ ಸಂಪ್ರದಾಯದವರ ಗುಣಗಳಿಂದ ಬಹುಶಃ ಪ್ರಮೋದಭಾವ ಮಾಡುತ್ತದೆ. ಆದರೆ ಬೇರೆಯವರ ಅವಗುಣಗಳನ್ನು ನೋಡುತ್ತ ಇದ್ದರೆ ಮತ್ತು ಆ ಅವಗುಣಗಳನ್ನು ಸಹ ಪ್ರಕಾಶಿತಗೊಳಿಸುತ್ತ ಇರುವದು. ಇಂಥ ಭಾವ ಅಧ್ಯಾತ್ಮದ ಸಲುವಾಗಿ ಘಾತಕವಾಗಿರುವದು. ಆದುದರಿಂದಲೇ ಜ್ಞಾನಿಗಳು ಮತ-ಪಂಥ-ಸಂಪ್ರದಾಯದ ಪಕ್ಷ, ಆಗ್ರಹ, ಹಠಾಗ್ರಹ ಅಥವಾ ದುರಾಗ್ರಹದ ಸೇವನೆ ಮಾಡುವದನ್ನು ತಡೆದಿರುವದು. ಆದರೂ ಸಹ ಹೀಗೆ ಮಾಡಿದರೆ ಯಾವದೇ ಜೀವ ಒಂದು ಸಂಪ್ರದಾಯ ವಿಶೇಷ ಆಗ್ರಹವಿಟ್ಟುಕೊಂಡು ಅದೇ ಸಂಪ್ರದಾಯ ವಿಶೇಷದಲ್ಲಿ ಸಮ್ಯಗ್ದರ್ಶನವಿದೆ ಹೀಗೆ ಮನ್ನಿಸಿ ಆಧ್ಯಾತ್ಮ ಮಾರ್ಗದಲ್ಲಿ ಮುಂದುವರಿಯಲು ಬಯಸುತ್ತಾರೆ. ಇದು ಆ ಜೀವದ ದೊಡ್ಡ ತಪ್ಪು ಆಗುವದು ಮತ್ತು ಅವನಿಗೆ ಆಧ್ಯಾತ್ಮ ಮಾರ್ಗವು ಬಹಳ ದೂರವಿದ್ದು ಸಂಸಾರದಲ್ಲಿಯೂ ಸಹ ಶಾಂತಿ ಮತ್ತು ಪ್ರಸನ್ನತೆಗಳು ಸಿಗುವದು ಮತ್ತು ಸ್ಥಿರವಾಗಿ ಉಳಿಯುವದು ಬಹಳ ಕಠಿಣವಿದೆ.

**೩. ಕರುಣಾ ಭಾವ :** ಇದು ಆಧ್ಯಾತ್ಮಿಕ ದಯೆಯಾಗಿದೆ. ಅಧರ್ಮಿ ಜೀವಗಳು ವಿಪರೀತ ಧರ್ಮೀ–ಜೀವಗಳು, ಅನಾರ್ಯರು, ದೀನದುಃಖಿ ಜೀವಿಗಳು ಇವರೆಲ್ಲರ ಕುರಿತು ಕರುಣಾಭಾವ ತೋರಿಸಬೇಕು. ಈ ಹುಂಡಾವಸರ್ಪಿಣಿ ಪಂಚಮಕಾಲದಲ್ಲಿ ಜೈನಸಮಾಜದಲ್ಲಿಯೂ ಸಹ ಎಷ್ಟೋ ಕೆಟ್ಟ ಸಂಗತಿಗಳು ಪ್ರವೇಶವಾಗಿವೆ. ಇನ್ನು ಉಳಿದ ಧರ್ಮಗಳದಂತೂ ಏನು ಹೇಳುವದು. ಆ ಕೆಟ್ಟ ಸಂಗತಿಗಳನ್ನು ಹಬ್ಬಿಸುವವರ ಕುರಿತು ಮತ್ತು ಅವರ ಅನುಯಾಯಿಗಳ ಕುರಿತು ನಮಗೆ ಸಿಟ್ಟು ಅಥವಾ ದ್ವೇಷ ಮಾಡುವದು ಯೋಗ್ಯವಲ್ಲ. ಆದರೆ ಕರುಣಾಭಾವ ಇಡುವದು ಯೋಗ್ಯವಾಗಿದೆ. ಇದರಿಂದ ನಮ್ಮ ಪ್ರಸನ್ನತೆಯು ಅಖಂಡವಾಗಿಯೇ ಉಳಿಯುವದು ಮತ್ತು ನಾವು ಪಾಪಬಂಧದಿಂದಲೂ ಸಹ ಉಳಿದುಕೊಳ್ಳುತ್ತೇವೆ. ಆದರೆ ಯಾವ ಜೀವಕ್ಕೆ ಮತ–ಪಂಥ–ಸಂಪ್ರದಾಯ ಪಕ್ಷ, ಆಗ್ರಹ, ಹಠಾಗ್ರಹ ಮತ್ತು ದುರಾಗ್ರಹ ಆಗುವದು ಆ ಜೀವದ ಸಲುವಾಗಿ ಎಲ್ಲ ಜೀವಗಳ ಕುರಿತು ಕರುಣೆ ಇಡುವದು ಅಸಂಭವವೇ ಆಗುವದು. ಏಕೆಂದರೆ ಆ ಜೀವಕ್ಕೆ ತನ್ನ ಪರತಂತ್ರತನ ಮತ್ತು ಉತ್ತಮ ಉತ್ತಮವಲ್ಲದ ಇವುಗಳಿಂದ ತೀವ್ರ ಭಾವವಾಗುವದರಿಂದ ಆ ಜೀವವು ಎಲ್ಲ ಜೀವಗಳ ಕುರಿತು ಕರುಣಾಬುದ್ಧಿ ಇಡಲಾರದು. ತನ್ನ ಸಂಪ್ರದಾಯದವರ ಮೇಲೆ ಕರುಣೆ ಮಾಡುವದು. ಆದರೆ ಉಳಿದವರ ಸಲುವಾಗಿ ತಿರಸ್ಕಾರ, ಸಿಟ್ಟು ಮತ್ತು ತುಚ್ಛತನದ ಭಾವ ಮಾಡುವದು. ಇಂಥ ಭಾವವು ಆಧ್ಯಾತ್ಮಿಕದ ಘಾತಕವಾಗಿರುವದರಿಂದ ಜ್ಞಾನಿಗಳು ಮತ, ಪಂಥ, ಆಗ್ರಹಾದಿಗಳನ್ನು ಮಾಡುವದನ್ನು ತಡೆಹಿಡಿದಿದ್ದಾರೆ. ಆದರೂ ಸಹ ಯಾವದೇ ಜೀವವು ಒಂದು ಸಂಪ್ರದಾಯ ವಿಶೇಷದ ಆಗ್ರಹ ಇಟ್ಟುಕೊಂಡು ಅದೇ ಸಂಪ್ರದಾಯ ವಿಶೇಷದಲ್ಲಿ ಸಮ್ಯಗ್ದರ್ಶನ ಇದೆ. ಹೀಗೆ ಮನ್ನಿಸಿಕೊಂಡು ಆಧ್ಯಾತ್ಮ ಮಾರ್ಗದಲ್ಲಿ ಮುಂದುವರಿಯಲು ಬಯಸಿದರೆ ಇದು ಸಹ ಆ ಜೀವದ ದೊಡ್ಡ ತಪ್ಪಾಗುತ್ತದೆ ಮತ್ತು ಅವನಿಗೆ ಆಧ್ಯಾತ್ಮ ಮಾರ್ಗವು ಬಹಳ ದೂರವಾಗುವದು ಮತ್ತು ಸಂಸಾರದಲ್ಲಿ ಶಾಂತಿ ಮತ್ತು ಪ್ರಸನ್ನತೆ ದೊರೆಯುವದು ಮತ್ತು ಸ್ಥಿರವಾಗಿರುವದು ಬಹಳ ಕಠಿಣವಿದೆ.

**೪. ಮಾಧ್ಯಸ್ಥಭಾವ :** ಆಧ್ಯಾತ್ಮಿಕವಾಗಿ ಅಭಿಪ್ರಾಯಪೂರ್ವಕ ಉದಾಸೀನತೆಯಿಂದ ಇರಬೇಕು. ಎಲ್ಲ ಜೀವಗಳ ಕುರಿತು ಪರಮಕಲ್ಯಾಣಮಯ ಮೈತ್ರಿಭಾವದಿಂದ ಇರಬೇಕು. ಈ ಭಾವವು ಎಲ್ಲರನ್ನು ಒಂದಾಗಿಸುತ್ತದೆ. ಆದರೆ ಯಾರನ್ನು ನಾವು ನಮ್ಮ ವೈರಿಗಳೆಂದು ಮನ್ನಿಸುತ್ತೇವೆ. ಆ ಜನರು ನಮ್ಮ ಜೊತೆಗೆ ಸ್ವಲ್ಪವೇ ತಪ್ಪು ವ್ಯವಹಾರ ಮಾಡುತ್ತಾರೆ. ಆಗ ನಮಗೆ ಅವರ ಕುರಿತು ಕ್ರೋಧ ಅಥವಾ ದ್ವೇಷ ಮಾಡದೇ ಅವರ ಕುರಿತು ಉಪೇಕ್ಷಾಭಾವ ಅಂದರೆ ಮಾಧ್ಯಸ್ಥಭಾವ ಭಾವಿಸಬೇಕು. ಜೊತೆಗೆ ಮುಂದೆ ನಾವು ಅವರಿಗೆ ಧನ್ಯವಾದ, ಸುಸ್ವಾಗತ ಹೇಳಬೇಕು. ಈ ಭಾವವು ನಮ್ಮನ್ನು ಒಂದಾಗಿಸುತ್ತದೆ. ಅದರಿಂದ ನಾವು ಅಪಮಾನ ಮುಂತಾದವುಗಳನ್ನು ನಮ್ಮ ಮಾಧ್ಯಸ್ಥ ಭಾವದಲ್ಲಿ ಉಪಯೋಗ ಮಾಡಿದರೆ ಮತ್ತು ನಾವು ಕರ್ಮಗಳ ದುಷ್ಟ ಚಕ್ರದಿಂದಲೂ ಸಹ ಉಳಿದುಕೊಳ್ಳುತ್ತೇವೆ. ಆದರೆ

ಯಾವ ಜೀವಕ್ಕೆ ಮತ, ಪಂಥ ಮುಂತಾದ ದುರಾಗ್ರಹಗಳು ಆಗುವವೋ ಆ ಜೀವದ ಸಲುವಾಗಿ ಮಾಧ್ಯಸ್ಥಭಾವ ಇಡುವದು ಅಸಂಭವವೇ ಆಗುವದು. ಏಕೆಂದರೆ ಆ ಜೀವಕ್ಕೆ ತನ್ನ ಪರತಂತ್ರತನ ಮತ್ತು ಪಸಂದ ಹಾಗೂ ನಾಪಸಂದದ ತೀವ್ರ ಭಾವ ಆಗುವದರಿಂದ ಆ ಜೀವವು ವೈರಿಜೀವಗಳ ಕುರಿತು ಮಾಧ್ಯಸ್ಥ ಬುದ್ಧಿ ಇಟ್ಟುಕೊಳ್ಳಲು ಸಾಧ್ಯವಾಗುವದಿಲ್ಲ. ಆ ಜೀವವು ತನ್ನ ಸಂಪ್ರದಾಯ ಉಳ್ಳವರ ಮೇಲೆ ಮಾಧ್ಯಸ್ಥಭಾವ ಮಾಡುವದು. ಆದರೆ ಉಳಿದವರ ಸಲುವಾಗಿ ಅವನು ತಿರಸ್ಕಾರ, ಸಿಟ್ಟು, ತುಚ್ಛತನದ ಭಾವ ಮಾಡುವನು. ಇಂಥ ಭಾವವು ಅಧ್ಯಾತ್ಮದ ಘಾತಕ ಆಗಿರುವದರಿಂದಲೇ ಜ್ಞಾನಿಗಳು ಮತ-ಪಂಥಾದಿಗಳನ್ನು ತಡೆದಿದ್ದಾರೆ. ಆದರೂ ಸಹ ಯಾವದೇ ಜೀವ ಒಂದು ಸಂಪ್ರದಾಯದ ವಿಶೇಷ ಆಗ್ರಹ ಇಟ್ಟುಕೊಂಡು ಅದೇ ಸಂಪ್ರದಾಯ ವಿಶೇಷದಲ್ಲಿ ಸಮ್ಯಗ್ದರ್ಶನವಿದೆ ಎಂದು ಮನ್ನಿಸಿಕೊಂಡು ಆಧ್ಯಾತ್ಮ ಮಾರ್ಗದಲ್ಲಿ ಮುಂದುವರಿಯಲು ಬಯಸುತ್ತಾನೆ. ಆದರೆ ಇದು ಆ ಜೀವದ ಬಹಳ ದೊಡ್ಡ ತಪ್ಪು ಆಗುವದು ಮತ್ತು ಅವನಿಗೆ ಆಧ್ಯಾತ್ಮ ಮಾರ್ಗವಂತೂ ದೂರ ಉಳಿಯಿತು. ಸಂಸಾರದಲ್ಲಿಯೂ ಸಹ ಶಾಂತಿ ಮತ್ತು ಪ್ರಸನ್ನತೆಯು ದೊರೆಯುವದು, ಸ್ಥಿರವಾಗಿರುವದು ಬಹಳ ಕಠಿಣವಾಗುವದು.

ಅನಾದಿಯಿಂದ ನಾವು ದುಃಖಗಳ ಪ್ರತೀಕಾರ ಮಾಡುವದನ್ನೇ ಕಲಿತಿದ್ದೇವೆ. ಅವುಗಳನ್ನು ಸ್ವೀಕಾರ ಮಾಡುವದನ್ನು ಎಂದೂ ಕಲಿತೇ ಇಲ್ಲ. ಆಗ ಆ ದುಃಖಗಳ ಸ್ವಾಗತ ಮಾಡುವದಂತೂ ಬಹಳ ದೂರದ ಮಾತು ಇದೆ. ಆದ್ದರಿಂದ ಕೆಳಗೆ ಬರೆದ ಸ್ವಾಗತ ಮಾಡುವ ರೀತಿಯಿಂದ ನಾವು ಆ ದುಃಖಗಳ ಸರ್ವೋತ್ಕೃಷ್ಟ ಸಕಾರಾತ್ಮಕ ಪದ್ಧತಿಯಿಂದ ಎದುರಿಸಿ ಆ ದುಃಖಗಳ ದುಷ್ಟ ಚಕ್ರದಿಂದ ಮುಕ್ತಿ ಪಡೆಯಬಹುದಾಗಿದೆ. ಈ ಪದ್ಧತಿಯನ್ನು ಹಸ್ತಗತ ಮಾಡುವ ಸಲುವಾಗಿ ಕೆಳಗೆ ಬರೆದ 'ಧನ್ಯವಾದ ! ಸ್ವಾಗತ ! (Thank you ! Welcome) (ಇದನ್ನು ದಿನದಲ್ಲಿ ಕಡಿಮೆಯೆಂದರೂ ಹತ್ತು ಸಲವಾದರೂ ಓದಿ, ಮನಸ್ಸಿನಲ್ಲಿ ರೂಢಿಸಿಕೊಳ್ಳುವದು ಅವಶ್ಯಕವಿದೆ. ಏಕೆಂದರೆ ಜೀವಗಳ ಪ್ರತಿಕ್ರಿಯೆಯು ತಾತ್ಕಾಲಿಕವಾಗಿರುತ್ತದೆ. ಪ್ರತಿಕ್ರಿಯೆಯ ಸಲುವಾಗಿ ವಿಚಾರಿಸಲು ಹೆಚ್ಚು ಸಮಯ ಸಿಗುವದಿಲ್ಲ. ಆತ್ಮನಲ್ಲಿ ಇರುವಂಥ ಮೊದಲೇ ನಿರ್ಧರಿಸಲ್ಪಟ್ಟ ಸಂಸ್ಕಾರದ ಅನುಸಾರವೇ ತಾತ್ಕಾಲಿಕ ಪ್ರಕ್ರಿಯೆ ಆಗುತ್ತದೆ. ಅದನ್ನು ಬದಲಿಸುವ ಸಲುವಾಗಿ ಕೆಳಗೆ ಬರೆದ 'ಧನ್ಯವಾದ ! ಸ್ವಾಗತ ! ಗಳನ್ನು ದಿನದಲ್ಲಿ ಹತ್ತಾರು ಸಲ ಹೇಳಿ ಮನಸ್ಸಿನಲ್ಲಿ ಗಟ್ಟಿಗೊಳಿಸಬೇಕು. ಆಗ ಸಾವಕಾಶವಾಗಿ ಯಾವ ಸಿಟ್ಟು ಮೊದಲು ವರ್ಷ / ತಿಂಗಳುಗಳ ಕಾಲ ಇರುತ್ತಿತ್ತು. ಅದು ಈಗ ಒಂದೇ ದಿನದಲ್ಲಿಯೇ ಸಮಾಪ್ತವಾಗುತ್ತದೆ. ಮುಂದೆ ಮುಂದೆ ಬರೆದ 'ಧನ್ಯವಾದ ! ಸ್ವಾಗತ ! ದ ಅಭ್ಯಾಸ ಎಷ್ಟು ಗಹನವಾಗುತ್ತದೆಯೋ ಅಷ್ಟಷ್ಟು ಮನಸ್ಸಿನ ರೋಷಯುಕ್ತ ಕಾಲ ಕಡಿಮೆ ಆಗುತ್ತ ಹೋಗುವದು. ಒಂದು ದಿವಸ ಹೀಗೂ ಬರುವದು. ಹೇಗೆಂದರೆ ಮನಸ್ಸಿನಲ್ಲಿ ಸಿಟ್ಟು ಅಥವಾ ದ್ವೇಷದ ಜನ್ಮವೇ ಆಗುವದಿಲ್ಲ. ಇದಕ್ಕೇನೇ ನಮ್ಮ ಲಕ್ಷ್ಯವಾಗಬೇಕು. ಈ ಪದ್ಧತಿಯಿಂದ

ನಾವು ದುಃಖದ ದುಷ್ಟಚಕ್ರದಿಂದ ಉಳಿದುಕೊಳ್ಳುತ್ತೇವೆ ಮತ್ತು ನಮ್ಮ ಪ್ರಸನ್ನತೆಯನ್ನು ಸಹಪೂರ್ಣ ಇಟ್ಟುಕೊಳ್ಳಬಹುದಾಗಿದೆ. 'ಧನ್ಯವಾದ ! ಸ್ವಾಗತ !

ಒಂದು ಮಾತಂತೂ ನಿಶ್ಚಿತವಿದೆ. ನಮಗೆ ಯಾವದೇ ದುಃಖ ಬರುತ್ತದೆ ಎಂದರೆ ಅದರಲ್ಲಿಯ ದೋಷವು ನಮ್ಮ ಪೂರ್ವಪಾಪಗಳದೇ ಇರುತ್ತದೆ. ಅವರಂತೂ ಕೇವಲ ನಿಮಿತ್ತವೇ ಇರುತ್ತಾರೆ. ಅದರಲ್ಲಿ ಅವರದು ಸ್ವಲ್ಪವೂ ದೋಷ ಇರುವದಿಲ್ಲ ಎಂದು ತಿಳಿಯಬೇಕು. ಅವರು ನಮ್ಮನ್ನು ಪಾಪದಿಂದ ಬಿಡಿಸುವವರಿದ್ದಾರೆ. ಆದಾಗ್ಯೂ ಹೀಗೆ ತಿಳಿಯದೇ ನಿಮಗೆ ನಿಮಿತ್ತದ ಕುರಿತು ಸ್ವಲ್ಪವೂ ಸಹ ಕ್ರೋಧ ಬಂದರೆ ಮತ್ತೆ ತಮಗೆ ಹೊಸ ಪಾಪದ ಬಂಧವಾಗುತ್ತದೆ. ಹೇಗೆಂದರೆ ಈ ಕಷಾಯವು ಭವಿಷ್ಯದ ದುಃಖಗಳ ಜನಕ (ಕಾರಣ) ಆಗುತ್ತದೆ. ಇದೇ ಪ್ರಕಾರ ಅನಾದಿಯಿಂದ ನಾವು ದುಃಖವನ್ನು ಭೋಗಿಸುತ್ತ, ಹೊಸ ದುಃಖಗಳನ್ನು ಸೃಷ್ಟಿಸುತ್ತ ಬರುತ್ತಿದ್ದೇವೆ. ಇನ್ನೂ ಸಹ ಮಾಡುತ್ತಿದ್ದೇವೆ. ಆದ್ದರಿಂದ ಇಂತಹ ಅನಂತ ದುಃಖಗಳಿಂದ ಬಿಡುಗಡೆಯ ಸಲುವಾಗಿ ಒಂದೇ ಮಾರ್ಗವಿದೆ ಏನಂದರೆ ದುಃಖದ ನಿಮಿತ್ತವನ್ನು ನಾನು ಉಪಕಾರಿ ಎಂದು ಮನ್ನಿಸುತ್ತೇನೆ. ಏಕೆಂದರೆ ಅವನು ನನ್ನನ್ನು ನನ್ನ ಪಾಪದಿಂದ ಬಿಡಿಸುವಲ್ಲಿ ನಿಮಿತ್ತವಾಗಿದ್ದಾನೆ. ಆ ನಿಮಿತ್ತದ ಕುರಿತು ಸ್ವಲ್ಪವೂ ದೋಷ, ಅಪರಾಧ ಚಿಂತನೆ ಮಾಡಬಾರದು. ಆದರೆ ನಮ್ಮ ಮೊದಲಿನ ಪಾಪವೇ ಅಂದರೆ ನಮ್ಮ ಮೊದಲಿನ ದುಷ್ಟ ಕಾರ್ಯವೇ ವರ್ತಮಾನ ದುಃಖದ ಕಾರಣ ಇದೆ. ಆದ್ದರಿಂದ ದುಃಖದ ಸಮಯ ಹೇಗೆ ಚಿಂತನೆ ಮಾಡಬೇಕು ಎಂಬ ಬಗ್ಗೆ ಕೆಲವು ಉದಾಹರಣೆಗಳನ್ನು ನೋಡೋಣ.

೧. ಯಾವನಾದರೂ ದುಷ್ಟ ಕಾರ್ಯ ಮಾಡುವದನ್ನು ನಾವು ನೋಡಿದಾಗ ನಾನು ಹೀಗೆ ವಿಚಾರಿಸಬೇಕು. "ಓಹೋ ! ನಾನೂ ಸಹ ಇಂಥ ದುಷ್ಟ ಕಾರ್ಯ ಹಿಂದೆ ಮಾಡಿರಬಹುದು. ನನಗೆ ಧಿಕ್ಕಾರವಿದೆ. ಆ ದುಷ್ಕೃತ್ಯದ ಸಲುವಾಗಿ ಮಿಚ್ಛಾಮಿ ದುಕ್ಕಡಂ ! ಉತ್ತಮ ಕ್ಷಮಾ ಎಂದು ಹೇಳಬೇಕು. ಇದು ಪ್ರತಿಕ್ರಮಣವಾಯಿತು.

ಇನ್ನು ಮುಂದೆ ಇಂಥ ದುಷ್ಟ ಕಾರ್ಯ ನಾನು ಎಂದೂ ಮಾಡುವದಿಲ್ಲ ಎಂದು ನಿರ್ಧರಿಸಬೇಕು. (ಇದು ಪ್ರತ್ಯಾಖ್ಯಾನವಾಯಿತು.)

೨. ಯಾವನಾದರೂ ಪಾಪ ವಿಚಾರ ಮಾಡುವದನ್ನು ಇನ್ನೊಬ್ಬರ ಕುರಿತು ಆಲೋಚನೆ, ನಿಂದೆ ಮಾಡುತ್ತಿರುವದನ್ನು ನಾವು ನೋಡಿದೆವೆಂದರೆ ಆಗ ನಾನು ಹೀಗೆ ವಿಚಾರಿಸಬೇಕು. "ಓಹೋ ! ನಾನು ಸಹ ಹಿಂದೆ ಹೀಗೆಯೇ ಇನ್ನೊಬ್ಬರ ಬಗ್ಗೆ, ದುಷ್ಕೃತ್ಯಗಳ ಬಗ್ಗೆ ಅನೇಕ ಸಲ ವಿಚಾರಿಸಿರಬೇಕು, ಮಾತನಾಡಿರಬೇಕು. ಅದಕ್ಕಾಗಿ ನನಗೆ ಧಿಕ್ಕಾರವಿದೆ. ಇಂತಹ ದುಷ್ಟ ವಿಚಾರ ಮಾಡಿದ್ದರ ಸಲುವಾಗಿ ಮಿಚ್ಛಾಮಿ ದುಕ್ಕಡಂ ! ಉತ್ತಮ ಕ್ಷಮಾ ! ಹೇಳಬೇಕು. ಇದರ ನಂತರ ಇಂತಹ ದುಷ್ಟ ಕಾರ್ಯಗಳನ್ನು ಎಂದೂ ವಿಚಾರಿಸುವದಿಲ್ಲ ಎಂದು ನಿರ್ಧರಿಸಬೇಕು. ಇವೆರಡೂ ಪ್ರತಿಕ್ರಮಣ, ಪ್ರತ್ಯಾಖ್ಯಾನ ಮಾಡಬೇಕು.

೩. ಒಂದು ವೇಳೆ ಯಾರಾದರೂ ತಪ್ಪು ಕಾರ್ಯ ಮಾಡುತ್ತಿದ್ದರೆ ಪತ್ರಿಕೆಯ ಮೂಲಕ ತಿಳಿದುಬಂದರೆ ಅಥವಾ ಬೇರೆಯವರಿಂದ ಕೇಳಿದ್ದರೆ ಆಗ ನಾನು ಹೀಗೆ ವಿಚಾರಿಸಬೇಕು. "ಓಹೋ ! ನಾನೂ ಸಹ ಇಂಥ ತಪ್ಪು ಕಾರ್ಯಗಳನ್ನು ಅನೇಕ ಸಲ ಹಿಂದೆ ಮಾಡಿರಬಹುದು. ನನಗೆ ಧಿಕ್ಕಾರವಿದೆ. ಇಂತಹ ದುಷ್ಟಕಾರ್ಯದ ಸಲುವಾಗಿ ಮಿಚ್ಛಾಮಿ ದುಕ್ಕಡಂ ! ಉತ್ತಮ ಕ್ಷಮಾ ! ಹೇಳಬೇಕು. ಇದರ ನಂತರ ಇಂತಹ ತಪ್ಪು ಕಾರ್ಯಗಳನ್ನು ನಾನು ಮುಂದೆ ಎಂದೂ ಮಾಡುವದಿಲ್ಲ ಎಂದು ನಿರ್ಧರಿಸಬೇಕು. (ಇವು ಪ್ರತಿಕ್ರಮಣ ಪ್ರತ್ಯಾಖ್ಯಾನವಾದವು.)

೪. ಯಾವನೋ ಧರ್ಮದ ಹಾಗೂ ಗುರುಗಳ ನಿಂದೆ ಹಾಗೂ ಶ್ರಾವಕರ ನಿಂದೆ ಮಾಡುವದನ್ನು ನಾನು ಕೇಳಿದರೆ ಮತ್ತು ವಿಕೃತ ಧರ್ಮದ ಪ್ರಚಾರ, ಪ್ರಸಾರ ಮಾಡುವದು ಮತ್ತು ಏಕಾಂತ ಧರ್ಮದ ಪ್ರಚಾರ, ಪ್ರಸಾರ ಮಾಡುವದು ತಿಳಿದುಬಂದರೆ ಅಥವಾ ವ್ಯವಹಾರ ಕ್ರಿಯೆಯಲ್ಲಿಯೇ ಧರ್ಮವೆಂದು ಮನ್ನಿಸುವದನ್ನು ಕೇಳಿದರೆ ಪ್ರಸಾರ ಮಾಡುವದು ತಿಳಿದುಬಂದರೆ ಆಗ ಹೀಗೆ ವಿಚಾರಿಸಬೇಕು – "ಓಹೋ ! ನಾನೂ ಹಿಂದೆ ಹೀಗೆಯೇ ಅನೇಕ ಸಲ ಮಾಡಿರಬಹುದು. ಇದೇ ಕಾರಣದಿಂದ ನಾನು ಇಲ್ಲಿಯ ವರೆಗೆ ಈ ಸಂಸಾರದಲ್ಲಿ ಇದ್ದೇನೆ. ನನಗೆ ಧಿಕ್ಕಾರವಿದೆ. ಇಂತಹ ಕರ್ಮಗಳನ್ನು ಮುಂದೆ ಎಂದೂ ಮಾಡುವದಿಲ್ಲ. ಮಾಡಿದ್ದರ ತಪ್ಪಿಗಾಗಿ ಮಿಚ್ಛಾಮಿ ದುಕ್ಕಡಂ ! ಉತ್ತಮ ಕ್ಷಮಾ ! ಭಾವಿಸಬೇಕು. ಇದರ ನಂತರ ನಾನು ಇಂತಹ ತಪ್ಪುಗಳನ್ನು ಮತ್ತು ಜಿನಧರ್ಮದ ವಿರುದ್ಧ ಪ್ರಚಾರ, ಪ್ರಸಾರ ಮಾಡುವದಿಲ್ಲ ಎಂದು ನಿರ್ಧರಿಸಬೇಕು. ಇವು ಪ್ರತಿಕ್ರಮಣ ಪ್ರತ್ಯಾಖ್ಯಾನಗಳಾದವು.

೫. ಯಾವನೋ ಮನುಷ್ಯನು ಬೇರೆ ಮನುಷ್ಯನಿಗೆ ಅಥವಾ ಪಕ್ಷಿ ಅಥವಾ ಪ್ರಾಣಿಗೆ ಹಿಂಸೆ ಕೊಡುವದನ್ನು ನೋಡಿದರೆ ಅಥವಾ ಕೇಳಿದರೆ ಆಗ ಹೀಗೆ ಚಿಂತನೆ ಮಾಡಬೇಕು – "ಓಹೋ ! ನಾನೂ ಸಹ ಹಿಂದೆ ಇಂತಹ ಹಿಂಸಾಕಾರ್ಯಗಳನ್ನು ಅನೇಕ ಸಲ ಮಾಡಿರಬಹುದು ಮತ್ತು ಒಂದು ವೇಳೆ ನಾನು ಈ ಭವದಲ್ಲಿ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಂಡು ಬೇಗನೇ ಸಂಸಾರದಿಂದ ಮುಕ್ತನಾಗದಿದ್ದರೆ ಇಂತಹದನ್ನೇ ಮುಂದೆ ಮತ್ತೆ ಅನೇಕ ಸಲ ಮಾಡಬಹುದು. ನನಗೆ ಧಿಕ್ಕಾರವಿದೆ. ಇಂತಹ ಹಿಂಸೆಯ ಸಲುವಾಗಿ ಮಿಚ್ಛಾಮಿ ದುಕ್ಕಡಂ ! ಉತ್ತಮ ಕ್ಷಮಾ ! ಇಂತಹ ಹಿಂಸೆಯನ್ನು ಮುಂದೆ ಎಂದೂ ಮಾಡುವದಿಲ್ಲ ಎಂದು ನಿರ್ಧರಿಸಬೇಕು. ಇದು ಪ್ರತಿಕ್ರಮಣ ಮತ್ತು ಪ್ರತ್ಯಾಖ್ಯಾನವಾದವು.

೬. ಒಂದು ವೇಳೆ ನಾವು ಯಾವದೇ ಪಾಪಿಯನ್ನು ನೋಡಿದರೆ ಆಗ ಇದನ್ನು ವಿಚಾರಿಸಬೇಕು. "ಓಹೋ ! ನಾನೂ ಸಹ ಇಂತಹ ಪಾಪವನ್ನು ಅನೇಕ ಸಲ ಮಾಡಿರಬಹುದು ಮತ್ತು ಈ ಭವದಲ್ಲಿ ಸಮ್ಯಗ್ದರ್ಶನ ಮಾಡಿಕೊಂಡು ಈ ಸಂಸಾರದಿಂದ ಮುಕ್ತನಾಗದಿದ್ದರೆ ಇಂಥ ಪಾಪ ಕಾರ್ಯಗಳನ್ನು ಮತ್ತೆ ಮಾಡಬಹುದಾಗಿದೆ. ನನಗೆ ಧಿಕ್ಕಾರವಿದೆ. ಇಂಥ ಪಾಪಗಳ ಸಲುವಾಗಿ ಮಿಚ್ಛಾಮಿ

ದುಕ್ಕಡಂ ! ಉತ್ತಮ ಕ್ಷಮಾ ! ಎಂದು ಭಾವಿಸಬೇಕು. ಇದರ ನಂತರ ನಾನು ಇಂತಹ ಪಾಪವನ್ನು ಮುಂದೆ ಎಂದೂ ಮಾಡುವದಿಲ್ಲ ಎಂದು ನಿರ್ಧರಿಸಬೇಕು. ಇದು ಪ್ರತಿಕ್ರಮಣ ಮತ್ತು ಪ್ರತ್ಯಾಖ್ಯಾನವಾದವು.

೭. ಒಂದು ವೇಳೆ ನಾವು ಯಾವದೇ ಹೊಲಸು ಅಥವಾ ಹೊಲಸು ಸ್ಥಳದಲ್ಲಿ ಜನ್ಮವಾಗುವದನ್ನು ತಿಳಿದರೆ ಆಗ ಇದನ್ನು ಚಿಂತನೆ ಮಾಡಬೇಕು.

"ಓಹೋ ! ನಾನೂ ಸಹ ಇಂತಹ ಹೊಲಸಿನಲ್ಲಿಯೇ ಅನೇಕ ಸಲ ಜನ್ಮ ತೆಗೆದುಕೊಂಡಿದ್ದಾಯಿತು ಮತ್ತು ಈ ಭವದಲ್ಲಿ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಂಡು ಬೇಗನೇ ಸಂಸಾರದಿಂದ ಮುಕ್ತನಾಗದಿದ್ದರೆ ಇಂಥ ಹೊಲಸಿನಲ್ಲಿಯೇ ಇನ್ನೂ ಅನೇಕ ಸಲ ಜನ್ಮ ಪಡೆಯಬೇಕಾಗುತ್ತದೆ. ನನಗೆ ಧಿಕ್ಕಾರವಿದೆ. ಇದಕ್ಕಾಗಿ ಮಿಚ್ಛಾಮಿ ದುಕ್ಕಡಂ ! ಉತ್ತಮ ಕ್ಷಮಾ ! ಎಂದು ಭಾವಿಸಬೇಕು. ಇದರ ನಂತರ ನಾನು ಇಂಥ ಹೊಲಸು ಸ್ಥಳದಿಂದ ಜನ್ಮ ಪಡೆಯುವದಿಲ್ಲ ಎಂದು ನಿರ್ಧರಿಸಬೇಕು. ಅದಕ್ಕಾಗಿ ಸಂಸಾರದಿಂದ ಮುಕ್ತನಾಗಬೇಕು ಎಂದು ನಿರ್ಧರಿಸಬೇಕು. ಇವು ಪ್ರತಿಕ್ರಮಣ ಮತ್ತು ಪ್ರತ್ಯಾಖ್ಯಾನವಾದವು.

೮. ನಮಗೆ ಯಾವದೇ ಕಾರಣದಿಂದ ಆರ್ಥಿಕ ಅಥವಾ ಬೇರೆ ಯಾವದೇ ಹಾನಿ ಸಂಭವಿಸಿದರೆ ಆಗ ನಾವು ಇದನ್ನು ಚಿಂತನೆ ಮಾಡಬೇಕು – "ಓಹೋ ! ನಾನೂ ಸಹ ಹಿಂದೆ ಹೀಗೆಯೇ ಯಾರಿಗೋ ಹಾನಿ ಮಾಡಿರಬಹುದು. ನನಗೆ ಧಿಕ್ಕಾರವಿದೆ. ಇಂಥ ಕಾರ್ಯಗಳ ಸಲುವಾಗಿ ಮಿಚ್ಛಾಮಿ ದುಕ್ಕಡಂ ! ಉತ್ತಮ ಕ್ಷಮಾ ! ಇದರ ನಂತರ ನಾನು ಇಂತಹ ಕಾರ್ಯವನ್ನು ಮುಂದೆ ಎಂದೂ ಮಾಡುವದಿಲ್ಲ. ಇನ್ನೊಬ್ಬರದೇನೂ ಹಾನಿಯಾಗಗೊಡುವದಿಲ್ಲ ಎಂದು ನಿರ್ಧರಿಸಬೇಕು. ಇದು ಪ್ರತಿಕ್ರಮಣ ಮತ್ತು ಪ್ರತ್ಯಾಖ್ಯಾನವಾದವು.

೯. ನಮ್ಮ ಆರ್ಥಿಕ ಅಥವಾ ಬೇರೆ ಯಾವದೇ ಹಾನಿ ನಮ್ಮ ಸ್ವಂತದ ಕಾರಣದಿಂದ ಆದರೆ ಆಗ ನಾವು ಅದರ ಕುರಿತು ಹೀಗೆ ಚಿಂತನೆ ಮಾಡಬೇಕು.

"ಓಹೋ ! ಈ ಜನ್ಮದಲ್ಲಿ ಗಳಿಸಿದ ನನ್ನ ಸಂಪತ್ತು ಅಥವಾ ಬೇರೆ ಯಾವದೇ ವಸ್ತು ನನ್ನ ಹಿಂದಿನ ಕರ್ಮಗಳ ಪಾಲನ್ನು ತೀರಿಸುವಲ್ಲಿ ಹೋಗಿರುವದು ಹೇಗೆಂದರೆ ನಾವು ಯಾರಿಂದಲಾದರೂ ಸಾಲ ತೆಗೆದುಕೊಳ್ಳುತ್ತೇವೆ ಮತ್ತು ಯಾವಾಗ ಅದನ್ನು ಮರಳಿ ಜಮೆ ಮಾಡುತ್ತೇವೆ. ಆಗ ನಮಗೆ ಸಾಲದಿಂದ ಮುಕ್ತರಾದೆವು ಎಂದು ಸಮಾಧಾನವಾಗುತ್ತದೆ. ಇದೂ ಸಹ ನಮ್ಮ ಹಿಂದಿನ ಎಷ್ಟೋ ಜನ್ಮದಲ್ಲಿ ತೆಗೆದುಕೊಂಡ ಸಾಲವೇ ಇದೆ. ಅದು ಈಗ ಮುಟ್ಟಿರಬಹುದು ಎಂದು ಸಮಾಧಾನ ತಾಳಬೇಕು.

5

೧೦. ಇನ್ನೊಬ್ಬರಿಂದ ಧರ್ಮದ, ಗುರುಗಳ, ಹಿರಿಯರ ಇತರರ ನಿಂದೆಯಾಗುತ್ತಿದ್ದರೆ ಪಾಪ ಕಾರ್ಯ, ಭಾವನೆ ಆಗುತ್ತಿದ್ದರೆ ನಾವು ಸಮತಾಭಾವ ಧಾರಣ ಮಾಡಬೇಕು ಮತ್ತು ಶಾಂತಿಯಿಂದ ಇರಬೇಕು.

ಇದರ ನಂತರ ಚಿಂತನೆ ಮಾಡಬೇಕು. ನಮಗೆ ಎಂದೂ ಎರಡನೆಯವರ ಕರ್ಮಗಳ ಶಿಕ್ಷೆ ದೊರೆಯುವದಿಲ್ಲ. ಆದ್ದರಿಂದ ಈ ಮಾತು ಭಗವಾನರೇ ಹೇಳಿದ್ದಾರೆ. ಆದ್ದರಿಂದ ಈ ಮಾತು ನಿಶ್ಚಿತವಿದೆ. ಏನಂದರೆ ಅದು ನಾವೇ ತೆಗೆದುಕೊಂಡ ಸಾಲವಿತ್ತು. ಅದನ್ನು ಈಗ ನಾವೇ ಹಾನಿಯ ರೂಪದಲ್ಲಿ ಸಮಾಪ್ತಗೊಳಿಸಿದ್ದೇವೆ. ಇದರಿಂದ ನಾವು ಋಣಮುಕ್ತರಾದೆವೆಂದು ಸಂತೋಷಪಡಬೇಕು.

ನಮ್ಮ ದುಃಖದ ಕಾರಣ, ಪಾಪಭಾವ ಮಾಡುವವರನ್ನು ನೋಡಿ, ತಪ್ಪು ಕಾರ್ಯ ಮಾಡುವವರನ್ನು ನೋಡಿ, ತಪ್ಪು ಮಾನ್ಯತೆಯುಳ್ಳವರನ್ನು ನೋಡಿ, ಹಿಂಸೆ ಮಾಡುವವರನ್ನು ನೋಡಿ, ಪಾಪ ಮಾಡುವಂಥ ಪಾಪಿಯನ್ನು ನೋಡಿ, ಹೊಲಸು ಸ್ಥಳದಲ್ಲಿ ಜನ್ಮ ಪಡೆಯುವದನ್ನು ನೆನಪಿಸಿಕೊಂಡು ನಮಗೆ ಯಾವನಾದರೂ ಹಾನಿ ಮಾಡಿದಾಗ ನಮ್ಮಿಂದಲೇ ನಮಗೆ ಹಾನಿಯಾದಾಗ ಆಗ ತಕ್ಷಣ ಹೀಗೆ ಚಿಂತನೆ ಮಾಡುತ್ತ ನಿರ್ಧಾರ ಮಾಡಬೇಕು.

"ನಮಗಾಗುವಂಥ ದುಃಖ, ಹಾನಿ, ಅನ್ಯಾಯ, ಹಿಂಸೆ, ನಮ್ಮಿಂದಾಗಿರುವ ಪಾಪ ಕಾರ್ಯ, ದುಷ್ಟ ಕಾರ್ಯ ಏನೇ ಆದರೂ ಬೇರೆಯವರಿಗೆ ದೋಷಿ ಎಂದು ಅನ್ನಬಾರದು. ಅಂದರೆ ಆ ಕಾರ್ಯಗಳಿಗೆ ನಿಮಿತ್ತರಾದವರ ಬಗ್ಗೆ ದೋಷಾರೋಪಣೆ ಮಾಡಬಾರದು. ಏಕೆಂದರೆ ಅದು ನಮ್ಮದೇ ಪೂರ್ವಕೃತ ಭಾವಗಳ ಅಂದರೆ ಮೊದಲು ಮಾಡಿದ ನಮ್ಮದೇ ಪಾಪಕರ್ಮದ ಉದಯವೆಂದು ಅಂದರೆ ದೋಷವೆಂದು ತಿಳಿದು ಸುಮ್ಮನಾಗಬೇಕು. ಅವರು ನಮ್ಮನ್ನು ಪಾಪಕರ್ಮಗಳಿಂದ ಬಿಡಿಸುವವರೆಂದು ಮತ್ತು ಉಪಕಾರಿಗಳೆಂದು ತಿಳಿಯಬೇಕು. ಹೊಸ ಪಾಪಗಳಿಂದ ಉಳಿಯಲು ಪ್ರಯತ್ನಿಸಬೇಕು. ಹೀಗೆ ತಿಳಿಯದೇ ಆ ನಿಮಿತ್ತರಾದವರ ಬಗ್ಗೆ ಕ್ರೋಧ, ಮಾಡಿದರೆ ಅದರಿಂದ ಮತ್ತೆ ನಮಗೆ ಪಾಪದ ಬಂಧವಾಗುತ್ತದೆ. ಹೇಗೆಂದರೆ ಈ ಕಷಾಯವು ಭವಿಷ್ಯದ ದುಃಖಗಳ ಜನಕವಾಗಿರುತ್ತದೆ. ಆದ್ದರಿಂದ ಬಂದ ಆಪತ್ತುಗಳನ್ನು ಶಾಂತಿಯಿಂದ ಸಹಿಸಿಕೊಂಡು ಅವುಗಳನ್ನು ಮುಗಿಸಿಬಿಡಬೇಕು. ಇದೇ ಪ್ರಕಾರ ಅನಾದಿಯಿಂದ ನಾವು ದುಃಖವನ್ನು ಭೋಗಿಸುತ್ತ ಹೊಸ ದುಃಖಗಳನ್ನು ಸೃಷ್ಟಿಸಿಕೊಂಡು ಅನುಭವಿಸುತ್ತ ಬಂದಿದ್ದೇವೆ. ಇನ್ನು ಸಹ ಹಾಗೆಯೇ ಮಾಡುತ್ತಿದ್ದೇವೆ. ಇಂತಹ ಅನಂತ ದುಃಖಗಳಿಂದ ಬಿಡುಗಡೆಯ ಸಲುವಾಗಿ ಒಂದೇ ಮಾರ್ಗವಿದೆ. ಏನಂದರೆ ದುಃಖದ ನಿಮಿತ್ತವನ್ನು ನಮ್ಮ ಉಪಕಾರಿ ಎಂದು ಮನ್ನಿಸಬೇಕು. ಏಕೆಂದರೆ ಅವರು ನಮ್ಮನ್ನು ಪಾಪದಿಂದ ಬಿಡಿಸುವಲ್ಲಿ ನಿಮಿತ್ತರಾಗಿದ್ದಾರೆ. ಆ ನಿಮಿತ್ತದ ಕುರಿತು ಅಪರಾಧ, ಚಿಂತನೆ ಮಾಡಬಾರದು. ನಮ್ಮ ಮೊದಲಿನ ಪಾಪವೇ ಅಂದರೆ ದುಷ್ಟಕಾರ್ಯವೇ ವರ್ತಮಾನದ ದುಃಖದ ಕಾರಣವಿದೆ. ಯಾವುದಾದರೂ ಹಾನಿಯಾದರೆ ನಮಗೆ ಹಾನಿಯಾಯಿತೆಂದು ತಿಳಿಯುತ್ತೇವೆ. ಅದು ನಮ್ಮ (ಆತ್ಮನ) ಲಾಭವಿದೆ. ಎಲ್ಲ ಧರ್ಮಗಳ ಎಲ್ಲ ಜೀವಿಗಳ ಬಗ್ಗೆ ಶುಭಭಾವನೆಯನ್ನೇ ಭಾವಿಸಬೇಕು.

ಈ ರೀತಿ ಭಾವಿಸುವದರಿಂದ ಆತ್ಮನ ಪ್ರಕಟವಾಗಿ ಮನಸ್ಸಿನಲ್ಲಿ ಶಾಂತತೆ ಮತ್ತು ಪ್ರಸನ್ನತೆಯಾಗುವದು. ಯಾವಾಗಲೂ ಸಮತಾಭಾವದಿಂದ ಇದ್ದರೆ ಕರ್ಮ ನಿರ್ಜರೆಯಾಗುವದು. ಆದ್ದರಿಂದ ಇನ್ನೊಬ್ಬರ ಕುರಿತು ಸಿಟ್ಟು, ದ್ವೇಷ, ತುಚ್ಛತನ, ನಿಂದಕಭಾವ, ತಿರಸ್ಕಾರ, ಸ್ವಾರ್ಥ ಮುಂತಾದ ಅಶುಭ ಭಾವಗಳನ್ನು ಮಾಡಬಾರದು. ಕೇವಲ ಆತ್ಮೀಯ ಹಾಗೂ ಕರುಣಾಭಾವ ಭಾವಿಸಬೇಕು. ಇದರಿಂದ ಹೊಸ ಕರ್ಮಗಳ ಆಸ್ರವ ಆಗುವದಿಲ್ಲ. ಸಮತಾಭಾವನೆಯಿಂದ ಹಳೆಯ ಕರ್ಮಗಳು ಸಮಾಪ್ತವಾಗುತ್ತವೆ. ಋಣಮುಕ್ತರಾದೆವೆಂದು ಭಾವಿಸಬೇಕು.

ಇಂತಹ ಭಾವನೆಗಳು ಸ್ವಾಗತಕ್ಕೆ ಯೋಗ್ಯವಾಗಿವೆ. ದುಷ್ಟಕರ್ಮ ಚಕ್ರದಿಂದ ಇಲ್ಲಿಯವರೆಗೆ ಮೋಸ ಹೋಗಿದ್ದೇವೆ. ಈಗ ಅದರಿಂದ ಹೊರಬರಲು ಪವಿತ್ರ ಪುರುಷಾರ್ಥ ಮಾಡಬೇಕು. ಇದರಲ್ಲಿ ನಮ್ಮ ಆತ್ಮನ ಲಾಭವಿದೆ. ಹೀಗೆ ತಿಳಿಯುತ್ತಲೇ ಧನ್ಯವಾದ ಹೇಳಬೇಕು. ಸ್ವಾಗತ ! ಸ್ವಾಗತ ! ಎಂಬ ಭಾವ ಮಾಡುತ್ತ ಸ್ವಾಗತಿಸಬೇಕು. ಇದರಿಂದ ಮನಸ್ಸು ಪ್ರಫುಲ್ಲಿತವಾಗುವದು

ಈ ಪ್ರಕಾರ ಧನ್ಯವಾದ ! ಸ್ವಾಗತ ! ದ ಉಪಯೋಗವನ್ನು ನಾವು ಅನೇಕ ಪರಿಸ್ಥಿತಿಗಳಲ್ಲಿ ಮಾಡಿ ಲಾಭ ಪಡೆಯಬಹುದಾಗಿದೆ ಮತ್ತು ನಮ್ಮನ್ನು ಇಲ್ಲಿಯ ತನಕ ಅನುಭವಿಸಿದ ಕರ್ಮಗಳ ದುಷ್ಟಚಕ್ರದಿಂದ ಮುಕ್ತಗೊಳಿಸುತ್ತವೆ. ಆದ್ದರಿಂದಲೇ ಜೀವವು ಎಲ್ಲಿಯ ತನಕ ಸಮ್ಯಗ್ದರ್ಶನ ಪ್ರಾಪ್ತ ಮಾಡುವದಿಲ್ಲ. ಅಲ್ಲಿಯವರೆಗೆ ಅದರ ಕರ್ಮಗಳ ದುಷ್ಟಚಕ್ರವು ಸಮಾಪ್ತವಾಗುವದಿಲ್ಲ.

ನಾವು ತಿಳಿದೋ, ತಿಳಿಯದೆಯೋ ಪ್ರತಿ ದಿವಸ ಎಷ್ಟೋ ತಪ್ಪುಗಳನ್ನು ಹಾಗೂ ನಿದಾನಗಳನ್ನು ಮಾಡುತ್ತ ಬಂದಿದ್ದೇವೆ. ಪರವಸ್ತುಗಳ ಅಥವಾ ವಿಶೇಷ ರಹಸ್ಯದ ಕಾರಣ ನಾವು ಅದರ ಆಕರ್ಷಣೆಗೆ ಒಳಗಾಗಿ ನಿದಾನ ಕಟ್ಟುತ್ತೇವೆ. ಹೇಗೆಂದರೆ ನಾವು ಯಾವಾಗ ಟಿ. ವಿ., ಸಿನೇಮಾ, ನಾಟಕ, ಫ್ಲ್ಯಾಟ, ನಿಸರ್ಗ ಮುಂತಾದವುಗಳನ್ನು ನೋಡಿ ಆಕರ್ಷಿತರಾಗಿ ಪಸಂದ ಮಾಡುತ್ತೇವೆ. ಇವುಗಳನ್ನು ಹೇಗೆ ಪಡೆಯಬೇಕು ? ಎಂಬ ನಿದಾನ ಬಂಧಿಸಿಕೊಳ್ಳುತ್ತೇವೆ. ಅದರಲ್ಲಿ ಯಾರ ಪುಣ್ಯವಿದೆಯೋ ಅವರಿಗೆ ಅಂತಹ ಬಂಗ್ಲೆ ಮುಂತಾದವು ಸಿಗುತ್ತವೆ. ಒಂದು ವೇಳೆ ಪುಣ್ಯ ಕಡಿಮೆ ಇದ್ದವರಿಗೆ ಆ ಬಂಗ್ಲೆಯಲ್ಲಿ ನೌಕರನಾಗಿ ಇರಬಹುದು. ಹೀಗೆಯೇ ಪುಣ್ಯವಿದ್ದಂತೆ ಸಾಕಿದ ಪ್ರಾಣಿಯಾಗಿ, ನಾಯಿಯಾಗಿ, ಜೇಡರಹುಳ, ಇರುವೆ ಮುಂತಾದವಾಗಿಯೂ ಸಹ ಆ ಬಂಗ್ಲೆಯನ್ನು ಅವಶ್ಯವಾಗಿ ಪಡೆಯುತ್ತೇವೆ. ಹೀಗೆ ನಿದಾನದ ಪ್ರಭಾವ ಇರುತ್ತದೆ. ಆದ್ದರಿಂದ ಅದನ್ನು ನಿದಾನಶಲ್ಯವೆಂದೂ ಸಹ ಕರೆಯುತ್ತಾರೆ. ಈ ನಿದಾನದ ಸಂಬಂಧದಿಂದ ನಮಗೆ ನಮ್ಮ ಕರ್ಮಗಳ ಅನುಸಾರ ಎಷ್ಟು ಸಿಗಬೇಕಾಗಿದೆಯೋ ಅದಕ್ಕಿಂತ ಕಡಿಮೆ ಸಿಗುತ್ತದೆ ಮತ್ತು ಅದನ್ನು ಅನುಭವಿಸುವ ಸಮಯ ಬಹಳ ಪಾಪಬಂಧವಾಗುತ್ತದೆ. ಏಕೆಂದರೆ ನಾವು ಅದನ್ನು ಬಯಸಿ ಬೇಡುವದರಿಂದ ಅದರಲ್ಲಿ ಹೆಚ್ಚು ಆಸಕ್ತಿ ಆಗುತ್ತದೆ.

ಯಥಾರ್ಥದಲ್ಲಿ ಬೇಡುವ ಅವಶ್ಯಕತೆಯೇ ಇಲ್ಲ. ಏಕೆಂದರೆ ನಮ್ಮ ಕರ್ಮದ ಅನುಸಾರ ಎಷ್ಟು ಸಿಗುವದಿದೆಯೋ ಅಷ್ಟು ಸಿಕ್ಕೇ ಸಿಗುತ್ತದೆ. ಇದು ಒಳ್ಳೆಯದು. ಕೆಲವು ನಾವು ಬಯಸಿದ ಸ್ಥಳದಲ್ಲಿಯೇ ಹುಟ್ಟಬಹುದು. ಅಲ್ಲಿ ಅಸಂಖ್ಯಾತ ವರ್ಷಗಳ ಕಾಲ ಜೀವಿಸಿ ಅಲ್ಲಿರಬಹುದು.

ಒಬ್ಬ ಧರ್ಮಾತ್ಮ ಜೀವನಿಗೆ ಮಹಾವಿದೇಹ ಕ್ಷೇತ್ರದಲ್ಲಿ ಹುಟ್ಟಬೇಕೆಂಬ ಭಾವವಾಯಿತು. ಏಕೆಂದರೆ ಅಲ್ಲಿ ಭಗವಾನರು ಯಾವಾಗಲೂ ವಿರಾಜಮಾನ ಆಗಿರುತ್ತಾರೆ ಮತ್ತು ಆ ಜೀವವು ವಿಚಾರ ಮಾಡುತ್ತದೆ, ಏನಂದರೆ ಮಹಾವಿದೇಹ ಕ್ಷೇತ್ರದಲ್ಲಿ ಜನ್ಮ ಪಡೆದು ಧರ್ಮವನ್ನು ಪಡೆಯಬಯಸುತ್ತಾನೆ. ಇದೂ ಒಂದು ಪರಕಾರದ ನಿದಾನವೇ ಸರಿ. ಆದರೆ ಯಾರಿಗೆ ಧರ್ಮ ಮಾಡುವದಿದೆ ಅವನಿಗೆ ಇಂದೂ ಸಹ ಮತ್ತು ಇಲ್ಲಿಯೂ ಮಾಡಬಹುದು. ಏಕೆಂದರೆ ಇಲ್ಲಿ ಇನ್ನೂ ಭಗವಾನ ಮಹಾವೀರ ಸ್ವಾಮಿಯ ಶಾಸನವು ಪ್ರವರ್ತಮಾನವಿದೆ ಮತ್ತು ಇಲ್ಲಿಯೂ ಸಹ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಂಡು ಒಂದೇ ಅವತಾರಿಯಾಗಿ ಜನಿಸಬಹುದು. ಯಾವನು ಧರ್ಮವನ್ನು ನಾಳೆ ಮಾಡೋಣ ಎಂದು ಬಿಡುತ್ತಾನೆ ಅವನಿಗೆ ನಾಳೆಯು ಎಂದೂ ಬರುವದಿಲ್ಲ. ಆಗ ಈ ಅಮೂಲ್ಯ ಜನ್ಮವನ್ನು ಬಿಟ್ಟು ಮುಂದಿನ ಭವದ ದಾರಿ ನೋಡುವವನು ಯಾವ ಬುದ್ಧಿವಂತನು ಇರುತ್ತಾನೆ ?

ಹಾಗೆಯೇ ಬಹಳ ಜನರು ಸಮ್ಯಗ್ದರ್ಶನ ರಹಿತ ಧರ್ಮ ಮಾಡಿ ದೇವಗತಿಯಲ್ಲಿ ಜನಿಸಿ ಅಲ್ಲಿಯ ದಿವ್ಯ ಸುಖವನ್ನು ಪಡೆಯಬೇಕೆಂಬ ಇಚ್ಛೆ ಮಾಡುತ್ತಾರೆ ಮತ್ತು ಆ ಉದ್ದೇಶವು ಪೂರ್ತಿಯಾಗುವ ಸಲುವಾಗಿ ಮಾತ್ರ ಧರ್ಮ ಮಾಡುತ್ತಾರೆ. ಇಂಥ ಜನರು ಸಮ್ಯಗ್ದರ್ಶನದ ಅಭಾವದ ಕಾರಣ ದೇವಗತಿ ಪ್ರಾಪ್ತ ಮಾಡಿಕೊಂಡರೂ ಸಹ ಬಹುಶಃ ಮುಂದೆ ಅವರು ಏಕೇಂದ್ರಿಯದಲ್ಲಿ ಬಂದು ಜನಿಸುತ್ತಾರೆ. ಅದರಲ್ಲಿ ಅವರದು ಅನಂತ ಕಾಲ ಕಳೆಯುತ್ತಾರೆ. ಆದ್ದರಿಂದ ಸಮ್ಯಗ್ದರ್ಶನ ಪ್ರಾಪ್ತಿ ಮಾಡಿಕೊಳ್ಳುವದನ್ನು ಮರೆಯಬಾರದು. ಏಕೇಂದ್ರಿಯದಿಂದ ಹೊರಗೆ ಹೊರಡುವದು ಚಿಂತಾಮಣಿ ರತ್ನದ ಪ್ರಾಪ್ತಿಗಿಂತಲೂ ಹೆಚ್ಚು ದುರ್ಲಭ ಎಂದು ಭಗವಾನರು ಹೇಳಿದ್ದಾರೆ.

ಭಗವಾನರು ಮತ್ತೆ ಹೇಳಿದ್ದಾರೆ, ಏನಂದರೆ ಪ್ರತಿಯೊಂದು ಪ್ರಕಾರ ಸಂಯೋಗಗಳು ನಮ್ಮ ನಮ್ಮ ಕರ್ಮಗಳ ಅನುಸಾರವಾಗಿಯೇ ದೊರೆಯುತ್ತವೆ. ಆಗ ಮತ್ತೆ ಬೇಡಿಕೊಂಡು ಅಂದರೆ ನಿದಾನ ಕಟ್ಟಿಕೊಂಡು, ನಮ್ಮ ಹಾನಿ ಏಕೆ ಮಾಡಿಕೊಳ್ಳಬೇಕು ? ಈ ಮಾತನ್ನು ಪ್ರತಿಯೊಬ್ಬ ಮುಮುಕ್ಷುವು ಚಿಂತನೆ ಮಾಡಬೇಕು ಮತ್ತು ತಿಳಿಯಬೇಕು. ಇದು ಅತಿ ಅವಶ್ಯವಿದೆ. ಆದ್ದರಿಂದ ನಿದಾನ ಶಲ್ಯದಿಂದ ಉಳಿಯಬೇಕು.

ಈ ಪ್ರಕಾರ ನಾವು ಅನಾದಿಯಿಂದ ಎಷ್ಟೋ ಪ್ರಕಾರದ ನಿದಾನ ಮಾಡಿ ಸ್ವಂತಕ್ಕೆ ಮೋಸ ಮಾಡುತ್ತ ಬಂದಿದ್ದೇವೆ ಮತ್ತು ಈಗ ಇದನ್ನೇ ಎಲ್ಲಿಯ ತನಕ

ಮಾಡುವದು ? ಇದನ್ನು ಸಮಾಪ್ತಗೊಳಿಸಿ ಬೇಗನೇ ಮೇಲೆ ಹೇಳಿದ ರೀತಿಯಿಂದ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳುವ ಯೋಗ್ಯತೆಯನ್ನು ಮಾಡಿಕೊಳ್ಳಬೇಕು. ಸಮ್ಯಗ್ದರ್ಶನ ಪ್ರಾಪ್ತಿಯ ಕಾರಣ ಸತ್ಯಧರ್ಮ ದೊರೆಯುವದು. ಇನ್ನು ಮುಂದೆ ನಾವು ಸತ್ಯಧರ್ಮದ ಸ್ವರೂಪವನ್ನು ತಿಳಿಸುತ್ತೇವೆ.

ಜೀವ ವಿಚಾರ ಮಾಡುತ್ತದೆ, ಏನಂದರೆ ಯಾವ ಸಂಪ್ರದಾಯದಲ್ಲಿ ನಮಗೆ ಸಮ್ಯಗ್ದರ್ಶನ ಪ್ರಾಪ್ತವಾಗುತ್ತದೆ ? ಅಥವಾ ಯಾವ ಸಂಪ್ರದಾಯವು ನಿಜವಾಗಿದೆ ? ಮುಂತಾದ ಪ್ರಶ್ನಗಳ ಉತ್ತರ ಅವನು ಶೋಧಿಸುತ್ತ ಇರುತ್ತಾನೆ. ಆದರೆ ಯಾವಾಗ ಅವನಿಗೆ ಎಲ್ಲ ಸಂಪ್ರದಾಯದವರು ತಮ್ಮ ಸಂಪ್ರದಾಯವು ಶ್ರೇಷ್ಠವಿದೆ ಎಂದು ಹೇಳಿ ಕರೆಯುತ್ತಾರೆ. ಆದರೆ ಎಲ್ಲವುಗಳಲ್ಲಿ ಕೇವಲ ಒಂದೇ ಸಂಪ್ರದಾಯವು ನಿಜವಾದದ್ದಿದೆ, ಶ್ರೇಷ್ಠವಾದದ್ದಿದೆ. ಕೇವಲ ಆ ಸಂಪ್ರದಾಯದಲ್ಲಿ ಮಾತ್ರ ಸಮ್ಯಗ್ದರ್ಶನ ಪ್ರಾಪ್ತವಾಗುತ್ತದೆ. ಅದುವೇ ಅಹಿಂಸಾ ಪರಮೋಧರ್ಮ, ಜೈನಧರ್ಮವಾಗಿದೆ. ಉಳಿದೆಲ್ಲವೂ ಪಾಖಂಡ ಇವೆ ಎಂದು ತಿಳಿಯುತ್ತಾನೆ. ಆಗ ಅವನು ವಿಚಾರ ಮಾಡುತ್ತಾನೆ. ಬಹಳ ಜನರು ತಮ್ಮ ತಂದೆಯ ಸಂಪ್ರದಾಯವನ್ನೇ ಸತ್ಯ ಮತ್ತು ಒಳ್ಳೆಯದೆಂದು ಮನ್ನಿಸುತ್ತಾರೆ. ಅದನ್ನೇ ಅನುಸರಿಸುತ್ತಾರೆ ಅಥವಾ ತಮ್ಮ ಸಮೀಪದ ಸಹೋದರ ಸಂಬಂಧಿಯಲ್ಲಿ ಆರ್ಥಿಕ ರೂಪದಿಂದ ಸಂಪನ್ನರಾದ ಜನರ ಪ್ರಭುತ್ವದಲ್ಲಿ ಬಂದು ಅವರು ಹೇಳಿದ ಮತ-ಪಂಥ-ಸಂಪ್ರದಾಯವನ್ನೇ ಮಾನ್ಯ ಮಾಡಿ ಕುರುಡು ನಂಬಿಕೆಯಿಂದ ಪ್ರಚಾರ-ಪ್ರಸಾರ ಸಹ ಮಾಡುತ್ತಾರೆ. ಹೀಗೆ ಅವರು ತಮ್ಮ ಸಲುವಾಗಿ ಅನಂತ ಕಾಲದ ಅಂಧಕಾರಮಯ ಭವಿಷ್ಯವನ್ನು ನಿರ್ಮಿಸಿಕೊಳ್ಳುತ್ತಾರೆ.

ಧರ್ಮವನ್ನು ಯಾವಾಗಲೂ ಪರೀಕ್ಷೆ ಮಾಡಿಯೇ ಸ್ವೀಕರಿಸಬೇಕು. ಹೇಗೆ ಯಾವನೋ ರೋಗಿ ಬಹಳ ಕಾಲದ ತನಕ ಔಷಧವನ್ನು ಸೇವಿಸಿದರೂ ಸಹ ಒಳ್ಳೆಯದಾಗುವದಿಲ್ಲ. ಆಗ ಅವನು ಅವಶ್ಯವಾಗಿ ವಿಚಾರಿಸುತ್ತಾನೆ. ಏನಂದರೆ ಔಷಧವನ್ನು ಬದಲಾಯಿಸಬೇಕಾಗುತ್ತದೆ ಅಥವಾ ಡಾಕ್ಟರರನ್ನೇ ಬದಲಾಯಿಸಬೇಕಾಗುತ್ತದೆ. ಅದೇ ಪ್ರಕಾರ ಯಾವದೇ ಸಂಪ್ರದಾಯದಲ್ಲಿ ಎಷ್ಟೋ ವರ್ಷಗಳಿಂದ ಧರ್ಮ ಕಾರ್ಯಗಳು, ಪೂಜೆ, ಪ್ರವಚನ, ವ್ಯಾಖ್ಯಾನ, ಧ್ಯಾನ, ಅಧ್ಯಯನ, ಸದಾಚಾರ, ನಿತ್ಯಕ್ರಮ ಮುಂತಾದವುಗಳನ್ನು ಪಾಲಿಸುತ್ತಿದ್ದರೂ ಸಹ ಇನ್ನುವರೆಗೆ ಪರಿಣಾಮ ಸುಧಾರಿಸಲಿಲ್ಲ ಅಥವಾ ಭಾವವು ಧರ್ಮದ ಅನುಕೂಲವಾಗಲಿಲ್ಲ. ಆದರೂ ಜನರು ಅದನ್ನೇ ಮುಂದುವರಿಸುತ್ತಾರೆ. ಅದನ್ನೇ ಪ್ರಚಾರ, ಪ್ರಭಾವ ಮಾಡುತ್ತ ತಿರುಗಾಡುತ್ತಾರೆ. ಅದರಿಂದ ಅವರ ಕಲ್ಯಾಣ ಆಗುವದಿಲ್ಲ. ಆದ್ದರಿಂದ ಬಂಧುಗಳೇ ಸತ್ಯ-ಶುದ್ಧ ಧರ್ಮದ ಸಲುವಾಗಿ ತಿಳಿಯುವದು ಅವಶ್ಯಕವಿದೆ.

ಸತ್ಯ/ಶುದ್ಧ ಧರ್ಮವು ಯಾವದೇ ಸಂಪ್ರದಾಯ ಅಥವಾ ವ್ಯಕ್ತಿ ಆಧಾರಿತ ಪಂಥದೊಂದಿಗೆ ಬಂಧಿಸಿರುವದಿಲ್ಲ ಮತ್ತು ಅದು ಯಾವದೇ ಸಂಪ್ರದಾಯ ಅಥವಾ ವ್ಯಕ್ತಿ ಆಧಾರಿತ ಪಂಥದ ಆಸ್ತಿ ಇರುವದಿಲ್ಲ. ಆದರೆ ಸತ್ಯ / ಶುದ್ಧ ಧರ್ಮವು

ಜ್ಞಾನಿಯ ಹತ್ತಿರ ಅವಶ್ಯ ಇರುತ್ತದೆ. ಅದು ಆತ್ಮನ ಆಶ್ರಿತ ಇರುತ್ತದೆ. ಅಂದರೆ ಧರ್ಮವು ಶುದ್ಧಾತ್ಮನ ಅನುಭವರೂಪ ಸಮ್ಯಗ್ದರ್ಶನದಿಂದ ಜೋಡಿಸಲ್ಪಟ್ಟಿದೆ. ಯಾವದೇ ಸಂಪ್ರದಾಯ ಅಥವಾ ವ್ಯಕ್ತಿ ಆಧಾರಿತ ಪಂಥದಿಂದ ಇರುವದಿಲ್ಲ. ಪರಮ ಸತ್ಯ ತತ್ವವೇ ಸತ್ಯಧರ್ಮವಿದೆ. ವಸ್ತುವಿನ ಸ್ವಭಾವವೇ ಧರ್ಮ ಇದೆ. ಅದು ಅಹಿಂಸಾಮಯವಾಗಿರುತ್ತದೆ, ಪವಿತ್ರವಾಗಿರುತ್ತದೆ. ಧರ್ಮವು ಯಾವದೇ ಕ್ರಿಯಾಕಾಂಡ, ಜಪತಪ ಪೂಜಾಪದ್ಧತಿ ಅಥವಾ ಮಠ, ಮಂದಿರ ಅಥವಾ ಧರ್ಮಸ್ಥಳದ ಆಶ್ರಿತ ಇರುವದಿಲ್ಲ. ಕೇವಲ ಸಹಯೋಗಿ ಆಗಿರುತ್ತವೆ. ಕೇವಲ ಪರಿಣಾಮ ವಿಶುದ್ಧಿಗೆ ಕಾರಣವಾಗಿವೆ.

ಅನೇಕ ಸಂಪ್ರದಾಯದ ಜನರು ಬಹಳ ಹಣ ಖರ್ಚು ಮಾಡಿ ಧಾರ್ಮಿಕ ಉತ್ಸವ ಆಚರಿಸುತ್ತಾರೆ ಮತ್ತು ಅದನ್ನು ಧರ್ಮದ ಪ್ರಭಾವನೆ ಎಂದು ಹೇಳುತ್ತಾರೆ. ಆದರೆ ಯಥಾರ್ಥದಲ್ಲಿ ಅದು ಕೇವಲ ಸಂಪ್ರದಾಯದ ಪ್ರಚಾರವೇ ಆಗುತ್ತದೆ. ಸಂಪತ್ತಿನ ಎಚ್ಚರವಿಲ್ಲದೆ ಧರ್ಮದ ಅನೇಕ ಟೀಕಾಕಾರರನ್ನು ಹುಟ್ಟಿಸುತ್ತಾರೆ. ಅದರಿಂದ ಅನೇಕ ಸಂಭಾವಿತ ಜನರು ಧರ್ಮದಿಂದ ದೂರ ಉಳಿಯುತ್ತಾರೆ. ಬೇರೆ ಸಂಪ್ರದಾಯಸ್ಥರು ಇದನ್ನು ನೋಡಿ ವಿರೋಧಿಗಳೂ ಆಗಬಹುದು. ಬಹಳ ಹಣ ಖರ್ಚು ಮಾಡಿ ತಮ್ಮನ್ನು ತಾವೇ ಮಹಾನ್ ಎಂದು ತಿಳಿಯುತ್ತಾರೆ. ಧರ್ಮ ಸ್ಥಾನಗಳಲ್ಲಿ ತಮ್ಮ ಮನಬಂದಂತೆ ವರ್ತಿಸತೊಡಗುತ್ತಾರೆ. ಹೀಗೆ ಮಾಡುತ್ತ ತಮ್ಮ ಮಾನ ಕಷಾಯವನ್ನೇ ಪೋಷಣೆ ಮಾಡಿಕೊಳ್ಳುತ್ತಾರೆ. ಇದರಿಂದ ಅವರದು ಸಮಾಜದಲ್ಲಿ ಅಪಕೀರ್ತಿ ಆಗುತ್ತದೆ. ಇವರ ಈ ಅಹಂಕಾರವೇ ಆಧ್ಯಾತ್ಮ ಸಾಧನಾ ಮಾರ್ಗದಲ್ಲಿ ದೊಡ್ಡ ಘಾತಕ ಶತ್ರು ಇದೆ.

ಎರಡನೆಯದೆಂದರೆ ಮತ-ಪಂಥ-ಸಂಪ್ರದಾಯ-ವ್ಯಕ್ತಿ ವಿಶೇಷವಾದ ಅಲಂಕಾರ, ಆಗ್ರಹ, ಹಠಾಗ್ರಹ, ಕದಾಗ್ರಹ, ಪೂರ್ವಾಗ್ರಹ ಅಥವಾ ಪಕ್ಷ ಇವು ಆತ್ಮಪ್ರಾಪ್ತಿಯಲ್ಲಿ ಎಲ್ಲಕ್ಕಿಂತಲೂ ದೊಡ್ಡ ಅಡ್ಡಿ ಇರುತ್ತವೆ. ಇದು ದುಃಖದಾಯಕವಿದೆ. ಏನೆಂದರೆ ಪ್ರತಿಯೊಂದು ಸಂಪ್ರದಾಯವು ಕೇವಲ ಸ್ವಂತಕ್ಕೇನೇ ಸಂಪೂರ್ಣ ಮತ್ತು ಪರಮ ಸತ್ಯವೆಂದು ಮನ್ನಿಸುತ್ತದೆ ಮತ್ತು ಉಳಿದವರನ್ನು ಸುಳ್ಳು ಮತ್ತು ಅಪೂರ್ಣವೆಂದು ಮನ್ನಿಸುತ್ತದೆ. ಇಂಥ ಭಾವನೆ ಅಥವಾ ಕಥನದಿಂದ ದ್ವೇಷದ ಉತ್ಪತ್ತಿ ಆಗುತ್ತದೆ. ಇಂಥ ಭಾವನೆಯು ಅಥವಾ ಕಥನದಿಂದ ಸತ್ಯಧರ್ಮದ್ದೂ ಸಹ ಸೋಲು ಆಗುತ್ತದೆ. ಸತ್ಯಧರ್ಮದ ಪ್ರಾಪ್ತಿಯು ಬಹುಶಃ ಜ್ಞಾನಿಯ ಹತ್ತಿರದಿಂದಲೇ ಸಂಭವವಿದೆ. ಸತ್ಯಧರ್ಮವು ಪ್ರಾಪ್ತಜ್ಞಾನಿಗೆ ಯಾವುದೇ ಸಂಪ್ರದಾಯದ ಆಗ್ರಹ ಇರುವದಿಲ್ಲ. ಆದರೆ ಪರಮ ಸತ್ಯದ್ದೇ ಆಗ್ರಹ ಇರುತ್ತದೆ. ಆದ್ದರಿಂದ ಜ್ಞಾನಿಯ ಹತ್ತರದಿಂದ ಕೇವಲ ಸತ್ಯಧರ್ಮದ ಪ್ರಾಪ್ತಿಯನ್ನು ಬಯಸುವದು ಪರಮ ಉಪಾದೇಯವಿದೆ. ಸಂಪ್ರದಾಯದ್ದಿರುವದಿಲ್ಲ. ಏಕೆಂದರೆ ಜ್ಞಾನಿಯ ಬಳಿ ಆಶಾತನದ ಫಲ ಅನಂತ ಸಂಸಾರವಿದೆ. ಅಂದರೆ ಜ್ಞಾನಿಯು ಯಾವದನ್ನು ಸಹ ಸಾಂಪ್ರದಾಯಿಕ ದೃಷ್ಟಿಕೋನದಿಂದ ನೋಡಬಾರದು ಮತ್ತು ಮೌಲ್ಯಾಂಕನ ಮಾಡಬಾರದು. ಏಕೆಂದರೆ

ಜ್ಞಾನಿಯು ಎದುರಿಗಿರುವ ವ್ಯಕ್ತಿಯ ಯೋಗ್ಯತೆಯ ಅನುರೂಪವೇ ಧರ್ಮಪ್ರಾಪ್ತಿಯ ಉಪದೇಶ ಕೊಡುತ್ತಾರೆ. ಹೇಗೆ ವೈದ್ಯರು ರೋಗಿಗಳಿಗೆ ಒಂದೇ ತರದ ಔಷಧಿ ಕೊಡುವದಿಲ್ಲ. ಅವರು ನೋವಿನ ಅನುರೂಪವೇ ಔಷಧಿ ಕೊಡುತ್ತಾರೆ. ಇದೇ ಪ್ರಕಾರ ಎಲ್ಲರ ಸಲುವಾಗಿ ಒಂದೇ ಧರ್ಮಕ್ರಿಯೆ, ಪ್ರವಚನ, ವ್ಯಾಖ್ಯಾನ, ಸ್ವಾಧ್ಯಾಯ, ನಿತ್ಯಕ್ರಮ ಮುಂತಾದವು ಆಗುವದಿಲ್ಲ. ಆದರೆ ಅವರ ಯೋಗ್ಯತೆ ಮತ್ತು ಸ್ತರದ ಅನುಸಾರ ಯಾವದು ಉಚಿತವೋ ಅದನ್ನೇ ಹೇಳಲಾಗುತ್ತದೆ.

ಪ್ರಶ್ನೆ : "ಸತ್ಯಧರ್ಮದ ಪ್ರಾಪ್ತಿಯು ಬಹುಶಃ ಜ್ಞಾನಿಯ ಹತ್ತಿರದಿಂದಲೇ ಪ್ರಾಪ್ತವಾಗುತ್ತದೆ. "ಹೀಗೇಕೆ ಹೇಳುತ್ತಿರುವಿರಿ ? ಏನು ಭಗವಾನರ ಪರಂಪರೆಯಿಂದ ಪ್ರಾಪ್ತವಾದ ಆಗಮಗಳು ಮತ್ತು ಶಾಸ್ತ್ರಗಳಿಂದ ಸತ್ಯಧರ್ಮದ ನಿರ್ಣಯ ಆಗುವದಿಲ್ಲವೇ ?

ಉತ್ತರ : ಭಗವಾನರ ಪರಂಪರೆಯಿಂದ ಪ್ರಾಪ್ತವಾದ ಆಗಮಗಳು ಮತ್ತು ಶಾಸ್ತ್ರಗಳಿಂದಲೂ ಸಹ ಸತ್ಯಧರ್ಮದ ನಿರ್ಣಯ ಆಗುತ್ತದೆ. ಆದರೆ ಈ ಕಾಲದಲ್ಲಿ ಮುಖ್ಯ ರೂಪದಿಂದ ಮೂರು ಸಂಪ್ರದಾಯಗಳು ಇರುತ್ತವೆ.

೧. ಜನರು ಆಗಮಗಳ ಮತ್ತು ಶಾಸ್ತ್ರಗಳ ಯಥಾರ್ಥ ಅರ್ಥ ಘಟನೆಯನ್ನು ಮಾಡುವದಿಲ್ಲ. ಅಂದರೆ ಯಾವದೇ ಅರ್ಥ ಘಟನ ಮಾಡಿದ್ದರೆ ಅದು ಬಹುಶಃ ಏಕಾಂತರೂಪ ಧರ್ಮದ್ದೇ ಪ್ರವಪರ್ತನ ನಡೆದಿರುತ್ತದೆ.

೨. ಎಷ್ಟೋ ಜನರು ಆಗಮಗಳನ್ನು ಮತ್ತು ಶಾಸ್ತ್ರಗಳನ್ನು ಸಂಪೂರ್ಣ ರೂಪದಿಂದ ಮನ್ನಿಸುವದಿಲ್ಲ. ಅವರು ಆಗಮ ಮತ್ತು ಶಾಸ್ತ್ರಗಳನ್ನು ಪರೀಕ್ಷಿಸದೇ ಅಲ್ಲಿಯ ಮಾತುಗಳು ತಮ್ಮ ಮತಕ್ಕೆ ಉಪಯುಕ್ತವಾದವುಗಳಿದ್ದರೆ ಮಾತ್ರ ಮನ್ನಿಸುತ್ತಾರೆ. ಉಳಿದವುಗಳನ್ನು ಗೌಣ ಮಾಡಿ ಬಿಡುತ್ತಾರೆ.

೩. ಬಹುಶಃ ಜನರು ಸಾಂಪ್ರದಾಯಿಕ ಕ್ರಿಯೆಗಳನ್ನೇ ಧರ್ಮವೆಂದು ಮನ್ನಿಸುತ್ತಾರೆ. ಹೇಗೆಂದರೆ ಇಂಥ ಕ್ರಿಯೆಗಳು ಗಣವೇಶ ಮಾತ್ರವೇ ಇವೆ. ವಿದ್ಯಾರ್ಥಿಗಳು ಶಾಲೆಯಲ್ಲಿ ಗಣವೇಶ ತೊಟ್ಟುಕೊಂಡು ಹೋಗುವದರಿಂದಲೇ ಪಾಸ ಆಗುವದಿಲ್ಲ. ಅವನಿಗೆ ಸಂಘದ ವಿದ್ಯಾರ್ಥಿಗಳೊಂದಿಗೆ ಓದುವದನ್ನು ಮಾಡಬೇಕಾಗುತ್ತದೆ. ಅಂದರೆ ಅವನು ಮುಂದೆ ಉತ್ತೀರ್ಣ ಆಗುತ್ತಾನೆ. ಹಾಗೆಯೇ ಮುಮುಕ್ಷುವಿಗೆ ಸಾಂಪ್ರದಾಯಕ ಕ್ರಿಯೆಗಳ ಜೊತೆಗೆ ತನ್ನ ಭಾವವನ್ನು ಸಹ ಸಂಬಾಳಿಸಬೇಕಾಗುತ್ತದೆ. ಅಂದರೆ ಭಾವಶುದ್ಧಿಯೂ ಸಹ ಅವಶ್ಯಕವಿದೆ. ಆಗ ಅವನಿಗೆ ಮೋಕ್ಷಮಾರ್ಗದ ಪ್ರಾಪ್ತಿಯ ಸಂಭವವಿದೆ. ಇದನ್ನು ತಿಳಿಯುವದು ಅವಶ್ಯಕವಿದೆ. ಧರ್ಮವು ಹೆಚ್ಚಾಗಿ ಆಂತರಿಕ ಪ್ರಕ್ರಿಯೆ ಇರುತ್ತದೆ. ಆದ್ದರಿಂದ ಅನಂತ ಕಾಲದಿಂದ ಎಷ್ಟೋ ಜನರು ಹೊರಗಿನ ಎಲ್ಲ ಕ್ರಿಯೆಗಳನ್ನು ಶುದ್ಧವಾಗಿ ಪಾಲಿಸುತ್ತಿದ್ದರೂ ಸಹ ಸತ್ಯಧರ್ಮದ ಪ್ರಾಪ್ತಿಯು ಆಗಿರುವದಿಲ್ಲ. ಈಗ ಅದರದೇ ವಿಶೇಷ ಸ್ಪಷ್ಟೀಕರಣವನ್ನು ಕೊಡುತ್ತಿದ್ದೇವೆ.

ಜನರು ಆಗಮಗಳ ಮತ್ತು ಶಾಸ್ತ್ರಗಳ ಯಥಾರ್ಥ ಅರ್ಥಗಳನ್ನು ಸರಿಯಾಗಿ ತಿಳಿದು ಸ್ವೀಕರಿಸುವದಿಲ್ಲ. ಅಂದರೆ ಯಾವದೇ ಅಥಘಟನ ಮಾಡುತ್ತಾರೆ. ಅದನ್ನು ಬಹುಶಃ ಏಕಾಂತ ರೂಪವಾಗಿಯೇ ತಿಳಿಯುತ್ತಾರೆ ಮತ್ತು ಧರ್ಮವನ್ನೇ ಪ್ರವರ್ತನಗೊಳಿಸುತ್ತಾರೆ. ಕೆಲವು ಅದರ ಜ್ವಲಂತ ಉದಾಹರಣೆಗಳನ್ನು ತೋರಿಸುತ್ತೇವೆ.

ಉದಾ ೧ : ಕೆಲವು ಜನರು ಹೀಗೆ ಹೇಳುತ್ತಾರೆ. ಹೇಗೆಂದರೆ ಸಮ್ಯಗ್ದರ್ಶನದ ವಿಷಯ ಅಂದರೆ ಪರ್ಯಾಯ ರಹಿತ ದ್ರವ್ಯ ಮತ್ತು ಅದರ ಅಕ್ಷರಶಃ ಅರ್ಥ ಮಾಡುತ್ತ ಪರ್ಯಾಯವನ್ನು ಕೆಲವು ಜನರು ಹೇಳುವದೇನೆಂದರೆ ಸಮ್ಯಗ್ದರ್ಶನದ ವಿಷಯ ಅಂದರೆ ಪರ್ಯಾಯ ರಹಿತ ದ್ರವ್ಯ ಮತ್ತು ಅದರ ಅಕ್ಷರಶಃ ಅರ್ಥ ಮಾಡುತ್ತ ಪರ್ಯಾಯವನ್ನು ದ್ರವ್ಯದಿಂದ ಭಿನ್ನಗೊಳಿಸುವ ಪ್ರಯತ್ನವನ್ನು ಮಾಡುತ್ತಾರೆ. ಒಂದು ಸಲ ದ್ರವ್ಯವನ್ನು ಕತ್ತರಿಯಿಂದ ಕತ್ತರಿಸಲೇಬೇಕಾಗುವದು. ಮತ್ತೆ ಅದನ್ನು ಕೂಡಿಸೋಣ. ಇಂಥ ಮಾತುಗಳನ್ನು ಬಟ್ಟೆಯನ್ನು ಕತ್ತರಿಸುವ ಹೊಲಿಯುವದಕ್ಕೆ ಹೋಲಿಸಿ ಹೇಳುತ್ತಾರೆ. ದ್ರವ್ಯ ಮತ್ತು ಪರ್ಯಾಯದ ಧ್ರುವವು ಸಹ ಬೇರೆ ಬೇರೆ ಮನ್ನಿಸುತ್ತಾರೆ. ಅಂದರೆ ಎರಡು ಧ್ರುವಗಳನ್ನು ಮನ್ನಿಸುತ್ತಾರೆ. ಆದರೆ ದ್ರವ್ಯವು ಅಭೇದವಾಗಿರುವ ಕಾರಣ ಅದರಲ್ಲಿಂದ ಪರ್ಯಾಯವನ್ನು ಹೊರತೆಗೆಯಲು ಸಾಧ್ಯವಿಲ್ಲ. ಅಥವಾ ಕತ್ತರಿಸಲೂ ಸಹ ಆಗುವದಿಲ್ಲ ಮತ್ತು ಇದೇ ಕಾರಣದಿಂದ ಇಂಥ ಜನರು ಬಹುಶಃ ಭ್ರಮೆಯಲ್ಲಿಯೇ ಇರುತ್ತಾರೆ. ಇವರು ಬಹುಶಃ ಏಕಾಂತವಾದಿ ಆಗುತ್ತಾರೆ. ತಮ್ಮ ಧರ್ಮಕರ್ತವ್ಯ ಮತ್ತು ಯೋಗ್ಯತೆಯ ಪ್ರಾಪ್ತಿಯನ್ನು ಸಹ ಕ್ರಮಬದ್ಧ ಪರ್ಯಾಯದ ಹೆಸರಿನಿಂದ ನಿಯತಿಯ ಮೇಲೆ ಬಿಟ್ಟು ತಮ್ಮ ಪೂರ್ಣ ಪುರುಷಾರ್ಥಗಳಾದ ಅರ್ಥ ಮತ್ತು ಕಾಮಗಳ ಹಿಂದೆಯೇ ತೊಡಗುತ್ತಾರೆ. ಕ್ರಮಬದ್ಧ ಪರ್ಯಾಯದಲ್ಲಿ ಐದೂ ಸಮವಾಯಗಳು ಭಾಗಿಯಾಗಿರುತ್ತವೆ ಎಂಬುದು ಅವರಿಗೆ ಗೊತ್ತಿಲ್ಲ. ಕೇವಲ ನಿಯತಿಗೆ ಕ್ರಮಬದ್ಧ ಪರ್ಯಾಯವೆಂದು ಮನ್ನಿಸುವದು ತಪ್ಪು ಇದೆ. ಈ ಅರ್ಥಘಟನವೂ ಸಹ ಏಕಾಂತವಾದದ ನಮೂನೆಯೇ ಇದೆ. ಅಂಥ ಜನರು ಅರ್ಥ ಮತ್ತು ಆಕರ್ಷಣೆಯನ್ನೇ ತಮ್ಮ ಶಸ್ತ್ರವನ್ನಾಗಿ ಮಾಡಿಕೊಂಡು ತಮ್ಮ ಮನ್ನಣೆಯಂತೆ ಧರ್ಮದ ಪ್ರಭಾವನೆ ಮಾಡಲು ಬಯಸುತ್ತಾರೆ. ಆದರೆ ಇಂತಹ ಜನರಿಗೆ ಧರ್ಮದ ಪ್ರಭಾವನೆ ಮಾಡುವ ಉದ್ದೇಶವೇ ಗೊತ್ತಿರುವದಿಲ್ಲ. ಹೀಗಾಗಿ ಧರ್ಮದ ಪ್ರಭಾವನೆ ಸರಿಯಾಗಿ ಆಗುವದಿಲ್ಲ. ಹಣ ಹಾಗೂ ಬೇರೆ ಆಮಿಷಗಳಿಂದ ಮಾಡಿದ ಪ್ರಭಾವನೆ ಅದು ಕೇವಲ ಹಣದ ಪ್ರಭಾವನೆ ಆಗುತ್ತದೆ.

ಮೇಲೆ ತಿಳಿಸಿದ ಸಮ್ಯಗ್ದರ್ಶನದ ವಿಷಯ ಅರ್ಥಾತ್ ಪರ್ಯಾಯ ರಹಿತ ದ್ರವ್ಯ ಆದರೆ ಒಂದು ವಿಶೇಷ ಅಪೇಕ್ಷೆಯಿಂದ ಈ ಮಾತು ಸರಿ ಇದೆ. ಪರ್ಯಾಯ ರಹಿತ ದ್ರವ್ಯ ಅರ್ಥಾತ್ ಪರ್ಯಾಯವನ್ನು ಗೌಣ ಮಾಡಿ ಅಂದರೆ ವಿಭಾವವನ್ನು ಗೌಣ ಮಾಡಿದಾಗ ಯಾವ ಶುದ್ಧಾತ್ಮನ ಪ್ರಾಪ್ತಿಯಾಗುವದು ಅದು ಸಮ್ಯಗ್ದರ್ಶನದ ವಿಷಯವಿದೆ. ಈ ಮಾತು ತಿಳಿಯದ ಕಾರಣ ಕೇವಲ ಶಬ್ದಾರ್ಥವನ್ನೇ ಹಿಡಿದುಕೊಂಡು

ಇಂತಹ ಪ್ರರೂಪಣೆ ಮಾಡುತ್ತಾರೆ. ಇದು ಅನೇಕ ಜೀವಗಳ ಸಲುವಾಗಿ ಘಾತಕ ಇರುತ್ತದೆ. ಅನೇಕ ಜೀವಗಳಿಗೆ ಅನಂತ ಕಾಲದ ತನಕ ಸಂಸಾರದಲ್ಲಿಯೇ ಅಳಿಸುವ ಸಲುವಾಗಿ ಸಮರ್ಥವಿದೆ.

ಉದಾ ೨ : ಕೆಲವು ಜನರು ಹೇಳುವದೇನೆಂದರೆ ಆತ್ಮನಲ್ಲಿ ರಾಗ ಇರುವದೇ ಇಲ್ಲ. ಹೀಗೆ ಸಮಯಸಾರ ಮುಂತಾದ ಗ್ರಂಥಗಳಲ್ಲಿ ಅನೇಕ ಸಲ ಹೇಳಲಾಗಿದೆ ಮತ್ತು ಅದರದು ಅಕ್ಷರಶಃ ಅರ್ಥ ಮಾಡುತ್ತ ಇಂಥ ಜನರು ಆತ್ಮಾನುರಾಗ ಮಾಡುತ್ತಾರೆ. ಈ ಮಾತನ್ನು ಮನ್ನಿಸುವದಿಲ್ಲ ಮತ್ತು ಸ್ವಚ್ಛಂದರೂಪವಾಗಿ ಪರಿಣಮಿಸುತ್ತಾರೆ. ಇದೇ ಕಾರಣದಿಂದ ಇಂಥ ಜನರು ಬಹುಶಃ ಭ್ರಮೆಯಲ್ಲಿಯೇ ಇರುತ್ತಾರೆ. ಇಂಥ ಜನರು ಬಹುಶಃ ಏಕಾಂತವಾದಿಯಾಗುತ್ತಾರೆ. ಇವರು ತಮ್ಮ ಧರ್ಮಕರ್ತವ್ಯ, ಯೋಗ್ಯತೆಯ ಪ್ರಾಪ್ತಿಯನ್ನು ಸಹ ಕ್ರಮಬದ್ಧ ಪರ್ಯಾಯದ ಹೆಸರಿನಿಂದ ನಿಯತಿಯ ಮೇಲೆ ಬಿಟ್ಟು ಪೂರ್ಣ ಪುರುಷಾರ್ಥಗಳಾದ ಅರ್ಥ ಮತ್ತು ಕಾಮಗಳ ಹಿಂದೆಯೇ ಓಡುತ್ತಿದ್ದಾರೆ. ಆತ್ಮನಲ್ಲಿ ರಾಗವು ಇಲ್ಲವೇ ಇಲ್ಲ. ಹೀಗೆ ಸಮಯಸಾರ ಮುಂತಾದ ಗ್ರಂಥಗಳಲ್ಲಿ ಅನೇಕ ಸಲ ಹೇಳಲಾಗಿದೆ. ಈ ಮಾತು ಸತ್ಯವಾಗುವ ಸಂಬಂಧ ಆ ಕಥನದ ಅಪೇಕ್ಷೆಯನ್ನು ತಿಳಿಯದೆ ಅದರದು ಅಕ್ಷರಶಃ ಅರ್ಥ ಮಾಡುತ್ತ ಇಂಥ ಜನರದು ಏಕಾಂತವಾದದ ಬೇಟೆ (ಆಹಾರ) ಆಗುತ್ತೇವೆ. ಸಮಯಸಾರದಂಥ ಗ್ರಂಥಗಳಲ್ಲಿ ಶುದ್ಧಾತ್ಮನದೇ ಮಾತು ಹೇಳಿದ್ದಾರೆ. ಯಾವ ಸಮ್ಯಗ್ದರ್ಶನದ ವಿಷಯವಿದೆ ಅರ್ಥಾತ್ ಸಮಯ ಸಾರದಂಥ ಗ್ರಂಥಗಳಲ್ಲಿ ಆತ್ಮನಲ್ಲಿಂದ ವಿಭಾವಗಳನ್ನು ಗೌಣ ಮಾಡಿದ ಬಳಿಕ ಯಾವ ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮನು ಉಳಿದಿರುತ್ತಾನೆ. ಅವನದೇ ಮಾತು ಹೇಳಿರುವದರಿಂದ ಆತ್ಮನಲ್ಲಿ ರಾಗ ಇರುವದಿಲ್ಲ. ಹೀಗೆ ಹೇಳಿದ್ದಾರೆ. ಅಂಧರೆ ಆತ್ಮನು ರಾಗರೂಪವಾಗಿ ಪರಿಣಮಿಸಿದರೂ ಸಮ್ಯಗ್ದರ್ಶನದ ವಿಷಯದಲ್ಲಿ ರಾಗ ಗೌಣವಾಗಿರುವ ಕಾರಣ ಸಮಯಸಾರದಂಥ ಗ್ರಂಥಗಳಲ್ಲಿ ಸಮ್ಯಗ್ದರ್ಶನ ಮಾಡಿಸುವ ಸಲುವಾಗಿ ಶುದ್ಧಾತ್ಮನದೇ ಮಾತು ಹೇಳಲಾಗಿದೆ. ಏನಂದರೆ ಸಮ್ಯಗ್ದರ್ಶನದ ಯಾವ ವಿಷಯವಿದೆ ಅದನ್ನು ತಿಳಿಯುವದು ಬಹಳ ಅವಶ್ಯಕವಿದೆ.

ಆದ್ದರಿಂದ ಸಮಯಸಾರ ಶ್ಲೋಕ ೬೯ರಲ್ಲಿ ಹೇಳಿದ್ದಾರೆ. ಏನಂದರೆ ಯಾವ ನಯವು ಪಕ್ಷಪಾತವನ್ನು ಬಿಟ್ಟು ಸ್ವ ಸ್ವರೂಪದಲ್ಲಿ ಲೀನವಾಗಿ ಅಂದರೆ ಶುದ್ಧಾತ್ಮನಲ್ಲಿಯೇ 'ನನ್ನತನ' ಮಾಡಿ ಸಮ್ಯಗ್ದರ್ಶನ ರೂಪ ಪರಿಣಮಿಸಿ ಯಾವಾಗಲೂ ಇರುವವರೇ ನಯ ಮತ್ತು ಪಕ್ಷವನ್ನು ಬಿಡುವಂಥ ಮುಮುಕ್ಷು ಜೀವರುಗಳೇ ಸಮ್ಯಗ್ದರ್ಶನ ಪ್ರಾಪ್ತ ಮಾಡಬಹುದಾಗಿದೆ. ಯಾರ ಚಿತ್ತವು ವಿಕಲ್ಪ ಮಲದಿಂದ ರಹಿತವಾಗಿ ಶಾಂತವಾಗಿದೆಯೋ ಅರ್ಥಾತ್ ನಿರ್ವಿಕಲ್ಪ ಶುದ್ಧಾತ್ಮನ ಅನುಭವ ಮಾಡುತ್ತ ಸಾಕ್ಷಾತ್ ಅನುಭೂತಿ ರೂಪ ಅತೀಂದ್ರಿಯ ಆನಂದವನ್ನು ಅನುಭವಿಸುತ್ತಾರೆ. ಆದ್ದರಿಂದ ಸಮ್ಯಗ್ದರ್ಶನದ ಪ್ರಾಪ್ತಿಯ ಸಲುವಾಗಿ ಎಲ್ಲರೂ ನಯ ಮತ್ತು ಪಕ್ಷದ ಆಗ್ರಹ ಬಿಡುವದು ಯೋಗ್ಯವಿದೆ.

ಇಂಥ ಸಮಸ್ಯೆಗಳ ನಡುವೆ ಯಾವನೇ ಮುಮುಕ್ಷು ಜೀವನು ಈ ತರದ ತಪ್ಪು ಅರ್ಥಘಟನ ಮಾಡುವವರಲ್ಲಿ ಸಿಕ್ಕು ಬಿದ್ದರೆ ಅವನ ಸಂಪೂರ್ಣ ಜೀವನ ನಾಶವಾಗುತ್ತದೆ ಮತ್ತು ಇದರಿಂದ ಅವನದು ಅನಂತಕಾಲದ ತನಕ ಅವನ ಜೀವನ ಅಂಧಕಾರಮಯ ಆಗುತ್ತದೆ. ಇದು ಹುಂಡಾವಸರ್ಪಿಣಿ ಪಂಚಮ ಕಾಲವಿದೆ. ಸತ್ಯಧರ್ಮದ ಪ್ರಾಪ್ತಿಯು ಬಹುಶಃ ಜ್ಞಾನಿಯ ಹತ್ತಿರದಿಂದಲೇ ಸಂಭವವಿದೆ. ಏಕೆಂದರೆ ಜ್ಞಾನಿಗೆ ಮತ-ಪಂಥ-ಸಂಪ್ರದಾಯದ ಪಕ್ಷ, ಆಗ್ರಹ ಮುಂತಾದವುಗಳು ಆಗುವದಿಲ್ಲ. ಇದೇ ಕಾರಣದಿಂದ ಜ್ಞಾನಿಯು ಆಗಮಗಳ ಹಾಗೂ ಶಾಸ್ತ್ರಗಳ ಯಥಾರ್ಥ ಅರ್ಥಘಟನವನ್ನು ಮಾಡಬಹುದಾಗಿದೆ. ಜ್ಞಾನಿಯೇ ಸತ್ಯಧರ್ಮದ ವೈದ್ಯನಿದ್ದಾನೆ.

ವೈರಾಗ್ಯ : ಸಮ್ಯಗ್ದರ್ಶನ ಪ್ರಾಪ್ತಿಯ ಕಾರಣ ಸತ್ಯಧರ್ಮದ ಜೊತೆಗೆ ವೈರಾಗ್ಯವೂ ಸಹ ಆವಶ್ಯಕವಿದೆ. ಈಗ ಮುಂದೆ ನಾವು ಅದರ ಸ್ವರೂಪವನ್ನು ತಿಳಿಸುತ್ತೇವೆ.

ವೈರಾಗ್ಯವೆಂದರೆ ಸಂಸಾರದ ಕಡೆಗಿರುವ ದೃಷ್ಟಿಯನ್ನು ದೂರಗೊಳಿಸಬೇಕು ಹಾಗೂ ಸಂಸಾರವು ಅಸಾರವಿದೆ ಎಂದೆನಿಸಬೇಕು. ವೈರಾಗ್ಯವು ಎರಡು ಪ್ರಕಾರವಾಗಿರುತ್ತದೆ. ಒಂದು ದುಃಖ ಗರ್ಭಿತ ಮತ್ತು ಎರಡನೆಯದು ಜ್ಞಾನಗರ್ಭಿತ ದುಃಖಗರ್ಭಿತ ವೈರಾಗ್ಯವು ಸಂಸಾರಿಕ ದುಃಖಗಳಿಂದ ಹೆದರಿದ ಕಾರಣ, ಅನಾರೋಗ್ಯದ ಕಾರಣ, ಯಾವದೇ ಆದಿ-ವ್ಯಾಧಿ ಅಥವಾ ಉಪಾಧಿಯ ಕಾರಣ, ಮೋಹ ಅಥವಾ ಪ್ರೇಮಭಂಗದ ಕಾರಣ ಅಥವಾ ತಮ್ಮವರ ಮರಣದ ಸಮಯ ಬರುತ್ತದೆ. ಈ ವೈರಾಗ್ಯವು ನಕಾರಾತ್ಮಕವಾಗಿರುತ್ತದೆ. ಏಕೆಂದರೆ ಇದರ ಹಿಂದೆ ಸಂಸಾರದಲ್ಲಿಂದ ಮನ್ನಿಸಲ್ಪಟ್ಟ ಸುಖವು ದೊರೆಯದ ಕಾರಣ ಹೀಗೆ ಆಗುತ್ತದೆ. ಹೀಗೆ ದುಃಖಗರ್ಭಿತ ವೈರಾಗ್ಯದಿಂದ ಪ್ರೇರಿತರಾಗಿ ಯಾರು ಧರ್ಮ ಮಾಡುತ್ತಾರೆ, ಅವರಿಗೆ ಹೆಚ್ಚು ಧರ್ಮ ಮಾಡಿದರೂ ಸಹ ಸಂಸಾರದ ಸುಖಗಳ ಪ್ರಾಪ್ತಿಯದೇ ಆಶಯವಾಗಿರುತ್ತದೆ ಮತ್ತು ಇದರಿಂದ ಅವರು ಧರ್ಮದ ಉತ್ತಮ ಫಲ ಅಂದರೆ ಸಮ್ಯಗ್ದರ್ಶನ ಮತ್ತು ಮೋಕ್ಷದಿಂದ ವಂಚಿತರಾಗಿಯೇ ಇದ್ದು ಏಕೇಂದ್ರಿಯದಲ್ಲಿ ಹೊರಟುಹೋಗುತ್ತಾರೆ. ಅದರಲ್ಲಿ ಅವರು ಅನಂತಕಾಲ ಇರುವರು. ಭಗವಾನರು ಏಕೇಂದ್ರಿಯದಿಂದ ಹೊರಡುವದು ಚಿಂತಾಮಣಿ ರತ್ನದ ಪ್ರಾಪ್ತಿಗಿಂತಲೂ ಹೆಚ್ಚು ದುರ್ಲಭವೆಂದು ಹೇಳಿದ್ದಾರೆ. ಆದರೆ ಯಾವಾಗ ದುಃಖಗರ್ಭಿತ ವೈರಾಗ್ಯವು ಕಾಲಾಂತರದಲ್ಲಿ ಜ್ಞಾನಗರ್ಭಿತ ವೈರಾಗ್ಯದಲ್ಲಿ ಪರಿವರ್ತಿತ ಆಗುತ್ತದೆ. ಆಗ ಆ ದುಃಖ ಗರ್ಭಿತ ವೈರಾಗ್ಯಕ್ಕೂ ಸಹ ಒಳ್ಳೆಯದೆಂದು ಹೇಳಲಾಗುತ್ತದೆ.

ಜ್ಞಾನಗರ್ಭಿತ ವೈರಾಗ್ಯವು ಸಂಸಾರ ಮತ್ತು ಸಂಸಾರಿಕ ಸುಖಗಳ ನಿಜವಾದ ಸ್ವರೂಪವನ್ನು ತಿಳಿಯುವ ಕಾರಣ ಬರುತ್ತದೆ. ಅದನ್ನು ನಿರ್ವೇದವೆಂದೂ ಕರೆಯುತ್ತಾರೆ. ಜ್ಞಾನಗರ್ಭಿತ ವೈರಾಗ್ಯವು ಕೇವಲ ಆತ್ಮಪ್ರಾಪ್ತಿಯ ಒಂದೇ ಲಕ್ಷ್ಯದಿಂದ ಆಗುತ್ತದೆ. ಅದನ್ನು ಸಂವೇಗ ಎಂದೂ ಹೇಳುತ್ತಾರೆ. ಆದ್ದರಿಂದ ಜ್ಞಾನಗರ್ಭಿತ

ವೈರಾಗ್ಯವೇ ಮೋಕ್ಷಮಾರ್ಗದ ಸಲುವಾಗಿ ಕಾರ್ಯಕಾರಿ ಇರುತ್ತದೆ. ಇದು ಯೋಗ್ಯ ಮತ್ತು ಪ್ರಶಂಸನೀಯವಿದೆ. ತಾತ್ಪರ್ಯವೇನೆಂದರೆ ಎಲ್ಲ ಮುಮುಕ್ಷು ಜೀವರುಗಳಿಗೆ ಈ ಜ್ಞಾನ ಗರ್ಭಿತ ವೈರಾಗ್ಯದ ಪ್ರಾಪ್ತಿಯ ಕಾರಣದಿಂದಲೇ ಪುರುಷಾರ್ಥ ಮಾಡಬೇಕಾಗುತ್ತದೆ.

ರಾಗವೂ ಸಹ ಎರಡು ಪ್ರಕಾರವಾಗಿರುತ್ತದೆ. ಒಂದು ಅಪ್ರಶಸ್ತ ರಾಗ ಮತ್ತು ಇನ್ನೊಂದು ಪ್ರಶಸ್ತ ರಾಗ. ಆದರೆ ಜ್ಞಾನಗರ್ಭಿತ ವೈರಾಗ್ಯವುಳ್ಳ ಜೀವಗಳ ಅಭಿಪ್ರಾಯದಲ್ಲಿ ಬಹುಶಃ ಎರಡರ ಅಭಾವ ಇರುತ್ತದೆ. ಏಕೆಂದರೆ ಅವರ ಲಕ್ಷ್ಯವು ಕೇವಲ ಒಂದೇ ಆತ್ಮಪ್ರಾಪ್ತಿಯಾಗಿರುತ್ತದೆ. ಆದರೆ ವ್ಯವಹಾರದಲ್ಲಿ ಅವರು ಬಹಳಷ್ಟು ಧರ್ಮ ಕಾರ್ಯಗಳನ್ನು ಮಾಡುತ್ತಲೇ ಇರುತ್ತಾರೆ. ಏಕೆಂದರೆ ಅವರು ಏನನ್ನೂ ಬಯಸುವದಿಲ್ಲ. ಅಂದರೆ ಅವರನ್ನು ನೋಡಿ ಉಳಿದ ಬಾಲಜೀವರುಗಳು ಸಹ ಕ್ರಿಯಾರಹಿತರಾದರೆಂದರೆ ಹೇಗೆ ? ಅದಕ್ಕಾಗಿ ಮಾಡುತ್ತಾರೆ.

ಅಪ್ರಶಸ್ತ ರಾಗದಲ್ಲಿ ಐದು ಇಂದ್ರಿಯಗಳ ವಿಷಯಗಳ ಕುರಿತು ಆಕರ್ಷಣೆ ಆಗುತ್ತದೆ. ಹೇಗೆಂದರೆ ಮನಸ್ಸಿಗೆ ಆನಂದ ಎನಿಸುವ ಸ್ಪರ್ಶ, ರಸ, ಘ್ರಾಣ, ಚಕ್ಷು ಮತ್ತು ಶ್ರವಣ ಇವು ಈ ಇಂದ್ರಿಯಗಳ ವಿಷಯದಲ್ಲಿಯೇ ಮನಸ್ಸು ಅಂಟಿಕೊಂಡಿರುತ್ತದೆ ಮತ್ತು ಅವುಗಳಲ್ಲಿಂದ ಯಾವದೇ ವಿಷಯ ಪ್ರಾಪ್ತವಾದರೆ ಅದರಲ್ಲಿ ಮುಳುಗಿ ಬಿಡುವನು. ಈ ಸಂಸಾರದಲ್ಲಿ ಎಷ್ಟೋ ಜೀವಗಳು ವಿಜಾತೀಯರ ಹಿಂದೆ ಹೋಗಿ ಹಾಳಾಗಿವೆ. ತಿನ್ನುವದರ ಹಿಂದೆ ಹೋಗಿ ಹಾಳಾಗಿವೆ. ಅಭಕ್ಷ್ಯವನ್ನು ತಿಂದು ರೋಗಿಯಾಗಿ ಸತ್ತಿದ್ದಾರೆ. ತಿನ್ನಬಾರದ ವಸ್ತುವನ್ನು ತಿಂದು ರೋಗಿಯಾಗಿದ್ದಾರೆ. ಕೆಲವರು ಸತ್ತಿದ್ದಾರೆ. ಸುಗಂಧದ ಹಿಂದೆ ಹೋಗಿ ಜೀವನವನ್ನೇ ಕಳೆದುಕೊಂಡಿದ್ದಾರೆ. ಪ್ರಕಾಶದ ಹಿಂದೆ ಹೋಗಿ ಹಾಳಾಗಿದ್ದಾರೆ. ಗೀತ ಸಂಗೀತದ ಹಿಂದೆ ಹೋಗಿ ಅಮೂಲ್ಯ ಜೀವನವನ್ನೇ ನಾಶ ಮಾಡಿಕೊಂಡಿದ್ದಾರೆ. ಧರ್ಮದ ಹೆಸರಿನಿಂದ ಗೀತ, ಸಂಗೀತದಲ್ಲಿ ಮುಳುಗಿ ಹಾಳಾಗಿದ್ದಾರೆ. ಹೀಗೆ ವಿಷಯ ಕಷಾಯಗಳಲ್ಲಿ ಮೋಸ ಹೋಗಿ ಸಂಸಾರದಲ್ಲಿ ಅಲೆಯುತ್ತಿದ್ದಾರೆ.

ಪ್ರಶಸ್ತ ರಾಗವು ದೇವ-ಶಾಸ್ತ್ರ-ಗುರು ಧರ್ಮಗಳ ಕುರಿತು ಆಗುತ್ತದೆ. ಆದರೆ ಅದನ್ನು ಪ್ರಶಸ್ತವೆಂದು ಯಾವಾಗ ಹೇಳಬಹುದಾಗಿದೆ ? ಯಾವಾಗ ಅವನು ಕೇವಲ ಒಂದೇ ಆತ್ಮಪ್ರಾಪ್ತಿಯ ಲಕ್ಷ್ಯದಲ್ಲಿ ಪರಿವರ್ತಿತನಾಗಿದ್ದರೆ ಮಾತ್ರ, ಇಲ್ಲವಾದರೆ ಅವನೂ ಸಹ ಮುಂದೆ ಹೋಗಿ ಅಪ್ರಶಸ್ತ ರೂಪದಲ್ಲಿಯೇ ಪರಿವರ್ತನೆಯನ್ನು ಪಡೆಯುತ್ತಾನೆ.

ಅಪ್ರಶಸ್ತ ಮತ್ತು ಪ್ರಶಸ್ತ ಈ ಎರಡೂ ಪ್ರಕಾರದ ರಾಗಗಳ ಕುರಿತು ಉದಾಸೀನತೆಗೆ ವೈರಾಗ್ಯ ಎಂದು ಹೇಳಲಾಗುತ್ತದೆ. ಅದರಲ್ಲಿ ಜ್ಞಾನಗರ್ಭಿತ ವೈರಾಗ್ಯವು ಸಮ್ಯಗ್ದರ್ಶನದ ಮತ್ತು ಮೋಕ್ಷದ ಸಲುವಾಗಿ ಉತ್ತಮ ಮತ್ತು ಕಾರ್ಯಕಾರಿ ಇದೆ. ಅಂದರೆ ಎಲ್ಲಿಯವರೆಗೆ ಬಾಹ್ಯ ಇಂದ್ರಿಯ ವಿಷಯಗಳ ಕುರಿತು ರಾಗ

ಇದೆ, ಅಲ್ಲಿಯವರೆಗೆ ಆ ಜೀವವು ನಿಯಮದಿಂದ ಬಹಿರಾತ್ಮನೇ ಇರುತ್ತಾನೆ. ಅಲ್ಲಿಯವರೆಗೆ ಆ ಜೀವವು ದೃಷ್ಟಿಯನ್ನು ಅಂತರದಲ್ಲಿ ಆತ್ಮಪ್ರಾಪ್ತಿಯ ಸಲುವಾಗಿ ಪ್ರಯತ್ನ ಮಾಡಿರುವದೇ ಇಲ್ಲ. ಆದ್ದರಿಂದ ಜ್ಞಾನಗರ್ಭಿತ ವೈರಾಗ್ಯಕ್ಕೆ ಜ್ಞಾನದ ತಂದೆ ಎಂದು ಹೇಳಲಾಗಿದೆ.

ವೈರಾಗ್ಯದ ಅಳತೆಗೋಲು ಹೇಗಿದೆ ಎಂದರೆ ನಮಗೆ ಯಾವುದರಲ್ಲಿ ಅಭಿರುಚಿ ಇದೆ, ಈ ಪ್ರಶ್ನೆಯ ಉತ್ತರದಲ್ಲಿ ಎಲ್ಲಿಯ ತನಕ ಸಾಂಸಾರಿಕ ವಸ್ತುಗಳ ಸಂಬಂಧವಾಗಿ ಇಚ್ಛೆ ಅಥವಾ ಆಕಾಂಕ್ಷೆ ಇದೆ, ಅಲ್ಲಿಯ ತನಕ ತಮ್ಮ ಮುಖವು ಸಂಸಾರದ ಕಡೆಗಿದೆ ಎಂದು ತಿಳಿಯುವದು ಮತ್ತು ಅದರ ನಿವೃತ್ತಿಯ ಕಾರಣ ಆ ಇಚ್ಛೆ ಮುಂತಾದವುಗಳ ಬೇರುಗಳ ತನಕ ಹೋಗಿ ಅದನ್ನು ಹನ್ನೆರಡು ಭಾವನೆಗಳಿಂದ ವರ್ಜಿಸುವದು ಅವಶ್ಯವಿದೆ. ಅಂದರೆ ಆ ಸಂಸಾರಿಕ ವಸ್ತುಗಳ ಸಂಬಂಧ ಅಥವಾ ಇಚ್ಛೆ ಅಥವಾ ಆಕಾಂಕ್ಷೆಗಳ ಹಿಂದೆ ಹೋಗುವ ಕಾರಣಗಳನ್ನು ಶೋಧಿಸಿ ಆ ಕಾರಣಗಳ ಜಡದ ತನಕ ಹೋಗುವದು ಅವಶ್ಯಕವಿದೆ. ಅದಕ್ಕಾಗಿ ಹನ್ನೆರಡು ಅನುಪ್ರೇಕ್ಷೆಗಳ ಅನುಸಾರ ಇಚ್ಛೆ, ಆಕಾಂಕ್ಷೆಗಳನ್ನು ನಾಶಗೊಳಿಸಬೇಕು. ಇದೇ ಮಹತ್ವದ ಸಾಧನೆಯಾಗಿದೆ. ಇದೆ ಸಾಧನೆಯಿಂದ ಜ್ಞಾನಗರ್ಭಿತ ವೈರಾಗ್ಯದ ಪ್ರಾಪ್ತಿ ಸಂಭವ ಆಗಬಹುದಾಗಿದೆ. ಅದರಿಂದ ಸಮ್ಯಗ್ದರ್ಶನದ ಯೋಗ್ಯ ಭೂಮಿಕೆಯು ಪ್ರಾಪ್ತವಾಗುತ್ತದೆ. ಅಂದರೆ ಆಧ್ಯಾತ್ಮಿಕ ಯೋಗ್ಯತೆಯು ಪ್ರಾಪ್ತವಾಗುತ್ತದೆ.

ಆಚಾರ್ಯ ಕುಂದಕುಂದರು ಮೋಕ್ಷ ಪಾಹುಡ ಗಾಥೆ ೬೬ ರಲ್ಲಿ ಹೇಳಿದ್ದಾರೆ – "ಎಲ್ಲಿಯ ತನಕ ಈ ಮನುಷ್ಯನು ಇಂದ್ರಿಯಗಳ ವಿಷಯಗಳಲ್ಲಿ ತನ್ನ ಮನಸ್ಸನ್ನು ಜೋಡಿಸಿರುತ್ತಾನೋ ಅಲ್ಲಿಯವರೆಗೆ ಅವನು ಆತ್ಮನನ್ನು ತಿಳಿಯುವದಿಲ್ಲ. ಏಕೆಂದರೆ ಅವನ ಲಕ್ಷ್ಯವು ವಿಷಯದಲ್ಲಿರುತ್ತದೆ. ಆತ್ಮನಲ್ಲಿ ಇರುವದಿಲ್ಲ. ಆದ್ದರಿಂದಲೇ ನಾವು ಮೇಲೆ ಹೇಳಿದ್ದೇವೆ ಏನಂದರೆ, "ನನಗೆ ಇಷ್ಟ ಏನು ಇದೆ ? ಇದನ್ನು ಮುಮುಕ್ಷು ಜೀವಗಳು ನೋಡುತ್ತಲೇ ಇರಬೇಕು ಮತ್ತು ಅದರಿಂದ ತನ್ನ ಯೋಗ್ಯತೆಯ ಶೋಧನೆ ಮಾಡುತ್ತ ಇರಬೇಕು. ಒಂದು ವೇಳೆ ಯೋಗ್ಯತೆ ಇರದಿದ್ದರೆ ಅದನ್ನು ಪಡೆಯುವ ಪುರುಷಾರ್ಥ ಮಾಡುವದು ಅವಶ್ಯಕವಿದೆ. ಆದ್ದರಿಂದ ವಿಷಯಗಳಿಂದ ವಿರಕ್ತ ಚಿತ್ತವುಳ್ಳ ಯೋಗಿ – ಧ್ಯಾನಿ – ಮುನಿ ಇವರೇ ಆತ್ಮನನ್ನು ತಿಳಿಯುತ್ತಾರೆ. ಇಲ್ಲಿ ಆತ್ಮ ಪ್ರಾಪ್ತಿಯ ಸಲುವಾಗಿ ಯೋಗ್ಯತೆಯನ್ನು ಹೇಳಲಾಗಿದೆ.

ಜ್ಞಾನಗರ್ಭಿತ ವೈರಾಗ್ಯದ ಪ್ರಾಪ್ತಿಯ ಉದ್ದೇಶವೇನೆಂದರೆ ಈ ಜಗತ್ತಿನ ವ್ಯವಸ್ಥೆಯನ್ನು ಹೇಗಿದೆಯೋ ಹಾಗೆ ತಿಳಿದುಕೊಂಡು ಸಂಸಾರದ ಪ್ರತಿಯೊಂದು ಜೀವವನ್ನು ಮೈತ್ರಿ ಮುಂತಾದ ನಾಲ್ಕು ಭಾವಗಳಲ್ಲಿಯೇ ವರ್ಗೀಕರಣಗೊಳಿಸಬೇಕು. ಬೇರೆ ರೀತಿ ಮಾಡಬಾರದು. ಸಂಸಾರದ ಪ್ರತಿಯೊಂದು ಪ್ರಸಂಗದಲ್ಲಿ ಹನ್ನೆರಡು ಪ್ರಸಂಗವನ್ನು ಅದೇ ರೀತಿಯಾಗಿ ಚಿಂತನೆ ಮಾಡಬೇಕು ಮತ್ತು ಸಂಸಾರದ ಪ್ರತಿಯೊಂದು ಪ್ರಸಂಗವನ್ನು ಅದೇ ರೀತಿಯಾಗಿ ವಿಶ್ಲೇಷಣೆ ಮಾಡುವದು

ಅವಶ್ಯಕವಿದೆ. ಈಗ ಮುಂದೆ ನಾವು ಹನ್ನೆರಡು ಭಾವನೆಗಳ ಸ್ವರೂಪವನ್ನು ಸಂಕ್ಷಿಪ್ತದಲ್ಲಿ ತಿಳಿಸುತ್ತೇವೆ.

**ಹನ್ನೆರಡು ಭಾವನೆಗಳು ಅನುಪ್ರೇಕ್ಷೆಗಳು :**

**೧. ಅನಿತ್ಯ ಭಾವನೆ :**

ಎಲ್ಲ ಸಂಯೋಗಗಳು ಅನಿತ್ಯ ಇವೆ. ಇಷ್ಟವಿರಲಿ ಅಥವಾ ಇಲ್ಲದಿರಲಿ ಇಂತಹ ಯಾವದೇ ಸಂಯೋಗಗಳು ನನ್ನ ಜೊತೆಗೆ ನಿತ್ಯ ಇರುವಂಥವಲ್ಲ. ಆದ್ದರಿಂದ ಅವುಗಳ ಮೋಹ ಅಥವಾ ದುಃಖ ತ್ಯಾಗ ಮಾಡುವದು. ಅವುಗಳಲ್ಲಿ 'ನನ್ನತನ' ಮತ್ತು 'ನನ್ನದು' ಎಂಬುದನ್ನು ಬಿಡಬೇಕು. ಹೀಗಿದ್ದರೂ ಸಹ ಆ ಮಾತಿನ ಮೇಲೆ ವಿಶ್ವಾಸ ಆಗದಿರುವದರಿಂದಲೇ ನಾವು ಎಲ್ಲವನ್ನು ಅನಾದಿಯಿಂದ ಆ ಅನಿತ್ಯಗಳ ಹಿಂದೆ ಓಡುತ್ತಿದ್ದೇವೆ. ಇದೇ ಕಾರಣದಿಂದ ನಾವು ಅನಾದಿಯಿಂದ ಇಂದಿನವರೆಗೂ ಸಂಸಾರದಲ್ಲಿ ದಾರಿ ತಪ್ಪಿ ಅಲೆದಾಡುತ್ತಿದ್ದೇವೆ. ಹೇಗೆ ಸಂಪತ್ತು, ಹಣ, ಪತ್ನಿ, ಪುತ್ರ, ಪರಿವಾರ ಮುಂತಾದವರ ಸಲುವಾಗಿ ನಾವು ನಮ್ಮ ಅನಂತ ಜೀವನವನ್ನು ಪೂರ್ಣ ರೂಪದಿಂದ ಸಮರ್ಪಣ ಮಾಡಿದ್ದೇವೆ. ಈಗ ಈ ಜೀವನದಲ್ಲಿ ನಮಗೆ ಈ ಎಲ್ಲರ ಕುರಿತಾದ ಮೋಹವನ್ನು ಜ್ಞಾನಗರ್ಭಿತ ವೈರಾಗ್ಯದ ಪ್ರಾಪ್ತಿ ಮಾಡಿಕೊಂಡು ಬಿಡುವದಿದೆ ಮತ್ತು ಕೇವಲ ನಮ್ಮ ಕರ್ತವ್ಯಗಳನ್ನು ಯಂತ್ರದಂತೆ ನಿರ್ವಹಿಸುತ್ತ ನಮ್ಮ ಉಳಿದ ಎಲ್ಲ ಸಂಸಾಧನಗಳನ್ನು (ಸಮಯ, ಧನ, ಸಂಪತ್ತಿ, ಬುದ್ಧಿ, ಚತುರತನ ಮುಂತಾದವು) ಕೇವಲ ಒಂದು ಆತ್ಮಪ್ರಾಪ್ತಿಯಲ್ಲಿಯೇ ತೊಡಗಿಸುವದು ಯೋಗ್ಯವಿದೆ. ಏಕೆಂದರೆ ಕೇವಲ ಒಂದು ಆತ್ಮನೇ ನಿತ್ಯವಿದೆ, ಶಾಶ್ವತವಿದೆ. ಅನಂತ ಅವ್ಯಾಬಾಧ ಸುಖದ ಖಣಿಯಿದೆ. ಈ ಭಾವನೆಯನ್ನು ಜೀವನದಲ್ಲಿ ಪ್ರತಿಕ್ಷಣ ಜೀವಂತವಾಗಿಡಬೇಕು. ಆಗ ಮಾತ್ರ ನಮ್ಮ ಸಂಸಾರದ ಕೊನೆಯಾಗಬಹುದಾಗಿದೆ. ಬೇರೆ ರೀತಿಯಿಂದ ಇಲ್ಲ.

ನಾವು ನಮ್ಮ ಜೀವನ ಕಾಲದಲ್ಲಿ ಎಷ್ಟೋ ಜೀವಗಳು ಮರಣ ಹೊಂದುವದನ್ನು ನೋಡಿದ್ದೇವೆ. ಎಷ್ಟೋ ಶರೀರಗಳು ರೋಗಗ್ರಸ್ತ ಆಗುವದನ್ನು ನೋಡಿದ್ದೇವೆ. ಎಷ್ಟೋ ಪರಿವಾರಗಳು ಅಗಲುವದನ್ನು ನೋಡಿದ್ದೇವೆ. ಎಷ್ಟೋ ಶ್ರೀಮಂತರು ಭಿಕ್ಷುಕರಾಗಿದ್ದನ್ನು ನೋಡಿದ್ದೇವೆ. ಆದರೂ ಸಹ ನಾವು ಹೀಗೆಯೇ ಜೀವಿಸುತ್ತಿದ್ದೇವೆ. ಹೇಗೆಂದರೆ ನಾವು ಎಂದೂ ಸಾಯುವದೇ ಇಲ್ಲ ಮತ್ತು ನಾವು ನಮ್ಮನ್ನು ರೂಪದಿಂದ, ಧನ ವೈಭವದಿಂದ, ಪರಿವಾರದಿಂದ, ಅಧಿಕಾರದಿಂದ ನಮ್ಮನ್ನು ದೊಡ್ಡವರೆಂದು ಮನ್ನಿಸಿಕೊಂಡು ಮಾನಕಷಾಯವನ್ನು ಪೋಷಿಸುತ್ತ ಇದ್ದೇವೆ. ಏನಂದರೆ ನಮ್ಮ ಆಯು ಎಂದು ಪೂರ್ಣವಾಗುವದು, ಯಾವಾಗ ರೋಗ ಬರುವದು, ನಮ್ಮ ರೂಪವು ಯಾವಾಗ ಸಮಾಪ್ತವಾಗುವದು, ಯಾವಾಗ ಯಾವದಾದರೂ ಎಲುಬು ಮುರಿಯುವದು, ದುರ್ಘಟನೆ ಯಾವಾಗ ಸಂಭವಿಸಬಹುದು. ಸಂಪತ್ತು ಯಾವಾಗ ಅಗಲುವದು, ಪರಿವಾರದಲ್ಲಿಯ ಪ್ರೇಮವು

ಎಂದು ವೈರತ್ವದಲ್ಲಿ ಬದಲಾವಣೆ ಆಗುವದು, ಇವು ಯಾವವೂ ಗೊತ್ತಿಲ್ಲ. ಯಾವಾಗ ಆನಂದವು ಸತ್ತಾ ಅಳುವಿನಲ್ಲಿ ಬದಲಾಗುವದು ಗೊತ್ತಿಲ್ಲ. ಆದರೂ ಸಹ ನಾವು ಈ ವಸ್ತುಗಳ ಮೇಲೆ ಅಹಂಕಾರ, ಮಮಕಾರ, ಅನುಮಾನ ಮಾಡಿ ನಮ್ಮ ಆತ್ಮನ ಪರಮ ಅಹಿತವನ್ನು ಮಾಡಿಕೊಳ್ಳುತ್ತಿದ್ದೇವೆ.

ಹೆಚ್ಚಾಗಿ ಜೀವಗಳು ತಮ್ಮ ತಾರುಣ್ಯಕಾಲದ ವಿಷಯಗಳು ಮತ್ತು ಕಷಾಯಗಳ ಹಿಂದೆ ಓಡಿ ಹಾಳಾಗುವದನ್ನು ನೋಡುತ್ತಿದ್ದೇವೆ. ಪ್ರೌಢಾವಸ್ಥೆಯು ಸಂಸಾರಿಕ ಕಾರ್ಯಗಳಲ್ಲಿ ತಮ್ಮ ಕುಶಲತೆಯನ್ನು ನಿಶ್ಚಿತಗೊಳಿಸುವಲ್ಲಿ ಖರ್ಚು ಮಾಡುವದನ್ನು ನೋಡುತ್ತಿದ್ದೇವೆ. ಎಷ್ಟೋ ಜೀವಗಳು ತಮ್ಮ ಪ್ರೌಢಾವಸ್ಥೆಯನ್ನು ಸಮಾಜದಲ್ಲಿ ಹೆಸರು ಗಳಿಸುವದರ ಹಿಂದೆ ಕಳೆಯುತ್ತಿರುವದನ್ನು ನೋಡುತ್ತಿದ್ದೇವೆ. ಈ ರೀತಿಯಿಂದ ಎಷ್ಟೋ ಜೀವಗಳು ಅನಂತಕಾಲದ ನಂತರ ದೊರೆತಂಥ ಧರ್ಮವನ್ನು ಪ್ರಾಪ್ತ ಮಾಡುವ ಅವಸರವನ್ನು ಕಳೆದುಕೊಳ್ಳುವದನ್ನು ನೋಡುತ್ತಿದ್ದೇವೆ ಮತ್ತು ಈ ಎಲ್ಲವುಗಳ ಹಿಂದೆ ಓಡುತ್ತಿರುವಾಗ ಮುಪ್ಪಾವಸ್ಥೆಯು ಯಾವಾಗ ಬಂದು ಹೆದರಿಸುವದೋ ಇದು ಸಹ ಗೊತ್ತಿಲ್ಲ. ಮುಪ್ಪಾವಸ್ಥೆಯಲ್ಲಿಯೂ ಸಹ ಇಂತಹ ಜೀವಗಳು ಆರ್ತಧ್ಯಾನ, ರೌದ್ರಧ್ಯಾನ ಮಾಡುತ್ತಿರುವದನ್ನು ನೋಡುತ್ತಿದ್ದೇವೆ. ಏಕೆಂದರೆ ಮುಪ್ಪಾವಸ್ಥೆಯಲ್ಲಿಯೂ ಸಹ ಕೇವಲ ಶರೀರವೇ ಮುದುಕಾಗಿದೆ. ಮನಸ್ಸು ಮಾತ್ರ ಯಾವಾಗಲೂ ತರುಣವಾಗಿಯೇ ಇರುತ್ತದೆ. ಏಕೆಂದರೆ ಮುಪ್ಪಾವಸ್ಥೆಯಲ್ಲಿಯೂ ಸಹ ಎಲ್ಲ ಇಚ್ಛೆ ಅಭಿರುಚಿಗಳು ಜೀವಂತವಿದ್ದು ಮನಸ್ಸು ವಿಷಯ ಕಷಾಯಗಳ ಹಿಂದೆಯೇ ಓಡುತ್ತಿದೆ. ಮನಸ್ಸಿನಲ್ಲಿಂದ ಕಾಯಭಾವವೂ ದೂರವಾಗಿರುವದಿಲ್ಲ. ಈ ತರದಿಂದ ನಾವು ಅನಾದಿಕಾಲದಿಂದ ಈ ಸಂಸಾರದಲ್ಲಿ ಅಲೆಯುತ್ತಿದ್ದೇವೆ. ಹೀಗೆಯೇ ಎಲ್ಲಿಯತನಕ ಈ ಎಲ್ಲವನ್ನು ಪ್ರಚಲಿತ ಇಡಬೇಕು. ಸಾಕು ಮಾಡೋಣ. ಸಂಸಾರದಲ್ಲಿ ಎಲ್ಲಿಯೂ ಶಾಶ್ವತ ಸುಖ ಇರುವದಿಲ್ಲ. ನಾವು ಅನಂತ ಸಲ ದೇವಲೋಕದ ಸುಖವನ್ನು ಅನುಭವಿಸಿ ಬಂದಿದ್ದೇವೆ. ಆದರೆ ಅವು ಸಹ ಒಂದು ದಿವಸ ಪೂರ್ಣವಾಗುತ್ತವೆ ಮತ್ತು ಎಷ್ಟೋ ಜೀವಗಳು ಆ ಸುಖಗಳಲ್ಲಿಂದಲೇ ಅನಂತ ಸಲ ನೇರವಾಗಿ ಏಕೇಂದ್ರಿಯದಲ್ಲಿ ಬಂದು ಜನಿಸುತ್ತವೆ. ಅಲ್ಲಿ ದುಃಖವೇ ದುಃಖವಿದೆ. ಎಷ್ಟೋ ಸಲ ರಾಜನು ಸಹ ಕ್ಷಣಾರ್ಧದಲ್ಲಿ ಏಕೇಂದ್ರಿಯದಲ್ಲಿ ಹೋಗಿಬಿಡುತ್ತಾನೆ. ಹಾಗೆಯೇ ಪ್ರತಿಯೊಂದು ಸಂಸಾರದ ಸುಖದ ಕೊನೆ ಮಾಡುವದು ನಿಶ್ಚಿತವೇ ಇದೆ. ಮತ್ತೆ ಇಂಥ ಸುಖದ ಹಿಂದ ಹುಚ್ಚನಾಗುವದು ಅಥವಾ ಮಮತ್ವ ಮಾಡುವದು ಅಜ್ಞಾನವಲ್ಲವೇ ? ಈ ಎಲ್ಲವೂ ತಿಳಿಯದಿರುವ ಕಾರಣವೇ ಅನಾದಿಯಿಂದ ಇಂಥ ಜೀವಗಳು ಸಂಸಾರದಲ್ಲಿ ಅಲೆಯುತ್ತಿರುತ್ತವೆ.

ಇದರಿಂದ ನಿಶ್ಚಿತವಾಗಿ ತಿಳಿದುಬರುವದೇನೆಂದರೆ ಈ ಪೂರ್ಣ ಜೀವನವು ಕೇವಲ ಒಂದು ಆತ್ಮಪ್ರಾಪ್ತಿಯ ಹಿಂದೆಬಿದ್ದು ಖರ್ಚು ಮಾಡಲು ಯೋಗ್ಯವಿದೆ ಎಂದು ತಿಳಿಯಬೇಕು. ಲಗುಬಗೆಯಿಂದ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಂಡು ಸ್ವಲ್ಪ ಕಾಲದಲ್ಲಿಯೇ ಅಮರನಾಗಬೇಕಾಗಿದೆ. ಸಿದ್ಧತ್ವವನ್ನು ಪಡೆಯಬೇಕಾಗಿದೆ.

ಹಾಗೆಯೇ ಮೇಲೆ ಹೇಳಿದ ಸುಖ (ಸುಖಾಭಾಸ)ವು ಸಹ ಪುಣ್ಯದಿಂದಲೇ ಪ್ರಾಪ್ತವಾಗುತ್ತದೆ. ಕೇವಲ ಪುರುಷಾರ್ಥದಿಂದಲ್ಲ. ಆದ್ದರಿಂದ ತಮ್ಮ ಪುಣ್ಯ ಮುಗಿಯಿತೆಂದರೆ ಅಲ್ಪ ಪುರುಷಾರ್ಥದಿಂದಲೇ ಅವು ತಮ್ಮಿಂದ ತಾವೇ ಪ್ರಾಪ್ತವಾಗುತ್ತವೆ. ಮತ್ತೆ ಅವುಗಳ ಹಿಂದೆ ಓಡುವುದರ ಅವಶ್ಯಕತೆಯಿಲ್ಲ. ಆತ್ಮಪ್ರಾಪ್ತಿಯ ಸಲುವಾಗಿ ಮಾಡಲಾದ ಪುರುಷಾರ್ಥದಿಂದ ಬೇಡದೇ ಇದ್ದರೂ ಸಹ ಎಲ್ಲಿಯ ತನಕ ಮೋಕ್ಷ ದೊರೆಯುವದಿಲ್ಲ, ಅಲ್ಲಿಯ ತನಕ ಸಾಂಸಾರಿಕ ಸುಖಗಳು ಪುಕ್ಕಟೆಯಾಗಿ ಬೇಡದೇ ದೊರೆಯುತ್ತವೆ. ಈ ಕಾರಣದಿಂದ ಹೆಚ್ಚು ಸಮಯ ಆತ್ಮಕಲ್ಯಾಣದಲ್ಲಿಯೇ ತೊಡಗುವದು ಯೋಗ್ಯವಿದೆ ಮತ್ತು ಕಡಿಮೆ ಸಮಯ ಸಂಪತ್ತು ಗಳಿಸುವ ಮುಂತಾದವುಗಳಲ್ಲಿ ತೊಡಗಿಸುವದು ಯೋಗ್ಯವಿದೆ. ಈ ರೀತಿಯಿಂದ ಪ್ರತಿಯೊಂದು ಸಂಸಾರಿ ಜೀವನಿಗೆ ಅನಿತ್ಯವನ್ನು ಬಿಟ್ಟು ದಿನಾಲು ಹೀಗೆ ಶುದ್ಧಾತ್ಮನನ್ನು ಮತ್ತು ಪರಂಪರೆಯಿಂದ ಮೋಕ್ಷವನ್ನು ಪಡೆಯಬೇಕು. ಇದುವೇ ಈ ಭಾವನೆಯ ಫಲವಿದೆ.

**೨. ಅಶರಣ ಭಾವನೆ :** ನನ್ನ ಪಾಪದ ಉದಯದ ಸಮಯ ನನಗೆ ತಂದೆ, ತಾಯಿ, ಪತ್ನಿ, ಪುತ್ರ, ಹಣ ಯಾವದೂ ಸಹ ಅಶರಣ ಇವೆ. ಅವರು ನನ್ನ ದುಃಖವನ್ನು ತೆಗೆದುಕೊಳ್ಳುವದಿಲ್ಲ. ಆದ್ದರಿಂದ ಅವರ ಮೋಹ ತ್ಯಾಗ ಮಾಡಬೇಕು. ಅವರಲ್ಲಿ ನನ್ನತನ ಬಿಡಬೇಕು. ಆದರೆ ಕರ್ತವ್ಯ ಪೂರ್ಣ ರೀತಿಯಿಂದ ನಿರ್ವಹಿಸಬೇಕು. ಯಾವಾಗ ಯಾವದೋ ಜೀವದ ಮರಣದ ಸಮಯ ಬರುತ್ತದೆ. ಅವನನ್ನು ಇಂದ್ರ, ನರೇಂದ್ರ ಮುಂತಾದವರಾರೂ ಉಳಿಸಿಕೊಳ್ಳಲು ಸಮರ್ಥರಿಲ್ಲ. ಜಗತ್ತಿನಲ್ಲಿ ಮರಣದ ಎದುರು ಜೀವವು ಅಶರಣವಿದೆ. ನಿಕಾಚಿತ ಕರ್ಮದ ಎದುರು ಸಹ ಜೀವವು ಅಶರಣವಿದೆ. ಸ್ವಂತಕ್ಕೆ ಪರಾಕ್ರಮಿ, ಶಕ್ತಿವಂತ, ಧನವಾನ, ಐಶ್ವರ್ಯವಾನ, ಗುಣವಾನ ಮುಂತಾಗಿ ತಿಳಿಯುವಂಥವನಿಗೂ ಸಹ ಮರಣವು ಆಗೇ ಆಗುತ್ತವೆ. ವೈದ್ಯ, ವಕೀಲ, ವಿದ್ಯಾ, ಮಂತ್ರ, ಔಷಧಿ ಯಾರೂ ಸಹ ಮರಣದ ಸನ್ಮುಖವಾದ ಜೀವಕ್ಕೆ ಶರಣ ಕೊಡುವದಿಲ್ಲ. ಒಂದು ವೇಳೆ ಲೌಕಿಕ ಸಿದ್ಧಿ ಪಡೆದವರಿದ್ದರೂ ಸಹ, ದೀರ್ಘಾಯು ಪಡೆದವನಿಗೂ ಮರಣವು ಆಯು ಕರ್ಮ ಮುಗಿದೊಡನೆ ಬಂದೇ ಬರುವದು. ಯಾವಾಗ ಸಿಂಹವು ಒಂದು ಚಿಗರೆಯನ್ನು ಬೇಟೆಯಾಡುತ್ತದೆ ಆಗ ಅದನ್ನು ಉಳಿಸಿಕೊಳ್ಳಲು ಯಾವದೇ ಬೇರೆ ಚಿಗರೆಯು ಬರುವದಿಲ್ಲ. ಅಂದರೆ ಆಗ ಯಾರೂ ಅದಕ್ಕೆ ಶರಣ ಕೊಡುವದಿಲ್ಲ.

ಈ ಜಗತ್ತಿನಲ್ಲಿ ನಾಲ್ಕು ಉತ್ಕೃಷ್ಟ ಇರುವರು. ೧. ಅರಿಹಂತ ೨. ಸಿದ್ಧರು ೩. ಸಾಧುಗಳು ಮತ್ತು ೪. ಕೇವಲೀ ಪ್ರಣೀತಧರ್ಮ = ಸತ್ಯಧರ್ಮ. ಇವರು ಎಲ್ಲರಿಗೂ ಶರಣರಿದ್ದಾರೆ. ಈ ನಾಲ್ವರು ಎಲ್ಲರಿಗೂ ತಮ್ಮ ಶುದ್ಧಾತ್ಮನ ಶರಣ ತೆಗೆದುಕೊಳ್ಳುವ ಸಲುವಾಗಿ ಪ್ರೇರಣೆ ನೀಡುತ್ತಾರೆ. ಪಂಚಪರಮೇಷ್ಠಿ ಭಗವಾನರು ಕೊಟ್ಟಂಥ ಧರ್ಮ ಮತ್ತು ಶುದ್ಧಾತ್ಮವೇ ಎಲ್ಲ ಜೀವಿಗಳಿಗೆ ಶರಣ ಇರುತ್ತವೆ.

ಇವರಾದರೂ ಸಹ ಮರಣವನ್ನು ಸುಧಾರಿಸಬಹುದಾಗಿದೆ ಮತ್ತು ಜನ್ಮ, ಮರಣಗಳಿಂದ ರಹಿತರನ್ನಾಗಿ ಮಾಡಬಹುದಾಗಿದೆ.

ವ್ಯವಹಾರದಿಂದ ಮೇಲೆ ಹೇಳಿದ ನಾಲ್ವರು ಶರಣರಿದ್ದಾರೆ. ನಿಶ್ಚಯದಿಂದ ಕೇವಲ ಒಂದು ಶುದ್ಧಾತ್ಮನೇ ಶರಣ ಇದ್ದಾನೆ. ವ್ಯವಹಾರದಿಂದ ನಾಲ್ವರು ಶರಣ ಇದ್ದರೆ ಅವರಿಗೆ ನಮಸ್ಕಾರ ಮಾಡುತ್ತಾರೆ. ಅದರಿಂದ ಅವನು ಕೇವಲ ಪ್ರೇರಣೆಯನ್ನು ಪಡೆಯುತ್ತಾನೆ. ಆದ್ದರಿಂದ ನಮ್ಮ ಆತ್ಮನೇ ನಮಗೆ ಪರಮಶರಣರೂಪ ಇರುವನು.

ಅಜ್ಞಾನಿಗೆ ಆತ್ಮಾನುಭೂತಿ ಇಲ್ಲದಿರುವದರಿಂದ ಅವನಿಗೆ ಸಮ್ಯಕ್ ನಿಶ್ಚಯ ಆಗುವದಿಲ್ಲ. ಆದ್ದರಿಂದ ವ್ಯವಹಾರದಿಂದ ಅವನಿಗೆ ಮೇಲೆ ಹೇಳಿದ ನಾಲ್ಕೇ ಶರಣಭೂತ ಇರುತ್ತವೆ. ಆದ್ದರಿಂದ ಎಲ್ಲಿಯ ವರೆಗೆ ಆತ್ಮಪ್ರಾಪ್ತಿ ಆಗುವದಿಲ್ಲ, ಅಲ್ಲಿಯವರೆಗೆ ಕೇವಲ ಒಂದು ಆತ್ಮ ಪ್ರಾಪ್ತಿಯ ಲಕ್ಷ್ಯದಿಂದ ಮೇಲೆ ಹೇಳಿದ ನಾಲ್ಕರ ಶರಣ ಗ್ರಹಣ ಮಾಡುವದಿದೆ ಮತ್ತು ನಂತರದಲ್ಲಿ ಕೇವಲ ಒಂದು ಶುದ್ಧಾತ್ಮನಲ್ಲಿ ನಿಲ್ಲುವದೇ ಪುರುಷಾರ್ಥ ಮಾಡಬೇಕು. ಇದುವೇ ಈ ಭಾವನೆಯ ಫಲವಿದೆ.

**೩. ಸಂಸಾರ ಭಾವನೆ :** ಸಂಸಾರ ಅರ್ಥಾತ್ ಸಂಸರಣ ದಾರಿತಪ್ಪಿ ವ್ಯರ್ಥ ಅಲೆದಾಡು ಮತ್ತು ಅದರಲ್ಲಿ ಒಂದು ಸಮಯದ ಸುಖದ ಎದುರು ಅನಂತ ಕಾಲದ ದುಃಖ ದೊರೆಯುತ್ತದೆ. ಆದ್ದರಿಂದ ಇಂಥ ಸಂಸಾರವು ಯಾರಿಗೆ ರುಚಿಸುವದು ? ಅಂದರೆ ಯಾರಿಗೂ ರುಚಿಸುವದಿಲ್ಲ ಮತ್ತು ಅದರಿಂದ ಕೇವಲ ಸಂಸಾರದಿಂದ ಬಿಡುಗಡೆಯದೇ ಲಕ್ಷ್ಯ ಇರಬೇಕು.

ಸಂಸಾರದ ವೃದ್ಧಿಗೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಎಲ್ಲಕ್ಕಿಂತ ದೊಡ್ಡ ಕಾರಣ ಮಿಥ್ಯಾತ್ವವಿದೆ. ಅದು ಇದ್ದಾಗ ಸಂಸಾರದ ಕೊನೆ ಎಂದಿಗೂ ಆಗುವದಿಲ್ಲ. ಮಿಥ್ಯಾತ್ವವು ಉಳಿದುಕೊಳ್ಳುವಲ್ಲಿ ಸಹಾಯ ಮಾಡುವಂಥ ಎಷ್ಟೋ ಕಾರಣಗಳು ಇವೆ. ಹೇಗೆಂದರೆ ಕ್ರೋಧ, ಮಾನ, ಮಾಯಾ, ಲೋಭ, ಐದು ಇಂದ್ರಿಯಗಳ ವಿಷಯ ಮುಂತಾದವುಗಳು ಇವೆ. ಎಲ್ಲಿಯತನಕ ಮಿಥ್ಯಾತ್ವ ಇರುವದು ಅಲ್ಲಿಯತನಕ ಜೀವದ ಹೆಚ್ಚೆಚ್ಚು ಸಮಯ ನಿಗೋದದಲ್ಲಿಯೇ ಕಳೆಯುವದು. ಏಕೆಂದರೆ ನಿಗೋದದಿಂದ ಹೊರಟು ಜೀವವು ಹೆಚ್ಚೆಂದರೆ ೨೦೦೦ ಸಾಗರೋಪಮ ಕಾಲದ ಸಲುವಾಗಿ ಹೊರಗೆ ಇರುತ್ತದೆ. ನಂತರದಲ್ಲಿ ತಮ್ಮಿಂದ ತಾವೇ ನಿಗೋದದಲ್ಲಿ ಮರಳಿ ಹೋಗುತ್ತವೆ. ಅಲ್ಲಿ ಅವು ಅನಂತ ಕಾಲದಿಂದ ಇರುತ್ತವೆ ಮತ್ತು ಭವಿಷ್ಯದಲ್ಲಿಯೂ ಸಹ ಅನಂತ ಕಾಲದ ತನಕ ಇರಬಹುದಾಗಿದೆ. ಆ ನಿಗೋದದಲ್ಲಿ ದುಃಖದ ಹೊರತು ಸ್ವಲ್ಪವೂ ಸುಖವಿಲ್ಲ. ಅಂದರೆ ಆ ಜೀವವು ಅಸಂಖ್ಯಾತ ಪುದ್ಗಲ ಪರಾವರ್ತನ ಕಾಲದ ತನಕ ಏಕೇಂದ್ರಿಯ ಜೀವರಾಶಿಯಲ್ಲಿ ಇರಬಹುದಾಗಿದೆ. ಅಲ್ಲಿಯೂ ದುಃಖದ ಹೊರತು ಕಿಂಚಿತ್ತೂ ಸುಖವಿಲ್ಲ.

ಸಂಸಾರದಲ್ಲಿ ಲೋಭದಿಂದ ತೃಷ್ಣಾಜನಿತ ದುಃಖವು ಉತ್ಪನ್ನವಾಗುತ್ತದೆ ಮತ್ತು ಲಾಭದಿಂದ ಆ ತೃಷ್ಣಾಜನಿತ ದುಃಖ ಮತ್ತು ಲೋಭಗಳು ಹೆಚ್ಚಾಗುತ್ತ ಹೋಗುತ್ತವೆ. ಲಾಭದ ಸಲುವಾಗಿ ಅನುಕೂಲ ಜೀವದ ಮೇಳೆ ರಾಗವಾಗುತ್ತದೆ ಮತ್ತು ಪ್ರತಿಕೂಲ ಜೀವದ ಮೇಲೆ ದ್ವೇಷ ಆಗುತ್ತದೆ. ಜೊತೆಗೇನೇ ಲಾಭ ಹೆಚ್ಚಿಸುವ ಸಲುವಾಗಿ ಮಾಯಾಚಾರದ ಸಹಾಯ ಪಡೆಯಲಾಗುತ್ತದೆ. ಹೆಚ್ಚು ಲಾಭ ಸಿಗುವದರಿಂದ ಮಾನ ಕಷಾಯವು ಉತ್ಪನ್ನವಾಗುತ್ತದೆ. ಈ ರೀತಿಯಿಂದ ಜೀವವು ಅನಂತಾನುಬಂಧಿ ಕಷಾಯಗಳಿಂದ ಉಳಿದುಕೊಳ್ಳುವದಿಲ್ಲ. ಅದರಿಂದ ಸಂಸಾರ ನಡೆಸುವ ಶಕ್ತಿಯು ಇಂಥ ಮೋಹದಿಂದ ಹೆಚ್ಚು ಗಟ್ಟಿಗೊಳ್ಳುತ್ತದೆ. ಮಿಥ್ಯಾತ್ವವು ಹೆಚ್ಚು ಗಟ್ಟಿಗೊಳ್ಳುತ್ತದೆ. ಈ ರೀತಿಯಿಂದ ಜೀವವು ಪೂರ್ವ ಕರ್ಮಗಳ ಫಲ ರೂಪವಾಗಿ ಸಂಯೋಗದಲ್ಲಿ ರತಿ ಅರತಿ ಮಾಡುತ್ತಿರುತ್ತದೆ. ಅಂದರೆ ಉದಯ ಭಾವದ ಪ್ರತೀಕಾರ ಮಾಡಿ ಅಥವಾ ಆ ಭಾವದಲ್ಲಿ ಕಲ್ಪಿಸಿಕೊಂಡು ಹೊಸ ಕರ್ಮ ಬಂಧಿಸಿಕೊಳ್ಳುತ್ತಾರೆ. ಈ ಸಂಸಾರದ ವಿಚಿತ್ರತೆಯು ಹೇಗಿದೆಯೆಂದರೆ ನಾವು ಯಾರ ಮುಖವನ್ನು ಸಹ ನೋಡಲು ಬಯಸುವದಿಲ್ಲವೋ ಅದೇ ಜೀವವು ಬೇರೆ ಭವಗಳಲ್ಲಿ ನಮಗೆ ಪತ್ನಿ, ಪುತ್ರ, ಪರಿವಾರ ಮುಂತಾದ ರೂಪದಿಂದ ಪ್ರಾಪ್ತವಾಗುತ್ತದೆ. ನಮಗೆ ಅವರ ಸಂಪೂರ್ಣ ಜೀವನವನ್ನೇ ಸಹಿಸಿಕೊಳ್ಳಬೇಕಾಗುತ್ತದೆ. ಈ ರೀತಿಯಾಗಿ ನಮ್ಮ ಜೀವನವು ನರಕದಂತೆ ಆಗುತ್ತದೆ. ಆದ್ದರಿಂದ ನಾವು ಇದೇ ಭವದಲ್ಲಿಯೇ ಎಲ್ಲ ಜೀವಗಳೊಂದಿಗೆ ಮೈತ್ರಿಭಾವ ಮಾಡಿಕೊಳ್ಳುವದು ಅವಶ್ಯಕವಿದೆ. ಇದೇ ಪ್ರಕಾರದಿಂದ ಜೀವವು ಇಂದ್ರಿಯಗಳ ಸುಖದ ಹಿಂದೆ ಹುಚ್ಚನಾಗಿ ತಿರುಗಿ ಅನಂತ ದುಃಖವನ್ನು ಸಹಿಸುತ್ತ ಬರುತ್ತಿದೆ. ಏಕೆಂದರೆ ಇಂದ್ರಿಯ ಸುಖ ಎಂದೂ ಸಮಾಪ್ತವಾಗುವಂಥದಲ್ಲ. ಹೀಗೆ ಯಾವಾಗಲೂ ಇಂದ್ರಿಯಗಳು ತೃಷ್ಣೆಗೆ ಜನ್ಮ ಕೊಡುತ್ತವೆ ಮತ್ತು ಇಂದ್ರಿಯಗಳ ವಿಷಯದ ಆ ತೃಷ್ಣಾರೂಪಿ ಪೀಡೆಯು ಜೀವವನ್ನು ಎಂದೂ ಸಮಾಪ್ತವಾಗಲಾರದ ತೃಷ್ಣಾಜನಿತ ಮತ್ತು ಶಾರೀರಿಕ ದುಃಖ ಕೊಡುತ್ತದೆ. ಅನಾದಿಯಿಂದ ಹೀಗೆ ವಿಷಚಕ್ರದಲ್ಲಿ ಸಿಕ್ಕುಬಿದ್ದ ಜೀವವು ಸಂಸಾರದಲ್ಲಿ ಮಗ್ನನಾಗಿದ್ದಾನೆ. ಈ ವಿಷಚಕ್ರದಿಂದ ಉಳಿಯುವದು ಬಹಳ ಅವಶ್ಯವಿದೆ. ಆದರೆ ಅಸಂಭವವೇನಲ್ಲ. ಪ್ರತಿಯೊಂದು ಜೀವನ ತನ್ನ ಪರಿವಾರದ ಪ್ರತಿಯೊಬ್ಬ ಸದಸ್ಯನ ಜೊತೆಗೆ ಅನಾದಿಯಿಂದ ಎಲ್ಲ ಪ್ರಕಾರದ ಸಂಬಂಧಗಳನ್ನು ಎಷ್ಟೋ ಸಲ ಮಾಡಿದ್ದಾನೆ. ಮತ್ತು ಜೀವಿಸಿದ್ದಾನೆ.

ಸಂಸಾರದ ಜನ್ಮವು ವಿಕಲ್ಪರೂಪದಿಂದ ಮೊದಲು ಮನಸ್ಸಿನಲ್ಲಿ ಆಗುತ್ತದೆ. ನಂತರ ಅದಕ್ಕೆ ಆಕಾರ ರೂಪವು ಪ್ರಾಪ್ತವಾಗುತ್ತದೆ. ಆದ್ದರಿಂದ ಸಂಸಾರದ ಕೊನೆ ಬಯಸುವವರು ಎಲ್ಲಕ್ಕಿಂತ ಮೊದಲು ಮನಸ್ಸಿನಿಂದ ವಿಕಲ್ಪರೂಪಿ ಸಂಸಾರದ ನಾಶ ಮಾಡಬೇಕು. ಇದರಿಂದ ನಿಮ್ಮನ್ನು ನೀವೇ ಪ್ರಶ್ನೆ ಮಾಡಬೇಕು – "ನಮಗೆ ಏನು ಇಷ್ಟವಿದೆ ?" ಉತ್ತರದಲ್ಲಿ ಒಂದು ವೇಳೆ ಸಂಸಾರದ ಇಚ್ಛೆ ಅಥವಾ

ಬಯಕೆಗಳು ಇದ್ದರೆ ಅದನ್ನು ಹನ್ನೆರಡು ಭಾವನೆಗಳಿಂದ ನಾಶಗೊಳಿಸಬೇಕು. ಹೀಗೆ ಸಂಸಾರದ ನಾಶ ಮಾಡುವ ರೀತಿ ಇದೆ.

ಇಂತಹ ಸಂಸಾರದಲ್ಲಿ ಇರಲು ಯಾರಿಗೆ ಇಷ್ಟ ಎನ್ನಿಸುವದು. ಇಲ್ಲಿಂದ ಒಂದು ಸಮಯದ ಸುಖ (ಸುಖಾಭಾಸ)ದ ವಿರುದ್ಧವಾದ ಅನಂತ ಸಮಯ ವಿನೋದದಲ್ಲಿ ದುಃಖ ಸಹಿಸುತ್ತ ಇರಬೇಕಾಗುವದು. ಯಾರಿಗೂ ಈ ಮಾತು ಸರಿ ಎನಿಸುವದಿಲ್ಲ. ಆದರೆ ಈ ಮಾತಿನ ಯಥಾರ್ಥತೆಯನ್ನು ತಿಳಿಯದ ಕಾರಣ ಜೀವವು ಅನಾದಿಯಿಂದ ಇದೇ ರೀತಿಯಾಗಿ ಅನಂತಾನಂತ ದುಃಖವನ್ನು ಸಹಿಸುತ್ತ ಬಂದಿದೆ ಮತ್ತು ಒಂದು ವೇಳೆ ಇನ್ನೂ ಸಹ ತಿಳಿವಳಿಕೆಯಲ್ಲಿ ಬರದಿದ್ದರೆ ಇದೇ ರೀತಿಯಿಂದ ಅನಂತಾನಂತ ಕಾಲದವರೆಗೆ ಅನಂತಾನಂತ ದುಃಖ ಸಹಿಸುತ್ತ ಇರಬೇಕಾಗುವದು. ಇದನ್ನು ವಿಚಾರ ಮಾಡಿ ನಮ್ಮ ಮೇಲೆ ಮತ್ತು ಎಲ್ಲ ಜೀವಗಳ ಕುರಿತು ಅನಂತಾನಂತ ಕರುಣೆ ಬರಬೇಕು. ಈ ತರಹದಿಂದ ನಮ್ಮಿಂದ ನಮ್ಮ ಮೇಲೆ ಕರುಣೆ ಮಾಡಿ ಅಂದರೆ ಸ್ವ ದಯೆ ಮಾಡಿ ಬೇಗನೇ ನಮ್ಮ ಆತ್ಮಕಲ್ಯಾಣ ಸಾಧ್ಯ ಮಾಡಿಕೊಳ್ಳಬೇಕು. ಈ ಭಾವನೆಯ ಫಲ ಇದುವೇ ಇದೆ.

**೪. ಏಕತ್ವ ಭಾವನೆ :** ಅನಾದಿಯಿಂದ ನಾನು ಒಬ್ಬನೇ ದಾರಿತಪ್ಪಿ ಬಂದಿದ್ದೇನೆ. ಒಬ್ಬನೇ ದುಃಖ ಅನುಭವಿಸುತ್ತಿದ್ದೇನೆ. ಮರಣದ ಸಮಯ ನನ್ನೊಂದಿಗೆ ಬರುವವರು ಯಾರೂ ಇಲ್ಲ. ನನ್ನ ಶರೀರವೂ ಸಹ ಬರುವದಿಲ್ಲ. ಆದ್ದರಿಂದ ನನಗೆ ಸಾಧ್ಯವಾದಷ್ಟು ನನ್ನಲ್ಲಿ (ಆತ್ಮನಲ್ಲಿಯೇ) ಇರುವ ಪ್ರಯತ್ನ ಮಾಡಬೇಕು.

ನಮಗೆ ಕೇವಲ ಒಬ್ಬ ಶುದ್ಧಾತ್ಮನೊಂದಿಗೇನೇ ಒಂದು ಮಾಡುವದಿದೆ. ಇದೇ ಮಾತು ಸಮಯಸಾರದಲ್ಲಿ ಹೇಳಲಾಗಿದೆ. ಸಮಯಸಾರ ಗಾಥೆ ೩ರಲ್ಲಿ ಹೀಗೆ ಹೇಳಲಾಗಿದೆ – ನಿಶ್ಚಯವಾಗಿ ಏಕತ್ವಕ್ಕೆ ಪ್ರಾಪ್ತವಾಗುವ ಸಮಯವಿದೆ (ಅಂದರೆ ಯಾವನು ಕೇವಲ ಶುದ್ಧಾತ್ಮನಲ್ಲಿಯೇ 'ನನ್ನತನ' ಮಾಡಿ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಂಡಿದ್ದಾನೆ. ಅಂಥ ಆತ್ಮ) ಈ ಲೋಕದಲ್ಲಿ ಎಲ್ಲೆಡೆಯೂ ಸುಂದರವಿದೆ. (ಅಂದರೆ ಅಂಥ ಜೀವವು ನರಕದಲ್ಲಿರಲಿ ಅಥವಾ ಸ್ವರ್ಗದಲ್ಲಿ ಇರಲಿ ಅಂದರೆ ದುಃಖದಲ್ಲಿ ಇರಲಿ ಅಥವಾ ಸುಖದಲ್ಲಿ ಇರಲಿ, ಆದರೆ ಅದು ಸುಂದರ ಅರ್ಥಾತ್ ಸ್ವದಲ್ಲಿ ಸ್ಥಿತವಿದೆ.) ಆದ್ದರಿಂದ ಏಕತ್ವದಲ್ಲಿ ಎರಡನೆಯವರೊಂದಿಗೆ ಬಂಧದ ಕಥೆ (ಅರ್ಥಾತ್ ಬಂಧರೂಪ ವಿಭಾವಗಳಲ್ಲಿ 'ನನ್ನತನ' ಮಾಡುತ್ತಲೇ ಮಿಥ್ಯಾತ್ವದ ಉದಯವಾಗುವದರಿಂದ) ವಿಸಂವಾದ ವಿರೋಧ ಮಾಡುವಂಥ (ಅರ್ಥಾತ್ ಸಂಸಾರದಲ್ಲಿ ಅನಂತ ದುಃಖರೂಪ ಫಲ ಕೊಡುವಂಥ)ದ್ದು ಇದೆ ಮತ್ತು ಎರಡನೇ ಆತ್ಮದ್ರವ್ಯವು ಬೇರೆ ಕರ್ಮ – ನೋಕರ್ಮ ರೂಪ ಪುದ್ಗಲ ದ್ರವ್ಯದ ಜೊತೆಗೆ ಬಂಧ ಮಾಡುತ್ತಿರುತ್ತದೆ. ಅದರಲ್ಲಿ ವಿಸಂವಾದ ಇದೆ. ಅಂದರೆ ದುಃಖವಿದೆ. ಯಾವಾಗ ಅದೇ ಆತ್ಮದ್ರವ್ಯವು ಪುದ್ಗಲದ್ರವ್ಯದ ಸಂಗಡವಿದ್ದರೂ ಬಂಧನದಿಂದ ಮುಕ್ತವಾಗಬಹುದಾಗಿದೆ. ಆಗ ಅದು ಸುಂದರವಿದೆ. ಅರ್ಥಾತ್ ಅವ್ಯಾಬಾಧ ಸುಖವಿರುತ್ತದೆ.

ಮುಂದೆ ಸಮಯ ಸಾರ ಗಾಥೆ ೭ರಲ್ಲಿ : ಜ್ಞಾನಿಗೆ ದರ್ಶನ, ಜ್ಞಾನ, ಚಾರಿತ್ರ ಈ ಮೂರು ಭಾವಗಳು ವ್ಯವಹಾರದಿಂದ ಹೇಳುವಲ್ಲಿ ಬರುತ್ತವೆ. (ಜ್ಞಾನಿಗೆ ಕೇವಲ ಒಂದು ಅಭೇದ ಭಾವ ರೂಪ 'ಶುದ್ಧಾತ್ಮ'ನಲ್ಲಿಯೇ 'ನನ್ನತನ' ಆಗುವದರಿಂದ ಯಾವ ವಿಶೇಷ ಭಾವಗಳಿವೆ ಮತ್ತು ಯಾವ ಭೇದರೂಪ ಭಾವಗಳಿವೆ, ಅವು ವ್ಯವಹಾರವೆಂದು ಹೇಳಲಾಗುತ್ತದೆ.) ನಿಶ್ಚಯದಿಂದ ಜ್ಞಾನವೂ ಇಲ್ಲ. ಅದು ಒಂದು ಅಭೇದ ಸಾಮಾನ್ಯ ಭಾವರೂಪ ಆಗಿರುವದರಿಂದ ಅದರಲ್ಲಿ ಭೇದರೂಪ ಭಾವ ಮತ್ತು ವಿಶೇಷ ಭಾವ ಈ ಎರಡೂ ಭಾವ ಇರುವದಿಲ್ಲ. ಜ್ಞಾನಿಯಂತೂ ಒಂದು ಶುದ್ಧ ಜ್ಞಾಯಕನೇ ಇದ್ದಾನೆ. ಅರ್ಥಾತ್ ಶುದ್ಧ ನಿಶ್ಚಯ ನಯದ ವಿಷಯ ಕೇವಲ ಇಂಥ ಅಭೇದ ಶುದ್ಧಾತ್ಮನೇ ಇದ್ದಾನೆ. ಇದುವೇ ಏಕತ್ವ ಭಾವನೆಯಿದೆ.

ಜ್ಞಾನಿಗೆ ದರ್ಶನವಿದೆ, ಜ್ಞಾನವಿದೆ ಮತ್ತು ಚಾರಿತ್ರವಿದೆ. ಆದರೆ ಪರಮಾರ್ಥದಿಂದ (ವಾಸ್ತವದಲ್ಲಿ) ನೋಡುವಲ್ಲಿ ಬಂದರೆ ಅನಂತ ಪರ್ಯಾಯಗಳನ್ನು ಒಂದು ದ್ರವ್ಯ ಕುಡಿದುಬಿಟ್ಟಿತು. ಹೀಗೆ ಆಗುವದರಿಂದ ಯಾವದು ಒಂದು ಇದೆ (ದ್ರವ್ಯವು ಮೂರೂ ಕಾಲಗಳಲ್ಲಿ ಆಯಾ ಪರ್ಯಾಯರೂಪವಾಗಿ ಪರಿಣಮಿತವಾದರೂ ಸಹ ತನ್ನ ದ್ರವ್ಯತನವನ್ನು ಬಿಡುವದಿಲ್ಲ. ಹೇಗೆಂದರೆ ಮಣ್ಣು ಕೂಡ ಪಿಂಡರೂಪದಿಂದ ಪರಿಣಮಿಸಿದ ಬಳಿಕವೂ ಸಹ ಮಣ್ಣುತನ ಬಿಡುವದಿಲ್ಲ ಮತ್ತು ಪ್ರತಿಯೊಂದು ಪರ್ಯಾಯದಲ್ಲಿ ಆ ಮಣ್ಣುತನವು ವ್ಯಾಪ್ಯ-ವ್ಯಾಪಕ ಸಂಬಂಧದಿಂದ ಇರುತ್ತದೆ.) ಒಂದು ಶುದ್ಧ ಜ್ಞಾಯಕವೇ ಇರುತ್ತದೆ. ಹೀಗೆ ಏಕತ್ವ ಭಾವನೆ ಆಗುವ ಹಾಗಿದ್ದರೂ ಸಹ ಅನೇಕ ಜನರು ದ್ರವ್ಯ ಪರ್ಯಾಯವನ್ನು ಬೇರೆ ಮಾಡುವ ಚಕ್ರದಲ್ಲಿ ಮೋಸಹೋಗಿ ಅನಂತ ಕಾಲ ಸಂಸಾರದಲ್ಲಿ ದುಃಖದ ಮಾರ್ಗವೇ ಪ್ರಶಸ್ತ ಮಾಡುತ್ತಿರುತ್ತಾರೆ. ಈ ಮಾತು ಅವರಿಗೆ ತಿಳಿವಳಿಕೆಯಲ್ಲಿ ಬರುವದಿಲ್ಲ. ಕರುಣೆಯನ್ನು ಹುಟ್ಟಿಸುವಂಥದ್ದಿರುತ್ತದೆ.

ಜೀವವು ಈ ಸಂಸಾರದಲ್ಲಿ ಪರಿವಾರ, ಸಂಪ್ರದಾಯ ಅಥವಾ ಸಮಾಜ, ವಿಶೇಷ ಪಕ್ಷವನ್ನು ಹಿಡಿದು ಯಾವಾಗ ಸ್ವಲ್ಪ ತಪ್ಪು ಮಾಡಿದರೆ ಅದರ ಫಲವನ್ನು ಒಬ್ಬನೇ ಅವನೇ ಭೋಗಿಸಬೇಕಾಗುತ್ತದೆ. ವಸ್ತುವಿನ ಧರ್ಮ ಒಂದೇ ಇರುತ್ತದೆ. ಅದು ಬದಲಿಸುವದಿಲ್ಲ. ಅಂದರೆ ಆತ್ಮಕಲ್ಯಾಣದ ಮಾರ್ಗ ಒಂದೇ ಇರುತ್ತದೆ ಮತ್ತು ಈ ಜಗತ್ತಿನಲ್ಲಿ ಎಲ್ಲ ಜೀವಗಳ ಸಲುವಾಗಿ ನಿಯಮವು ಒಂದೇ ಸಮಾನವೇ ಆಗುತ್ತವೆ. ಬೇರೆ ಬೇರೆ ಸಂಪ್ರದಾಯಗಳನ್ನು ನಾವು ಮಾಡಿದ್ದೇವೆ. ಅವು ಸಮಾಜ ವ್ಯವಸ್ಥೆಯ ಸಲುವಾಗಿ ಸರಿ ಇದೆ. ಆದರೆ ಆ ಮತ-ಪಂಥ-ಸಂಪ್ರದಾಯದ ಆಗ್ರಹವು ತಮ್ಮ ಆತ್ಮನ ಕಲ್ಯಾಣದಲ್ಲಿ ವಿಘ್ನ ಮಾಡುವಂಥವುಗಳಾಗಬಾರದು.

ಹೀಗೆ ಏಕತ್ವ ಭಾವನೆಯಿದೆ. ಅದರ ವಿಷಯ ಕೇವಲ ಒಂದು ಶುದ್ಧಾತ್ಮನೇ ಇದ್ದಾನೆ. ಸಂಸಾರಿ ಜೀವಗಳು ಅನಾದಿಯಿಂದ ಶರೀರ ಮುಂತಾದ ಪರಭಾವಗಳಲ್ಲಿಯೇ ಏಕತ್ವ ಮಾಡಿದ್ದಾನೆ ಮತ್ತು ದುಃಖಗಳಿಗೆ ಆಮಂತ್ರಣ

ಕೊಟ್ಟಿದ್ದಾನೆ. ಯಾವಾಗ ಜೀವವು ಈ ಭಾವನೆಯ ಮರ್ಮವನ್ನು ತಿಳಿದುಕೊಂಡು ಕೇವಲ ಒಂದು ಶುದ್ಧಾತ್ಮನಲ್ಲಿಯೇ ಅಂದರೆ ಸ್ವಭಾವದಿಂದಲೇ ಏಕತ್ವ ಮಾಡುತ್ತಾನೆ. ಆಗ ಜೀವದ ಸಂಸಾರವು ಸೀಮಿತವಾಗುತ್ತದೆ. ಅಂದರೆ ಆ ಜೀವದ ಮೋಕ್ಷವು ಸಮೀಪವಾಗುತ್ತದೆ.

**೫. ಅನ್ಯತ್ವ ಭಾವನೆ :** ಇದನ್ನು ಚಿಂತನೆ ಮಾಡಬೇಕು. ಅಂದರೆ ಮೊದಲು ಹೇಳಿದ ಅನುಸಾರ ಪುದ್ಗಲ ಮತ್ತು ಪುದ್ಗಲ (ಕರ್ಮ) ಆಶ್ರಿತ ಭಾವಗಳಿಂದ ತನ್ನನ್ನು ಪರದ್ರವ್ಯಗಳಿಂದ ಭಿನ್ನವೆಂದು ತಿಳಿಯಬೇಕು ಮತ್ತು ಅದರಲ್ಲಿ 'ನನ್ನತನ' ಮಾಡುವದು ಅದರದೇ ಅನುಭವ ಮಾಡುವದು, ಅದನ್ನೇ ಸಮ್ಯಗ್ದರ್ಶನವೆಂದು ಹೇಳಲಾಗುತ್ತದೆ. ಅದುವೇ ಈ ಜೀವನದ ಕೇವಲ ಒಂದು ಲಕ್ಷ್ಯ ಮತ್ತು ಕರ್ತವ್ಯ ಆಗಬೇಕು.

ಅನಾದಿಯಿಂದ ಶರೀರ, ಧನ, ಪತ್ನಿ, ಪುತ್ರ, ಪರಿವಾರ ಮುಂತಾದವುಗಳಲ್ಲಿ ಕರ್ಮದ ಸಂಯೋಗ ವಶದಿಂದ ಪರದಲ್ಲಿಯೇ 'ನನ್ನತನ' ಮತ್ತು 'ನನ್ನದು' ಎಂದು ಮನ್ನಿಸಿಕೊಂಡು ಜೀವವು ದುಃಖವನ್ನು ಅನುಭವಿಸುತ್ತ ಬಂದಿರುತ್ತದೆ. ಈಗ ಎಲ್ಲಿಯ ವರೆಗೆ ಹೀಗೆಯೇ ದುಃಖವನ್ನು ಅನುಭವಿಸುತ್ತ ಇರುವದಿದೆ ? ಅಂದರೆ ಎಲ್ಲಿಯ ತನಕ ಪರದಲ್ಲಿಯೇ 'ನನ್ನದು ಮತ್ತು ನನ್ನತನ' ಮನ್ನಿಸುವದನ್ನು ಪ್ರಚಲಿತ ಇಟ್ಟುಕೊಂಡು ದುಃಖಿಯಾಗುವದಿದೆ ? ಪರಿವಾರದವರೆಲ್ಲರೂ ತಮ್ಮ ಸಲುವಾಗಿ ಬೇರೆಯೇ ಇದ್ದಾರೆ. ಪ್ರತಿಯೊಂದು ಜೀವವು ಸ್ವತಂತ್ರ ಇದೆ. ಆದ್ದರಿಂದ ಅವುಗಳ ಸ್ವತಂತ್ರತೆಯ ಆದರ ಮಾಡುತ್ತ ನಮಗೆ ನಮ್ಮ ಯಾವದೇ ನಿರ್ಣಯವನ್ನು ಬೇರೆಯವರ ಮೇಲೆ ಹೊರಿಸುವ ಪ್ರಯತ್ನ ಮಾಡಬಾರದು. ನಾವು ಬೇರೆಯವರನ್ನು ಪ್ರೇಮದಿಂದ, ಆದರದಿಂದ ತಿಳಿಸಬೇಕು. ಪ್ರೇರಣೆ ನೀಡಬಹುದು. ಆದರೆ ಆದೇಶ ಅಂದರೆ ಆಜ್ಞೆ ಮಾಡುವಂತಿಲ್ಲ. ಅಂದರೆ ವ್ಯವಹಾರಿಕ ಕಾರ್ಯದ ಸಲುವಾಗಿ ನಮ್ಮ ಯಾವ ಹೊಣೆಗಾರಿಕೆ ಇದೆ. ಅದನ್ನು ಪಾಲಿಸುವ ಸಲುವಾಗಿ ಯಾವದೇ ಕಠೋರ ನಿರ್ಣಯ ಅಥವಾ ಆದೇಶ ಅವಶ್ಯವಿದ್ದರೂ ಆಗಲೂ ಸಹ ಯಾರಿಗೂ ಅನ್ಯಾಯ ಆಗಬಾರದು ಎಂಬುದು ಲಕ್ಷ್ಯ ಇಟ್ಟು ನಮ್ಮ ಹೊಣೆಗಾರಿಕೆ ನಿಭಾಯಿಸಬೇಕು. ಅಂದರೆ ಎಲ್ಲಿ ಜೀವಗಳ ಸ್ವತಂತ್ರತೆಯ ಆದರ ಮಾಡುತ್ತ ಸಮಾಜ, ದೇಶ ಅಥವಾ ಧರ್ಮದ ಸಲುವಾಗಿ ಯಾವ ನಿಯಮ ಅವಶ್ಯಕವಿದೆ ಅದನ್ನು ಮಾಡಬೇಕಾಗುತ್ತದೆ. ಬೇರೆಯವರ ಮೇಲೆ ನಮ್ಮದು ಯಾವದೇ ನಿರ್ಣಯ, ಆಗ್ರಹ, ದುರಾಗ್ರಹ ಮುಂತಾದವುಗಳನ್ನು ಹೊರಿಸಬಾರದು. ಇಲ್ಲವಾದರೆ ನಮಗೂ ಸಹ ಹೀಗೆ ಎಷ್ಟೋ ಸಲ ಮೈಮೇಲೆ ಹಾಕಿಕೊಳ್ಳಬೇಕಾಗುತ್ತದೆ. ಇದುವೇ ಕರ್ಮದ ಸಿದ್ಧಾಂತವಿದೆ.

ಇಂಥ ಮೋಹಕರ್ಮವು ಆತ್ಮನಿಗೆ ಸ್ವಂತದ ಸ್ವರೂಪ ಆಸ್ವಾದನದ ಭಾವವನ್ನು ಸಹ ಉತ್ಪನ್ನವಾಗಗೊಡುವದಿಲ್ಲ. ಅದನ್ನು ದೂರ ಮಾಡಲು ಒಂದೇ ಮಾರ್ಗವಾದ

ಈ ಭಾವನೆಯನ್ನು ದೃಢ ಮಾಡುವದರಿಂದ ಸಿಗುತ್ತದೆ. ಈ ಭಾವನೆಯಿಂದ ಎಲ್ಲ ಸಂಯೋಗ ಭಾವಗಳನ್ನು ಶೋಧಿಸಿ ನಿಶ್ಚಯ ಮಾಡುವದಿದೆ. ಏನಂದರೆ ನಾನು ಯಾರು ? ನನ್ನದು ಏನು ಇದೆ ? ಉತ್ತರ ಹುಡುಕಬೇಕು.

ಶರೀರವನ್ನು ಬಿಟ್ಟು ಉಳಿದ ಎಲ್ಲ ವಸ್ತುಗಳು ಪ್ರಕಟವಾಗುವಲ್ಲಿ ನಮ್ಮಿಂದ ಬೇರೆ ಕಾಣುತ್ತವೆ. ಆದ್ದರಿಂದ ಅನಾದಿಯಿಂದ ಶರೀರದಲ್ಲಿಯೇ ನನ್ನತನವನ್ನು ಮನ್ನಿಸಿದ್ದಾನೆ. ಇದುವೇ ಎಲ್ಲಕ್ಕಿಂತ ದೊಡ್ಡ ತಪ್ಪು ಇದೆ. ಯಾವ ಕಾರಣ ಜೀವವು ಅನಾದಿಯಿಂದ ಈ ಸಂಸಾರದಲ್ಲಿ ಅನಂತ ದುಃಖವನ್ನು ಅನುಭವಿಸುತ್ತಿದೆ. ಈ ಚಕ್ರದಿಂದ ಬಿಡುಗಡೆ ಪಡೆಯುವದು ಈ ಭಾವನೆಯ ಹೊರತು ಬೇರೆ ಯಾವ ಉಪಾಯವೇ ಇರುವದಿಲ್ಲ. ಇದನ್ನು ವಿಚಾರ ಮಾಡಿರಿ. ಏನಂದರೆ ಯಾವಾಗ ಆತ್ಮನು ಈ ಶರೀರವನ್ನು ಬಿಟ್ಟು ಹೋಗುತ್ತಾನೆ. ಆಗ ಶರೀರವು ಇಲ್ಲಿಯೇ ಉಳಿಯುತ್ತದೆ. ಅದನ್ನು ಸುಡುತ್ತಾರೆ. ಒಂದು ವೇಳೆ ಆ ಶರೀರವು 'ನಾನು' ಆದರೆ ಆಗ ಅದು ಸಹ ಆತ್ಮನ ಜೊತೆಗೆ ಹೋಗಬೇಕಾಗಿತ್ತು. ಇದರಿಂದ ನಿರ್ಣಯವಾಗುತ್ತದೆ. ಏನಂದರೆ 'ನಾನು' ಈ ಶರೀರ ಇರುವದಿಲ್ಲ. ಶರೀರದಲ್ಲಿರುವ ಚೇತನ ಆತ್ಮನಿದ್ದೇನೆ. ಆದರೆ ನಾವು ವಿಚಾರಿಸುವಾಗ ಒಳ್ಳೆಯ-ಕೆಟ್ಟ ಭಾವನೆಗಳು ಆಗುತ್ತಿರುತ್ತವೆ. ಅವುಗಳಲ್ಲಿ ನನ್ನತನ ಆಗುತ್ತದೆ. ಏನು, ಇದು ಸರಿ ಇದೆಯೇ ? ಇಲ್ಲ. ನಾನು ಅನಾದಿ, ಅನಂತ, ಶಾಶ್ವತ ಇರುವೆನು. ಅಜರ-ಅಮರ ಇರುವೆನು. ಈ ಮಾತು ನಿರ್ಣಯವಾಗುವದರಿಂದ ಇದು ಸಿದ್ಧವಾಗುತ್ತದೆ. ಏನಂದರೆ ಉತ್ತಮ-ಕೆಟ್ಟ ಭಾವಗಳು ಆಗುತ್ತಿದ್ದರೆ ನನ್ನಲ್ಲಿಯೇ ಆಗುತ್ತವೆ. ಅದು ನನ್ನ ಸ್ವರೂಪವಲ್ಲ. ಸಮಸ್ತ ಶರೀರಾದಿ ಪರದ್ರವ್ಯಗಳು ನಿಶ್ಚಯದಿಂದ ನನ್ನಿಂದ ಅನ್ಯವೇ ಇವೆ. ನಾನು ಕೇವಲ ಒಬ್ಬ ಶುದ್ಧಾತ್ಮನೇ ಇದ್ದೇನೆ. ನಾನು ಇವನ ಕಲ್ಯಾಣದ ಸಲುವಾಗಿ ಭೇದಜ್ಞಾನ ಭಾವಿಸುತ್ತ ನಿಜ ಶುದ್ಧಾತ್ಮನ ಕುರಿತು ಚಿಂತನೆ ಮಾಡಬೇಕು.

೬. **ಅಶುಚಿ ಭಾವನೆ :** ನಮ್ಮ ಶರೀರವನ್ನು ಸುಂದರವಾಗಿ ಶೃಂಗರಿಸುವ ಯಾವ ಭಾವವಿದೆ ಮತ್ತು ಬೇರೆಯವರ ಶರೀರದ ಕುರಿತು ಯಾವ ಆಕರ್ಷಣೆ ಇದೆ. ಈ ಶರೀರದ ತೊಗಲನ್ನು ದೂರ ಸರಿಸುತ್ತಲೇ ಕೇವಲ ಮಾಂಸ, ರಕ್ತ, ಕೀವು, ಮಲ, ಮೂತ್ರ, ಎಲುಬು ಮುಂತಾದವು ಕಂಡುಬರುತ್ತವೆ. ಅವೆಲ್ಲವು ಅಶುಚಿ ರೂಪವೇ ಇರುತ್ತವೆ. ಹೀಗೆ ಚಿಂತನೆ ಮಾಡಿ ನಮ್ಮ ಶರೀರದ ಮತ್ತು ಬೇರೆಯವರ ಶರೀರದ ಕುರಿತಾದ ಮೋಹವನ್ನು ಬಿಡುವದು ಮತ್ತು ಅದರಲ್ಲಿ ಮೋಹಿತರಾಗಬಾರದು.

ಜೀವಕ್ಕೆ ಅನಾದಿಯಿಂದ ತನ್ನ ಶರೀರದ ಮತ್ತು ಬೇರೆಯವರ ಶರೀರದ ಕುರಿತು ಆಕರ್ಷಣೆ ಇದೆ. ಅದೇ ಕಾರಣದಿಂದ ಜೀವವು ಅನಾದಿಯಿಂದ ಆಹಾರ ಭಯ-ಮೈಥುನ, ಪರಿಗ್ರಹ ಈ ನಾಲ್ಕು ಸಂಜ್ಞಾಗಳಿಂದ ಕೂಡಿದೆ. ಇವುಗಳ ಹಿಂದೆಯೇ ಓಡಿ ಜೀವವು ಅನಂತಾನಂತ ಸಲ ಹಾಳಾಗಿ ಹೋಗಿದೆ. ಅನಂತಾನಂತ

ದುಃಖ ಭೋಗಿಸಿದೆ ಮತ್ತು ಇನ್ನು ಸಹ ಅವುಗಳ ಹಿಂದೆಯೇ ಓಡುತ್ತಿರುವ ಕಾರಣದಿಂದಲೇ ದುಃಖಿ ಆಗುತ್ತಿದ್ದೇವೆ. ಜೀವನಿಗೆ ಶರೀರದ ಆಕರ್ಷಣೆಯಿಂದ ಮುಕ್ತಗೊಳಿಸುವ ಕಾರಣ ಈ ಭಾವನೆಯ ಚಿಂತನ ಮಾಡುವದು ಅವಶ್ಯಕ ಇರುತ್ತದೆ.

ಆತ್ಮನ ಸಲುವಾಗಿ ಎಲ್ಲ ಪರಪದಾರ್ಥಗಳು ಅಶುಚಿಯೇ ಇರುತ್ತವೆ. ಏಕೆಂದರೆ ಅನಾದಿಯಿಂದ ಪರದಲ್ಲಿಯೇ 'ನನ್ನತನ' ಮತ್ತು 'ನನ್ನದು' ಮಾಡಿ ಜೀವವು ದುಃಖ ಭೋಗಿಸುತ್ತ ಬಂದಿದೆ. ಆತ್ಮನ ಸಲುವಾಗಿ ಶುದ್ಧಾತ್ಮನ ಹೊರತು ಎಲ್ಲ ಸಂಯೋಗಿ ಭಾವ ಅಶುಚಿಯೇ ಇರುತ್ತವೆ. ಏಕೆಂದರೆ ಆ ಎಲ್ಲ ಭಾವಗಳು ಆತ್ಮನ ಮುಕ್ತಿಯಲ್ಲಿ ವಿಘ್ನಕಾರಕವೇ ಇರುತ್ತವೆ. ಆದ್ದರಿಂದ ಕೇವಲ ಶುದ್ಧಾತ್ಮನೇ 'ನನ್ನತನ'ಕ್ಕೆ ಯೋಗ್ಯ ಇದ್ದಾನೆ. ಇದುವೇ ಶೌಚ ಧರ್ಮವಿದೆ. ಇದುವೇ ಅನಂತ ದುಃಖಗಳಿಂದ ಬಿಡುಗಡೆಯಾಗುವ ಉಪಾಯವಿದೆ. ಇದುವೇ ಈ ಭಾವನೆಯ ಫಲವಿದೆ.

**೭. ಆಸ್ರವ ಭಾವನೆ :** ಪುಣ್ಯ ಮತ್ತು ಪಾಪ ಈ ಎರಡೂ ನಮ್ಮ (ಆತ್ಮನ) ಸಲುವಾಗಿ ಆಸ್ರವ ಇರುತ್ತವೆ. ಆದ್ದರಿಂದ ವಿವೇಕದ ಮೂಲಕ ಮೊದಲು ಪಾಪಗಳ ತ್ಯಾಗ ಮಾಡುವದು ಮತ್ತು ನಂತರ ಕೇವಲ ಒಬ್ಬ ಆತ್ಮನ ಪ್ರಾಪ್ತಿಯ ಲಕ್ಷ್ಯದಿಂದ ಶುಭಭಾವದಲ್ಲಿ ಇರುವದು ಕರ್ತವ್ಯ ಇದೆ. ನಂತರ ಶುದ್ಧಭಾವದಲ್ಲಿ ಇದ್ದಾಗ ಮಾತ್ರ ಆತ್ಮ ಪ್ರಾಪ್ತಿಯಾಗುವದು.

ಅನಾದಿಯಿಂದ ಜೀವವು ಮಿಥ್ಯಾತ್ವದಿಂದ ಕೂಡಿ ರಾಗದ್ವೇಷ ಮಾಡಿ ಕರ್ಮಗಳ ಆಸ್ರವ ಮಾಡುತ್ತ ಬಂದಿರುತ್ತದೆ. ಮತ್ತೆ ಅದು ಅನಂತ ಕಾಲದ ತನಕ ಆ ಕರ್ಮಗಳ ಚಕ್ರದಲ್ಲಿ ೮೪ ಲಕ್ಷ ಯೋನಿಗಳಲ್ಲಿ ದಾರಿ ತಪ್ಪಿ ಅಲೆಯುತ್ತಿರುತ್ತದೆ ಮತ್ತು ಅನಂತಾನಂತ ದುಃಖ ಭೋಗಿಸುತ್ತದೆ. ಎಲ್ಲಕ್ಕಿಂತ ದೊಡ್ಡ ಆಸ್ರವ ಮಿಥ್ಯಾತ್ವವೇ ಇದೆ. ಆದ್ದರಿಂದ ಬೇಗನೇ ಅದನ್ನು ದೂರ ಮಾಡುವ ಉಪಾಯ ಮಾಡಬೇಕು. ಏಕೆಂದರೆ ಒಂದು ಸಲ ಮಿಥ್ಯಾತ್ವ ಹೋಗುವದರಿಂದ ಆತ್ಮನ ಅನುಭವ ಆಗುತ್ತದೆ. ಮತ್ತೆ ಅದರಲ್ಲಿ ಮೇಲಿಂದ ಮೇಲೆ ಅತೀಂದ್ರಿಯ ಸುಖದ ಅನುಭವ ಮಾಡುವ ರೂಢಿ ತನ್ನಿಂದ ತಾನೇ ಹತ್ತುತ್ತದೆ. ಕೊನೆಯಲ್ಲಿ ಆತ್ಮನ ಆಸ್ರವವು ಮುಕ್ತಿಯ ಕಾರಣವಾಗುತ್ತದೆ. ಇದುವೇ ಈ ಭಾವನೆಯ ಫಲ ಇರುತ್ತದೆ.

ವಿಷಯ ಮತ್ತು ಕಷಾಯಗಳು ಸಹ ಆಸ್ರವದ ಕಾರಣ ಇವೆ ಮತ್ತು ಮಿಥ್ಯಾತ್ವವು ಆಸ್ರವದ ಎಲ್ಲಕ್ಕಿಂತ ದೊಡ್ಡ ಕಾರಣವಿದೆ. ಅವರು ಅದನ್ನು ಪುಷ್ಟ ಸಹ ಮಾಡುತ್ತಾರೆ. ಆದ್ದರಿಂದ ಮುಮುಕ್ಷು ಜೀವನು ಯಾವಾಗಲೂ ಮಿಥ್ಯಾತ್ವದೊಂದಿಗೆ ವಿಷಯ ಮತ್ತು ಕಷಾಯಗಳನ್ನು ಮಂದಗೊಳಿಸುವ ಮತ್ತು ಸಮ್ಯಗ್ದರ್ಶನದ ಸಲುವಾಗಿ ಹೇಳಲಾದ ಬೇರೆ ಯೋಗ್ಯತೆಗಳನ್ನು ಸಂಪಾದನೆಗೊಳಿಸುವ ಪ್ರಯತ್ನ ಮಾಡಬೇಕು. ಯಾವಾಗ ಜೀವನು ಅನಾದಿಯಿಂದ

ಇಂದ್ರಿಯಗಳ ಒಂದು ಒಂದು ವಿಷಯದ ಹಿಂದೆ ಓಡಿ ಅನಂತಾನಂತ ಸಲ ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದಾನೆ. ಮತ್ತೆ ಈ ಮನುಷ್ಯಭವದಲ್ಲಿ ಆ ಐದೂ ಇಂದ್ರಿಯಗಳ ವಿಷಯಗಳ ಹಿಂದೆ ಓಡಿದರೆ ಆಗ ಅವನದು ಯಾವ ಪರಿಸ್ಥಿತಿ ಆಗುವದು ? ಅವನು ತನ್ನ ಸಲುವಾಗಿ ಅನಂತಾನಂತ ದುಃಖಗಳನ್ನು ಆಮಂತ್ರಣ ಕೊಡುವ ಕೆಲಸವನ್ನೇ ಮಾಡುವನು. ಹಾಗೆಯೇ ಒಂದೊಂದು ಕಷಾಯಗಳು ಜೀವನಿಗೆ ಅನಂತಾನಂತ ದುಃಖ ಕೊಡುವ ಸಲುವಾಗಿ ಸಮರ್ಥ ಇರುತ್ತವೆ.

ಜೀವದ ಸಲುವಾಗಿ ಪುಣ್ಯವು ಸಹ ಆಸ್ರವವಿದೆ. ಆದರೆ ಯಾವಾಗ ಜೀವವು ಕೇವಲ ಒಂದು ಆತ್ಮಪ್ರಾಪ್ತಿ ಮತ್ತು ಆತ್ಮಸ್ಥಿರತೆಯ ಕಾರಣದಿಂದ ಶುಭಭಾವದಲ್ಲಿ ಇರುತ್ತದೆ. ಆಗ ಅದಕ್ಕೆ ಪುಣ್ಯಾನುಬಂಧಿ ಪುಣ್ಯ ಮತ್ತು ಸಾತಿಶಯ ಪುಣ್ಯದ ಆಸ್ರವ ಹಾಗೂ ಬಂಧ ಆಗುತ್ತದೆ. ಅಂಥ ಪುಣ್ಯವು ಮೋಕ್ಷ ಮಾರ್ಗದಲ್ಲಿ ವಿಘ್ನರೂಪ ಆಗುವದಿಲ್ಲ. ಬದಲಾಗಿ ಸಹಾಯಕವೇ ಆಗುತ್ತದೆ. ಅಂದರೆ ಎಲ್ಲಿಯತನಕ ಆ ಜೀವಕ್ಕೆ ಮೋಕ್ಷವಾಗುವದಿಲ್ಲ. ಅಲ್ಲಿಯವರೆಗೆ ಇಂಥ ಪುಣ್ಯದಿಂದ ಆ ಜೀವಕ್ಕೆ ಸಾತಾರೂಪ / ಅನುಕೂಲ ಸಂಯೋಗಗಳು ಪ್ರಾಪ್ತವಾಗುತ್ತವೆ. ಸಂಸಾರದ ಜೀವಗಳ ವಿಚಾರ ಮಾಡುವದರಿಂದ ತಿಳಿದುಬರುತ್ತದೆ. ಏನಂದರೆ ಅವರು ಯಾವ ತರದಿಂದ ಆಸ್ರವದಿಂದ ಬಂಧವಿದ್ದರೆ ಅವರಿಗೆ ನೋಡಿ ನಾವು ಇದನ್ನು ವಿಚಾರಿಸಬೇಕು. ಏನಂದರೆ ನಾನೂ ಸಹ ಅನಂತ ಸಲ ಈ ತರಹದ ಆಸ್ರವದಿಂದ ಬಂಧ ಮಾಡಿಕೊಂಡಿದ್ದೇನೆ ಮತ್ತು ಅದರ ಪಶ್ಚಾತ್ತಾಪ ಪೂರ್ವಕ ಕ್ಷಮೆಯನ್ನು ಮಾಡಬೇಕು. ಮುಂದೆ ಇಂಥ ಆಸ್ರವದ ಸೇವನೆ ಎಂದೂ ಮಾಡುವದಿಲ್ಲ ಎಂದು ಇದರ ನಿರ್ಣಯ ಮಾಡಬೇಕು. ಈ ತರಹದಿಂದ ಪ್ರತಿಯೊಂದು ಜ್ಞಾನದ ಉಪಯೋಗವನ್ನು ನಾವು ನಮ್ಮ (ಆತ್ಮನ) ಲಾಭದ ಸಲುವಾಗಿಯೇ ಮಾಡುವದಿದೆ. ಈ ಪದ್ಧತಿಯಿಂದ ಆಸ್ರವ ಭಾವನೆಯ ಉಪಯೋಗ ಮಾಡಿಕೊಂಡು ನಮಗೆ ಮುಕ್ತವಾಗುವದಿದೆ. ಇದುವೇ ಈ ಭಾವನೆಯ ಫಲ ಇರುತ್ತದೆ.

**೮. ಸಂವರ ಭಾವನೆ :** ನಿಜವಾದ ಸಂವರದ ಪ್ರಾರಂಭವು ಸಮ್ಯಗ್ದರ್ಶನದಿಂದಲೇ ಆಗುತ್ತದೆ. ಆದ್ದರಿಂದ ಅದರ ಲಕ್ಷ್ಯದಿಂದ ಪಾಪಗಳನ್ನು ತ್ಯಾಗ ಮಾಡಿ ಕೇವಲ ಒಂದು ನಿಜವಾದ ಸಂವರದ ಲಕ್ಷ್ಯದಿಂದ ದ್ರವ್ಯಸಂವರವನ್ನು ಪಾಲಿಸಬೇಕು.

ಮೇಲೆ ಹೇಳಿದ ಅನುಸಾರ ಅನಾದಿಯಿಂದ ಜೀವವು ಮಿಥ್ಯಾತ್ವದಿಂದ ಕೂಡಿ ರಾಗ-ದ್ವೇಷ ಮಾಡಿ ಕರ್ಮಗಳ ಆಸ್ರವ ಮಾಡುತ್ತ ಬಂದಿದೆ. ಈಗ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಂಡು ಹೇಗೆ ಹೇಗೆ ಆತ್ಮಾನುಭೂತಿಯ ಕಾಲವು ಮತ್ತು ಆ ವೃತ್ತಿಯು ವೃದ್ಧಿಯಾಗುತ್ತದೆ ಹಾಗೆ ಹಾಗೆ ಆಸ್ರವದ ಹೆಚ್ಚು ಹೆಚ್ಚು ನಿರೋಧವಾಗಿ ಹೆಚ್ಚು ಹೆಚ್ಚು ಸಂವರವಾಗುತ್ತ ಹೋಗುತ್ತದೆ. ಸಂವರದ ಸಲುವಾಗಿ ಎಲ್ಲಕ್ಕಿಂತ ಮೊದಲು ಸಮ್ಯಗ್ದರ್ಶನ ಪ್ರಾಪ್ತ ಮಾಡುವದು ಅವಶ್ಯಕ ಇರುತ್ತದೆ

ಮತ್ತು ಸಮ್ಯಗ್ದರ್ಶನದ ಪ್ರಾಪ್ತಿಯ ಕಾರಣ ಮೊದಲು ಹೇಳಿದ ಯೋಗ್ಯತೆಯನ್ನು ಪ್ರಾಪ್ತ ಮಾಡುವ ಪುರುಷಾರ್ಥ ಮಾಡುವದು ಅತ್ಯಂತ ಅವಶ್ಯಕವಿದೆ.

ಯೋಗ್ಯತೆಯ ಜೊತೆಗೆ ಅಭ್ಯಾಸ ರೂಪದಿಂದ ಮತ್ತು ಪಾಪದಿಂದ ಉಳಿದುಕೊಳ್ಳುವ ಸಲುವಾಗಿ ಕೇವಲ ಒಂದು ಆತ್ಮತೃಪ್ತಿ ಮತ್ತು ಆತ್ಮರಮಣತೆಯ ಲಕ್ಷ್ಯದಿಂದ ಹತ್ತು ಪ್ರಕಾರದ ಧರ್ಮವನ್ನು ನಮ್ಮ ಶಕ್ತಿಯ ಅನುಸಾರ ಮಾಡಬೇಕು. ಅದರಿಂದ ಪಾಪಾಸ್ರವ ಕಡಿಮೆಯಾಗುವದು ಮತ್ತು ಸಂವರದ ಅಭ್ಯಾಸವಾಗುವದು. ಹೇಗೆಂದರೆ ಉತ್ತಮ ಮಾರ್ಧವದಿಂದ ಮಾನಕಷಾಯದ ಸಂವರವಾಗುವದು. ಉತ್ತಮ ಆರ್ಜವದಿಂದ ಮಾಯಾಕಷಾಯದ ಸಂವರವಾಗುವದು. ಉತ್ತಮ ಶೌಚದಿಂದ ಸಂತೋಷದಿಂದ ಲೋಭಕಷಾಯದ ಸಂವರವಾಗುವದು. ಉತ್ತಮ ಸತ್ಯ–ಸಂಯಮ–ತಪ–ತ್ಯಾಗ–ಬ್ರಹ್ಮಚರ್ಯದಿಂದ ಸುಳ್ಳು, ಅವಿರತಿ, ಅಸಂಯಮ ಮುಂತಾದವುಗಳು ಸಂವರವಾಗುತ್ತವೆ. ಪ್ರತಿಯೊಂದು ಆಸ್ರವದ ಸಲುವಾಗಿ ನಮಗೆ ಈ ಭಾವನೆ ಭಾವಿಸಲೇಬೇಕು. ಏಕೆಂದರೆ ಈಗ ನನಗೆ ಈ ಆಸ್ರವವು ಎಂದೂ ಆಗಬಾರದು. ಅಂದರೆ ಅದನ್ನು ಸೇವನೆ ಮಾಡುವ ಭಾವವನ್ನು ಎಂದೂ ಭಾವಿಸಬಾರದು. ಈ ಸಂಸ್ಕಾರವನ್ನು ದೃಢಗೊಳಿಸುವದರಿಂದ ನನ್ನ ಸಂವರ ಭಾವನೆಯು ಸಾರ್ಥಕವಾಗುತ್ತದೆ. ಸಂವರವೇ ಸತ್ಯಧರ್ಮದ ಫಲವಾಗಿರುತ್ತದೆ. ಅದರಿಂದ ಜೀವವು ಕರ್ಮಬಂಧದ ನಿರೋಧ ಮಾಡಿ ಮೋಕ್ಷ ಪ್ರಾಪ್ತ ಮಾಡುತ್ತದೆ. ಇದುವೇ ಈ ಭಾವನೆಯ ಫಲವಿರುತ್ತದೆ.

೯. ನಿರ್ಜರೆ ಭಾವನೆ : ನಿಜವಾದ ನಿರ್ಜರೆಯು ಸಮ್ಯಗ್ದರ್ಶನದಿಂದಲೇ ಪ್ರಾರಂಭವಾಗುತ್ತದೆ. ಆದ್ದರಿಂದ ಅದರ ಲಕ್ಷ್ಯದಿಂದ ಪಾಪಗಳ ತ್ಯಾಗ ಮಾಡಿ ಕೇವಲ ಒಂದು ನಿಜವಾದ ನಿರ್ಜರೆಯ ಲಕ್ಷ್ಯದಿಂದ ಯಥಾಶಕ್ತಿ ತಪಸ್ಸನ್ನು ಮಾಡಬೇಕು.

ನಿರ್ಜರೆಯು ಎರಡು ಪ್ರಕಾರವಾಗಿರುತ್ತದೆ.

೧. ಅಕಾಮ ನಿರ್ಜರೆ ೨. ಸಕಾಮ ನಿರ್ಜರೆ

ಅಕಾಮ ನಿರ್ಜರೆಯು ಪ್ರತಿಯೊಂದು ಜೀವಿಗೂ ಅನಾದಿಯಿಂದ ಯಾವಾಗಲೂ ತನ್ನಿಂದ ತಾನೇ ಆಗುತ್ತಿರುತ್ತದೆ. ಸಕಾಮ ನಿರ್ಜರೆಯು ಸಮ್ಯಗ್ದೃಷ್ಟಿಗೆ, ಗುಣಶ್ರೇಣಿ ರೂಪ ಆಗುತ್ತದೆ. ಉಳಿದವರಿಗೆ ಬಹಳ ಪುರುಷಾರ್ಥ ಮಾಡಿದ ಮೇಲೆಯೂ ಸಹ ನಿರ್ಜರೆಯು ಸ್ವಲ್ಪ ಆಗುತ್ತದೆ. ಆದ್ದರಿಂದ ಎಲ್ಲ ಧರ್ಮೀಯ ಜೀವಗಳಿಗೆ ಮೊಟ್ಟಮೊದಲು ಕೇವಲ ಒಂದು ಆತ್ಮಪ್ರಾಪ್ತಿಯ ಲಕ್ಷ್ಯವಿಡಬೇಕು ಮತ್ತು ಅದರ ಸಲುವಾಗಿ ಮೊದಲು ಹೇಳಿದ ಅನುಸಾರ ಯೋಗ್ಯತೆಯನ್ನು ಮಾಡುವ ಪುರುಷಾರ್ಥ ಮಾಡುವದು ಅವಶ್ಯಕವಿದೆ.

ಯೋಗ್ಯತೆಯನ್ನು ತಯಾರಿಸುವ ಸಲುವಾಗಿ ಆತ್ಮಲಕ್ಷ್ಯಪೂರ್ವಕವಾಗಿ ಶಾಸ್ತ್ರವನ್ನು ಕನ್ನಡಿ ಎಂದು ತಿಳಿದುಕೊಂಡು ಸ್ವಾಧ್ಯಾಯ ಮಾಡಬೇಕು. ಏಕೆಂದರೆ

ನಮ್ಮಲ್ಲಿ ಶಾಸ್ತ್ರದ ಅನುಸಾರ ಯಾವದು ಕಡಿಮೆಯಿದೆ, ಅದನ್ನು ಪ್ರಕಟ ಮಾಡಬೇಕು. ಅದರಿಂದ ಅದರ ಅಭಿಪ್ರಾಯವು ಸಹ ಸಮ್ಯಕ್ ಆಗಬಹುದಾಗಿದೆ ಅದರ ಹೊರತು ಆತ್ಮಜ್ಞಾನ ಸಂಭವವೇ ಇಲ್ಲ. ಆದ್ದರಿಂದ ಎಲ್ಲಿ ಪುರುಷಾರ್ಥ ಕೇವಲ ಒಂದು ಆತ್ಮ ಪ್ರಾಪ್ತಿಯ ಕಾರಣ ತಪ, ವ್ರತ, ಹನ್ನೆರಡು ಭಾವನೆಗಳು, ಧನ್ಯವಾದ, ಸ್ವಾಗತಮ್ ! ಇವುಗಳ ಭಾವ ಮುಂತಾದವು ಸ್ವಾಧ್ಯಾಯರತ ಇರುವ ಸಲುವಾಗಿ ಮಾಡುವದಿದೆ. ಏಕೆಂದರೆ ಬೇಗನೇ ತಾವು ನಿಶ್ಚಯ ಸಮ್ಯಗ್ದರ್ಶನ ಪಡೆದು ನಿಜವಾದ ನಿರ್ಜರೆಯನ್ನು ಮಾಡಿಕೊಳ್ಳಬೇಕು. ಇದುವೇ ಈ ಭಾವನೆಯ ಫಲ ಇರುತ್ತದೆ.

**೧೦. ಲೋಕ ಸ್ವರೂಪ ಭಾವನೆ :** ಮೊದಲು ಲೋಕದ ಸ್ವರೂಪವನ್ನು ತಿಳಿಯಬೇಕು. ನಂತರ ಚಿಂತನ ಮಾಡಬೇಕು. ಏನಂದರೆ 'ನಾನು ಅನಾದಿಯಿಂದ ಈ ಲೋಕದ ಎಲ್ಲ ಪ್ರದೇಶಗಳಲ್ಲಿ ಅನಂತ ಸಲ ಹುಟ್ಟಿದ್ದೇನೆ ಮತ್ತು ಮರಣ ಹೊಂದಿದ್ದೇನೆ. ಅನಂತ ದುಃಖ ಭೋಗಿಸಿದ್ದೇನೆ. ಈಗ ಎಲ್ಲಿಯ ವರೆಗೆ ಇದನ್ನು ಚಲಾವಣೆಯಲ್ಲಿ ಇಡುವದು ? ಇದರ ಕೊನೆ ಮಾಡುವ ಸಲುವಾಗಿ ಸಮ್ಯಗ್ದರ್ಶನ ಅವಶ್ಯವಿದೆ. ಆದ್ದರಿಂದ ಅದರ ಪ್ರಾಪ್ತಿಯ ಉಪಾಯ ಮಾಡುವದಿದೆ. ಎರಡನೆಯದು ಲೋಕದಲ್ಲಿ ಇರುವಂಥ ಅನಂತ ಸಿದ್ಧಭಗವಾನ ಮತ್ತು ಸಂಖ್ಯಾತ ಅರಿಹಂತ ಭಗವಾನ ಮತ್ತು ಸಾಧು ಭಗವಂತರ ವಂದನೆ ಮಾಡುವದು ಮತ್ತು ಅಸಂಖ್ಯಾತ ಶ್ರಾವಕ-ಶ್ರಾವಿಕೆಯರ ಹಾಗೂ ಸಮ್ಯಗ್ದೃಷ್ಟಿ ಜೀವರುಗಳ ಅನುಮೋದನೆ ಮಾಡುವದು ಮತ್ತು ಪ್ರಮೋದ ಮಾಡುವದಿದೆ.

ಅನಾದಿಯಿಂದ ನಾನು ಈ ಲೋಕದಲ್ಲಿ ಜನ್ಮ, ಮರಣ, ನರಕ, ತಿರ್ಯಂಚ ಮತ್ತು ನಿಗೋದದ ಧುಃಖವನ್ನು ಸಹಿಸುತ್ತ ಬಂದಿರುವೆನು. ದೇವ ಮತ್ತು ಮನುಷ್ಯ ಭವದಲ್ಲಿಯೂಸಹ ನಾನು ಅನಾದಿಯಿಂದ ಎಷ್ಟೋ ದುಃಖಗಳನ್ನು ಅನುಭವಿಸಿದ್ದೇನೆ. ಎಲ್ಲಿಯವರೆಗೆ ಮಿಥ್ಯಾತ್ವವು ಉಪಸ್ಥಿತಿ ಇದೆ ಅಲ್ಲಿಯ ವರೆಗೆ ಜೀವನಿಗೆ ಭವಭ್ರಮಣ ಮಾಡಲೇಬೇಕಾಗುತ್ತದೆ ಮತ್ತು ದುಃಖ ಅನುಭವಿಸಲೇ ಬೇಕಾಗುತ್ತದೆ. ಈ ತರಹದಿಂದ ಲೋಕ ಸ್ವರೂಪ ಭಾವನೆಯ ವಿಚಾರ ಮಾಡಿ ಪ್ರತಿಯೊಂದು ಜೀವಕ್ಕೂ ತನ್ನ ಪೂರ್ಣ ಪುರುಷಾರ್ಥ ಆತ್ಮ ಪ್ರಾಪ್ತಿಯ ಸಲುವಾಗಿ ತೊಡಗಿಸುವದು. ಇದುವೇ ಈ ಭಾವನೆಯ ಉದ್ದೇಶವಿದೆ.

ಲೋಕ ಸ್ವರೂಪದ ಚಿಂತನ ಮಾಡುವದು ಮತ್ತು ಅದರಲ್ಲಿ ಇರುವಂಥ ಅನಂತಾನಂತ ಜೀವಗಳ ಭಾವಗಳ ಸಿದ್ಧರುಗಳ, ಅರಿಹಂತರ, ಮುನಿಭಗವಂತರ, ಶ್ರಾವಕ-ಶ್ರಾವಿಕೆಯರ, ಸಮ್ಯಗ್ದೃಷ್ಟಿ ಜೀವಗಳ ಎಲ್ಲ ಪ್ರಕಾರದ ಜೀವಗಳ ದುಃಖಗಳ, ದುಃಖಗಳಿಂದ ಮುಕ್ತಿ ಪಡೆಯುವ ಮಾರ್ಗದ, ನರಕ ನಿಗೋದದ ಸ್ವರೂಪದ, ಆರು ದ್ರವ್ಯಗಳ ದ್ರವ್ಯಗುಣ-ಪರ್ಯಾಯಗಳ, ಪುದ್ಗಲರೂಪಿ ಶರೀರ ಮುಂತಾದವುಗಳನ್ನು ಚಿಂತನ ಮಾಡುವದು, ಲೋಕಸ್ವರೂಪ ಭಾವನೆಯ ಉದ್ದೇಶವಿದೆ. ಅದರಿಂದ ಜೀವನಿಗೆ ಮುಕ್ತಿಯ ಮಾರ್ಗವು ಸುಲಭವಾಗಿ

ದೊರೆಯುವದು ಮತ್ತು ಅವನು ಕರ್ಮಗಳಿಂದ ಮುಕ್ತನಾಗಿ ಇಂದಿನಿಂದ ಅನಂತಕಾಲದ ತನಕ ಅನಂತಾನಂತ ಸುಖದ ಉಪಯೋಗ ಮಾಡುವನು. ಇದುವೇ ಈ ಭಾವನೆಯು ಫಲವಾಗಿದೆ.

ಲೋಕ, ಕಾಲಗಣನೆ ಮುಂತಾದವುಗಳ ಪರಿಚಯ ಪಡೆಯುವದು ಏಕೆ ಅವಶ್ಯಕವಿದೆ ? ಹೀಗೆ ಜನರು ಕೇಳುತ್ತಾರೆ. ಅದರ ಉತ್ತರ ಹೀಗಿದೆ – ಅದರ ಪರಿಚಯದಿಂದ ಲೋಕವು ಎಷ್ಟು ದೊಡ್ಡದಿದೆ ಮತ್ತು ನಾವು ಅನಾದಿಯಿಂದ ಈ ಲೋಕದ ಪ್ರತಿಯೊಂದು ಪ್ರದೇಶದ ಮೇಲೆ ಅನಂತ ಸಲ ಜನ್ಮ-ಮರಣ ಮಾಡಿ ಮುಗಿಸಿದ್ದೇವೆ, ದುಃಖ ಸಹಿಸಿದ್ದೇವೆ ಮತ್ತು ಭವಿಷ್ಯದಲ್ಲಿ ಎಲ್ಲಿಯ ತನಕ ಜನ್ಮ ಮರಣ ಮಾಡುವದಿದೆ, ದುಃಖ ಸಹಿಸುವದಿದೆ ಮುಂತಾದವು ಇದರಿಂದ ತಿಳಿದುಬರುತ್ತದೆ. ಏನಂದರೆ ಒಂದು ಆತ್ಮಜ್ಞಾನ ಇಲ್ಲದ್ದರಿಂದ ಜೀವವು ಎಷ್ಟು ದುಃಖಿಯಾಗುತ್ತದೆ ಮತ್ತು ಮುಂದೆಯೂ ಎಷ್ಟು ದುಃಖಿಯಾಗಬೇಕಾಗುತ್ತದೆ. ಇದನ್ನು ತಿಳಿದು ಜೀವವು ಜಾಗ್ರತವಾಗಬಹುದಾಗಿದೆ ಮತ್ತು ಪ್ರಮಾದದಿಂದ ಉಳಿದು ತಮ್ಮ ಆತ್ಮಕಲ್ಯಾಣ ಮಾಡಬಹುದಾಗಿದೆ. ಇದುವೇ ಲೋಕಸ್ವರೂಪ ಭಾವನೆಯ ಫಲವಿರುತ್ತದೆ. ಆದರೆ ಯಾವದೇ ಸಾಧನವನ್ನು ಯಾವಾಗ ನಾವು ಸಾಧ್ಯ ಮಾಡಿಕೊಳ್ಳುತ್ತೇವೆ, ಆಗ ನಮ್ಮ ಪ್ರಗತಿ ನಿಂತುಬಿಡುತ್ತದೆ. ಇದು ಒಂದು ದೊಡ್ಡ ಭಯ ಸ್ಥಾನವಿದೆ. ಆದ್ದರಿಂದ ಯಾವದೇ ಸಾಧನೆಯ ಯೋಗ್ಯ ಉಪಯೋಗ ಮಾಡಿಕೊಂಡು ಮುಂದೆ ಸಾಗಬೇಕಾಗುತ್ತದೆ. ಇಲ್ಲವಾದರೆ ಅಲ್ಲಿಯೇ ನಿಲ್ಲಬೇಕಾಗುತ್ತದೆ. ಅಂದರೆ ಆ ಸಾಧನೆಯಿಂದ ಪ್ರೀತಿ ಮಾಡುವದಿಲ್ಲ. ಆದರೆ ನಮ್ಮ ಸಾಧ್ಯವನ್ನು ಮೋಕ್ಷದ ಸಲುವಾಗಿಯೇ ಆ ಸಾಧನೆಯ ಉಪಯೋಗ ಮಾಡಿಕೊಂಡು ಮುಂದೆ ಸಾಗುವದಿದೆ. ಈ ಪ್ರಕಾರದಿಂದ ಲೋಕ ಸ್ವರೂಪ ಭಾವನೆಯ ಆಸರೆ ತೆಗೆದುಕೊಂಡು ನಮಗೆ ನಮ್ಮ ಸಂಸಾರದಿಂದ ಮುಕ್ತಿಯನ್ನು ನಿಶ್ಚಿತ ಮಾಡುವದಿದೆ. ಇದುವೇ ಈ ಭಾವನೆಯ ಫಲವಿರುತ್ತದೆ.

೧೧. **ಬೋಧಿ ದುರ್ಲಭ ಭಾವನೆ :** ಬೋಧಿ ಅರ್ಥಾತ್ ಸಮ್ಯಗ್ದರ್ಶನ. ಅನಾದಿಯಿಂದ ನಾವು ದಾರಿ ತಪ್ಪಿ ಅಲೆದಾಡುವದರ ಯಾವದೇ ಕಾರಣವಿದ್ದರೆ ಅದು ಸಮ್ಯಗ್ದರ್ಶನದ ಅಭಾವವೇ ಇದೆ. ಆದರೆ ಸಮ್ಯಗ್ದರ್ಶನದ ಪ್ರಾಪ್ತಿಯು ಬಹಳ ದುರ್ಲಭವಿದೆ. ಸಮ್ಯಗ್ದರ್ಶನ ಎಷ್ಟು ದುರ್ಲಭವಿದೆ ಎಂದರೆ ಆಚಾರ್ಯ ಭಗವಂತರು ಹೇಳಿದ್ದಾರೆ ಏನಂದರೆ ವರ್ತಮಾನ ಕಾಲದಲ್ಲಿ ಸಮ್ಯಗ್ದೃಷ್ಟಿಗಳನ್ನು ಬೆರಳಿನ ಗಂಟುಗಳ ಮೇಲೆ ಎಣಿಸಬಹುದು ಎಂದು ಹೇಳಿದ್ದಾರೆ.

ಬೋಧಿ ಅರ್ಥಾತ್ ಸಮ್ಯಗ್ದರ್ಶನ ಹೇಗೆ ಪಡೆಯಬಹುದು ? ಯಾವ ವಿಷಯದ ಚಿಂತನೆಯಿಂದ ಮತ್ತು ಅನುಭವದಿಂದ ಪಡೆಯಬಹುದಾಗಿದೆ ಮತ್ತು ಅದರ ಸಲುವಾಗಿ ಯಾವ ಯೋಗ್ಯತೆ ಇರಬೇಕು ಮುಂತಾದವುಗಳ ಸಲುವಾಗಿಯೇ ಈ ಪುಸ್ತಕವನ್ನು ಬರೆಯಲಾಗಿದೆ. ಈ ಭಾವನೆಯ ಮಹತ್ವವು ಅಪೂರ್ವವಿದೆ.

ಎಲ್ಲ ರೀತಿ ಬೇಗನೇ ಸಮ್ಯಗ್ದರ್ಶನದ ಪ್ರಾಪ್ತಿಯ ಉಪಾಯ ಮಾಡುವದು ಇದುವೇ ಈ ಭಾವನೆಯ ಫಲವಿರುತ್ತದೆ.

ನಾವು ಅನಂತಾನಂತ ಸಲ ವ್ರತ, ನಿಯಮ, ಯಮ, ಪ್ರತ್ಯಾಖ್ಯಾನ ಸ್ವೀಕಾರ ಮಾಡಿದ್ದೇವೆ. ಹೀಗೆ ಭಗವಾನರು ಹೇಳಿದ್ದಾರೆ. ಆದರೂ ಸಹ ಇನ್ನೂ ವರೆಗೆ ನಾವು ಸಂಸಾರದಿಂದ ಬಿಡುಗಡೆಯೇ ಪಡೆಯುವದಾಗಿಲ್ಲ. ಆಗ ಪ್ರಶ್ನ ಉಂಟಾಗುತ್ತದೆ. ಏನೆಂದರೆ ಹೀಗೇಕಾಯಿತು ? ಅದರ ಉತ್ತರ ಒಂದೇ ಇದೆ, ಏನಂದರೆ ನಾವು ಯಾವದೇ ವ್ರತ, ಯಮ-ನಿಯಮ-ಪ್ರತ್ಯಾಖ್ಯಾನ ಸ್ವೀಕಾರ ಮಾಡಿದ್ದೇವೆ. ಅವು ಸಂಸಾರದಿಂದ ಮುಕ್ತಿ ಪಡೆಯುವ ಸಲುವಾಗಿ ಮಾಡಿರುವದಿಲ್ಲ. ಇನ್ನೊಬ್ಬರಿಗೆ ಹೇಳುವ ಸಲುವಾಗಿಯೇ ಮತ್ತು ಸಂಸಾರದಿಂದ ಮುಕ್ತಿ ಪಡೆಯುವ ಸಲುವಾಗಿಯೇ ಸ್ವೀಕರಿಸಲಾಗಿದೆ. ಆದರೆ ಅಂತರದಲ್ಲಿಯ ಸಂಸಾರದ ರುಚಿ ಸಮಾಪ್ತವಾಗಿರುವದಿಲ್ಲ. ಅರ್ಥಾತ್ ಭವಬಂಧನ ರೂಪ ರೋಗವು ಹೋಗಿಲ್ಲ. ಆದ್ದರಿಂದ ನಿಜವಾದ ವೈರಾಗ್ಯ ಉತ್ಪನ್ನವಾಗಿಲ್ಲ ಮತ್ತು ಯಥಾರ್ಥ ಸಮ್ಯಗ್ದರ್ಶನವು ಸಹ ಆಗಿರುವದಿಲ್ಲ. ಬೋಧಿ ಅಂದರೆ ಸಮ್ಯಗ್ದರ್ಶನದ ಸಲುವಾಗಿ ನಿಜವಾದ ವೈರಾಗ್ಯವು ಕಷಾಯಗಳ ಮಂದತೆಯಿಂದ ಮತ್ತು ಇಚ್ಛೆಗಳ ನಾಶದಿಂದ ಆಗುವದು. ಆದ್ದರಿಂದ ಮನಸ್ಸಿನಲ್ಲಿ ಕುಳಿತಂಥ ಸಂಸಾರ ಭಾವವು ಸುಟ್ಟು ಹೋಗುತ್ತದೆ. ಆಗ ನಮ್ಮ ಬಹಿರ್ಮುಖತೆಯು ಸಮಾಪ್ತವಾಗಿ ಅಂತರ್ಮುಖತೆಯು ಪ್ರಕಟವಾಗುತ್ತದೆ. ಅದರಿಂದ ನಮ್ಮಲ್ಲಿ ಸಮ್ಯಗ್ದರ್ಶನದ ಸಲುವಾಗಿ ಯೋಗ್ಯತೆ ಉಂಟಾಗುತ್ತದೆ. ಇಂತಹ ಯೋಗ್ಯತೆಯನ್ನು ಮಾಡಿಕೊಂಡು ಎಲ್ಲಕ್ಕಿಂತ ಮೊದಲು ಮೋಕ್ಷಪ್ರಾಪ್ತಿಯ ಉಪಾಯ ಮಾಡಿರಿ. ಇದುವೇ ಈ ಭಾವನೆಯ ಫಲವಿದೆ.

೧೨. **ಧರ್ಮ ಸ್ವರೂಪ ಭಾವನೆ :** ವರ್ತಮಾನ ಕಾಲದಲ್ಲಿ ಧರ್ಮದ ಸ್ವರೂಪದಲ್ಲಿ ಬಹಳ ವಿಕೃತಿಗಳ ಪ್ರವೇಶ ಮಾಡಿರುತ್ತಾರೆ. ಈಗ ಎಲ್ಲರಿಗೂ ಸತ್ಯಧರ್ಮದ ಶೋಧ ಮತ್ತು ಅದರದೇ ಚಿಂತನ ಮಾಡಬೇಕಾಗಿದೆ. ಎಲ್ಲ ಪುರುಷಾರ್ಥವನ್ನು ಸತ್ಯಧರ್ಮದ ಪ್ರಾಪ್ತಿ ಮಾಡುವಲ್ಲಿ ತೊಡಗಿಸಬೇಕು.

ವರ್ತಮಾನ ಕಾಲದಲ್ಲಿ ಜಿನಶಾಸನದಲ್ಲಿ ಎಷ್ಟೋ ಸಂಪ್ರದಾಯಗಳು ಆಗಿರುತ್ತವೆ ಮತ್ತು ಅವುಗಳಲ್ಲಿಯೂ ಸಹ ವಿಭಾಗಗಳಾಗಿ ಮತ್ತು ಹೊಸ ಹೊಸ ಮತ-ಪಂಥ-ಸಂಪ್ರದಾಯ ಆಗಹತ್ತಿವೆ. ಬಹುಶಃ ಈ ಎಲ್ಲ ಸಂಪ್ರದಾಯಗಳು ತಮ್ಮನ್ನು ಶುದ್ಧ / ಉತ್ತಮ / ಸರ್ವೋಚ್ಚ ಎಂದು ಮನ್ನಿಸುತ್ತವೆ ಮತ್ತು ಉಳಿದವರೆಲ್ಲ ಕಡಿಮೆ ಎಂದು ಭಾವಿಸುತ್ತಾರೆ. ಈ ತರಹದಿಂದ ಬೇರೆಯವರಿಂದ ತಿಳಿದೋ ತಿಳಿಯದೆಯೋ ದ್ವೇಷವನ್ನು ಮಾಡುತ್ತಾರೆ. ಅದರಿಂದ ನಮ್ಮ ಸಂಸಾರ ವೃದ್ಧಿಯಾಗುತ್ತದೆ, ದುಃಖ ಹೆಚ್ಚಾಗುತ್ತದೆ.

**ಪ್ರಶ್ನೆ : ಇಂಥ ಪಂಚಮ ಕಾಲದಲ್ಲಿ ಒಬ್ಬ ಮುಮುಕ್ಷು ಜೀವನಿಗೆ ಧರ್ಮ ಪ್ರಾಪ್ತಿಯ ಸಲುವಾಗಿ ಏನು ಮಾಡಬೇಕು ?**

ಉತ್ತರ : ಎಲ್ಲಕ್ಕಿಂತ ಮೊದಲು ಮುಮುಕ್ಷು ಜೀವನು ಭಗವಾನರ ಉಪದೇಶದ ಮೇಲೆ ವಿಶ್ವಾಸ ಮಾಡಬೇಕು. ಹೊರಗಿನ ತನ್ನ ಎಲ್ಲ ಕಾರೋಬಾರಗಳಿಂದ ದೂರವಾಗಬೇಕು. ಏಕೆಂದರೆ ಕಾರೋಬಾರಗಳಲ್ಲಿ ಹೆಚ್ಚು ಸಮಯ ತೊಡಗುವದರಿಂದ ಸಂಪತ್ತು ದೊರೆಯುವದಿಲ್ಲ. ಸಂಪತ್ತು ಪುಣ್ಯದಿಂದ ಪ್ರಾಪ್ತವಾಗುತ್ತದೆ. ಈ ಪ್ರಕಾರ ಸಮಯ ತೆಗೆದು ಅದನ್ನು ತನ್ನ ಸಂಪ್ರದಾಯದ ಶಾಸ್ತ್ರವನ್ನು ನಿಷ್ಪಕ್ಷ ದೃಷ್ಟಿಯಿಂದ ಅಧ್ಯಯನ ಮಾಡಬೇಕು. ಆ ಅವಲೋಕನೆಯಲ್ಲಿ ಒಂದೇ ದೃಷ್ಟಿ ಇಡಬೇಕು. ಏನಂದರೆ ಯಾವುದು ಶುದ್ಧವಿದೆಯೋ ಅದುವೇ ನನ್ನದಿದೆ.

**ಶಾಸ್ತ್ರ ಹೇಗೆ ಓದಬೇಕು ? :** ಶಾಸ್ತ್ರಗಳಿಂದ ನಮ್ಮ ಆತ್ಮನ ನಿರ್ಣಯ ಮತ್ತು ಅನುಭವ ಮಾಡುವ ಸಲುವಾಗಿ ಕಾರ್ಯಕಾರಿಯಾದ ಮಾತುಗಳನ್ನು ಸ್ವೀಕರಿಸಬೇಕು ಮತ್ತು ಬೇರೆ ವಿವಾದಿತ ಮಾತುಗಳ ಮೇಲೆ ಹೆಚ್ಚು ಲಕ್ಷ್ಯ ಕೊಡಬಾರದು. ಶಾಸ್ತ್ರಗಳನ್ನು ಕನ್ನಡಿಯ ರೂಪದಿಂದ ಓದಬೇಕು. ಅಂದರೆ ಶಾಸ್ತ್ರದಲ್ಲಿ ಬರುವ ಉತ್ತಮ ಮಾತುಗಳು ಒಂದು ವೇಳೆ ನನ್ನಲ್ಲಿ ಇರದಿದ್ದರೆ ತಕ್ಷಣವೇ ಸ್ವೀಕರಿಸಬೇಕು ಮತ್ತು ನನ್ನ ಯಾವದೇ ಕೆಟ್ಟ ಮಾತು ನೆನಪಿಗೆ ಬಂದರೆ ತಕ್ಷಣ ಅದನ್ನು ಹೊರಹಾಕಲು ಪ್ರಯತ್ನಿಸಬೇಕು ಮತ್ತು ಒಂದು ವೇಳೆ ಹೊರ ಹಾಕದಿದ್ದರೆ ಆಗ ಮನಸ್ಸಿನಿಂದ (ಅಭಿಪ್ರಾಯ) ಆ ಸುಳ್ಳು ಮಾತನ್ನು ಅವಶ್ಯವಾಗಿ ಹೊರಹಾಕಬೇಕು. ಏಕೆಂದರೆ ಭವಿಷ್ಯದಲ್ಲಿ ಅದು ತನ್ನಿಂದ ತಾನೇ ಹೊರಟು ಹೋಗುವದು. ಇದುವೇ ಶಾಸ್ತ್ರ ಅಧ್ಯಯನದ ರೀತಿಯಿದೆ. ಈ ರೀತಿಯಿಂದ ಶಾಸ್ತ್ರಗಳ ಮಾತುಗಳನ್ನು ನಮ್ಮ ಜೀವನದಲ್ಲಿ ಪ್ರಯೋಗದಲ್ಲಿ ತರಬೇಕು ಮತ್ತು ಮುಂದುವರಿಯಬೇಕು. ಅದನ್ನು ಅಂತರದಿಂದಲೇ ಸತ್ಯ/ಅಸತ್ಯದ ಮತ್ತು ಯೋಗ್ಯ / ಅಯೋಗ್ಯವನ್ನು ತಿಳಿದುಕೊಂಡು ಕಾಲಕ್ರಮದಿಂದ ಬರುತ್ತಿರಬೇಕು ಮತ್ತು ಅವನ್ನು ತೆರೆದ ಮನಸ್ಸಿನಿಂದ ಮುಂದುವರಿಯಬೇಕು. ಮುಮುಕ್ಷುವಿನ ಸಲುವಾಗಿ ಯಾವದೇ ಶಾಸ್ತ್ರ ಸ್ಪರ್ಶಿಸದೇ ಇರಬಾರದು ಅಂದರೆ ಯಾವದೇ ಶಾಸ್ತ್ರ ವಿಶೇಷವಾಗಿ ಆಗ್ರಹ, ಹಠಾಗ್ರಹ, ದುರಾಗ್ರಹದಿಂದ ಓದಬಾರದು. ಬದಲಾಗಿ ಸತ್ಯದ ಶೋಧ ಮತ್ತು ಸತ್ಯದ ಆಗ್ರಹವಾಗಬೇಕು. ಯಾವದೇ ಶಾಸ್ತ್ರ ಅಥವಾ ಸಂಪ್ರದಾಯದ ಆಗ್ರಹ ಮುಂತಾದವು ಆಗುವದರಿಂದ ತಮ್ಮಿಂದ ತಾವೇ ಬೇರೆಯವರ ಕುರಿತು ದ್ವೇಷವು ಉಕ್ಕಿ ಬರುವದು ಸ್ವಾಭಾವಿಕವಾಗುತ್ತದೆ ಮತ್ತು ಆ ದ್ವೇಷವು ಮುಮುಕ್ಷುವಿಗೆ ಅನಂತಾನಂತ ಕಾಲದ ತನಕ ಸಂಸಾರದಲ್ಲಿ ಇಡುತ್ತದೆ. ಏಕೆಂದರೆ ಆ ದ್ವೇಷವು ಸರಪಳಿಯ ರೂಪದಲ್ಲಿ ಆಗುತ್ತದೆ. ಆದ್ದರಿಂದ ಅವನು ಮುಂದೆ ಬರುವಂಥ ಅನೇಕ ಭಾವಗಳ ವರೆಗೆ ಆ ಮುಮುಕ್ಷುವಿಗೆ ದುಃಖಿಯನ್ನಾಗಿ ಮಾಡುವ ಸಲುವಾಗಿ ಸಮರ್ಥವಿದೆ. ಇದೇ ಪ್ರಕಾರ ಆ ಮುಮುಕ್ಷುವು ಪರೀಕ್ಷೆ ಮಾಡಿ ಮುಂದುವರಿಯಬಹುದಾಗಿದೆ. ಹೇಗೆ ಯಾರೋ ಶಾಸ್ತ್ರ ಅಥವಾ ಸಂಪ್ರದಾಯ ಅಥವಾ ಗುರು ಬೇರೆಯವರ ಕುರಿತು ಸಿಟ್ಟು ಇರುವನು ಅಥವಾ ದ್ವೇಷ ಮಾಡುವನು ಅಥವಾ ಮಾಡಿಸುವನೋ ಆಗ ಇದನ್ನು ವಿಚಾರಿಸಬೇಕು – ಸತ್ಯಧರ್ಮದಲ್ಲಿ ದ್ವೇಷದ ಸಲುವಾಗಿ ಯಾವದೇ ಸ್ಥಳ ಇರುವದಿಲ್ಲ. ಅಲ್ಲಿ ಕೇವಲ ಕರುಣೆ ಇರುತ್ತದೆ.

ಆದ್ದರಿಂದ ಎಲ್ಲಿ ದ್ವೇಷ ಇದೆ, ಅಲ್ಲಿ ಸತ್ಯಧರ್ಮ ಇರುವದಿಲ್ಲ. ಈ ಪ್ರಕಾರದಿಂದ ಮುಮುಕ್ಷುವಿನಲ್ಲಿ ಕೇವಲ ಒಂದು ಕಲ್ಯಾಣದ್ದೇ ಲಕ್ಷ್ಯವಿರಬೇಕು. ಯಾವದೇ ಮತ, ಪಂಥ, ಸಂಪ್ರದಾಯಗಳ ವ್ಯಕ್ತಿ ವಿಶೇಷದ ಪಾಲಕಿ ಹೊರುವದು ಅಥವಾ ಅವನ ಪ್ರಚಾರ ಮಾಡುವದು ಮಾಡಿದರೆ ಅದರಿಂದ ನಿನ್ನ ಸಂಸಾರದ ಕೊನೆ ಆಗುವದೇ ಇಲ್ಲ. ಮುಮುಕ್ಷುವಿಗೆ ಮೇಲೆ ಹೇಳಿದ ದಾರಿಯ ಮೇಲೆ ಪ್ರಯೋಗಾತ್ಮಕ ರೀತಿಯಿಂದ ಮತ್ತು ತೆರೆದ ಮನಸ್ಸಿನಿಂದ ಮುಂದುವರಿಯಬೇಕು. ತಮ್ಮ ವಿಚಾರವಾಣಿ ವರ್ತನೆಗಳನ್ನು ಸೂಕ್ಷ್ಮವಾಗಿ ನೋಡುತ್ತಿರಬೇಕು. ಅದರಲ್ಲಿ ಬದಲಾವಣೆ ಏನು ಬರುತ್ತಿದೆ ಇದನ್ನು ಸಹ ನೋಡುತ್ತಿರಬೇಕು. ಕೇವಲ ಒಂದು ಆತ್ಮಪ್ರಾಪ್ತಿಯ ಲಕ್ಷ್ಯದಿಂದ ಹನ್ನೆರಡು ಭಾವನೆಗಳು, ನಾಲ್ಕು ಭಾವನೆಗಳು, ಧನ್ಯವಾದ ! ಸುಸ್ವಾಗತಮ್ ! ಭಾವಗಳ ಮೂಲಕ ಮನಸ್ಸಿನಲ್ಲಿಂದ ಸಂಸಾರವನ್ನು ನಾಶ ಮಾಡಬೇಕು. ಬರಬರುತ್ತ ಇಚ್ಛೆಗಳನ್ನು ಕಡಿಮೆ ಮಾಡಬೇಕು. ರಾಗ ದ್ವೇಷಗಳು ಕಡಿಮೆ ಆಗಿವೆಯೋ ಹೇಗೆ ಎಂದು ಪರೀಕ್ಷಿಸಿಕೊಳ್ಳಬೇಕು. ಇದುವೇ ಧರ್ಮದ ಸ್ವರೂಪ ಭಾವನೆಯ ಫಲವಿದೆ. ತಾವೂ ಸಹ ಇದೇ ಪ್ರಕಾರದಿಂದ ಸತ್ಯದ ಪ್ರಾಪ್ತಿ ಮತ್ತು ಅನುಭೂತಿ ಮಾಡಿಕೊಂಡು ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳಿರೆಂದು ನಾವು ಬಯಸುತ್ತೇವೆ.

ಸತ್ಯಧರ್ಮದ ಸ್ವರೂಪ ಏನಿದೆ ? ಅಂದರೆ ಸತ್ಯಧರ್ಮ ಎಂದು ಯಾವುದಕ್ಕೆ ಹೇಳುತ್ತಾರೆ ಮತ್ತು ಸಮ್ಯಗ್ದರ್ಶನವನ್ನು ಹೇಗೆ ಪಡೆಯಬಹುದಾಗಿದೆ ಮತ್ತು ಅದರ ಸಲುವಾಗಿ ಏನು ಯೋಗ್ಯತೆ ಬೇಕಾಗುತ್ತದೆ ಮುಂತಾದವುಗಳ ಸಲುವಾಗಿಯೇ ಈ ಪುಸ್ತಕ ಬರೆಯಲಾಗಿದೆ. ಈ ಭಾವನೆಯ ಮಹತ್ವ ಅಪೂರ್ವವಿದೆ. ಹೀಗೆ ತಿಳಿದುಕೊಂಡು ಬೇಗನೇ ಸತ್ಯಧರ್ಮದ ಸ್ವರೂಪ ತಿಳಿದುಕೊಂಡು ಮತ್ತು ಅದರದೇ ಅನುಭವ ಮಾಡಿಕೊಂಡು ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳಿರಿ. ಇದುವೇ ಈ ಭಾವನೆಯ ಫಲವಿರುತ್ತದೆ. ಮೇಲೆ ಹೇಳಿದ ಯೋಗ್ಯತೆಯ ವಿಷಯದ ಕೆಲವು ಮಹತ್ವಪೂರ್ಣವಾದ ಬಿಂದುಗಳನ್ನು ಸಂಕ್ಷಿಪ್ತವಾಗಿ ಮನನ ಮಾಡುವ ಸಲುವಾಗಿ ಮುಂದೆ ಉಪಸ್ಥಿತ ಮಾಡುತ್ತೇವೆ. ಸರಿಯಾಗಿ ತಿಳಿದುಕೊಳ್ಳಿ.

**ನೆನಪಿಡಬೇಕಾದ ಕೆಲವು ಮಹತ್ವಪೂರ್ಣ ಬಿಂದುಗಳು :**

೧. ನಾನು ಈ ಲೋಕದಲ್ಲಿ ಕೇವಲ ಕೊಡುವ ಸಲುವಾಗಿ ಬಂದಿರುವೆನು. ಅದೂ ಸಹ ಕರಾರು ರಹಿತ ಮತ್ತು ಯಾವದೇ ಅಪೇಕ್ಷೆಯಿಲ್ಲದೇ ಕೊಡುವೆನು.

೨. ಯಾವದು ಆಗುತ್ತದೆ ಅದು ಒಳ್ಳೆಯದರ ಸಲುವಾಗಿಯೇ ಆಗುತ್ತದೆ.

೩. ನನಗೆ ನನ್ನ ಕರ್ತವ್ಯವನ್ನು ಪೂರ್ಣರೂಪದಿಂದ ನಿರ್ವಹಿಸಬೇಕಾಗಿದೆ. ಆದರೆ ಬೇರೆಯವರಿಂದ ಈ ರೀತಿ ಅಪೇಕ್ಷೆ ಇಟ್ಟುಕೊಳ್ಳಬೇಡಿರಿ.

೪. ನನಗೆ ನನ್ನಿಂದ ನಾನೇ ಬದಲಾಗಬೇಕಾಗಿದೆ. ಇದು ಕೇವಲ ಧರ್ಮದ ಯೋಗ್ಯತೆಯನ್ನು ಪಡೆಯುವ ಪುರುಷಾರ್ಥವಿದೆ. ಬೇರೆಯವರನ್ನು ಬದಲಿಸುವ

ಪ್ರಯತ್ನವು ವ್ಯರ್ಥವಾಗುತ್ತದೆ. ಬೇರೆಯವರಿಗೆ ಒಳ್ಳೆಯದಾಗುವ ಸಲುವಾಗಿ ಅವರಿಗೆ ಪ್ರೇರಣೆ ಕೊಡಬಹುದಾಗಿದೆ. ಆದರೆ ಎಂದೂ ಒತ್ತಾಯ ಮಾಡಬಾರದು.

೫. ವರ್ತಮಾನ ಉದಯವನ್ನು ಅಂದರೆ ಸಂಯೋಗವನ್ನು ಬದಲಿಸಬೇಕೆಂಬ ಪ್ರಯತ್ನ ಮಾಡದೇ ಅವನಿಗೆ ಸ್ವೀಕಾರ ಮಾಡುವ ಸಲುವಾಗಿ ಶಾಂತಿಯಿಂದ ತಿಳಿಸುವದಿದೆ.

೬. ವರ್ತಮಾನವನ್ನು ಸ್ವೀಕಾರ ಮಾಡಿ ನಮ್ಮ ಪುರುಷಾರ್ಥ ಕೇವಲ ಒಂದು ಆತ್ಮಪ್ರಾಪ್ತಿಯ ಲಕ್ಷ್ಯವನ್ನು ಪ್ರಾಪ್ತ ಮಾಡುವ ಉದ್ದೇಶ ಹೊಂದಿರಬೇಕು. ಏಕೆಂದರೆ ವರ್ತಮಾನ ಉದಯ ಅರ್ಥಾತ್ ಸಂಯೋಗವು ತಮ್ಮ ಕೈಯೊಳಗಿನ ಮಾತು ಇರುವದಿಲ್ಲ. ಆದರೆ ಭವಿಷ್ಯವು ನಮ್ಮ ಕೈಯೊಳಗಿದೆ. ನಾವು ನಮ್ಮ ಭವಿಷ್ಯವನ್ನು ಸುಂದರವಾಗಿ ಮಾಡಲು ಸಾಧ್ಯವಿದೆ. ಆದ್ದರಿಂದ ನಮ್ಮ ಪುರುಷಾರ್ಥವನ್ನು ಉತ್ತಮ ಭಾವದಲ್ಲಿ ತೊಡಗಿಸಬೇಕು. ಪುಣ್ಯಕಾರ್ಯಗಳಲ್ಲಿ ತೊಡಗಿ ಭವಿಷ್ಯವನ್ನು ಸರಿಪಡಿಸಿಕೊಳ್ಳಬೇಕು.

೭. ನನಗೆ ಎಲ್ಲ ಸಂಯೋಗಗಳು ನಾನು ಹಿಂದೆ ಮಾಡಿದ ಕರ್ಮ (ಪುಣ್ಯ-ಪಾಪ)ದ ಅನುಸಾರವೇ ದೊರೆಯುತ್ತವೆ ಮತ್ತು ಕರ್ಮಗಳ ಅನುಸಾರವೇ ವಿಶ್ರಮಿಸುತ್ತೇವೆ.

೮. ಯಾರೋ ನನಗೆ ದುಃಖ ಕೊಡುತ್ತಾರೆ. ಅದರ ಸಲುವಾಗಿ ದೋಷವು ನನ್ನ ಪೂರ್ವಕೃತ ಪಾಪ ಕರ್ಮದ್ದಿದೆ. ಅಂದರೆ ನನ್ನ ಪೂರ್ವದ ದುಷ್ಟಕಾರ್ಯದ ದೋಷವೇ ಇರುತ್ತದೆ. ಆ ದುಷ್ಕೃತ್ಯದ ಸಲುವಾಗಿ ಮನಸ್ಸಿನಲ್ಲಿಯೇ ಕ್ಷಮೆ ಬೇಡುವದಿದೆ.

೯. ಬೇರೆ ಯಾರಿಗೂ ದೋಷಿ ಎಂದು ತಿಳಿಯಬಾರದು. ಅವರು ಕೇವಲ ನಿಮಿತ್ತ ಮಾತ್ರ ಇರುತ್ತಾರೆ.

೧೦. ಎರಡನೆಯವರನ್ನು ನಮ್ಮ ಪೂರ್ವ ಪಾಪಕರ್ಮಗಳಿಂದ ಬಿಡಿಸುವಂಥವರೆಂದು ತಿಳಿದು ಅವರನ್ನು ಉಪಕಾರಿಗಳೆಂದು ತಿಳಿಯಬೇಕು ಮತ್ತು ಅವರಿಗೆ ಮನಸ್ಸಿನಲ್ಲಿ ಧನ್ಯವಾದ ಹೇಳಬೇಕು. ಅದರಿಂದ ಅವರ ಮೇಲೆ ಸಿಟ್ಟು ಬರುವದಿಲ್ಲ.

೧೧. ಒಂದು ವೇಳೆ ಯಾರೋ ನಮ್ಮ ಮನೆಯ ಕಸವನ್ನು ಸ್ವಚ್ಛಗೊಳಿಸುತ್ತಾರೆ. ಆಗ ನಾವು ಅವರನ್ನು ಉಪಕಾರಿ ಎಂದು ಅವಶ್ಯವಾಗಿ ತಿಳಿಯಬೇಕು. ಅದೇ ತರಹ ಯಾರೋ ನಮ್ಮ ಆತ್ಮನ ಕಸವನ್ನು (ಕರ್ಮ) ಸ್ವಚ್ಛಗೊಳಿಸುತ್ತಾರೆ. ಆಗ ಅವರನ್ನು ಸಹ ಉಪಕಾರಿಗಳೆಂದು ಮನ್ನಿಸುವದು ಅವಶ್ಯಕವಿದೆ.

೧೨. ಈ ರೀತಿ ಧನ್ಯವಾದ ! ಸ್ವಾಗತ ! ಎಂದು ಹೇಳಿ ಆತ್ಮನ ಲಾಭ ಮಾಡಿಕೊಳ್ಳಬೇಕು. ಇದರಿಂದ ಆ ಜೀವವು ಎಲ್ಲಿಯೇ ಹೋಗಿರಲಿ, ಅಲ್ಲಿ ಅವರ ಬಗ್ಗೆ ಯಾರದೂ ತಕರಾರು ಇರುವದಿಲ್ಲ.

೧೩. ನನ್ನಲ್ಲಿ ಯಾವದೇ ದೂರು / ಚಾಡಿ ಇರುವದಿಲ್ಲ. ಏಕೆಂದರೆ ವರ್ತಮಾನದಲ್ಲಿ ನನ್ನೊಂದಿಗೆ ಯಾವದು ಆಗಹತ್ತಿದೆ. ಅದು ನನ್ನ ಭೂತಕಾಲದ ಕರ್ಮಗಳದ್ದೇ ಫಲವಿದೆ. ಆದ್ದರಿಂದ ನನಗೆ ಯಾರ ಬಗ್ಗೆ ದೂರು ಮಾಡುವದಿದ್ದರೆ ಅದಕ್ಕೆ ನಾನೇ ಸ್ವತಃ ಕಾರಣನಿದ್ದೇನೆ. ಬೇರೆ ಯಾರೂ ಇಲ್ಲ. ಆಗ ಮತ್ತೆ ನಾನು ಇನ್ನೊಬ್ಬರ ಬಗ್ಗೆ ದೂರು ಏಕೆ ನೀಡಬೇಕು ?

೧೪. ಲೋಕದ ಎಲ್ಲ ಜೀವಗಳ ಕುರಿತು ನಮ್ಮ ಭಾವನೆಗಳನ್ನು ಮೈತ್ರಿ, ಪ್ರಮೋದ ಕಾರುಣ್ಯ ಮತ್ತು ಮಾಧ್ಯಸ್ಥ ಈ ನಾಲ್ಕು ಪ್ರಕರಣಗಳಲ್ಲಿಯೇ ಹಂಚಬೇಕು. ಇಲ್ಲವಾದರೆ ಅದು ನನ್ನ ಸಲುವಾಗಿ ಬಂಧನದ ಕಾರಣವಾಗುವವು.

೧೫. ನಮ್ಮದು ಎಲ್ಲಕ್ಕಿಂತ ದೊಡ್ಡ ಅಶಕ್ತತೆ ಏನಿದೆಯೆಂದರೆ ಯಾವಾಗಲೂ ನಾವು ಎರಡನೆಯವರನ್ನೇ ಬದಲಿಸಿ ನಮ್ಮ ಅನುಕೂಲ ಮಾಡಿಕೊಳ್ಳುವಲ್ಲಿ ತೊಡಗಿರುತ್ತೇವೆ. ಅದರಲ್ಲಿ ಯಶಸ್ಸು ದೊರೆಯುವದು ಅತ್ಯಂತ ಕಠಿಣವಿದೆ.

೧೬. ಸತ್ಯಧರ್ಮವು ಬಹಳ ಸಮರ್ಥವಿದೆ. ಎಷ್ಟೆಂದರೆ ಕೇವಲ ಅದರ ನಿಜವಾದ ಶ್ರದ್ಧೆಯಾಗುವದರಿಂದಲೇ ಆ ಜೀವವು ತನ್ನಿಂದ ತಾನೇ ಅಧರ್ಮದಲ್ಲಿ ಪ್ರವೇಶಿಸಲು ಪ್ರಾರಂಭ ಮಾಡುತ್ತದೆ.

೧೭. ತಮ್ಮಿಂದ ತಾವೇ ಬದಲಾಗುವದು, ಎಲ್ಲಕ್ಕಿಂತ ಸುಲಭವಾಗಿದ್ದರೂ ಸಹ ಅದರ ಸಲುವಾಗಿ ನಾವು ಎಂದೂ ಪ್ರಯತ್ನ ಮಾಡುವದೇ ಇಲ್ಲ. ನಮ್ಮಿಂದ ನಾವೇ ಧರ್ಮದ ಅನುಕೂಲ ಬದಲಿಸಿಕೊಂಡು ಸಮ್ಯಗ್ದರ್ಶನದ ಯೋಗ್ಯತೆಯನ್ನು ಪ್ರಾಪ್ತ ಮಾಡಿಕೊಳ್ಳುವ ಸಲುವಾಗಿ ಅನಿವಾರ್ಯವಿದೆ.

೧೮. ಅನಾದಿಯಿಂದ ನಾವು ಜಗತ್ತಿನ ಮೇಲೆ ನಮ್ಮ ಅಧಿಕಾರ ನಡೆಸುವದನ್ನು ಬಯಸಿದ್ದೇವೆ. ಜಗತ್ತನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಪರಿವರ್ತನೆಗೊಳಿಸಲು ಬಯಸುತ್ತೇವೆ. ಎಲ್ಲರೂ ನನ್ನ ಅನುಸಾರ ನಡೆಯಲಿ ಮತ್ತು ನನ್ನ ಹೇಳಿಕೆಯ ಅನುಸಾರ ಬದಲಾಗಲಿ, ಇದನ್ನೇ ಬಯಸಿದ್ದೇವೆ. ಆದರೆ ನಾವು ಎಂದೂ ನಮ್ಮಿಂದ ನಾವೇ ಭಗವಾನರು ಹೇಳಿದ ಪ್ರಕಾರ ಪರಿಣಮನವಾಗಲು ಬಯಸಿಲ್ಲ. ಆದರೆ ನಾವು ಅನಾದಿಯಿಂದ ನಮ್ಮ ಬುದ್ಧಿಗನುಸಾರವೇ ಪರಿಣಮಿಸಿದ್ದೇವೆ. ಇದುವೇ ನಮ್ಮ ಸ್ವಚ್ಛಂದತೆಯಿದೆ.

೧೯. ಅನಾದಿಯಿಂದ ನಾವು ಪ್ರಶಂಸಾಪ್ರೇಮಿ ಇದ್ದೇವೆ. ಯಾರೇ ನಮ್ಮ ಹಿಂದೆ ಮಾಡಿದರೆ ನಮಗೆ ತೊಂದರೆ ಆಗುತ್ತದೆ. ಆದರೆ ನಮಗೆ ಇದು ತಿಳಿಯಬೇಕಾಗಿದೆ. ಏನಂದರೆ ನಿಂದೆ-ಪ್ರಶಂಸೆ, ಸುಖ-ದುಃಖ, ರತಿ-ಅರತಿ, ಶ್ರೀಮಂತಿಕೆ-ಬಡತನ ಮುಂತಾದವು ಸಂಯೋಗ ಕರ್ಮಗಳ ಅಧೀನ ಇರುತ್ತವೆ. ನಮ್ಮ ಬಯಕೆಯಿಂದ ಅಥವಾ ಬಯಸದೇ ಇರುವದರಿಂದ ಅವುಗಳಲ್ಲಿ ಯಾವ ವ್ಯತ್ಯಯವೂ ಉಂಟಾಗುವದಿಲ್ಲ. ಅದರಿಂದ ನಾವು ಅವಶ್ಯವಾಗಿ ಆರ್ತಧ್ಯಾನ ಮತ್ತು ರೌದ್ರಧ್ಯಾನದ ಭಾಗಿಯಾಗುತ್ತೇವೆ.

೨೦. ಅನಾದಿಯಿಂದ ನಮಗೆ ಸತ್ಯಧರ್ಮದ ಪ್ರಾಪ್ತಿಯು ಅತಿ ದುರ್ಲಭವಾಗಿರುತ್ತದೆ ಮತ್ತು ಯಾವಾಗ ನಮಗೆ ಸತ್ಯಧರ್ಮದ ಪ್ರಾಪ್ತಿಯಾಗಿದೆಯೋ ಆಗಲೂ ಸಹ ನಾವು ಅದನ್ನು ಪರಿಚಯಿಸಿಕೊಳ್ಳಲಿಲ್ಲ ಮತ್ತು ಒಂದು ವೇಳೆ ಪರಿಚಯ ಮಾಡಿಕೊಂಡರೂ ಸಹ ನಾವು ಅದರ ಮೇಲೆ ಶ್ರದ್ಧೆ ಮಾಡಲಿಲ್ಲ.

೨೧. ಅನಾದಿಯಿಂದ ನಾವು ಸತ್ಯಧರ್ಮದ ಹೆಸರಿನಿಂದ ಬೇರೆಯವರ ಪಕ್ಷ, ಸಂಪ್ರದಾಯ, ಆಗ್ರಹ ಅಥವಾ ಯಾವದೇ ವ್ಯಕ್ತಿಯ ಕುರಿತು ರಾಗದಲ್ಲಿ ಮೋಸ ಹೋಗಿದ್ದೇವೆ. ಅದನ್ನೇ ಸತ್ಯಧರ್ಮವೆಂದು ನಂಬಿ ನಮ್ಮ ಅನಂತ ಕಾಲವನ್ನು ಕಳೆದಿದ್ದೇವೆ ಮತ್ತು ಅನಂತ ದುಃಖ ಸಹಿಸಿದ್ದೇವೆ.

೨೨. ಸತ್ಯಧರ್ಮ ಪಡೆಯುವ ಸಲುವಾಗಿ "ಸತ್ಯ ಅದುವೇ ನನ್ನದು ಮತ್ತು ಒಳ್ಳೆಯದು ಅದುವೇ ನನ್ನದು" ಈ ಭಾವ ಇಡುವದು ಅವಶ್ಯಕವಿದೆ.

೨೩. ಸತ್ಯಧರ್ಮ ಪಡೆಯುವ ಸಲುವಾಗಿ ಜೀವನಿಗೆ ಸತ್ಯದ ಸ್ವೀಕಾರ ಮಾಡಲು ತೊಡಗಬೇಕು ಮತ್ತು ಅದರ ಅನುಸಾರ ಜೀವವು ತನ್ನಿಂದ ತಾನೇ ಬದಲಾಗುವ ಸಲುವಾಗಿ ತಯಾರಾಗಬೇಕು. ಇಲ್ಲವಾದರೆ ಸತ್ಯಧರ್ಮವನ್ನು ಪಡೆಯಲು ಸಾಧ್ಯವಾಗುವದಿಲ್ಲ.

೨೪. ಸತ್ಯಧರ್ಮವು ಜ್ಞಾನಿಯ ಅಂತರಂಗದಲ್ಲಿ ವಾಸಿಸುತ್ತದೆ. ಹೊರಗೆ ಹುಡುಕುವದರಿಂದ ಅದು ದೊರೆಯುವಂಥದ್ದಲ್ಲಿ ಸತ್ಯಧರ್ಮವು ಬಹುಶಃ ಜ್ಞಾನಿಯ ಸಾನಿಧ್ಯದಲ್ಲಿ ದೊರೆಯುವದು. ಏಕೆಂದರೆ ಜ್ಞಾನಿಯೇ ಜೀವನಿಗೆ ಆತ್ಮನ ಪರಿಚಯವನ್ನು ಸುಲಭವಾಗಿ ಮಾಡಬಹುದಾಗಿದೆ. ಆದ್ದರಿಂದ ಸತ್ಯಧರ್ಮವನ್ನು ಯಾರೂ ಹೊರಗಿನ ಕ್ರಿಯಾಕಾಂಡ ಅಥವಾ ವ್ರತ ಮುಂತಾದವುಗಳಲ್ಲಿ ಮನ್ನಿಸದೇ ಅದನ್ನು ಮುಂದೆ ಹೇಳಿದ ಅನುಸಾರ ಸ್ವತಃ ಅಂತರಂಗದಲ್ಲಿ ಹುಡುಕುವದಿದೆ.

೨೫. ಯಾರು ಮೋಕ್ಷಮಾರ್ಗವನ್ನು ತಿಳಿದಿರುವರು. ಅವರೇ ಅದನ್ನು ಹೇಳಬಹುದಾಗಿದೆ. ಏಕೆಂದರೆ ಮೋಕ್ಷಮಾರ್ಗವು ಸಂಸಾರದಲ್ಲಿ ಮುಳುಗಿರುವಂಥ ಜೀವಿಗಳ ಸಲುವಾಗಿ ಬಹಳ ಆಳ ಮತ್ತು ಅಪಾರವಾಗಿದೆ. ಆದರೆ ಸತ್ಪುರುಷ ಜ್ಞಾನಿಯ ಮಾಧ್ಯಮದಿಂದ ಸುಲಭವಿರುತ್ತದೆ.

೨೬. ಸತ್ಯಧರ್ಮದ ಯೋಗ್ಯತೆಯನ್ನು ಪ್ರಕಟ ಮಾಡುವ ಸಲುವಾಗಿ ನೀತಿ, ನ್ಯಾಯಪೂರ್ವಕ ಸಂಪತ್ತನ್ನು ಸಂಪಾದಿಸುವಲ್ಲಿ, ಪ್ರಾಪ್ತಿಯಲ್ಲಿ ಸಂತೋಷ ಕಡಿಮೆಯಾದರೂ ಸಹ ಸಂಪತ್ತನ್ನು ಸಂಪಾದಿಸುವ ಸಲುವಾಗಿ ಕಡಿಮೆ ಸಮಯವನ್ನು ಕೊಡಬೇಕು. ಹೆಚ್ಚು ಸಮಯ ಸ್ವಾಧ್ಯಾಯ-ಮನನ-ಚಿಂತನ ಮುಂತಾದವುಗಳಲ್ಲಿ ತೊಡಗಿಸಬೇಕು. ಸಾತ್ವಿಕ ಭೋಜನ, ಕಂದಮೂಲ, ಅನಂತಕಾಯದ ತ್ಯಾಗ, ಜೀವದಯೆಯ ಪಾಲನೆ, ರಾತ್ರಿ ಭೋಜನ ತ್ಯಾಗ, ಅಭಕ್ಷ್ಯದ ತ್ಯಾಗ, ಶರೀರವನ್ನು ಅವಶ್ಯವಿದ್ದಷ್ಟೇ ಪೋಷಿಸುವದು, ಸರಳ ಜೀವನ, ಸುಖದ ತ್ಯಾಗ,

ಶೀಲಧರ್ಮಪಾಲನೆ, ಅತಿ ಕ್ರೋಧ, ಮಾನ, ಮಾಯೆ, ಲೋಭಗಳ ತ್ಯಾಗ, ಹಳೆಯ ಪಾಪಗಳ ಕುರಿತು ಪಶ್ಚಾತ್ತಾಪ, ಹನ್ನೆರಡು ಭಾವನೆಗಳ ಚಿಂತನ, ಜೀವಿಗಳ ಬಗ್ಗೆ ನಾಲ್ಕು ಭಾವನೆಗಳು, ಪಂಚಪರಮೇಷ್ಠಿ ಭಗವಂತರ ಗುಣಗಳ ಕುರಿತು ಭಕ್ತಿ, ಎಲ್ಲ ಜೀವಗಳ ಸಲುವಾಗಿ ಗುಣದೃಷ್ಟಿ ಮುಂತಾದವನ್ನು ಮಾಡುವದು ಆವಶ್ಯಕ ಇರುತ್ತದೆ.

೨೭. ತನ್ನಿಂದ ತಾನೇ ಧರ್ಮದ ಅನುಕೂಲಗಳು ಬದಲಾಗುವದರಿಂದ ತಮ್ಮ ಸತ್ತಾದಲ್ಲಿ ಇರುವಂಥ ಕರ್ಮಗಳ ಮೇಲೆ ಅನೇಕ ಪ್ರಕ್ರಿಯೆಗಳು ಆಗುವದು ಪ್ರಾರಂಭವಾಗುತ್ತದೆ. ಹೇಗೆ ಪಾಪಪ್ರಕೃತಿಯು ಪುಣ್ಯಪ್ರಕೃತಿಯಲ್ಲಿ ಸಂಕ್ರಮಣವಾಗುವದು, ಪುಣ್ಯದ ಸಿದ್ಧಿಯು, ಪಾಪದ ಅಪವರ್ತನ ಮುಂತಾದವು ಆಗುತ್ತವೆ. ಇದರಿಂದ ಎಷ್ಟೋ ಸಲ ಗಲ್ಲು ಶಿಕ್ಷೆಯು ಸಹ ಬದಲಾಗುತ್ತದೆ.

೨೮. ಈ ರೀತಿಯಿಂದ ಗಲ್ಲು ಶಿಕ್ಷೆಯು ಬದಲಾಗುವ ಹಾಗಿದ್ದರೂ ಸಹ ನಮಗೆ ಅದರ ಜ್ಞಾನವಿಲ್ಲದ್ದರಿಂದ ಜನರು ಆಗಾಗ ಹೀಗೂ ಸಹ ವಿಚಾರ ಮಾಡುತ್ತಾರೆ. ಏನಂದರೆ ನೋಡು ಈ ಜೀವವು ಧರ್ಮೀಜೀವವಾಗಿದ್ದರೂ ಸಹ ಎಷ್ಟು ದುಃಖಿ ಇರುತ್ತದೆ. ಆದರೆ ಅವರಿಗೆ ಗೊತ್ತಿಲ್ಲ. ಏನಂದರೆ ನಿಜವಾದ ಧರ್ಮಿ ಜೀವವು ಈಗ ಅಂಥಿಂಥ ಗತಿಯಲ್ಲಿ ಹೋಗುವಂಥದ್ದಲ್ಲವಾದ್ದರಿಂದ ಆ ಗತಿಯ ಯೋಗ್ಯ ಪಾಪಕರ್ಮಗಳು ಸಂಕ್ರಮಣವಾಗಿ ಈಗ ಉದಯದಲ್ಲಿ ಬಂದಿರುತ್ತವೆ. ಈ ಕಾರಣದಿಂದ ನಮಗೆ ಆಗಾಗ "ಈ ಜೀವವು ಧರ್ಮೀ ಜೀವವಾಗಿದ್ದರೂ ಸಹ ಎಷ್ಟು ದುಃಖಿ ಇದೆ" ಎಂದು ಅನ್ನಿಸುತ್ತದೆ.

೨೯. ಆ ದುಃಖದ ಸಂಯೋಗದಲ್ಲಿದ್ದರೂ ಸಹ ಜೀವವು ಮೇಲೆ ಹೇಳಿದ 'ಧನ್ಯವಾದ ! ಸ್ವಾಗತಮ್ !'ದ ಭಾವ ಮಾಡುವ ಪುರುಷಾರ್ಥ ಮಾಡುತ್ತದೆ. ಆಗ ಜೀವವು ದುಃಖದಲ್ಲಿಯೂ ಸಹ ಸುಖಿ ಇರಬಹುದಾಗಿದೆ. ಜನರಿಗೆ ಅನ್ನಿಸಬಹುದು. ಏನಂದರೆ ಈ ಜೀವವು ಬಹಳ ದುಃಖಿ ಇದೆ. ಆದರೆ ಆ ಜೀವವು 'ಧನ್ಯವಾದ ! ಸ್ವಾಗತಮ್ !' ಅನ್ನುತ್ತಾನೆ ಮತ್ತು "ಏನು ಆಗುತ್ತದೆ ಅದು ಒಳ್ಳೆಯದಕ್ಕೇನೇ ಆಗುತ್ತದೆ" ಎಂದು ಭಾವಿಸುತ್ತಾನೆ. ಇದರ ಮಾಧ್ಯಮದಿಂದ ಸಮಾಧಾನಿ ಮತ್ತು ಸಮತಾಭಾವಿಯಾಗಿ ಶಾಂತ ಮತ್ತು ಪ್ರಸನ್ನ ಇರುವನು.

೩೦. ನಾವು ಅನಾದಿಯಿಂದ ಇಂದಿನವರೆಗೂ ಅನಂತಾನಂತ ಸಲ ದೀಕ್ಷೆಯನ್ನು ಸ್ವೀಕರಿಸಿದ್ದೇವೆ. ಅನಂತಾನಂತ ಸಲ ವ್ರತ, ತಪ ಮುಂತಾದವುಗಳನ್ನು ಮಾಡಿದ್ದೇವೆ. ಅನಂತಾನಂತ ಸಲ ಧ್ಯಾನ ಮುಂತಾದವುಗಳನ್ನು ಮಾಡಿದ್ದೇವೆ. ಅನಂತಾನಂತ ಸಲ "ನಾನು ಆತ್ಮನಿದ್ದೇನೆ" ಅಥವಾ "ನಾನು ಶುದ್ಧಾತ್ಮನಿದ್ದೇನೆ" ಅಥವಾ "ಸೋಹಂ" ಅಥವಾ "ಅಹಂ ಬ್ರಹ್ಮಾಸ್ಮಿ" ಅಥವಾ "ತತ್ವಮಸಿ" ಮುಂತಾದ ಜಪಗಳನ್ನು ಮಾಡಿದ್ದೇವೆ. ಅಥವಾ ಗಟ್ಟಿ ಮಾಡಿದ್ದೇವೆ. ಆದರೆ ಸತ್‌ದ ಪ್ರಾಪ್ತಿ ಅಂದರೆ ಸಮ್ಯಗ್ದರ್ಶನದ ಪ್ರಾಪ್ತಿ ಆಗಿರುವದಿಲ್ಲ. ಏಕೆಂದರೆ ಎಲ್ಲಿಯತನಕ ಆತ್ಮನು ಆ ಯೋಗ್ಯತೆಯ ಪ್ರಾಪ್ತಿ ಮಾಡಿಕೊಳ್ಳುವದಿಲ್ಲ ಅಲ್ಲಿಯತನಕ ಸಮ್ಯಗ್ದರ್ಶನದ

ಪ್ರಾಪ್ತಿಯಾಗುವದು ಅತಿ ದುರ್ಲಭವಿದೆ. ಅಂದರೆ ಮೊದಲು ನಮಗೆ ಆತ್ಮನನ್ನು ಮೋಹರೂಪಿ ಜ್ವರದಿಂದ ರಕ್ಷಿಸುವದಿದೆ. ಆದ್ದರಿಂದ ಭಗವಾನರು ಹೇಳಿದ್ದಾರೆ. ಏನಂದರೆ ಎಷ್ಟೋ ಸಲ ಅನೇಕ ಜೀವಗಳು ಒಂಬತ್ತು ಪೂರ್ವಗಳ ಪಾಠಿಯಾಗಿದ್ದರೂ ಸಹ ಸಮ್ಯಗ್ದರ್ಶನ ಪಡೆದಿರುವದಿಲ್ಲ.

**ಮೋಹದ ಜ್ವರವನ್ನು ಅಳೆಯುವ ಸಲುವಾಗಿ ಯಾವ ಮಾಪದಂಡವಿದೆ ? ತಿಳಿಯಿರಿ.**

**ಪ್ರಶ್ನೆ : ನಮಗೆ ಏನು ಇಷ್ಟವಿದೆ ?**

**ಉತ್ತರ :** ಎಲ್ಲಿಯವರೆಗೆ ನಮಗೆ ಸಂಸಾರಿಕ ವಸ್ತು ಅಥವಾ ಸಂಬಂಧ ಅಥವಾ ಇಚ್ಛೆ ಅಥವಾ ಆಕಾಂಕ್ಷೆ ಇದೆ, ಅಲ್ಲಿಯವರೆಗೆ ನಮಗೆ ತಿಳಿಯುವದೇನೆಂದರೆ ನಮಗೆ ಮೋಹದ ಜ್ವರವು ಬಹಳ ಜೋರಾಗಿದೆ ಮತ್ತು ಆ ಜ್ವರದ ಬಗ್ಗೆ ಮೊದಲು ಹೇಳಿದ ಅನುಸಾರ ಉಪಾಯ ಮಾಡುವದು ಅವಶ್ಯಕವಿದೆ.

೩೧. ನಾವು ಅನಾದಿಯಿಂದ ಇಂದಿನವರೆಗೆ ಅನಂತಾನಂತ ಸಲ ದೀಕ್ಷೆ ಸ್ವೀಕರಿಸಿದ್ದೇವೆ. ಅನಂತಾನಂತ ಸಲ ತಪ, ವ್ರತ, ಧ್ಯಾನ ಮಾಡಿದ್ದೇವೆ. ಅನಂತಾನಂತ ಸಲ 'ನಾನು ಆತ್ಮನಿದ್ದೇನೆ, ಸೋಹಂ, ಅಹಂ ಬ್ರಹ್ಮಾಸ್ಮಿ' ಮುಂತಾದ ಜಪ ಮಾಡಿದ್ದೇವೆ. ಆದರೆ ಸಮ್ಯಗ್ದರ್ಶನ ಪ್ರಾಪ್ತಿ ಆಗಿರುವದಿಲ್ಲ. ಏಕೆಂದರೆ ಇದು ಎಲ್ಲವೂ ಹಠಯೋಗ ಎಂದು ಹೇಳುತ್ತಾರೆ ಮತ್ತು ಯಥಾರ್ಥದಲ್ಲಿ ಸತ್ಯಧರ್ಮ ಹಿಂದೆ ಹೇಳಲಾದ ಉಪಚಾರ (ಸಹಜಯೋಗ)ದಿಂದ ಸಹಜವಾಗಿ ಪ್ರಾಪ್ತವಾಗುತ್ತದೆ. ಹಠಯೋಗದಿಂದ ಆಗುವದಿಲ್ಲ.

೩೨. ನಾವು ಅನಾದಿಯಿಂದ ಧರ್ಮವನ್ನು ಹೊರಗೇನೇ ಹುಡುಕಿದ್ದೇವೆ. ಆದರೆ ಆತ್ಮನ ಧರ್ಮ, ಆತ್ಮನ ಹೊರಗೆ ಹೇಗಿರಲು ಸಾಧ್ಯವಿದೆ ? ಹೊರಗಿನಿಂದ ನಮಗೆ ಕೇವಲ ಒಂದು ಮಾರ್ಗದರ್ಶನ ಮಾತ್ರವೇ ದೊರೆಯಬಹುದಾಗಿದೆ. ಆದರೆ ಆ ಸಮ್ಯಕ್ ದಿಶಾ ನಿರ್ದೇಶವು ಪ್ರಾಪ್ತ ಮಾಡುವ ಸಲುವಾಗಿ ನಮ್ಮ ಹತ್ತಿರ ತೆರೆದ ಬುದ್ಧಿ, ಶಾಸ್ತ್ರಗಳ ಆಳವಾದ ಅಧ್ಯಯನ ಹಾಗೂ ಶಾಸ್ತ್ರಗಳಿಂದ ಕೇವಲ ತಮ್ಮ ಆತ್ಮಕಲ್ಯಾಣದ ಸಲುವಾಗಿ ಕಾರ್ಯಕಾರಿ ಮಾತುಗಳನ್ನು (ಆತ್ಮನ ನಿರ್ಣಯ ಮತ್ತು ಆತ್ಮನ ಅನುಭೂತಿಯ ಸಲುವಾಗಿ ಯಾವ ಅವಶ್ಯಕ ಇವೆಯೋ ಅಂಥ ಮಾತುಗಳು) ಸ್ವೀಕರಿಸುವ ಭಾವ ಇಡಬೇಕು. ವಿವಾದಕ್ಕೆ ಆಸ್ಪದ ನೀಡುವ ಮಾತುಗಳನ್ನು ಸ್ವೀಕರಿಸಬಾರದು. ಯಾವುದರ ಉತ್ತರವನ್ನು ಕೇವಲ ಕೇವಲಿ ಭಗವಾನರೇ ಕೊಡಲು ಸಾಧ್ಯವಿದೆ. ಅಂಥ ವಿವಾದಾಸ್ಪದ ಮಾತುಗಳನ್ನು ಗ್ರಹಣ ಮಾಡದೇ ಅಂಥ ಮಾತುಗಳ ಸಲುವಾಗಿ ಮಾಧ್ಯಸ್ಥಭಾವ ಇಡುವದು ಮತ್ತು ಕೇವಲಿ ಭಗವಾನರು ಹೇಗೆ ನೋಡಿದ್ದಾರೆ, ಹಾಗೆಯೇ ನನಗೆ ಮಾನ್ಯವಿದೆ. ಇಂಥ ಭಾವನೆ ಇಡಬೇಕು. "ನಿಜವಾದದ್ದೇ ನನ್ನದಿದೆ ಮತ್ತು ಉತ್ತಮವಾದುದೇ ನನ್ನದಿದೆ" ಸತ್ಯದ ಸ್ವೀಕಾರ ಮಾಡುವ ತತ್ಪರತೆಯು ಅದರ ಅನುಸಾರ ಜೀವವು ತನ್ನಿಂದ ತಾನೇ ಬದಲಾಗುವದು ಮುಂತಾದವುಗಳದು ಪರಮ ಆವಶ್ಯಕವಿದೆ.

೩೩. ಯಾರು ಆತ್ಮನ ಅನುಭವ ಮಾಡಿದ್ದಾರೆ, ಅಂತಹ ಸತ್ಪುರುಷರ ಯೋಗ ಮತ್ತು ಅವರ ಕುರಿತು ನಮ್ಮದು ಸಂಪೂರ್ಣ ಸಮರ್ಪಣ ಭಾವ ಅವಶ್ಯಕ ಇರುತ್ತದೆ. ಏಕೆಂದರೆ ಅವರ ಕುರಿತು ನಮ್ಮ ಸಂಪೂರ್ಣ ಸಮರ್ಪಣೆಯಿಂದ ಅವರ ಉಪದೇಶವು ನಮ್ಮ ಜೀವನದಲ್ಲಿ ತಕ್ಷಣ ಪರಿಣಮನವಾಗುತ್ತದೆ. ನಮ್ಮ ಜೀವನದಲ್ಲಿ ಬೇಗನೇ ಧರ್ಮದ ಅನುಕೂಲತೆಯ ಪರಿವರ್ತನ ಬರುತ್ತದೆ.

೩೪. ನನ್ನ ಜೊತೆಗೆ ಎಂದೂ ಸಹ ಅನ್ಯಾಯ ಆಗುವದಿಲ್ಲ. ನನ್ನ ಸಂಗಡ ಯಾವದು ಸಂಭವಿಸುತ್ತದೆ. ಅದು ನಿಶ್ಚಯದಿಂದ ನನ್ನ ಕರ್ಮಗಳದೇ ಫಲ ಇರುತ್ತದೆ. ಈ ಭಾವನೆಯಿಂದ ಅನ್ಯಾಯದ ಮಾತೇ ಇರುವದಿಲ್ಲ. ನನ್ನ ಸಂಗಡ ಏನಾದರೂ ಸ್ವಲ್ಪ ಆಗುತ್ತದೆ. ಅದುವೇ ನನ್ನ ಸಲುವಾಗಿ ನ್ಯಾಯ ಸಂಗತ ಇರುತ್ತದೆ. ಆದರೆ ಇದರಿಂದ ನನಗೆ ಬೇರೆ ಯಾರದೇ ಸಂಗಡ ಅನ್ಯಾಯ ಮಾಡುವ ಪರವಾನಗಿ ದೊರೆಯುವದಿಲ್ಲ. ಇದನ್ನು ತಿಳಿಯುವದು ಅವಶ್ಯಕವಿದೆ.

೩೫. ಆತ್ಮಪ್ರಾಪ್ತಿಯ ಲಕ್ಷ್ಯದ ಜೊತೆಗೆ ಮೊದಲು ಹೇಳಿದ ಅನುಸಾರ ವೈರಾಗ್ಯ ಮತ್ತು ಉಪಶಮ ಆಗುವದು ಅತಿ ಅವಶ್ಯಕವಿದೆ.

೩೬. ಸತ್ಪುರುಷ, ಸತ್ಸಂಗ ಮತ್ತು ಸತ್‌ಶಾಸ್ತ್ರದ ಅಧ್ಯಯನ ಮುಂತಾದವು ಸತ್ಯಧರ್ಮ ಪಡೆಯುವ ಸಲುವಾಗಿ ಪಥಪ್ರದರ್ಶಕದ ಕಾರ್ಯ ಮಾಡುತ್ತವೆ.

೩೭. ಎಲ್ಲ ಸಂಯೋಗಗಳು ಅನಿತ್ಯ ಇವೆ. ಯಾವದೇ ಸಂಯೋಗವು ದಿನಾಲು ನಮ್ಮ ಸಂಗಡ ಇರುವಂಥದಲ್ಲ. ಆದ್ದರಿಂದ ಸಂಯೋಗಗಳಲ್ಲಿ 'ನನ್ನತನ' ಮತ್ತು 'ನನ್ನದು' ಎಂಬುದನ್ನು ಬಿಡುವದು ಅತಿ ಅವಶ್ಯಕವಿದೆ.

೩೮. ವೈರಾಗ್ಯ ಅಂದರೆ ನನ್ನ ಮನಸ್ಸಿನಲ್ಲಿ ಇರುವಂಥ ಸಂಸಾರದ ನಾಶ ಮಾಡುವದೇ ಆಗಿದೆ. ಅಂದರೆ ಹೊರಗಿನ ಸಂಸಾರವು ನಮಗೆ ಅಷ್ಟೊಂದು ವಿಘ್ನಕಾರಕ ಆಗುವದಿಲ್ಲ. ಆದರೆ ನಮಗೆ ನಮ್ಮ ಮನಸ್ಸಿನ ಸಂಸಾರವು ಬಹಳ ವಿಘ್ನಕಾರಕವಾಗಿರುತ್ತವೆ. ಆದ್ದರಿಂದ ಮೊದಲು ನಮಗೆ ನಮ್ಮ ಮನಸ್ಸಿನ ಸಂಸಾರದ ನಾಶವನ್ನು ಹನ್ನೆರಡು ಭಾವನೆಗಳನ್ನು ಭಾವಿಸಿ ಮಾಡಬೇಕಾಗಿದೆ. ನಂತರದಲ್ಲಿ ಹೊರಗಿನ ಸಂಸಾರದ ನಾಶವು ಕ್ರಮವಾಗಿ ಅವಶ್ಯವಾಗಿ ಆಗುತ್ತದೆ.

೩೯. ಮನಸ್ಸಿನಲ್ಲಿ ವಾಸ ಮಾಡಿದ ಸಂಸಾರದ ಕಾರಣ ದರ್ಶನ ಮೋಹನೀಯ ಕರ್ಮವಿದೆ ಮತ್ತು ಹೊರಗಿನ ಸಂಸಾರದ ಕಾರಣ ಚಾರಿತ್ರ ಮೋಹನೀಯ ಕರ್ಮವಿದೆ. ಮೊದಲು ದರ್ಶನ ಮೋಹನೀಯ ಕರ್ಮವು ಹೋಗುತ್ತದೆ. ಆಗ ಸಮ್ಯಗ್ದರ್ಶನ (ನಾಲ್ಕನೇ ಗುಣಸ್ಥಾನ) ಪ್ರಾಪ್ತವಾಗುತ್ತದೆ ಮತ್ತು ನಂತರದಲ್ಲಿ ಚಾರಿತ್ರ ಮೋಹನೀಯ ಕರ್ಮವು ಕ್ರಮವಾಗಿ ಹೋಗುತ್ತದೆ. ಆಗ ಐದನೆಯ ಮುಂತಾದ ಗುಣಸ್ಥಾನಗಳು ಪ್ರಾಪ್ತವಾಗುತ್ತವೆ. ಅಂದರೆ ಹೊರಗಿನ ಸಂಸಾರದ ನಾಶವು ಕ್ರಮವಾಗಿ ಆಗುತ್ತದೆ.

೪೦. ಸಂಸಾರದ ಎಲ್ಲ ಸಂಬಂಧವು ಸ್ವಾರ್ಥದ ಮೇಲೆ ಆಧಾರಿತವಾಗಿರುತ್ತದೆ ಮತ್ತು ಕ್ಷಣಿಕವೂ ಸಹ ಇರುತ್ತದೆ. ಅವುಗಳಲ್ಲಿ ಆಸಕ್ತಿ ಮಾಡಲು ಯೋಗ್ಯವಾದವುಗಳು ಇರುವದಿಲ್ಲ. ಆದರೆ ಯಾವದೇ ಕರ್ತವ್ಯ ಇದೆ, ಅದನ್ನು ಪೂರ್ಣ ನಿಷ್ಠೆಯಿಂದ ನಿರ್ವಹಿಸಬೇಕು. ಅದರಲ್ಲಿ ಯಾವದೂ ಕಡಿಮೆ ಆಗಬಾರದು.

೪೧. ಶರೀರವು ಅಶುದ್ಧಿಯಿಂದ ತುಂಬಿರುತ್ತದೆ. ಅದನ್ನು ಎಷ್ಟು ಬೇಕಾದಷ್ಟು ಸಲ ಸ್ನಾನ ಮಾಡಿಸಿದರೂ ಸಹ ಅದು ಬೇಗನೇ ಅಶುದ್ಧವಾಗುತ್ತದೆ. ಶರೀರದಲ್ಲಿ ಕೋಟಿಗಟ್ಟಲೆ ರೋಗಗಳು ಸಹ ತುಂಬಿರುತ್ತವೆ. ಅವು ಯಾವಾಗ ಉದಯದಲ್ಲಿ ಬರುತ್ತವೆ ಎಂಬುದು ಗೊತ್ತಿಲ್ಲ. ಸ್ವಚ್ಛಗೊಳಿಸಿದ ಬಟ್ಟೆಯನ್ನು ಒಂದೇ ಸಲ ಶರೀರದ ಮೇಲೆ ಧರಿಸುವದರಿಂದ ಆ ಬಟ್ಟೆಯು ಅಶುದ್ಧಿಯಾಗುತ್ತದೆ. ಇಂಥ ಶರೀರವು ಮೋಹ ಮಾಡಲು ಯೋಗ್ಯ ಇರುವದಿಲ್ಲ.

೪೨. ಸಂಸಾರವು ಚಿಂತೆ, ರೋಗ, ಪದವಿಯಿಂದ ತುಂಬಿರುತ್ತದೆ. ಸಂಸಾರದಲ್ಲಿ ಎಲ್ಲಿಯೂ ಸುಖ ಇಲ್ಲವಾದರೂ ಸಹ ಯಾವ ಸುಖವು ಕಂಡುಬರುತ್ತದೆಯೋ ಅದು ಕೇವಲ ಸುಖಾಭಾಸ ಇರುತ್ತದೆ ಮತ್ತು ಅದು ಕ್ಷಣಿಕವೂ ಸಹ ಇರುತ್ತದೆ. ಅದು ನಿಜವಾದ ಸುಖ ಇರುವದಿಲ್ಲ. ಎಲ್ಲಿಯವರೆಗೆ ಮೋಹವು ಮಂದವಾಗುವದಿಲ್ಲ, ಅಲ್ಲಿಯವರೆಗೆ ಈ ಮಾತು ತಿಳಿವಳಿಕೆಯಲ್ಲಿ ಬರುವದಿಲ್ಲ. ಆದ್ದರಿಂದ ಯಾರಿಗೆ ಸಂಸಾರದಲ್ಲಿ ಸುಖ ಕಂಡುಬರುತ್ತದೆಯೋ ಅದನ್ನು ಹಿಂದೆ ಹೇಳಿದ ಉಪಾಯಗಳಿಂದ ಮೋಹ ಮಂದಗೊಳಿಸುವದೂ ಸಹ ಅತ್ಯಂತ ಅಶಕ್ಯವಿದೆ.

೪೩. ಮನುಷ್ಯಭವವು ಅತಿ ದುರ್ಲಭವಿದೆ. ಅದರಲ್ಲಿಯೂ ಪೂರ್ಣ ಇಂದ್ರಿಯಗಳು, ದೀರ್ಘ ಕಾಲದ ಆಯು, ಆರ್ಯಕ್ಷೇತ್ರ, ಉತ್ತಮ ಕುಲ, ಸತ್ಯಧರ್ಮ, ಶ್ರದ್ಧೆ ಮುಂತಾದವುಗಳು ದೊರೆಯುವದು ಒಂದರಕ್ಕಿಂತಲೂ ಒಂದು ದುರ್ಲಭ ಇರುತ್ತವೆ. ಇವುಗಳನ್ನು ಪಡೆದ ಬಳಿಕ ಒಂದು ವೇಳೆ ನಾವು ಅವುಗಳನ್ನು ಸರಿಯಾಗಿ ಉಪಯೋಗ ಮಾಡದಿದ್ದರೆ ಆಗ ನಾವು ಪರಿಣಾಮ ಕೆಡಿಸಿಕೊಂಡು ಏಕೇಂದ್ರಿಯದಲ್ಲಿ ಹೋಗುವವರಿಂದ ಯಾರೂ ಉಳಿಸಿಕೊಳ್ಳಲು ಆಗುವದಿಲ್ಲ. ಮತ್ತೆ ಏಕೇಂದ್ರಿಯ ಗತಿಯಿಂದ ಹೊರಡುವದು ಸಹ ಚಿಂತಾಮಣಿ ರತ್ನದ ಪ್ರಾಪ್ತಿಗಿಂತಲೂ ಹೆಚ್ಚು ದುರ್ಲಭವೆಂದು ಹೇಳಲಾಗಿದೆ.

೪೪. ದೈನಿಕ ಪ್ರಗತಿಯನ್ನು ನಾವು ಪ್ರತಿದಿವಸ ಅಂತರಂಗದ ಆಧ್ಯಾತ್ಮಿಕ ಪ್ರಗತಿ ಮಾಡದಿದ್ದರೆ ಆಗ ನಮ್ಮ ಆಧ್ಯಾತ್ಮಿಕ ಪತನವು ನಿಶ್ಚಿತವಾಗಿ ಆಗುತ್ತದೆ. ಏಕೆಂದರೆ ನಮ್ಮ ಭಾವವು ಸ್ಥಿರವಿರುವದಿಲ್ಲ. ಒಂದು ವೇಳೆ ಅವರು ಉನ್ನತಿಯನ್ನು ಹೊಂದದಿದ್ದರೆ ಅವಶ್ಯವಾಗಿ ಅವನತಿ ಹೊಂದುತ್ತಾರೆ.

೪೫. ಜೀವವು ಅನಂತ ಸಂಸಾರದಲ್ಲಿ ಮುಳುಗುವದರಿಂದ ಬಹುಶಃ ಕೆಳಗೆ ತೋರಿಸಿದ ಸ್ಥಾನಗಳು ದೊರೆಯುತ್ತವೆ.

ವಿಷಯ-ಕಷಾಯ, ಆರಂಭ, ಪರಿಗ್ರಹ, ಅಹಮ್-ಮಮ್ (ನಾನು-ನನ್ನದು) ಕರ್ತೃತ್ವತನ-ನಿಮಿತ್ತಾಧೀನತನ, ಈರ್ಷೆ-ನಿಂದೆ, ಅಹಂಕಾರ ಮುಂತಾದವು ಶರೀರ-ಧನ-ಕಾಮ-ಭೋಗ ಮುಂತಾದವು, ಆರ್ತಧ್ಯಾನ-ರೌದ್ರಧ್ಯಾನ, ಪ್ರಾಪ್ತಿಯಲ್ಲಿ ಆಸಕ್ತಿ, ಅಪ್ರಾಪ್ತಿಯನ್ನು ಬಯಸುವದು, ತತ್ವಗಳ ವಿಪರೀತ ನಿರ್ಣಯ ಮುಂತಾದವು. ಆದ್ದರಿಂದ ಈ ಎಲ್ಲವುಗಳಿಂದ ಉಳಿದುಕೊಳ್ಳುವ ಪುರುಷಾರ್ಥ ಮಾಡುವದು ಬಹಳ ಅವಶ್ಯಕವಿದೆ.

೪೬. ಲೋಕದಲ್ಲಿ ಅನಂತಕಾಲದ ತನಕ ಇರಲು ಎರಡೇ ಸ್ಥಾನಗಳಿರುತ್ತವೆ. ನಿಗೋದ ಹಾಗೂ ಮೋಕ್ಷ. ಆದ್ದರಿಂದ ನಮ್ಮ ಹತ್ತಿರ ಎರಡೇ ವಿಕಲ್ಪಗಳಿರುತ್ತವೆ. ಒಂದು ವೇಳೆ ನಾವು ಸಿದ್ಧತ್ವ ಪಡೆಯುವ ಸಲುವಾಗಿ ಸಮ್ಯಗ್ದರ್ಶನ ಪಡೆಯದಿದ್ದರೆ ಆಗ ನಿಯಮದಿಂದ ಎರಡನೆಯ ವಿಕಲ್ಪ ಅಂದರೆ ನಿಗೋದ ಪ್ರಾಪ್ತವಾಗುವದು. ನಿಗೋದವು ಯಾವುದೇ ಪ್ರಯತ್ನವಿಲ್ಲದೇ ತನ್ನಿಂದ ತಾನೇ ದೊರೆಯುತ್ತದೆ. ಆದರೆ ಸಿದ್ಧತ್ವ ಪಡೆಯುವ ಸಲುವಾಗಿ ಹಿಂದೆ ಹೇಳಿದ ಪ್ರಯತ್ನ ಅಂದರೆ ಆತ್ಮನ ಪುರುಷಾರ್ಥ ಮಾಡುವದು ಅವಶ್ಯಕವಿದೆ. ಈಗ ನಾವು ನಿರ್ಣಯ ಮಾಡಬೇಕಾಗಿದೆ. ಏನೆಂದರೆ ನಮಗೆ ಎರಡರಲ್ಲಿ ಯಾವುದು ಬೇಕು ?

೪೭. ಈ ಮನುಷ್ಯ ಭವದ ಪ್ರತಿಯೊಂದು ಸಮಯದ ಬೆಲೆ ಅಮೂಲ್ಯವಿದೆ. ಏಕೆಂದರೆ ಒಂದು ಸಮಯ ಕಳೆದುಹೋದ ಬಳಿಕ ಅದು ನಮಗೆ ಮತ್ತೆ ದೊರೆಯುವದು, ಬೇಕಾದಷ್ಟು ಬೆಲೆ ಕೊಟ್ಟರೂ ಪ್ರಾಪ್ತವಾಗಲಾರದು. ಅಂದರೆ ನಮಗೆ ಪ್ರತಿ ಸಮಯದ ಉಪಯೋಗ ವಿವೇಕಪೂರ್ಣ ರೀತಿಯಿಂದ ಮಾಡುವದಿದೆ ಮತ್ತು ಒಂದು ಸಮಯ ಸಹಿತ ವ್ಯರ್ಥವಾಗಿ ಕಳೆಯಬಾರದು.

೪೮. ನಾನು ದೇಹರೂಪ ಇರುವದಿಲ್ಲ. ಆದರೆ ದೇಹ ದೇವಾಲಯದಲ್ಲಿ ವಿರಾಜಮಾನನಾದ ಭಗವಾನ ಆತ್ಮನಿದ್ದೇನೆ. ನಾನೇ ಐದೂ ಇಂದ್ರಿಯಗಳ ಮಾಧ್ಯಮದಿಂದ ತಿಳಿಯುವವ, ನೋಡುವವ ಕೇವಲ ಒಬ್ಬ ಜ್ಞಾಯಕ ಇದ್ದೇನೆ. ಆದ್ದರಿಂದ ಎಲ್ಲಿಯ ತನಕ ನಾನು ಉಪಸ್ಥಿತ ಇರುತ್ತೇನೆ. ಅಲ್ಲಿಯ ತನಕವೇ ಈ ಇಂದ್ರಿಯಗಳು ತಿಳಿಯುತ್ತವೆ, ನೋಡುತ್ತವೆ. ಹಾಗೆಯೇ ನಾನು ಈ ಶರೀರದಿಂದ ಹೊರಟ (ಅಂದರೆ ಮರಣವಾದರೆ) ನಂತರದಲ್ಲಿ ಇವೇ ಇಂದ್ರಿಯಗಳು ವ್ಯರ್ಥವಾಗುತ್ತವೆ. ಅವುಗಳಿಲ್ಲದೆ ಆತ್ಮನು ಸ್ವಲ್ಪವೂ ತಿಳಿಯುವದು, ನೋಡುವದು ಆಗುವದಿಲ್ಲ. ನಿಜವಾಗಿಯೂ ಆತ್ಮನೇ ಎಲ್ಲವನ್ನು ತಿಳಿಯುತ್ತಾನೆ, ನೋಡುತ್ತಾನೆ. ಇಂದ್ರಿಯಗಳು ಮಾತ್ರ ನೋಡುವದಿಲ್ಲ. ಆದ್ದರಿಂದ ಆತ್ಮನಿಗೆ ಜ್ಞಾಯಕ ಸಂಜ್ಞೆ ಪ್ರಾಪ್ತವಿದೆ. ಜ್ಞಾಯಕ ಹೆಸರು ಪ್ರಾಪ್ತವಾಗಿರುತ್ತದೆ.

೪೯. ನಾನು (ಆತ್ಮನು) ಸತ್-ಚಿತ್ ಆನಂದಸ್ವರೂಪ ಇದ್ದೇನೆ. ಸತ್ ಅಂದರೆ ಅಸ್ತಿತ್ವ, ಅಂದರೆ ನನ್ನ ಅಸ್ತಿತ್ವ ತ್ರಿಕಾಲವಿದೆ. ಚಿತ್ ಅಂದರೆ ತಿಳಿಯುವದು, ನೋಡುವದು

ಅರ್ಥಾತ್ ನನ್ನ ಕಾರ್ಯ ತ್ರಿಕಾಲ ತಿಳಿಯುವ ನೋಡುವಂಥದ್ದಿದೆ. ಆನಂದ ಅಂದರೆ ಅನಂತ ಅವ್ಯಾಬಾಧ ಅತೀಂದ್ರಿಯ ಸುಖ, ಅರ್ಥಾತ್ ನನ್ನ ಸ್ವಭಾವ ತ್ರಿಕಾಲ ಆನಂದಮಯ ಇರುತ್ತದೆ. ಇಷ್ಟೊಂದು ವೈಭವಶಾಲಿಯಾಗಿದ್ದರೂ ಸಹ ಎಷ್ಟೋ ಜೀವಗಳು ಸುಖಾಭಾಸದ ಹಿಂದೆ ಹುಚ್ಚನಾಗಿ ಅಲೆಯುತ್ತಿದ್ದಾರೆ. ಸುಖಾಭಾಸದ ಭೀಕ್ಷೆ ಬೇಡುವವರನ್ನು ನೋಡಿದ್ದೇವೆ. ಇದು ದೊಡ್ಡ ಕರುಣಾಜನಕ ಕಥೆಯಾಗಿರುತ್ತದೆ.

೫೦. "ನಿಜವಾದ ಸುಖ" ಎಂದರೆ – ಯಾವುದು ಸ್ವಾಧೀನವಿದೆ, ಶಾಶ್ವತವಿದೆ, ಎಂದೂ ಸಹ ಅದರಿಂದ ವ್ಯಾಕುಲತೆ ಆಗುವದಿಲ್ಲ, ದುಃಖ ಮಿಶ್ರಿತ ಆಗಲಾರದು. ದುಃಖಜನಕ ಸಹ ಇರುವದಿಲ್ಲ. ಆತ್ಮನು ಇಂತಹದೇ ಸುಖಮಯ ಇದ್ದಾನೆ. ಬೇರೆ ಯಾವದೇ ಸುಖ ಕಾಣುತ್ತದೆ ಅದೆಲ್ಲವೂ ಸುಖಾಭಾಸ ಮಾತ್ರ ಇವೆ. ಏಕೆಂದರೆ ಅವು ಕ್ಷಣಿಕ ಇವೆ. ಪರಾಧೀನ ಇವೆ. ದುಃಖಪೂರ್ವಕ ಇರುತ್ತವೆ ಮತ್ತು ದುಃಖಜನಕವೂ ಇರುತ್ತವೆ.

೫೧. ಧರ್ಮ ಇಪ್ಪತ್ನಾಲ್ಕು ಗಂಟೆ ಮತ್ತು ವಾರದ ಏಳೂ ದಿನಗಳು ಪಾಲಿಸಬೇಕು. ನಾಲ್ಕು ಭಾವನೆಗಳು, ಹನ್ನೆರಡು ಭಾವನೆಗಳು, ಉತ್ತಮ ಮಾತುಗಳು 'ಧನ್ಯವಾದ ! ಸ್ವಾಗತಮ್ ! ಗಳ ಭಾವಗಳು ೨೪x೭ ಸಿದ್ಧಗೊಳಿಸುತ್ತಿರಬೇಕು. ಏಕೆಂದರೆ ನಮಗೆ ಕರ್ಮದ ಬಂಧವು ೨೪x೭ ನಡೆದಿರುತ್ತದೆ. ಆದ್ದರಿಂದ ನಮಗೆ ಅದರಿಂದ ಉಳಿದುಕೊಳ್ಳುವ ಸಲುವಾಗಿ ಧರ್ಮವನ್ನು ಸಹ ೨೪x೭ ನಡೆಸಬೇಕು. ಹೀಗೆ ಭಾವಿಸಬೇಕು.

೫೨. ಪ್ರತಿ ಎರಡು ಗಂಟೆಗಳಿಗೊಮ್ಮೆ ನಮ್ಮ ಮನಸ್ಸಿನ ಪರಿಣಾಮವನ್ನು ಪರೀಕ್ಷಿಸುತ್ತಿರಬೇಕು. ಪರಿಣಾಮವನ್ನು ಉನ್ನತಗೊಳಿಸುತ್ತಿರಬೇಕು ಮತ್ತು ಅಂಟಿಕೊಂಡಿರುವ ಪಾಪಗಳ ಪ್ರಾಯಶ್ಚಿತ, ನಿಂದೆ, ಗರ್ಹಾ ಮುಂತಾದವುಗಳನ್ನು ಮಾಡಬೇಕು. ಮತ್ತೆ ಇಂಥ ಪರಿಣಾಮ ಆಗದಿರಲು ಭಾವಿಸಬೇಕು.

೫೩. ಯಾವಾಗ ಸಮಯ ಸಿಗುವದು, ಣಮೋಕಾರ ಮಂತ್ರದ ಸ್ಮರಣ ಮಾಡುತ್ತಿರಬೇಕು ಮತ್ತು ನಮಗೂ ಸಹ ಭಗವಾನ ಆಗುವದಿದೆ. ಈ ಮಾತಿನ ಸ್ಮರಣೆ ಇಟ್ಟಿರಬೇಕು.

೫೪. ಯಾವಾಗಲೂ ಸತ್ಸಂಗದ ಇಚ್ಛೆಯನ್ನು ಸ್ವಂತದ ದೋಷಗಳನ್ನು ತಿದ್ದಿಕೊಳ್ಳಬೇಕು ಮುಂತಾದವುಗಳನ್ನು ಕೇವಲ ಒಂದು ಆತ್ಮಪ್ರಾಪ್ತಿಗಾಗಿ ಲಕ್ಷ್ಯಪೂರ್ವಕ ಮಾಡುವದು ಅವಶ್ಯಕವಿದೆ. ವಿದ್ವಜ್ಜನರಿಗೂ ಸಹ ಮೋಹವನ್ನು ಗೆದೆಯುವದು ಮಹಾಕಠಿಣವಾಗುತ್ತದೆ. ಏಕೆಂದರೆ ಕೋರಿ ವಿದ್ವತ್ತೆಯು ಮೋಹವನ್ನು ಸೋಲಿಸುವ ಸಲುವಾಗಿ ಕಾರ್ಯಕಾರಿ ಇರುವದಿಲ್ಲ.

೫೫. ಮೋಹವನ್ನು ಸೋಲಿಸುವ ಸಲುವಾಗಿ ಎಷ್ಟು ವೈರಾಗ್ಯ ಮತ್ತು ಹಿಂದೆ ಹೇಳಿದ ಬೇರೆ ಯೋಗ್ಯತೆಗಳು ಆವಶ್ಯಕ ಇರುತ್ತವೆ. ಅಷ್ಟು ವಿದ್ವತ್ತೆಯ ಅವಶ್ಯಕತೆ

ಇರುವದಿಲ್ಲ. ಒಮ್ಮೊಮ್ಮೆ ವಿಪರೀತ ವಿದ್ವತ್ತೆಯು ಕಷಾಯ (ಕ್ರೋಧ, ಮಾನ, ಮಾಯೆ, ಲೋಭ)ಗಳಿಗೆ ಜನ್ಮ ಅಥವಾ ಮುಪ್ಪು ಕೊಡುವಂಥದ್ದಾಗಿರುತ್ತದೆ. ಆದ್ದರಿಂದ ಯಾವಾಗಲೂ ಸಾವಧಾನ ಆಗಿರುವದು ಅವಶ್ಯಕವಿದೆ.

★★★

## ೨೩. ಶುಭೋಪಯೋಗವು ನಿರ್ಜರೆಯ ಕಾರಣವಿಲ್ಲ (ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ)

**ಶ್ಲೋಕ ೭೬೨ :** ಬುದ್ಧಿಯ ಮಂದತೆಯಿಂದ ಹೀಗೂ ಸಹ ಸಂಶಯ ಮಾಡಬಾರದು. ಏನಂದರೆ ಶುಭೋಪಯೋಗವು ಏಕದೇಶದಿಂದಲೂ ಸಹ ನಿರ್ಜರೆಯ ಕಾರಣವಾಗುತ್ತದೆ. ಏಕೆಂದರೆ ಶುಭ ಉಪಯೋಗವು, ಅಶುಭವನ್ನು ತರುವಂಥದ್ದಾಗಿರುವದರಿಂದ (ಅಭಿಪ್ರಾಯವೇನೆಂದರೆ ಶುಭ ಉಪಯೋಗದಲ್ಲಿ ಧರ್ಮವಾಗುವದೆಂದು ತಿಳಿಯುತ್ತಾರೆ ಮತ್ತು ಶುಭ ಉಪಯೋಗದಿಂದ ನಿರ್ಜರೆ ಆಗುವದೆಂದು ಮನ್ನಿಸುತ್ತಾರೆ. ಇಂಥ ಒಂದು ವರ್ಗವಿದೆ. ಅವರಿಗೆ ತಿಳಿಸುವದೇನೆಂದರೆ ಸ್ವಾತ್ಮಾನುಭೂತಿ ರೂಪ ನಿಶ್ಚಯ ಸಮ್ಯಗ್ದರ್ಶನದ ಹೊರತು ಶುಭ ಉಪಯೋಗವು ನಿಯಮದಿಂದ ಆತ್ಮನಲ್ಲಿ ಸ್ವಲ್ಪ ಶುಭದ ಜೊತೆಗೆ ಮೋಹನೀಯ ಮುಂತಾದ ಘಾತಿಕರ್ಮಗಳ ಆಸ್ರವವನ್ನು ಸಹ ಮಾಡಿಸುತ್ತದೆ ಮತ್ತು ಅದು ಮೋಹನೀಯ ಮುಂತಾದ ಘಾತಿಕರ್ಮಗಳು ನಿಯಮದಿಂದ ಜೀವನಿಗೆ ದುಃಖ ಉಂಟು ಮಾಡುವಂಥದ್ದಿದೆ. ಅಶುಭವನ್ನು ತರುವಂಥದ್ದಿದೆ. ಅಂದರೆ ಶುಭ ಉಪಯೋಗವು ಜೀವವನ್ನು ಸಂಸಾರದಿಂದ ಮುಕ್ತಗೊಳಿಸಲಾರದು ಎಂದು ತಿಳಿಯಬೇಕು. ಆದರೆ ಇಲ್ಲಿ ಶುಭ ಉಪಯೋಗದ ನಿಷೇಧವೆಂದು ತಿಳಿಯಬಾರದು. ಇಲ್ಲವಾದರೆ ಜನರು ಸ್ವಚ್ಛಂದತೆಯಿಂದ ಅಶುಭವನ್ನೇ ಆಚರಿಸುವವರಾಗುತ್ತಾರೆ. ಇಲ್ಲಿಯ ಉದ್ದೇಶವೇನೆಂದರೆ ಶುಭ ಬಿಡಿಸಿ ಅಶುಭದಲ್ಲಿ ತೆಗೆದುಕೊಂಡು ಹೋಗುವದಿಲ್ಲ. ಆದರೆ ನಿರ್ಜರೆಯು ಕೇವಲ ಶುದ್ಧ ಉಪಯೋಗದಿಂದಲೇ ಆಗುತ್ತದೆ. ಆದ್ದರಿಂದಲೇ ಶುಭ ಉಪಯೋಗವು ನಿರ್ಜರೆಗೆ ಕಾರಣವಲ್ಲ ಎಂದು ಹೇಳಲಾಗಿದೆ.

ಆದ್ದರಿಂದ ಶುಭ ಉಪಯೋಗದಿಂದ ನಿರ್ಜರೆಯಾಗುವದೆಂದು ತಿಳಿಯಬಾರದು ಮತ್ತು ಶುಭದ ನಿಷೇಧವನ್ನು ಸಹ ತಿಳಿಯಬಾರದು. ಶುಭ ಉಪಯೋಗ ಅದು ಶುದ್ಧ ಉಪಯೋಗದ (ನಿರ್ಜರೆಯ) ಕಾರಣ ಇಲ್ಲ. ಆದರೆ ಶುಭ ಉಪಯೋಗವು ಶುಭ ಭಾವಗಳ (ವೀತರಾಗ ದೇವ-ಗುರು-ಶಾಸ್ತ್ರದ ಸಂಯೋಗದ) ಕಾರಣ ಅವಶ್ಯವಾಗಿರುತ್ತದೆ. ಆದ್ದರಿಂದ ಕೇವಲ ಒಂದು ಆತ್ಮನ ಲಕ್ಷ್ಯದಿಂದ ಅಂದರೆ ಆತ್ಮನ ಪ್ರಾಪ್ತಿಯ ಸಲುವಾಗಿ (ಸಮ್ಯಗ್ದರ್ಶನದ ಸಲುವಾಗಿ)

ಯಾವ ಯೋಗ್ಯತಾರೂಪ ಶುಭ ಉಪಯೋಗವಿದೆ ಆ ಅಪೇಕ್ಷೆಯಿಂದ ಆಚರಣೆ ಮಾಡಲು ಯೋಗ್ಯವಿದೆ. ಏಕೆಂದರೆ ಜೀವಕ್ಕೆ ಅಶುಭ ಉಪಯೋಗದಲ್ಲಿ ಇರುವ ಉಪದೇಶವನ್ನು ಯಾವದೇ ಶಾಸ್ತ್ರ ಕೊಡುವದಿಲ್ಲ ಮತ್ತು ಆದ್ದರಿಂದಲೇ ಪುಣ್ಯ (ಶುಭ)ವನ್ನು ಹೇಯವೆಂದು ತಿಳಿದು ಸ್ವಚ್ಛಂದತೆಯಿಂದ ಯಾವದೇ ಅಶುಭ ಉಪಯೋಗ ರೂಪ ಪರಿಣಮಿಸಿದರೆ ಅದು ತಮ್ಮ ಅನಂತ ಸಂಸಾರವನ್ನು ವೃದ್ಧಿಸುವ ಉಪಾಯ ಮಾಡಿದಂತಾಗುವದು ಎಂದು ತಿಳಿಯಬೇಕು.

ಇಲ್ಲಿ ಶುಭ ಉಪಯೋಗವು ನಿರ್ಜರೆಗೆ ಕಾರಣ ಇಲ್ಲವೆಂದು ಮನ್ನಿಸಲಾಗಿದೆ. ಏಕೆಂದರೆ ಗುಣಶ್ರೇಣಿ ನಿರ್ಜರೆಗೆ ಕೇವಲ ಒಂದೇ ಕಾರಣವೆಂದರೆ ಶುದ್ಧೋಪಯೋಗವೇ ಇರುತ್ತದೆ. ಕೇವಲ ಇದೇ ಅಪೇಕ್ಷೆಯಿಂದ ಶುಭ ಉಪಯೋಗ (ಪುಣ್ಯ) ಹೇಯವಿದೆ. ಆದರೆ ಯಾರೂ ಸ್ವಚ್ಛಂದತೆಯಿಂದ ಬೇರೆ ಎಂದು ತಿಳಿದುಕೊಂಡು ಪುಣ್ಯವನ್ನು ಹೇಯವೆಂದು ಹೇಳಿ ಪಾಪರೂಪ ಪರಿಣಮಿಸಿದರೆ, ಹೀಗಂತೂ ಯಾವ ಆಚಾರ್ಯ ಭಗವಂತರ ಉಪದೇಶವಿಲ್ಲ ಮತ್ತು ಹೀಗೆ ಅಪೇಕ್ಷೆಯೂ ಸಹ ಇರುವದಿಲ್ಲ. ರತ್ನಕರಂಡಕ ಶ್ರಾವಕಾಚಾರ ಶ್ಲೋಕ ೧೪೮ ರಲ್ಲಿಯೂ ಸಹ ಹೇಳಿದ್ದಾರೆ. ಏನಂದರೆ ಪಾಪವು ಜೀವದ ಶತ್ರು ಇದೆ ಮತ್ತು ಧರ್ಮವು ಜೀವದ ಮಿತ್ರ ಇದೆ. ಹೀಗೆ ನಿಶ್ಚಯ ಮಾಡುತ್ತ ಶ್ರಾವಕರು ಅನೇಕ ಶಾಸ್ತ್ರಗಳನ್ನು ತಿಳಿಯುತ್ತಾರೆ. ಆದರೆ ಅವರು ನಿಶ್ಚಯದಿಂದ ಶ್ರೇಷ್ಠ ಜ್ಞಾತಾ ಅಥವಾ ಕಲ್ಯಾಣದ ಜ್ಞಾತಾ ಆಗುತ್ತಾರೆ. ಆತ್ಮಾನುಶಾಸನ ಗಾಥೆ ೮ರಲ್ಲಿ ಪಾಪದಿಂದ ದುಃಖ ಮತ್ತು ಧರ್ಮದಿಂದ ಸುಖ ಎಂದು ಹೇಳಿದ್ದಾರೆ. ಈ ಮಾತು ಲೌಕಿಕದಲ್ಲಿಯೂ ಜಗತ್ಪ್ರಸಿದ್ಧವಿದೆ ಮತ್ತು ಎಲ್ಲ ತಿಳಿವಳಿಕೆಯುಳ್ಳ ಮನುಷ್ಯರೂ ಸಹ ಹೀಗೆಯೇ ಮನ್ನಿಸುತ್ತಾರೆ. ಯಾರು ಸುಖವನ್ನು ಅಪೇಕ್ಷಿಸುವರೋ ಅವರು ಪಾಪವನ್ನು ಬಿಟ್ಟು ಯಾವಾಗಲೂ ಧರ್ಮವನ್ನು ಸ್ವೀಕರಿಸಬೇಕು.

ಆದ್ದರಿಂದ ನಿಯಮದಿಂದ ಕೇವಲ ಒಂದು ಆತ್ಮಲಕ್ಷ್ಯದಿಂದ ಶುಭದಲ್ಲಿಯೇ ಇರುವದು ಯೋಗ್ಯವಿದೆ ಎಂದು ನಮ್ಮ ಅಭಿಪ್ರಾಯವಿದೆ. ಹೇಗೆಂದರೆ ಇಷ್ಟೋಪದೇಶ ಶ್ಲೋಕ ೩ರಲ್ಲಿ ವ್ರತಗಳ ಮೂಲಕ ದೇವಪದ ಪ್ರಾಪ್ತ ಮಾಡುವದು ಒಳ್ಳೆಯದು. ಆದರೆ ಅರೇ ! ಅವ್ರತಗಳ ಮೂಲಕ ನರಕಪದ ಪ್ರಾಪ್ತ ಮಾಡುವದು ಒಳ್ಳೆಯದಲ್ಲ. ಹೇಗೆ ನೆರಳು ಮತ್ತು ಬಿಸಿಲಿನಲ್ಲಿ ಕುಳಿತು ದಾರಿ ನೋಡುವಂಥ ಇಬ್ಬರಲ್ಲಿ ದೊಡ್ಡ ಅಂತರವಿದೆ. ಅದೇ ಪ್ರಕಾರ ವ್ರತ ಮತ್ತು ಅವ್ರತದ ಆಚರಣ ಮಾಡುವಂಥ ಇಬ್ಬರಲ್ಲಿ ದೊಡ್ಡ ಅಂತರವಿದೆ.

ಆತ್ಮಾನುಶಾಸನ ಗಾಥೆ ೨೩೯ ರ ಟೀಕೆಯಲ್ಲಿ ಪಂಡಿತ ಶ್ರೀ ಟೋಡರಮಲ್ಲಜಿ ಹೇಳುತ್ತಾರೆ – 'ನಿಶ್ಚಯ ದೃಷ್ಟಿಯಿಂದ ನೋಡಿದ ಬಳಿಕ ಒಂದು ಶುದ್ಧೋಪಯೋಗವೇ ಉಪಾದೇಯವಿದೆ. ಶುಭ–ಅಶುಭ ಎಲ್ಲ ವಿಕಲ್ಪಗಳು ತ್ಯಾಜ್ಯ ಇವೆ. ಆದಾಗ್ಯೂ ಇಂಥ ಅದೇ ರೂಪ ಸ್ಥಿತಿ ಸಂಪನ್ನತೆಯು ಪ್ರಾಪ್ತವಾಗದಿದ್ದರೆ ಅಲ್ಲಿಯವರೆಗೆ

ಅದೇ ಸ್ಥಿತಿಯ (ಶುದ್ಧೋಪಯೋಗ ರೂಪ ಸ್ಥಿತಿಯ) ಪ್ರಾಪ್ತಿಯ ಲಕ್ಷ್ಯಪೂರ್ವಕ ಪ್ರಶಸ್ತಯೋಗ (ಶುಭೋಪಯೋಗರೂಪ) ಪ್ರವೃತ್ತಿ ಉಪಾದೇಯವಿದೆ. ಅರ್ಥಾತ್ ಶುಭವಚನ, ಶುಭಃ ಅಂತಃಕರಣ ಮತ್ತು ಶುಭ ಶರೀರ ಪರಿಸ್ಥಿತಿಯು ಆದರಣೀಯವಿದೆ, ಪ್ರಶಂಸನೀಯವಿದೆ. ಆದರೆ ಮೋಕ್ಷಮಾರ್ಗದ ಸಾಕ್ಷಾತ್‌ಕಾರಣ ಇಲ್ಲ. ಆದಾಗ್ಯೂ ಶುದ್ಧೋಪಯೋಗದ ಕುರಿತು ವೃತ್ತಿಯ ಪ್ರವಾಹವು ಸ್ವಲ್ಪ ಅಂಶಗಳಲ್ಲಿ ಲಕ್ಷಿತವಾಗಿರುತ್ತದೆ. ಇಂಥ ಲಕ್ಷ್ಯವಾನ ಜೀವಗಳನ್ನು ಪರಂಪರೆಯಿಂದ ಕಾರಣರೂಪವಾಗುತ್ತವೆ. ಆತ್ಮಾನುಶಾಸನ ಗಾಥೆ ೨೪೦ರಲ್ಲಿಯೂ ಹೇಳಿರುವ ಪ್ರಕಾರ ಮೊದಲು ಅಶುಭೋಪಯೋಗ ಬಿಟ್ಟರೆ ಅದರ ಅಭಾವದಿಂದ ಪಾಪ ಮತ್ತು ದುಃಖಗಳು ಬಿಟ್ಟು ಹೋಗುವವು. ಪ್ರತಿಕೂಲ ವ್ಯಾಕುಲತೆಯ ರೂಪ ದುಃಖವು ಸ್ವತಃ ದೂರವಾಗುತ್ತವೆ ಮತ್ತು ಅನುಕ್ರಮದಿಂದ ಶುಭವೂ ಸಹ ಬಿಡುವದರಿಂದ ಪುಣ್ಯ ಹಾಗೂ ಅನುಕೂಲ ವ್ಯಾಕುಲತೆಯು ಅದರಿಂದ ಸಂಸಾರ ಪರಿಣಾಮಿ ಜೀವಗಳು ಸುಖವೆಂದು ಹೇಳುತ್ತವೆ. ಅದರದೂ ಸಹ ಅಭಾವವಾಗುತ್ತದೆ. ಆದ್ದರಿಂದ ಯಾರು ಸ್ವಚ್ಛಂದತೆಯಿಂದ ಅಶುಭ ಉಪಯೋಗ ರೂಪ ಪರಿಣಮಿಸದಿದ್ದರೆ ಹೀಗೆ ನಮ್ಮ ಆಗ್ರಹವಿದೆ. ಏಕೆಂದರೆ ಹೀಗೆ ಮಾಡುವದರಿಂದ ಅವರ ಭವಭ್ರಮಣ ಮತ್ತೂ ಹೆಚ್ಚಾಗುವದು.

★★★

## ೨೪. ಸಮ್ಯಗ್ದರ್ಶನ ರಹಿತ ದ್ರವ್ಯಚಾರಿತ್ರ
## (ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ)

**ಶ್ಲೋಕ ೭೬೯ :** ಯಾವ ದ್ರವ್ಯ ಚಾರಿತ್ರ ಮತ್ತು ಶ್ರುತಜ್ಞಾನ ಇದೆ ಅದು ಒಂದು ವೇಳೆ ಸಮ್ಯಗ್ದರ್ಶನ ರಹಿತನಾಗಿದ್ದರೆ ಅದು ಜ್ಞಾನವಲ್ಲ, ಚಾರಿತ್ರವೂ ಅಲ್ಲ. ಒಂದು ವೇಳೆ ಇದ್ದರೆ ಕೇವಲ ಕರ್ಮಬಂಧ ಮಾಡುವಂಥದ್ದಾಗಿರುತ್ತದೆ.

ಇಲ್ಲಿ ಮೊದಲು ಹೇಳಿದ ಅನುಸಾರ ಕೆಲವರು ತಮ್ಮನ್ನು ದ್ರವ್ಯ ಚಾರಿತ್ರದಿಂದಲೇ ಅಥವಾ ಕ್ಷಯೋಪಶಮ ಜ್ಞಾನದಿಂದಲೇ ನಾವು ಮೋಕ್ಷಮಾರ್ಗದಲ್ಲಿ ಸಾಗುತ್ತಿದ್ದೇವೆಂದು ತಿಳಿಯುತ್ತಿದ್ದಾರೆ ಮತ್ತು ಜನರಿಗೂ ತಿಳಿಸುತ್ತಿದ್ದಾರೆ. ಅವರ ಸಲುವಾಗಿ ಈ ಶ್ಲೋಕವು ಕೆಂಪುದೀಪದ ಸಮಾನ ಇದೆ. ಯಾರೂ ಅಭ್ಯಾಸರೂಪದಿಂದ ದ್ರವ್ಯಚಾರಿತ್ರ ತೆಗೆದುಕೊಳ್ಳಲು ಯಾವದೇ ಅಡ್ಡಿ ಇಲ್ಲ. ಆದರೆ ಅದರಿಂದ ಯಾರಾದರೂ ತಮ್ಮನ್ನು ಕೃತಕೃತ್ಯರೆಂದು ತಿಳಿಯುತ್ತಾರೆ ಅಥವಾ ತಿಳಿಸುತ್ತಾರೆ ಮತ್ತು ಸ್ವಂತಕ್ಕೆ ಆರನೇ ಅಥವಾ ಏಳನೇ ಗುಣಸ್ಥಾನದಲ್ಲಿ ಇದ್ದೇವೆಂದು ತಿಳಿಯುತ್ತಾರೆ ಅಥವಾ ತಿಳಿಸುತ್ತಾರೆ. ಕೆಲವು ಶ್ರಾವಕರು ತಮ್ಮನ್ನು ಐದನೇ

ಗುಣಸ್ಥಾನದಲ್ಲಿ ಇರುತ್ತೇವೆಂದು ತಿಳಿಯುವರು ಅಥವಾ ತಿಳಿಸುತ್ತಾರೆ. ಅವರ ಸಲುವಾಗಿ ಈ ಶ್ಲೋಕವು ಕೆಂಪುದೀಪದ ಸಮಾನ ಇರುತ್ತದೆ. ಆದ್ದರಿಂದ ಯಾರಾದರೂ ಹೀಗೆ ತಿಳಿಯದೇ ತಮ್ಮನ್ನು ಕೇವಲ ಆತ್ಮಲಕ್ಷ್ಯದಿಂದ ಅಂದರೆ ಆತ್ಮಪ್ರಾಪ್ತಿಯ ಸಲುವಾಗಿ ಅಭ್ಯಾಸರೂಪಿ ಚಾರಿತ್ರವೆಂದು ಮನ್ನಿಸುತ್ತಾರೆ, ತಿಳಿಯುತ್ತಾರೆ ಮತ್ತು ಅದರ ಸಲುವಾಗಿಯೇ ಶ್ರುತಜ್ಞಾನವನ್ನು ಆರಾಧಿಸುವರು. ಅವರು ಕರ್ಮಬಂಧದ ಕಾರಣದಿಂದ ಅಂಶಿಕರೂಪದಿಂದ ಉಳಿದುಕೊಳ್ಳಬಹುದು ಮತ್ತು ಮೊದಲು ಹೇಳಿದ ಅನುಸಾರ ತಮ್ಮ ಕಲ್ಯಾಣವನ್ನು ಸಹ ಮಾಡಿಕೊಳ್ಳುತ್ತಾರೆ.

★★★

## ೨೫. ಸ್ವ-ಪರ ವಿಷಯದ ಉಪಯೋಗ ಮಾಡುವಂಥವನೂ ಸಹ ಆತ್ಮಜ್ಞಾನಿ ಆಗುತ್ತಾನೆ. (ಪಂಚಾಧ್ಯಾಯಿ ಉತ್ತರಾರ್ಧದ ಶ್ಲೋಕ)

**ಶ್ಲೋಕ ೮೪೫ :** ಕ್ಷಾಯೋಪಶಮಿಕ ಜ್ಞಾನದ ವಿಕಲ್ಪತನವು (ಪದಾರ್ಥವನ್ನು ತಿಳಿಯುವ ರೂಪ ಉಪಯೋಗ) ಜ್ಞಾನಚೇತನದ ವಿಘ್ನದ ಕಾರಣ ಆಗಲಾರದು. (ಅಂದರೆ ಕೆಲವರು ಹೀಗೆ ಮನ್ನಿಸಿದರೆ ಅಂದರೆ ಜೀವವು ಪರವನ್ನು ತಿಳಿಯುತ್ತದೆ. ಹೀಗೆ ಮನ್ನಿಸುವದರಿಂದ ಮಿಥ್ಯಾತ್ವವಾಗುತ್ತದೆ. ಅಥವಾ ಸಮ್ಯಗ್ದರ್ಶನಕ್ಕೆ ವಿಘ್ನ ಆಗುತ್ತದೆ. ಸಮ್ಯಗ್ದರ್ಶನ ಆಗುವದಿಲ್ಲ. ಆದರೆ ಇಲ್ಲಿ ತಿಳಿಸುವದೇನೆಂದರೆ ಜ್ಞಾನವು ಪರವನ್ನು ತಿಳಿಯುವದು ಅದು ಸಮ್ಯಗ್ದರ್ಶನದ ಸಲುವಾಗಿ ವಿಘ್ನಕಾರಕ ಕಾರಣವಲ್ಲ) ಏಕೆಂದರೆ ಯಾವ ಗುಣದ ಯಾವ ಪರ್ಯಾಯ ಆಗುತ್ತದೆ, ಅದು ಕಥಂಚಿತ್ ತದ್ರೂಪ (ಆ ಗುಣರೂಪ)ವೇ ಆಗುತ್ತದೆ. ಆದ್ದರಿಂದ ಕ್ಷಾಯೋಪಶಮಿಕ ಜ್ಞಾನದ ವಿಕಲ್ಪವು ಜ್ಞಾನಚೇತನಾರೂಪ ಶುದ್ಧಜ್ಞಾನದ ಶತ್ರು ಇರುವದಿಲ್ಲ.

ಆದ್ದರಿಂದ ಯಾವಾಗ ಜ್ಞಾನವು ಪರವನ್ನು ತಿಳಿಯುತ್ತದೆ. ಆಗ ಆ ಜ್ಞಾನಗುಣವು ಸ್ವಯಂವೇ ಆ ಆಕಾರದ್ದಾದ ಬಳಿಕವೂ ಸಹ ತನ್ನ ಸ್ವತಃ ಸಿದ್ಧ ಧ್ರುವರೂಪ ಜ್ಞಾನತನವನ್ನು ಬಿಡುವದಿಲ್ಲ ಮತ್ತು ಅದರಿಂದಲೇ ಆ ಪರವನ್ನು ತಿಳಿಯುವ ರೂಪ ಜ್ಞಾನಗುಣದ ಪರಿಣಮನವು ಜ್ಞಾನ ಸಾಮಾನ್ಯ ರೂಪ ಜ್ಞಾನಚೇತನಾದ (ಶುದ್ಧಜ್ಞಾನದ) ಶತ್ರು ಇರುವದಿಲ್ಲ. ವಿಘ್ನ ಒಡ್ಡುವದಿಲ್ಲ. ಹೀಗೆ ತಿಳಿದುಕೊಂಡು ಅಂಜಿದರೆ ಹೊರಹಾಕುವದು ಅವಶ್ಯಕವಿದೆ. ಇದೇ ಮಾತನ್ನು ಮುಂದೆ ದೃಢ ಮಾಡಿಸುತ್ತೇವೆ.

**ಶ್ಲೋಕ ೮೫೮ :** ಜ್ಞಾನೋಪಯೋಗದ ಸ್ವಭಾವದ ಮಹಿಮೆ ಹೇಗಿದೆಯೆಂದರೆ ಆ (ಜ್ಞಾನೋಪಯೋಗವು) ದೀಪದಂತೆ ಸ್ವ ಹಾಗೂ ಪರ ಎರಡರ ಆಕಾರವು

ಒಮ್ಮೆಲೆ ಕಂಡು ಬರುತ್ತದೆ. ಈ ಶ್ಲೋಕದಲ್ಲಿ ಜ್ಞಾನದ ಸ್ವ-ಪರ ಪ್ರಕಾಶಕದ ಸ್ವಭಾವವನ್ನು ತೋರಿಸಿದ್ದಾರೆ ಮತ್ತು ಅದನ್ನೇ ಜ್ಞಾನದ ಮಹಿಮೆ ಎಂದು ಹೇಳಿದ್ದಾರೆ.

**ಶ್ಲೋಕ ೮೬೦ :** ಯಾರು ಸ್ವಾತ್ಮೋಪಯೋಗಿ ಇದ್ದಾರೆ ಅವರೇ ನಿಯಮದಿಂದ ಉಪಯುಕ್ತರಿದ್ದಾರೆ. ಹೀಗೂ ಇಲ್ಲ. (ಯಾವನು ಕೇವಲ ಸ್ವ-ಉಪಯೋಗಿ ಇರುವನು, ಅವನೇ ಸಮ್ಯಗ್ದೃಷ್ಟಿ ಇರುವನು ಹೀಗೂ ಇಲ್ಲ) ಹಾಗೂ ಯಾರು ಪರಪದಾರ್ಥೋಪಯೋಗಿ ಇರುವನು, ಅವನೇ ನಿಶ್ಚಯದಿಂದ ಉಪಯುಕ್ತನಿರುವನು ಹೀಗೂ ಇಲ್ಲ, (ಯಾರು ಕೇವಲ ಪರವನ್ನು ತಿಳಿಯುತ್ತಾನೆ, ಅವನೇ ಸಮ್ಯಗ್ದೃಷ್ಟಿ ಇರುವನು ಹೀಗೂ ಇಲ್ಲ.) ಆದರೆ ಎರಡೂ ವಿಷಯಗಳನ್ನು ತಿಳಿಯುವಂಥವನೇ ಉಪಯುಕ್ತ ಅಂದರೆ ಉಪಯೋಗ ಮಾಡುವಂಥವನಾಗುತ್ತಾನೆ. ಹೀಗೆ ನಿಯಮವಿದೆ. ಈ ಪ್ರಕಾರ ಕ್ರಿಯೆಯ ಸ್ಪಷ್ಟೀಕರಣ ಊಹಾಪೋಹ ಮಾಡಬೇಕು. ಅಂದರೆ ಸಮ್ಯಕ್‌ಜ್ಞಾನದ ಸ್ವ-ಪರದ ಜ್ಞಾನ ಮತ್ತು ವಿವೇಕಸಹಿತವೇ ಆಗುತ್ತದೆ. ಬೇರೆ ಪ್ರಕಾರ ಆಗುವದಿಲ್ಲ.

**ಭಾವಾರ್ಥ :** ಕೇವಲ ಸ್ವ ವಿಷಯದ ಅಥವಾ ಕೇವಲ ಪರ ವಿಷಯವನ್ನೇ ಉಪಯೋಗ ಮಾಡುವಂಥ ಯಾವದೇ ಉಪಯೋಗ ಉಳ್ಳವನಿರುತ್ತಾನೆ. ಹೀಗೆ ಇರುವದಿಲ್ಲ. ಆದರೆ ಸ್ವ-ಪರ ವಿಷಯದ ಉಪಯೋಗ ಮಾಡುವಂಥವನೇ ಆತ್ಮಜ್ಞಾನಿ ಆಗುತ್ತಾನೆ.

**ಶ್ಲೋಕ ೮೭೭ :** ರಾಗಾದಿ ಭಾವಗಳ ಸಂಗಡ ಬಂಧದ ಹರಡುವಿಕೆಯಿದೆ. ಆದರೆ ಜ್ಞಾನದ ವಿಕಲ್ಪಗಳ ಜೊತೆಗೆ ಬಂಧದ ವ್ಯಾಪ್ತಿ ಇಲ್ಲ. (ಅಂದರೆ ಆತ್ಮನ ಪರವನ್ನು ತಿಳಿದರೆ ಅದರಿಂದ ಸ್ವಲ್ಪವೂ ಬಂಧವೇ ಇಲ್ಲ. ಕೇವಲ ಆತ್ಮನು ಅದರಲ್ಲಿ ರಾಗ-ದ್ವೇಷ ಮಾಡಿದರೆ ಮಾತ್ರ ಅದರಿಂದಲೇ ಬಂಧವಾಗುತ್ತದೆ ಮತ್ತು ಆದ್ದರಿಂದ ಕೇವಲ ಪರವನ್ನು ತಿಳಿಯುವದು ಅಥವಾ ತಿಳಿಯುವದರಲ್ಲಿ ಬರುವದು ಅದರಲ್ಲಿ ಬಂಧದ ವ್ಯಾಪ್ತಿ ಇರುವದಿಲ್ಲ.) ಅಂದರೆ ಜ್ಞಾನವು ವಿಕಲ್ಪಗಳ ಜೊತೆಗೆ ಈ ಬಂಧದ ಅವ್ಯಾಪ್ತಿಯೇ ಇದೆ. ಆದರೆ ರಾಗಾದಿಗಳ ಜೊತೆಗೆ ಹೇಗೆ ಬಂಧದ ವ್ಯಾಪ್ತಿ ಇದೆ, ಹಾಗೆಯೇ ಜ್ಞಾನ ವಿಕಲ್ಪಗಳ ಜೊತೆಗೆ ವ್ಯಾಪ್ತಿ ಇರುವದಿಲ್ಲ.

ಆತ್ಮನು ಯಥಾರ್ಥದಲ್ಲಿ ತನ್ನ ಜ್ಞಾನದಲ್ಲಿ ರಚನೆಗೊಂಡ ಆಕಾರಗಳನ್ನು ತಿಳಿಯುತ್ತಾನೆ. ಪರವನ್ನು ತಿಳಿಯುವದಿಲ್ಲ. ಇಂತಹ ಜ್ಞಾನದ ವ್ಯವಸ್ಥೆಯಾದರೂ ಸಹ ಅಂದರೆ ಆತ್ಮನು ಪರಸಂಬಂಧಿಯ ತನ್ನ ಜ್ಞೇಯಾಕಾರಗಳನ್ನೇ ತಿಳಿಯುತ್ತಾನೆ ಮತ್ತು ಹಾಗೆಯೇ ಪರವನ್ನು ತಿಳಿಯುವದು ಯಾವದೇ ಪ್ರಕಾರದಿಂದ ಸಮ್ಯಗ್ದರ್ಶನದಲ್ಲಿ ವಿಘ್ನ ಇರುವದಿಲ್ಲ. ಹಾಗೆಯೇ ಪರವನ್ನು ತಿಳಿಯುವದು ಯಾವದೇ ಪ್ರಕಾರದಿಂದ ಬಂಧದ ಕಾರಣ ಇರುವದಿಲ್ಲ. ಆದಾಗ್ಯೂ ಅದು ಅಪೇಕ್ಷೆಯಿಂದ ಸ್ವದಲ್ಲಿ ಹೋಗುವ ಪಾವಟಿಗೆ ಇದೆ. ಈ ಮಾತನ್ನು ಮೊದಲೇ ತಿಳಿಸಿದ್ದೇವೆ. ಹೇಗೆಂದರೆ ಸ್ಥೂಲದಿಂದಲೇ ಸೂಕ್ಷ್ಮದಲ್ಲಿ ಹೋಗಲಾಗುತ್ತದೆ.

ಪ್ರಕಟದಿಂದಲೇ ಅಪ್ರಕಟದಲ್ಲಿ ಹೋಗಲಾಗುತ್ತದೆ. ವ್ಯಕ್ತದಿಂದಲೇ ಅವ್ಯಕ್ತದಲ್ಲಿ ಹೋಗಲಾಗುತ್ತದೆ. ಇದುವೇ ನಿಯಮವಿದೆ.

★★★

## ೨೬. ಪ್ರವಚನಸಾರದ ಅನುಸಾರ ಸಮ್ಯಗ್ದರ್ಶನದ ವಿಷಯ

ಸಮ್ಯಗ್ದರ್ಶನದ ವಿಷಯ ಹೀಗೆ ಅದು ಚೈತನ್ಯ ಸಾಮಾನ್ಯವಾಗಿರುವದರಿಂದ ಅಂದರೆ ಅದರಲ್ಲಿ ಎಲ್ಲ ವಿಶೇಷ ಭಾವಗಳ ಅಭಾವ ಆಗಿರುವದರಿಂದಲೇ ಶುದ್ಧಾತ್ಮನನ್ನು ಅಲಿಂಗ ಗ್ರಾಹ್ಯ ಎಂದು ಹೇಳಿದ್ದಾರೆ. ಇದೇ ಅಪೇಕ್ಷೆಯಿಂದ ಅಲಂಗ ಗ್ರಹಣದ ಮಾತು ತಿಳಿಯುವದು ಅವಶ್ಯಕವಿದೆ. ಏಕಾಂತದಿಂದಲೂ ಇಲ್ಲ. ಏಕೆಂದರೆ ಏಕಾಂತವಂತೂ ಅನಂತ ಪರಾವರ್ತನದ ಕಾರಣವಾಗುವಲ್ಲಿ ಸಮರ್ಥವಿದೆ.

**ಗಾಥೆ ೮೦ :** ಅರಿಹಂತ ಭಗವಾನ ಮತ್ತು ನಮ್ಮ ಆತ್ಮನು ನಿಶ್ಚಯದಿಂದ ಸಮಾನ ಇರುವರು ಮತ್ತು ಅರಿಹಂತ ಭಗವಾನರು ಮೋಹ-ರಾಗ-ದ್ವೇಷ ರಹಿತ ಆಗಿರುವದರಿಂದ ಅವರ ಸ್ವರೂಪವು ಅತ್ಯಂತ ಸ್ಪಷ್ಟವಾಗಿರುತ್ತದೆ. ಆದ್ದರಿಂದ ಜೀವವು ದ್ರವ್ಯ-ಗುಣ-ಪರ್ಯಾಯ ರೂಪದಿಂದ ಅರಿಹಂತ ಭಗವಾನರ ಸ್ವರೂಪವನ್ನು ಮನಸ್ಸಿನ ಮೂಲಕ ಮೊದಲು ತಿಳಿದುಕೊಳ್ಳಿರಿ. ಇದು ಆತ್ಮ, ಆತ್ಮನು ಹೀಗೆ ಏಕರೂಪ (ಕಥಂಚಿತ್ ಸದೃಶ) ತ್ರೈಕಾಲಿಕ ಪ್ರವಾಹವಿದೆ. ಅದು ದ್ರವ್ಯವಿದೆ. ಅದರ ಯಾವ ಏಕರೂಪ ಇರುವಂಥ ಚೈತನ್ಯರೂಪ ವಿಶೇಷಣವು ಅದು ಗುಣವಿದೆ ಮತ್ತು ಆ ಪ್ರವಾಹದಲ್ಲಿ ಯಾವ ಕ್ಷಣವರ್ತಿ ವ್ಯತಿರೇಕ ಇದೆ, ಅದು ಪರ್ಯಾಯವಿದೆ. ಹೀಗೆಯೇ ನಮ್ಮ ಆತ್ಮನು ಸಹ ದ್ರವ್ಯ-ಗುಣ-ಪರ್ಯಾಯ ರೂಪದಿಂದ ಅದನ್ನು ಮನಸ್ಸಿನ ಮೂಲಕ ಸ್ಮರಣೆಯಲ್ಲಿ ಬರುತ್ತದೆ. ಈ ಪ್ರಕಾರ ತ್ರೈಕಾಲಿಕ ತನ್ನ ಆತ್ಮನನ್ನು ಮನಸ್ಸಿನ ಸ್ಮರಣೆಯಲ್ಲಿ ತಂದು ನಂತರ ಹೇಗೆ ಮುತ್ತುಗಳನ್ನು ಮತ್ತು ಬಿಳಿಯಾದವುಗಳನ್ನು ಹಾರದಲ್ಲಿಯೇ ಅಂತರ್ಗತ ಮಾಡಿ ಕೇವಲ ಹಾರವನ್ನು ತಿಳಿಯುವಲ್ಲಿ ಬರುತ್ತದೆ. ಹಾಗೆ ಆತ್ಮಪರ್ಯಾಯವನ್ನು ಮತ್ತು ಚೈತನ್ಯ ಗುಣವನ್ನು ಆತ್ಮನಲ್ಲಿಯೇ ಅಂತರಗರ್ಭಿತ ಮಾಡಿ (ಸಮ್ಯಗ್ದರ್ಶನದ ವಿಷಯ) ಕೇವಲ ಆತ್ಮನನ್ನು ತಿಳಿದ ಬಳಿಕ ಪರಿಣಾಮಿ-ಪರಿಣಾಮ-ಪರಿಣತಿಯ ಭೇದದ ವಿಕಲ್ಪವು ನಾಶವಾಗುವದರಿಂದ ಜೀವವು ನಿಷ್ಕ್ರಿಯ ಚಿನ್ಮಾತ್ರ ಭಾವವನ್ನು (ಶುದ್ಧೋಪಯೋಗ) ಪ್ರಾಪ್ತ ಮಾಡುತ್ತದೆ ಮತ್ತು ಇದರಿಂದ ಮೋಹ (ದರ್ಶನ ಮೋಹ) ನಿರಾಶ್ರಯವಾಗುತ್ತ ವಿನಾಶಕ್ಕೆ ಪ್ರಾಪ್ತವಾಗುತ್ತದೆ. ಆದರೆ ಮೋಹದ ಸೇನೆಯ ಮೇಲೆ ವಿಜಯ ಪ್ರಾಪ್ತ ಮಾಡುವ ಉಪಾಯವನ್ನು ನಾನು ಪ್ರಾಪ್ತ ಮಾಡಿದ್ದೇನೆ. ಅಂದರೆ ಸಮ್ಯಗ್ದರ್ಶನ ಪ್ರಾಪ್ತ ಮಾಡಿದ್ದೇನೆ. ಹೀಗೆ ಹೇಳಿದನು.

**ಶ್ಲೋಕ ೭ :** ಯಾವನು ಅನ್ಯ ದ್ರವ್ಯದಿಂದ ಭಿನ್ನತೆಯ ಮುಖಾಂತರ ಆತ್ಮನನ್ನು ಒಂದೆಡೆಗೆ ದೂರೀಕರಿಸಿದ್ದಾನೆ. (ಅಂದರೆ ಪರದ್ರವ್ಯಗಳಿಂದ ಭಿನ್ನವಾಗಿ ದರ್ಶಿಸಿದ್ದಾನೆ.) ಯಾವನು ಸಮಸ್ತ ವಿಶೇಷಗಳ ಸಮೂಹವನ್ನು ಸಾಮಾನ್ಯದಲ್ಲಿ ಲೀನ ಮಾಡಿದ್ದಾನೆ. (ಅಂದರೆ ಸಮಸ್ತ ಪರ್ಯಾಯಗಳನ್ನು ದ್ರವ್ಯದೊಳಗೆ ಮುಳುಗಿಸಿ ದರ್ಶಿಸಿದ್ದಾನೆ.) ಹೀಗೆ ಯಾವ ಈ ಉದ್ಧತ ಮೋಹ ಲಕ್ಷ್ಮಿಯನ್ನು (ಋದ್ಧಿಯನ್ನು ಶೋಭೆಯನ್ನು ಕೊಳ್ಳೆ ಹೊಡೆಯುವಂಥ ಶುದ್ಧ ನಯವು ಉತ್ಕಟ ವಿವೇಕದ ಮುಖಾಂತರ ತತ್ವವನ್ನು ಆತ್ಮಸ್ವರೂಪವನ್ನು) ಭಿನ್ನ ಮಾಡಿದೆ. ಅಂದರೆ ಸಮ್ಯಗ್ದರ್ಶನ ಪ್ರಾಪ್ತ ಮಾಡಿದೆ.

**ಗಾಥೆ ೨೪೦ :** ಯಾವ ಪುರುಷನು ಅನೇಕಾಂತಯುಕ್ತ ಆಗಮಜ್ಞಾನದ ಬಲದಿಂದ ಸಮಸ್ತ ಪದಾರ್ಥಗಳ ಜ್ಞೇಯಾಕಾರಗಳ ಜೊತೆಗೆ ಮಿಶ್ರವಾಗುತ್ತ ನಿರ್ಮಲ ಜ್ಞಾನವು ಯಾವುದರ ಆಕಾರವಿದೆ, ಇಂಥ ಶುದ್ಧ ಆತ್ಮನ ಶ್ರದ್ಧಾನ ಮತ್ತು ಅನುಭವ ಮಾಡುತ್ತ (ಅಂದರೆ ಶ್ರದ್ಧೆ ಮತ್ತು ಅನುಭವದ ವಿಷಯವು ಒಂದೇ ಇದೆ.) ಆತ್ಮನಲ್ಲಿಯೇ ನಿತ್ಯ, ನಿಶ್ಚಲ ವೃತ್ತಿಯನ್ನು ಬಯಸುತ್ತ ಇಲ್ಲಿ ಸಮ್ಯಗ್ದರ್ಶನದ ಪ್ರಾಪ್ತಿಯ ವಿಧಿಯನ್ನು ಹೇಳಲಾಗಿದೆ.

★★★

## ೨೭. ನಿಯಮಸಾರ ಟೀಕೆಯಲ್ಲಿ ಸಮ್ಯಗ್ದರ್ಶನದ ವಿಷಯ

ಈಗ ನಾವು ಶ್ರೀ ಪದ್ಮಪ್ರಭು ಮಲಧಾರಿದೇವಕೃತ ನಿಯಮಸಾರದ ಟೀಕೆಯಿಂದ ತಿಳಿಯೋಣ. ಸಮ್ಯಗ್ದರ್ಶನದ ವಿಷಯ ಏನಿದೆ ? ಮತ್ತು ಸಮ್ಯಗ್ದೃಷ್ಟಿಯು ಯಾವುದರ ವೇದನೆ ಮಾಡುತ್ತಾನೆ ? ಅವನು ಯಾವ ಭಾವನೆಗಳಲ್ಲಿ ತಲ್ಲೀನನಾಗಿರುತ್ತಾನೆ ಮುಂತಾದವನ್ನು ತಿಳಿಯೋಣ.

**ಶ್ಲೋಕ ೨೨ :** ಸಹಜ ಜ್ಞಾನರೂಪ ಸಾಮ್ರಾಜ್ಯವು ಸರ್ವಸ್ವವಿರುವಂಥ ಶುದ್ಧ ಚೈತನ್ಯಮಯನಾದ ಆತ್ಮನನ್ನು ತಿಳಿದುಕೊಂಡು (ಶುದ್ಧ ದ್ರವ್ಯಾರ್ಥಿಕ ನಯದಿಂದ ತನ್ನನ್ನು ಶುದ್ಧಾತ್ಮನೆಂದು ತಿಳಿದುಕೊಂಡು) ನಾನು ನಿರ್ವಿಕಲ್ಪನಾಗುವೆನು. ಅಂದರೆ ಶುದ್ಧ ಚೈತನ್ಯಮಯ ಆತ್ಮ ಅದುವೇ ಸಮ್ಯಗ್ದರ್ಶನದ ವಿಷಯ ಇರುತ್ತದೆ. ಏಕೆಂದರೆ ಅದನ್ನು ಭಾವಿಸುತ್ತಲೇ ಜೀವವು ನಿರ್ವಿಕಲ್ಪವಾಗುತ್ತದೆ.

**ಶ್ಲೋಕ ೨೩ :** ದರ್ಶನ, ಜ್ಞಾನ, ಚಾರಿತ್ರರೂಪದಿಂದ ಪರಿಣಮಿತವಾದಂಥ ಅದೊಂದೇ ಚೈತನ್ಯ ಸಾಮಾನ್ಯರೂಪ ನಿಜಾತ್ಮ ತತ್ವವಿದೆ. ಅದು ಮೋಕ್ಷೇಚ್ಛುಗಳಿಗೆ ಪ್ರಸಿದ್ಧವಾದ ಮಾರ್ಗವಿದೆ. ಈ ಮಾರ್ಗವಿಲ್ಲದೇ ಮೋಕ್ಷವಿಲ್ಲ.

ಇದು ಸಾಮಾನ್ಯ ಜೀವವು ಕೇವಲ ಯಾವುದಕ್ಕೆ ಸಹಜ ಪರಿಣಾಮಿ ಅಥವಾ ಪರಮ ಪಾರಿಣಾಮಿಕ ಭಾವ ರೂಪವು ಸಹ ಹೇಳಲಾಗುತ್ತದೆ. ಅದುವೇ

ಸಮ್ಯಗ್ದರ್ಶನದ ವಿಷಯವಿದೆ ಮತ್ತು ಅದರಿಂದಲೇ ಸಮ್ಯಗ್ದರ್ಶನವಾದ ಮೇಲೆ ಅದುವೇ ಪ್ರಸಿದ್ಧ ಮೋಕ್ಷಮಾರ್ಗವೆಂದು ಹೇಳಿದ್ದಾರೆ. ಏಕೆಂದರೆ ಸಮ್ಯಗ್ದರ್ಶನದಿಂದಲೇ ಆ ಮಾರ್ಗದಲ್ಲಿ ಪ್ರವೇಶವಿದೆ.

**ಶ್ಲೋಕ ೨೪ :** ಪರಮಭಾವಗಳಿದ್ದರೂ ಸಹಜಗುಣಮಣಿಯ ಖಣಿರೂಪ ಹಾಗೂ ಪೂರ್ಣಜ್ಞಾನವುಳ್ಳ ಶುದ್ಧ ಆತ್ಮನೊಬ್ಬನನ್ನು ಯಾವ ತೀಕ್ಷ್ಣಬುದ್ಧಿಯುಳ್ಳ ಶುದ್ಧದೃಷ್ಟಿಯ ಪುರುಷನು ಭಾವಿಸುತ್ತಾನೆ. ಆ ಪುರುಷನು ಪರಮಶ್ರೀ ರೂಪ ಮುಕ್ತಿಸುಂದರಿಯ ವಲ್ಲಭನಾಗುತ್ತಾನೆ.

**ಶ್ಲೋಕ ೨೫ :** ಈ ರೀತಿ ಪರಗುಣ ಪರ್ಯಾಯಗಳಿದ್ದರೂ ಕೂಡ ಉತ್ತಮ ಪುರುಷರ ಹೃದಯಕಮಲದಲ್ಲಿ ಕಾರಣ ಆತ್ಮನು ವಿರಾಜಮಾನನಿದ್ದಾನೆ. ತನ್ನಿಂದ ಉತ್ಪನ್ನವಾದಂಥ ಆ ಪರಮ ಬ್ರಹ್ಮರೂಪ ಸಮಯಸಾರವನ್ನು ಯಾರನ್ನು ನೀನು ಭಜಿಸುತ್ತಿರುವಿ ಅವನನ್ನು ಎಲೈ ಭವ್ಯೋತ್ತಮನೇ ನೀನು ಬೇಗನೇ ಭಜಿಸು. ನೀನು ಅವನೇ ಇರುವಿ.

ಆಚಾರ್ಯ ಭಗವಂತರು ಹೇಳುತ್ತಾರೆ – ಏನಂದರೆ 'ನೀನು ಅವನೇ ಇರುವಿ' ಅಂದರೆ ನೀನು ಕೇವಲ ಅದರಲ್ಲಿಯೇ 'ನನ್ನತನ' (ಏಕತ್ವ) ಮಾಡು. ಏನಂದರೆ ಯಾವ ಸಮ್ಯಗ್ದರ್ಶನದ ವಿಷಯವಿದೆ ಮತ್ತು ಅದರದೇ ಅನುಭವ ಆಗುವದರಿಂದ ಸಮ್ಯಗ್ದರ್ಶನ ಪ್ರಕಟವಾಗುತ್ತದೆ. ಆದ್ದರಿಂದ ಹೇಳುತ್ತಾರೆ. ಏನಂದರೆ 'ನೀನು ಅವನೇ ಇರುವಿ' ಇದುವೇ ಸಮ್ಯಗ್ದರ್ಶನದ ವಿಧಿ ಇರುತ್ತದೆ.

**ಶ್ಲೋಕ ೨೬ :** ಜೀವತತ್ವವು ಒಮ್ಮೊಮ್ಮೆ ಸದ್ಗುಣಗಳೊಡನೆ, ಒಮ್ಮೊಮ್ಮೆ ಅಶುದ್ಧರೂಪ ಗುಣಗಳೊಡನೆ, ಒಮ್ಮೊಮ್ಮೆ ಸಹಜ ಪರ್ಯಾಯಗಳೊಡನೆ ಕಂಡುಬರುವದು ಮತ್ತು ಒಮ್ಮೊಮ್ಮೆ ಅಶುದ್ಧ ಪರ್ಯಾಯಗಳೊಡನೆ ಕಂಡುಬರುವದು ಇವೆಲ್ಲವುಗಳಿಂದ ಸಹಿತವಾಗಿದ್ದರೂ ಕೂಡ ಇವೆಲ್ಲವುಗಳಿಂದ ರಹಿತವಿರುವಂಥ ಈ ಜೀವತತ್ವವನ್ನು ನಾನು ಸಕಲಾರ್ಥದ ಸಿದ್ಧಿಯ ಸಲುವಾಗಿ ಯಾವಾಗಲೂ ನಮಿಸುತ್ತೇನೆ, ಭಜಿಸುತ್ತೇನೆ.

**ಶ್ಲೋಕ ೩೦ :** ಸಕಲ ಮೋಹ, ರಾಗ, ದ್ವೇಷವುಳ್ಳ ಓರ್ವ ಪುರುಷನು ಪರಮ ಗುರುವಿನ ಚರಣಕಮಲ ಯುಗಲದ ಸೇವೆಯ ಪ್ರಸಾದದಿಂದ ನಿರ್ವಿಕಲ್ಪ ಸಹಜ ಸಮಯಸಾರವನ್ನು ತಿಳಿಯುತ್ತಾನೆ. ಆ ಪುರುಷನು ಪರಮಶ್ರೀ ರೂಪ ಸುಂದರಿಯ ಪ್ರಿಯಕಾಂತನಾಗುತ್ತಾನೆ.

ಈ ಕಾಲದಲ್ಲಿ ಇಂಥ ನಿರ್ವಿಕಲ್ಪ ಸಹಜ ಸಮಯಸಾರವನ್ನು ತಿಳಿಯುವಂಥವರನ್ನು ಪರಮ ಗುರುವೆಂದು ಹೇಳಿದ್ದಾರೆ. ಏಕೆಂದರೆ ಈ ಕಾಲದಲ್ಲಿ ಸಮ್ಯಗ್ದರ್ಶನ ಯುಕ್ತ ಜೀವಗಳು ಬಹಳ ಕಡಿಮೆ ಇರುತ್ತವೆ. ಇಂಥ ಪರಮಗುರುವು ಹೇಳಿದ ಅನುಸಾರ ನಿರ್ವಿಕಲ್ಪ ಸಹಜ ಸಮಯಸಾರವನ್ನು ಯಾವನು ತಿಳಿಯುತ್ತಾನೆ.

ಅಂದರೆ ಅನುಭವ ಮಾಡುತ್ತಾನೆ ಅವನು ಸಮ್ಯಗ್ದರ್ಶನದಿಂದ ಕೂಡಿದವನಾಗಿ ನಿಯಮದಿಂದ ಮುಕ್ತಿಯನ್ನು ಹೊಂದುತ್ತಾನೆ.

**ಶ್ಲೋಕ ೩೪ :** ನಮ್ಮ ಆತ್ಮ ಸ್ವಭಾವದಲ್ಲಿ ವಿಭಾವವು ಅಸತ್‌ವಿರುವದರಿಂದ ನಮಗೆ ಅದರ ಚಿಂತೆಯಿಲ್ಲ, ನಾವಂತೂ ಹೃದಯಕಮಲದಲ್ಲಿ ಸ್ಥಿತ ಸರ್ವಕಲಂಕದಿಂದ ವಿಮುಕ್ತ, ಶುದ್ಧ ಆತ್ಮನೊಬ್ಬನ ಅನುಭವವನ್ನು ಸತತ ಮಾಡುತ್ತೇವೆ. ಏಕೆಂದರೆ ಬೇರೆ ಯಾವ ಪ್ರಕಾರದಿಂದ ಮುಕ್ತಿ ಇಲ್ಲವೇ ಇಲ್ಲ.

**ಗಾಥೆ ೧೯ :** ದ್ರವ್ಯಾರ್ಥಿಕ ನಯದಿಂದ ಜೀವಗಳು ಪೂರ್ವಕಥಿತ ಪರ್ಯಾಯದಿಂದ ವ್ಯತಿರಿಕ್ತ ಇವೆ. ಪರ್ಯಾಯನಯದಿಂದ ಜೀವಗಳು ಆ ಪರ್ಯಾಯದಿಂದ ಸಂಯುಕ್ತ ಇವೆ. ಈ ಪ್ರಕಾರ ಜೀವಗಳು ಎರಡೂ ನಯಗಳಿಂದ ಸಂಯುಕ್ತ ಇವೆ.

ಒಂದೇ ಸಂಸಾರಿ ಜೀವವನ್ನು ನೋಡುವುದರಿಂದ ಅನುಭವ ಮಾಡುವ ದೃಷ್ಟಿ ಭೇದದಿಂದ ಭೇದ ಇದೆ. ಆ ಜೀವದಲ್ಲಿ ಯಾವದೇ ಭಾಗ ಶುದ್ಧ ಅಥವಾ ಯಾವದೇ ಭಾಗ ಅಶುದ್ಧ ಹೀಗೆ ಇರುವದಿಲ್ಲ. ಆದರೆ ಅಪೇಕ್ಷೆಯಿಂದ ಅಂದರೆ ದ್ರವ್ಯ ದೃಷ್ಟಿಯಿಂದ ನೋಡಲಾಗಿ ಶುದ್ಧರೂಪವಾಗಿ ಅಥವಾ ಪರ್ಯಾಯ ದೃಷ್ಟಿಯಿಂದ ನೋಡಲಾಗಿ ಅಶುದ್ಧವಾಗಿ ಕಂಡುಬರುತ್ತದೆ. ಆದ್ದರಿಂದ ಏನಾದರೂ ಮಾಡಬೇಕಾದರೆ ಕೇವಲ ನಮ್ಮ ದೃಷ್ಟಿಯನ್ನೇ ಬದಲಿಸಬೇಕು. ಉಳಿದದ್ದೇನೂ ಮಾಡಬೇಕಾಗಿಲ್ಲ.

**ಶ್ಲೋಕ ೩೬ :** ಯಾರು ಎರಡೂ ನಯಗಳ ಸಂಬಂಧದ ಉಲ್ಲಂಘನೆ ಮಾಡದೇ (ಅಂದರೆ ಯಾವದೇ ಮಾತು ಸಹ ಅಪೇಕ್ಷೆಯಿಂದ ತಿಳಿಯುವಂಥ ಅಂದರೆ ಏಕಾಂತದಿಂದ ಶುದ್ಧ ಅಥವಾ ಏಕಾಂತದಿಂದ ಅಶುದ್ಧ ಹೇಳುವಂಥ, ಮನ್ನಿಸುವಂಥ ಇಬ್ಬರೂ ಮಿಥ್ಯಾದೃಷ್ಟಿಗಳೇ ಇದ್ದಾರೆ. ಅಪೇಕ್ಷೆಯಿಂದ ಶುದ್ಧ ಮತ್ತು ಅಪೇಕ್ಷೆಯಿಂದ ಅಶುದ್ಧ ಮನ್ನಿಸುವಂಥ, ಹೇಳುವಂಥ ನಯಗಳ ಸಂಬಂಧವನ್ನು ಮೀರದೇ ಜೀವವು ತಿಳಿಯುವದು.) ಪರಮ ಜಿನರ ಚರಣಗಳಲ್ಲಿ ಅನುರಕ್ತರಾದ ಭ್ರಮರದ ಸಮಾನ ಇರುವರು. ಇಂತಹ ಯಾವ ಸತ್‌ಪುರುಷರಿದ್ದಾರೆ ಅವರು ಬೇಗನೇ ಸಮಯಸಾರವನ್ನು ಅವಶ್ಯವಾಗಿ ಪ್ರಾಪ್ತ ಮಾಡುತ್ತಾರೆ. ಪೃಥ್ವಿಯ ಮೇಲೆ ಮತದ ಕಥನದಿಂದ ಸಜ್ಜನರಿಗೆ ಏನು ಕೆಲಸವಿದೆ ? ಸಮಯಸಾರವನ್ನು ಏಕಾಂತದಿಂದ ಶುದ್ಧವೆಂದೂ ಅಥವಾ ಅಶುದ್ಧವೆಂದೂ ತಿಳಿಯುತ್ತಾರೆ. ಅದು ಜೈನೇತರ ದರ್ಶನವಾಗಿದೆ. ಅಂದರೆ ಮಿಥ್ಯಾದರ್ಶನವೇ ಇದೆ.

ಇನ್ನು ಮುಂದೆ ನಾವು ಧ್ಯಾನದ ಕುರಿತು ಸಂಕ್ಷಿಪ್ತವಾಗಿ ವಿವರಿಸುತ್ತೇವೆ.

★★★

# ೨೮. ಧ್ಯಾನದ ವಿಷಯ

ಈಗ ನಾವು ಸ್ವಲ್ಪ ಧ್ಯಾನದ ವಿಷಯವನ್ನು ತಿಳಿಸಿ ಮುಂದುವರಿಯುತ್ತೇವೆ. ಯಾವದೇ ವಸ್ತು, ವ್ಯಕ್ತಿ, ಪರಿಸ್ಥಿತಿ ಮುಂತಾದವುಗಳ ಮೇಲೆ ಮನಸ್ಸಿನ ಏಕಾಗ್ರತಾಪೂರ್ವಕವಾಗಿ ಮಾಡುವ ಚಿಂತನೆಯನ್ನೇ ಧ್ಯಾನವೆಂದು ಹೇಳುತ್ತಾರೆ. ಸಮ್ಯಗ್ದರ್ಶನದಲ್ಲಿ ಮನಸ್ಸಿನದು ಬಹಳ ಮಹತ್ವವಿದೆ. ಹೇಗೆಂದರೆ ಆಚಾರ್ಯ ಪೂಜ್ಯ ಪಾದಕೃತ ಸಮಾಧಿ ತಂತ್ರ ಶ್ಲೋಕ ೩೫ರಲ್ಲಿ ಹೇಳಿದ್ದಾರೆ. ಏನಂದರೆ ಯಾರ ಮನಸ್ಸು ರಾಗ ದ್ವೇಷಾದಿ ತರಂಗಗಳಿಂದ ಚಂಚಲವಾಗುವದಿಲ್ಲ. ಅವನು ಆತ್ಮನ ಯಥಾರ್ಥ ಸ್ವರೂಪವನ್ನು ತಿಳಿಯುತ್ತಾನೆ. ಅನುಭವ ಮಾಡುತ್ತಾನೆ. ರಾಗ ದ್ವೇಷಾದಿಗಳಿಂದ ಆಕುಲಿತ ಮನಸ್ಸುಳ್ಳ ಮನುಷ್ಯನು ಆತ್ಮತತ್ವವನ್ನು ನೋಡಲಾರನು, ತಿಳಿಯಲಾರನು. ಅಂದರೆ ಸಮ್ಯಗ್ದರ್ಶನದ ವಿಷಯವು ಮನಸ್ಸಿನಿಂದಲೇ ಚಿಂತನವಾಗುತ್ತದೆ ಮತ್ತು ಅತೀಂದ್ರಿಯ ಸ್ವಾನುಭೂತಿಯ ಕಾಲದಲ್ಲಿಯೂ ಸಹ ಆ ಭಾವಮನವೇ ಅತೀಂದ್ರಿಯ ಜ್ಞಾನರೂಪವಾಗಿ ಪರಿಣಮಿಸುತ್ತದೆ.

ಆದ್ದರಿಂದ ಮನಸ್ಸು ಮನಸ್ಸು ಯಾವ ವಿಷಯದ ಮೇಲೆ ಚಿಂತನ ಮಾಡುತ್ತದೆ ಅಥವಾ ಮನಸ್ಸು ಯಾವ ವಿಷಯಗಳಲ್ಲಿ ಏಕಾಗ್ರತೆ ಮಾಡುತ್ತದೆ. ಅದರವೇ ಆಧಾರದ ಮೇಲೆ ಬಂಧ ಮತ್ತು ಮೋಕ್ಷವಾಗುತ್ತದೆ. ಹೇಗೆಂದರೆ ಪರಮಾತ್ಮ ಪ್ರಕಾಶ ಛಂದ ೨೭೧ರಲ್ಲಿ ಹೇಳಿದ್ದಾರೆ. ಏನಂದರೆ ಐದು ಇಂದ್ರಿಯಗಳ ಸ್ವಾಮಿಯಾದ ಮನಸ್ಸನ್ನು ನೀನು ವಶದಲ್ಲಿ ಇಟ್ಟುಕೊ. ಆ ಮನಸ್ಸು ವಶವಾಗುವದರಿಂದ ಆ ಐದು ಇಂದ್ರಿಯಗಳು ವಶದಲ್ಲಿ ಬಂದುಬಿಡುತ್ತವೆ. ಹೇಗೆಂದರೆ ಮರದ ಬೇರು ನಾಶವಾದ ಬಳಿಕ ಎಲೆಗಳು ನಿಯಮದಿಂದ ಒಣಗುತ್ತವೆ. ಅಂದರೆ ಮನಸ್ಸೇ ಬಂಧದ ಕಾರಣವಿದೆ ಮತ್ತು ಮನಸ್ಸೇ ಮುಕ್ತಿಯ ಕಾರಣವಿದೆ.

ಈ ಮಾತನ್ನು ಏಕಾಂತದಿಂದ ತಿಳಿಯಬೇಡ. ಅಪೇಕ್ಷೆಯಿಂದ ಹೇಳುವದರಲ್ಲಿ ಬರುತ್ತದೆ. ಮನಸ್ಸೇ ಸಮ್ಯಗ್ದರ್ಶನದ ನಿಮಿತ್ತ ಕಾರಣವಿದೆ ಮತ್ತು ಬಂಧದ ನಿಮಿತ್ತ ಕಾರಣವೂ ಇದೆ. ಈ ಅಪೇಕ್ಷೆಯಿಂದ ವಿವೇಕಪೂರ್ವಕ ಈ ಮಾತನ್ನು ಹೇಳುವಲ್ಲಿ ಬಂದಿರುತ್ತದೆ. ಹೇಗೆಂದರೆ ಪರಮಾತ್ಮ ಪ್ರಕಾಶ ಮೋಕ್ಷಾಧಿಕಾರ ಛಂದ ೧೫೭ರಲ್ಲಿ ಹೇಳಿದ್ದಾರೆ. ಏನಂದರೆ ಯಾರು ಮನಸ್ಸನ್ನು ಬೇಗನೇ ವಶದಲ್ಲಿಟ್ಟುಕೊಂಡು ತನ್ನ ಆತ್ಮನನ್ನು ಪರಮಾತ್ಮನಲ್ಲಿ ಒಂದಾಗಿಸಿಲ್ಲ. (ಅಂದರೆ ಸ್ವಾತ್ಮಾನುಭೂತಿ ಮಾಡಿಲ್ಲ.) ಹೇ ಶಿಷ್ಯ ಯಾರಿಗೆ ಇಂಥ ಶಕ್ತಿಯಿಲ್ಲ, ಅವರು ಯೋಗದಿಂದ ಏನು ಮಾಡಬಹುದಾಗಿದೆ. (ಅರ್ಥಾತ್ ಇಂಥ ಜೀವವು ಆಧ್ಯಾತ್ಮಯೋಗದಿಂದ ಸ್ವಾತ್ಮಾನುಭೂತಿರೂಪ ಲಾಭ ತೆಗೆದುಕೊಳ್ಳುವದಿಲ್ಲ.) ಈ ಪ್ರಕಾರ ಮೋಕ್ಷ ಮಾರ್ಗದಲ್ಲಿ ಮನಸ್ಸಿನ ಅತ್ಯಂತ ಮಹತ್ವ ಇರುವದರಿಂದ ಬಹಳ ಗ್ರಂಥಗಳಲ್ಲಿ, ಧ್ಯಾನದ ವಿಷಯದಲ್ಲಿ ಬಹಳ ಹೆಚ್ಚು ಹೇಳಲಾಗಿದೆ. ಆದರೆ ಇಲ್ಲಿ ಅದರ ಕುರಿತು ಕೇವಲ ಸ್ವಲ್ಪ ಉಲ್ಲೇಖ ಮಾಡಿ ನಾವು ಮುಂದುವರಿಯುತ್ತೇವೆ.

ಧ್ಯಾನವು ಶುಭ, ಅಶುಭ ಮತ್ತು ಶುದ್ಧರೂಪ ಎಂದು ಮೂರು ಪ್ರಕಾರದಿಂದ ಆಗುತ್ತದೆ. ಧ್ಯಾನದಲ್ಲಿ ಆರ್ತಧ್ಯಾನ, ರೌದ್ರಧ್ಯಾನ, ಧರ್ಮಧ್ಯಾನ ಮತ್ತು ಶುಕ್ಲಧ್ಯಾನ ಎಂದು ನಾಲ್ಕು ಪ್ರಕಾರ ಇರುತ್ತವೆ. ಈ ನಾಲ್ಕು ಪ್ರಕಾರಗಳು ಸಹ ಅಂತರ ಪ್ರಕಾರ ಇರುತ್ತವೆ. ಮಿಥ್ಯಾತ್ವಿ ಜೀವಗಳಿಗೆ ಆರ್ತಧ್ಯಾನ ಮತ್ತು ರೌದ್ರಧ್ಯಾನ ಎಂಬ ಎರಡು ಅಶುಭ ಧ್ಯಾನಗಳು ಸಹಜವಾಗಿಯೇ ಆಗುತ್ತವೆ. ಏಕೆಂದರೆ ಈ ಧ್ಯಾನಗಳ ಸಂಸ್ಕಾರವು ಅನಾದಿಯಿಂದ ಇದೆ. ಆದರೂ ಸಹ ಅವನು ಪ್ರಯತ್ನಪೂರ್ವಕವಾಗಿ ಮನಸ್ಸನ್ನು ಅಶುಭದಲ್ಲಿ ಹೋಗುವದರಿಂದ ತಡೆಯಬಹುದಾಗಿದೆ. ಮನಸ್ಸು ಅಶುಭದಲ್ಲಿ ಹೋಗುವದನ್ನು ತಡೆಯುವಂಥ ವಿಧಿಗಳು ಇರುತ್ತವೆ. ಹೇಗೆಂದರೆ ಆತ್ಮ ಲಕ್ಷ್ಯದಿಂದ ಶಾಸ್ತ್ರಗಳ ಅಭ್ಯಾಸ, ಆತ್ಮಸ್ವರೂಪದ ಚಿಂತನೆ, ಆರು ದ್ರವ್ಯಗಳ ಮತ್ತು ಒಂಬತ್ತು ತತ್ವಗಳ ಚಿಂತನ, ಲೋಕದ ಸ್ವರೂಪ ಚಿಂತನ, ಭಗವಾನರ ಆಜ್ಞೆಯ ಚಿಂತನ, ಕರ್ಮವಿಪಾಕದ ಚಿಂತನ, ಕರ್ಮದ ವಿಚಿತ್ರತೆಯ ಚಿಂತನ ಮುಂತಾದವುಗಳು ಆಗಿವೆ. ಇಂಥ ಮಿಥ್ಯಾತ್ವ ಜೀವಗಳ ಧ್ಯಾನವು ಸಹ ಶುಭರೂಪ ಧರ್ಮಧ್ಯಾನ ಎಂದು ಹೇಳುತ್ತಾರೆ. ಶುದ್ಧರೂಪ ಧರ್ಮಧ್ಯಾನವಲ್ಲ. ಆದ್ದರಿಂದ ಅದನ್ನು ಅಪೂರ್ವ ನಿರ್ಜರೆಯ ಕಾರಣವೆಂದು ಮನ್ನಿಸಿಲ್ಲ. ಏಕೆಂದರೆ ಅಪೂರ್ವ ನಿರ್ಜರೆಯ ಸಲುವಾಗಿ ಆ ಧ್ಯಾನವು ಸಮ್ಯಕ್‌ದರ್ಶನ ಸಹಿತವಾಗುವದು ಅವಶ್ಯಕವಿದೆ. ಅಂದರೆ ಶುದ್ಧರೂಪ ಧರ್ಮಧ್ಯಾನವಾಗುವದು ಅವಶ್ಯಕವಿದೆ. ಸಮ್ಯಗ್ದೃಷ್ಟಿಗೆ ಇದರ ನಂತರ ಶುದ್ಧಾತ್ಮನ ಧ್ಯಾನ ಮುಖ್ಯವಾಗಿರುತ್ತದೆ. ಅದರಿಂದ ಗುಣಶ್ರೇಣಿ ನಿರ್ಜರೆಯ ಮೂಲಕ ಗುಣಸ್ಥಾನವನ್ನು ಆರೋಹಣಿ ಮಾಡುತ್ತ ಮಾಡುತ್ತ ಮುಂದೆ ಶುಕ್ಲಧ್ಯಾನರೂಪಿ ಅಗ್ನಿಯಿಂದ ಎಲ್ಲ ಘಾತಿಕರ್ಮಗಳನ್ನು ನಾಶ ಮಾಡಿ ಕೇವಲಜ್ಞಾನ – ಕೇವಲ ದರ್ಶನ ಪ್ರಾಪ್ತ ಮಾಡುತ್ತಾನೆ ಮತ್ತು ಕ್ರಮದಿಂದ ಸಿದ್ಧತ್ವವನ್ನು ಪಡೆಯುತ್ತಾನೆ.

ಧರ್ಮಧ್ಯಾನದ ಅಂತರ ಪ್ರಕಾರ ರೂಪ ಸಮಸ್ತ ಧ್ಯಾನದ ಪ್ರಕಾರದಲ್ಲಿ ಆತ್ಮನೇ ಕೇಂದ್ರದಲ್ಲಿ ಇದ್ದಾನೆ. ಅದರಿಂದ ಯಾರಾದರೂ ಅದನ್ನೇ ಸಮ್ಯಕ್‌ಧ್ಯಾನವೆಂದು ಹೇಳಲಾಗುತ್ತದೆ. ಏನಂದರೆ ಅದರಲ್ಲಿ ಆತ್ಮನೇ ಕೇಂದ್ರದಲ್ಲಿರಲಿ ಮತ್ತು ಆತ್ಮಪ್ರಾಪ್ತಿಯೇ ಅವನ ಲಕ್ಷ್ಯವಿರಲಿ ಹಲವಾರು ವ್ಯಕ್ತಿಗಳು ಹೀಗೆ ಮನ್ನಿಸುತ್ತಾರೆ ಹೇಗೆಂದರೆ ಆತ್ಮಜ್ಞಾನ ಅಂದರೆ ಸಮ್ಯಗ್ದರ್ಶನದ ಹೊರತು ಆಗುವದೇ ಇಲ್ಲ. ವಾಸ್ತವದಲ್ಲಿ ಸಮ್ಯಗ್ದರ್ಶನವು ಭೇದಜ್ಞಾನದ ಹೊರತು ಆಗುವದೇ ಇಲ್ಲ. ಧ್ಯಾನದ ಹೊರತು ಆಗುತ್ತದೆ. ಆದ್ದರಿಂದ ಸಮ್ಯಗ್ದರ್ಶನದ ಸಲುವಾಗಿ ಧ್ಯಾನದ ಅವಶ್ಯಕತೆಯಿಲ್ಲ. ಆದರೆ ಶಾಸ್ತ್ರಗಳಿಂದ ಸರಿಯಾಗಿ ತಿಳಿದುಕೊಂಡು ನಿರ್ಣಯ ಮಾಡಿದ ತತ್ವಜ್ಞಾನ ಮತ್ತು ಸಮ್ಯಗ್ದರ್ಶನದ ವಿಷಯದ ಜ್ಞಾನ ಹಾಗೂ ಆ ಜ್ಞಾನವು ಆದಬಳಿಕ ಯಥಾರ್ಥ ಭೇದಜ್ಞಾನ ಆಗುವದರಿಂದಲೇ ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮನಲ್ಲಿ 'ನನ್ನತನ' ಆಗುವದರಿಂದಲೇ ಸ್ವಾತ್ಮಾನುಭೂತಿ ಪೂರ್ವಕ ಸಮ್ಯಗ್ದರ್ಶನವು ಪ್ರಕಟವಾಗುತ್ತದೆ. ಆದ್ದರಿಂದ ಆಗ್ರಹವು ಧ್ಯಾನದ್ದು ಅಲ್ಲ, ಆದರೆ ಯಥಾರ್ಥ

ತತ್ವನಿರ್ಣಯದ ಮತ್ತು ಯೋಗ್ಯತೆಯನ್ನು ಇಡುವದು ಅವಶ್ಯಕವಿದೆ. ಅದುವೇ ಮಾಡಲು ಯೋಗ್ಯವಿದೆ.

ಮೋಕ್ಷ ಪ್ರಾಭೃತದಲ್ಲಿಯೂ ಸಹ ಧ್ಯಾನದ ಕುರಿತು ಹೇಳಿದ್ದಾರೆ. ಏನಂದರೆ – **ಗಾಥೆ ೨೦ :** ಯೋಗಿ, ಧ್ಯಾನಿ, ಮುನಿ ಜಿನವರ ಭಗವಾನರ ಮತದಿಂದ ಶುದ್ಧಾತ್ಮನನ್ನು ಧ್ಯಾನದಲ್ಲಿ ಧ್ಯಾನಿಸುತ್ತಾರೆ. (ಅರ್ಥಾತ್ ಕೇವಲ ಒಬ್ಬ ಶುದ್ಧಾತ್ಮನದೇ ಧ್ಯಾನ ಮಾಡಲು ಯೋಗ್ಯವಿದೆ. ಅದುವೇ ಉತ್ತಮವಿದೆ ಮತ್ತು ಅದರ ಧ್ಯಾನದಿಂದಲೇ ಧ್ಯಾನ ಮಾಡುವವನಿಗೆ ಯೋಗಿ ಎಂದು ಕರೆಯುತ್ತಾರೆ.) ಆದ್ದರಿಂದ ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ. ಅದರಿಂದೇನು ಸ್ವರ್ಗಲೋಕ ಪ್ರಾಪ್ತವಾಗುವದಿಲ್ಲವೇ ? ಅವಶ್ಯವಾಗಿ ಪ್ರಾಪ್ತವಾಗುತ್ತದೆ.

ಅನೇಕ ಜನರು ಸ್ವರ್ಗದ ಪ್ರಾಪ್ತಿಯ ಸಲುವಾಗಿ ಅನೇಕ ಪ್ರಕಾರದ ಅನೇಕ ಉಪಾಯ ಮಾಡುವದನ್ನು ನೋಡಲಾಗುತ್ತದೆ. ಆದರೆ ಆ ಉಪಾಯದಿಂದ ಅಕಸ್ಮಾತ್ ಕ್ಷಣಿಕ ಸ್ವರ್ಗ ಪ್ರಾಪ್ತವಾಗಲೂಬಹುದು ಅಥವಾ ಆಗಲಿಕ್ಕಿಲ್ಲ. ಆದರೆ ಪರಂಪರೆಯಲ್ಲಿ ಅದರಿಂದ ಅನಂತ ಸಂಸಾರವೇ ದೊರೆಯುತ್ತದೆ. ಯಾವಾಗ ಎಂದರೆ ಶುದ್ಧಾತ್ಮನ ಅನುಭವ ಮತ್ತು ಧ್ಯಾನದಿಂದ ಮುಕ್ತಿ ದೊರೆಯುತ್ತದೆ ಮತ್ತು ಮುಕ್ತಿ ದೊರೆಯದಿದ್ದರೆ ಅಲ್ಲಿಯ ವರೆಗೆ ಸ್ವರ್ಗ ಮತ್ತು ಸ್ವರ್ಗದಂತಹದೇ ಸುಖ ದೊರೆಯುತ್ತದೆ. ಆದ್ದರಿಂದ ಎಲ್ಲರೂ ಅದರದೇ ಧ್ಯಾನ ಮಾಡಬೇಕು. ಅದುವೇ ಮುಕ್ತಿಯ ಮಾರ್ಗವಿದೆ ಮತ್ತು ಆ ಮಾರ್ಗದಲ್ಲಿ ಸ್ವರ್ಗವಂತೂ ಸಹಜವಾಗಿ ದೊರಕುತ್ತದೆ. ಅದರ ಯಾಚನೆ ಮಾಡುವ ಅವಶ್ಯಕತೆ ಇಲ್ಲ ಆಗುತ್ತದೆಂದು ಹೀಗೆಯೇ ಹೇಳಿದ್ದಾರೆ.

ಬೇರೆ ರೀತಿಯ ಧ್ಯಾನಗಳಿಂದ ಮನಸ್ಸಿಗೆ ಶಾಂತಿ, ನೆಮ್ಮದಿ ದೊರಕುವದು ಸಂಭವವಿಲ್ಲ. ಇವೆಲ್ಲವೂ ಆರ್ತಧ್ಯಾನ ಹಾಗೂ ರೌದ್ರಧ್ಯಾನದಲ್ಲಿಯೇ ಬರುತ್ತವೆ. ಧರ್ಮಧ್ಯಾನದ ಅಂತರ ಪ್ರಕಾರಗಳಲ್ಲಿ ಆತ್ಮನೇ ಕೇಂದ್ರದಲ್ಲಿರುವದರಿಂದಲೇ ಅದನ್ನು ಸಮ್ಯಕ್‌ಧ್ಯಾನವೆಂದು ಹೇಳಲಾಗುತ್ತದೆ.

ಮನಸ್ಸಿನ ಶೋಧ ಮಾಡುವ ಸಲುವಾಗಿ ಸ್ವಂತಕ್ಕೆ ಏನು ರುಚಿಸುತ್ತದೆ ? ಇದನ್ನು ಶೋಧ ಮಾಡುವದು ಇದುವೇ ಆತ್ಮಪ್ರಾಪ್ತಿಯ ಥರ್ಮಾಮೀಟರ ಇದೆ. ಈ ಪ್ರಶ್ನೆಯ ಉತ್ತರದ ಮೇಲೆ ಚಿಂತನೆ ಮಾಡಬೇಕು. ಎಲ್ಲಿಯವರೆಗೆ ಉತ್ತರದಲ್ಲಿ ಸ್ವಲ್ಪ ಸಂಸಾರದ ಇಚ್ಛೆ / ಆಕಾಂಕ್ಷೆ ಇದ್ದರೆ ಅಲ್ಲಿಯ ತನಕ ತಮ್ಮ ಗತಿಯು ಸಂಸಾರದ ಕಡೆಗೆ ಇದೆ ಎಂದು ತಿಳಿಯಬೇಕು. ಯಾವಾಗ ಉತ್ತರ ಕೇವಲ ಆತ್ಮಪ್ರಾಪ್ತಿಯದೇ ಇದ್ದರೆ ತಮ್ಮ ಸಂಸಾರದ ಕೊನೆಯು ಬಹಳ ಸಮೀಪ ಬಂದಿದೆ ಎಂದು ತಿಳಿಯಬೇಕು. ಆದ್ದರಿಂದ ಅದರ ಸಲುವಾಗಿ ಪುರುಷಾರ್ಥ ಹೆಚ್ಚಿಸಬೇಕು.

ಮುಂದೆ ನಾವು ಸಾಧಕನಿಗೆ ಮೋಕ್ಷಮಾರ್ಗದ ಸಾಧನೆಯ ಸಲುವಾಗಿ ಆವಶ್ಯಕವಾದ ಮಾತುಗಳನ್ನು ಹೇಳುತ್ತೇವೆ.

★★★

# ೨೯. ಸಾಧಕನಿಗೆ ಸಲಹೆಗಳು

ಸಾಧಕನು ಮೊಟ್ಟಮೊದಲು ತನ್ನ ಲಕ್ಷ್ಯವನ್ನು ಜಗತ್ತಿನಿಂದ ದೂರಗೊಳಿಸಿ ತನ್ನ ಆತ್ಮನ ಕಡೆಗೆ ಹೊರಳಿ 'ನಾನು ಮತ್ತು ಕರ್ಮ' ಇಷ್ಟನ್ನು ಅವಶ್ಯವಾಗಿ ತಿಳಿದುಕೊಳ್ಳುವದು. ಅವಶ್ಯಕವಿದೆ. ಏಕೆಂದರೆ ಅನಾದಿಯಿಂದ ನನ್ನ ಯಾವ ಪರಿಭ್ರಮಣ ನಡೆದು ಬಂದಿದೆ, ಅದು ಕರ್ಮಗಳ ಕಾರಣವೇ ಇರುತ್ತದೆ. ಆ ಕರ್ಮಗಳು ಕೇವಲ ಪುದ್ಗಲರೂಪ ಇಲ್ಲ, ಆ ಕರ್ಮಗಳು ಅರ್ಥಾತ್ ನನ್ನವೇ ಪೂರ್ವದಲ್ಲಿ ಮಾಡಿದ ಭಾವಗಳಿರುತ್ತವೆ. ಏನಂದರೆ ಯಾರ ನಿಮಿತ್ತದಿಂದ ಈ ಪುದ್ಗಲ ಕರ್ಮರೂಪವಾಗಿ ಪರಿಣಮಿತವಾಗಿವೆ ಅದರಿಂದ ತಿಳಿದುಕೊಳ್ಳಬೇಕಾದುದು ಏನಂದರೆ ತನ್ನನ್ನು ಒಂದು ವೇಳೆ ಯಾವನೋ ಎಲ್ಲಕ್ಕಿಂತ ಹೆಚ್ಚು ದುಃಖಿಯನ್ನಾಗಿ ಮಾಡಿರುವನೋ ಅವನು ಕೇವಲ 'ನಾನೇ ಇದ್ದೇನೆ' ಅಂದರೆ ಅದು ಕೇವಲ ಪೂರ್ವದಲ್ಲಿ ಮಾಡಿದ ನನ್ನದೇ ಭಾವಗಳಿವೆ. ಏನಂದರೆ ಯಾರ ನಿಮಿತ್ತದಿಂದ ಪುದ್ಗಲ ಕರ್ಮರೂಪವಾದ ಮತ್ತು ಆ ಪುದ್ಗಲರೂಪ ಕರ್ಮಗಳ ಉದಯವಾಗಿರುವದರಿಂದಲೇ ನಾನು ಅವುಗಳ ನಿಮಿತ್ತದಿಂದ ಪರಿಣಮಿಸಿ ದುಃಖಿಯಾಗಿದ್ದೇನೆ.

ಒಂದು ವೇಳೆ ವ್ಯವಸ್ಥೆಯು ಹೀಗೆಯೇ ಇದ್ದರೆ ನಾನು ಹೀಗೇಕೆ ವಿಚಾರ ಮಾಡಬಹುದು ? ಹೇಗೆಂದರೆ ಯಾವದೇ ಬೇರೆ ವ್ಯಕ್ತಿಯು ನನಗೆ ದುಃಖಿಯನ್ನಾಗಿಸಿದ್ದಾನೆ ಅಥವಾ ನನ್ನದು ಅಹಿತ ಮಾಡಿದ್ದಾನೆ. ಹೀಗೆ ವಿಚಾರ ಮಾಡುವದರಿಂದಲೇ ಆ ವ್ಯಕ್ತಿಯ ಕುರಿತು ನಮ್ಮಲ್ಲಿ ಕಷಾಯ ಏಳುತ್ತದೆ. ಒಂದು ಹೊಸ ಕರ್ಮ ಬಂಧಿಸುತ್ತದೆ. ಏನಂದರೆ ಯಾವುದರ ಉದಯದ ಸಮಯ ಮತ್ತೆ ಇದೇ ಪ್ರಕಾರ ಹೊಸ ಕರ್ಮ ಬಂಧಿಸುವ ಸಂಭವವು ತಯಾರಾಗಿ ನಿಂತಿರುತ್ತದೆ. ಇಂತಹ ಅನುಬಂಧಕ್ಕೇನೇ ಅನಂತಾನುಬಂಧಿ ಕಷಾಯ ಎಂದು ಹೇಳಲಾಗುತ್ತದೆ.

ಬೇರೆಯವರ ದೋಷಗಳನ್ನು ನೋಡುವದರಿಂದ ಆರ್ತಧ್ಯಾನ ಮತ್ತು ರೌದ್ರಧ್ಯಾನಗಳು ಆಗುತ್ತವೆ. ಅದು ಆಗಬಾರದೆಂದರೆ ಅದರ ಸಲುವಾಗಿ ಸಾಧಕ ಜೀವನು ದುಃಖದ ಸಮಯದಲ್ಲಿ ಪೂರ್ವದಲ್ಲಿ ಹೇಳಿದಂತೆ "ಧನ್ಯವಾದ ! ಸ್ವಾಗತಮ್ ! ದ ಅಂತರ್ಗತ ಹೀಗೆ ವಿಚಾರಿಸಬೇಕು. ಹೇಗೆಂದರೆ ಅಹೋ ! ನಾನು ಇಂಥ ದುಷ್ಟಕಾರ್ಯವನ್ನು ಪೂರ್ವದಲ್ಲಿ ಮಾಡಿದ್ದೆನು. ಅದರ ಸಲುವಾಗಿ ನನ್ನ ಮಿಚ್ಛಾಮಿ ದುಕ್ಕಡಂ (ಇದು ಪ್ರತಿಕ್ರಮಣವಿದೆ) ಅದರ ಸಲುವಾಗಿ ನಾನು ಪಶ್ಚಾತ್ತಾಪ ಪೂರ್ವಕ ನನ್ನ ಹಿಂದೆ ಮಾಡಿಕೊಳ್ಳುತ್ತೇನೆ ಮತ್ತು ಈಗ ನಾನು ಭವಿಷ್ಯದಲ್ಲಿ ಇಂಥ ಭಾವ ಎಂದೂ ಮಾಡುವದಿಲ್ಲ. ಹೀಗೆ ಪ್ರತಿಜ್ಞೆ ಮಾಡುತ್ತೇನೆ. (ಇದು ಪ್ರತ್ಯಾಖ್ಯಾನ ಇದೆ.) ಮತ್ತು ಯಾವ ವ್ಯಕ್ತಿಯು ನನಗೆ ನನ್ನ ಇಂಥ

ಭಾವನೆಗಳಿಂದ (ಕರ್ಮಗಳಿಂದ) ಬಿಡಿಸುವಲ್ಲಿ ನಿಮಿತ್ತವಾಗಿರುತ್ತಾನೆ. ಅವರು ನನ್ನ ಪರಮ ಉಪಕಾರಿ ಇದ್ದಾರೆ. ಆದ್ದರಿಂದ ಅವರು ಧನ್ಯವಾದಕ್ಕೆ ಪಾತ್ರರಿದ್ದಾರೆ. ಹೀಗೆ ವಿಚಾರ ಮಾಡುವದರಿಂದ ಆ ವ್ಯಕ್ತಿಯ ಕುರಿತು ಸಿಟ್ಟು ಬರುವದಿಲ್ಲ. ಕೆಟ್ಟ ಭಾವ ಬರುವದಿಲ್ಲ. ಬಂದರೆ ಅದು ಕೇವಲ ಕೃತಜ್ಞತಾಭಾವ ಇರುತ್ತದೆ ಮತ್ತು ನಾನು ಆರ್ತಧ್ಯಾನ ಮತ್ತು ರೌದ್ರಧ್ಯಾನದಿಂದ ಉಳಿದುಕೊಂಡು ಶುಭಭಾವರೂಪ ಧರ್ಮಧ್ಯಾನದಲ್ಲಿ ಸ್ಥಿರ ಇರುವದರಿಂದ ಒಂದಂತೂ ಆ ವ್ಯಕ್ತಿಯ ಜೊತೆಗೆ ಇರುವ ಸರಪಳಿಯು ಕಡಿದುಹೋಗುವದು ಅಂದರೆ ವೈರತ್ವ ಬಿಟ್ಟು ಹೋಗುವದು ಮತ್ತು ಹೊಸ ದುಃಖದಾಯಕ ಕರ್ಮಗಳ ಬಂಧವು ನಿಂತುಬಿಡುವುದು. ಎಲ್ಲರೂ ಕೇವಲ ಶುದ್ಧಾತ್ಮನನ್ನು ನೋಡಬೇಕೆಂಬ ಭಾವದಲ್ಲಿ ತತ್ವನಿರ್ಣಯ ಮತ್ತು ಸಮ್ಯಗ್ದರ್ಶನ ಪಡೆಯುವದನ್ನು ಮರೆಯಬಾರದು. ಆತ್ಮ ಲಕ್ಷ್ಯದಿಂದ ಶುಭಭಾವದಲ್ಲಿ ಇರಲಿಕ್ಕೆ ಹೇಳುತ್ತಾರೆ. ಆದರೆ ಅದರಲ್ಲಿ ಕೇವಲ ಆತ್ಮಪ್ರಾಪ್ತಿಯ ಲಕ್ಷ್ಯವೇ ಇರಬೇಕು. ವಿಪರೀತ ಶುಭಭಾವವು ಅಶುಭ ಭಾವದಂತೆಯೇ ಜೀವಕ್ಕೆ ಬಂಧಿಸುತ್ತದೆ ಮತ್ತು ಅನಂತ ಸಂಸಾರದಲ್ಲಿ ಅಲೆದಾಡಿಸುತ್ತದೆ. ಅನಂತ ದುಃಖಗಳಿಗೆ ಕಾರಣವೂ ಆಗುತ್ತದೆ.

ಯಾವದೇ ವಸ್ತುಗಳು ಅಥವಾ ಸಂಯೋಗಗಳು ಕರ್ಮದ ಅನುಸಾರ ತಮ್ಮಿಂದ ತಾವೇ ಬಂದು ದೊರಕುತ್ತವೆ. ಅವುಗಳ ಸಲುವಾಗಿ ಬಹಳ ಪ್ರಯತ್ನ ಮಾಡುವ ಅವಶ್ಯಕತೆ ಇಲ್ಲ. ಪ್ರಯತ್ನಪೂರ್ವಕವಾಗಿ ಹೆಚ್ಚು ಸಮಯ ಆತ್ಮ ಪ್ರಾಪ್ತಿಯ ಸಲುವಾಗಿ ವಿನಿಯೋಗಿಸಿರಿ. ಈ ಕಾರ್ಯದಲ್ಲಿ ಆಲಸ್ಯ / ತಿರಸ್ಕಾರ ಒಳ್ಳೆಯದಲ್ಲ. ಜೈನಸಿದ್ಧಾಂತವನ್ನು ಹೇಗಿದೆಯೋ ಹಾಗೆ ತಿಳಿದರೆ ಅತ್ಯಂತ ಆನಂದವಾಗುವದು. ಜೈನ ಸಿದ್ಧಾಂತದ ಅನುಸಾರ ಯಾವದೇ ಕಾರ್ಯ ಆಗುವ ಸಲುವಾಗಿ ಐದು ಸಮವಾಯಗಳು ಇವೆ. ಅವುಗಳಲ್ಲಿ ಆತ್ಮಸ್ವಭಾವದಲ್ಲಿ ಪುರುಷಾರ್ಥವು ಉಪಾದಾನ ಕಾರಣ ಆಗಿರುವದರಿಂದ ಅದನ್ನು ಮರೆಯದೇ ಕಾರ್ಯ ಪ್ರವೃತ್ತರಾಗಬೇಕು. ಆತ್ಮಪ್ರಾಪ್ತಿಯಾಗುವದು ಅತ್ಯಂತ ಕಠಿಣವಿದೆ. ಆದ್ದರಿಂದ ಮುಮುಕ್ಷು ಜೀವನಿಗೆ ಆತ್ಮಪ್ರಾಪ್ತಿ ಮಾಡುವದು ಮೊದಲ ಅವಶ್ಯಕ ಕಾರ್ಯವಾಗಿದೆ.

ಆತ್ಮಾನುಶಾಸನ ಗಾಥೆ ೭೮ರಲ್ಲಿ ಹೇಳಿದ್ದಾರೆ. ಏನಂದರೆ – 'ಹೇ ಜೀವ ! ಆತ್ಮಕಲ್ಯಾಣದ ಸಲುವಾಗಿ ಸ್ವಲ್ಪ ಪ್ರಯತ್ನ ಮಾಡು ! ಮಾಡು ! ಏಕೆ ದುಷ್ಟನಾಗಿ ಪ್ರಮಾದಿ ಆಗುತ್ತಿರುವಿ ? ಯಾವಾಗ ಮರಣವು ತನ್ನ ತೀವ್ರಗತಿಯಿಂದ ಬಂದು ತಲುಪುವದು ಗೊತ್ತಿಲ್ಲ. ಆಗ ಅದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಇದನ್ನು ನೀನು ನಿಶ್ಚಯವಾಗಿ ತಿಳಿ. ಯಾವಾಗ, ಎಲ್ಲಿಂದ ಆ ಯಮರಾಜನು ಬರುವನು ಎಂಬುದು ಯಾರಿಗೂ ಗೊತ್ತಿಲ್ಲ. ಆದ್ದರಿಂದ ಯಾವಾಗಲೂ ಆತ್ಮಕಲ್ಯಾಣದ ಸಲುವಾಗಿ ಧರ್ಮಪುರುಷಾರ್ಥವನ್ನು ಗೌರವಿಸಬೇಕು, ಮಾಡಬೇಕು.

ಆತ್ಮಾನುಶಾಸನ ಗಾಥೆ ೧೯೬ರಲ್ಲಿ ಹೇಳಿದ್ದಾರೆ. ಏನಂದರೆ ಮೂರ್ಖ ಜೀವರುಗಳು ಅನರ್ಥ ಕಾರ್ಯ ಮಾಡೇಮಾಡುತ್ತಾರೆ. ಒಂದು ವೇಳೆ ಮಾಡದಿದ್ದರೆ.

ಅದು ಆಶ್ಚರ್ಯವೇ ಸರಿ. ಪ್ರತಿದಿವಸ ಶರೀರ ರಕ್ಷಿಸುತ್ತಾರೆ. ಜೊತೆಗೆ ವಿಷಯಗಳನ್ನು ಸೇವಿಸುತ್ತಾರೆ. ಈ ಮೂರ್ಖರಿಗೆ ಸ್ವಲ್ಪವೂ ವಿವೇಕವಿಲ್ಲ. ವಿಷವನ್ನು ಸೇವಿಸಿ ಅಮರತ್ವವನ್ನು ಬಯಸುತ್ತಾರೆ. ಇವರಿಗೆ ಪಾಪದ ಭಯವೇ ಇಲ್ಲ. ಅದರ ಕುರಿತು ವಿಚಾರವನ್ನು ಮಾಡುವದಿಲ್ಲ. ಇಂಥ ಮೂರ್ಖರನ್ನು ನೋಡಿ ಕರುಣೆ ಬರುತ್ತದೆ

ರಾತ್ರಿಭೋಜನ ತ್ಯಾಗ ಮುಂತಾದ ವ್ರತಗಳನ್ನು ಅಥವಾ ಪ್ರತಿಮೆಗಳು ಸಮ್ಯಗ್ದರ್ಶನದ ನಂತರವೇ ಆಗುತ್ತವೆ. ಆದರೆ ಅದರ ಮೊದಲು ರಾತ್ರಿ ಭೋಜನ ಮಾಡುವದರಿಂದ ಯಾವ ದೋಷ ತಗಲುವದು ? ರಾತ್ರಿ ಭೋಜನದ ದೋಷ ಸಮ್ಯಗ್ದೃಷ್ಟಿಯ ಅಪೇಕ್ಷಾ ಮಿಥ್ಯಾದೃಷ್ಟಿಗೆ ಹೆಚ್ಚು ತಗಲುತ್ತದೆ. ಏಕೆಂದರೆ ಮಿಥ್ಯಾದೃಷ್ಟಿ ಅದನ್ನು ಆಸಕ್ತಿಯಿಂದ ಸೇವನೆ ಮಾಡುತ್ತಾನೆ. ಆಗ ಸಮ್ಯಗ್ದೃಷ್ಟಿಗೆ ಆವಶ್ಯಕವಿರದೇ ಅನಿವಾರ್ಯತೆಯಿಂದ ಹೀಗೆ ದೋಷ ಮಾಡುತ್ತಾನೆ. ಯಾವದೇ ಕಾಲದಲ್ಲಿ ಹೀಗೆ ದೋಷಗಳ ಸೇವನೆ ಮಾಡಿದರೆ ಭಯಭಾವದಿಂದ ಮತ್ತು ರೋಗದ ಔಷಧೀಯ ರೂಪದಲ್ಲಿ ಮಾಡುತ್ತಾನೆ. ಆನಂದದಿಂದಲ್ಲ. ಸಮ್ಯಗ್ದೃಷ್ಟಿ ಜೀವನೂ ಸಹಭೋಜನ ಮಾಡಬೇಕಾಗುತ್ತದೆ. ಅದೂ ಸಹ ಅನಿವಾರ್ಯತೆಯ ಪ್ರಸಂಗ ಬರುತ್ತದೆ. ರೋಗದಂತೆ ಅನಿಸುತ್ತದೆ. ಅದರಿಂದ ಬೇಗನೆ ಬಿಡುಗಡೆ ಬಯಸುತ್ತಾನೆ.

ಧರ್ಮಶಾಸ್ತ್ರಗಳಲ್ಲಿ ಪ್ರತಿಯೊಂದು ಮಾತು ಒಂದು ಅಪೇಕ್ಷೆಯಿಂದ ಹೇಳಲಾಗುತ್ತದೆ. ಆದ್ದರಿಂದ ವ್ರತ ಮತ್ತು ಪ್ರತಿಮೆಗಳು ಐದನೇ ಗುಣಸ್ಥಾನಗಳಲ್ಲಿ ಹೇಳಿದ್ದಾರೆ. ಅವುಗಳ ಅರ್ಥ ಹೀಗೆ ತಿಳಿಯಬಾರದು. ಏನಂದರೆ ಬೇರೆ ಯಾವ ಕೆಳಗಿನ ಭೂಮಿಕೆಯುಳ್ಳವರನ್ನು ಅಭ್ಯಾಸದ ಸಲುವಾಗಿ ಅಥವಾ ಪಾಪದಿಂದ ಉಳಿದುಕೊಳ್ಳುವ ಸಲುವಾಗಿ ಸ್ವೀಕರಿಸಲಾಗದು. ಬದಲಾಗಿ ಎಲ್ಲರಿಗೂ ಅವಶ್ಯವಾಗಿ ಗ್ರಹಣ ಮಾಡಲು ಯೋಗ್ಯವೇ ಇದೆ. ಏಕೆಂದರೆ ಯಾರಿಗೆ ದುಃಖ ಪ್ರಿಯ ಇಲ್ಲವೋ ಹಾಗೆಯೇ ಜೀವವು ದುಃಖದ ಕಾರಣ ರೂಪ ಪಾಪವನ್ನು ಯಾವ ಪ್ರಕಾರ ಆಚರಣ ಮಾಡಬಹುದಾಗಿದೆ. ಅಂದರೆ ಆಚರಣೆ ಮಾಡುವದೇ ಇಲ್ಲ.

ಸಮ್ಯಗ್ದರ್ಶನದ ಮೊದಲು ಅಣುವ್ರತಿ ಅಥವಾ ಮಹಾವ್ರತಿ ಆಗಿದ್ದರೆ ಅವನು ತನ್ನನ್ನು ಐದನೇ, ಆರನೇ ಅಥವಾ ಏಳನೇ ಗುಣಸ್ಥಾನದಲ್ಲಿ ಮನ್ನಿಸದೇ ಕೇವಲ ಆತ್ಮಾರ್ಥ (ಅಂದರೆ ಆತ್ಮನ ಪ್ರಾಪ್ತಿಯ ಸಲುವಾಗಿ) ಅಭ್ಯಾಸರೂಪ ಗ್ರಹಣ ಮಾಡಿದಂಥ ಅಣುವ್ರತಿ ಅಥವಾ ಮಹಾವ್ರತಿ ಎಂದು ತಿಳಿಯುವದು (ಮನ್ನಿಸುವದು) ಮತ್ತು ಜನರಿಗೂ ಸಹ ಹಾಗೆಯೇ ಹೇಳಬೇಕು. ಏಕೆಂದರೆ ಅದರಿಂದ ಜನರಿಗೆ ಮೋಸ ಮಾಡಿದ ದೋಷವೂ ಸಹ ಬರುವದಿಲ್ಲ.

ಆದ್ದರಿಂದ ಶಾಸ್ತ್ರದಲ್ಲಿಂದ ಯಾವದೇ ಪ್ರಕಾರದ ಜಿದ್ದು ಅಥವಾ ವಿಪರೀತ ಅಂದರೆ ಮೋಸಗೊಳಿಸುವ ಮಾತು ಸ್ವೀಕರಿಸಬಾರದು. ಆದರೆ ಅದನ್ನು ಯಥಾರ್ಥ ಅಪೇಕ್ಷೆಯಿಂದ ತಿಳಿಯುವದು. ಪ್ರತಿಯೊಬ್ಬ ಮುಮುಕ್ಷುವಿನ ಸಲುವಾಗಿ ಅತ್ಯಂತ ಅವಶ್ಯಕವಿದೆ. ಏಕೆಂದರೆ ಪ್ರತಿಯೊಂದು ಶಾಸ್ತ್ರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಏನಂದರೆ

ಕೆಳಗಿನ ಶ್ರೇಣಿಯಲ್ಲಿ ಹೋಗುವ ಸಲುವಾಗಿ ಅಂದರೆ ಮೊದಲು ಗುಣಸ್ಥಾನದವನು ವ್ರತಿ ಆದರೆ ಅವನಿಗೆ ವ್ರತ ಬಿಡಲು ಎಂದೂ ಹೇಳುವದಿಲ್ಲ. ಆದರೆ ಅವನಿಗೆ ಅನುಕೂಲ ಗುಣಸ್ಥಾನ ಪ್ರಾಪ್ತ ಮಾಡಿಕೊಳ್ಳುವ ಸಲುವಾಗಿ ಪ್ರೋತ್ಸಾಹನ ಮಾಡಲಾಗುವದು. ಅವನು ಬೇರೆ ಏನನ್ನಾದರೂ ಸ್ವೀಕರಿಸಿ ವ್ರತ ತ್ಯಾಗ ಮಾಡಬಾರದು. ಅದಂತೂ ಮಹಾಅನರ್ಥದ ಕಾರಣ ಇರುತ್ತದೆ. ಹೀಗೆ ಯಾವ ಆಚಾರ್ಯ ಭಗವಂತರು ಉಪದೇಶ ಕೊಡುವದೇ ಇಲ್ಲ. ಇದು ಕೇವಲ ವರ್ತಮಾನ ಕಾಲದ ಮಾನವರ ವಕ್ರತೆಯೇ ಆಗಿದೆ. ಇದೇ ಪ್ರಕಾರ ಅನಾದಿಯಿಂದ ನಾವು ಧರ್ಮವನ್ನು ವಿಪರೀತ ರೂಪದಿಂದ ಸ್ವೀಕರಿಸುತ್ತ ಬಂದಿದ್ದೇವೆ. ಅದರಿಂದಲೇ ನಾವು ಅನಾದಿಕಾಲದಿಂದ ಈ ಸಂಸಾರದಲ್ಲಿ ವ್ಯರ್ಥವಾಗಿ ಅಲೆದಾಡುತ್ತಿದ್ದೇವೆ.

ಈಗಲಾದರೂ ಸಾಕು ಮಾಡಿರಿ, ಸಾಕು ಮಾಡಿರಿ. ಇಂತಹ ವಿಪರೀತ ಪ್ರರೂಪಣೆಯನ್ನು ನಿಲ್ಲಿಸಿರಿ. ಪುರುಷಾರ್ಥ ಸಿದ್ಧಿ ಉಪಾಯ ಶ್ಲೋಕ ೫೦ ರಲ್ಲಿಯೂ ಸಹ ಹೇಳಿದ್ದಾರೆ. ಏನಂದರೆ –

ಪ್ರಶ್ನೆ ೧ : ಕೆಲವು ಸಾಧಕರ ಪ್ರಶ್ನೆಯಿದೆ. ಏನಂದರೆ ನಾವು ಬಹಳ ದಿನಗಳಿಂದ ತತ್ವಗಳ ಅಭ್ಯಾಸ ಮಾಡಿದ್ದೇವೆ, ತಿಳಿದಿದ್ದೇವೆ. ಆದರೂ ಸಹ ಆತ್ಮನ ಅನುಭವ ಏಕೆ ಆಗುವದಿಲ್ಲ. ಆದರೆ ಸಮ್ಯಗ್ದರ್ಶನ ಏಕೆ ಆಗಲೊಲ್ಲದು ?

ಉತ್ತರ : ಹೇಗೆ ಯೋಗ್ಯ ಕಾರಣದ ಹೊರತು ಯಾವದೇ ಕಾರ್ಯ ಆಗುವದಿಲ್ಲ. ಹಾಗೆಯೇ ವೈರಾಗ್ಯ ಬರಲಾರದೇ ಅಂದರೆ ಭವರೋಗ ರೂಪ ತೊಂದರೆಯ ಹೊರತು, ಸುಖದ ಆಕಾಂಕ್ಷೆಯನ್ನು ಬಿಡದ ಹೊರತು, ಯಾವದೇ ನಯದ ಪಕ್ಷ ಅಥವಾ ಸಾಂಪ್ರದಾಯಿಕ ಮಾನ್ಯತೆಯ ಆಗ್ರಹ ಬಿಡದ ಹೊರತು ಮತ್ತು ತತ್ವಗಳನ್ನು ವಿಪರೀತ ರೂಪದಿಂದ ಸ್ವೀಕರಿಸುವದನ್ನು ಬಿಡದ ಹೊರತು ಸ್ವಾನುಭೂತಿ ಅರ್ಥಾತ್ ಸಮ್ಯಗ್ದರ್ಶನ ಪ್ರಾಪ್ತವಾಗುವದು ಬಹಳ ಕಠಿಣವಿದೆ. ಆದ್ದರಿಂದ ಎಲ್ಲ ಸಾಧಕರಿಗೆ ನಮ್ಮ ನಿವೇದನೆ ಇದೆ. ಏನಂದರೆ – ತಾವು ಯೋಗ್ಯ ಕಾರಣ ಅಂದರೆ ವೈರಾಗ್ಯರೂಪ ಯೋಗ್ಯತೆಯನ್ನು ಪ್ರಕಟ ಮಾಡಿಕೊಳ್ಳಿರಿ ಮತ್ತು ಪಕ್ಷ ಆಗ್ರಹವನ್ನು ಬಿಟ್ಟು ತತ್ವದ ಯಥಾರ್ಥ ನಿರ್ಣಯ ಮಾಡಿದರೆ ಸಮ್ಯಗ್ದರ್ಶನ ರೂಪ ಕಾರ್ಯವು ಅವಶ್ಯವಾಗಿ ಆಗೇ ಆಗುವದು. ಹೀಗೆ ನಮ್ಮ ಅಭಿಪ್ರಾಯವಿದೆ.

ಪ್ರಶ್ನೆ ೨ : ಆತ್ಮನ ಅನುಭವದ ಕಾಲದಲ್ಲಿ ಏನು ಅನಿಸುವದು ?

ಉತ್ತರ : ಸ್ವಾತ್ಮಾನುಭೂತಿಯ ಕಾಲದಲ್ಲಿ ಶರೀರದಿಂದ ಬೇರೆಯಾದಂಥ ಸಿದ್ಧ ಸದೃಶ್ಯ ಆತ್ಮನ ಅನುಭವ ಆಗುತ್ತದೆ. ಅದರಲ್ಲಿ ಶರೀರದ ಯಾವದೇ ಪ್ರಕಾರದ ಅನುಭವ ಆಗುವದಿಲ್ಲ.

ಪ್ರಶ್ನೆ ೩ : ಬಹಳ ಸಾಧಕರು ಹೇಳುತ್ತಾರೆ. ಏನಂದರೆ ಅವರಿಗೆ ಪ್ರಕಾಶಮಯ ಆತ್ಮನ ಅನುಭವವಾಯಿತು ಅಥವಾ ಕೆಲವರು ಹೇಳುತ್ತಾರೆ. ಏನಂದರೆ ಅವರು

ಒಮ್ಮೆಲೆ ಹೂವಿನಂತೆ ಹಗುರಾದಂತೆ ಎನಿಸುವದು ಅಥವಾ ಕೆಲವರು ಹೇಳುತ್ತಾರೆ ರೋಮಾಂಚಿತರಾದೆವು. ಮುಂತಾಗಿ ಹೇಳುತ್ತಾರೆ. ಇವು ಸರಿಯೆ ?

ಉತ್ತರ : ಇಂತಹ ಸಾಧಕರಿಗೆ ನಾವು ಹೇಳುವದೇನೆಂದರೆ ಇಂತಹ ಭ್ರಮೆಗಳಿಂದ ನಿಮ್ಮನ್ನು ನೀವೇ ಮೋಸಗೊಳಿಸಿಕೊಳ್ಳುವದು ಯೋಗ್ಯವಲ್ಲ. ಏಕೆಂದರೆ ಸ್ವಾತ್ಮಾನುಭೂತಿಯ ಕಾಲದಲ್ಲಿ ಶರೀರದ ಯಾವದೇ ಪ್ರಕಾರದ ಅನುಭವ ಆಗುವದೇ ಇಲ್ಲ. ಕೇವಲ ಸಿದ್ಧ ಸದೃಶ್ಯ ಆತ್ಮನದೇ ಅನುಭವ ಆಗುತ್ತದೆ. ಅಂದರೆ ಆಂಶಿಕ ಸಿದ್ಧ ಸದೃಶ್ಯ ಆನಂದದ ಅನುಭವ ಆಗುತ್ತದೆ. ಅಂದರೆ ಆಂಶಿಕ ಸಿದ್ಧತ್ವದ್ದೇ ಅನುಭವ ಆಗುತ್ತದೆ ಮತ್ತು ನಂತರ ಆತ್ಮನ ಸಂದರ್ಭದಲ್ಲಿ ಯಾವದೇ ಪ್ರಶ್ನೆ ಇರುವದೇ ಇಲ್ಲ. ಇಷ್ಟು ಸ್ಪಷ್ಟ ಅನುಭವ ಆಗುತ್ತದೆ. ಅಂದರೆ ಸ್ವಾತ್ಮಾನುಭೂತಿಯ ನಂತರ ಶರೀರದಿಂದ ಭೇದಜ್ಞಾನವು ತಿಳಿದುಬರುತ್ತದೆ.

**ಪ್ರಶ್ನೆ ೪ : ಕೆಲವರ ಪ್ರಶ್ನೆ ಹೀಗಿದೆ. ಏನಂದರೆ ನಮ್ಮ ಗುರು ಯಾರು ಇದ್ದಾರೆ ?**

**ಉತ್ತರ :** ನಮ್ಮೆಲ್ಲರ ಗುರು ಭಗವಾನ ಮಹಾವೀರ ಸ್ವಾಮಿ ಇದ್ದಾರೆ. ಅವರ ದಿವ್ಯಧ್ವನಿಯು ನಮಗೆ ಶಾಸ್ತ್ರರೂಪದಿಂದ ಪ್ರಾಪ್ತವಾಗಿದೆ. ಅದರಿಂದ ನಮಗೆ ಸತ್ಯಧರ್ಮದ ಪ್ರಾಪ್ತಿಯಾಗಿದೆ. ಅಂದರೆ ಸಮ್ಯಗ್ದರ್ಶನ ಪ್ರಾಪ್ತವಾಗಿದೆ. ಅವರ ಹೊರತು ನಾವು ಬೇರೆ ಬಹಳಷ್ಟು ಜನರಿಂದ ಅಲ್ಪ ಸ್ವಲ್ಪ ಅವಶ್ಯವಾಗಿ ಕಲಿತಿದ್ದೇವೆ. ಅದೆಲ್ಲವೂ ಭಗವಾನ ಮಹಾವೀರ ಸ್ವಾಮಿಯದೇ ಕೊಡುಗೆ ಇದೆ. ಅವರ ಮೂಲಕ ಪ್ರಾಪ್ತವಾಗಿದೆ. ಆ ಎಲ್ಲರಿಗೂ ನಾವು ಅತ್ಯಂತ ಆಭಾರಿಯಾಗಿದ್ದೇವೆ.

ಪೂಜ್ಯ ಅಮೃತಚಂದ್ರ ಆಚಾರ್ಯಕೃತ ಪ್ರವಚನಸಾರದ ಟೀಕೆ ಶ್ಲೋಕ ೨೦೨ರ ಅನುಸಾರ ಸಮ್ಯಗ್ದರ್ಶನ ಪ್ರಾಪ್ತ ಮಾಡಿದ ಬಳಿಕ ಸಮ್ಯಗ್ದೃಷ್ಟಿ ಜೀವದ ವಿಕಾಸ ಕ್ರಮ ಹೀಗೆ ಆಗುತ್ತದೆ – "ಸಮ್ಯಗ್ದೃಷ್ಟಿ ಜೀವವು ತನ್ನ ಸ್ವರೂಪವನ್ನು ತಿಳಿಯುತ್ತಾನೆ. ಅವನಿಗೆ ಯಾವಾಗಿನಿಂದ ಸ್ವ-ಪರದ ವಿವೇಕರೂಪ ಭೇದವಿಜ್ಞಾನ ಪ್ರಕಟವಾಗಿತ್ತು. ಆವಾಗಿನಿಂದಲೇ ಅವನು ಎಲ್ಲ ವಿಭಾವ-ಭಾವಗಳನ್ನು ತ್ಯಾಗ ಮಾಡಿರುತ್ತಾನೆ ಮತ್ತು ಅಲ್ಲಿಂದಲೇ ಅವನು ಟಂಕೋತ್ಕೀರ್ಣ ತನ್ನ ಭಾವವನ್ನು ಸ್ವೀಕರಿಸಿರುತ್ತಾನೆ. ಆದ್ದರಿಂದ ಅವನಿಗೆ ತ್ಯಾಗ ಮಾಡುವದು ಏನೂ ಉಳಿದಿಲ್ಲ ಮತ್ತು ಸ್ವಲ್ಪವೂ ಗ್ರಹಣ ಮಾಡುವದೂ ಉಳಿದಿಲ್ಲ. ಸ್ವಭಾವ ದೃಷ್ಟಿಯ ಅಪೇಕ್ಷೆಯಿಂದ ಹೀಗೆ ಆದರೂ ಸಹ ಪರ್ಯಾಯದಲ್ಲಿ ಅವನು ಪೂರ್ವಬದ್ಧ ಕರ್ಮಗಳ ಉದಯದ ನಿಮಿತ್ತದಿಂದ ಅನೇಕ ಪ್ರಕಾರದ ವಿಭಾವ-ಭಾವಗಳಿಂದ ಪರಿಣಮಿಸುತ್ತಾನೆ. ಆ ವಿಭಾವ ಪರಿಣತಿಗಳು ಬಿಡುವದಾಗುವದಿಲ್ಲ. ಇದನ್ನು ನೋಡಿ ಅವನು ಆಕುಲ ವ್ಯಾಕುಲ ಸಹ ಆಗುವದಿಲ್ಲ ಹಾಗೂ ಸಮಸ್ತ ವಿಭಾವ ಪರಿಣತಿಯನ್ನು ದೂರ ಮಾಡುವ ಪುರುಷಾರ್ಥವನ್ನು ಮಾಡುತ್ತಲೇ ಇರುತ್ತಾನೆ. ಎಲ್ಲ ವಿಭಾವ ಪರಿಣತಿರಹಿತ ಸ್ವಭಾವದೃಷ್ಟಿಯ ಪುರುಷಾರ್ಥದಿಂದ ಗುಣಸ್ಥಾನಗಳ

ರೀತಿಯ ಸಾಮಾನ್ಯ ಕ್ರಮದ ಅನುಸಾರ ಅದನ್ನು ಮೊದಲೇ ಅಶುಭ ಪರಿಣತಿಯ ಹಾನಿ ಆಗುತ್ತದೆ ಮತ್ತು ನಂತರ ಸಾವಕಾಶವಾಗಿ ಶುಭ ಪರಿಣತಿಯು ಸಹ ಬಿಡುತ್ತಹೋಗುತ್ತದೆ. ಹೀಗಾಗುವದರಿಂದ ಆ ಶುಭರಾಗದ ಉದಯದ ಭೂಮಿಕೆಯಲ್ಲಿ ಗೃಹವಾಸ ಮತ್ತು ಕುಟುಂಬದ ತ್ಯಾಗಿಯಾಗಿ ವ್ಯವಹಾರ ರತ್ನತ್ರಯ ರೂಪ ಪಂಚಾಚಾರಗಳನ್ನು ಸ್ವೀಕರಿಸುತ್ತಾನೆ. ಆದಾಗ್ಯೂ ಜ್ಞಾನಭಾವದಿಂದ ಅವನು ಸಮಸ್ತ ಶುಭ-ಅಶುಭ ಕ್ರಿಯೆಗಳ ತ್ಯಾಗಿ ಆಗುತ್ತಾನೆ. ಪರ್ಯಾಯದಲ್ಲಿ ಶುಭರಾಗ ಬಿಡುವದರಿಂದ ಅವನು ಮೊದಲು ಹೇಳಿದ ಪ್ರಕಾರದಿಂದ ಪಂಚಾಚಾರಗಳನ್ನು ಸ್ವೀಕರಿಸುತ್ತಾನೆ.

ಜೈನ ಸಿದ್ಧಾಂತದಲ್ಲಿ ಎಲ್ಲ ಜೀವಗಳು ಸ್ವಭಾವದಿಂದ ಸಿದ್ಧಸಮಾನವೇ ಇವೆ ಎಂದು ಹೇಳಲಾಗಿದೆ. ಎಲ್ಲ ಜೀವಗಳನ್ನು ತಮ್ಮ ಸಮಾನಪೇ ನೋಡುತ್ತ ನಡೆದಾಗ ವೈರ ವಿರೋಧಕ್ಕೆ ಅವಕಾಶ ಎಲ್ಲಿಂದ ಆಗುವದು ? ಅಂದರೆ ವಿಶ್ವಮೈತ್ರಿಯ ಭಾವನೆ ಆಗುತ್ತದೆ ಮತ್ತು ಇಂತಹ ಧರ್ಮದಲ್ಲಿ ಧರ್ಮದ ಹೆಸರಿನಿಂದ ವೈರ-ವಿರೋಧ ಮತ್ತು ಜಗಳ ಆದರೆ ಹೀಗೆ ತಿಳಿಯಬೇಕು. ಏನಂದರೆ ನಮಗೆ ಅವಶ್ಯವಾಗಿ ಧರ್ಮದ ರಹಸ್ಯ ತಿಳಿದಿಲ್ಲವೆಂದೇ ಅರ್ಥವಾಗುವದು. ಆದ್ದರಿಂದ ಎಲ್ಲಿಯೇ ಇರಲಿ, ಧರ್ಮದ ಸಲುವಾಗಿ ವೈರ-ವಿರೋಧ ಅಥವಾ ಜಗಳ ಆಗಬಾರದು. ಏಕೆಂದರೆ ಧರ್ಮವು ಪ್ರತಿಯೊಬ್ಬರ ತಿಳಿವಳಿಕೆಯ ಅನುಸಾರವೇ ಪರಿಣಮಿಸುವಂಥದ್ದಿದೆ ಮತ್ತು ಅದರಲ್ಲಿ ಮತಭೇದವು ಅವಶ್ಯವಾಗಿ ಇರುವಂಥದ್ದಿದೆ. ಆ ಮತಭೇದಗಳನ್ನು ಮತಭೇದದಿಂದ ವೈರ ವಿರೋಧಕ್ಕೆ ಜಗಳದ ರೂಪ ಕೊಡುವದು ಧರ್ಮದ ಸಲುವಾಗಿ ಮರಣದ ಗಂಟೆಯ ಸಮಾನ ಇರುತ್ತದೆ.

ಆದ್ದರಿಂದ ನಾವಂತೂ ಎಲ್ಲರಿಗೂ ಒಂದೇ ಮಾತನ್ನು ಹೇಳುತ್ತೇವೆ. ಏನಂದರೆ ಧರ್ಮದ ಹೆಸರಿನಿಂದ ವೈರ ವಿರೋಧ ಮತ್ತು ಜಗಳಗಳಾದರೆ ಅವನ್ನು ಸಮಾಪ್ತಗೊಳಿಸಬೇಕು ಮತ್ತು ಎಲ್ಲ ಜನರಿಗೂ ವೈರ ವಿರೋಧ ಮತ್ತು ಜಗಳ ತಮ್ಮ ಮನಸ್ಸಿನಲ್ಲಿಂದಲೂ ಸಹ ಹೊರಹಾಕಬೇಕು. ಇಲ್ಲವಾದರೆ ಆ ವೈರವಿರೋಧ ಮತ್ತು ಜಗಳ ತಮಗೆ ಮೋಕ್ಷವಂತೂ ದೂರ ಉಳಿಯಿತು. ಅನಂತ ಸಂಸಾರದ ಕಾರಣವಾಗುವದು. ಆದ್ದರಿಂದ ಯಾವದೇ ವೈರ-ವಿರೋಧವಿರಲಿ, ಅದನ್ನು ಕ್ಷಮಿಸಿ ಮರೆತು ಬಿಡುವದೇ ಹಿತವಾಗಿರುತ್ತದೆ. ಅದರಲ್ಲಿಯೇ ಜಿನಧರ್ಮದ ಹಿತವು ಒಳಗೊಂಡಿರುತ್ತದೆ. ಇಂತಹ ವೈರ-ವಿರೋಧ ಮತ್ತು ಜಗಳಗಳು ಧರ್ಮವನ್ನು ವಿಪರೀತ ರೂಪದಿಂದ ಸ್ವೀಕರಿಸಿದುದರ ಫಲವಾಗಿದೆ. ಇಲ್ಲವಾದರೆ ಯಾರು ಧರ್ಮವನ್ನು ಸಮ್ಯಕ್‌ರೂಪದಿಂದ ಸ್ವೀಕರಿಸಿದರೆ ಅವನ ಮನಸ್ಸಿನಲ್ಲಿ ವೈರ ವಿರೋಧ ಉಂಟಾಗಲು ಹೇಗೆ ಸಾಧ್ಯವಿದೆ ? ಅಂದರೆ ಕೇವಲ ಕರುಣೆಯೇ ಉತ್ಪನ್ನವಾಗಲಿ. ವೈರ ವಿರೋಧ ಅಥವಾ ಜಗಳ ಉತ್ಪನ್ನವಾಗದಿರಲಿ. ಇದು ತಿಳಿಯುವಂಥ ಮಾತಿದೆ ಮತ್ತು ಅದರಿಂದ ಎಲ್ಲ ಜನರಿಗೂ ಧರ್ಮದ

ಹೆಸರಿನ ಮೇಲೆ ವೈರ ವಿರೋಧ ಅಥವಾ ಜಗಳಗಳನ್ನು ಮರೆತು ಸತ್ಯಧರ್ಮವನ್ನು ಪ್ರಚಾರಗೊಳಿಸಬೇಕು. ಹೀಗೆ ನಮ್ಮ ಮನ್ನಣೆಯಿದೆ.

★★★

## ೩೦. ನಿಯಮಸಾರದ ಅನುಸಾರ ಸಮ್ಯಗ್ದರ್ಶನ ಮತ್ತು ಧ್ಯಾನದ ವಿಷಯ

ಈಗ ನಾವು ನಿಯಮಸಾರ ಶ್ರೀ ಪದ್ಮಪ್ರಭ ಮಲಧಾರಿದೇವ ಕೃತ ಟೀಕೆಯಲ್ಲಿಂದ ಕೆಲವು ಗಾಥೆಗಳನ್ನು ಹಾಗೂ ಶ್ಲೋಕಗಳನ್ನು ನೋಡೋಣ. ಅವುಗಳಲ್ಲಿ ಸಮ್ಯಗ್ದರ್ಶನದ ವಿಷಯ ಮತ್ತು ಸಮ್ಯಗ್ದೃಷ್ಟಿಯ ಧ್ಯಾನದ ವಿಷಯ ಹೇಳಲಾಗಿದೆ ನೋಡೋಣ.

**ಗಾಥೆ ೩೮ :** ಜೀವಾದಿ ಬಾಹ್ಯ ತತ್ವಗಳು ಹೇಯ ಇವೆ. ಕರ್ಮೋಪಾಧಿಜನಿತ ಗುಣ ಪರ್ಯಾಗಳಿಂದ ಬೇರೆಯಾದ ಆತ್ಮನು ಆತ್ಮನಿಗೆ ಉಪಾದೇಯನಿದ್ದಾನೆ. ಇಲ್ಲಿ ಯಾವ ಜೀವಾದಿ ವಿಶೇಷ ರೂಪ (ಅಂದರೆ ಪರ್ಯಾಯರೂಪ) ತತ್ವಗಳನ್ನು ಹೇಯವೆಂದು ಹೇಳಿದ್ದಾರೆ. ಅಂದರೆ ಕರ್ಮಗಳ ನಿಮಿತ್ತದಿಂದ ಆದ ಜೀವದ ವಿಶೇಷ ಭಾವ (ವಿಭಾವ ಪರ್ಯಾಯಗಳು)ಗಳನ್ನು ಹೇಯವೆಂದು ಹೇಳಲಾಗಿದೆ. ಅದರ ಅರ್ಥ ಹೀಗಿದೆ. ಹೇಗೆಂದರೆ ಆ ಭಾವಗಳಲ್ಲಿ ಸಮ್ಯಗ್ದರ್ಶನದ ಸಲುವಾಗಿ 'ನನ್ನದು' ಎಂದು ಮಾಡಬಾರದು ಈ ಅಪೇಕ್ಷೆಯಿಂದ ಅವು ಹೇಯವಿವೆ. ಹೇಗೆಂದರೆ ಆ ಪರ್ಯಾಯ (ಅಂದರೆ ಪೂರ್ಣದ್ರವ್ಯ)ದಲ್ಲಿ ಅಡಗಿರುವ ಸಾಮಾನ್ಯಭಾವ ಅರ್ಥಾತ್ ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮನು ಸಮ್ಯಗ್ದರ್ಶನ ವಿಷಯ ಆಗಿರುವದರಿಂದ ಆತ್ಮನಿಗೆ ಉಪಾಧೇಯ ಇರುವನು. ಅದರಲ್ಲಿಯೇ 'ನನ್ನದು' ಮಾಡಲು ಯೋಗ್ಯವಿದೆ ಏಕೆಂದರೆ ಅದು ತ್ರಿಕಾಲ ಶುದ್ಧಭಾವ ಇರುತ್ತದೆ ಮತ್ತು ಶುದ್ಧ ದ್ರವ್ಯಾರ್ಥಿಕ ನಯದ ಚಕ್ಷುವಿನಿಂದ ಆತ್ಮನು ಕೇವಲ ಅಷ್ಟೇ ಇರುವನು ಮತ್ತು ಹಾಗೆಯೇ (ಶುದ್ಧವೇ) ಇರುವನು. ಆದ್ದರಿಂದ ಈ ಶುದ್ಧಾತ್ಮನ ಹೊರತು ಉಳಿದೆಲ್ಲ ಭಾವಗಳು ಜೀವದಲ್ಲಿಯೇ ಆದರೂ ಸಹ ಅವು ಬೇರೆಯವರ ಲಕ್ಷ್ಯದಿಂದ ಆಗುವದರಿಂದ ಅವುಗಳಲ್ಲಿ ಸಮ್ಯಗ್ದರ್ಶನದ ಸಲುವಾಗಿ 'ನನ್ನದು' (ಏಕತ್ವ) ಎಂದು ಮಾಡಲು ಯೋಗ್ಯ ಇರುವದಿಲ್ಲ. ಆದ್ದರಿಂದ ಈ ಅಪೇಕ್ಷೆಯಿಂದ ಅವು ಜೀವದ ಭಾವವೇ ಇರುವದಿಲ್ಲ. ಹೀಗೆ ಮೊದಲೇ ಹೇಳಲಾಗಿದೆ. ಅದೇ ಭಾವವನ್ನು ಇಲ್ಲಿ ಮತ್ತು ಮುಂದೆಯೂ ತಿಳಿಸಲಾಗಿದೆ.

**ಶ್ಲೋಕ ೬೦ :** ಸತತ ರೂಪದಿಂದ ಅಖಂಡ ಜ್ಞಾನದ ಅರ್ಥಾತ್ ಯಾವ ಜ್ಞಾನವು ವಿಕಲ್ಪ ಸಹಿತವಿದೆ ಹಾಗೂ ಖಂಡಖಂಡವಿದೆ. ಅದರಿಂದ ಆ

ಜ್ಞಾನಾಕಾರಗಳನ್ನು ಗೌಣ ಮಾಡುತ್ತಲೇ ಅಖಂಡ ಜ್ಞಾನದ ಪ್ರಾಪ್ತಿಯಾಗುತ್ತದೆ ಮತ್ತು ಅದುವೇ ಪರಮ ಪಾರಿಣಾಮಿಕ ಭಾವರೂಪಿ ಶುದ್ಧಾತ್ಮನೆಂದು ಕರೆಯುತ್ತಾರೆ. ಸದ್‌ಭಾವನೆಯುಳ್ಳ ಆತ್ಮನು (ಅರ್ಥಾತ್ ನಾನು ಅಖಂಡ ಜ್ಞಾನನಿದ್ದೇನೆ. ಹೀಗೆ ನಿಜವಾದ ಭಾವನೆ ಯಾರಿಗೆ ನಿರಂತರ ವರ್ತಿಸುತ್ತದೆ ಆ ಆತ್ಮನು) ಸಂಸಾರದ ಘೋರ ವಿಕಲ್ಪಗಳನ್ನು ಪಡೆಯುವದಿಲ್ಲ. ಆದರೆ ನಿರ್ವಿಕಲ್ಪ ಸಮಾಧಿಯನ್ನು ಪ್ರಾಪ್ತ ಮಾಡುತ್ತ ಪರ ಪರಿಣತಿಯಿಂದ ದೂರ, ಅನುಪಮ, ಅನಘ (ದೋಷರಹಿತ, ನಿಷ್ಪಾಪ, ಮಲರಹಿತ) ಚಿನ್ಮಾತ್ರನನ್ನು (ತಿಳಿಯುವ, ನೋಡುವಂಥ ಆತ್ಮನನ್ನು) ಪ್ರಾಪ್ತ ಮಾಡುತ್ತಾನೆ. ಅಂದರೆ ಆ ಜೀವವು ಸಮ್ಯಗ್ದರ್ಶನ ಪಡೆಯುತ್ತಾನೆ. ಆತ್ಮಜ್ಞಾನಿ ಆಗುತ್ತಾನೆ.

**ಗಾಥೆ ೪೩ :** ಆತ್ಮನು (ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮನು) ದಂಡರಹಿತ, ಸಮಸ್ಯೆಗಳ ರಹಿತ, ಮಮತ್ವರಹಿತ, ಶರೀರರಹಿತ, ಪರಾವಲಂಬನರಹಿತ, ರಾಗರಹಿತ, ದೋಷರಹಿತ, ಮೂಢರಹಿತ, ಭಯರಹಿತ ಇರುವನು.

**ಶ್ಲೋಕ ೬೪ :** ಯಾವ ಆತ್ಮನು ಭವ್ಯತೆಯಿಂದ ಪ್ರೇರಿತನಿದ್ದಾನೆ. ಆ ಆತ್ಮನು ಭವದಿಂದ ವಿಮುಕ್ತನಾಗುವ ಸಲುವಾಗಿ ಯಾವಾಗಲೂ ಈ ಆತ್ಮನನ್ನು ಭಜಿಸಬೇಕು. ಆತ್ಮನು ಅನುಪಮ ಜ್ಞಾನದ ಅಧೀನನಿದ್ದಾನೆ. ಅವನು ನಿಜಪರಿಣತಿಯು ಸುಖಸಾಗರದಲ್ಲಿ ಮಗ್ನನಿದ್ದಾನೆ.

**ಶ್ಲೋಕ ೬೬ :** ಯಾವುದು ಅನಾಕುಲವಿದೆ, ನಿಜ ಸ್ವರೂಪದಿಂದ ಕದಲದಂಥದ್ದಿದೆ. ಜನನ, ಮರಣ, ರೋಗಾದಿಗಳಿಂದ ರಹಿತವಿದೆ. ಸಹಜ ನಿರ್ಮಲ ಸುಖಾಮೃತಮಯವಿದೆ. ಆ ಸಮಯಸಾರವನ್ನು (ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮನನ್ನು, ಕಾರಣ ಸಮಯಸಾರ ಅಥವಾ ಕಾರಣ ಶುದ್ಧ ಪರ್ಯಾಯವೆಂದೂ ಸಹ ಹೇಳಲಾಗುತ್ತದೆ.) ನಾನು ಸಮತಾಭಾವದಿಂದ ಅದರಲ್ಲಿಯೇ ಒಂದೇ ರಸವಾಗಿ ಅದರಲ್ಲಿಯೇ ಏಕತ್ವ ಮಾಡಿ ಯಾವಾಗಲೂ ಪೂಜಿಸುತ್ತೇನೆ. ಅಂದರೆ ನಾನು ಯಾವಾಗಲೂ ಸಮಯಸಾರ ರೂಪ, ಪರಮ ಪಾರಿಣಾಮಿಕ ಭಾವರೂಪ ಶುದ್ಧಾತ್ಮನ ಭಾವನೆಯನ್ನು ಭಾವಿಸುತ್ತೇನೆ.

**ಗಾಥೆ ೪೪ :** ಆತ್ಮನು ನಿರ್ಗ್ರಂಥ, ನಿರಾಗ, ನಿಃಶಲ್ಯ, ಸರ್ವದೋಷ ವಿಮುಕ್ತ, ನಿಷ್ಕಾಮ ನಿಃಕ್ರೋಧ, ನಿರ್ಮಾನ ಮತ್ತು ನಿರ್ಮದ ಇದ್ದಾನೆ. ಆದ್ದರಿಂದ ಇಂಥ ಆತ್ಮನು ಕೇವಲ ಅವ್ಯಕ್ತ ರೂಪವಿದೆ ಮತ್ತು ಇದು ಮೊದಲು ಹೇಳಿದ ಅನುಸಾರ ಭಾವಮನಸ್ಸಿನ ವಿಷಯವಾಗುತ್ತದೆ. ಅದುವೇ ಶುದ್ಧ ದ್ರವ್ಯಾರ್ಥಿಕ ನಯದ ವಿಷಯರೂಪ ಶುದ್ಧಾತ್ಮನ ಅಪೇಕ್ಷೆಯಿಂದ ಎಲ್ಲ ಜೀವಗಳು ಸ್ವಭಾವದಿಂದ ಸಿದ್ಧಸಮಾನವೇ ಇವೆ. ಅಂಥ ಶುದ್ಧಾತ್ಮನೇ ಉಪಾದೇಯನಿದ್ದಾನೆ. ಅಂದರೆ ಏಕತ್ವ ಮಾಡಲು ಯೋಗ್ಯ ಇದ್ದಾನೆ.

**ಶ್ಲೋಕ ೨೩ :** ಶುದ್ಧ ನಿಶ್ಚಯ ನಯದಿಂದ ಮುಕ್ತಿಯಲ್ಲಿ ಹಾಗೂ ಸಂಸಾರದಲ್ಲಿ ಅಂತರ ಇರುವದಿಲ್ಲ. ಹೀಗೆಯೇ ವಾಸ್ತವದಲ್ಲಿ ತತ್ವ ವಿಚಾರಿಸುತ್ತ ಶುದ್ಧತತ್ವದ ರಸಿಕಪುರುಷನು ಹೇಳುತ್ತಾನೆ. ಅರ್ಥಾತ್ ಶುದ್ಧ ದ್ರವ್ಯಾರ್ಥಿಕ ನಯದಿಂದ ಜೀವವು ಮೂರೂ ಕಾಲ ಸಂಪೂರ್ಣ ಶುದ್ಧವೇ ಇರುತ್ತದೆ.

**ಗಾಥೆ ೮೨ :** ಇಂಥ ಭೇದಾಭ್ಯಾಸ ಆದಮೇಲೆ ಜೀವನು ಮಧ್ಯಸ್ಥನಾಗುತ್ತಾನೆ. ಅದರಿಂದ ಚಾರಿತ್ರವಾಗುತ್ತದೆ. ಇದನ್ನೇ ದೃಢ ಮಾಡುವ ನಿಮಿತ್ತದಿಂದ ನಾನು ಪ್ರತಿಕ್ರಮಣ ಮುಂತಾದವುಗಳನ್ನು ಹೇಳುವೆನು. ಈ ಪ್ರಕಾರ ಯಾವಾಗ ಮುನಿನಾಥರಿಗೆ ಭೇದವಿಜ್ಞಾನದ ಪರಿಣಾಮ ಆಗುತ್ತದೆ ಆಗ ಇದು (ಸಮಯಸಾರವು) ಸ್ವಯಂ ಉಪಯೋಗ ಇರುವದರಿಂದ ಮೋಹರಹಿತನಾಗುತ್ತ ಉಪಶಮ ಸಮುದ್ರದ ತೆರೆಗಳಿಂದ ಪಾಪಕಲಂಕವನ್ನು ತೊಳೆದುಹಾಕಿ ವಿರಾಜಿಸುತ್ತಾನೆ.

**ಗಾಥೆ ೮೩ :** ವಚನ ರಚನೆಯನ್ನು ಬಿಟ್ಟುಕೊಟ್ಟು (ಅರ್ಥಾತ್ ಯಾವ ಪ್ರತಿಕ್ರಮಣ ಸೂತ್ರರೂಪ ವಚನ ರಚನೆಯಿದೆ. ಅದು ವಿಕಲ್ಪರೂಪ ಆಗಿರುವದರಿಂದ ಅದನ್ನು ಬಿಟ್ಟು ನಿರ್ವಿಕಲ್ಪ ಶುದ್ಧಾತ್ಮನನ್ನು ಭಾವಿಸಬೇಕು. ಅನುಭವ ಮಾಡಬೇಕು ಮತ್ತು ಅದರಲ್ಲಿಯೇ ಸ್ಥಿರವಾಗಬೇಕು. ಅದುವೇ ಪ್ರತಿಕ್ರಮಣಾದಿಯ ಲಕ್ಷ್ಯವಿದೆ ಮತ್ತು ಒಂದು ವೇಳೆ ಆ ಲಕ್ಷ್ಯವು ಸಿದ್ಧವಾಗುತ್ತದೆ. ಆಗ ವಚನ ರಚನೆಯ ರೂಪ ಪ್ರತಿಕ್ರಮಣದ ಅವಶ್ಯಕತೆಯು ಪೂರ್ಣವಾಗುತ್ತದೆ. ರಾಗಾದಿ ಭಾವಗಳ ನಿವಾರಣೆ ಮಾಡಿ (ಅಂದರೆ ರಾಗಾಧಿ ಭಾವಗಳನ್ನು ಧ್ಯಾನದಲ್ಲಿ ತರದೇ ಅರ್ಥಾತ್ ಅವುಗಳನ್ನು ಗೌಣ ಮಾಡಿ ಅಂದರೆ ರಾಗಾದಿಭಾವಗಳಲ್ಲಿ 'ನನ್ನದು' ಮಾಡದೇ) ಯಾವನು ಆತ್ಮನನ್ನು ಧ್ಯಾನಿಸುತ್ತಾನೆ. ಅವನಿಗೆ (ಪರಮಾರ್ಥ) ಪ್ರತಿಕ್ರಮಣ ಇರುತ್ತದೆ.

**ಗಾಥೆ ೯೨ :** ಆತ್ಮನೇ ಉತ್ತಮ ಪದಾರ್ಥ ಇದ್ದಾನೆ. ಆ ಶುದ್ಧಾತ್ಮನಲ್ಲಿಯೇ ಸ್ಥಿತರಾದ ಮುನಿರಾಜರು ಕರ್ಮಗಳನ್ನು ಹೊಡೆದುಹಾಕುತ್ತಾರೆ. ಆದ್ದರಿಂದ ಶುದ್ಧಾತ್ಮನ ಧ್ಯಾನವೇ ನಿಜವಾಗಿ ಉತ್ತಮ ಪ್ರತಿಕ್ರಮಣ ಇದೆ.

**ಶ್ಲೋಕ ೧೨೨ :** ಸಮಸ್ತ ವಿಭಾವಗಳನ್ನು ಗೌಣ ಮಾಡಿ ಹಾಗೂ ವ್ಯವಹಾರ ರತ್ನತ್ರಯದ ಎಲ್ಲ ವಿಕಲ್ಪಗಳನ್ನು ಶಾಂತಗೊಳಿಸಿ ತನ್ನ ಆತ್ಮತತ್ವವನ್ನು ತಿಳಿಯುವಂಥ ಅನುಭವ ಮಾಡುವಂಥ ಬುದ್ಧಿವಂತ ಪುರುಷನು ಶುದ್ಧ ಆತ್ಮತತ್ವದಲ್ಲಿ ವೀತರಾಗ ಭಾವದಿಂದ ಒಂದಾದ ಇವನು ದರ್ಶನ, ಜ್ಞಾನ, ಚಾರಿತ್ರ ಇವುಗಳ ಆಶ್ರಯ ಪಡೆಯುತ್ತಾನೆ.

**ಶ್ಲೋಕ ೧೨೩ :** ಆತ್ಮಧ್ಯಾನದ ಹೊರತು ಬೇರೆ ಎಲ್ಲವೂ ಘೋರ ಸಂಸಾರದ ಮೂಲ ಇವೆ. ಅಂದರೆ ಶುದ್ಧಾತ್ಮನ ಧ್ಯಾನವೇ ಅತ್ಯಂತ ಶ್ರೇಷ್ಠವಿದೆ. ವಿಕಲ್ಪಸಹಿತ ಧ್ಯಾನವು ಅಂದರೆ ಶುಭ ತಪಸ್ಸು ಸಹ ಕೇವಲ ಕಲ್ಪನೆಯಲ್ಲಿ ರಮ್ಯ ಇದೆ. ನಿಜವಾಗಿ ಒಳ್ಳೆಯದಲ್ಲ. ಹೀಗೆ ತಿಳಿದುಕೊಂಡ ಬುದ್ಧಿವಂತ ಪುರುಷನು ಸಹಜವಾಗಿ

ಅತೀಂದ್ರಿಯ ಆನಂದದಲ್ಲಿ ಲೀನನಾಗುತ್ತ ಪರಮಾತ್ಮನ (ಪರಮ ಪಾರಿಣಾಮಿಕ ಭಾವರೂಪ ಕಾರಣ ಪರಮಾತ್ಮನ)ದೇ ಆಶ್ರಯ ಪಡೆಯುತ್ತಾನೆ.

**ಗಾಥೆ ೯೩ :** ಶುದ್ಧಾತ್ಮನ ಧ್ಯಾನದಲ್ಲಿ ಲೀನನಾದಂಥ ಸಾಧು ಎಲ್ಲ ದೋಷಗಳನ್ನು ಪರಿತ್ಯಾಗ ಮಾಡುತ್ತಾರೆ. ಆದ್ದರಿಂದ ಶುದ್ಧಾತ್ಮನ ಧ್ಯಾನವೇ ನಿಜವಾಗಿಯೂ ಎಲ್ಲ ಅತಿಚಾರಗಳ ಪ್ರತಿಕ್ರಮಣವಾಗಿದೆ.

**ಗಾಥೆ ೯೫ :** ಸಮಸ್ತ ವಚನ ವಿಸ್ತಾರವನ್ನು ಅಂದರೆ ವಿಕಲ್ಪಗಳನ್ನು ಗೌಣ ಮಾಡಿ ಅನಾಗತ ಶುಭ-ಅಶುಭ ಭಾವಗಳನ್ನು ಬಿಟ್ಟು ಅಂದರೆ ಎಲ್ಲ ವಿಭಾವ-ಭಾವಗಳನ್ನು ಗೌಣ ಮಾಡಿ ಅಂದರೆ ಸಮಯಸಾರ ಗಾಥೆ ೬ರ ಅನುಸಾರ ಪ್ರಮತ್ತವು ಇಲ್ಲ ಮತ್ತು ಅಪ್ರಮತ್ತವೂ ಇಲ್ಲ. ಇಂತಹ ಜ್ಞಾಯಕ ಭಾವರೂಪ ಆತ್ಮನನ್ನು ಧ್ಯಾನಿಸುತ್ತಾನೆ. ಅದುವೇ ನಿಶ್ಚಯ ಪ್ರತ್ಯಾಖ್ಯಾನವಿದೆ. ಅರ್ಥಾತ್ ಕೇವಲ ಪೂರ್ಣ ಪುರುಷಾರ್ಥವು ಆತ್ಮ ಸ್ಥಿರತಾರೂಪಿ ಚಾರಿತ್ರದ ಸಲುವಾಗಿಯೇ ಮಾಡಲಾಗಿದೆ. ಇದು ಸಾಕ್ಷಾತ್ ಕೇವಲಜ್ಞಾನದ ಕಾರಣ ಇರುತ್ತದೆ.

**ಗಾಥೆ ೯೬ :** ನಾನು ಕೇವಲಜ್ಞಾನ ಸ್ವಭಾವಿ, ಕೇವಲದರ್ಶನ ಸ್ವಭಾವಿ, ಸುಖಮಯನು ಮತ್ತು ಕೇವಲಶಕ್ತಿ ಸ್ವಭಾವಿಯು ಇದ್ದೇನೆ. ಹೀಗೆ ಜ್ಞಾನಿಯು ಚಿಂತನೆ ಮಾಡುತ್ತಾನೆ. ಅಂದರೆ ಜ್ಞಾನಿಯು ತನ್ನನ್ನು ಕಾರಣ ಸಮಯಸಾರ ರೂಪಿ ಶುದ್ಧಾತ್ಮನ ಅನುಭವ ಮಾಡುತ್ತಾರೆ.

**ಶ್ಲೋಕ ೧೨೮ :** ಸಮಸ್ತ ಮುನಿಜನರ ಹೃದಯಕಮಲದ ಹಂಸವು ತ್ರಿಕಾಲಶುದ್ಧ ಕೇವಲಜ್ಞಾನದ ಮೂರ್ತಿರೂಪ, ಸಕಲವಿಮಲ ಶುದ್ಧದೃಷ್ಟಿಯ ವಿಷಯುವಾದ ಇಂಥ ಶುದ್ಧಾತ್ಮನು, ಶಾಶ್ವತ ಆನಂದರೂಪ ಸಹಜ ಪರಮಚೈತನ್ಯಮಯನಾದ ಪರಮಾತ್ಮನು ಜಯವಂತನಿರುವನು. ಆದ್ದರಿಂದ ಭಾವಿಸಲು ಅವನೇ ಯೋಗ್ಯನಿದ್ದಾನೆ. ಅದರಲ್ಲಿಯೇ 'ನನ್ನದು' ಎಂದು ಮಾಡಲು ಯೋಗ್ಯವಿದೆ.

**ಗಾಥೆ ೯೭ :** ಯಾರು ತನ್ನ ಯಥಾರ್ಥ ಭಾವನೆಯನ್ನು ಬಿಟ್ಟುಕೊಡುವದಿಲ್ಲ ಮತ್ತು ಪರಭಾವವನ್ನು ಸ್ವೀಕರಿಸುವದಿಲ್ಲ. ಎಲ್ಲವನ್ನು ತಿಳಿಯುತ್ತಾನೆ, ನೋಡುತ್ತಾನೆ. (ಅಂದರೆ ಜ್ಞಾನಮಾತ್ರ ಭಾವದಲ್ಲಿಯೇ 'ನನ್ನದು' ಎಂದು ತಿಳಿಯುತ್ತಾನೆ, ನೋಡುತ್ತಾನೆ. ಆದರೆ ಪರದಲ್ಲಿ 'ನನ್ನತನ' ಮಾಡುವದಿಲ್ಲ. ಅವನೇ ನಾನು ಇದ್ದೇನೆ. ಅಂದರೆ ಆ ಶುದ್ಧಾತ್ಮನೇ ನಾನು ಇದ್ದೇನೆ. ಹೀಗೆ ಜ್ಞಾನಿಯು ಚಿಂತನೆ ಮಾಡುತ್ತಿದ್ದಾನೆ. ಅಂದರೆ ಅನುಭವ ಮಾಡುತ್ತಾನೆ ಮತ್ತು ಧ್ಯಾನಿಸುತ್ತಾನೆ. ಅದುವೇ ಧ್ಯಾನದ ಮತ್ತು ಸಮ್ಯಗ್ದರ್ಶನದ ವಿಷಯವಿದೆ.

**ಶ್ಲೋಕ ೧೨೯ :** ಆತ್ಮನು ಆತ್ಮನಲ್ಲಿ ತನ್ನ ಆತ್ಮೀಕ ಗುಣಗಳಿಂದ ಸಮೃದ್ಧನಾದ ಆತ್ಮನನ್ನು ಒಂದು ಪಂಚಮಭಾವವನ್ನು ತಿಳಿಯುತ್ತಾನೆ ಮತ್ತು ನೋಡುತ್ತಾನೆ. ಆ

ಸಹಜ ಒಂದು ಪಂಚಮ ಭಾವವನ್ನು ಅವನು ಬಿಡುತ್ತಲೇ ಇಲ್ಲ. ಅನ್ಯವಾದಂಥ ಪರಭಾವವನ್ನು ವಾಸ್ತವಿಕವಾಗಿ ಆ ಪೌದ್ಗಲಿಕ ವಿಕಾರವಿದೆ. ಅದನ್ನು ಅವನು ಗ್ರಹಣ ಮಾಡುವದೇ ಇಲ್ಲ. (ನನ್ನದು ಎಂದು ಭಾವಿಸುವುದಿಲ್ಲ.)

**ಶ್ಲೋಕ ೧೩೩ :** ಯಾವುದು ಮುಕ್ತಿ ಸಾಮ್ರಾಜ್ಯದ ಮೂಲವಿದೆ, ಅಂದರೆ ಸಮ್ಯಗ್ದರ್ಶನದ ವಿಷಯವಿದೆ. ಏಕೆಂದರೆ ಸಮ್ಯಗ್ದರ್ಶನವು ಅದು ಮುಕ್ತಿ ಸಾಮ್ರಾಜ್ಯದ ಮೂಲವಿದೆ. ಇಂತಹ ಈ ಅನುಪಮ, ಸಹಜ, ಪರಮ ಆನಂದವುಳ್ಳ ಒಬ್ಬ ಚಿದ್ರೂಪನನ್ನು ಅಂದರೆ ಚೈತನ್ಯ ಸ್ವರೂಪವನ್ನು ಬುದ್ಧಿವಂತ ಪುರುಷರು ಸಮ್ಯಕ್ ಪ್ರಕಾರದಿಂದ ಸ್ವೀಕರಿಸುವದು ಯೋಗ್ಯವಿದೆ.

**ಗಾಥೆ ೧೦೨ :** ಜ್ಞಾನದರ್ಶನ ಲಕ್ಷಣವುಳ್ಳ ಶಾಶ್ವತನಾದ ಒಬ್ಬ ಆತ್ಮನು ನನ್ನವನಿದ್ದಾನೆ. ಉಳಿದೆಲ್ಲ ಸಂಯೋಗ ಲಕ್ಷಣವುಳ್ಳ ಭಾವಗಳು ನನ್ನಿಂದ ಬಾಹ್ಯವಿದೆ. ಈ ಗಾಥೆಯು ಭೇದಜ್ಞಾನದ ಗಾಥೆಯಿದೆ. ಇದರಲ್ಲಿ ಸಮ್ಯಗ್ದರ್ಶನದ ಸಲುವಾಗಿ ಭೇದಜ್ಞಾನವನ್ನು ಯಾವ ಪ್ರಕಾರ ಮಾಡಬೇಕು ಎಂಬುದನ್ನು ಹೇಳಲಾಗಿದೆ. ಏನಂದರೆ ಯಾವುದು ನೋಡುವ, ತಿಳಿಯುವ ಆತ್ಮನಿದ್ದಾನೆ, ಅವನೇ ನಾನಿದ್ದೇನೆ. ಉಳಿದೆಲ್ಲ ಭಾವಗಳನ್ನು ಗೌಣ ಮಾಡುವ ಭಾವ ಇರುವದರಿಂದಲೇ ಆ ಭಾವಗಳು ಬಾಹ್ಯವೆಂದು ಹೇಳಿದ್ದಾರೆ. ಏಕೆಂದರೆ ಅವುಗಳಿಂದಲೇ ಭೇದಜ್ಞಾನ ಮಾಡುವದಿದೆ.

**ಶ್ಲೋಕ ೧೪೮ :** ತತ್ವದಲ್ಲಿ ನಿಪುಣ ಬುದ್ಧಿಯುಳ್ಳ ಜೀವದ ಹೃದಯಕಮಲ ರೂಪದ ಭಾವಮನದಲ್ಲಿ ಮೋಹಾಂಧಕಾರದ ನಾಶ ಮಾಡಿದೆ ಮತ್ತು ಅದು ನಿಜರಸದ ವಿಸ್ತಾರದಿಂದ ಪ್ರಕಾಶಿತವಾದ ಜ್ಞಾನದ ಪ್ರಕಾಶನ ಮಾತ್ರ (ಜ್ಞಾಯಕ)ವಿದೆ.

**ಗಾಥೆ ೧೦೭ :** ನೋಕರ್ಮ ಮತ್ತು ಕರ್ಮದಿಂದ ರಹಿತ ಹಾಗೂ ವಿಭಾವ ಗುಣ ಪರ್ಯಾಯಗಳಿಂದ ವ್ಯತಿರಿಕ್ತನಾದ ಆತ್ಮನನ್ನು ಯಾವನು ಧ್ಯಾನಿಸುತ್ತಾನೆ, ಆಶ್ರಮಣನಿಗೆ ಆಲೋಚನವಿದೆ.

**ಶ್ಲೋಕ ೧೫೨ :** ಘೋರ ಸಂಸಾರದ ಮೂಲವಾದಂಥ ಸುಕೃತ ಮತ್ತು ದುಷ್ಕೃತವನ್ನು ಯಾವಾಗಲೂ ಆಲೋಚಿಸಿ ನಾನು ಸ್ವಾಭಾವಿಕ ಗುಣವುಳ್ಳ ಶುದ್ಧ ಆತ್ಮನನ್ನು ಆತ್ಮನಿಂದಲೇ ಅವಲಂಬಿಸುತ್ತೇನೆ. ಅನಂತರ ದ್ರವ್ಯಕರ್ಮ ಸ್ವರೂಪದ ಸಮಸ್ತ ಪ್ರಕೃತಿಯನ್ನು ಅತ್ಯಂತ ನಷ್ಟ ಮಾಡಿ ಸಹಜವಾಗಿ ವ್ಯಕ್ತವಾಗುವ ಜ್ಞಾನಲಕ್ಷ್ಮಿಯನ್ನು ನಾನು ಪಡೆಯುತ್ತೇನೆ.

**ಶ್ಲೋಕ ೧೫೫ :** ಯಾವನು ಜ್ಞಾನಜ್ಯೋತಿಯಿಂದ ಪಾಪರೂಪಿ ಅಂಧಕಾರದ ಪುಂಜವನ್ನು ನಾಶ ಮಾಡಿದ್ದಾನೆ ಮತ್ತು ಯಾವನು ಪುರಾಣ (ಸನಾತನ-ತ್ರಿಕಾಲಿಕ ಶುದ್ಧ) ಇದ್ದಾನೆ, ಅಂಥ ಆತ್ಮನು ಪರಮ ಸಂಯಮಿಗಳ ಚಿತ್ತಕಮಲದಲ್ಲಿ ಸ್ಪಷ್ಟನಿದ್ದಾನೆ. ಆ ಆತ್ಮನು ಸಂಸಾರಿ ಜೀವರುಗಳ ಮನ, ವಚನ ಮಾರ್ಗದಿಂದ ಅಗೋಚರನಿದ್ದಾನೆ. ಅಂದರೆ ಸಮೀಪದಲ್ಲಿಯೇ ಮೋಕ್ಷ ಪ್ರಾಪ್ತ ಮಾಡಲು ಯೋಗ್ಯ ಪರಮ ಪುರುಷನಲ್ಲಿ

ವಿಧಿಯೇನು ಮತ್ತು ನಿಷೇಧವೇನು ? ಇಂಥ ಶುದ್ಧಾತ್ಮನಲ್ಲಿ ಮಗ್ನನಾಗಿರುವಂಥ ಪರಮ ಪುರುಷನು ಯಾವದೇ ವಿಧಿಯನ್ನು ಪಾಲಿಸಲಿ ಅಥವಾ ಪಾಲಿಸದೇ ಇರಲಿ ಅವರಿಗೆ ಅದರಿಂದ ಸ್ವಲ್ಪವೂ ದೋಷ ಇರುವದಿಲ್ಲ.

**ಶ್ಲೋಕ ೧೫೬ :** ಯಾವುದು ಸಕಲ ಇಂದ್ರಿಯಗಳ ಸಮೂಹದಿಂದ ಉತ್ಪನ್ನವಾಗುವಂಥ ಕೋಲಾಹಲದಿಂದ ವಿಮುಕ್ತವಿದೆ, ಯಾವುದು ನಯ ಮತ್ತು ಅನಯದ ಸಮೂಹದಿಂದ ದೂರವಿದ್ದರೂ ಕೂಡ ಯೋಗಿಗಳಿಗೆ ಗೋಚರವಿದೆ. ಯಾವುದು ಯಾವಾಗಲೂ ಶಿವಮಯವಿದೆ, ಉತ್ಕೃಷ್ಟವಿದೆ ಮತ್ತು ಅಜ್ಞಾನಿಗಳಿಗೆ ಬಹಳ ದೂರವಿದೆ. ಅಂಥ ಈ ಪಾಪವಿಲ್ಲದ ಶುದ್ಧ ಚೈತನ್ಯಮಯವಾದ ಸಹಜ ತತ್ವವು ಅತ್ಯಂತ ಜಯವಂತವಿದೆ. ಮೇಲಿಂದ ಮೇಲೆ ಸ್ಮರಣೆ ಮಾಡಲು ಯೋಗ್ಯವಿದೆ.

**ಶ್ಲೋಕ ೧೫೭ :** ತನ್ನ ಸುಖರೂಪದ ಅಮೃತದ ಸಾಗರದಲ್ಲಿ ಮುಳುಗೇಳುತ್ತ ಈ ಶುದ್ಧಾತ್ಮನನ್ನು ತಿಳಿದುಕೊಂಡು ಭವ್ಯ ಜೀವರುಗಳು ಪರಮ ಗುರುಗಳ ಮುಖಾಂತರ ಶಾಶ್ವತವಾದ ಸುಖವನ್ನು ಪಡೆದುಕೊಳ್ಳುತ್ತಾರೆ. ಆದುದರಿಂದ ಭೇದದ ಅಭಾವದಿಂದ ಯಾವುದು ಸಿದ್ಧಿಯಿಂದ ಉತ್ಪನ್ನವಾಗುವಂಥ ಸೌಖ್ಯದಿಂದ ಶುದ್ಧವಿದೆ. ಅಂಥ ಆ ಒಂದು ಅದ್ಭುತ ಸಹಜ ತತ್ವವನ್ನು ನಾನೂ ಕೂಡ ಯಾವಾಗಲೂ ಅತ್ಯಂತ ಅಪೂರ್ವ ರೀತಿಯಿಂದ ಅತಿಯಾಗಿ ಭಾವಿಸುತ್ತೇನೆ.

**ಶ್ಲೋಕ ೧೫೮ :** ಸರ್ವಸಂಘದಿಂದ ನಿರ್ಮುಕ್ತ, ನಿರ್ಮೋಹರೂಪ, ಪಾಪವಿಲ್ಲದ ಮತ್ತು ಪರಭಾವದಿಂದ ಮುಕ್ತವಾದಂಥ ಈ ಪರಮಾತ್ಮ ತತ್ವವನ್ನು ನಾನು ನಿರ್ವಾಣರೂಪಿ ಸ್ತ್ರೀಯಿಂದ ಉತ್ಪನ್ನವಾಗುವಂಥ ಪವಿತ್ರ ಸುಖದ ಸಲುವಾಗಿ ದಿನಾಲು ಸಮ್ಯಕ್ ರೂಪದಿಂದ ಭಾವಿಸುತ್ತೇನೆ ಮತ್ತು ನಮನ ಮಾಡುತ್ತೇನೆ.

**ಶ್ಲೋಕ ೧೫೯ :** ನಿಜಭಾವದಿಂದ ಭಿನ್ನವಾದಂಥ ಸಕಲ ಭಾವಗಳನ್ನು ಬಿಟ್ಟುಕೊಟ್ಟು ಒಂದು ನಿರ್ಮಲವಾದ ಚಿನ್ಮಾತ್ರವನ್ನು ನಾನು ಭಾವಿಸುತ್ತೇನೆ. ಸಂಸಾರ ಸಾಗರವನ್ನು ದಾಟಿ ಹೋಗುವ ಸಲುವಾಗಿ ಜಿನೇಂದ್ರರು ಯಾವುದನ್ನು ಭೇದರಹಿತನೆಂದು ಹೇಳಿದ್ದಾರೆ. ಅಂಥ ಮುಕ್ತಿಯ ಮಾರ್ಗಕ್ಕೆ ಕೂಡ ನಾನು ದಿನಾಲು ನಮನ ಮಾಡುತ್ತೇನೆ.

**ಶ್ಲೋಕ ೧೬೦ :** ಯಾವುದು ಕರ್ಮದ ಮತ್ತು ಅವುಗಳ ನಿಮಿತ್ತದಿಂದ ಉಂಟಾಗುವ ಭಾವಗಳಿಂದ ಭೇದಜ್ಞಾನ ಮಾಡುವದರಿಂದ ಅವು ಗೌಣವಾಗುತ್ತವೆ ಮತ್ತು ಸ್ವಂತಕ್ಕೆ ಶುದ್ಧಾತ್ಮನ ಪ್ರಾಪ್ತಿಯಾಗುತ್ತದೆ. ಆ ಕಾರಣ ಸಹಜ ಪರಿಣಮನ ರೂಪ ಪರಮ ಪಾರಿಣಾಮಿಕ ಭಾವದ ಪಂಚಮ ಭಾವದಲ್ಲಿಯೇ 'ನನ್ನತನ' ಮಾಡಿ ಆತ್ಮಸ್ಥಿತನಾಗುವದೇ ಮುನಿಗಳಿಗೆ ಮುಕ್ತಿಯ ಮೂಲವಿದೆ. ಇಂಥ ಶುದ್ಧಾತ್ಮನಲ್ಲಿಯೇ ನನ್ನತನ ಮಾಡಲು ಯೋಗ್ಯವಿದೆ. ಅದರದೇ ಧ್ಯಾನ ಮಾಡುವದು, ಸೇವನೆ ಮಾಡುವದು ಯೋಗ್ಯವಿದೆ. ಶ್ರೇಣಿ ಏರಲಾಗುತ್ತದೆ. ಕೇವಲದರ್ಶನ, ಕೇವಲಜ್ಞಾನ ಪ್ರಾಪ್ತವಾಗುತ್ತದೆ. ಆಯುಕ್ಷಯವಾದೊಡನೆ ಮೋಕ್ಷ ದೊರೆಯುತ್ತದೆ.

ಯಾವಾಗಲೂ ಏಕರೂಪವಿದೆ. ನಿಜರಸದ ವಿಸ್ತಾರದಿಂದ ಪರಿಪೂರ್ಣವಿರುವ ಕಾರಣ ಪವಿತ್ರವಿದೆ, ಸನಾತನವಿದೆ. ಈ ಶುದ್ಧ ಪಂಚಮಭಾವವು ಯಾವಾಗಲೂ ಜಯವಂತವಿದೆ.

**ಶ್ಲೋಕ ೧೬೧ :** ಅನಾದಿ ಸಂಸಾರದಿಂದ ಸಮಸ್ತ ಜನಸಮೂಹಕ್ಕೆ ತೀವ್ರ ಮೋಹದ ಉದಯದ ಕಾರಣವಾಗಿ ಜ್ಞಾನಜ್ಯೋತಿಯು ಯಾವಾಗಲೂ ಮತ್ತವಿದೆ. ಕಾಮದ ವಶವಿದೆ ಮತ್ತು ಆತ್ಮಕಾರ್ಯದಲ್ಲಿ ಮೂಢವಿದೆ. ಯಾವಾಗ ಮೋಹದ ಅಭಾವವಾಗುತ್ತದೆಯೋ ಆಗ ಈ ಜ್ಞಾನಜ್ಯೋತಿಯು ಶುದ್ಧಭಾವವನ್ನು ಪ್ರಾಪ್ತ ಮಾಡಿಕೊಳ್ಳುತ್ತದೆ. ಈ ಶುದ್ಧಭಾವವು ದಿಶಾಮಂಡಲವನ್ನು ಉಜ್ವಲಗೊಳಿಸುತ್ತದೆ. ಅಂದರೆ ಅದರಿಂದ ಮೂರು ಕಾಲ ಮೂರು ಲೋಕಗಳು ಸಹಜವಾಗಿ ತಿಳಿದುಬರುತ್ತದೆ. ಇದುವೇ ಸಿದ್ಧತ್ವದ ಪ್ರಾಪ್ತಿಯ ವಿಧಿ ಇರುತ್ತದೆ.

**ಶ್ಲೋಕ ೧೬೭ :** ಶುಭ ಮತ್ತು ಅಶುಭದಿಂದ ರಹಿತವಾದ ಶುದ್ಧ ಚೈತನ್ಯದ ಭಾವನೆಯು ಅಂದರೆ ವಿಭಾವ-ಭಾವ ರಹಿತ ಶುದ್ಧಾತ್ಮನು ನನ್ನ ಅನಾದಿ ಸಂಸಾರ ರೋಗದ ಸಲುವಾಗಿ ಉತ್ತಮ ಔಷಧವಿದೆ. ಇದುವೇ ಸಮ್ಯಗ್ದರ್ಶನದ ವಿಷಯವಿದೆ.

**ಶ್ಲೋಕ ೧೭೦ :** ಯಾವನು ಸಹಜತೇಜದಿಂದ ರಾಗರೂಪವಾದ ಅಂಧಕಾರದ ನಾಶ ಮಾಡಿದ್ದಾನೆ. ಯಾವನುಮುನಿವರರುಗಳ ಮನಸ್ಸಿನಲ್ಲಿ ವಾಸ ಮಾಡುತ್ತಾನೆ. ಯಾವನು ಶುದ್ಧನಿದ್ದಾನೆ. ಯಾವನು ವಿಷಯ ಸುಖದಲ್ಲಿ ತೊಡಗಿರುವ ಜೀವರುಗಳಿಗೆ ಯಾವಾಗಲೂ ದುರ್ಲಭನಿದ್ದಾನೆ, ಯಾವನು ಪರಮಸುಖದ ಸಮುದ್ರನಿದ್ದಾನೆ, ಯಾವನು ಶುದ್ಧ ಜ್ಞಾನನಿದ್ದಾನೆ ಮತ್ತು ಯಾವನು ನಿದ್ದೆಯ ನಾಶ ಮಾಡಿದ್ದಾನೆ. ಅಂಥ ಈ ಶುದ್ಧಾತ್ಮನು ಜಯವಂತನಿದ್ದಾನೆ.

**ಶ್ಲೋಕ ೧೯೦ :** ಯಾವನು ನಿತ್ಯ ಜ್ಯೋತಿಯ ಅಂದರೆ ಅನಾದಿ ಅನಂತ ಶುದ್ಧಭಾವ ರೂಪದ ಮುಖಾಂತರ ತಿಮಿರ ಪುಂಜದ ನಾಶ ಮಾಡಿದ್ದಾನೆ, ಯಾವನು ಆದಿಅಂತರಹಿತನಿದ್ದಾನೆ, ಯಾವನು ಪರಮ ಕಲಾಸಹಿತನಿದ್ದಾನೆ ಮತ್ತು ಯಾವನು ಆನಂದ ಮೂರ್ತಿ ಇದ್ದಾನೆ, ಅಂಥ ಒಬ್ಬ ಶುದ್ಧ ಆತ್ಮನನ್ನು ಯಾವ ಜೀವನು ಶುದ್ಧ ಆತ್ಮನಲ್ಲಿ ಸ್ಥಿರಮನಸ್ಸುಳ್ಳವನಾಗಿ ನಿರಂತರ ಧ್ಯಾನಿಸುತ್ತಾನೆ. ಅಂಥ ಈ ಚಾರಿತ್ರವಂತ ಜೀವನು ಶೀಘ್ರವಾಗಿ ಜೀವನ್ಮುಕ್ತನಾಗುತ್ತಾನೆ.

**ಗಾಥೆ ೧೨೩ :** ಸಂಯಮ, ನಿಯಮ, ತಪಸ್ಸು ಮತ್ತು ಧರ್ಮಧ್ಯಾನ ಹಾಗೂ ಶುಕ್ಲಧ್ಯಾನದಿಂದ ಯಾವನು ಆತ್ಮನನ್ನು ಧ್ಯಾನಿಸುತ್ತಾನೆ. ಅವನಿಗೆ ಪರಮ ಸಮಾಧಿಯಿದೆ. ಸಮ್ಯಗ್ದೃಷ್ಟಿಯ ಮುಂದಿನ ಭೂಮಿಕೆಯಲ್ಲಿ ಮಾಡಲು ಯೋಗ್ಯವಿದೆ. ಉಳಿದವುಗಳನ್ನು ಸಹ ಅಭ್ಯಾಸರೂಪದಿಂದಲೂ ಸಹ ಮಾಡಲು ಯೋಗ್ಯ ಇವೆ.

**ಶ್ಲೋಕ ೨೦೨ :** ಸಮತಾರಹಿತ ಅಂದರೆ ಸಮ್ಯಗ್ದರ್ಶನ ರಹಿತ ಮುನಿಗೆ ಅನಶನಾದಿ ತಪಸ್ಸುಗಳಿಂದ ಫಲ ಇರುವದಿಲ್ಲ. ಅಂದರೆ ಮುಕ್ತಿರೂಪ ಫಲ ಇಲ್ಲ.

ಆದರೆ ಸಂಸಾರರೂಪ ಫಲವಿದೆ. ಆದ್ದರಿಂದ ಹೇ ಮುನಿ! ಅನಾಕುಲ ನಿಜತತ್ವ ಅಂದರೆ ಶುದ್ಧಾತ್ಮನನ್ನು ಭಜಿಸು.

ಮೊದಲು ಶುದ್ಧಾತ್ಮನ ಚಿಂತನ, ನಿರ್ಣಯ, ಲಕ್ಷ್ಯ ಮತ್ತು ಯೋಗ್ಯತೆ ಮಾಡಿ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳುವದು ಯೋಗ್ಯವಿದೆ. ಏಕೆಂದರೆ ತದನಂತರ ಎಲ್ಲ ತಪಸ್ಸುಗಳ ಅಪೂರ್ವ ಫಲ ಅರ್ಥಾತ್ ಮುಕ್ತಿರೂಪಿ ಫಲ ದೊರೆಯುತ್ತದೆ. ಆದ್ದರಿಂದ ಆತ್ಮಪ್ರಾಪ್ತಿಯ ಸಲುವಾಗಿಯೇ ಪೂರ್ಣಪುರುಷಾರ್ಥ ಮಾಡಬೇಕು.

**ಶ್ಲೋಕ ೨೧೧ :** ಯಾವುದು ಸಂಸಾರವನ್ನು ಅಸ್ತ ಮಾಡಿದೆ, ಯಾವುದು ಮಹಾಮುನಿಗಣದ ಅಧಿನಾಯಕರ (ಗಣಧರರ) ಹೃದಯಾರವಿಂದದಲ್ಲಿ ಸ್ಥಿರವಿದೆ. ಯಾವುದು ಭವದ ಕಾರಣವನ್ನು ಬಿಟ್ಟುಕೊಟ್ಟಿದೆ, ಯಾವುದು ಏಕಾಂತದಿಂದ ಶುದ್ಧ ಪ್ರಕಟವಾಗಿದೆ. ಅಂದರೆ ಸರ್ವಥಾ ಶುದ್ಧರೂಪದಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಯಾವುದು ಯಾವಾಗಲೂ ಟಂಕೋತ್ಕೀರ್ಣ ಚೈತನ್ಯ ಸಾಮಾನ್ಯರೂಪವು ತನ್ನ ಮಹಿಮೆಯಲ್ಲಿ ಲೀನವಿದ್ದರೂ ಕೂಡ ಸಮ್ಯಗ್ದೃಷ್ಟಿಗಳಿಗೆ ಗೋಚರವಿದೆ. ಆ ನಿರ್ದೋಷ ಆತ್ಮತತ್ವವು ಜಯವಂತವಿದೆ. ಯಾರು ಯಾವಾಗಲೂ ತನ್ನ ಶುದ್ಧಾತ್ಮನ ಮಹಿಮೆಯಲ್ಲಿ ಲೀನನಾದ ಬಳಿಕ ಸಮ್ಯಗ್ದೃಷ್ಟಿಗಳಿಗೆ ಅನುಭೂತಿಯಲ್ಲಿ ಬರುತ್ತದೆ.

**ಶ್ಲೋಕ ೨೧೬ :** ಈ ಸ್ವಯಂ ಸಿದ್ಧವಾದ ಜ್ಞಾನವು ಪಾಪಪುಣ್ಯರೂಪದ ವನವನ್ನು ಸುಡುವಂಥ ಅಗ್ನಿಯಿದೆ. ಮಹಾಮೋಹಾಂಧಕಾರದ ನಾಶಕವಿದೆ. ಅತಿ ಪ್ರಬಲವಾದ ಪ್ರಕಾಶಮಯವಿದೆ. ವಿಮುಕ್ತಿಯ ಮೂಲವಿದೆ. ಪ್ರಾಮಾಣಿಕವಾದ ಮಹಾಆನಂದ ಸುಖವನ್ನು ಕೊಡುವಂಥದ್ದಿದೆ. ಭವಭವವನ್ನು ಧ್ವಂಸ ಮಾಡುವಲ್ಲಿ ನಿಪುಣರಾದಂಥ ಈ ಜ್ಞಾನವನ್ನು ನಾನು ನಿತ್ಯ ಪೂಜಿಸುತ್ತೇನೆ ಮತ್ತು ಭಾವಿಸುತ್ತೇನೆ. ಅದರಲ್ಲಿಯೇ ಸ್ಥಿರವಾಗಲು ಪುರುಷಾರ್ಥ ಮಾಡುತ್ತೇನೆ.

**ಶ್ಲೋಕ ೨೨೦ :** ಯಾವ ಜೀವನು ಭವಭಯವನ್ನು ನಿವಾರಿಸುವಂಥ ಭವಭೇದಕವಾದ ಈ ಸಮ್ಯಕ್ತ್ವದ, ಶುದ್ಧಜ್ಞಾನದ ಮತ್ತು ಚಾರಿತ್ರದ ಭಕ್ತಿಯನ್ನು ನಿರಂತರ ಮಾಡುತ್ತೇನೆ. ಕಾಮಕ್ರೋಧಾದಿ ಸಮಸ್ತ ದುಷ್ಟ, ಪಾಪಸಮೂಹದಿಂದ ಮುಕ್ತ ಚಿತ್ತವುಳ್ಳ ಜೀವನು ಶ್ರಾವಕನಿರಲಿ ಅಥವಾ ಸಂಯಮಿ ಇರಲಿ ನಿರಂತರ ಭಕ್ತನಿದ್ದಾನೆ.

**ಗಾಥೆ ೧೩೮ :** ಯಾವ ಸಾಧುವು ಎಲ್ಲ ವಿಕಲ್ಪಗಳ ಅಭಾವದಲ್ಲಿ ಆತ್ಮನನ್ನು ತೊಡಗಿಸುತ್ತಾನೆ, ಅವನು ಯೋಗಭಕ್ತಿ ಉಳ್ಳವನಿದ್ದಾನೆ. ಇತರರಿಗೆ ಯೋಗವು ಯಾವ ಪ್ರಕಾರ ಇರುವ ಸಾಧ್ಯತೆ ಇದೆ ? ಅಂದರೆ ಸ್ವಾನುಭೂತಿ ರೂಪ ಯೋಗದ ಹೊರತು ಬೇರೆಯವರಿಗೆ ಇರುವ ಯೋಗವು ಕಾರ್ಯಕಾರಿ ಇಲ್ಲ.

**ಗಾಥೆ ೧೩೯ :** ಯಾವನು ವಿಪರೀತ ಅಭಿನಿವೇಶದ ಪರಿತ್ಯಾಗ ಮಾಡಿ ಜೈನ ಕಥಿತ ತತ್ವಗಳಲ್ಲಿ ಆತ್ಮನನ್ನು ತೊಡಗಿಸುತ್ತಾನೆ. ಅವನ ನಿಜಭಾವವು ಅಂದರೆ ಶುದ್ಧಾತ್ಮಾನುಭೂತಿಯೇ ಯೋಗವಿದೆ.

**ಗಾಥೆ ೧೪೦ :** ವೃಷಭಾದಿ ಜಿನವರೇಂದ್ರರುಗಳು ಈ ಪ್ರಕಾರ ಯೋಗದ ಉತ್ತಮ ಭಕ್ತಿ ಮಾಡಿ ನಿವೃತ್ತಿ ಸುಖವನ್ನು ಪಡೆದುಕೊಂಡಿದ್ದಾರೆ. ಆದುದರಿಂದ ಯೋಗದ ಉತ್ತಮ ಭಕ್ತಿಯನ್ನು ನೀನೂ ಧಾರಣ ಮಾಡು.

**ಶ್ಲೋಕ ೨೩೩ :** ಅಪುನರ್ಭವ ಸುಖದ (ಮುಕ್ತಿ ಸುಖದ) ಸಿದ್ಧಿಯ ಸಲುವಾಗಿ ನಾನು ಶುದ್ಧಯೋಗದ (ಶುದ್ಧಾತ್ಮನಲ್ಲಿ ನನ್ನತನ ಮಾಡುವ ಯೋಗ) ಉತ್ತಮ ಭಕ್ತಿ ಮಾಡುತ್ತೇನೆ. ಅಂದರೆ ಮೇಲಿಂದ ಮೇಲೆ ಭಾವಿಸುತ್ತೇನೆ. ಸಂಸಾರದ ಘೋರ ಭೀತಿಯಿಂದ ಸಮಸ್ತ ಜೀವರು ನಿತ್ಯ ಉತ್ತಮ ಭಕ್ತಿ ಮಾಡುವದು.

**ಶ್ಲೋಕ ೨೪೧ :** ಈ ಕಲಿಕಾಲದಲ್ಲಿ ಎಲ್ಲಿಯಾದರೂ ಓರ್ವ ಭಾಗ್ಯಶಾಲಿಯಾದ ಜೀವನು ಮಿಥ್ಯಾತ್ವಾದಿ ರೂಪದ ಕಲಂಕಪಂಕದಿಂದ ರಹಿತ ಮತ್ತು ಸದ್ಧರ್ಮದ ರಕ್ಷಣೆ ಮಾಡುವಂಥ ಮಣಿಯಾದಂಥ ಸಮರ್ಥ ಮುನಿಯಾಗುತ್ತಾನೆ. ಅವನು ಅನೇಕ ಪರಿಗ್ರಹಗಳ ವಿಸ್ತಾರವನ್ನು ಬಿಟ್ಟಿದ್ದಾನೆ ಮತ್ತು ಆ ಪಾಪರೂಪದ ಕಾನನವನ್ನು ಸುಡುವಂಥ ಅಗ್ನಿ ಇದ್ದಾನೆ. ಅಂಥ ಈ ಮುನಿಯು ಈ ಕಾಲದೊಳಗೆ ಭೂತಲದಲ್ಲಿ ಹಾಗೂ ದೇವಲೋಕದಲ್ಲಿ ದೇವತೆಗಳಿಂದ ಕೂಡ ಚನ್ನಾಗಿ ಪೂಜಿಸಲ್ಪಡುತ್ತಾನೆ.

**ಶ್ಲೋಕ ೨೪೨ :** ಈ ಲೋಕದಲ್ಲಿ ತಪಶ್ಚರ್ಯವು ಸಮಸ್ತ ಸುಬುದ್ಧಿಗಳಿಗೆ ಪ್ರಾಣಪ್ರಿಯವಿದೆ. ಯೋಗ್ಯ ತಪಶ್ಚರ್ಯವು ಅದು ಇಂದ್ರರುಗಳಿಗೂ ಕೂಡ ಯಾವಾಗಲೂ ವಂದನೀಯವಿದೆ. ಅದನ್ನು ಪ್ರಾಪ್ತ ಮಾಡಿಕೊಂಡು ಯಾವನಾದರೂ ಓರ್ವ ಜೀವನು ಕಾಮಾಂಧಕಾರದಿಂದ ಕೂಡಿದ ಸಂಸಾರಜನ್ಯ ಸುಖದಲ್ಲಿ ರಮಿಸುತ್ತಾನೆ. ಆ ಜಡಮತಿಯು ಅರರೇ ! ಕಲಿಯಿಂದ ಹೊಡೆಯಲ್ಪಡುತ್ತಾನೆ. ಅಂದರೆ ಕಲಿಕಾಲದಿಂದ ಗಾಯಗೊಂಡು ನರಕತಿರ್ಯಂಚ ಗತಿಗಳಲ್ಲಿ ಹೋಗುತ್ತಾನೆ.

**ಶ್ಲೋಕ ೨೪೩ :** ಯಾವ ಜೀವನು ಅನ್ಯ ವಶನಿದ್ದಾನೆ ಅವನು ಬೇಕಾದರೆ ಮುನಿವೇಷ ಧರಿಸಿದವನಿದ್ದರೂ ಕೂಡ ಸಂಸಾರಿ ಇದ್ದಾನೆ. ನಿತ್ಯ ದುಃಖ ಭೋಗಿಸುವವನಿದ್ದಾನೆ. ಯಾವ ಜೀವನು ಸ್ವವಶನಿದ್ದಾನೆ. ಅವನು ಜೀವನ್ಮುಕ್ತನಿದ್ದಾನೆ. ಜಿನೇಶ್ವರರಿಂದ ಕಿಂಚಿತ್ ಕಡಿಮೆ ಇದ್ದಾನೆ. ಅಂದರೆ ಅವನಲ್ಲಿ ಜಿನೇಶ್ವರದೇವರ ಅಪೇಕ್ಷೆಯಿಂದ ಸ್ವಲ್ಪವೇ ಕೊರತೆಯಿದೆ.

ಸಮ್ಯಗ್ದರ್ಶನ ಸಹಿತ ಮುನಿಯಲ್ಲಿ ಜಿನೇಶ್ವರ ದೇವರ ಅಪೇಕ್ಷಾ ಸ್ವಲ್ಪವೇ ಕಡಿಮೆ ಇದೆ. ಅಂತಹ ಮುನಿ ಬೇಗನೇ ಜಿನತ್ವ ಪ್ರಾಪ್ತ ಮಾಡಲು ಯೋಗ್ಯರಿದ್ದಾರೆ ಮತ್ತು ಸಮ್ಯಗ್ದರ್ಶನ ರಹಿತ ಮುನಿವೇಷ ಧಾರಿಗಳು ಸಹ ಮೊದಲು ಸಮ್ಯಗ್ದರ್ಶನ ಪ್ರಾಪ್ತ ಮಾಡುವದು ಅವಶ್ಯವಿದೆ. ಯೋಗ್ಯವೂ ಇದೆ. ಏಕೆಂದರೆ ಅದರ ಹೊರತು ಮೋಕ್ಷಮಾರ್ಗ ಪ್ರಾರಂಭವೇ ಆಗುವದಿಲ್ಲ. ಹೀಗೆ ಉಪದೇಶವಿದೆ.

**ಶ್ಲೋಕ ೨೪೪ :** ಹೀಗಿರುವದರಿಂದಲೇ ಜಿನನಾಥರ ಮಾರ್ಗದಲ್ಲಿ ಮುನಿವರ್ಗದೊಳಗೆ ಸ್ವವಶನಾದ ಮುನಿಯು ಯಾವಾಗಲೂ ಶೋಭಿಸುತ್ತಾನೆ

ಮತ್ತು ಅನ್ಯ ವಶನಾದ ಮುನಿಯು ಸೇವಕರ ಸಮೂಹದಲ್ಲಿ ರಾಜವಲ್ಲಭನಾದ ಸೇವಕನ ಸಮಾನ ಶೋಭಿಸುತ್ತಾನೆ

**ಶ್ಲೋಕ ೨೪೫ :** ಮುನೀಶ್ವರರುಗಳು ದೇವಲೋಕಾದಿಗಳ ಕ್ಲೇಶದ ಕುರಿತಾದ ಪ್ರೀತಿಯನ್ನು ಬಿಡಬೇಕು ಮತ್ತು ನಿರ್ವಾಣದ ಕಾರಣನಾದಂಥ ಸಹಜ ಪರಮಾತ್ಮನನ್ನು ಸ್ಮರಿಸಬೇಕು. ಆ ಸಹಜ ಪರಮಾತ್ಮನು ಪರಮಾನಂದಮಯನಿದ್ದಾನೆ ಸರ್ವಥಾ ನಿರ್ಮಲ ಜ್ಞಾನದ ಆವಾಸನಿದ್ದಾನೆ. ನಿರಾವರಣ ಸ್ವರೂಪನಿದ್ದಾನೆ ಮತ್ತು ಸುನಯ ಮತ್ತು ಕುನಯಗಳ ಸಮೂಹದಿಂದ ದೂರನಿದ್ದಾನೆ. ಅವನನ್ನು ಭಜಿಸಬೇಕು.

**ಗಾಥಾ ೧೪೫ :** ಯಾವನು ದ್ರವ್ಯ-ಗುಣ ಪರ್ಯಾಯಗಳಲ್ಲಿ ಅಂದರೆ ಅವುಗಳ ವಿಕಲ್ಪಗಳಲ್ಲಿ ಮನಸ್ಸನ್ನು ತೊಡಗಿಸುತ್ತಾನೆ. ಅವನು ಕೂಡ ಅನ್ಯ ವಶನಿದ್ದಾನೆ ಎಂದು ಮೋಹಾಂಧಕಾರರಹಿತ ಶ್ರಮಣರು ಹೇಳುತ್ತಾರೆ.

ನಿರ್ವಿಕಲ್ಪ ಶುದ್ಧಾತ್ಮನಲ್ಲಿಯೇ ಉಪಯೋಗವನ್ನು ತೊಡಗಿಸುವದು ಯೋಗ್ಯವಿದೆ. ಈ ಅಪೇಕ್ಷೆಯಿಂದ ಭೇದರೂಪ ವ್ಯವಹಾರವು ಹೇಯವಿದೆ. ಅವರ ಉಪಯೋಗವು ವಸ್ತುವಿನ ಸ್ವರೂಪ ತಿಳಿಯುವ ಸಲುವಾಗಿಯೇ ಇರುತ್ತದೆ. ಹೇಗೆಂದರೆ ದ್ರವ್ಯಗುಣ ಪರ್ಯಾಯ ಅಥವಾ ಉತ್ಪಾದ-ವ್ಯಯ ಧ್ರೌವ್ಯ ಮತ್ತು ಅನಂತ ಗುಣ ಇತ್ಯಾದಿ. ಆದರೆ ಆ ಎಲ್ಲ ಭೇದಗಳು ವಿಕಲ್ಪರೂಪವಾಗಿರುವದರಿಂದ ಮತ್ತು ವಸ್ತುವಿನ ಸ್ವರೂಪವು ಅಭೇದವಾಗಿರುವದರಿಂದ ಭೇದರೂಪ ವ್ಯವಹಾರದಿಂದ ವಸ್ತು ಹೇಗಿದೆಯೋ ಹಾಗೆಯೇ ತಿಳಿದುಕೊಂಡು ಭೇದದಲ್ಲಿ ಇರದೇ ಅಭೇದದಲ್ಲಿಯೇ ಇರುವದು ಯೋಗ್ಯವಿದೆ.

**ಪ್ರಶ್ನೆ : ಕೆಲವರ ಮನಸ್ಸಿನಲ್ಲಿ ವಿಕಲ್ಪವಿದೆ. ಏನಂದರೆ ದೃಷ್ಟಿಯ ವಿಷಯವು ಪರ್ಯಾಯದಿಂದ ರಹಿತ ದ್ರವ್ಯವಿದೆ ಅಲ್ಲವೇ ?**

**ಉತ್ತರ :** ಹೀಗೆ ವಿಕಲ್ಪ ಮಾಡುವದರಿಂದ ಅಲ್ಲಿ ದ್ವೈತದ ಜನ್ಮವಾಗುತ್ತದೆ. ಅಂದರೆ ಒಂದು ಅಭೇದ ದ್ರವ್ಯದಲ್ಲಿ ದ್ರವ್ಯ ಮತ್ತು ಪರ್ಯಾಯರೂಪ ದ್ವೈತದ ಜನ್ಮವಾಗುವದರಿಂದ ಅಭೇದದ ಅನುಭವ ಆಗುವದಿಲ್ಲ. ಅಂದರೆ ಸಮ್ಯಗ್ದರ್ಶನದ ವಿಷಯವು ಅಭೇದ, ಶುದ್ಧ ದ್ರವ್ಯಾರ್ಥಿಕ ನಯದಿಂದ 'ಶುದ್ಧಾತ್ಮ' ಇದ್ದಾನೆ ಮತ್ತು ಶುದ್ಧ ದ್ರವ್ಯಾರ್ಥಿಕ ನಯದಲ್ಲಿ ಪರ್ಯಾಯವು ಅತ್ಯಂತ ಗೌಣವಾಗಿ ಹೋಗುವದರಿಂದ ತಿಳಿದುಬರುವದೇ ಇಲ್ಲ ಅಥವಾ ಅದರ ವಿಕಲ್ಪವು ಸಹ ಬರುವದಿಲ್ಲ. ಆದ್ದರಿಂದ ಅಭೇದರೂಪ ಶುದ್ಧಾತ್ಮನ ಅನುಭವ ಆಗುತ್ತದೆ. ಹೇಗೆಂದರೆ ಅದರಲ್ಲಿ ವಿಭಾವ ಪರ್ಯಾಯವು ಅತ್ಯಂತ ಗೌಣ ಇರುತ್ತದೆ. ನಿರ್ವಿಕಲ್ಪ ಸಮ್ಯಗ್ದರ್ಶನದ ವಿಧಿ ಹೀಗೆಯೇ ಇದೆ. ಅಂದರೆ ಅದರಲ್ಲಿ ದ್ರವ್ಯವನ್ನು ಪರ್ಯಾಯರಹಿತ ಪ್ರಾಪ್ತ ಮಾಡುವ ಅಥವಾ ಯಾವದೇ ವಿಭಾವ-ಭಾವದ ನಿಷೇಧದ ವಿಕಲ್ಪ ಮಾಡದೇ ಕೇವಲ ಸಮ್ಯಗ್ದರ್ಶನದ ವಿಷಯ ರೂಪ ಶುದ್ಧಾತ್ಮನನ್ನೇ ಶುದ್ಧ ದ್ರವ್ಯಾರ್ಥಿಕ ನಯದಿಂದ ಸ್ವೀಕಾರ ಮಾಡಿದ ಬಳಿಕ ಉಳಿದೆಲ್ಲವೂ ತಮ್ಮಿಂದ

ತಾವೇ ಅತ್ಯಂತ ಗೌಣವಾಗಿಬಿಡುತ್ತವೆ. ಯಾರು ಕೇವಲ ನಿಷೇಧರೂಪ ವಿಕಲ್ಪ ಮಾಡುತ್ತಾರೆ. ಅವರು ನಿರ್ವಿಕಲ್ಪ ಸ್ವರೂಪದ ಅನುಭವ ಮಾಡಲಾರರು ಕೇವಲ ಭ್ರಮೆಯಲ್ಲಿಯೇ ಇರುತ್ತಾರೆ. ತಮ್ಮನ್ನು ಸಮ್ಯಗ್ದೃಷ್ಟಿ ಎಂದು ತಿಳಿದು ಅನಂತ ಪರಾವರ್ತನೆಗೆ ಆಮಂತ್ರಣ ನೀಡುತ್ತಾರೆ. ಇದು ಕರುಣೆಯನ್ನು ಹುಟ್ಟಿಸುವಂಥ ಮಾತಿದೆ.

**ಶ್ಲೋಕ ೨೪೬ :** ಯಾವ ಪ್ರಕಾರ ಇಂಧನಯುಕ್ತ ಅಗ್ನಿಯು ವೃದ್ಧಿ ಹೊಂದುತ್ತದೆ. ಅಂದರೆ ಎಲ್ಲಿಯವರೆಗೆ ಇಂಧನವಿದೆ. ಅಲ್ಲಿಯವರೆಗೆ ಅಗ್ನಿಯು ವೃದ್ಧಿಯಾಗುತ್ತದೆ. ಅದೇ ಪ್ರಕಾರ ಎಲ್ಲಿಯವರೆಗೆ ಜೀವರುಗಳಿಗೆ ಚಿಂತೆಯಿದೆ. ಅಂದರೆ ವಿಕಲ್ಪಗಳಿವೆ ಅಲ್ಲಿಯ ವರೆಗೆ ಸಂಸಾರವಿದೆ.

**ಗಾಥೆ ೧೪೬ :** ಯಾವನು ಪರಭಾವಗಳನ್ನು ಪರಿತ್ಯಾಗ ಮಾಡಿ ನಿರ್ಮಲ ಸ್ವಭಾವವುಳ್ಳ ಆತ್ಮನನ್ನು ಧ್ಯಾನಿಸುತ್ತಾನೆ. ಅವನು ನಿಜವಾಗಿಯೂ ಆತ್ಮವಶನಿದ್ದಾನೆ ಮತ್ತು ಅವನಿಗೆ ಆವಶ್ಯಕ ಅಂದರೆ ನಿಶ್ಚಯ ಪರಮ ಕರ್ಮವಿದೆ ಎಂದು ಜನರು ಹೇಳಿದ್ದಾರೆ. ಅಂದರೆ ಆತ್ಮಧ್ಯಾನವು ಪರಮ ಆವಶ್ಯಕ ಇರುತ್ತದೆ.

**ಶ್ಲೋಕ ೨೫೨ :** ಯಾವನು ನಿಜರಸದ ವಿಸ್ತಾರ ರೂಪದ ಪೂರದಿಂದ ಪಾಪಗಳನ್ನು ಎಲ್ಲ ನಿಟ್ಟಿನಿಂದ ತೊಳೆದು ಹಾಕಿದ್ದಾನೆ. ಯಾವನು ಸಹಜ ಸಮತಾರಸದಿಂದ ಪೂರ್ಣ ತುಂಬಿರುವದರಿಂದ ಪವಿತ್ರನಿದ್ದಾನೆ. ಯಾವನು ಪುರಾಣ (ಸನಾತನ) ಇದ್ದಾನೆ, ಯಾವನು ಸ್ವ ವಶದಿಂದ ಮನಸ್ಸಿನಲ್ಲಿ ಸದಾ ಸುಸ್ಥಿತನಿದ್ದಾನೆ ಮತ್ತು ಯಾವನು ಶುದ್ಧ ಸಿದ್ಧ ಭಗವಂತರ ಸಮಾನನಿದ್ದಾನೆ. ಇಂಥ ಸಹಜ ತೇಜರಾಶಿಯಲ್ಲಿ ಮಗ್ನನಾದ ಜೀವನು ಜಯವಂತನಿದ್ದಾನೆ.

**ಗಾಥೆ ೧೪೭ :** ಒಂದು ವೇಳೆ ನೀನು ಅವಶ್ಯಕಗಳನ್ನು ಅಪೇಕ್ಷಿಸುತ್ತಿದ್ದರೆ ನೀನು ಆತ್ಮ ಸ್ವಭಾವಗಳಲ್ಲಿ ಸ್ಥಿರಭಾವ ಮಾಡುವೆ. ಅದರಿಂದ ಜೀವನಿಗೆ ಸಾಮಾಯಿಕ ಗುಣವು ಸಂಪೂರ್ಣವಾಗುತ್ತದೆ. ಅಂದರೆ ಯಾವ ಜೀವನು ಶುದ್ಧಾತ್ಮನಲ್ಲಿಯೇ ಸ್ಥಿರಭಾವ ಮಾಡುತ್ತಾನೆ, ಅವನಿಗೇನೇ ನಿಜವಾದ ಸಾಮಾಯಿಕ ಆಗುತ್ತದೆ. ಅವನಿಗೇನೇ ಅಪೂರ್ವ ನಿರ್ಜರೆ ಆಗುತ್ತದೆ.

**ಶ್ಲೋಕ ೨೫೭ :** ಸ್ವವಶನಾದ ಮುನೀಂದ್ರನಿಗೆ ಉತ್ತಮ ಸ್ವಾತ್ಮ ಚಿಂತನೆ (ನಿಜ ಆತ್ಮಾನುಭವ) ಆಗುತ್ತದೆ ಮತ್ತು ಈ (ನಿಜಾತ್ಮಾನುಭವ ರೂಪ) ಆವಶ್ಯಕ ಕರ್ಮವು ಅವನಿಗೆ ಮುಕ್ತಿ ಸೌಖ್ಯದ ಕಾರಣವಾಗುತ್ತದೆ.

**ಗಾಥೆ ೧೫೧ :** ಯಾವನು ಧರ್ಮಧ್ಯಾನ ಮತ್ತು ಶುಕ್ಲಧ್ಯಾನದಲ್ಲಿ ಪರಿಣತನಿದ್ದಾನೆ, ಅವನೂ ಕೂಡ ಅಂತರಾತ್ಮನಿದ್ದಾನೆ. ಧ್ಯಾನವಿಹೀನನಾದ ಶ್ರಮಣನು ಬಹಿರಾತ್ಮನಿದ್ದಾನೆ ಎಂದು ತಿಳಿಯುವದು.

**ಗಾಥೆ ೧೫೪ :** ಒಂದು ವೇಳೆ ಮಾಡುವ ಸಾಧ್ಯತೆಯಿದ್ದರೆ ಧ್ಯಾನಮಯವಾದ ಪ್ರತಿಕ್ರಮಣ ಮೊದಲಾದುವನ್ನು ಮಾಡು. ಒಂದು ವೇಳೆ ನೀನು ಶಕ್ತಿವಿಹೀನನಿದ್ದರೆ ಅಲ್ಲಿಯವರೆಗೆ ಶ್ರದ್ಧೆಯನ್ನೇ ಮಾಡುತ್ತಿರು.

**ಶ್ಲೋಕ ೨೬೪ :** ಅಸಾರ ಸಂಸಾರದಲ್ಲಿ ಪಾಪದಿಂದ ತುಂಬಿದ ಕಲಿಕಾಲದ ವಿಲಾಸವಿರುವದರಿಂದ ನಿರ್ದೋಷವಾದ ಜಿನನಾಥರ ಮಾರ್ಗದಲ್ಲಿ ಮುಕ್ತಿ ಇರುವದಿಲ್ಲ. ಆದ್ದರಿಂದ ಈ ಕಾಲದಲ್ಲಿ ಅಧ್ಯಾತ್ಮ ಧ್ಯಾನ ಹೇಗಾಗಲು ಸಾಧ್ಯವಿದೆ ? ಆದ್ದರಿಂದ ನಿರ್ಮಲ ಬುದ್ಧಿಯುಳ್ಳವರು ಭವಭಯದ ನಾಶ ಮಾಡುವಂಥ ನಿಜಾತ್ಮನ ಶ್ರದ್ಧೆಯನ್ನು ಸ್ವೀಕರಿಸುತ್ತಾರೆ. ಈ ಕಾಲದಲ್ಲಿ ಸಮ್ಯಗ್ದರ್ಶನವು ಅತ್ಯಂತ ದುರ್ಲಭ ಇರುವದರಿಂದ ಮೇಲೆ ಹೇಳಿದಂತೆ ನಿಮ್ಮ ಆತ್ಮನ ಶ್ರದ್ಧೆ ಮಾಡುವದೇ ಪರಮ ಕರ್ತವ್ಯವಿದೆ. ಇದುವೇ ಕಾರ್ಯಕಾರಿಯಿದೆ. ನಿಜವಾದ ಭಕ್ತಿಯಿದೆ.

**ಗಾಥೆ ೧೫೬ :** ನಾನಾ ಪ್ರಕಾರದ ಜೀವರುಗಳಿದ್ದಾರೆ. ನಾನಾ ಪ್ರಕಾರದ ಕರ್ಮವಿದೆ. ನಾನಾ ಪ್ರಕಾರದ ಲಬ್ಧಿಗಳಿವೆ. ಆದ್ದರಿಂದ ಸ್ವಸಮಯಿಗಳ ಹಾಗೂ ಪರಸಮಯಿಗಳ ಜತೆ (ಸ್ವಧರ್ಮಿಯರ ಹಾಗೂ ಪರಧರ್ಮಿಯರ ಜೊತೆ) ವಚನ ವಿವಾದವು ವರ್ಜಿಸಲು ಯೋಗ್ಯವಿದೆ.

ತತ್ವದ ಸಲುವಾಗಿ ಸ್ವಲ್ಪವೂ ಸಹ ವಾದ-ವಿವಾದ, ವೈರ-ವಿರೋಧ, ಜಗಳ ಎಂದೂ ಸಹ ಮಾಡಲು ಯೋಗ್ಯವಿರುವದಿಲ್ಲ. ಏಕೆಂದರೆ ಅದರಿಂದ ತತ್ವದ್ದೇ ಸೋಲು ಆಗುತ್ತದೆ. ಧರ್ಮವೇ ನಾಚುತ್ತದೆ. ಎರಡೂ ಪಕ್ಷಗಳಿಗೆ ಧರ್ಮ ಪ್ರಾಪ್ತವಾಗುವದಿಲ್ಲ. ಆದ್ದರಿಂದ ಅದರಲ್ಲಿ ವಾದ-ವಿವಾದ, ವೈರ-ವಿರೋಧ, ಜಗಳ ತ್ಯಾಗ ಮಾಡಲು ಯೋಗ್ಯವಿದೆ.

**ಶ್ಲೋಕ ೨೭೧ :** ಹೇಯರೂಪವಾದಂಥ ಕನಕ ಮತ್ತು ಕಾಮಿನಿಯರ ಸಂಬಂಧದ ಮೋಹವನ್ನು ಬಿಟ್ಟುಕೊಟ್ಟು ಎಲೈ ಚಿತ್ತವೇ ! ನಿರ್ಮಲ ಸುಖದ (ಅತೀಂದ್ರಿಯ ಸುಖದ) ಸಲುವಾಗಿ ಪರಮ ಗುರುಗಳ ಮುಖಾಂತರ ಧರ್ಮವನ್ನು ಪ್ರಾಪ್ತ ಮಾಡಿಕೊಂಡು ನೀನು ಶಾಂತ ಸ್ವರೂಪನಾದ ಪರಮಾತ್ಮನಲ್ಲಿ ಅಂದರೆ ಪರಮ ಪಾರಿಣಾಮಿಕ ಭಾವರೂಪಿ ಶುದ್ಧಾತ್ಮನಲ್ಲಿ ನಿತ್ಯ ಆನಂದ ಉಳ್ಳವನಾಗು. ಅವನು ನಿರುಪಮ ಗುಣಗಳಿಂದ ಅಲಂಕೃತನಿರುವನು. ದಿವ್ಯಜ್ಞಾನ ಉಳ್ಳವನಿದ್ದಾನೆ. ಅವನಲ್ಲಿ ಬೇಗನೇ ಪ್ರವೇಶ ಮಾಡು.

**ಗಾಥೆ ೧೬೪ :** ವ್ಯವಹಾರ ನಯದಿಂದ ಜ್ಞಾನವು ಪರಪ್ರಕಾಶಕವಿದೆ. ಆದ್ದರಿಂದ ದರ್ಶನವು ಸಹ ಪರಪ್ರಕಾಶವಿದೆ. ವ್ಯವಹಾರ ನಯದಿಂದ ಆತ್ಮನು ಪರಪ್ರಕಾಶಕನಿದ್ದಾನೆ. ಆದ್ದರಿಂದ ದರ್ಶನವು ಕೂಡ ಪರಪ್ರಕಾಶಕವಿದೆ. ಯಾವುದು ಜ್ಞಾನವಿದೆ ಅಥವಾ ದರ್ಶನವಿದೆ ಅದುವೇ ಆತ್ಮವಿದೆ ಮತ್ತು ಪ್ರಕಾಶನದಲ್ಲಿ (ಜ್ಞೇಯಾಕಾರ ರೂಪ ಜ್ಞಾನದ ಪರಿಣಮನದಲ್ಲಿ) ಸಾಮಾನ್ಯ ಜ್ಞಾನವು ಮತ್ತು ಜ್ಞೇಯಾಕಾರ ಅಂದರೆ ಜ್ಞಾನಾಕಾರ ಹೀಗೆ ಭೇದವಾಗುವದರಿಂದ ಸ್ವದಿಂದ ಕಥಂಚಿತ್ ಭಿನ್ನವೆಂದು

ಹೇಳುತ್ತಾರೆ. ಯಾವಾಗ ಪರಪ್ರಕಾಶನದಲ್ಲಿ ಜ್ಞೇಯಾಕಾರ ರೂಪ ಯಾವ ಜ್ಞಾನದ ಪರಿಣಮನ ಆಗುತ್ತದೆ, ಅದು ವಿಕಲ್ಪರೂಪವಿದೆ. ಮತ್ತು ಅದರಿಂದ ಅದು ಭೇದರೂಪ ಆಗಿರುವದರಿಂದ ಅದನ್ನು ವ್ಯವಹಾರ ರೂಪವೆಂದು ಹೇಳಿದ್ದಾರೆ.

**ಗಾಥೆ ೧೭೦ :** ಜ್ಞಾನವು ಜೀವದ ಸ್ವರೂಪವಿದೆ. ಆದುದರಿಂದ ಆತ್ಮನು ಆತ್ಮನನ್ನು ತಿಳಿಯುತ್ತಾನೆ. ಒಂದು ವೇಳೆ ಜ್ಞಾನವು ಆತ್ಮನನ್ನು ತಿಳಿಯದಿದ್ದರೆ ಅದು ಆತ್ಮನಿಂದ ಭಿನ್ನವಾಗಿದೆ ಎಂದು ಸಿದ್ಧವಾಗುವದು.

**ಗಾಥೆ ೧೭೧ :** ಜೀವವು ಅದು ಜ್ಞಾನವಿದೆ ಮತ್ತು ಜ್ಞಾನವು ಜೀವವಿದೆ. ಈ ಕಾರಣದಿಂದ ತನ್ನ ಪ್ರಕಾಶಕ ಜ್ಞಾನವು ಹಾಗೂ ದೃಷ್ಟಿಯಿದೆ. ಆತ್ಮನನ್ನು ಜ್ಞಾನವೆಂದು ತಿಳಿ ಮತ್ತು ಜ್ಞಾನವು ಆತ್ಮವಿದೆ ಎಂದು ತಿಳಿ. ಇದರಲ್ಲಿ ಯಾವ ಸಂದೇಹವೇ ಇಲ್ಲ. ಆದ್ದರಿಂದ ಜ್ಞಾನ ಹಾಗೂ ದರ್ಶನಗಳು ಸ್ವ-ಪರ ಪ್ರಕಾಶಕವಿವೆ.

**ಗಾಥೆ ೧೭೨ :** ತಿಳಿಯುತ್ತಿದ್ದರೂ ಮತ್ತು ನೋಡುತ್ತಿದ್ದರೂ ಕೂಡ ಕೇವಲಿಗೆ ಇಚ್ಛಾಪೂರ್ವಕವಾದ ವರ್ತನವು ಇರುವದಿಲ್ಲ. ಆದ್ದರಿಂದ ಅವರಿಗೆ 'ಕೇವಲಜ್ಞಾನಿ' ಎಂದು ಹೇಳಿದ್ದಾರೆ. ಅದರಿಂದ ಅವರಿಗೆ ಅಬಂಧಕ ಎಂದು ಹೇಳಿದ್ದಾರೆ. ಅವರಿಗೆ ಪರದಲ್ಲಿ ಇಷ್ಟ-ಅನಿಷ್ಟ ಬುದ್ಧಿ ಇರುವದಿಲ್ಲ. ಅಂದರೆ ಪರವನ್ನು ತಿಳಿಯುವದು ಜೀವನಿಗೆ ದೋಷಕಾರಕ ಇರುವದಿಲ್ಲ. ಆದರೆ ಪರದಲ್ಲಿ ಇಷ್ಟ-ಅನಿಷ್ಟ ಬುದ್ಧಿಯೇ ನಿಯಮದಿಂದ ದೋಷಕಾರಕ ಅಂದರೆ ಬಂಧದ ಕಾರಣವಿದೆ.

**ಶ್ಲೋಕ ೨೮೭ :** ಆತ್ಮನನ್ನು ಜ್ಞಾನದರ್ಶನ ಸ್ವರೂಪನೆಂದು ತಿಳಿ ಮತ್ತು ಜ್ಞಾನದರ್ಶನಗಳನ್ನು ಆತ್ಮನೆಂದು ತಿಳಿ. ಸ್ವ ಮತ್ತು ಪರದಂಥ ತತ್ವಗಳನ್ನು (ಸಮಸ್ತ ಪದಾರ್ಥಗಳನ್ನು) ಆತ್ಮನು ಸ್ಪಷ್ಟ ರೂಪದಿಂದ ಪ್ರಕಾಶಿತ ಮಾಡುತ್ತಾನೆ.

**ಶ್ಲೋಕ ೨೯೭ :** ಭಾವಗಳು ಐದು ಇವೆ. ಅವುಗಳಲ್ಲಿ ಈ ಪರಮ ಪಾರಿಣಾಮಿಕ ಭಾವವು ನಿರಂತರ ಸ್ಥಾಯಿಯಿದೆ. ಸಂಸಾರದ ನಾಶಕ್ಕೆ ಕಾರಣವಿದೆ ಮತ್ತು ಸಮ್ಯಕ್‌ದೃಷ್ಟಿಗಳಿಗೆ ಗೋಚರವಿದೆ. ಅಂದರೆ ಅನುಭವದಲ್ಲಿ ಬರುತ್ತದೆ. ಬುದ್ಧಿವಂತ ಪುರುಷನು ಸಮಸ್ತ ರಾಗ ದ್ವೇಷದ ಸಮೂಹವನ್ನು ಬಿಟ್ಟುಕೊಟ್ಟು ಅಂದರೆ ದ್ರವ್ಯದೃಷ್ಟಿಯಿಂದ ಸಮಸ್ತ ವಿಭಾವ-ಭಾವಗಳನ್ನು ಅತ್ಯಂತ ಗೌಣ ಮಾಡಿ ಆ ಪಂಚಮ ಭಾವವನ್ನು ತಿಳಿದುಕೊಂಡು ಅಂದರೆ ಶುದ್ಧಾತ್ಮನ ಅನುಭೂತಿ ಮಾಡಿಕೊಂಡು ಏಕಾಕಿಯಾಗಿ ಕಲಿಯುಗದಲ್ಲಿ ಪಾಪ ವನಕ್ಕೆ ಅಗ್ನಿರೂಪ ಮುನಿವರನ ರೂಪದಲ್ಲಿ ಶೋಭಿಸುತ್ತಾನೆ. (ಅಂದರೆ ಯಾವ ಬುದ್ಧಿವಂತ ಪುರುಷನು ಉಗ್ರರೂಪದಿಂದ ಪರಮ ಪಾರಿಣಾಮಿಕ ಭಾವದ ಆಶ್ರಯ ಮಾಡುತ್ತಾನೆ. ಅವನೊಬ್ಬ ಪುರುಷನು ಪಾಪ ವನವನ್ನು ಸುಡುವಲ್ಲಿ ಅಗ್ನಿ ಸಮಾನನಾದ ಮುನಿವರನಿದ್ದಾನೆ.

**ಶ್ಲೋಕ ೨೯೯ :** ಆತ್ಮನ ಆರಾಧನೆಯಿಲ್ಲದ ಜೀವವನ್ನು ಅಪರಾಧಿ ಎಂದು ಮನ್ನಿಸಲಾಗಿದೆ. ಆದ್ದರಿಂದ ನಾನು ಆನಂದ ಮಂದಿರನಾದ ಆತ್ಮನನ್ನು ಅಂದರೆ

ಶುದ್ಧಾತ್ಮನನ್ನು ನಿತ್ಯ ನಮನ ಮಾಡುತ್ತಾನೆ. ಅಂದರೆ ಆತ್ಮನ ಲಕ್ಷ್ಯದಿಂದ ಹೊರತು ಎಲ್ಲ ಸಾಧನೆಗಳು, ಆರಾಧನೆಗಳು ಅಪರಾಧದಿಂದ ಕೂಡಿರುತ್ತವೆ ಎಂದು ಹೇಳಿದ್ದಾರೆ. ಏಕೆಂದರೆ ಅದರ ಫಲವು ಅನಂತ ಸಂಸಾರವಿದೆ.

ಈ ಪ್ರಕಾರ ನಿಯಮಸಾರ ಶಾಸ್ತ್ರದಲ್ಲಿ ನಿಯಮದಿಂದ ಕಾರಣ ಸಮಯಸಾರ ರೂಪ ನಿಜಶುದ್ಧಾತ್ಮ ಯಾರೆಂದರೆ ಪರಮ ಪಾರಿಣಾಮಿಕ ಭಾವರೂಪ ಅರ್ಥಾತ್ ಸಹಜ ಪರಿಣಮನ ರೂಪವಿದೆ. ಅದನ್ನೇ ತಿಳಿಯಲು, ಅದರಲ್ಲಿಯೇ 'ನನ್ನತನ' ಮಾಡಲು ಅದನ್ನೇ ಭಜಿಸಲು ಮತ್ತು ಅದರಲ್ಲಿಯೇ ಸ್ಥಿರತೆ ಹೊಂದಲು ಹೇಳಿದ್ದಾರೆ. ಇದುವೇ ಮೋಕ್ಷಮಾರ್ಗದ ನಿಶ್ಚಿತ ನಿಯಮ ಅರ್ಥಾತ್ ಕ್ರಮವಿದೆ. ಆದ್ದರಿಂದ ಇದುವೇ ನಿಶ್ಚಿತ ನಿಯಮದ ಸಾರ ಅರ್ಥಾತ್ ನಿಯಮಸಾರ ಹೇಳಿದ್ದಾರೆ.

★★★

## ೩೧. ಪಂಚಾಸ್ತಿಕಾಯ ಸಂಗ್ರಹದ ಗಾಥೆಗಳು

ಈಗ ನಾವು ಶ್ರೀ ಪಂಚಾಸ್ತಿಕಾಯ ಸಂಗ್ರಹ ಶಾಸ್ತ್ರದ ಕೆಲವು ಗಾಥೆಗಳನ್ನು ನೋಡೋಣ –

**ಗಾಥೆ ೧೬೫ :** ಶುದ್ಧ, ಶುಭ ಭಕ್ತಿಭಾವದಿಂದ ದುಃಖದ ಮೋಕ್ಷವಾಗುತ್ತದೆ. ಒಂದು ವೇಳೆ ಅಜ್ಞಾನದ ಕಾರಣವಾಗಿ ಜ್ಞಾನಿಯು ಮನ್ನಿಸಿದರೆ ಅವನು ಪರಸಮಯರತನಾದ ಜೀವನಿದ್ದಾನೆ ಅರಹಂತ ಮೊದಲಾದವರ ಕುರಿತು ಭಕ್ತಿ ಅನುರಾಗವುಳ್ಳ ಮಂದ ಶುದ್ಧಿಯಿಂದಲೂ ಕ್ರಮದಿಂದ ಮೋಕ್ಷವಾಗುತ್ತದೆ. ಅಜ್ಞಾನದ ಕಾರಣವಾಗಿ (ಶುದ್ಧಾತ್ಮ ಸಂವೇದನೆಯ ಅಭಾವದ ಕಾರಣ ರಾಗಾಂಶ ಉಂಟಾಗಿ) ಜ್ಞಾನಿಗೂ ಕೂಡ (ಮಂದಪುರುಷಾರ್ಥವುಳ್ಳ) ಒಲವಿನ ವೃತ್ತಿಯಾದರೆ ಅಲ್ಲಿಯ ವರೆಗೆ ಅವನೂ ಕೂಡ ಸೂಕ್ಷ್ಮವಾದ ಪರಸಮಯದಲ್ಲಿ ಮಗ್ನನಿದ್ದಾನೆ. ಅಂದರೆ ಶುಭಭಾವ ರೂಪ ಜಿನಭಕ್ತಿಯಿಂದ ಮುಕ್ತಿ ದೊರೆಯುತ್ತದೆ. ಹೀಗೆ ಯಾರು ಮನ್ನಿಸುತ್ತಾರೆ ಅವನು ಮಿಥ್ಯಾದೃಷ್ಟಿ ಇದ್ದಾರೆ.

**ಗಾಥೆ ೧೬೬ :** ಅರಹಂತ, ಸಿದ್ಧ, ಚೈತ್ಯ, ಶಾಸ್ತ್ರ, ಮುನಿಗಣ ಮತ್ತು ಜ್ಞಾನದ ಕುರಿತು ಭಕ್ತಿಸಂಪನ್ನನಾದ ಜೀವನು ಬಹಳಷ್ಟು ಪುಣ್ಯವನ್ನು ಕಟ್ಟಿಕೊಳ್ಳುತ್ತಾನೆ. ಆದರೆ ವಾಸ್ತವಿಕವಾಗಿ ಅವನು ಕರ್ಮದ ಕ್ಷಯ ಮಾಡುವದಿಲ್ಲ.

ಆದರೆ ಮೋಕ್ಷಮಾರ್ಗವು ಕೇವಲ ಸ್ವಾತ್ಮಾನುಭೂತಿ ರೂಪ ಸಮ್ಯಗ್ದರ್ಶನದ ಹೊರತು ದೊರೆಯುವದೇ ಇಲ್ಲ. ಇದನ್ನೇ ದೃಢ ಮಾಡುವದಿದೆ. ಆದ್ದರಿಂದ ಎಲ್ಲರಿಗೂ ಸಮ್ಯಗ್ದರ್ಶನದ ಸಲುವಾಗಿಯೇ ಎಲ್ಲ ಪ್ರಯತ್ನವನ್ನು ಮಾಡಬೇಕಾಗಿದೆ.

**ಗಾಥೆ ೧೬೯ :** ಆದ್ದರಿಂದ ಮೋಕ್ಷಾರ್ಥಿ ಜೀವವು (ಮುಮುಕ್ಷು) ನಿಃಸಂಗ (ಅಂದರೆ ತನ್ನನ್ನು ಶುದ್ಧಾತ್ಮರೂಪ ಅನುಭವ ಮಾಡಿ, ಏಕೆಂದರೆ ಆ ಭಾವವು ತ್ರಿಕಾದಲ್ಲಿಯೂ ನಿಃಸಂಗವಿದೆ) ಮತ್ತು ನಿರ್ಮಮನಾಗಿ ಸಿದ್ಧರ ಅಭೇದ ಭಕ್ತಿಯನ್ನು ಮಾಡುತ್ತಾನೆ. ಆದ್ದರಿಂದ ಅವನು ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ. ನಾವು ಪೂರ್ವದಲ್ಲಿ ಶುದ್ಧಾತ್ಮನ ಅಭೇದ ಭಕ್ತಿಯೇ ಮೋಕ್ಷ ಮಾರ್ಗದಲ್ಲಿ ಕಾರ್ಯಕಾರಿಯಿದೆ ಎಂದು ಹೇಳಿದ್ದೇವೆ.

**ಗಾಥೆ ೧೭೨ :** ಆದ್ದರಿಂದ ಮೋಕ್ಷಾಭಿಲಾಷಿ ಜೀವವು ಎಲ್ಲಿಯೂ ಸ್ವಲ್ಪವೂ ಕೂಡ ರಾಗ ಮಾಡಬಾರದು. ರಾಗ ಮಾಡದಿದ್ದರೆ ಆ ಭವ್ಯದ ಜೀವವು ವೀತರಾಗಿಯಾಗಿ ಭವಸಾಗರವನ್ನು ದಾಟುತ್ತಾನೆ. ಅಂದರೆ ಮೋಕ್ಷಾಭಿಲಾಷಿ ಜೀವವು ಮತ, ಪಂಥ, ಸಂಪ್ರದಾಯಕ, ವ್ಯಕ್ತಿ ವಿಶೇಷ ಮುಂತಾದವುಗಳಲ್ಲಿ ಎಲ್ಲಿಯೂ ರಾಗ ಮಾಡಬಾರದು.

★★★

## ೩೨. ಅಷ್ಟಪಾಹುಡದ ಗಾಥೆಗಳು

ಈಗ ನಾವು ಅಷ್ಟಪಾಹುಡ ಶಾಸ್ತ್ರದ ಕೆಲವು ಗಾಥೆಗಳನ್ನು ನೋಡೋಣ.

ದರ್ಶನ ಪಾಹುಡ ಗಾಥೆ ೮ : ಯಾವ ಪುರುಷನು ದರ್ಶನದಲ್ಲಿ ಭ್ರಷ್ಟರಿದ್ದಾರೆ ಮತ್ತು ಜ್ಞಾನ ಚಾರಿತ್ರದಲ್ಲಿ ಕೂಡ ಭ್ರಷ್ಟರಿದ್ದಾರೆ ಆ ಪುರುಷರು ಭ್ರಷ್ಟರುಗಳಲ್ಲಿಯೇ ವಿಶೇಷ ಭ್ರಷ್ಟರಿದ್ದಾರೆ. ಕೆಲವರಂತೂ ದರ್ಶನ ಸಹಿತರಿದ್ದಾರೆ. ಅವರಿಗೆ ಜ್ಞಾನ ಚಾರಿತ್ರಗಳಿಲ್ಲ. ಇನ್ನು ಕೆಲವರು ಅಂತರಂಗ ದರ್ಶನದಿಂದ ಭ್ರಷ್ಟರಿದ್ದರೂ ಕೂಡ ಜ್ಞಾನಚಾರಿತ್ರದ ಪಾಲನೆಯನ್ನು ಚನ್ನಾಗಿ ಮಾಡುತ್ತಾರೆ. ಯಾರು ದರ್ಶನ, ಜ್ಞಾನ ಚಾರಿತ್ರಗಳಿಂದ ಭ್ರಷ್ಟರಿದ್ದಾರೆ ಅವರಂತೂ ಅತ್ಯಂತ ಭ್ರಷ್ಟರಿದ್ದಾರೆ. ಅವರು ತಾವಂತೂ ಭ್ರಷ್ಟರೇ ಇದ್ದಾರೆ. ಆದರೆ ಉಳಿದ ಅಂದರೆ ತಮ್ಮನ್ನು ಬಿಟ್ಟು ಇತರ ಜನರನ್ನು ಕೂಡ ಭ್ರಷ್ಟರನ್ನಾಗಿ ಮಾಡುತ್ತಾರೆ.

ಈ ಕಾಲದಲ್ಲಿ ಸಮ್ಯಗ್ದರ್ಶನ ಅತಿ ದುರ್ಲಭ ಆಗಿರುವದರಿಂದ ಒಂದು ವೇಳೆ ಯಾವದೇ ಮಿಥ್ಯಾದೃಷ್ಟಿ ಜೀವವು ಜ್ಞಾನ ಮತ್ತು ಚಾರಿತ್ರದ ಆರಾಧನೆ ಮಾಡಿದರೆ ಅದರಲ್ಲಿ ಸ್ವಲ್ಪವೂ ತಪ್ಪಿಲ್ಲ. ಕೇವಲ ಜ್ಞಾನ ಮತ್ತು ಚಾರಿತ್ರಗಳಿಂದ ಮುಕ್ತಿ ದೊರೆಯಲಾರದು. ಗುಣಸ್ಥಾನದ ಅನುಸಾರ ಆಗುವದಿಲ್ಲ. ಆದ್ದರಿಂದ ಅವರಿಗೆ ಕೇವಲ ಅಭ್ಯಾಸ ರೂಪ ಶುಭಭಾವ ಮಾತ್ರ ಆಗುತ್ತದೆ. ಆದ್ದರಿಂದ ಜೈನ ಸಿದ್ಧಾಂತವನ್ನು ಸರಿಯಾಗಿ ತಿಳಿದು ಆಚರಿಸುವದು ಮುಖ್ಯವಿದೆ.

ಭಾವಪಾಹುಡ ಗಾಥೆ ೮೬ : ಯಾವ ಪುರುಷನು ಆತ್ಮನಿಗೆ ಇಷ್ಟ ಇರುವದನ್ನು ಮಾಡುವದಿಲ್ಲ. ಅವನ ಸ್ವರೂಪ ತಿಳಿಯುವದಿಲ್ಲ. ಅಂಗೀಕಾರ ಮಾಡುವದಿಲ್ಲ

ಮತ್ತು ಎಲ್ಲ ಪ್ರಕಾರದ ಸಮಸ್ತ ಪುಣ್ಯವನ್ನು ಮಾಡುತ್ತಿದ್ದರೂ ಕೂಡ ಮೋಕ್ಷವನ್ನು ಪಡೆಯುವದಿಲ್ಲ. ಆದರೆ ಆ ಪುರುಷನು ಕೇವಲ ಸಂಸಾರದಲ್ಲಿಯೇ ಭ್ರಮಣ ಮಾಡುತ್ತಾನೆ.

ಅವನ ಲಕ್ಷ್ಯ ಆತ್ಮನ ಕಡೆಗೆ ಇರುವದಿಲ್ಲ. ಇವನು ಬೇಕಾದಷ್ಟು ಪುಣ್ಯ ಮಾಡಿದರೂ ಮೋಕ್ಷ ಪ್ರಾಪ್ತಿ ಆಗುವದಿಲ್ಲ. ಮೋಕ್ಷಾಭಿಲಾಷಿಗಳು ಮೊದಲು ಹೇಳಿದಂತೆ ಕೇವಲ ಆತ್ಮಪ್ರಾಪ್ತಿಯ ಕಡೆಗೇನೇ ಲಕ್ಷ್ಯ ಇಡಿರಿ. ಇದರಿಂದ ವಿಪರೀತ ಗ್ರಹಣ ಮಾಡಿದರೆ ಮುಂದೆ ಜಿನಧರ್ಮ ಹಾಗೂ ಉತ್ತಮ ಸಂಯೋಗಗಳು ಪ್ರಾಪ್ತವಾಗುವದು ಬಹಳ ದುರ್ಲಭವಾಗುತ್ತದೆ. ಆದ್ದರಿಂದ ಶಾಸ್ತ್ರದಲ್ಲಿ ಹಟ ಮಾಡದೇ ಧರ್ಮ ಪಾಲಿಸಿರಿ. ಹಟ ಮಾಡಿ ಬೇರೆ ನಡೆದರೆ ಅನಂತ ಸಂಸಾರದಲ್ಲಿ ಭ್ರಮಣ ಮಾಡುತ್ತ ದುಃಖ ಅನುಭವಿಸಬೇಕಾಗುತ್ತದೆ.

ಮೋಕ್ಷ ಪಾಹುಡ ಗಾಥೆ – ಬಹಿರಾತ್ಮನು ಮಿಥ್ಯಾತ್ವ ಕರ್ಮದ ಉದಯದಿಂದ ಮಿಥ್ಯಾಭಾವನೆಯಿಂದ ತನ್ನ ದೇಹವನ್ನು ಆತ್ಮನೆಂದು ತಿಳಿಯುತ್ತಾನೆ. ಅದೇ ಪ್ರಕಾರ ಪರರ ದೇಹವು ಅಚೇತನವಿದ್ದರೂ ಕೂಡ ಅದನ್ನು ಪರರ ಆತ್ಮವೆಂದು ಮನ್ನಿಸುತ್ತಾನೆ. ಈ ದೇಹಾತ್ಮ ಬುದ್ಧಿ ಬಿಟ್ಟು ಭೇದವಿಜ್ಞಾನದಿಂದ ಆತ್ಮ ಮತ್ತು ದೇಹಗಳ ಭಿನ್ನತ್ವವನ್ನು ತಿಳಿಯಬೇಕೆಂಬುದೇ ತಾತ್ಪರ್ಯವಿದೆ.

**ಗಾಥೆ ೧೮ :** ಸಂಸಾರದ ದುಃಖ ಕೊಡುವಂಥ ಜ್ಞಾನಾವರಣ ಮೊದಲಾದ ದುಷ್ಟ ಎಂಟು ಕರ್ಮಗಳಿಂದ ರಹಿತ ಮತ್ತು ಅವನಿಗೆ ಯಾವುದೂ ಉಪಮೆ ಇಲ್ಲದಂಥ ಅನುಪಮ, ಅವನಿಗೆ ಜ್ಞಾನವೇ ಶರೀರವಿದೆ ಮತ್ತು ಅವನು ನಾಶವಿಲ್ಲದಂಥ ಅವಿನಾಶಿ ಇದ್ದಾನೆ. ಶುದ್ಧ ಅಂದರೆ ವಿಕಾರರಹಿತ ಕೇವಲಜ್ಞಾನಮಯನಾದ ಆತ್ಮನನ್ನು ಸರ್ವಜ್ಞ ಭಗವಂತರು ಅವನೇ ಸ್ವದ್ರವ್ಯನಿದ್ದಾನೆಂದು ಹೇಳಿದ್ದಾರೆ.

ಜ್ಞಾನಾನಂದಮಯ, ಅಮೂರ್ತಿಕ, ಜ್ಞಾನಮೂರ್ತಿಯಾದ ತನ್ನ ಆತ್ಮನಿದ್ದಾನೆ, ಅವನೇ ಸ್ವದ್ರವ್ಯನಿದ್ದಾನೆ. ಉಳಿದ ಚೇತನ, ಅಚೇತನ ಮಿಶ್ರಗಳೆಲ್ಲವೂ ಪರದ್ರವ್ಯಗಳಿವೆ.

**ಗಾಥೆ ೨೦ :** ಯೋಗಿ, ಧ್ಯಾನಿ ಮುನಿಗಳು, ಜಿನೇಂದ್ರ ಭಗವಂತರ ಮತದಿಂದ ಶುದ್ಧ ಆತ್ಮನನ್ನು ಧ್ಯಾನದಲ್ಲಿ ಧ್ಯಾನಿಸುತ್ತಾರೆ. ಇದರಿಂದ ನಿರ್ವಾಣವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಆದರೆ ಇದರಿಂದ ಸ್ವರ್ಗ ಪ್ರಾಪ್ತಿಗೊಳ್ಳುವ ಸಾಧ್ಯತೆ ಇಲ್ಲವೇನು ? ಅವಶ್ಯವಾಗಿ ಪ್ರಾಪ್ತವಾಗುತ್ತದೆ.

**ಗಾಥೆ ೬೬ :** ಎಲ್ಲಿಯ ತನಕ ಈ ಮನುಷ್ಯನು ವಿಷಯಗಳಲ್ಲಿ ಪ್ರವರ್ತಿಸುತ್ತಾನೆ. ಅಲ್ಲಿಯವರೆಗೆ ಆತ್ಮನನ್ನು ತಿಳಿಯುವದಿಲ್ಲ. ಅದಕ್ಕಾಗಿ ಯೋಗಿ, ಧ್ಯಾನಿ ಮುನಿಗಳು ವಿಷಯಗಳಿಂದ ವಿರಕ್ತ ಚಿತ್ತರಾಗುತ್ತ ಮುಂದುವರಿದರೆ ಆತ್ಮನನ್ನು ತಿಳಿಯುತ್ತಾರೆ.

**ಶೀಲಪಾಹುಡ ಗಾಥೆ ೪ :** ಎಲ್ಲಿಯುವರೆಗೆ ಈ ಜೀವನು ವಿಷಯಗಳ ವಶೀಭೂತನಾಗಿರುತ್ತಾನೆ ಅಲ್ಲಿಯವರೆಗೆ ಜ್ಞಾನವನ್ನು ತಿಳಿಯುವದಿಲ್ಲ ಮತ್ತು

ಜ್ಞಾನವನ್ನು ತಿಳಿದುಕೊಂಡಲ್ಲದೆ ಕೇವಲ ವಿಷಯಗಳಲ್ಲಿ ವಿರಕ್ತನಾದರೂ ಸಹ ಮೊದಲು ಕಟ್ಟಿದಕರ್ಮಗಳ ಕ್ಷಯ ಆಗುವದಿಲ್ಲ.

ವಿಷಯ ವಿರಕ್ತಿಯು ಸಮ್ಯಗ್ದರ್ಶನದ ಸಲುವಾಗಿ ಅವಶ್ಯಕ ಯೋಗ್ಯತೆಯಾಗಿದೆ. ವಿಷಯ ವಿರಕ್ತಿಯು ಕೇವಲ ಒಂದು ಆತ್ಮಲಕ್ಷ್ಯದಿಂದಲೇ ಆಗಬೇಕು. ಅದರಿಂದ ಮುಂದೆ ಸಾಗಿ ಆತ್ಮಜ್ಞಾನವಾಗುತ್ತದೆ. ಅಪೂರ್ವ ನಿರ್ಜರೆ ಆಗುತ್ತದೆ. ಮುಮುಕ್ಷು ಜೀವಗಳಿಗೆ ಕೇವಲ ಆತ್ಮಲಕ್ಷ್ಯದಿಂದ ವಿಷಯ ವಿರಕ್ತಿ ಮಾಡುವದು ಅತ್ಯಂತ ಅವಶ್ಯಕವಿದೆ.

★★★

## ೩೩. ಸಮ್ಯಗ್ದರ್ಶನ ಮತ್ತು ಮೋಕ್ಷಮಾರ್ಗ

ಇಲ್ಲಿಯ ವರೆಗೆ ಯಾವ ಭಾವವನ್ನು ನಾವು ದೃಢ ಮಾಡಿದ್ದೇವೆ ಅವು ಯಾವವೆಂದರೆ ಸಮ್ಯಗ್ದರ್ಶನ ಮತ್ತು ನಂತರದಲ್ಲಿ ಮೋಕ್ಷಮಾರ್ಗ ಹಾಗೂ ಮುಕ್ತಿಯ ಸಲುವಾಗಿ ಪ್ರತಿಯೊಬ್ಬರೂ ಲಕ್ಷ್ಯದಲ್ಲಿ ಇಡಲು ಯೋಗ್ಯವಾದ ಯಾವ ವಸ್ತು ಇವೆ ಅಂದರೆ ಅದು ಸಮ್ಯಗ್ದರ್ಶನದ ವಿಷಯ ಇದೆ. ಅದುವೇ ಪರಮ ಪಾರಿಣಾಮಿಕ ಭಾವರೂಪ ಅಂದರೆ ಆತ್ಮನ ಸಹಜ ಪರಿಣಮನ ರೂಪ ಶುದ್ಧಾತ್ಮನಿದ್ಧಾನೆ. ಯಾವುದೆಂದರೆ ಮುಕ್ತಿಯ ಕಾರಣವಾಗಿರುವದರಿಂದ ಕಾರಣಸಮಯಸಾರ ಅಥವಾ ಕಾರಣ ಶುದ್ಧ ಪರ್ಯಾಯದ ರೂಪದಲ್ಲಿಯೂ ಸಹ ಹೇಳಲಾಗಿದೆ. ಅದರ ಹೆಸರು ಬಹಳ ಸಲ ಪ್ರಯೋಗದಲ್ಲಿ ಬರುತ್ತದೆ. ಆದರೆ ಅವುಗಳಲ್ಲಿಂದ ಶಬ್ದ ಹಿಡಿಯದೇ ಕೇವಲ ಒಂದು ಶುದ್ಧಾತ್ಮರೂಪ ಭಾವ ಹೇಗೆ ಹೇಳಲಾಗಿದೆಯೋ ಹಾಗೆಯೇ ಲಕ್ಷ್ಯದಲ್ಲಿ ತೆಗೆದುಕೊಳ್ಳುವದು ಅವಶ್ಯಕವಿದೆ. ಏಕೆಂದರೆ ಅದರ ಹೆಸರು ಮೋಕ್ಷ ಮಾರ್ಗದಲ್ಲಿ ಪ್ರವೇಶವೇ ಇಲ್ಲ. ಈ ಕಾರಣ ಭೇದಜ್ಞಾನ ಮಾಡುವವನಿಗೆ ಆಧ್ಯಾತ್ಮಿಕ ಶಾಸ್ತ್ರವು ಅದನ್ನು 'ಸ್ವತತ್ವ ಅಥವಾ ಸ್ವಭಾವ' ರೂಪಿ ಆತ್ಮನೆಂದು ಮನ್ನಿಸುತ್ತಾರೆ. ಸಮಯಸಾರ ಮತ್ತು ನಿಯಮಸಾರದಂಥ ಆಧ್ಯಾತ್ಮಿಕ ಶಾಸ್ತ್ರಗಳ ಪ್ರಾಣವೇ ಈ ಶುದ್ಧಾತ್ಮನಿದ್ದಾನೆ. ಏಕೆಂದರೆ ಆ ಶಾಸ್ತ್ರಗಳು ಭೇದಜ್ಞಾನದ ಶಾಸ್ತ್ರಗಳಿರುತ್ತವೆ. ಅವುಗಳಿಂದ ಮುಮುಕ್ಷು ಜೀವವು ತಮ್ಮ ವಿಭಾವ-ಭಾವದಿಂದ ಭೇದಜ್ಞಾನ ಮಾಡಿ ಶುದ್ಧಾತ್ಮನ ಅನುಭವ ಮಾಡಿರಿ ಮತ್ತು ಸಮ್ಯಗ್ದರ್ಶನದ ಪ್ರಾಪ್ತಿ ಮಾಡಿಕೊಂಡು ಮೋಕ್ಷ ಮಾರ್ಗದಲ್ಲಿ ಮುಂದುವರಿದು ಪರಂಪರೆಯಿಂದ ಮುಕ್ತರಾಗಿರಿ. ಇದುವೇ ಈ ಶಾಸ್ತಗಳ ಉದ್ದೇಶವಿದೆ. ಆದ್ದರಿಂದ ಈ ಶಾಸ್ತ್ರಗಳನ್ನು ಇದೇ ಉದ್ದೇಶದಿಂದ ಅಂದರೆ ಇದೇ ಅಪೇಕ್ಷೆಯಿಂದ ತಿಳಿಯುವದು ಅತ್ಯಂತ ಅವಶ್ಯಕವಿದೆ. ಆದರೆ ಏಕಾಂತದಿಂದ ಇರುವದಿಲ್ಲ. ಬಹುಶಃ ಒಂದು ದೊಡ್ಡ ವರ್ಗವೇ ಈ ಉದ್ದೇಶವನ್ನು ತಿಳಿದುಕೊಳ್ಳದಿರುವದರಿಂದ ಇಂತಹ ಉತ್ತಮ ಶಾಸ್ತ್ರಗಳಿಂದ ದೂರವೇ ಇರುತ್ತಾರೆ ಮತ್ತು ಬೇರೆ ವರ್ಗವು ಇದನ್ನು ಏಕಾಂತ

ರೂಪದಿಂದ ಸ್ವೀಕರಿಸಿ ಸ್ವಚ್ಛಂದ ರೂಪವಾಗಿ ಪರಿಣಮಿಸುತ್ತಾರೆ. ಇಂತಹ ಶಾಸ್ತ್ರಗಳನ್ನು ಸಮ್ಯಕ್‌ರೂಪದಿಂದ ತಿಳಿದುಕೊಂಡು ಉಪಯೋಗ ಮಾಡಿಕೊಳ್ಳುವಂಥ ಜನರು ಬಹಳ ಕಡಿಮೆ ಇದ್ದಾರೆ.

ಈ ಶಾಸ್ತ್ರಗಳನ್ನು ಓದಿ ಜನರು ತಮ್ಮ ಬಗ್ಗೆ ಹೀಗೆ ಹೇಳತೊಡಗುತ್ತಾರೆ. ಹೇಗೆಂದರೆ ನನ್ನಲ್ಲಿಯಂತೂ ರಾಗವೂ ಇಲ್ಲವೇ ಇಲ್ಲ. ನಾನು ರಾಗ ಮಾಡುವದೇ ಇಲ್ಲ ಮುಂತಾಗಿ ಹೇಳುತ್ತಾರೆ. ಅವರು ಅದರ ಉದ್ದೇಶರೂಪ ಭೇದಜ್ಞಾನ ಮಾಡದೇ ಅದರದೇ ಆಧಾರ ತೆಗೆದುಕೊಂಡು ಸ್ವಚ್ಛಂದತೆಯಿಂದ ರಾಗ-ದ್ವೇಷ ರೂಪವಾಗಿ ಪರಿಣಮಿಸುತ್ತಾರೆ ಮತ್ತು ಅದೂ ಸಹ ಸ್ವಲ್ಪವೂ ಖಿನ್ನವಾಗುವದಿಲ್ಲ. ಇದಕ್ಕಿಂತ ದೊಡ್ಡ ಪತನ ಯಾವುದಿದೆ ? ಇದು ಮಹಾಪತನವೇ ಇದೆ. ಏಕೆಂದರೆ ಯಾವ ಶಾಸ್ತ್ರವು ಭೇದಜ್ಞಾನ ಮಾಡಿಸಿ ಮುಕ್ತವಾಗುವ ಸಲುವಾಗಿ ಇದೆ, ಅದನ್ನು ಜನರು ಏಕಾಂತದಿಂದ ಶಬ್ದಶಃ ತಿಳಿದುಕೊಂಡು ಸ್ವಚ್ಛಂದತೆಯಿಂದ ಪರಿಣಮಿಸಿ ತಮ್ಮ ಅನಂತ ಸಂಸಾರದ ಕಾರಣರಾಗುತ್ತಾರೆ ಮತ್ತು "ನಾವಂತೂ ಎಲ್ಲವನ್ನೂ ತಿಳಿದಿದ್ದೇವೆ. ನಾವು ಉಳಿದವರಿಗಿಂತ ದೊಡ್ಡವರು / ಉನ್ನತ ಸ್ಥಾನದಲ್ಲಿ ಇದ್ದವರು" ಎಂದು ತಿಳಿಯುತ್ತಾರೆ. ಏಕೆಂದರೆ ಅವರಿಗೆ ಈ ಮಾತಿನ ಎಚ್ಚರವೇ ಇರುವದಿಲ್ಲ. ಏನಂದರೆ ಆತ್ಮನು ರಾಗ ಮಾಡುವದಿಲ್ಲ. ಆತ್ಮನಲ್ಲಿ ರಾಗವು ಇಲ್ಲವೇ ಇಲ್ಲ ಮುಂತಾಗಿ ಭಾವಿಸುತ್ತಾರೆ. ಇವರು ಸ್ವಚ್ಛಂದತೆಯಿಂದ ಶಬ್ದಗಳನ್ನು ಹಿಡಿದುಕೊಂಡು ಏಕಾಂತರೂಪವಾಗಿ ಪರಿಣಮಿಸುತ್ತಾರೆ. ಇವರಿಗೆ ಸಮಯಸಾರ ಅಥವಾ ನಿಯಮಸಾರದಂಥ ಶಾಸ್ತ್ರಗಳ ಪ್ರಯೋಜನ ಇರುವದಿಲ್ಲ. ರಾಗವು ಆತ್ಮನಲ್ಲಿ ಪ್ರವೇಶಿಸುವ ಮೆಟ್ಟಿಲು ಇರುತ್ತದೆ. ಏಕೆಂದರೆ ಯಾವದು ರಾಗವಿದೆ ಅದು ಆತ್ಮನ ವಿಶೇಷ ಭಾವವಿದೆ, ಅದನ್ನು ಗೌಣ ಮಾಡುತ್ತಲೇ ಶುದ್ಧಾತ್ಮನು ತಿಳಿದು ಬರುತ್ತಾನೆ. ಅಂದರೆ ಎಲ್ಲಿ ವಿಶೇಷ ಭಾವಗಳು ಸಾಧನರೂಪ ಇರುತ್ತವೆ ಮತ್ತು ಅವುಗಳನ್ನು ಗೌಣ ಮಾಡುತ್ತಲೇ ಅವು ಯಾವುದರಿಂದ ಉಂಟಾಗಿವೆ ಅದು ಪರಮ ಪಾರಿಣಾಮಿಕ ಭಾವ ಸಾಧ್ಯರೂಪವಿದೆ. ಇದುವೇ ಸಮ್ಯಗ್ದರ್ಶನದ ವಿಧಿ ಇರುತ್ತದೆ. ಏಕೆಂದರೆ ಸ್ಥೂಲದಿಂದಲೇ ಸೂಕ್ಷ್ಮದಲ್ಲಿ ಹೋಗಬಹುದು. ಇದು ನಿಯಮವಿದೆ.

ಆಧ್ಯಾತ್ಮಿಕ ಶಾಸ್ತ್ರವು ಭೇದಜ್ಞಾನ ಮಾಡಿಸುವ ಸಲುವಾಗಿ ವಿಭಾವ ಭಾವಗಳು ಜೀವದ್ದಿರುವದಿಲ್ಲ ಎಂದು ಹೇಳುತ್ತದೆ. ಏಕೆಂದರೆ ಅವುಗಳಲ್ಲಿ ನನ್ನತನ ಮಾಡುವದಿರುವದಿಲ್ಲ. ಸಮ್ಯಗ್ದರ್ಶನದ ಸಲುವಾಗಿ ಕೇವಲ ಶುದ್ಧಾತ್ಮನಲ್ಲಿಯೇ ನನ್ನತನವಿದೆ. ಆದ್ದರಿಂದ ಈ ಶಾಸ್ತ್ರಗಳಲ್ಲಿ ಜೀವದ ಬೇರೆ ಭಾವಗಳನ್ನು ಪುದ್ಗಲ ಭಾವಗಳೆಂದು ಅಂದರೆ ಪರಭಾವಗಳೆಂದು ಹೇಳಿದ್ದಾರೆ. ಜನರಿಗೆ ಸ್ವಚ್ಛಂದತೆಯಿಂದ ಪರಿಣಮಿಸುವ ಸಲುವಾಗಿ ಇಲ್ಲ.

ಆತ್ಮನಲ್ಲಿ ರಾಗ ಉಂಟಾಗುವದೇ ಇಲ್ಲವೆಂದು ಶಾಸ್ತ್ರದ ಅಭಿಪ್ರಾಯ ಇರುವದಿಲ್ಲ. ಆದರೆ ಆ ರಾಗ ರೂಪ ವಿಭಾವ-ಭಾವದಿಂದ ಭೇದಜ್ಞಾನ ಮಾಡಿಸುವ ಸಲುವಾಗಿ ಅದನ್ನು ಪುದ್ಗಲವೆಂದು ಹೇಳಲಾಗಿದೆ. ಜೈನಸಿದ್ಧಾಂತದ ವಿವೇಕವು

ಏನಿದೆ ಎಂದರೆ 'ನನ್ನತನ' ಕೇವಲ ಶುದ್ಧಾತ್ಮನಲ್ಲಿ ಮತ್ತು ಜ್ಞಾನ ಪ್ರಮಾಣದ ಅಂದರೆ ಅಶುದ್ಧರೂಪದಿಂದ ಪರಿಣಮಿತನಾದ ಪೂರ್ಣ ಆತ್ಮನ ಮತ್ತು ಇಂಥ ವಿವೇಕ ಮಾಡಿ ಆ ಮುಮುಕ್ಷು ಹಾಗೆಯೇ ರಾಗರೂಪ ಉದಯಭಾವದಿಂದ ಯಾವಾಗಲೂ ಮುಕ್ತನಾಗುವ ಪುರುಷಾರ್ಥ ಮಾಡುತ್ತಾನೆ. ಅವು ನನ್ನವಲ್ಲವೆಂದು ತಿಳಿದಿರುತ್ತಾನೆ. ನಾನು ಕರ್ತಾನಲ್ಲ ಮುಂತಾಗಿ ಹೇಳಿ ಅವನ್ನು ಪೋಷಿಸಲು ಸ್ವಚ್ಛಂದವಾಗಿ ಆಚರಿಸುತ್ತಾನೆ. ವಿಪರೀತ ತಿಳಿಯುವದರ ಕಠಿಣತೆಯು ಹೀಗೆಯೇ ಇದೆ.

ಇಂತಹ ವಿಪರೀತ ಭಾವ ಜ್ಞಾನಿ ಅಥವಾ ಮುಮುಕ್ಷು ಜೀವನಿಗೆ ಒಂದು ಸಮಯ ಕೂಡ ಸಹನೆ ಮಾಡಲು ಸಾಧ್ಯವಾಗುವದಿಲ್ಲ. ಈ ಕಾರಣವಾಗಿ ಇಂಥ ಜೀವಗಳ ಕುರಿತು ಕರುಣೆ ಬರುತ್ತದೆ. ಆ ಭಾವವು ಆತ್ಮನಿಗೆ (ಅಂದರೆ ನನಗೆ) ಬಂಧನರೂಪವಿದೆ. ದುಃಖರೂಪವಿದೆ. ಆದ್ದರಿಂದ ಇಂತಹ ಭಾವದ ಪೋಷಣೆಯನ್ನು ಯಾವ ಜ್ಞಾನಿ ಅಥವಾ ಮುಮುಕ್ಷುಗಳು ಸಹ ಮಾಡುವದಿಲ್ಲ. ಯಾರು ಸ್ವಚ್ಛಂದತೆಯಿಂದ ಇಂತಹ ಭಾವಗಳ ಪೋಷಣೆ ಮಾಡುತ್ತಾರೆ, ಅವರು ತಮ್ಮ ಪರಮ ಅಹಿತವನ್ನೇ ಮಾಡಿಕೊಳ್ಳುತ್ತಾರೆ ಮತ್ತು ಅವರು ಶಾಸ್ತ್ರಗಳ ಮರ್ಮವನ್ನು ತಿಳಿದಿರುವದೇ ಇಲ್ಲ. ಇದು ಅತ್ಯಂತ ದುಃಖದ ಮತ್ತು ಕರುಣೆಯೊಂದಿಗೆ ಹೇಳಬೇಕಾಗುವದು.

ನಾವು ಈ ಪುಸ್ತಕದಲ್ಲಿ ಇಲ್ಲಿಯವರೆಗೆ ಯಾವ ಶುದ್ಧಾತ್ಮನ ವರ್ಣನೆ ಮಾಡಿದ್ದೇವೆ. ಅದೇ ಭಾವವನ್ನು ನಾವು ಮೇಲಿಂದ ಮೇಲೆ ಅನುಭವಿಸುತ್ತಿದ್ದೇವೆ ಮತ್ತು ಅದನ್ನೇ ಶಬ್ದಗಳಲ್ಲಿ ವರ್ಣನೆ ಮಾಡಲು ನಾವು ಪ್ರಯತ್ನಿಸಿದ್ದೇವೆ. ಅದು ಯಾವುದೆಂದರೆ ಪೂರ್ಣರೂಪದಿಂದ ವರ್ಣಿಸಲು ಸಾಧ್ಯವೇ ಆಗುವದಿಲ್ಲ. ಏಕೆಂದರೆ ಆ ಅನುಭವವನ್ನು ಶಬ್ದಗಳಲ್ಲಿ ವರ್ಣಿಸಲು ಭಗವಾನರಿಗೂ ಸಾಧ್ಯವಿಲ್ಲ. ಆದ್ದರಿಂದ ನಾವು ತಮಗೆ ನಿವೇದನೆ ಮಾಡುತ್ತೇವೆ. ಏನಂದರೆ ತಮಗೆ ಇಲ್ಲಿಯವರೆಗೆ ಆದ ಸ್ಪಷ್ಟತೆಯ ಆಧಾರದ ಮೇಲೆ ಮತ್ತು ಮುಂದೆ ಸಮಯಸಾರದ ಆಧಾರದ ಮೇಲೆ ನಾವು ಯಾವ ವಿಶೇಷ ಸ್ಪಷ್ಟತೆ ಮಾಡುವಂಥವರಿದ್ದೇವೆ. ಆ ಎರಡರ ಮರ್ಮವನ್ನು ತಿಳಿದುಕೊಂಡು ತಾವೂ ಸಹ 'ಸ್ವ-ತತ್ವ'ದ ಅನುಭವ ಮಾಡಿ ಪರಮಸುಖ, ಶಾಂತಿ ಪರಮಾನಂದರೂಪ ಮುಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳಿರಿ.

★★★

## ೩೪. ಸಮಯಸಾರದ ಅನುಸಾರ ಸಮ್ಯಗ್ದರ್ಶನದ ವಿಷಯ

ಆಚಾರ್ಯ ಅಮೃತಚಂದ್ರ ಕೃತ ಸಮಯಸಾರ ಟೀಕಾ ಗಾಥೆ ೨ : "ಹೇ ಭವ್ಯ! ಯಾವ ಜೀವನು ದರ್ಶನ, ಜ್ಞಾನ, ಚಾರಿತ್ರಗಳಲ್ಲಿ ಸ್ಥಿರಗೊಳ್ಳುತ್ತಲಿದ್ದಾನೆ ಅವನನ್ನು ನಿಶ್ಚಯದಿಂದ ಸ್ವಸಮಯ ಎಂದು ತಿಳಿದುಕೊಳ್ಳು. ಅವನು ಪರಮ

ಪಾರಿಣಾಮಿಕ ಭಾವದಲ್ಲಿಯೇ 'ನನ್ನತನ' ಸ್ಥಾಪನೆ ಮಾಡಿ ಅದರಲ್ಲಿಯೇ ಸ್ಥಿರನಾಗಿರುತ್ತಾನೆ. ಅವನನ್ನು ಸ್ವಸಮಯ ಅರ್ಥಾತ್ ಸಮ್ಯಕ್‌ದೃಷ್ಟಿ ಎಂದು ತಿಳಿಯಿರಿ. ಯಾವ ಜೀವನು ಪುದ್ಗಲ ಕರ್ಮದ ಪ್ರದೇಶಗಳಲ್ಲಿ ಸ್ಥಿರವಾಗಿದ್ದಾನೆ ಅಂದರೆ ವಿಭಾವ ಭಾವ ಸಹಿತ ಜೀವದಲ್ಲಿ 'ನನ್ನತನ' ಮಾಡುತ್ತಾನೆ. ಅವನನ್ನು ಪರಸಮಯ ಅಥವಾ ಮಿಥ್ಯಾದೃಷ್ಟಿ ಜೀವನೆಂದು ತಿಳಿದುಕೊಳ್ಳಿರಿ.

**ಗಾಥೆ ೨ :** ಯಾವುದು ತಿಳಿದುಕೊಳ್ಳುತ್ತದೆ ಮತ್ತು ಪರಿಣಮನ ಮಾಡುತ್ತದೆ ? ಈ ಎರಡೂ ಕ್ರಿಯೆಗಳನ್ನು ಏಕತ್ವಪೂರ್ವಕವಾಗಿ ಒಮ್ಮೆಲೆ ಮಾಡುತ್ತದೆ. ಅದು ಸಮಯ (ಆತ್ಮ)ವಿದೆ. ಈ ಜೀವವೆಂಬ ಹೆಸರಿನ ಪದಾರ್ಥವು ಏಕತ್ವಪೂರ್ವಕವಾಗಿ ಒಂದೇ ಸಮಯದಲ್ಲಿ ಪರಿಣಮನವನ್ನು ಮಾಡುತ್ತದೆ ಮತ್ತು ತಿಳಿಯುತ್ತದೆ. ಆದುದರಿಂದ ಅದು ಸಮಯವಿದೆ. ಈ ಜೀವ ಪದಾರ್ಥವು ಯಾವಾಗಲೂ ಪರಿಣಮ ಸ್ವರೂಪ ಸ್ವಭಾವದಲ್ಲಿ ಇರುವಂತಹದ್ದು ಆಗಿರುವದರಿಂದ ಉತ್ಪಾದ-ವ್ಯಯ-ಧ್ರೌವ್ಯದ ಏಕತೆಯ ರೂಪವಾದ ಅನುಭೂತಿ ಲಕ್ಷಣ ಯುಕ್ತ ಸತ್ತಾಸಹಿತವಾಗಿದೆ. ಜೀವನು ಚೈತನ್ಯ ಸ್ವರೂಪತೆಯಿಂದ ನಿತ್ಯ ಉದ್ಯೋತ ರೂಪನೂ, ನಿರ್ಮಲನೂ, ಸ್ಪಷ್ಟದರ್ಶನ ಜ್ಞಾನಜ್ಯೋತಿ ಸ್ವರೂಪನೂ ಆಗಿದ್ದಾನೆ. ಏಕೆಂದರೆ ಚೈತನ್ಯದ ಪರಿಣಮನವು ದರ್ಶನಜ್ಞಾನ ಸ್ವರೂಪವಾಗಿದೆ.

ಈ ಜೀವನು ಯಾವಾಗ ಎಲ್ಲ ಪದಾರ್ಥಗಳ ಸ್ವಭಾವವನ್ನು ಪ್ರಕಾಶಪಡಿಸುವಲ್ಲಿ ಸಮರ್ಥವಾದ ಕೇವಲಜ್ಞಾನವನ್ನು ಉತ್ಪನ್ನ ಮಾಡುವಂಥ ಭೇದಜ್ಞಾನಜ್ಯೋತಿಯ ಉದಯವಾಗಿರುವದರಿಂದ ಎಲ್ಲ ಪರದ್ರವ್ಯಗಳಿಂದ ವಿಮುಕ್ತನಾಗಿ ದರ್ಶನ ಜ್ಞಾನ ಸ್ವಭಾವದಲ್ಲಿ ಅಸ್ತಿತ್ವರೂಪವಾದ ಆತ್ಮತತ್ವದೊಡನೆ ಏಕತ್ವರೂಪದಲ್ಲಿ ಲೀನನಾಗಿ ಪ್ರವೃತ್ತಿ ಮಾಡುತ್ತಾನೆ. ಆಗ ದರ್ಶನ, ಜ್ಞಾನ, ಚಾರಿತ್ರಗಳಲ್ಲಿ ಸ್ಥಿರವಾಗುವದರಿಂದ ತನ್ನ ಸ್ವರೂಪವನ್ನು ಏಕತ್ವರೂಪದಿಂದ ಒಂದೇ ಸಮಯದಲ್ಲಿ ತಿಳಿಯುತ್ತ ಹಾಗೂ ಪರಿಣಮನ ಮಾಡುತ್ತ ಅವನು 'ಸ್ವಸಮಯ'ನಿದ್ದಾನೆಂದು ಪ್ರತೀತಿ ಮಾಡಲಾಗುತ್ತದೆ. ಆದರೆ ಯಾವಾಗ ಅವನು ಮೋಹದ ಉದಯಕ್ಕನುಸಾರವಾದ ಪ್ರವೃತ್ತಿಯ ಆಧೀನತೆಯಿಂದ ದರ್ಶನ ಜ್ಞಾನ ಸ್ವಭಾವದಲ್ಲಿ ಅಸ್ತಿತ್ವರೂಪ ಆತ್ಮತತ್ವದಿಂದ ಬಿಡುಗಡೆ ಹೊಂದಿ ಪರದ್ರವ್ಯದ ನಿಮಿತ್ತದಿಂದ ಉತ್ಪನ್ನವಾದ ಮೋಹ, ರಾಗ, ದ್ವೇಷ ಮೊದಲಾದ ಭಾವಗಳಲ್ಲಿ ಏಕತ್ವರೂಪದಿಂದ ಲೀನನಾಗಿ ಪ್ರವೃತ್ತನಾಗುತ್ತಾನೆ. ಆಗ ಪುದ್ಗಲ ಕರ್ಮದ ಪ್ರದೇಶದಲ್ಲಿ ಸ್ಥಿರನಾಗುವದರಿಂದ ಒಮ್ಮೆಲೆ ಪರವಸ್ತುವನ್ನು ಏಕತ್ವಪೂರ್ವಕ ತಿಳಿಯುತ್ತ ಮತ್ತು ಪರರೂಪದೊಡನೆ ಏಕತ್ವಪೂರ್ವಕವಾಗಿ ಪರಿಣಮನ ಮಾಡುತ್ತ 'ಪರಸಮಯ'ನಿದ್ದಾನೆ. ಹೀಗೆ ಪ್ರತೀತಿ ಮಾಡಲಾಗುತ್ತದೆ. ಅಂದರೆ ಜೀವಪದಾರ್ಥವು ಯಾವಾಗ ತನ್ನ ಸ್ವಭಾವದಲ್ಲಿ ಸ್ಥಿರವಾಗಿರುತ್ತದೆ. ಆಗ ಸ್ವಸಮಯವಿದೆ ಯಾವಾಗ ಪರಸ್ವಭಾವ ರಾಗ-ದ್ವೇಷ-ಮೋಹರೂಪವಾಗಿರುತ್ತದೆ ಆಗ ಪರಸಮಯವಿದೆ. ಈ ಪ್ರಕಾರವಾಗಿ ಜೀವಕ್ಕೆ ದ್ವಿ ವಿವಿಧತೆಗಳು ಬರುತ್ತವೆ.

**ಗಾಥೆ ೩ :** ಏಕತ್ವ ನಿಶ್ಚಯಕ್ಕೆ ಪ್ರಾಪ್ತವಾದ ಯಾವ ಸಮಯವಿದೆ ಅಂದರೆ ಯಾವನು ಕೇವಲ ಶುದ್ಧಾತ್ಮನಲ್ಲಿಯೇ 'ನನ್ನತನ' ಮಾಡಿ ಸಮ್ಯಗ್ದರ್ಶನ ಮಾಡಿಕೊಂಡಿದ್ದಾನೆ. ಅಂಥ ಆತ್ಮನು ಈ ಲೋಕದಲ್ಲಿ ಎಲ್ಲೆಡೆ ಸುಂದರವಿದೆ, ಪವಿತ್ರವಿದೆ. ಆದರೆ ಏಕತ್ವದಲ್ಲಿ ಎರಡನೆಯದರ ಜೊತೆ ಬಂಧದ ಕಥೆಯನ್ನು ಅಂದರೆ ವಿಭಾವ-ಭಾವಗಳಲ್ಲಿ 'ನನ್ನತನ' ಮಾಡುತ್ತ ಮಿಥ್ಯಾತ್ವದ ಉದಯ ಆಗುವದರಿಂದ ವಿಸಂವಾದ ವಿರೋಧ ಮಾಡುವಂಥ ಆತ್ಮದ್ರವ್ಯವು ಬೇರೆ ಕರ್ಮ ನೋಕರ್ಮರೂಪಿ ಪುದ್ಗಲ ದ್ರವ್ಯದ ಜೊತೆಗೆ ಬಂಧ ಮಾಡುತ್ತದೆ. ಅದರಿಂದ ದುಃಖ ಅನುಭವಿಸುತ್ತದೆ. ಆದ್ದರಿಂದ ಯಾವಾಗ ಪುದ್ಗಲ ದ್ರವ್ಯದ ಜೊತೆಗಿನ ಬಂಧನದಿಂದ ಆತ್ಮವು ಮುಕ್ತವಾಗುತ್ತದೆಯೋ ಆಗ ಸುಂದರವಿದೆ, ಅವ್ಯಾಬಾಧ ಸುಖಿಯಿದೆ.

**ಗಾಥೆ ೪ :** ಎಲ್ಲ ಜನರಿಗೆ ಕಾಮ-ಭೋಗ ಸಂಬಂಧ ಬಂಧದ ಕಥೆಯಂತೂ ಕೇಳುವುದರಲ್ಲಿ ಬಂದಿದೆ. ಪರಿಚಯದಲ್ಲಿ ಬಂದಿದೆ ಮತ್ತು ಅನುಭವದಲ್ಲೂ ಕೂಡ ಬಂದಿದೆ. ಆದುದರಿಂದ ಸುಲಭವಾಗಿದೆ. ಆದರೆ ಭಿನ್ನ ಆತ್ಮನ ಅಂದರೆ ಭೇದಜ್ಞಾನದಿಂದ ಪ್ರಾಪ್ತ ಶುದ್ಧಾತ್ಮನೊಂದಿಗೆ ಏಕತ್ವವಾಗುವದನ್ನು ಎಂದೂ ಕೇಳಿಲ್ಲ. ಪರಿಚಯದಲ್ಲಿ ಬಂದಿಲ್ಲ ಮತ್ತು ಅನುಭವದಲ್ಲೂ ಬಂದಿಲ್ಲ. ಆದ್ದರಿಂದ ಕೇವಲ ಅದೊಂದೇ ಸುಲಭವಾಗಿಲ್ಲ.

ಜಗತ್ತಿನಲ್ಲಿಯ ಎಲ್ಲ ಜೀವಗಳು ಸಂಸಾರ ರೂಪದ ಚಕ್ರವನ್ನೇರಿ ಪಂಚಪರಾವರ್ತನ ರೂಪದಲ್ಲಿ ಭ್ರಮಣೆ ಮಾಡುತ್ತಿವೆ. ಅಲ್ಲಿ ಅವು ಮೋಹಕರ್ಮ ರೂಪದ ಪಿಶಾಚಿಯ ಮುಖಾಂತರ ವಿಷಯಗಳ ತೃಷ್ಣಾರೂಪ ದಾಹದಿಂದ ಬಾಧೆಗೆ ಒಳಗಾಗುತ್ತದೆ. ಇಂದ್ರಿಯಗಳ ರೂಪ ಮೊದಲಾದ ವಿಷಯಗಳನ್ನು ಆ ದಾಹದ ಉಪಾಯವೆಂದು ತಿಳಿದು ಅವುಗಳತ್ತ ಧಾವಿಸುತ್ತವೆ ಹಾಗೂ ಪರಸ್ಪರದಲ್ಲೂ ವಿಷಯಗಳ ಉಪದೇಶವನ್ನೇ ಮಾಡುತ್ತವೆ. ಹೀಗೆ ಕಾಮ ಮತ್ತು ಭೋಗದ ಕಥೆಗಳು ಅನೇಕ ಸಲ ಕೇಳಿವೆ. ಪರಿಚಯದಲ್ಲಿ, ಅನುಭವದಲ್ಲಿ ಬಂದಿವೆ. ಆದುದರಿಂದ ಸುಲಭವಾಗಿದೆ. ಆದರೆ ಎಲ್ಲ ಪರದ್ರವ್ಯಗಳಿಂದ ಬೇರೆಯಾದ ಚೈತನ್ಯ ಚಮತ್ಕಾರ ಸ್ವರೂಪದ ತನ್ನ ಆತ್ಮನ ಕಥೆಯ ಜ್ಞಾನವು ತನಗೆ ತನ್ನಿಂದ ಎಂದೂ ಉಂಟಾಗಿಲ್ಲ ಮತ್ತು ಯಾರಿಗೆ ಆ ಜ್ಞಾನವಾಗಿದೆ ಅವರ ಸೇವೆಯನ್ನೆಂದೂ ಮಾಡಿಲ್ಲ. ಅದರ ಕಥೆಯನ್ನೆಂದೂ ಕೇಳಿಲ್ಲ. ಪರಿಚಯ ಮಾಡಿಕೊಂಡಿಲ್ಲ ಮತ್ತು ಅನುಭವದಲ್ಲೂ ತಂದುಕೊಂಡಿಲ್ಲ. ಅದಕ್ಕಾಗಿ ಅದರ ಪ್ರಾಪ್ತಿಯು ಸುಲಭವಿಲ್ಲ, ದುರ್ಲಭವಿದೆ.

**ಗಾಥೆ ೬ :** ಭಾವಾರ್ಥ : ಅಶುದ್ಧತೆಯು ಪರದ್ರವ್ಯದ ಸಂಯೋಗದಿಂದ ಉಂಟಾಗುತ್ತದೆ. ಅದರಲ್ಲಿ ಮೂಲದ್ರವ್ಯವಂತೂ ಬೇರೆ ದ್ರವ್ಯರೂಪವಾಗುವದಿಲ್ಲ. ಕೇವಲ ಪರದ್ರವ್ಯದ ನಿಮಿತ್ತದಿಂದ ಅವಸ್ಥೆಯು ಮಲಿನವಾಗಿ ಹೋಗುತ್ತದೆ. ದ್ರವ್ಯದೃಷ್ಟಿಯಿಂದಂತೂ ದ್ರವ್ಯವು ಯಾವುದಿದೆ ಅದೇ ಇದೆ ಮತ್ತು ಪರ್ಯಾಯ

ದೃಷ್ಟಿಯಿಂದ ನೋಡಿದರೆ ಮಲಿನವೇ ಕಂಡುಬರುತ್ತದೆ. ಇದೇ ಪ್ರಕಾರ ಆತ್ಮನ ಸ್ವಭಾವವು ಕೇವಲಜ್ಞಾಯಕವಿದೆ ಮತ್ತು ಅವನ ಅವಸ್ಥೆಯು ಪುದ್ಗಲಕರ್ಮದ ನಿಮಿತ್ತದಿಂದ ರಾಗಾದಿರೂಪವಾಗಿ ಮಲಿನವಾಗಿದೆ. ಅದು ಪರ್ಯಾಯವಿದೆ. ಪರ್ಯಾಯ ದೃಷ್ಟಿಯಿಂದ ನೋಡಿದರೆ ಅವನು ಮಲಿನವಾಗಿಯೇ ಕಂಡು ಬರುತ್ತಾನೆ ಮತ್ತು ದ್ರವ್ಯದೃಷ್ಟಿಯಿಂದ ನೋಡಿದರೆ ನಾಯಕತ್ವವಂತೂ ಜ್ಞಾಯಕತ್ವವೇ ಇದೆ. ಇದು ಎಲ್ಲೂ ಜಡತ್ವವಾಗಿಲ್ಲ. ಇಲ್ಲಿ ದ್ರವ್ಯದೃಷ್ಟಿಗೆ ಪ್ರಾಧಾನ್ಯತೆ ನೀಡಿ ಹೇಳಲಾಗಿದೆ. ಯಾವ ಪ್ರಮತ್ತ-ಅಪ್ರಮತ್ತದ ಭೇದಗಳಿವೆ. ಅವು ಪರದ್ರವ್ಯದ ಸಂಯೋಗದಿಂದಾದ ಪರ್ಯಾಯಗಳಿವೆ. ಈ ಅಶುದ್ಧತೆಯು ದ್ರವ್ಯದೃಷ್ಟಿಯಲ್ಲಿ ಗೌಣವಿದೆ. ವ್ಯವಹಾರವಿದೆ, ಅಭೂತಾರ್ಥವಿದೆ, ಅಸತ್ಯಾರ್ಥವಿದೆ, ಉಪಚಾರವಿದೆ. ದ್ರವ್ಯದೃಷ್ಟಿಯು ಶುದ್ಧವಿದೆ, ಅಭೇದವಿದೆ, ನಿಶ್ಚಯವಿದೆ, ಭೂತಾರ್ಥವಿದೆ, ಸತ್ಯಾರ್ಥವಿದೆ, ಪರಮಾರ್ಥವಿದೆ, ಆದುದರಿಂದ ಆತ್ಮನು ಜ್ಞಾಯಕನೇ ಇದ್ದಾನೆ. ಅವನಲ್ಲಿ ಭೇದಗಳಿಲ್ಲ. ಅದಕ್ಕಾಗಿ ಅವನು ಅಪ್ರಮತ್ತನೂ ಅಲ್ಲ, ಪ್ರಮತ್ತನೂ ಅಲ್ಲ. ಅವನಿಗೆ ಜ್ಞಾಯಕ ಎಂಬ ಹೆಸರನ್ನು ಕೂಡ ಜ್ಞೇಯವನ್ನು ತಿಳಿಯುವದರಿಂದ ಕೊಡಲಾಗುತ್ತದೆ. ಏಕೆಂದರೆ ಯಾವಾಗ ಜ್ಞೇಯದ ಪ್ರತಿಬಿಂಬವು ಹೊಳೆಯುತ್ತದೆ, ಆಗ ಜ್ಞಾನದಲ್ಲಿ ಅಂಥದೇ ಅನುಭವ ಆಗುತ್ತದೆ. ಆದರೂ ಅವನಿಗೆ ಜ್ಞೇಯಕೃತವಾದ ಅಶುದ್ಧತೆಯಿಲ್ಲ, ಏಕೆಂದರೆ ಜ್ಞಾನದಲ್ಲಿ ಜ್ಞೇಯವು ಹೇಗೆ ಪ್ರತಿಭಾಸವಾಗಿದೆ. ಹಾಗೆಯೇ ಜ್ಞಾಯಕನು ಅನುಭವ ಮಾಡಿದ ಮೇಲೆ ಜ್ಞಾಯಕನೇ ಇದ್ದಾನೆ. ಯಾವ ಈ ನಾನು ತಿಳಿಯುವವನಿದ್ದೇನೆ ಅವನು ನಾನೇ ಇದ್ದೇನೆ. ಬೇರೆ ಯಾರೂ ಇಲ್ಲ. ಹೀಗೆ ಒಂದು ಜ್ಞಾಯಕತ್ವ ಮಾತ್ರವಾದ ತಾನು ಶುದ್ಧಾತ್ಮನಿದ್ದಾನೆ. ಇದು ಶುದ್ಧನಯದ ವಿಷಯವಿದೆ. ಉಳಿದ ಯಾವ ಪರಸಂಯೋಗದಿಂದಾದ ಭೇದಗಳಿವೆ, ಅವೆಲ್ಲವೂ ಭೇದರೂಪವಾದ ಅಶುದ್ಧ ದ್ರವ್ಯಾರ್ಥಿಕ ನಯದ ವಿಷಯಗಳಾಗಿವೆ. ಈ ಅಶುದ್ಧ ದ್ರವ್ಯಾರ್ಥಿಕ ನಯವೂ ಕೂಡ ಶುದ್ಧದ್ರವ್ಯದ ದೃಷ್ಟಿಯಲ್ಲಿ ಪರ್ಯಾಯಾರ್ಥಿಕವೇ ಇದೆ. ಅದಕ್ಕಾಗಿ ವ್ಯವಹಾರ ನಯವೇ ಇದೆ ಎಂಬ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕು.

ಜಿನಮತದ ಕಥನವು ಸ್ಯಾದ್ವಾದ ರೂಪವಾಗಿದೆ. ಅದಕ್ಕಾಗಿ ಅಶುದ್ಧನಯವನ್ನು ಸರ್ವಥಾ ಅಸತ್ಯಾರ್ಥವೆಂದು ಮನ್ನಿಸಲಿಕ್ಕಾಗದು. ಏಕೆಂದರೆ ಸ್ಯಾದ್ವಾದದ ಪ್ರಮಾಣದಿಂದ ಶುದ್ಧತೆ ಮತ್ತು ಅಶುದ್ಧತೆಗಳೆರಡೂ ವಸ್ತುವಿನ ಧರ್ಮವಾಗಿವೆ. ವಸ್ತು ಧರ್ಮವು ವಸ್ತುವಿನ ಸತ್ವವಿದೆ. ಅಶುದ್ಧತೆಯು ಪರದ್ರವ್ಯದ ಸಂಯೋಗದಿಂದ ಆಗುತ್ತದೆ. ಅಶುದ್ಧನಯದ ವಿಷಯವು ಸಂಸಾರವಿದೆ. ಸಂಸಾರದಲ್ಲಿ ಆತ್ಮನು ದುಃಖವನ್ನು ಅನುಭವಿಸುತ್ತದೆ. ಪರದ್ರವ್ಯದಿಂದ ಬೇರೆಯಾಗುತ್ತಲೇ ಸಂಸಾರವು ಬಿಡುತ್ತದೆ. ದುಃಖವು ದೂರವಾಗುತ್ತದೆ. ಅದಕ್ಕಾಗಿ ಸ್ಯಾದ್ವಾದದ ಆಶ್ರಯ ಪಡೆದು ಶುದ್ಧನಯದ ಅವಲಂಬನೆ ಪಡೆಯಬೇಕು. ಸ್ವರೂಪದ ಪ್ರಾಪ್ತಿಯಾದ ನಂತರ ಶುದ್ಧನಯದ ಅವಲಂಬನೆಯೂ ಉಳಿಯಲಾರದು. ಯಾವದು ವಸ್ತುಸ್ವರೂಪವಿದೆ ಅದು ಪ್ರಮಾಣ ದೃಷ್ಟಿಯಿದೆ. ಇದರ ಫಲವು ವೀತರಾಗತೆಯಿದೆ.

ಜ್ಞಾಯಕ ಭಾವವು ಪ್ರಮತ್ತ ಅಪ್ರಮತ್ತವಿಲ್ಲ ಎಂದು ಹೇಳಿದೆ. ಅದು ಗುಣಸ್ಥಾನಗಳ ಪರಿಪಾಟಿಯಲ್ಲಿ ಆರನೇ ಗುಣಸ್ಥಾನದ ವರೆಗೆ ಪ್ರಮತ್ತವೂ ಮುಂದೆ ಏಳರಿಂದ ಹಿಡಿದು ಅಪ್ರಮತ್ತವೆಂದೂ ಹೇಳಲಾಗುತ್ತದೆ. ಈ ಎಲ್ಲ ಗುಣಸ್ಥಾನಗಳು ಅಶುದ್ಧನಯದ ಕಥನದಲ್ಲಿ ಬರುತ್ತವೆ. ಶುದ್ಧನಯದಿಂದಂತೂ ಆತ್ಮನು ಜ್ಞಾಯಕನೇ ಇದ್ದಾನೆ.

**ಗಾಥೆ ೭ :** ಜ್ಞಾನಿಗೆ ದರ್ಶನ, ಜ್ಞಾನ, ಚಾರಿತ್ರಗಳೆಂಬ ಮೂರು ಭಾವಗಳನ್ನು ವ್ಯವಹಾರದಿಂದ ಹೇಳಲಾಗುತ್ತದೆ. ನಿಶ್ಚಯದಿಂದ ದರ್ಶನವೂ ಇಲ್ಲ. ಜ್ಞಾನವೂ ಇಲ್ಲ ಮತ್ತು ಚಾರಿತ್ರವೂ ಇಲ್ಲ. ಜ್ಞಾನಿಯಂತೂ ಒಬ್ಬ ಶುದ್ಧ ಜ್ಞಾಯಕನೇ ಇದ್ದಾನೆ. ಪರಮಾರ್ಥದಿಂದ ವಿಚಾರ ಮಾಡಿ ನೋಡಿದರೆ ಒಂದು ದ್ರವ್ಯವು ಅನಂತ ಪರ್ಯಾಯಗಳನ್ನು ಅಭೇದ ರೂಪದಿಂದ ಕುಡಿದು ಕುಳಿತಿದೆ. ಅದಕ್ಕಾಗಿ ಅದರಲ್ಲಿ ಭೇದಗಳಿಲ್ಲ. ಎಲ್ಲಿಯವರೆಗೆ ರಾಗಾದಿಗಳು ದೂರವಾಗುವದಿಲ್ಲವೋ ಅದು ವರೆಗೆ ಭೇದವನ್ನು ಗೌಣ ಮಾಡಿ ಅಭೇದರೂಪವಾದ ನಿರ್ವಿಕಲ್ಪ ಅನುಭವವನ್ನು ಮಾಡಿಸಲಾಗಿದೆ. ವೀತರಾಗನಾದಮೇಲೆ ಭೇದಾಭೇದರೂಪವಾದ ವಸ್ತುವಿನ ಜ್ಞಾತಾನಾಗಿಬಿಡುತ್ತಾನೆ. ಅಲ್ಲಿ ನಯದ ಅವಲಂಬನೆ ಉಳಿಯುವದಿಲ್ಲ.

**ಗಾಥೆ ೮ :** ಹೇಗೆ ಅನಾರ್ಯ (ಮ್ಲೇಚ್ಛ) ಜನರಿಗೆ ಅನಾರ್ಯ ಭಾಷೆಯಿಲ್ಲದೇ ವಸ್ತುವಿನ ಸ್ವರೂಪವನ್ನು ಗ್ರಹಣ ಮಾಡಿಸುವದಕ್ಕೆ ಯಾರೂ ಸಮರ್ಥರಿಲ್ಲ, ಅದೇ ಪ್ರಕಾರ ವ್ಯವಹಾರವಿಲ್ಲದೇ ಪರಮಾರ್ಥದ ಉಪದೇಶ ಕೊಡುವುದು ಅಶಕ್ಯವಿದೆ.

ಜನರು ಶುದ್ಧನಯವನ್ನು ತಿಳಿಯುವದಿಲ್ಲ. ಏಕೆಂದರೆ ಶುದ್ಧನಯದ ವಿಷಯವು ಅಭೇದ ಏಕರೂಪವಾದ ವಸ್ತುವಿದೆ, ಆದರೆ ಅವರು ಅಶುದ್ಧನಯವನ್ನೇ ತಿಳಿಯುತ್ತಾರೆ. ಏಕೆಂದರೆ ಅದರ ವಿಷಯವು ಭೇದರೂಪ ಅನೇಕ ಪ್ರಕಾರವಿದೆ. ಆದುದರಿಂದ ಅವರು ವ್ಯವಹಾರದ ಮುಖಾಂತರವೇ ಪರಮಾರ್ಥವನ್ನು ತಿಳಿಯುವ ಸಾಧ್ಯತೆಯಿದೆ. ಆದುದರಿಂದ ವ್ಯವಹಾರ ನಯವು ಪರಮಾರ್ಥವನ್ನು ಹೇಳುವಂಥದ್ದಿದೆ ಎಂದು ತಿಳಿದುಕೊಂಡು ಅದರ ಉಪದೇಶವನ್ನು ಕೊಡಲಾಗುತ್ತದೆ. ಇಲ್ಲಿ ವ್ಯವಹಾರದ ಅವಲಂಬನೆ ಮಾಡಿಸುತ್ತಾರೆಂದು ತಿಳಿಯಬಾರದು. ಬದಲಾಗಿ ವ್ಯವಹಾರದ ಅವಲಂಬನೆಯನ್ನು ಬಿಡಿಸಿ ಪರಮಾರ್ಥದಲ್ಲಿ ತಲುಪಿಸುತ್ತಾರೆಂದು ತಿಳಿದುಕೊಳ್ಳಬೇಕು.

**ಗಾಥೆ ೧೧ :** ವ್ಯವಹಾರ ನಯವು ಅಭೂತಾರ್ಥವಿದೆ ಮತ್ತು ಶುದ್ಧನಯವು ಭೂತಾರ್ಥವಿದೆ ಎಂದು ಋಷೀಶ್ವರರುಗಳು ಹೇಳಿದ್ದಾರೆ. ಯಾವ ಜೀವನು ಭೂತಾರ್ಥದ ಆಶ್ರಯ ಪಡೆಯುತ್ತಾನೆ. ಆ ಜೀವನು ನಿಶ್ಚಯದಿಂದ ಸಮ್ಯಗ್ದೃಷ್ಟಿ ಇದ್ದಾನೆ.

ವ್ಯವಹಾರ ನಯವೆಲ್ಲವೂ ಅಭೂತಾರ್ಥವಿದೆ. ಅಸತ್ಯವಿದೆ. ಶುದ್ಧನಯವು ಭೂತಾರ್ಥ ಆಗಿರುವದರಿಂದ ವಿದ್ಯಮಾನ, ಸತ್ಯ ಭೂತಾರ್ಥವನ್ನು ಪ್ರಕಟ ಮಾಡುತ್ತದೆ.

ಹೇಗೆ ಕೆಸರು ಮಿಶ್ರಿತ ಶುದ್ಧ ನೀರು ಅದರ ಭೇದವರಿಯದ ಮನುಷ್ಯನು ಆ ನೀರು ಮಲಿನವೆಂದೇ ತಿಳಿಯುತ್ತಾನೆ, ಹೇಗೆ ಜ್ಞಾನಿಯು ಕೃತಕ ಫಲವನ್ನು ಹಾಕಿ ವಿವೇಕದಿಂದ ಪುರುಷಾರ್ಥ ಮಾಡಿ ಶುದ್ಧ ನೀರನ್ನು ಪಡೆಯುತ್ತಾನೆ, ನಿರ್ಮಲ ನೀರಿನ ಅನುಭವ ಮಾಡುತ್ತಾನೆ. ಅದೇ ಪ್ರಕಾರ ಪ್ರಬಲ ಕರ್ಮಗಳ ಮಿಶ್ರಣದಿಂದ ಯಾರ ಸ್ವಾಭಾವಿಕವಾದ ಒಂದು ಜ್ಞಾಯಕ ಭಾವವು ತಿರೋಭೂತವಾಗಿ ಹೋಗಿದೆ. ಅಂಥ ಆತ್ಮನ ಅನುಭವ ಮಾಡುವಂಥ ಪುರುಷನು ಆತ್ಮ ಮತ್ತು ಕರ್ಮದ ಭೇದ ಮಾಡದಂಥ, ವ್ಯವಹಾರದಿಂದ ವಿಮೋಹಿತನಾದ ಅವನನ್ನು (ಆತ್ಮನನ್ನು) ಯಾರಲ್ಲಿ ಭಾವಗಳ ವಿಶ್ವರೂಪತೆ (ಅನೇಕ ರೂಪಗಳು) ಪ್ರಕಟವಿವೆ. ಅಂಥ ಅನುಭವ ಮಾಡುತ್ತಾನೆ. ಆದರೆ ಭೂತಾರ್ಥದರ್ಶಿಯಾದ (ಶುದ್ಧನಯವನ್ನು ನೋಡುವಂಥ)ವನು ತನ್ನ ಬುದ್ಧಿಯಿಂದ ಹಾಕಲ್ಪಟ್ಟ ಶುದ್ಧನಯದ ಅನುಸಾರವಾಗಿ ಬೋಧವಾದ ಕೂಡಲೇ ಉತ್ಪನ್ನವಾದ ಆತ್ಮಕರ್ಮದ ವಿವೇಕದಿಂದ ತನ್ನ ಪುರುಷಾರ್ಥದ ಮುಖಾಂತರ ಪ್ರಕಟಪಡಿಸಲ್ಪಟ್ಟ ಸ್ವಾಭಾವಿಕವಾದ ಒಮದು ಜ್ಞಾಯಕ ಭಾವತನದ ಕಾರಣದಿಂದ ಅವನು (ಆತ್ಮನನ್ನು) ಯಾರಲ್ಲಿ ಒಂದು ಜ್ಞಾಯಕ ಭಾವವು ಪ್ರಕಾಶಮಾನವಿದೆ. ಅಂಥ ಅನುಭವ ಮಾಡುತ್ತಾನೆ. ಇಲ್ಲಿ ಶುದ್ಧನಯವು ಕೃತಕ ಫಲದ ಸ್ಥಾನದಲ್ಲಿ ಇರುವದರಿಂದ ಯಾರು ಶುದ್ಧನಯದ ಆಶ್ರಯ ಪಡೆಯುತ್ತಾರೆ. ಅವರೇ ಸಮ್ಯಕ್ ಅವಲೋಕನ ಮಾಡುವದರಿಂದ ಸಮ್ಯಗ್ದೃಷ್ಟಿಗಳಿದ್ದಾರೆ. ಇತರರು (ಯಾರು ಸರ್ವಥಾ ಅಶುದ್ಧನಯದ ಆಶ್ರಯ ಪಡೆಯುತ್ತಾರೆ ಅವರು ಸಮ್ಯಗ್ದೃಷ್ಟಿಗಳಿಲ್ಲ. ಆದುದರಿಂದ ಕರ್ಮಗಳಿಂದ ಭಿನ್ನವಾದ ಆತ್ಮನನ್ನು ನೋಡುವಂಥವರಿಗೆ ವ್ಯವಹಾರ ನಯವು ಅನುಸರಣೆ ಮಾಡಲು ಯೋಗ್ಯವಾಗಿಲ್ಲ.

**ಗಾಥೆ ೧೨ :** ಯಾರು ಶುದ್ಧನಯದ ವರೆಗೆ ತಲುಪಿ ಶ್ರದ್ಧೆ ಉಳ್ಳವರಾಗಿದ್ದಾರೆ ಹಾಗೂ ಪೂರ್ಣಜ್ಞಾನ ಚಾರಿತ್ರವಂತರಾಗಿದ್ದಾರೆ. ಅವರಿಗಂತೂ ಶುದ್ಧ ಆತ್ಮನ ಉಪದೇಶ ಮಾಡುವಂಥ ಶುದ್ಧನಯವು ತಿಳಿದುಕೊಳ್ಳಲು ಯೋಗ್ಯವಾಗಿದೆ ಮತ್ತು ಯಾವ ಜೀವರುಗಳು ಅಪರಮ ಭಾವದಲ್ಲಿ ಅಂದರೆ ಶ್ರದ್ಧೆ, ಜ್ಞಾನ ಹಾಗೂ ಚಾರಿತ್ರಗಳ ಪೂರ್ಣ ಭಾವವನ್ನು ತಲುಪಲು ಸಾಧ್ಯವಾಗಿಲ್ಲ. ಸಾಧಕ ಅವಸ್ಥೆಯಲ್ಲಿಯೇ ಸ್ಥಿರವಾಗಿದ್ದರೆ ಅವರು ವ್ಯವಹಾರದ ಮುಖಾಂತರ ಉಪದೇಶ ಮಾಡಲು ಯೋಗ್ಯರಾಗಿದ್ದಾರೆ.

ಆತ್ಮನು ಅಜ್ಞಾನ ಅವಸ್ಥೆಯಲ್ಲಿ ಇಪ್ಪತ್ನಾಲ್ಕು ತಾಸು ಕರ್ಮದ ಬಂಧ ಮಾಡುತ್ತಲೇ ಇರುತ್ತಾನೆ. ಈ ಕಾರಣದಿಂದ ಕರುಣಾವಂತ ಆಚಾರ್ಯ ಭಗವಂತರು ಹೇಳುವದೇನೆಂದರೆ ಎಲ್ಲಿಯ ವರೆಗೆ ತತ್ವದ ನಿರ್ಣಯ ಮತ್ತು ಅನುಭವ ಆಗಿರುವದಿಲ್ಲ. ಅಲ್ಲಿಯ ವರೆಗೆ ಅದರದೇ ಲಕ್ಷ್ಯದಿಂದ (ಶುದ್ಧದ ಒಂದೇ ಲಕ್ಷ್ಯದಿಂದ) ನಿಯಮದಿಂದ ಶುಭದಲ್ಲಿಯೇ ಇರುವದು ಯೋಗ್ಯವಿದೆ. ಅಶುಭದಲ್ಲಿರುವದು ಯೋಗ್ಯವಲ್ಲ. ಏಕೆಂದರೆ ಅಶುಭದಿಂದ ದೇವ-ಶಾಸ್ತ್ರ-ಗುರುಗಳ ಸಂಯೋಗ

ಸಿಗುವದು ದುರ್ಲಭವಿದೆ. ಈ ಮಾತಿನಲ್ಲಿ ಯಾರ ವಿರೋಧವಿದೆಯೋ ಅವನು ನಮಗೆ ಕ್ಷಮೆ ಮಾಡಲಿ. ಏಕೆಂದರೆ ಈ ಮಾತನ್ನು ನಾವು ಯಾವದೇ ಪಕ್ಷರಹಿತ ಭಾವದಿಂದ ಹೇಳುತ್ತೇವೆ. ಎಲ್ಲ ಆಚಾರ್ಯ ಭಗವಂತರು ಸಹ ಹೇಳಿದ್ದಾರೆ ಮತ್ತು ಎಲ್ಲೆಲ್ಲಿ ಈ ಮಾತುಗಳ ಸರ್ವಥಾ ನಿಷೇಧ ಮಾಡಲು ಹೇಳಿದ್ದಾರೆ. ಅದು ಕೇವಲ ಒಂದು ಶುದ್ಧಭಾವದ ಲಕ್ಷ್ಯ ಮಾಡಲು ಹೇಳಲಾಗಿದೆ. ಅಶುಭದಲ್ಲಿಯೇ ರಮಣ ಮಾಡುವ ಸಲುವಾಗಿ ಅಲ್ಲ. ಮುನಿರಾಜರು ಆರನೇ ಗುಣಸ್ಥಾನದಲ್ಲಿ ಈ ಮಾತಿನ ನಿಷೇಧ ಏಳನೇ ಗುಣಸ್ಥಾನ ರೂಪ ಅಭೇದ ಆತ್ಮಾನುಭೂತಿಯಲ್ಲಿ ಸ್ಥಿತರಾಗಿ ಮುಂದೆ ಹೋಗಿ ಕೇವಲಜ್ಞಾನ ಮತ್ತು ಮೋಕ್ಷಪ್ರಾಪ್ತ ಮಾಡುವ ಸಲುವಾಗಿ ಹೇಳಲಾಗಿದೆ. ಆದರೆ ಆರನೇ ಗುಣಸ್ಥಾನದಲ್ಲಿ ಸಹಜ ಉಂಟಾಗುವ ಶುಭದ ನಿಷೇಧ ಮಾಡಿ ಕೆಳಗೆ ಬೀಳಲು ಅಂದರೆ ಅವಿರತಿ ಅಂದರೆ ಅಜ್ಞಾನಿ ಆಗಲು ಹೇಳಿರುವದಿಲ್ಲ. ಆದ್ದರಿಂದ ಎಲ್ಲ ಮುಮುಕ್ಷು ಜನರು ಈ ಮಾತು ಯಥಾರ್ಥವಾಗಿ ತಿಳಿಯುವದು ಅತ್ಯಂತ ಅವಶ್ಯಕವಿದೆ. ಕೇವಲ ಶುದ್ಧಾತ್ಮನನ್ನು ತಿಳಿಯುವದೇ ಮುಖ್ಯವಾಗಿದೆ. ಶುಭದ್ದೂ ಅಲ್ಲ, ಆದರೆ ಎಲ್ಲಿಯ ವರೆಗೆ ಶುದ್ಧರೂಪವಾಗಿ ಪರಿಣಮಿಸುವದಿಲ್ಲ ಅಲ್ಲಿಯವರೆಗೆ ಇರುವದಾದರೆ ನಿಯಮದಿಂದ ಶುಭದಲ್ಲಿಯೇ ಇರಬೇಕು.

**ಶ್ಲೋಕ ೪ :** ನಿಶ್ಚಯ ಮತ್ತು ವ್ಯವಹಾರ ಇವೆರಡೂ ನಯಗಳಲ್ಲಿ ವಿಷಯದ ಭೇದದಿಂದ ಪರಸ್ಪರ ವಿರೋಧವಿದೆ. ಈ ವಿರೋಧದ ನಾಶ ಮಾಡುವಂಥ 'ಸ್ಯಾತ್' ಪದದಿಂದ ಗುರುತಿಸಲ್ಪಟ್ಟ ಜಿನ ಭಗವಂತರ ವಚನವಿದೆ. ಅದರಲ್ಲಿ ಯಾವ ಪುರುಷರು ಆನಂದ ಪಡುತ್ತಾರೆ. ಪ್ರಚುರವಾದ ಪ್ರೀತಿಯಿಂದ ಅಭ್ಯಾಸ ಮಾಡುತ್ತಾರೆ. ಅವರು ತಮ್ಮಿಂದ ತಾವೇ (ಬೇರಾವ ಕಾರಣವಿಲ್ಲದೇ) ಮಿಥ್ಯಾತ್ವ ಕರ್ಮೋದಯದ ವಮನ ಮಾಡಿ ಈ ಅತಿಶಯ ರೂಪ ಪರಮಜ್ಯೋತಿ ಪ್ರಕಾಶಮಾನವಾದ ಶುದ್ಧಾತ್ಮನನ್ನು ತತ್ಕಾಲವೇ ನೋಡುತ್ತಾರೆ. ಆ ಸಮಯಸಾರ ರೂಪವಾದ ಶುದ್ಧಾತ್ಮನು ಹೊಸದಾಗಿ ಉತ್ಪನ್ನವಾಗಿಲ್ಲ. ಮೊದಲು ಕರ್ಮಗಳಿಂದ ಆಚ್ಛಾದಿಸಲ್ಪಟ್ಟಿದ್ದನು. ಅವನು ಈಗ ಪ್ರಕಟ ವ್ಯಕ್ತ ರೂಪನಾಗಿದ್ದಾನೆ. ಮತ್ತು ಅವನು ಸರ್ವಥಾ ಏಕಾಂತರೂಪವಾದ ಕುನಯದ ಪಕ್ಷದಿಂದ ಖಂಡಿತವಾಗುವದಿಲ್ಲ. ನಿರ್ಬಾಧನಿದ್ದಾನೆ.

**ಶ್ಲೋಕ ೫ :** ಭೇದರೂಪ ವ್ಯವಹಾರ ನಯವು ಅದು ಅಜ್ಞಾನಿಗೆ ಮಾತ್ರ ತಿಳಿಸುವ ಸಲುವಾಗಿಯೇ ಇದೆ. ಆದರೆ ಹೇಗೆಯೇ ಭೇದರೂಪ ಆತ್ಮನು ಇರುವದೇ ಇಲ್ಲ. ಆದ್ದರಿಂದ ಆಶ್ರಯವಂತೂ ಅಭೇದರೂಪ ಆತ್ಮನ ಶುದ್ಧಾತ್ಮನ ಅಂದರೆ ಯಾವುದರಲ್ಲಿ ಪರದ್ರವ್ಯಗಳಿಂದ ಉಂಟಾಗುವಂಥ ಭಾವಗಳನ್ನು ಗೌಣ ಮಾಡಲಾಗಿದೆ. ಅದರದೇ ಮಾಡುವದಿದೆ. ಅದುವೇ ಆತ್ಮ ಉಪಾದೇಯವಿದೆ. ದ್ರವ್ಯ ಪರ್ಯಾಯ ರೂಪ ಭೇದ ಅಥವಾ ಪರ್ಯಾಯದ ನಿಷೇಧ ರೂಪಭೇದದ

ಯಾವ ಆಶ್ರಯ ತೆಗೆದುಕೊಳ್ಳುತ್ತಾರೆ. ಅವರಿಗೆ ಅಭೇದ ಆತ್ಮನ ಆಭಾಸವು ಸಹ ಬರುವದಿಲ್ಲ. ಅವರು ಭೇದದಲ್ಲಿಯೇ ರಮಣ ಮಾಡುತ್ತಾರೆ. ಅವರು ವಿಕಲ್ಪದಲ್ಲಿಯೇ ರಮಿಸುತ್ತಾರೆ ಮತ್ತು ಭೇದದ್ದೇ ಆದರ ಮಾಡುತ್ತಾರೆ. ಏಕೆಂದರೆ ಅವರಿಗೆ ನಿಷೇಧರಹಿತ ದೃಷ್ಟಿಯ ವಿಷಯವೇ ಮಾನ್ಯವಾಗುವದಿಲ್ಲ. ಹೀಗೆಯೇ ಕರುಣಾಜನಕ ಪರಿಸ್ಥಿತಿಯಿದೆ.

**ಶ್ಲೋಕ ೬ :** ಇಲ್ಲಿ ಆಚಾರ್ಯ ಭಗವಾನರು ಹೇಳುತ್ತಾರೆ – ಒಂಬತ್ತು ತತ್ವಗಳ ರೂಢಿಯಿದೆ. ಅದನ್ನು ಬಿಟ್ಟು ಅಂದರೆ ಗೌಣ ಮಾಡಿ ನೋಡಿದ ಮೇಲೆ ಆ ಭಾವನೆಯನ್ನು ಅನುಭವದಲ್ಲಿ ತರುತ್ತಲೇ ಆತ್ಮನು ಪ್ರಾಪ್ತಿಯಾಗುತ್ತಾನೆ.

**ಶ್ಲೋಕ ೮ :** ನವತತ್ವಗಳಲ್ಲಿ ಬಹಳ ಕಾಲದಿಂದ ಅಡಗಿಹೋದ ಈ ಆತ್ಮಜ್ಯೋತಿಯನ್ನು ಶುದ್ಧನಯದಿಂದ ಹೊರಗೆ ತೆಗೆದು ಪ್ರಕಟಪಡಿಸಲಾಗಿದೆ. ಹೇಗೆ ವರ್ಣಗಳ ಸಮೂಹದಲ್ಲಿ ಅಡಗಿಹೋದ ಏಕಾಕಾರವಾದ ಬಂಗಾರವನ್ನು ಹೊರಗೆ ತೆಗೆಯುತ್ತಾರೆ. ಅದಕ್ಕಾಗಿ ಈಗ ಎಲೈ ಭವ್ಯ ಜೀವರುಗಳೇ ! ಇದನ್ನು ಯಾವಾಗಲೂ ಇತರ ದ್ರವ್ಯಗಳಿಂದ ಹಾಗೂ ಅವುಗಳಿಂದ ಆಗುವಂಥ ನೈಮಿತ್ತಿಕ ಭಾವಗಳಿಂದ ಭಿನ್ನ ಏಕರೂಪವಾಗಿ ನೋಡಿರಿ. ಇದು ಪ್ರತಿಯೊಂದು ಪರ್ಯಾಯದಲ್ಲಿ ಏಕರೂಪವಾಗಿ ಚಿತ್‌ಚಮತ್ಕಾರ ಮಾತ್ರವಾಗಿ ಕಾಣುತ್ತಾನೆ.

ಈ ಆತ್ಮನು ಎಲ್ಲ ಅವಸ್ಥೆಗಳಲ್ಲಿ ವಿವಿಧ ರೂಪದಿಂದ ಕಂಡು ಬರುತ್ತಿದ್ದನು. ಅವನನ್ನು ಶುದ್ಧ ನಯವು ಒಂದು ಚೈತನ್ಯ ಚಮತ್ಕಾರ ಮಾತ್ರವಾಗಿ ತೋರಿಸಿದೆ. ಅದಕ್ಕಾಗಿ ಈಗ ಅದನ್ನು ಯಾವಾಗಲೂ ಏಕಾಕಾರವಾಗಿಯೇ ಅನುಭವ ಮಾಡಿರಿ. ಪರ್ಯಾಯ ಬುದ್ಧಿಯ ಏಕಾಂತ ಮತವನ್ನು ಇಟ್ಟುಕೊಳ್ಳಬೇಡಿರಿ ಎಂದು ಶ್ರೀ ಗುರುಗಳ ಉಪದೇಶವಿದೆ.

**ಶ್ಲೋಕ ೧೦ :** ಶುದ್ಧ ನಯವು ಆತ್ಮಸ್ವಭಾವವನ್ನು ಪ್ರಕಟಪಡಿಸುತ್ತ ಉದಯರೂಪವಾಗುತ್ತದೆ. ಅದು ಆತ್ಮಸ್ವಭಾವವನ್ನು ಪರದ್ರವ್ಯ, ಪರದ್ರವ್ಯದ ಭಾವ ಹಾಗೂ ಪರದ್ರವ್ಯದ ನಿಮಿತ್ತದಿಂದ ಆಗುವಂಥ ತನ್ನ ವಿಭಾವ ಹೀಗೆ ಪರಭಾವಗಳಿಂದ ಭಿನ್ನವಾಗಿ ಪ್ರಕಟಪಡಿಸುತ್ತದೆ. ಮತ್ತು ಆ ಆತ್ಮಸ್ವಭಾವವು ಸಂಪೂರ್ಣ ರೂಪದಿಂದ ಪೂರ್ಣವಿದೆ. ಸಮಸ್ತ ಲೋಕಾಲೋಕಗಳನ್ನು ತಿಳಿಯುವದಿದೆ. ಜ್ಞಾತಾವಿದೆ. ಹೀಗೆ ಪ್ರಕಟಪಡಿಸುತ್ತದೆ. ಏಕೆಂದರೆ ಜ್ಞಾನದಲ್ಲಿ ಕರ್ಮ ಸಂಯೋಗದಿಂದ ಭೇದಗಳಿವೆ. ಶುದ್ಧನಯದಲ್ಲಿ ಕರ್ಮಗಳು ಗೌಣವಾಗಿವೆ ಮತ್ತು ಆ ಆತ್ಮಸ್ವಭಾವವನ್ನು ಏಕ ಸರ್ವ ಭೇದ ಭಾವಗಳಿಂದ ರಹಿತವಾಗಿ ಏಕಾಕಾರವಾಗಿ ಪ್ರಕಟ ಪಡಿಸುತ್ತದೆ. ಯಾವುದರಲ್ಲಿ ಸಮಸ್ತ ಸಂಕಲ್ಪ ವಿಕಲ್ಪಗಳ ಸಮೂಹವು ವಿಲೀನವಾಗಿದೆ. ಹೀಗೆ ಪ್ರಟಕಪಡಿಸುತ್ತದೆ. ಹೀಗೆ ಶುದ್ಧ ನಯವು ಪ್ರಕಾಶವಾಗುತ್ತದೆ. (ದ್ರವ್ಯಕರ್ಮ, ಭಾವಕರ್ಮ ಮತ್ತು ನೋಕರ್ಮ ಮೊದಲಾದ ಪುದ್ಗಲ ದ್ರವ್ಯಗಳಲ್ಲಿ ತನ್ನ ಕಲ್ಪನೆ ಮಾಡುವದು ಅದು ಸಂಕಲ್ಪವಿದೆ ಮತ್ತು ಜ್ಞೇಯಗಳ ಭೇದದಿಂದ ಜ್ಞಾನದಲ್ಲಿ ಭೇದಗಳು ತಿಳಿದುಬರುವದು ಅದು ವಿಕಲ್ಪವಿದೆ.)

**ಗಾಥೆ ೧೫ :** ಯಾವ ಪುರುಷನು ಆತ್ಮನನ್ನು ಅಬದ್ಧ, ಸ್ಪೃಷ್ಟ, ಅನನ್ಯ, ಅವಿಶೇಷವಾಗಿ ನೋಡುತ್ತಾನೆ, ಅವನು ಎಲ್ಲ ಜಿನಶಾಸನವನ್ನು ನೋಡುತ್ತಾನೆ. ಆ ಜಿನಶಾಸನವು ಬಾಹ್ಯ ದ್ರವ್ಯಶ್ರುತ ಹಾಗೂ ಅಭ್ಯಂತರ ಜ್ಞಾನರೂಪವಾದ ಭಾವಶ್ರುತ ಉಳ್ಳದ್ದಿದೆ.

ಇಲ್ಲಿ ಆತ್ಮನ ಅನುಭೂತಿಗೇನೇ ಜ್ಞಾನದ ಅನುಭೂತಿ ಎಂದು ಹೇಳಲಾಗಿದೆ. ಅಜ್ಞಾನಿ ಜನರು ಜ್ಞೇಯಗಳಲ್ಲೇ ಇಂದ್ರಿಯ ಜ್ಞಾನದ ವಿಷಯಗಳಲ್ಲಿಯೇ ಲುಬ್ಧರಾಗುತ್ತಲಿದ್ದಾರೆ. ಅವರು ಇಂದ್ರಿಯ ಜ್ಞಾನದ ವಿಷಯುಗಳಿಂದ ಅನೇಕಾಕಾರವಾದ ಜ್ಞಾನವನ್ನೇ ಜ್ಞೇಯಮಾತ್ರವಾಗಿ ಆಸ್ವಾದನೆ ಮಾಡುತ್ತಾರೆ. ಆದರೆ ಜ್ಞೇಯಗಳಿಂದ ಭಿನ್ನವಾದ ಜ್ಞಾನಮಾತ್ರದ ಆಸ್ವಾದನೆ ಮಾಡುವದಿಲ್ಲ ಮತ್ತು ಯಾರು ಜ್ಞಾನಿಗಳಾಗಿದ್ದಾರೆ ಅವರು ಜ್ಞೇಯಗಳಲ್ಲಿ ಆಸಕ್ತರಾಗುವದಿಲ್ಲ. ಅವರು ಜ್ಞೇಯಗಳಿಂದ ಭಿನ್ನವಾದ ಏಕಾಕಾರವಾದ ಜ್ಞಾನದ ಆಸ್ವಾದನೆಯನ್ನೇ ತೆಗೆದುಕೊಳ್ಳುತ್ತಾರೆ. ಹೇಗೆ ತರಕಾರಿಗಳಿಂದ ಭಿನ್ನವಾದ ಉಪ್ಪಿನ ಹಳಕದ ಕ್ಷಾರ ಮಾತ್ರವಾದ ಸ್ವಾದವು ಬರುತ್ತದೆ. ಅದೇ ಪ್ರಕಾರ ಆಸ್ವಾದ ತೆಗೆದುಕೊಳ್ಳುತ್ತಾರೆ. ಏಕೆಂದರೆ ಯಾವ ಜ್ಞಾನವಿದೆ, ಅದು ಆತ್ಮವಿದೆ ಮತ್ತು ಯಾವುದು ಆತ್ಮವಿದೆ ಅದು ಜ್ಞಾನವಿದೆ. ಹೀಗೆ ಗುಣ-ಗುಣಿಯ ಅಭೇದ ದೃಷ್ಟಿಯಲ್ಲಿ ಬರುವಂಥ ಎಲ್ಲ ಪರಪದಾರ್ಥಗಳಿಂದ ಭಿನ್ನವಾದ ತನ್ನ ಪರ್ಯಾಯಗಳಲ್ಲಿ ಏಕರೂಪ ನಿಶ್ಚಲ ತನ್ನ ಗುಣಗಳಲ್ಲಿ ಏಕರೂಪ, ಪರನಿಮಿತ್ತದಿಂದ ಉತ್ಪನ್ನವಾದ ಭಾವಗಳಿಂದ ಭಿನ್ನ ತನ್ನ ಸ್ವರೂಪದ ಅನುಭವವು ಜ್ಞಾನದ ಅನುಭವವೇ ಇದೆ. ಈ ಅನುಭವವು ಭಾವಶ್ರುತ ಜ್ಞಾನರೂಪವಾದ ಜಿನಶಾಸನದ ಅನುಭವವಿದೆ. ಶುದ್ಧನಯದಿಂದ ಇದರಲ್ಲಿ ಯಾವದೇ ತರದ ಭೇದವಿಲ್ಲ.

**ಗಾಥೆ ೧೭-೧೮ :** ಯಾವ ಪ್ರಕಾರ ಯಾವನೋ ಧನಾಪೇಕ್ಷೆಯುಳ್ಳ ಪುರುಷನು ರಾಜನನ್ನು ತಿಳಿದುಕೊಂಡು ಶ್ರದ್ಧೆ, ಸೇವೆ ಮಾಡುತ್ತಾನೆ ಮತ್ತು ಅನಂತರ ಅವನನ್ನು ಪ್ರಯತ್ನಪೂರ್ವಕವಾಗಿ ಅನುಚರಣೆ ಮಾಡುತ್ತಾನೆ, ಅಂದರೆ ಸರಿಯಾದ ರೀತಿಯಲ್ಲಿ ರಾಜನ ಸೇವೆ ಮಾಡುತ್ತಾನೆ. ಇದೇ ರೀತಿಯಾಗಿ ಮೋಕ್ಷದ ಇಚ್ಛೆ ಉಳ್ಳವರು ಜೀವರೂಪದ ರಾಜನನ್ನು ತಿಳಿದುಕೊಳ್ಳಬೇಕು. ಪುರುಷಾರ್ಥ ಮಾಡಬೇಕಾಗುವದು. ಅನುಭವದ ಮೂಲಕ ಆತ್ಮನಲ್ಲಿ ತನ್ಮಯನಾಗಬೇಕು.

**ಗಾಥೆ ೩೫ :** ಹೇಗೆ ಲೋಕದಲ್ಲಿ ಯಾವನೋ ಪುರುಷನು ಪರವಸ್ತುವನ್ನು 'ಇದು ಪರವಸ್ತುವಿದೆ' ಎಂದು ಯಥಾರ್ಥವಾಗಿ ತಿಳಿದನೆಂದರೆ ಆ ವಸ್ತುವನ್ನು ಅವನು ತ್ಯಾಗ ಮಾಡುತ್ತಾನೆ. ಅದೇ ಪ್ರಕಾರವಾಗಿ ಜ್ಞಾನಿ ಪುರುಷನು ಎಲ್ಲ ಪರದ್ರವ್ಯಗಳನ್ನು, ಪರಭಾವಗಳನ್ನು ಪರವೆಂದು ತಿಳಿದುಕೊಂಡು ಅವನ್ನು ತ್ಯಾಗ ಮಾಡುತ್ತಾನೆ. ಎಲ್ಲಿಯವರೆಗೆ ಪರವಸ್ತುವನ್ನು ಅಪರಾಧದಿಂದ ತಮ್ಮದೆಂದು ತಿಳಿಯುತ್ತಾರೆ. ಅದು ವರೆಗೆ ಮಮತ್ವ ಇರುತ್ತದೆ. ಯಾವಾಗ ಯಥಾರ್ಥ ಜ್ಞಾನವಾಗುವದರಿಂದ ಪರವಸ್ತುವನ್ನು ಇತರರೆಂದು ತಿಳಿದುಬರುತ್ತದೆ. ಆಗ ಇನ್ನೊಬ್ಬರ ವಸ್ತುವಿನಲ್ಲಿ ಮಮತ್ವವು ಹೇಗೆ ಉಳಿದೀತು ? ಉಳಿಯುವದಿಲ್ಲ.

**ಗಾಥೆ ೩೬ :** ಯಾವನು ಮೋಹಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ಉಪಯೋಗವೊಂದೇ ನಾನಾಗಿದ್ದೇನೆ ಎಂದು ತಿಳಿಯುತ್ತಾನೆ. ಅಂದರೆ ಸಮ್ಯಗ್ದರ್ಶನದ ವಿಷಯದಲ್ಲಿ ಮೋಹರೂಪಿ ವಿಭಾವ-ಭಾವ ಇಲ್ಲದಿರುವದರಿಂದ ಜ್ಞಾನಿಯು ಶುದ್ಧಾತ್ಮನಲ್ಲಿಯೇ 'ನನ್ನತನ' ಮಾಡುತ್ತಾನೆ. ಆಗ ಅವನು ಕೇವಲ ಇಷ್ಟೇ ತಿಳಿಯುತ್ತಾನೆ. ನನಗೆ ಯಾವದೇ ವಿಭಾವ-ಭಾವದ ಜೊತೆಗೆ ಸ್ವಲ್ಪವೂ ಸಂಬಂಧವಿಲ್ಲ. ಅಂದರೆ ಅವನಿಗೆ ಕೇವಲ ಒಂದು ಸಾಮಾನ್ಯ ಉಪಯೋಗ ರೂಪ ಜ್ಞಾಯಕ ಭಾವದಲ್ಲಿಯೇ 'ನನ್ನತನ' ಇರುವದು. ಮೋಹದ ಜೊತೆಗೆ ಸ್ವಲ್ಪವೂ ಸಂಬಂಧ ಇರುವದಿಲ್ಲ. ಕೇವಲ ಒಂದು ಶುದ್ಧಾತ್ಮವಿದೆ. ಅದುವೇ ನಾನಿದ್ದೇನೆ. ಹೀಗೆ ಯಾವನು ತಿಳಿಯುತ್ತಾನೆ, ಅವನಿಗೆ ಸಿದ್ಧಾಂತದ ಅಥವಾ ಸ್ವ-ಪರದ ಸ್ವರೂಪವನ್ನು ತಿಳಿಯುವಂಥವನಿಗೆ ಮೋಹದಲ್ಲಿ 'ನನ್ನತನ' ಇರುವದಿಲ್ಲ. ಆದ್ದರಿಂದ ಜ್ಞಾನಿಗೆ ನಿರ್ಮಮತ್ವವಿದೆ.

**ಗಾಥೆ ೩೮ :** ಜ್ಞಾನ ಸಮುದ್ರದಂತಿರುವ ಭಗವಾನ ಆತ್ಮನು ವಿಭ್ರಮರೂಪದಿಂದ ಎದುರಾದ ಪರದೆಯನ್ನು ಸಂಪೂರ್ಣವಾಗಿ ದೂರ ಮಾಡಿ ಸ್ವತಃ ಸರ್ವಾಂಗದಿಂದ ಪ್ರಕಟನಾಗಿದ್ದಾನೆ. ಅದಕ್ಕಾಗಿ ಈಗ ಸಂಪೂರ್ಣ ಜಗತ್ತು ಅವನ ಶಾಂತರಸದಲ್ಲಿ ಒಮ್ಮೆಲೇ ಅತ್ಯಂತ ಮಗ್ನವಾಗಿ ಬಿಡಲಿ. ಯಾವ ಶಾಂತರಸವಿದೆ ಅದು ಸಂಪೂರ್ಣ ಲೋಕದ ವರೆಗೆ ಉಕ್ಕಿ ಉಲ್ಲಸಿತವಾಗುತ್ತಲಿದೆ.

ಅಂದರೆ ಜ್ಞಾನ ಮಾತ್ರ ಶುದ್ಧಾತ್ಮನಲ್ಲಿಯ ವಿಭಾವ-ಭಾವಗಳನ್ನು ಗೌಣ ಮಾಡಿ ಶುದ್ಧ ದ್ರವ್ಯಾರ್ಥಿಕ ನಯದಿಂದ ಶುದ್ಧಾತ್ಮನಲ್ಲಿಯೇ ದೃಷ್ಟಿ ಮಾಡಿದಾಗ ಶುದ್ಧಾತ್ಮನ ಅನುಭವ ಆಗುವದು. ಅತೀಂದ್ರಿಯ ಆನಂದರೂಪ ಅನುಭೂತಿಯಲ್ಲಿ ನಿರ್ವಿಕಲ್ಪ ಅನುಭವವಾಗುತ್ತದೆ. ಹೀಗಿದೆ ಆತ್ಮನ ಅನುಭೂತಿ. ಇದನ್ನು ಅನೇಕ ಸಲ ಅನುಭವಿಸುತ್ತೇವೆ ಮತ್ತು ಈ ಎಲ್ಲವೂ ಮುಮುಕ್ಷು ಜೀವಗಳಿಗೆ ಪ್ರಾಪ್ತವಾಗಲಿ ಎಂದು ಬಯಸುತ್ತೇವೆ.

ಈ ಪ್ರಕಾರ ಸಮ್ಯಗ್ದರ್ಶನದ ಸಿದ್ಧಿಯಾಗುವದರಿಂದ ಇಲ್ಲಿಯೇ ಸಮಯಸಾರ ಪೂರ್ಣವಾಗುತ್ತದೆ. ವಿಶೇಷ ರುಚಿ ಜೀವನಿಗೆ ಉಂಟಾಗುವದರಿಂದ ಶುದ್ಧಾತ್ಮನಲ್ಲಿಯೇ 'ನನ್ನತನ' ಮಾಡಿಸಿ ಸಮ್ಯಗ್ದರ್ಶನದ ಪ್ರಾಪ್ತಿಯ ಸಲುವಾಗಿ ವಿಸ್ತಾರದಿಂದ ಭೇದಜ್ಞಾನ ತಿಳಿಸಲಾಗಿದೆ. ಈ ಜೀವವು ಅನಾದಿಯಿಂದ ತತ್ವಗಳನ್ನು ಬೇರೆ ಬೇರೆ ವೇಷದಲ್ಲಿ ಪರಿಣಮಿಸಿ ಪರದಲ್ಲಿ ಕರ್ತಾಭಾವ ಮಾಡಿ ಮೋಸ ಹೋಗಿದ್ದಾನೆ. ಆ ಮೋಸದಿಂದ ಉಳಿದುಕೊಳ್ಳಲು ವಿಸ್ತಾರವಾಗಿ ಎಲ್ಲ ಭಾವಗಳಿಂದ ಭೇದಜ್ಞಾನ ಮಾಡಿಸಲಾಗಿದೆ. ಒಂಬತ್ತು ತತ್ವರೂಪ ಭಾವಗಳಿವೆ. ಜೀವದ್ದೇ ಇವೆ. ಆದರೆ ಅವು ತ್ರಿಕಾಲ ಇರುವದಿಲ್ಲ ಆದ್ದರಿಂದ ಅವುಗಳಲ್ಲಿ 'ನನ್ನತನ' ಮಾಡಲು ಯೋಗ್ಯ ಭಾವಗಳಿರುವದಿಲ್ಲ. ಈ ಅಪೇಕ್ಷೆಯಿಂದ ಅವನ್ನು ಜೀವದ್ದಲ್ಲವೆಂದು ಹೇಳಲಾಗಿದೆ ಮತ್ತು ಅವನ್ನು ಅದೇ ಪ್ರಕಾರದಿಂದ ತಿಳಿಯುವದು ಅತ್ಯಂತ ಅವಶ್ಯಕತೆಯಿದೆ. ಒಂದು ವೇಳೆ ಏಕಾಂತದಿಂದ

ಈ ಒಂಬತ್ತು ತತ್ವಗಳ ರೂಪ ಭಾವವು ನನ್ನ ಭಾವ ಇರುವದಿಲ್ಲ ಎಂದು ತಿಳಿದರೆ ಅವನು ಭ್ರಮೆಯಲ್ಲಿ ಪರಿಣಮಿಸಿ ಅನಂತ ಸಂಸಾರವನ್ನು ಹೆಚ್ಚಿಸಿಕೊಳ್ಳುತ್ತಾನೆ. ಸ್ವಚ್ಛಂದತೆಯಿಂದ ಭ್ರಮೆಯಲ್ಲಿ ಪರಿಣಮಿಸಿ ತನ್ನನ್ನು ಜ್ಞಾನಿ ಎಂದು ತಿಳಿಯುತ್ತ ಆ ಜೀವವು ತನ್ನ ಮತ್ತು ಬೇರೆಯವರ ಅಹಿತ ಮಾಡುತ್ತ ಸ್ವತಃ ಭ್ರಷ್ಟನಾಗುತ್ತ ಅನೇಕರನ್ನು ಭ್ರಷ್ಟಗೊಳಿಸುತ್ತಾನೆ.

★★★

## ೩೫. ಸಮಯಸಾರದ ಅಧ್ಯಾಯಗಳ ಪಕ್ಷಿನೋಟ

ಈಗ ನಾವು ವಿಸ್ತಾರ ರುಚಿವುಳ್ಳ ಜೀವಗಳ ಸಲುವಾಗಿ ಆಚಾರ್ಯ ಅಮೃತಚಂದ್ರ ಕೃತ ಟೀಕೆಯ ಆಧಾರಿತ ಸಮಯಸಾರ ಶಾಸ್ತ್ರದ ಎಲ್ಲ ಅಧ್ಯಾಯಗಳ ವಿಹಂಗಮ ಅವಲೋಕನ ಮಾಡೋಣ. ನಾವು ಎಲ್ಲ ಅಧ್ಯಾಯಗಳ ಕೇವಲ ಸಾರವನ್ನು ಹೇಳುತ್ತೇವೆ. ಆದ್ದರಿಂದ ಎಲ್ಲ ಅಧ್ಯಾಯಗಳ ಸಾರವನ್ನು ಇಲ್ಲಿ ಹೇಳಿದಂತೆ ಅಭ್ಯಾಸ ಮಾಡುವದಿದೆ. ಸ್ವಚ್ಛಂದತೆಯಿಂದ ಮಾಡಬಾರದು. ಸ್ವಚ್ಛಂದತೆಯೇ ನಮ್ಮನ್ನು ಇಲ್ಲಿಯವರೆಗೆ ಅನಂತ ಸಂಸಾರದ ಕಾರಣವಿದೆ. ಇನ್ನು ಮುಂದೆ ಅದರದೆಂದೂ ಪೋಷಣೆ ಮಾಡಬೇಡಿ. ಹೀಗೆ ನಮ್ಮ ವಿನಂತಿಯಿದೆ.

**೧. ಜೀವ – ಅಜೀವ ಅಧ್ಯಾಯ :** ಈ ಅಧ್ಯಾಯವು ಜೀವವನ್ನು ಅಜೀವರೂಪ ಕರ್ಮ–ನೋಕರ್ಮ ಮತ್ತು ಅವುಗಳ ಲಕ್ಷ್ಯದಿಂದ ಉಂಟಾಗುವ ತನ್ನ ವಿಭಾವ ಭಾವಗಳಿಂದ ಭೇದಜ್ಞಾನ ಮಾಡಿಸುವ ಸಲುವಾಗಿಯೇ ಇದೆ. ಅಂದರೆ ಆ ಎಲ್ಲ ಭಾವಗಳು ಹೇಗೆಂದರೆ ಸ್ಪರ್ಶ, ರಸ, ಗಂಧ, ಶರೀರ, ಸಂಸ್ಥಾನ, ಸಂಹನನ, ರಾಗ, ದ್ವೇಷ, ಮೋಹ, ಮಿಥ್ಯಾತ್ವ, ಕರ್ಮ, ಪರ್ಯಾಪ್ತಿ, ವರ್ಗ, ವರ್ಗಣಾ ಸ್ಪರ್ಧಕ, ಅಧ್ಯಾತ್ಮಸ್ಥಾನ ಅನುಭಾಗ ಸ್ಥಾನ, ಮನ, ವಚನ, ಕಾಯಗಳ ಯೋಗ, ಬಂಧ ಸ್ಥಾನ, ಉದಯ ಸ್ಥಾನ, ಮಾರ್ಗಣಾ, ಸ್ಥಿತಿ ಬಂಧಸ್ಥಾನ, ಸಂಕ್ಲೇಶ ಸ್ಥಾನ, ವಿಶುದ್ಧಿ ಸ್ಥಾನ, ಜೀವಸ್ಥಾನ ಮುಂತಾದವು ಜೀವನಿಗೆ ಇರುವದಿಲ್ಲ. ಹೀಗೆ ಹೇಳಿದ್ದಾರೆ.

**ಪ್ರಶ್ನೆ :** ಇಲ್ಲಿ ಪ್ರಶ್ನೆ ಏನೆಂದರೆ – ಆ ಭಾವಗಳು ಜೀವದ್ದು ಏಕೆ ಅಲ್ಲ ?

**ಉತ್ತರ :** ಆ ಭಾವಗಳು ಎರಡು ಪ್ರಕಾರವಾಗಿವೆ. ಒಂದಂತೂ ಪುದ್ಗಲರೂಪ ಇವೆ. ಎರಡನೆಯದು ಜೀವದ ವಿಶೇಷ ಭಾವರೂಪ ಇರುತ್ತವೆ. ಅವುಗಳಲ್ಲಿ ಯಾವವು ಪುದ್ಗಲರೂಪ ಇವೆ. ಅವಂತೂ ಜೀವದಿಂದಲೇ ಪ್ರಕಟವಾದ ಭಿನ್ನವೇ ಇವೆ ಮತ್ತು ಅವು ಜೀವದ ವಿಶೇಷ ಭಾವರೂಪ ಇರುತ್ತವೆ. ಆ ಭಾವಗಳಲ್ಲಿ 'ನನ್ನತನ' ಮಾಡುವದು ಯೋಗ್ಯವಲ್ಲ. ಅಂದರೆ ಆ ಎಲ್ಲವೂ ಭಾವಗಳಿಂದ ಭಿನ್ನವಾದ ಶುದ್ಧಾತ್ಮ, ಅದುವೇ ಸಮ್ಯಗ್ದರ್ಶನದ ವಿಷಯವಾಗುವ ಅಪೇಕ್ಷೆಯಿದೆ.

ಶುದ್ಧಾತ್ಮರೂಪ ಜೀವರಾಜನಲ್ಲಿ ಆ ಭಾವಗಳು ಇರುವದಿಲ್ಲ ಎಂದು ಹೇಗೆ ಹೇಳಿದ್ದಾರೆ. ಅಂದರೆ ಸಮ್ಯಗ್ದರ್ಶನ ಪ್ರಾಪ್ತ ಮಾಡುವ ಸಲುವಾಗಿ ಹೇಳಲಾಗಿದೆ. ಏಕಾಂತದಿಂದಲೂ ಇಲ್ಲ. ಆದ್ದರಿಂದ ಹೇಗಿದೆಯೋ ಹಾಗೆಯೇ ತಿಳಿದುಕೊಂಡು ಕೇವಲ ಶುದ್ಧಾತ್ಮನಲ್ಲಿಯೇ 'ನನ್ನತನ' ಮಾಡಿದ ಬಳಿಕ ಸ್ವಾತ್ಮಾನುಭೂತಿ ಪೂರ್ವಕ ಸಮ್ಯಗ್ದರ್ಶನ ಪ್ರಕಟವಾಗಬಹುದಾಗಿದೆ ಮತ್ತು ಅದರ ನಂತರ ಜ್ಞಾನವು ಮಾಧ್ಯಸ್ಥವಾಗಿರುವದರಿಂದ ಅಂದರೆ ಪ್ರಮಾಣ ರೂಪ ಆಗಿರುವದರಿಂದಲೇ ಜೀವನಿಗೆ ಹೇಗಿದೆಯೋ ಹಾಗೆಯೇ ತಿಳಿಯುತ್ತದೆ ಮತ್ತು ವಿವೇಕದಿಂದ ಆತ್ಮಸ್ಥಿರತಾರೂಪ ಪುರುಷಾರ್ಥ ಪೂರ್ವಕ ಎಲ್ಲ ಕರ್ಮಗಳನ್ನು ಕ್ಷಯಗೊಳಿಸುವ ಕುರಿತು ಕಾರ್ಯಪ್ರವೃತ್ತನಾಗುತ್ತಾನೆ. ಅರ್ಥಾತ್ ಎಲ್ಲ ಕರ್ಮಗಳ ಕ್ಷಯ ಮಾಡಲು ವ್ರತ, ತಪ, ಧ್ಯಾನರೂಪ ಪುರುಷಾರ್ಥವನ್ನು ಆದರಿಸುತ್ತಾನೆ. ಇದುವೇ ಮೋಕ್ಷ ಮಾರ್ಗವಾಗಿದೆ. ಈ ವಿಧಿಯೇ ಮೋಕ್ಷ ಪ್ರಾಪ್ತಿಯ ಉಪಾಯವೂ ಆಗಿದೆ.

ಶ್ಲೋಕ ೪೫ : ಹೀಗೆ ಮೊದಲು ಹೇಳಿದ ಭಿನ್ನ ಲಕ್ಷಣಗಳ ಕಾರಣದಿಂದ ಜೀವದಿಂದ ಅಜೀವವು ಭಿನ್ನವಾಗಿದೆ. ಆ ಅಜೀವವನ್ನು ತಮ್ಮಿಂದ ತಾವೇ ಸ್ವತಂತ್ರವಾಗಿ ಜೀವದಿಂದ ಭಿನ್ನವಾಗಿ ಪರಿಣಮನವಾಗುತ್ತ ಜ್ಞಾನೀ ಜನರು ಅನುಭವ ಪಡೆಯುತ್ತಾರೆ. ಆದರೂ ಅಜ್ಞಾನಿಗಳನ್ನು ಅಮರ್ಯಾದಾರೂಪದಿಂದ ಹರಡಿಕೊಂಡಂಥ ಈ ಮೋಹವು ಅದೇಕೆ ಕುಣಿಯುತ್ತದೆ ಎಂಬುದೇ ಆಶ್ಚರ್ಯ ಮತ್ತು ದುಃಖದ ಸಂಗತಿಯಾಗಿದೆ.

ಶ್ಲೋಕ ೪೬ : ಈ ಪ್ರಕಾರವಾಗಿ ಜ್ಞಾನರೂಪ ಕರಗಸದ ಯಾವ ಅಭ್ಯಾಸವಿದೆ, ಅದನ್ನು ಮೇಲಿಂದ ಮೇಲೆ ಉಪಯೋಗಿಸಿ ಎಲ್ಲಿಯ ವರೆಗೆ ಜೀವ ಮತ್ತು ಅಜೀವಗಳೆರಡೂ ಪ್ರಕಟರೂಪದಿಂದ ಬೇರೆಯಾಗಲಿಲ್ಲ. ಅಷ್ಟರೊಳಗೆ ಜ್ಞಾತಾದ್ರವ್ಯವು ಅತ್ಯಂತ ವಿಕಾಸ ರೂಪವಾಗುತ್ತ ತನ್ನ ಪ್ರಕಟ ಚಿನ್ಮಾತ್ರ ಶಕ್ತಿಯಿಂದ ವಿಶ್ವವನ್ನು ವ್ಯಾಪಿಸಿ ತನ್ನಿಂದ ತಾನೇ ಅತ್ಯಂತ ವೇಗದಿಂದ ಪ್ರಕಾಶಿತವಾಗಿ ನಿಂತಿದೆ. ಈಗ ಹೀಗೆ ಸಹಜ ಸಮ್ಯಗ್ದರ್ಶನ ಪ್ರಕಟವಾಯಿತು. ಹೇಗೆಂದರೆ ಸ್ವಾತ್ಮಾನುಭೂತಿ ರೂಪ ಸತ್‌ಚಿತ್ ಆನಂದ ಸ್ವರೂಪ ಇದೆ.

**೨. ಕರ್ತಾ ಕರ್ಮ ಅಧಿಕಾರ :** ಜೀವದ ಎರಡನೇ ವೇಷವು ಕರ್ತಾ ಕರ್ಮ ರೂಪವಿದೆ. ಜೀವವು ಬೇರೆಯದರ ಕರ್ತಾ ಆಗುತ್ತದೆ. ಏನಂದರೆ ಅದು ಉಪಾದಾನ ರೂಪದಿಂದ ಪರಿಣಮನ ಮಾಡುವ ಶಕ್ತಿಮಾನ ಇರುವದಿಲ್ಲ. ಅಂದರೆ ಎಲ್ಲ ದ್ರವ್ಯಗಳು ತಮ್ಮ ತಮ್ಮ ಉಪಾದಾನದಿಂದಲೇ ತಮ್ಮ ತಮ್ಮ ಕಾರ್ಯ ಮಾಡುತ್ತವೆ, ಪರಿಣಮಿಸುತ್ತವೆ. ಅದರಲ್ಲಿ ಬೇರೆ ದ್ರವ್ಯವು ಕೇವಲ ನಿಮಿತ್ತ ಮಾತ್ರ ಆಗುತ್ತವೆ.

ಸಮ್ಯಗ್ದರ್ಶನದ ಸಲುವಾಗಿ ಕೇವಲ ತನ್ನ ಭಾವವಿರಲಿ, ಅದುವೇ ಅಂದರೆ 'ಸ್ವ'ಭಾವವಿರಲಿ, ಅವುಗಳಲ್ಲಿಯೇ ನನ್ನತನ ಆಗುವದರಿಂದ ಮತ್ತು ಆ ಸಮ್ಯಗ್ದರ್ಶನದ ವಿಷಯರೂಪ 'ಸ್ವ'ಭಾವವು ಕೇವಲ ಸಾಮಾನ್ಯಭಾವ ರೂಪವೇ ಆಗುವದರಿಂದ

ಅದು ನಿಷ್ಕ್ರಿಯ ಭಾವವೇ ಆಗುತ್ತದೆ. ಅರ್ಥಾತ್ ಸಮ್ಯಗ್ದರ್ಶನದ ವಿಷಯರೂಪ ಸ್ವಭಾವದಲ್ಲಿ ಉದಯ ಕ್ಷಯೋಪಶಮ ರೂಪ, ಕರ್ತಾ-ಕರ್ಮ ಭಾವಗಳು ವಿಶೇಷ ಭಾವಗಳಿವೆ. ಅವು ಇಲ್ಲದ್ದರಿಂದ ನಿಮಿತ್ತ ಹಾಗೂ ಅದರ ಲಕ್ಷ್ಯದಿಂದ ಉಂಟಾದ ವಿಶೇಷ ಭಾವಗಳು ಅದರಲ್ಲಿ ನಿಷೇದವೇ ಆಗುತ್ತವೆ. ಅಂದರೆ ನಿಮಿತ್ತದ ನಿಷೇದವಾಗುತ್ತದೆ. ಈ ಕಾರಣ ಮತ್ತು ಅಪೇಕ್ಷೆಯಿಂದಲೂ ಸಹ ನಿಮಿತ್ತವನ್ನು ಯಾವದೇ ಏಕಾಂತದಿಂದ ಅಕರ್ತಾ ಎಂದು ಮನ್ನಿಸಿದರೆ ಮತ್ತು ಸ್ವಚ್ಛಂದತೆಯಿಂದ ನಿರ್ಬಲ ನಿಮಿತ್ತಗಳನ್ನೇ ಸೇವನೆ ಮಾಡಿದರೆ ಆ ಜೀವವು ಅನಂತ ಸಂಸಾರಿಯಾಗಿ, ಅನಂತ ದುಃಖವನ್ನು ಭೋಗಿಸುತ್ತದೆ. ವಿವೇಕವು ಹೇಗಿದೆಯೆಂದರೆ ಜೀವವು ಎಲ್ಲ ಕೆಟ್ಟ ನಿಮಿತ್ತಗಳಿಂದ ಉಳಿದು, ಶಾಸ್ತ್ರ ಸ್ವಾಧ್ಯಾಯ ಮುಂತಾದ ಉತ್ತಮ ನಿಮಿತ್ತಗಳ ಸೇವನೆ ಮಾಡಿ ಬೇಗನೇ ಮೋಕ್ಷ ಮಾರ್ಗದಲ್ಲಿ ಮುಂದುವರಿಯುತ್ತದೆ. ಇಲ್ಲವಾದರೆ ಏಕಾಂತದಿಂದ ನಿಮಿತ್ತವನ್ನು ಅಕರ್ತಾ ಎಂದು ಮನ್ನಿಸಿ, ಸ್ವಚ್ಛಂದತೆಯಿಂದ ಎಲ್ಲ ನಿರ್ಬಲ ನಿಮಿತ್ತಗಳನ್ನು ಸೇವಿಸುತ್ತ ಸಾಗಿದರೆ ಅನಂತ ಸಂಸಾರಿ ಅರ್ಥಾತ್ ಅನಂತ ದುಃಖಿಯಾಗುತ್ತಾನೆ.

ವಿವೇಕಿ ಜೀವಗಳು ತಮ್ಮ ಭಾವವು ನಿಮಿತ್ತ ದೊರೆಯುವದರಿಂದ ಕೆಡುತ್ತದೆ ಎಂದು ತಿಳಿದುಕೊಂಡು ಅವರು ಕೆಟ್ಟ ನಿಮಿತ್ತಗಳಿಂದ ಯಾವಾಗಲೂ ದೂರವೇ ಇರಲು ಪ್ರಯತ್ನ ಮಾಡುತ್ತಾರೆ.

**ಶ್ಲೋಕ ೬೯ :** ಯಾರು ನಯಗಳ ಪಕ್ಷಪಾತವನ್ನು ಬಿಟ್ಟುಕೊಟ್ಟು ತಮ್ಮ ಸ್ವರೂಪದಲ್ಲಿ ಮುಳುಗಿಹೋಗಿ ಯಾವಾಗಲೂ ನಿವಾಸ ಮಾಡುತ್ತಾರೆ. ಅವರೇ ಮನಸ್ಸಿನ ವಿಕಲ್ಪ ಜಾಲಗಳಿಂದ ರಹಿತರೂ, ಶಾಂತರೂ ಆಗಿ ಅಮೃತವನ್ನು ಕುಡಿಯುತ್ತಾರೆ.

**ಶ್ಲೋಕ ೯೦ :** ಈ ಪ್ರಕಾರ ಯಾವುದರಲ್ಲಿ ಬಹಳಷ್ಟು ವಿಕಲ್ಪಗಳ ಜಾಲವು ತನ್ನಿಂದ ತಾನೇ ಏಳುತ್ತವೆ. ಅಂಥ ಹಿರಿದಾದ ನಯಪಕ್ಷದ ಕಕ್ಷೆಯನ್ನು (ಭೂಮಿಕೆಯನ್ನು) ಉಲ್ಲಂಘನೆ ಮಾಡಿ ತತ್ವವೇತ್ತನು ಒಳಗೆ ಮತ್ತು ಹೊರಗೆ ಸಮತಾರಸ ರೂಪವಾದ ಒಂದು ರಸವೇ ಯಾವುದರ ಸ್ವಭಾವವಿದೆ. ಅಂಥ ಅನುಭೂತಿ ಮಾತ್ರ ತನ್ನ ಸ್ವರೂಪವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ.

**ಶ್ಲೋಕ ೯೯ :** ಆತ್ಮನು ಅಜ್ಞಾನದಲ್ಲಿದ್ದಾಗ ಕರ್ತೃವಾಗುತ್ತಿದ್ದಾನೆ. ಆದರೆ ಯಾವಾಗ ಜ್ಞಾನವಾದಾಗ ಕರ್ತೃವಾಗುವದಿಲ್ಲ, ಅಜ್ಞಾನದ ನಿಮಿತ್ತದಿಂದ ಪುದ್ಗಲವು ಕರ್ಮರೂಪವಾಗುತ್ತಿತ್ತು. ಆದರೆ ಜ್ಞಾನವಾದಾಗ ಕರ್ಮರೂಪವಾಗುವದಿಲ್ಲ. ಜ್ಞಾನವು ಜ್ಞಾನರೂಪವಾಗಿಯೇ ಉಳಿಯುತ್ತದೆ ಹಾಗೂ ಪುದ್ಗಲವು ಪುದ್ಗಲ ರೂಪವಾಗಿಯೇ ಉಳಿಯುತ್ತದೆ. ಹೀಗೆ ಯಥಾರ್ಥ ಜ್ಞಾನವಾದ ನಂತರ ಎರಡೂ ದ್ರವ್ಯಗಳ ಪರಿಣಮನದಲ್ಲಿ ನಿಮಿತ್ತ ನೈಮಿತ್ತಿಕ ಭಾವವೂ ಉಳಿಯುವದಿಲ್ಲ. ಈ ಪ್ರಕಾರದ ಜ್ಞಾನವು ಸಮ್ಯಗ್ದೃಷ್ಟಿಗೆ ಆಗುತ್ತದೆ.

೩. **ಪುಣ್ಯಪಾಪ ಅಧ್ಯಾಯ :** ಈ ಅಧ್ಯಾಯದಲ್ಲಿಯೂ ಸಹ ಸಮ್ಯಗ್ದರ್ಶನ ಪ್ರಾಪ್ತ ಮಾಡಿಸುವ ಸಲುವಾಗಿ ಯಾವ ಸಮ್ಯಗ್ದರ್ಶನದ ವಿಷಯ ಇದೆ, ಅರ್ಥಾತ್ ಯಾವದು ಶುದ್ಧಾತ್ಮಾ ಇದೆ, ಅದರಲ್ಲಿ ಬಂಧರೂಪ ಯಾವದೇ ಭಾವ ಇಲ್ಲದಿರುವದರಿಂದ ಅದರಲ್ಲಿ ಎಲ್ಲ ವಿಭಾವ-ಭಾವಗಳ ಅಭಾವವಾಗಿರುವದರಿಂದ ಕೇವಲ ಬಂಧ ಭಾವ ಅರ್ಥಾತ್ ಶುಭಭಾವ ಮತ್ತು ಅಶುಭಭಾವ ಈ ಎರಡೂ ಸಮ್ಯಗ್ದರ್ಶನದ ವಿಷಯದಲ್ಲಿ ಇರುವದಿಲ್ಲ. ಹೀಗೆ ಹೇಳುವ ಸಲುವಾಗಿ ಎರಡನ್ನೂ ಒಂದೇ ಸಮಾನವೆಂದು ಹೇಳಲಾಗಿದೆ. ಪುಣ್ಯ ಮತ್ತು ಪಾಪ ಅರ್ಥಾತ್ ಶುಭಭಾವ ಮತ್ತು ಅಶುಭಭಾವ, ಸಮ್ಯಗ್ದರ್ಶನದ ವಿಷಯ ರೂಪ ಪರಮ ಪಾರಿಣಾಮಿಕ ಭಾವರೂಪಿ ಸಹಜ, ಪರಿಣಮನ ರೂಪಿ, ಶುದ್ಧಾತ್ಮನಲ್ಲಿ ಇಲ್ಲದಿರುವದರಿಂದ ಎರಡನ್ನೂ ಸಮಾನ ಅಪೇಕ್ಷೆಯಿಂದ ಹೇಯವೆಂದು ಹೇಳಲಾಗಿದೆ. ಅರ್ಥಾತ್ ಎರಡೂ ವಿಭಾವ-ಭಾವ ಆಗಿರುವದರಿಂದ ಬಂಧರೂಪ ಆಗಿರುವದರಿಂದ ಒಂದೇ ಸಮಾನ ಹೇಯ ಇರುತ್ತವೆ.

ಇಲ್ಲಿ ಯಾರೂ ಏಕಾಂತದಿಂದ ತಿಳಿಯಬಾರದು. ಏಕೆಂದರೆ ಅಶುಭ ಭಾವದಲ್ಲಿ ಪರಿಣಮಿಸಲು ಎಲ್ಲೂ ಯಾರೂ ಉಪದೇಶ ನೀಡುವದಿಲ್ಲ. ಆದರೆ ಇಲ್ಲಿ ಹೇಳಿದ ಪ್ರಕಾರ ಸಮ್ಯಗ್ದರ್ಶನ ಮಾಡಿಸಲು ಎರಡೂ ಭಾವಗಳಿಂದ ಭೇದಜ್ಞಾನ ಮಾಡಿಸಿದೆ ಮತ್ತು ಭೇದಜ್ಞಾನದ ಅಪೇಕ್ಷೆಯಿಂದ ಎರಡೂ ಸಮಾನವೇ ಇರುತ್ತವೆ.

ಒಂದು ವೇಳೆ ಪುಣ್ಯ ಪಾಪಗಳಲ್ಲಿ ಸಮಾನ ರೂಪದಿಂದ ಹೇಯವೆಂದು ತಿಳಿದು ಸ್ವೇಚ್ಛಾಚಾರದಿಂದ ಪಾಪರೂಪ ಅರ್ಥಾತ್ ಅಶುಭಭಾವದಿಂದ ಪರಿಣಮಿಸಿದರೆ ಅದರಲ್ಲಿಯೇ ರಮಿಸಿದರೆ ಅದು ಅವನ ಮಹಾ ಅನರ್ಥದ ಕಾರಣವಾಗುತ್ತದೆ. ಒಂದು ವೇಳೆ ಇದೇ ಪ್ರಕಾರದಿಂದ ಏಕಾಂತವಾಗಿ ತಿಳಿದು, ಇದೇ ಪ್ರಕಾರದಿಂದ ಏಕಾಂತ ಪ್ರತಿಪಾದನ ಮಾಡಿದರೆ ಅವನು ಸ್ವತಃ ಭ್ರಷ್ಟನೇ ಆಗುತ್ತಾನೆ ಮತ್ತು ಇತರರನ್ನು ಸಹ ಭ್ರಷ್ಟಗೊಳಿಸುತ್ತಾನೆ. ಜೈನ ಸಿದ್ಧಾಂತದಲ್ಲಿ ವಿವೇಕಕ್ಕೆ ಹೆಚ್ಚು ಮರ್ಯಾದೆ ಇದೆ. ಅಂದರೆ ಕಥನವು ಯಾವ ಅಪೇಕ್ಷೆಯಿಂದ ಹೇಳಲಾಗಿದೆ, ಅದೇ ಅಪೇಕ್ಷೆಯಿಂದ ಗ್ರಹಣ ಮಾಡಬೇಕು. ಇದುವೇ ವಿವೇಕವಿದೆ. ಆದ್ದರಿಂದ ಎಲ್ಲ ಮೋಕ್ಷಾರ್ಥಿಗಳಿಗೆ ಮೊದಲು ಹೇಳಿದಂತೆ ಕೇವಲ ಒಂದು ಆತ್ಮಪ್ರಾಪ್ತಿಯ ಲಕ್ಷ್ಯದಿಂದ ನಿಯಮದಿಂದ ಶುಭದಲ್ಲಿಯೇ ಇರುವದು ಯೋಗ್ಯವಿದೆ. ಇದುವೇ ಜೈನಸಿದ್ಧಾಂತದ ಸಾರವಿದೆ. ನಾವು ಇದನ್ನು ಮೊದಲು ಹೇಳಿದ್ದೇವೆ. ಆದ್ದರಿಂದ ವಿವೇಕಪೂರ್ವಕವಾಗಿ ತಿಳಿದುಕೊಂಡು ಸಮ್ಯಗ್ದರ್ಶನವನ್ನು ಪಡೆಯುತ್ತಾರೆ ಮತ್ತು ವಿವೇಕಪೂರ್ವಕವೇ ನಿರ್ವಾಣವನ್ನು ಹೊಂದುತ್ತಾರೆ.

**ಗಾಥೆ ೧೫೧ :** ನಿಜವಾಗಿ ಯಾವ ಜೀವನು ಪರಮಾರ್ಥ (ಪರಮ ಪದಾರ್ಥ)ನಿದ್ದಾನೆ, ಸಮಯನಿದ್ದಾನೆ, ಶುದ್ಧನಿದ್ದಾನೆ, ಕೇವಲಿ ಇದ್ದಾನೆ, ಮುನಿ ಇದ್ದಾನೆ, ಜ್ಞಾನಿ ಇದ್ದಾನೆ, ಈ ಸ್ವಭಾವಗಳಲ್ಲಿ ಸ್ಥಿರವಾದ ಮುನಿಗಳು ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ.

ಗಾಥೆ ೧೫೨ : ಪರಮಾರ್ಥದಲ್ಲಿ ಅಸ್ಥಿರವಾದ ಯಾವ ಜೀವನು ತಪಸ್ಸು ಮಾಡುತ್ತಾನೆ, ಮತ್ತು ವ್ರತಗಳನ್ನು ಧಾರಣೆ ಮಾಡುತ್ತಾನೆ, ಅವನ ಆ ಎಲ್ಲ ತಪಸ್ಸು ಮತ್ತು ವ್ರತಗಳಿಗೆ ಸರ್ವಜ್ಞ ದೇವರು ಬಾಲತಪಸ್ಸು ಮತ್ತು ಬಾಲವ್ರತಗಳೆಂದು ಹೇಳುತ್ತಾರೆ.

ಇದರರ್ಥ ಈ ಬಾಲತಪ ಮತ್ತು ಬಾಲವ್ರತಗಳನ್ನು ಬಿಡಲು ಹೇಳುತ್ತಿಲ್ಲ. ಆದರೆ ಇವುಗಳಿಗಿಂತಲೂ ಈ ತಪ ಹಾಗೂ ವ್ರತಗಳನ್ನು ಸಮ್ಯಕ್ತ್ವಪೂರ್ವಕವಾಗಿ ಪಾಲಿಸಿ ಉತ್ಕೃಷ್ಟ ಆತ್ಮಜ್ಞಾನ ಪ್ರಾಪ್ತ ಮಾಡುವ ಸಲುವಾಗಿ ಪ್ರೋತ್ಸಾಹಿಸುತ್ತಿದ್ದಾರೆ. ಯಾರು ಪರಮಾರ್ಥದಲ್ಲಿ ಸ್ಥಿರವಿದ್ದಾರೆ ಅವರಿಗೆ ನಿಯಮದಿಂದ ಯಥಾರ್ಥ ವ್ರತ ತಪಸ್ಸುಗಳು ಆಗುತ್ತವೆ. ವಿವೇಕವು ಆತ್ಮನನ್ನು ಮೇಲಕ್ಕೇರಿಸಲು ಹೇಳುತ್ತದೆ. ಆದ್ದರಿಂದ ಏನೆಲ್ಲವನ್ನು ವಿವೇಕಪೂರ್ವಕವಾಗಿ ಮಾಡಲು ಜೈನಸಿದ್ಧಾಂತವು ತಿಳಿಸುತ್ತದೆ.

**ಶ್ಲೋಕ ೧೧೧ :** ಕರ್ಮನಯದ ಅವಲಂಬನದಲ್ಲಿ ತತ್ಪರನಾದಂಥ ಪುರುಷನು ಅದರಲ್ಲಿಯೇ ಮುಳುಗಿರುತ್ತಾನೆ. ಏಕೆಂದರೆ ಅವನು ಜ್ಞಾನವನ್ನೇ ತಿಳಿದಿರುವದಿಲ್ಲ. ಆತ್ಮನ ಜ್ಞಾನರೂಪಿ ಶಕ್ತಿಯಲ್ಲಿ ಅವನಿಗೆ ವಿಶ್ವಾಸವೇ ಇಲ್ಲ. ಪರದ ಶಕ್ತಿಯಲ್ಲಿ ವಿಶ್ವಾಸವಿದೆ. ಮಂದ ಕಷಾಯಿಗಳು ಜ್ಞಾನರೂಪವಾಗುತ್ತ ಪರಿಣಮಿಸುತ್ತ ಕರ್ಮ ಮಾಡುವದಿಲ್ಲ. ಅಂಥ ಜೀವರುಗಳು ವಿಶ್ವದ ಮೇಲೆ ತೇಲುತ್ತಾರೆ ಎಂದೂ ಪ್ರಮಾದ ವಶರಾಗುವದಿಲ್ಲ. ಸ್ವರೂಪದಲ್ಲಿ ಉದ್ಯಮಶೀಲರಾಗಿರುತ್ತಾರೆ. ಬುದ್ಧಿಪೂರ್ವಕ ಸ್ವದಲ್ಲಿರುತ್ತಾರೆ.

**೪. ಆಸ್ರವ ಅಧ್ಯಾಯ :** ಈ ಅಧ್ಯಾಯದಲ್ಲಿಯೂ ಸಹ ಸಮ್ಯಗ್ದರ್ಶನ ಪ್ರಾಪ್ತ ಮಾಡುವ ಸಲುವಾಗಿ ಭೇದ ಜ್ಞಾನ ಮಾಡಿಸುವ ಸಲುವಾಗಿ, ಸಮ್ಯಗ್ದರ್ಶನದ ವಿಷಯವಿದೆ. ಅರ್ಥಾತ್ ಯಾವ ಶುದ್ಧಾತ್ಮವಿದೆ. ಅದರಲ್ಲಿ ಆಸ್ರವ ರೂಪ ಭಗವಾನ ಇರುವದರಿಂದ ಅರ್ಥಾತ್ ಅದರಲ್ಲಿ ಎಲ್ಲ ವಿಭಾವ-ಭಾವಗಳ ಅಭಾವವಾಗಿರುವದರಿಂದ ಜ್ಞಾನಿಗೆ ಆಸ್ರವ ಇರುವದಿಲ್ಲ. ಅರ್ಥಾತ್ ಜ್ಞಾನಿಗೂ ಆಸ್ರವ ಭಾವರೂಪ ತನ್ನ ಪರಿಣಮನದಲ್ಲಿರುತ್ತದೆ. ಅದರಲ್ಲಿ 'ನನ್ನತನ' ಆಗುವದಿಲ್ಲ. ಕರ್ತಾತನವೂ ಇರುವದಿಲ್ಲ. ಏಕೆಂದರೆ ಜ್ಞಾನಿಯು ಆ ಭಾವವನ್ನು ಸ್ವೇಚ್ಛೆಯಿಂದ ಮಾಡುವದಿಲ್ಲ. ಆದರೆ ಒಮ್ಮೊಮ್ಮೆ ಅನಿವಾರ್ಯ ಅಥವಾ ಅಶಕ್ತತೆಯ ಕಾರಣ ಪರಿಣಮಿಸುತ್ತಾನೆ. ಆದ್ದರಿಂದ ಅವನ ಕರ್ತಾತನವನ್ನು ಒಪ್ಪಲಾಗುವದಿಲ್ಲ.

ಜ್ಞಾನಿಗೆ ಸ್ವಲ್ಪ ಆಸ್ರವ ಆಗುತ್ತದೆ. ಆದರೆ ಅನಂತಾನುಬಂಧಿ ಕಷಾಯಗಳ ಮತ್ತು ಮಿಥ್ಯಾತ್ವದ ಆಸ್ರವ ಇರುವದಿಲ್ಲ. ಆದರೆ ಒಂದು ವೇಳೆ ಯಾರೋ ಈ ಮಾತನ್ನು ಏಕಾಂತದಿಂದ ಸ್ವೀಕರಿಸಿ ಸ್ವಚ್ಛಂದತೆಯಿಂದ ಆಸ್ರವ ಭಾವಗಳ ಸೇವನೆ ಮಾಡಿದರೆ ಅಥವಾ ಯಾವನೋ ತನ್ನನ್ನು ಜ್ಞಾನಿ ಎಂದು ತಿಳಿದುಕೊಂಡರೆ ಇದು ಅವನ ಮಹಾಅನರ್ಥದ ಕಾರಣವಿದೆ. ಹೀಗೆಯೇ ತಿಳಿದುಕೊಂಡು ಏಕಾಂತದಿಂದ

ಪ್ರತಿಪಾದನ ಮಾಡಿದರೆ ಅವನು ಸ್ವತಃ ಭ್ರಷ್ಟನೇ ಇರುತ್ತಾನೆ ಮತ್ತು ಬೇರೆಯವರನ್ನು ಭ್ರಷ್ಟಗೊಳಿಸುತ್ತಾನೆ. ಈ ಕಥನವನ್ನು ಯಾವ ಅಪೇಕ್ಷೆಯಿಂದ ಹೇಳಲಾಗಿದೆ, ಅದೇ ಅಪೇಕ್ಷೆಯಿಂದ ಗ್ರಹಣ ಮಾಡಬೇಕು. ಇದುವೇ ವಿವೇಕವಾಗಿದೆ. ಆದ್ದರಿಂದ ಎಲ್ಲ ಮೋಕ್ಷಾರ್ಥಿಗಳು ಕೇವಲ ಒಂದು ಆತ್ಮ ಪ್ರಾಪ್ತಿಯ ಲಕ್ಷ್ಯದಿಂದ ನಿಯಮದಿಂದ ಆಸ್ರವದ ಕಾರಣಗಳಿಂದ ದೂರ ಇರುವದು ಯೋಗ್ಯವಿದೆ. ಇದುವೇ ಜೈನ ಸಿದ್ಧಾಂತದ ಸಾರವಿದೆ.

**ಶ್ಲೋಕ ೧೧೬ :** ಆತ್ಮನು ಯಾವಾಗ ಜ್ಞಾನಿಯಾಗುತ್ತಾನೆ. ಆಗ ತಾನೇ ತನ್ನ ಸಮಸ್ತ ಬುದ್ಧಿಪೂರ್ವಕವಾಗಿ ರಾಗವನ್ನು ನಿರಂತರವಾಗಿ ಬಿಡುತ್ತ ಅಂದರೆ ಮಾಡದೇ ಮತ್ತು ಯಾವ ಅಬುದ್ಧಿಪೂರ್ವಕವಾದ ರಾಗವಿದೆ ಅದನ್ನು ಕೂಡ ಗೆಲ್ಲುವದಕ್ಕಾಗಿ ಪುನಃ ಪುನಃ ಜ್ಞಾನಾನುಭವರೂಪವಾದ ಸ್ವಶಕ್ತಿಯನ್ನು ಸ್ಪರ್ಶ ಮಾಡುತ್ತ ಮತ್ತು ಇದೇ ಪ್ರಕಾರ ಸಮಸ್ತ ಪರವೃತ್ತಿಯನ್ನು ಪರಪರಿಣತಿಯನ್ನು ಕಿತ್ತೆಸೆಯುತ್ತ ಜ್ಞಾನದ ಪೂರ್ಣ ಭಾವರೂಪವಾಗುತ್ತ ನಿಜವಾಗಿಯೂ ಯಾವಾಗಲೂ ನಿರಾಸ್ರವನಾಗುತ್ತಾನೆ.

ಯಾವ ರಾಗಾದಿ ಪರಿಣಾಮಗಳು ಇಚ್ಛಾಪೂರ್ವಕವಾಗಿರುತ್ತವೆ, ಅವು ಬುದ್ಧಿಪೂರ್ವಕ ಇವೆ ಮತ್ತು ಯಾವವು ಇಚ್ಛೆಯಿಲ್ಲದೆ ಪರನಿಮಿತ್ತದ ಬಲವಂತತೆಯಿಂದ ಆಗುತ್ತವೆ ಅವು ಅಬುದ್ಧಿಪೂರ್ವಕ ಇವೆ. ಜ್ಞಾನಿಗೆ ಯಾವ ರಾಗಾದಿ ಪರಿಣಾಮಗಳಾಗುತ್ತವೆ ಅವೆಲ್ಲವೂ ಅಬುದ್ಧಿಪೂರ್ವಕವಾಗಿಯೇ ಇರುತ್ತವೆ.

**ಶ್ಲೋಕ ೧೨೦ :** ಯಾವದೇ ಒತ್ತಡದಿಂದ ಮಣಿಯುವದಿಲ್ಲ. ಅಂಥ ಉನ್ನತವಾದ ಜ್ಞಾನವು ಯಾವುದರ ಲಕ್ಷಣವಿದೆ, ಅಂಥ ಶುದ್ಧನಯದಲ್ಲಿ ಉಳಿದುಕೊಂಡು ಎಂದರೆ ಶುದ್ಧನಯದ ಆಶ್ರಯ ಪಡೆದು ಯಾರು ಯಾವಾಗಲೂ ಏಕಾಗ್ರತೆಯನ್ನೇ ಅಭ್ಯಾಸ ಮಾಡುತ್ತಾರೆ. ಅವರು ನಿರಂತರವಾಗಿ ರಾಗಾದಿಗಳಿಂದ ರಹಿತವಾದ ಚಿತ್ತದಿಂದ ವರ್ತಿಸುತ್ತ ಬಂಧರಹಿತವಾದ ಸಮಯಸಾರವನ್ನು (ತನ್ನ ಶುದ್ಧ ಆತ್ಮಸ್ವರೂಪವನ್ನು) ನೋಡುತ್ತಾರೆ. ಅನುಭವ ಪಡೆಯುತ್ತಾರೆ.

**ಶ್ಲೋಕ ೧೨೨ :** ಶುದ್ಧನಯವು ತ್ಯಾಗ ಮಾಡಲು ಯೋಗ್ಯವಾಗಿಲ್ಲ. ಏಕೆಂದರೆ ಅದನ್ನು ತ್ಯಾಗ ಮಾಡದಿರುವದರಿಂದ ಕರ್ಮದ ಬಂಧವಾಗುವದಿಲ್ಲ ಮತ್ತು ಅದರ ತ್ಯಾಗದಿಂದ ಬಂಧವೇ ಆಗುತ್ತದೆ. ಇದೇ ತಾತ್ಪರ್ಯವಿದೆ.

**ಶ್ಲೋಕ ೧೨೩ :** ಚಲಾಚಲವಿಲ್ಲದ ಮತ್ತು ಮಹಿಮೆಯುಳ್ಳ, ಅನಾದಿ ನಿಧನವಾದ ಜ್ಞಾನದಲ್ಲಿ ಸ್ಥಿರತೆಯನ್ನು ಮಾಡುತ್ತ ಅಂದರೆ ಜ್ಞಾನದಲ್ಲಿ ಪರಿಣತಿಯನ್ನು ಸ್ಥಿರವಾಗಿ ಕಾಯ್ದುಕೊಳ್ಳುತ್ತ ಶುದ್ಧನಯವು ಕರ್ಮಗಳನ್ನು ಬೇರುಸಹಿತವಾಗಿ ನಾಶ ಮಾಡುವಂತಹದಿದೆ. ಧರ್ಮಾತ್ಮ (ಸಮ್ಯಗ್ದೃಷ್ಟಿ) ಪುರುಷರು ಈ ಶುದ್ಧನಯವನ್ನು ಎಂದೂ ಬಿಡುವದಿಲ್ಲ. ಅಂದರೆ ಶುದ್ಧನಯದಲ್ಲಿ ಸ್ಥಿರವಾಗಿದ್ದು ತಮ್ಮ ಜ್ಞಾನ

ಕಿರಣಗಳ ಸಮೂಹವನ್ನು ಒಂದುಗೂಡಿಸಿ ಕರ್ಮದ ಪುಂಜವನ್ನು ಹೊರಹಾಕಿ ಪೂರ್ಣಜ್ಞಾನ ಘನದ ಪುಂಜರೂಪ ಒಂದು, ಅಚಲ, ಶಾಂತವಾದ, ತೇಜಸ್ಸನ್ನು ನೋಡುತ್ತಾರೆ. ಅಂದರೆ ಅನುಭವ ಮಾಡುತ್ತಾರೆ.

**೫. ಸಂವರ ಅಧ್ಯಾಯ :** ಈ ಅಧ್ಯಾಯದಲ್ಲಿ ಆಚಾರ್ಯ ಭಗವಂತರು ಹೇಳುತ್ತಾರೆ – ಯಾವ ಸಮ್ಯಗ್ದರ್ಶನವಿದೆ ಅಂದರೆ ಯಾವ ಶುದ್ಧಾತ್ಮನ ಅನುಭೂತಿ ಇದೆ ಮತ್ತು ಅದರಲ್ಲಿಯೇ ಸ್ಥಿರತೆಯಿದೆ ಅದುವೇ ಸಾಕ್ಷಾತ್ ಸಂವರವಿದೆ. ಆತ್ಮನ ಔದಯಿಕಾದಿ ಭಾವಗಳಿಂದ ಭೇದಜ್ಞಾನ ಮಾಡಿಸಿ ಜೀವಗಳನ್ನು ಪರಮಪಾರಿಣಾಮಿಕ ಭಾವರೂಪಿ ಆತ್ಮನ ಸಹಜ ಪರಿಣಮನ ರೂಪಿ ಶುದ್ಧಾತ್ಮನಲ್ಲಿಯೇ ಸ್ಥಾಪಿತಗೊಳಿಸುತ್ತಾರೆ ಮತ್ತು ಹೇಳುತ್ತಾರೆ – ಆ ಶುದ್ಧಾತ್ಮನ ವೇದನೆಯು ಅನುಭವವು ಮತ್ತು ಸ್ಥಿರತೆಯು ನಿಶ್ಚಯದಿಂದ ಸಂವರದ ಕಾರಣವಿದೆ. ಆದ್ದರಿಂದ ಅಜ್ಞಾನಿಗೆ ಕಾರ್ಯಕಾರಿ ಸಂವರ ಇರುವದಿಲ್ಲ. ಆದರೆ ಜ್ಞಾನಿಗೆ ಅದು ಸಹಜವಾಗಿಯೇ ಆಗುತ್ತದೆ.

**ಶ್ಲೋಕ ೧೨೯ :** ಈ ಪ್ರತ್ಯಕ್ಷವಾದ ಸಂವರವು ವಾಸ್ತವಿಕವಾಗಿ ಶುದ್ಧ ಆತ್ಮತತ್ವದ ಉಪಲಬ್ಧಿಯಿಂದ ಆಗುತ್ತದೆ ಮತ್ತು ಶುದ್ಧಾತ್ಮ ತತ್ವದ ಉಪಲಬ್ಧಿಯು ಭೇದ ವಿಜ್ಞಾನದಿಂದಲೇ ಆಗುತ್ತದೆ. ಅದಕ್ಕಾಗಿ ಭೇದವಿಜ್ಞಾನವು ಹೆಚ್ಚಾಗಿ ಭಾವಿಸಲು ಯೋಗ್ಯವಾಗಿದೆ. ಯಾವಾಗ ಜೀವನಿಗೆ ಭೇದವಿಜ್ಞಾನವಾಗುತ್ತದೆ. ಅಂದರೆ ಯಾವಾಗ ಜೀವನು ಆತ್ಮ ಮತ್ತು ಕರ್ಮವನ್ನು ಯಥಾರ್ಥವಾಗಿ ಭಿನ್ನವೆಂದು ತಿಳಿಯುತ್ತಾನೆ. ಆಗ ಅವನು ಶುದ್ಧ ಆತ್ಮನ ಅನುಭವ ಮಾಡುತ್ತಾನೆ. ಶುದ್ಧಾತ್ಮನ ಅನುಭವದಿಂದ ಆಸ್ರವ ಭಾವವು ತಡೆಯಲ್ಪಡುತ್ತದೆ ಮತ್ತು ಅನುಕ್ರಮವಾಗಿ ಎಲ್ಲ ಪ್ರಕಾರದಿಂದ ಸಂವರವಾಗುತ್ತದೆ. ಅದಕ್ಕಾಗಿ ಭೇದವಿಜ್ಞಾನವನ್ನು ಹೆಚ್ಚಾಗಿ ಭಾವಿಸುವದರ ಉಪದೇಶ ಮಾಡಲಾಗಿದೆ.

**ಶ್ಲೋಕ ೧೩೦ :** ಈ ಭೇದವಿಜ್ಞಾನವನ್ನು ಅಖಂಡ ಪ್ರವಾಹರೂಪದ ಧಾರೆಯಾಗಿ ಎಲ್ಲಿಯ ವರೆಗೆ ಜ್ಞಾನವು ಪರಭಾವಗಳಿಂದ ಬಿಡುಗಡೆಯಾಗಿ ಜ್ಞಾನವು ಜ್ಞಾನದಲ್ಲಿಯೇ ಸ್ಥಿರವಾಗಿ ಹೋಗುತ್ತದೆ. ಅಲ್ಲಿಯ ವರೆಗೆ ಭಾವಿಸಬೇಕು.

**ಶ್ಲೋಕ ೧೩೧ :** ಯಾವ ಕೆಲವರು ಸಿದ್ಧರಾಗಿದ್ದಾರೆ, ಅವರು ಭೇದವಿಜ್ಞಾನದಿಂದಲೇ ಸಿದ್ಧರಾಗಿದ್ದಾರೆ ಮತ್ತು ಯಾವ ಕೆಲವರು ಸಂಸಾರದಲ್ಲಿ ಬದ್ಧರಾಗಿದ್ದಾರೆ ಅವರು ಭೇದವಿಜ್ಞಾನದ ಅಭಾವದಿಂದ ಬದ್ಧರಾಗಿದ್ದಾರೆ.

**ಭಾವಾರ್ಥ :** ಅನಾದಿಕಾಲದಿಂದ ಹಿಡಿದು ಎಲ್ಲಿಯವರೆಗೆ ಜೀವನಿಗೆ ಭೇದವಿಜ್ಞಾನವಿಲ್ಲ ಅಲ್ಲಿಯವರೆಗೆ ಅವನು ಕರ್ಮದಿಂದ ಕಟ್ಟಲ್ಪಡುತ್ತಲೇ ಇರುತ್ತಾನೆ. ಸಂಸಾರದಲ್ಲಿ ಪರಿಭ್ರಮಣೆಯನ್ನು ಮಾಡುತ್ತಲೇ ಇರುತ್ತಾನೆ. ಯಾವ ಜೀವನಿಗೆ ಭೇದವಿಜ್ಞಾನವಾಗುತ್ತದೆ ಅವನು ಕರ್ಮಗಳಿಂದ ಅವಶ್ಯವಾಗಿ ಬಿಡುಗಡೆ ಪಡೆಯುತ್ತಾನೆ.

ಮೋಕ್ಷವನ್ನು ಪ್ರಾಪ್ತ ಮಾಡಿಕೊಂಡೇ ಬಿಡುತ್ತಾನೆ. ಅದಕ್ಕಾಗಿ ಕರ್ಮಬಂಧದ ಸಂಸಾರದ ಮೂಲವು ಭೇದವಿಜ್ಞಾನದ ಅಭಾವವೇ ಇದೆ. ಮೋಕ್ಷದ ಮೊದಲ ಕಾರಣವೆಂದರೆ ಭೇದವಿಜ್ಞಾನವೇ ಇದೆ. ಭೇದವಿಜ್ಞಾನವಿಲ್ಲದೆ ಯಾರೂ ಪೂರ್ಣತೆಯನ್ನು ಪ್ರಾಪ್ತ ಮಾಡಿಕೊಳ್ಳಲಾರರು.

ಭೇದವಿಜ್ಞಾನವು ಜೈನದರ್ಶನದ ಸಾರವಿದೆ. ಅದರ ಸಲುವಾಗಿಯೇ 'ಸಮಯಸಾರ' ಹೆಸರಿನ ಶಾಸ್ತ್ರವನ್ನು ರಚಿಸಲಾಗಿದೆ. ಅದರಲ್ಲಿ ಸಮ್ಯಗ್ದರ್ಶನ ಪ್ರಾಪ್ತ ಮಾಡುವ ಸಲುವಾಗಿ ಆತ್ಮನಿಗೆ ಸಮ್ಯಗ್ದರ್ಶನದ ವಿಷಯ ರೂಪ ಶುದ್ಧಾತ್ಮನಿಂದಲೇ ಗ್ರಹಣ ಮಾಡಲಾಗಿದೆ ಮತ್ತು ಉಳಿದ ಭಾವಗಳಿಂದಲೂ ಭೇದವಿಜ್ಞಾನ ಮಾಡಿಸಿದ್ದಾರೆ.

**೬. ನಿರ್ಜರಾ ಅಧ್ಯಾಯ :** ಯಾವ ಸಮ್ಯಗ್ದರ್ಶನವಿದೆ ಅರ್ಥಾತ್ ಶುದ್ಧಾತ್ಮನ ಅನುಭೂತಿ ಮತ್ತು ಅದರಲ್ಲಿ ಸ್ಥಿರತೆಯಿದೆ, ಅದುವೇ ಸಾಕ್ಷಾತ್ ನಿರ್ಜರೆಯಿದೆ. ಈ ಕಾರಣದಿಂದ ಈ ಅಧ್ಯಾಯಗಳಲ್ಲಿ ಸಾಕ್ಷಾತ್ ನಿರ್ಜರೆಯ ಸಲುವಾಗಿಯೇ ಬೇರೆ ಎಲ್ಲ ಭಾವಗಳಿಂದ ಭೇದಜ್ಞಾನವನ್ನೇ ಮಾಡಿಸಿದ್ದಾರೆ. ಏಕೆಂದರೆ ಕೇವಲ ಶುದ್ಧಾತ್ಮನ ಶರಣ ತೆಗೆದುಕೊಳ್ಳುವದರಿಂದಲೇ ಸಮ್ಯಗ್ದರ್ಶನವು ಪ್ರಕಟವಾಗುತ್ತದೆ ಮತ್ತು ಸಮ್ಯಗ್ದೃಷ್ಟಿಗೇನೇ ಸಾಕ್ಷಾತ್ ನಿರ್ಜರೆಯಾಗುತ್ತದೆ.

**ಗಾಥೆ ೧೯೫ :** ಯಾವ ಪ್ರಕಾರ ವೈದ್ಯ ಪುರುಷನು ವಿಷವನ್ನು ತಿನ್ನುತ್ತಿದ್ದರೂ ಮರಣವನ್ನು ಹೊಂದುವದಿಲ್ಲ, ಅದೇ ಪ್ರಕಾರ ಜ್ಞಾನೀ ಮನುಷ್ಯನು ಪುದ್ಗಲ ಕರ್ಮದ ಉದಯವನ್ನು ಅನುಭವಿಸುತ್ತನಾದರೂ ಬದ್ಧನಾಗುವದಿಲ್ಲ.

ಏಕೆಂದರೆ ಜ್ಞಾನಿಯು ವಿವೇಕಿ ಆಗಿರುವದರಿಂದ ಕರ್ಮವನ್ನು ಭೋಗಿಸುತ್ತಿದ್ದರೂ ಆ ಪರಿಣಾಮರೂಪ ಮನ್ನಿಸುವದಿಲ್ಲ. ಆದರೆ ತನ್ನ 'ನನ್ನತನ'ವನ್ನು ಕೇವಲ ಒಂದು ಶುದ್ಧಭಾವದಲ್ಲಿಯೇ ಇಡುವದರಿಂದ ಅವನಿಗೆ ಬಂಧವಿಲ್ಲ. ಅಂದರೆ ಭೋಗದ ಕುರಿತು ಅವನಿಗೆ ಸ್ವಲ್ಪವೂ ಆದರ ಭಾವ ಇರುವದಿಲ್ಲ. ಅವನ ಪೂರ್ಣ ಆದರ ಭಾವವು ಸ್ವತತ್ವ ರೂಪ ಶುದ್ಧಾತ್ಮನಲ್ಲಿಯೇ ಇರುತ್ತದೆ. ಈ ಅಪೇಕ್ಷೆಯಿಂದ ಜ್ಞಾನಿಗೆ ಬಂಧವಿಲ್ಲ. ಆದರೆ ಭೋಗ ಭೋಗಿಸುತ್ತಿದ್ದರೂ ಅವನಿಗೆ ನಿರ್ಜರೆಯಿದೆ ಎಂದು ಹೇಳಲಾಗುತ್ತದೆ.

**ಗಾಥೆ ೨೦೫ ಭಾವಾರ್ಥ :** ಜ್ಞಾನಗುಣದಿಂದ ರಹಿತರಾದ ಬಹಳಷ್ಟು ಜನರು ಅನೇಕ ಪ್ರಕಾರದ ಕಾರ್ಯ ಮಾಡುತ್ತಿದ್ದರೂ ಈ ಜ್ಞಾನಸ್ವರೂಪವಾದ ಪದವನ್ನು ಪ್ರಾಪ್ತ ಮಾಡಿಕೊಳ್ಳುವದಿಲ್ಲ. ಅದಕ್ಕಾಗಿ ಎಲೈ ಭವ್ಯನೇ! ಒಂದು ವೇಳೆ ನೀನು ಕರ್ಮಗಳಿಂದ ಸಂಪೂರ್ಣವಾಗಿ ಮುಕ್ತಿಯನ್ನು ಅಪೇಕ್ಷಿಸುತ್ತಿದ್ದರೆ ನಿಶ್ಚಿತವಾದ ಈ ಜ್ಞಾನವನ್ನು ಗ್ರಹಣ ಮಾಡು. ಅಂದರೆ ಅದರಲ್ಲಿಯೇ 'ನನ್ನತನ' ಮಾಡಿ ಅದರದೇ ಅನುಭವ ಮಾಡಿ ಸಮ್ಯಗ್ದರ್ಶನ ಪ್ರಕಟ ಮಾಡಿಕೊ.

**ಗಾಥೆ ೨೦೬ :** ಎಲೈ ಭವ್ಯನೇ! ನೀನು ಜ್ಞಾನದಲ್ಲಿ ಯಾವಾಗಲೂ ಪ್ರೀತಿ ಉಳ್ಳವನಾಗು. ಇದರಲ್ಲಿ ಯಾವಾಗಲೂ ಸಂತುಷ್ಟನಾಗು ಮತ್ತು ಇದರಿಂದ ತೃಪ್ತನಾಗು. ಹೀಗೆ ಮಾಡುವದರಿಂದ ನಿನಗೆ ಉತ್ತಮ ಸುಖವು ಪ್ರಾಪ್ತವಾಗುವದು. ಇದರ ಅರ್ಥ – ಶುದ್ಧಾತ್ಮನ ಆಶ್ರಯದಿಂದಲೇ ಮೋಕ್ಷಮಾರ್ಗ ಮತ್ತು ಮೋಕ್ಷ ಪ್ರಾಪ್ತವಾಗುವದು. ಅದುವೇ ಅವ್ಯಾಬಾಧ ಸುಖರೂಪ ಇರುತ್ತದೆ.

**ಶ್ಲೋಕ ೧೬೨ :** ಹೀಗೆ ಹೊಸತಾದ ಬಂಧವನ್ನು ತಡೆಯುತ್ತ ಮತ್ತು ತನ್ನ ಎಂಟು ಅಂಗಗಳಿಂದ ಯುಕ್ತನಾಗುವ ಕಾರಣವಾಗಿ ನಿರ್ಜರೆಯು ಪ್ರಕಟವಾಗುವದರಿಂದ ಮೊದಲು ಕಟ್ಟಿದ ಕರ್ಮಗಳನ್ನು ನಷ್ಟಗೊಳಿಸುತ್ತಿರುವ ಸಮ್ಯಗ್ದೃಷ್ಟಿ ಜೀವನು ಸ್ವತಃ ನಿಜರಸದಲ್ಲಿ ಮತ್ತನಾಗಿ ಆದಿ–ಮಧ್ಯ–ಅಂತ್ಯಗಳಿಂದ ರಹಿತವಾದ ಜ್ಞಾನರೂಪನಾಗಿ ವಿಸ್ತಾರ ರೂಪವಾದ ಆಕಾಶ ಎಂಬ ರಂಗಭೂಮಿಯಲ್ಲಿ ವ್ಯಾಪ್ತನಾಗಿ ನೃತ್ಯ ಮಾಡುತ್ತಾನೆ.

ಸಮ್ಯಗ್ದೃಷ್ಟಿಗೆ ಶಂಕಾದಿಗಳಿಂದ ಆಗುವ ಹೊಸ ಬಂಧವು ಆಗುವದಿಲ್ಲ ಮತ್ತು ತಾನು ಅಷ್ಟಾಂಗ ಯುಕ್ತನಾಗಿರುವದರಿಂದ ನಿರ್ಜರೆಯು ಉದಯವಾಗಿರುವ ಕಾರಣದಿಂದ ಅದಕ್ಕೆ ಮೊದಲೇ ಬಂಧದ ನಾಶವಾಗುತ್ತದೆ. ಆದ್ದರಿಂದ ಅವನು ಧಾರಾ ಪ್ರವಾಹಿಯಾದ ಜ್ಞಾನರೂಪದ ರಸವನ್ನು ಕುಡಿದು ನರ್ತಿಸುತ್ತಾನೆ. ಅದ್ವಿತೀಯ ಆನಂದದ ಆಸ್ವಾದ ತೆಗೆದುಕೊಳ್ಳುತ್ತಾನೆ. ಅಪೂರ್ವ ಆನಂದ ಅನುಭವಿಸುತ್ತಾನೆ.

**೭. ಬಂಧ ಅಧ್ಯಾಯ :** ಜ್ಞಾನಿಗೆ ಸಹಜ ಪರಿಣಮನರೂಪಿ ಶುದ್ಧಾತ್ಮನಲ್ಲಿಯೇ 'ನನ್ನತನ'ವಾಗುವದರಿಂದ ಮತ್ತು ಅದರದೇ ಅನುಭವ ಮಾಡುವದರಿಂದ ಹಾಗೂ ಆ ಭಾವದಲ್ಲಿ ಯಾವಾಗಲೂ ಬಂಧದ ಅಭಾವ ಇರುವದರಿಂದ ಜ್ಞಾನಿಗೆ ಬಂಧ ಇರುವದಿಲ್ಲ ಎಂದು ಹೇಳಲಾಗುತ್ತದೆ.

ಜ್ಞಾನಿಯ ವಿವೇಕವು ಜಾಗೃತವಾಗಿರುವದರಿಂದ ಹೇಗೆ ವೈದ್ಯನು ವಿಷ ತಿಂದರೂ ಸಹ ಸಾಯುವದಿಲ್ಲ. ಹಾಗೆಯೇ ಜ್ಞಾನಿಯ ಶಕ್ತಿ ಕಡಿಮೆ ಇರುವದರಿಂದ ಅಂದರೆ ತನ್ನ ಪರವಶತೆಯ ಕಾರಣ ಭೋಗ ಭೋಗಿಸುತ್ತಿದ್ದರೂ ಸಹ ಅವನಿಗೆ ತೀರ ಅಲ್ಪ ಬಂಧವಾಗುವದರಿಂದ ಅವನಿಗೆ ಬಂಧವಿಲ್ಲ ಎಂದು ಹೇಳಲಾಗುತ್ತದೆ. ಜ್ಞಾನಿಗೆ ರಾಗ ದ್ವೇಷಗಳಲ್ಲಿ ಮತ್ತು ಬಂಧದ ಬೇರೆ ಕಾರಣಗಳಲ್ಲಿ 'ನನ್ನತನ' ಆಗುವದಿಲ್ಲ. ಆದ್ದರಿಂದ ಈ ಅಪೇಕ್ಷೆಗಳಿಂದ ಜ್ಞಾನಿಗೆ ಬಂಧ ಇರುವದಿಲ್ಲ ಎಂದು ಹೇಳಲಾಗಿದೆ.

ಮೂರನೆಯದಾಗಿ ಭೇದಜ್ಞಾನ ಮಾಡುವವನಿಗೆ ಮತ್ತು ಸಮ್ಯಗ್ದರ್ಶನ ಪ್ರಾಪ್ತ ಮಾಡುವವನಿಗೆ ಮತ್ತು ಕೇವಲ ಶುದ್ಧಾತ್ಮನದೇ ಶರಣ ತೆಗೆದುಕೊಳ್ಳುವದರಿಂದ ಸಮ್ಯಗ್ದರ್ಶನದ ವಿಷಯರೂಪ ಶುದ್ಧಾತ್ಮನಲ್ಲಿ ಬಂಧದ ಅಭಾವ ಯಾವಾಗಲೂ ಇರುತ್ತದೆ. ಅದುವೇ ಈ ಅಧ್ಯಾಯದ ಸಾರವಿದೆ.

**ಗಾಥಾರ್ಥ ೨೭೮-೨೭೯ :** ಹೇಗೆ ಸ್ಫಟಿಕ ಮಣಿಯು ಶುದ್ಧವಾಗಿರುವದರಿಂದ ಕೆಂಪು ಮೊದಲಾದ ರೂಪದಿಂದ ಅದು ತನ್ನಿಂದ ತಾನೇ ಪರಿಣಮಿಸುವದಿಲ್ಲ. ಆದರೆ ಅದು ಇತರ ಕೆಂಪು ಮೊದಲಾದ ದ್ರವ್ಯಗಳಿಂದ ಹಾಗೂ ರೂಪಗಳಿಂದ ಪರಿಣಮಿಸುತ್ತದೆ. ಇದೇ ಪ್ರಕಾರ ಜ್ಞಾನಿ ಆತ್ಮನು ಶುದ್ಧನಿರುವದರಿಂದ ರಾಗಾದಿಗಳ ರೂಪವಾಗಿ ತನ್ನಿಂದ ತಾನೇ ಪರಿಣಮಿಸುವದಿಲ್ಲ. ಆದರೆ ಅವನು ರಾಗ ಮೊದಲಾದ ಇತರ ದೋಷಗಳಿಂದ ರಾಗಾದಿಗಳ ರೂಪವಾಗಿ ಪರಿಣಮಿಸುತ್ತಾನೆ.

**ಶ್ಲೋಕ ೧೭೫ :** ಸೂರ್ಯಕಾಂತ ಮಣಿಯಂತೆ ತಾನೇ ಅಗ್ನಿರೂಪವಾಗಿ ಪರಿಣಮಿಸುವದಿಲ್ಲ. ಅದರ ಅಗ್ನಿರೂಪದ ಪರಿಣಮನದಲ್ಲಿ ಸೂರ್ಯಬಿಂಬದ ನಿಮಿತ್ತವಿದೆ. ಅದೇ ಪ್ರಕಾರ ಆತ್ಮನು ಎಂದೂ ರಾಗಾದಿಗಳಿಗೆ ನಿಮಿತ್ತನಾಗುವದಿಲ್ಲ. ಅದರಲ್ಲಿ ನಿಮಿತ್ತವು ಪರಸಂಗವೇ ಇರುತ್ತದೆ. ಹೀಗೆ ವಸ್ತುವಿನ ಸ್ವಭಾವವೇ ಇದೆ. ಇಂಥ ವಸ್ತು ಸ್ವಭಾವವನ್ನು ತಿಳಿದುಕೊಂಡ ಜ್ಞಾನಿಯು ರಾಗಾದಿಗಳನ್ನು ತನ್ನ ರೂಪವಾಗಿ ಮಾಡುವದಿಲ್ಲ. ಏಕೆಂದರೆ ಕೆಟ್ಟ ನಿಮಿತ್ತಗಳಿಂದ ಅವನದು ಪತನವಾಗುತ್ತದೆ. ಶುದ್ಧಾತ್ಮನು ಸ್ವತಃ ಶುದ್ಧನಾಗಿರುವದರಿಂದ ರಾಗಾದಿರೂಪ ತನ್ನಿಂದ ತಾನೇ ಎಂದೂ ಪರಿಣಮಿಸುವದಿಲ್ಲ. ಆದರೆ ಅದರಲ್ಲಿ ನಿಮಿತ್ತವು ಪರಸಂಗವೇ ಇದೆ. ನಿಮಿತ್ತವು ಸ್ವತಃ ಉಪಾದಾನ ರೂಪದಿಂದ ಪರಿಣಮಿಸುವದಿಲ್ಲವಾದರೂ ಸಹ ಅದು ಸಂಯೋಗಗಳಲ್ಲಿ ಉಪಾದಾನದ ಮೇಲೆ ಪರಿಣಾಮ ಮಾಡುತ್ತದೆ ಮತ್ತು ಅದನ್ನೇ ವಸ್ತು ಸ್ವಭಾವವೆಂದು ಹೇಳಿದ್ದಾರೆ. ಆದ್ದರಿಂದ ಜೈನಸಿದ್ಧಾಂತವನ್ನು ವಿವೇಕದಿಂದ ಗ್ರಹಣ ಮಾಡಬೇಕಾಗುತ್ತದೆ ಮತ್ತು ಅಪೇಕ್ಷೆಯಿಂದ ತಿಳಿಸಬೇಕಾಗುತ್ತದೆ. ಏಕಾಂತದಿಂದ ತಿಳಿಸಿದರೆ ಮಹಾಅನರ್ಥದ ಕಾರಣವಾಗುತ್ತದೆ.

**೮. ಮೋಕ್ಷ ಅಧ್ಯಾಯ :** ಪರಮ ಪಾರಿಣಾಮಿಕ ಭಾವರೂಪಿ ಸಹಜ ಪರಿಣಮನಯುಕ್ತ ಶುದ್ಧಾತ್ಮನಲ್ಲಿ 'ನನ್ನತನ' ಮಾಡುತ್ತಲೇ ಸ್ವಾತ್ಮಾನುಭೂತಿ ಪೂರ್ವಕ ಸಮ್ಯಗ್ದರ್ಶನ ಪ್ರಕಟವಾಗುತ್ತದೆ. ಮತ್ತೆ ಅದರಲ್ಲಿಯೇ ನಿರಂತರ ಸ್ಥಿರ ಮಾಡುವದರಿಂದ ಆತ್ಮನು ಕ್ಷಪಕ ಶ್ರೇಣಿಯಿಂದ ಏರಿ ಘಾತಿಕರ್ಮಗಳ ನಾಶ ಮಾಡಿ ಕೇವಲಜ್ಞಾನ, ಕೇವಲದರ್ಶನ ಪ್ರಾಪ್ತ ಮಾಡುತ್ತಾನೆ ಮತ್ತು ನಂತರ ಆಯು ಕ್ಷಯವಾದ ಬಳಿಕ ಮೋಕ್ಷ ಪ್ರಾಪ್ತ ಮಾಡುತ್ತಾನೆ. ಇದುವೇ ಮೋಕ್ಷ ಮಾರ್ಗವಿದೆ. ಆದ್ದರಿಂದ ಎಲ್ಲ ಜೀವಗಳ ಸಲುವಾಗಿ ಶುದ್ಧಾತ್ಮವೇ ಸೇವನೆ ಮಾಡಲು ಯೋಗ್ಯವಿದೆ. ಇದುವೇ ಮೋಕ್ಷ ಅಧ್ಯಾಯದ ಸಾರವಿದೆ.

**ಗಾಥೆ ೨೯೪ :** ಜೀವ ಹಾಗೂ ಬಂಧ ಇವೆರಡೂ ನಿಯತ ಸ್ವಲಕ್ಷಣಗಳಿಂದ ಛೇದಿಸಲ್ಪಡುತ್ತವೆ. ಪ್ರಜ್ಞೆ ಎಂಬ ಚೇಣದಿಂದ ಛೇದಿಸಿದ ನಂತರ (ಭೇದಜ್ಞಾನ ಮಾಡಿದ ನಂತರ) ಅವು ಬೇರೆಬೇರೆಯಾಗಿ ಬಿಡುತ್ತವೆ. ಅರ್ಥಾತ್ ದ್ರವ್ಯದೃಷ್ಟಿಯಲ್ಲಿ ಕೇವಲ 'ಶುದ್ಧಾತ್ಮ' ರೂಪ ಜೀವವೇ ಗ್ರಹಣವಾಗುತ್ತದೆ ಮತ್ತು ಅದರಲ್ಲಿಯೇ

'ನನ್ನತನ' ಮಾಡಿದ ನಂತರ ಸ್ವಾತ್ಮಾನುಭೂತಿ ಸಹಿತ ಸಮ್ಯಗ್ದರ್ಶನ ಪ್ರಕಟವಾಗುತ್ತದೆ. ಅಂದರೆ ಎರಡೂ ಭಾವಗಳಲ್ಲಿ ಭೇದಜ್ಞಾನವು ಪ್ರಕಟವಾಗುತ್ತದೆ.

**ಗಾಥೆ ೨೯೭ :** ಯಾವ ಚೇತನ ಸ್ವರೂಪನಾದ ಆತ್ಮನಿದ್ದಾನೆ ಅವನು ನಿಶ್ಚಯದಿಂದ ನಾನೇ ಇದ್ದೇನೆ. ಉಳಿದ ಯಾವ ಭಾವಗಳಿವೆ ಅವು ನನ್ನಿಂದ ಬೇರೆಯಾಗಿವೆ. ಹೀಗೆ ಪ್ರಜ್ಞೆಯ ಮುಖಾಂತರ ತಿಳಿದುಕೊಂಡು ಆತ್ಮನನ್ನು ಗ್ರಹಣ ಮಾಡಬೇಕು.

**ಗಾಥೆ ೨೯೮ :** ಪ್ರಜ್ಞೆಯಿಂದ ಹೀಗೆ ಗ್ರಹಣ ಮಾಡಬೇಕು – ಯಾವ ತಿಳಿಯುವವನಿದ್ದಾನೆ ಮತ್ತು ನೋಡುವಂಥವನಿದ್ದಾನೆ. ಅವನು ನಿಶ್ಚಯದಿಂದ ನಾನೇ ಇದ್ದೇನೆ. ಉಳಿದ ಯಾವ ಭಾವಗಳಿವೆ ಅವು ನನ್ನಿಂದ ಬೇರೆಯಾಗಿವೆ ಎಂದು ತಿಳಿಯಬೇಕು.

**ಗಾಥೆ ೩೦೬–೩೦೭ :** ಪ್ರತಿಕ್ರಮಣ, ಪ್ರತಿಸರಣ, ಪರಿಹಾರ, ಧಾರಣೆ, ನಿವೃತ್ತಿ, ನಿಂದೆ, ಗರ್ಹಾ ಮತ್ತು ಶುದ್ಧಿ ಇವು ಎಂಟು ಪ್ರಕಾರದ ವಿಷಕುಂಭಗಳು ಇವೆ ಏಕೆಂದರೆ ಇದರಲ್ಲಿ ಕರ್ತೃತ್ವದ ಬುದ್ಧಿಯು ಸಂಭವಿಸುತ್ತದೆ.

ಅಪ್ರತಿಕ್ರಮಣ, ಅಪ್ರತಿಸರಣ, ಅಪರಿಹಾರ, ಅಧಾರಣೆ, ಅನಿವೃತ್ತಿ, ಅನಿಂದೆ, ಅಗರ್ಹಾ ಮತ್ತು ಅಶುದ್ಧಿ ಇವು ಅಮೃತಕುಂಭ ಇವೆ. ಏಕೆಂದರೆ ಇದರಲ್ಲಿ ಕರ್ತೃತ್ವದ ನಿಷೇಧವಿದೆ. ಏನನ್ನು ಮಾಡುವದೇ ಇಲ್ಲ. ಆದ್ದರಿಂದ ಬಂಧವಾಗುವದಿಲ್ಲ.

ಇಲ್ಲಿ ಛಲಗ್ರಹಣ ಮಾಡಬಾರದು. ವಿಪರೀತ ಸ್ವೀಕರಿಸಬಾರದು. ಯಾವ ಅಪೇಕ್ಷೆಯಿಂದ ಮೇಲೆ ಹೇಳಿದ ಭಾವಗಳನ್ನು ವಿಷಕುಂಭ ಎಂದು ಹೇಳಿದ್ದಾರೆ, ಅದನ್ನು ಸರಿಯಾಗಿ ತಿಳಿಯದ ಹೊರತು ಏಕಾಂತದಿಂದ ಅವನ್ನು ವಿಷರೂಪವಾಗಿ ತಿಳಿದು ಅವನ್ನು ಬಿಡಬಾರದು ಮತ್ತು ಸ್ವಚ್ಛಂದತೆಯಿಂದ ರಾಗ–ದ್ವೇಷ ರೂಪ ಪರಿಣಮಿಸಬಾರದು. ಏಕೆಂದರೆ ಅದಂತೂ ಅಭವ್ಯತನ ಅಥವಾ ದೂರ ಭವ್ಯತನದ ಚಿಹ್ನವಿದೆ. ಹಾಗೆಯೇ ಅಂಥ ಆತ್ಮನನ್ನು ಅನಂತ ಸಂಸಾರಿ ಎಂದು ತಿಳಿಯಬೇಕು.

**೯. ಸರ್ವವಿಶುದ್ಧ ಜ್ಞಾನ ಅಧ್ಯಾಯ :** ಈ ಅಧ್ಯಾಯವು ಸಮಯಸಾರ ಶಾಸ್ತ್ರದ ಹೃದಯವಿದೆ. ಅರ್ಥಾತ್ ಈ ಶಾಸ್ತ್ರದ ಉದ್ದೇಶವು ಸಮ್ಯಗ್ದರ್ಶನ ಪ್ರಾಪ್ತ ಮಾಡಿಸುವದು ಮತ್ತು ನಂತರ ಸಿದ್ಧತ್ವ ಕೊಡಿಸುವದು. ಸಮ್ಯಗ್ದರ್ಶನ ಪ್ರಾಪ್ತ ಮಾಡಿಸುವ ಸಲುವಾಗಿ ಭೇದಜ್ಞಾನ ಮಾಡಿಸಲು ಯಾವ ಸಮ್ಯಗ್ದರ್ಶನ ವಿಷಯವಿದೆ ಅಂದರೆ ಯಾವ ಶುದ್ಧಾತ್ಮನಿದ್ದಾನೆ, ಅವನಲ್ಲಿಯ ಎಲ್ಲ ವಿಭಾವ–ಭಾವಗಳು ಅಭಾವ ಆಗಿರುವದರಿಂದ ಅವನು ಸರ್ವವಿಶುದ್ಧ ಇದ್ದಾನೆ. ಅದು ಪರಮ ಪಾರಿಣಾಮಿಕ ಭಾವ, ಆತ್ಮನ ಗುಣಗಳ ಸಹಜ ಪರಿಣಮನ, ಜ್ಞಾನಮಾತ್ರ, ಸಾಮಾನ್ಯಜ್ಞಾನ, ಸಾಮಾನ್ಯ ಚೇತನವು, ಸಹಜಚೇತನ, ಕಾರಣಶುದ್ಧ ಪರ್ಯಾಯ, ಕಾರಣ ಸಮಯಸಾರ, ಚೈತನ್ಯ ಅನುವಿಧಾಯಿ ಪರಿಣಾಮ, ಕಾರಣ ಪರಮಾತ್ಮ ಮುಂತಾದ ಅನೇಕ ಹೆಸರುಗಳಿಂದ ಗುರುತಿಸಲಾಗುತ್ತದೆ ಎಂದು ಹೇಳಲಾಗುತ್ತದೆ.

ಹೀಗೆ ಎಲ್ಲ ವಿಶುದ್ಧಿ ಭಾವದಲ್ಲಿ ಜೀವನಿಗೆ 'ನನ್ನತನ' ಮಾಡಿಸಿ ಸ್ವಾತ್ಮಾನುಭೂತಿ ಮಾಡಿಸಿ ಸಮ್ಯಗ್ದರ್ಶನ ಪ್ರಾಪ್ತ ಮಾಡಿಸುವದು ಮತ್ತು ಇದೇ ಭಾವದಲ್ಲಿ ಮೇಲಿಂದ ಮೇಲೆ ಸ್ಥಿರತೆ ಮಾಡುವವರಿಂದ ಆ ಜೀವವು ಘಾತಿಕರ್ಮಗಳ ನಾಶ ಮಾಡಿ ಕೇವಲಜ್ಞಾನ, ಕೇವಲದರ್ಶನ ಪ್ರಾಪ್ತ ಮಾಡುವದು. ನಂತರ ಆಯು ಕ್ಷಯವಾದ ಬಳಿಕ ಮೋಕ್ಷ ಪ್ರಾಪ್ತ ಮಾಡುತ್ತಾರೆ. ಅಂದರೆ ಸಿದ್ಧರಾಗುತ್ತಾರೆ. ಹೀಗೆ ಸಿದ್ಧತ್ವ ಕೊಡಿಸುವದೇ ಈ ಶಾಸ್ತ್ರದ ಉದ್ದೇಶವಾಗಿದೆ. ಆದ್ದರಿಂದ ಕೇವಲ ಶುದ್ಧಾತ್ಮನನ್ನೇ ಈ ಶಾಸ್ತ್ರದಲ್ಲಿ ಆತ್ಮನೆಂದು ಹೇಳಲಾಗಿದೆ. ಇದೇ ಭಾವದ ಪ್ರತಿಪಾದನೆಯನ್ನು ಪೂರ್ಣ ಶಾಸ್ತ್ರದಲ್ಲಿ ಮಾಡಿದೆ. ಆ ಭಾವವೇ ಸರ್ವವಿಶುದ್ಧಿ ಜ್ಞಾನವಿದೆ. ಅಂದರೆ ಸಮಯಸಾರದ ಸಾರವೇ ಇದೆ.

**ಶ್ಲೋಕ ೧೯೩ :** ಎಲ್ಲ ಕರ್ತೃ-ಭೋಕ್ತೃ ಮೊದಲಾದ ಭಾವಗಳನ್ನು ಸಮ್ಯಕ್ ಪ್ರಕಾರದಿಂದ ನಷ್ಟಕ್ಕೆ ಗುರಿ ಮಾಡಿ ಹೆಜ್ಜೆಹೆಜ್ಜೆಗೆ ಕರ್ಮಗಳ ಕ್ಷಯೋಪಶಮದ ನಿಮಿತ್ತದಿಂದ ಆಗುವಂಥ ಪ್ರತಿಯೊಂದು ಪರ್ಯಾಯದಲ್ಲಿ ಬಂಧ-ಮೋಕ್ಷಗಳ ರಚನೆಯಿಂದ ದೂರವಾಗಿ ವರ್ತಿಸುತ್ತ ಶುದ್ಧವಾದ, ಪವಿತ್ರವಾದ, ಅಚಲವಾದ ತೇಜಸ್ಸನ್ನು ನಿಜಜ್ಞಾನರಸದ ವಿಸ್ತಾರದಿಂದ ಪರಿಪೂರ್ಣವಾದಂಥ ಮತ್ತು ಯಾವುದರ ಮಹಿಮೆಯು ಟಂಕೋತ್ಕೀರ್ಣ ರೂಪದಿಂದ ಸ್ಪಷ್ಟವಿದೆ, ಅಂಥ ಈ ಜ್ಞಾನಪುಂಜನಾದ ಆತ್ಮನು ಪ್ರಕಟನಾಗುತ್ತಾನೆ. ಅಂದರೆ ಅನುಭವದಲ್ಲಿ ಬರುತ್ತಾನೆ.

ಶುದ್ಧನಯದ ವಿಷಯವು ಯಾವ ಜ್ಞಾನಸ್ವರೂಪವಾದ ಆತ್ಮವಾಗಿದೆ, ಅದು ಕರ್ತೃತ್ವ – ಭೋಕ್ತೃತ್ವ ಭಾವಗಳಿಂದ ರಹಿತವಾಗಿದೆ. ಬಂಧ-ಮೋಕ್ಷ ರಚನೆಯಿಂದ ರಹಿತವಾಗಿದೆ. ಪರದ್ರವ್ಯದಿಂದ ಮತ್ತು ಪರದ್ರವ್ಯದ ಸಮಸ್ತ ಭಾವಗಳಿಂದ ರಹಿತವಾಗಿರುವದರಿಂದ ಶುದ್ಧವಾಗಿದೆ. ನಿಜರಸದ ಪ್ರವಾಹದಿಂದ ಪೂರ್ಣ ದೇದಿಪ್ಯಮಾನವಾದ ಜ್ಯೋತಿರೂಪವಾಗಿದೆ ಮತ್ತು ಟಂಕೋತ್ಕೀರ್ಣ ಮಹಿಮೆಯಿಂದ ಯುಕ್ತವಾಗಿದೆ. ಇಂಥ ಜ್ಞಾನಪುಂಜನಾದ ಆತ್ಮನು ಪ್ರಕಟನಾಗುತ್ತಾನೆ ಅನುಭವದಲ್ಲಿ ಬರುತ್ತಾನೆ.

**ಗಾಥೆ ೩೦೮ :** ಯಾವ ದ್ರವ್ಯವು ಯಾವ ಗುಣಗಳಿಂದ ಉತ್ಪನ್ನವಾಗುತ್ತದೆ. ಆ ಗುಣಗಳಿಂದ ಅದನ್ನು ಅಭಿನ್ನ ಎಂದು ತಿಳಿ! ಯಾವ ಪ್ರಕಾರ ಈ ಜಗತ್ತಿನಲ್ಲಿ ಸುವರ್ಣವು ಕಡಗ ಮೊದಲಾದ ಪರ್ಯಾಯಗಳಿಂದ ಅಭಿನ್ನವಿದೆ ಹಾಗೆ.

ಯಾವ ಪರ್ಯಾಯವಿದೆ ಅದು ದ್ರವ್ಯದಿಂದಲೇ ಉಂಟಾಗಿರುತ್ತದೆ. ಅರ್ಥಾತ್ ಪರ್ಯಾಯರೂಪ ವಿಶೇಷ ಭಾವವನ್ನು ಗೌಣ ಮಾಡುತ್ತಲೇ ಸಾಕ್ಷಾತ್ ದ್ರವ್ಯ ಉಪಸ್ಥಿತವಾಗುತ್ತದೆ. ಆದ್ದರಿಂದ ಪರ್ಯಾಯ ದೃಷ್ಟಿಯಲ್ಲಿ ಯಾವ ಪರ್ಯಾಯವಿದೆ ಅದುವೇ ದ್ರವ್ಯದೃಷ್ಟಿಯಿಂದ ಮಾತ್ರ ದ್ರವ್ಯವೇ ಇದೆ. ಅಲ್ಲಿ ಆಗ ಪರ್ಯಾಯವು ಅತ್ಯಂತ ಗೌಣ ಆಗಿರುವದರಿಂದ ತಿಳಿದು ಬರುವದೇ ಇಲ್ಲ. ಶುದ್ಧ ದ್ರವ್ಯದ ಪ್ರಾಪ್ತಿ ಮಾಡಲು ಇದುವೇ ವಿಧಿ ಇದೆ.

**ಶ್ಲೋಕ ೨೧೫ :** ಯಾವನು ಶುದ್ಧ ದ್ರವ್ಯದ ನಿರೂಪಣೆಯಲ್ಲಿ ಬುದ್ಧಿಯನ್ನು ತೊಡಗಿಸಿದ್ದಾನೆ. ಮತ್ತು ಯಾವನು ತತ್ವದ ಅನುಭವ ಮಾಡುತ್ತಾನೆ. ಆ ಪುರುಷನಿಗೆ ಒಂದು ದ್ರವ್ಯದೊಳಗೆ ಯಾವುದೇ ಬೇರೆ ದ್ರವ್ಯವು ಇರುತ್ತಿರುವದು ಎಂದೂ ಭಾಸವಾಗುವದಿಲ್ಲ. ಜ್ಞಾನವು ಜ್ಞೇಯವನ್ನು ತಿಳಿಯುತ್ತದೆ. ಅದಂತೂ ಈ ಜ್ಞಾನದ ಶುದ್ಧ ಸ್ವಭಾವದ ಉದಯವಿದೆ. ಹೀಗಿದೆ ಎಂದ ಮೇಲೆ ಜನರು ಇತರ ದ್ರವ್ಯದೊಡನೆ ಜ್ಞಾನದ ಸ್ಪರ್ಶವಾಗುತ್ತದೆಂಬ ಮನ್ನಣೆಯಿಂದ ವ್ಯಾಕುಲಬುದ್ಧಿ ಉಳ್ಳವರಾಗುತ್ತ ತತ್ವದಿಂದ ಅಂದರೆ ಶುದ್ಧ ಸ್ವರೂಪದಿಂದ ಅದೇಕೆ ಚ್ಯುತರಾಗುತ್ತಾರೆ ?

ಹೀಗೆ ಸಮ್ಯಕ್ ಸ್ವರೂಪವಿದೆ. ಸ್ವ-ಪರ ಪ್ರಕಾಶವನ್ನು ಯಾವ ಇದನ್ನು ಬೇರೆ ತಿಳಿಯುವದರಿಂದ ಮಿಥ್ಯಾತ್ವದ ದೋಷ ಬರುತ್ತದೆ. ಅದು ಅನಂದ ಸಂಸಾರದ ಕಾರಣವಾಗುತ್ತದೆ.

**ಶ್ಲೋಕ ೨೨೨ ಭಾವಾರ್ಥ :** ಯಾವ ಪ್ರಕಾರ ದೀವಿಗೆಯ ಸ್ವಭಾವದ ಘಟಪಟಾದಿಗಳನ್ನು ಪ್ರಕಾಶಿತಗೊಳಿಸುತ್ತದೆ. ಅದೇ ಪ್ರಕಾರ ಜ್ಞಾನದ ಸ್ವಭಾವವು ಜ್ಞೇಯವನ್ನು ತಿಳಿದುಕೊಳ್ಳುವದೇ ಇದೆ. ಹೀಗೆ ವಸ್ತುವಿನ ಸ್ವಭಾವವಿದೆ. ಕೇವಲಜ್ಞೇಯವನ್ನು ತಿಳಿದುಕೊಳ್ಳುವದರಿಂದ ಜ್ಞಾನದಲ್ಲಿ ವಿಕಾರವಾಗುವದಿಲ್ಲ. ಜ್ಞೇಯಗಳನ್ನು ತಿಳಿದುಕೊಂಡು ಅವುಗಳಿಗೆ ಒಳಿತು-ಕೆಡಕು ಎಂದು ಮನ್ನಿಸಿ ಆತ್ಮನು ರಾಗಿ-ದ್ವೇಷಿಯಾಗುತ್ತಾನೆ. ವಿಕಾರಗೊಳ್ಳುತ್ತಾನೆ. ಇದು ಅಜ್ಞಾನವಾಗಿದೆ. ಅದಕ್ಕಾಗಿ ವಸ್ತುವಿನ ಸ್ವಭಾವವಂತೂ ಈ ರೀತಿಯಾಗಿದ್ದರೂಈ ಆತ್ಮನು ಅಜ್ಞಾನಿಯಾಗಿ ರಾಗದ್ವೇಷಗಳ ರೂಪವಾಗಿ ಅದೇಕೆ ಪರಿಣಮಿಸುತ್ತಾನೆ ? ತನ್ನ ಸ್ವಾಭಾವಿಕವಾದ ಉದಾಸೀನ ಅವಸ್ಥೆಯ ರೂಪದಿಂದೇಕೆ ಉಳಿಯುವದಿಲ್ಲ ? ಎಂದು ಆಚಾರ್ಯದೇವರು ದುಃಖ ವ್ಯಕ್ತಪಡಿಸಿದ್ದಾರೆ. ಎಲ್ಲಿಯವರೆಗೆ ಶುಭರಾಗ ಇರುತ್ತದೆ ಅದು ವರೆಗೆ ಅಜ್ಞಾನದಿಂದ ದುಃಖಿಯಾದ ಜೀವಕೋಟಿಯನ್ನು ನೋಡಿ ಅವರಿಗೆ ಕರುಣೆ ಉಂಟಾಗುತ್ತದೆ. ಅದರಿಂದ ದುಃಖ ಎನಿಸುತ್ತದೆ.

ವಸ್ತು ಸ್ವರೂಪ ಹೇಗಿದೆಯೋ ಹಾಗೆಯೇ ತಿಳಿದುಕೊಂಡು ಎಲ್ಲರೂ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳಿರಿ. ಹೀಗೆ ಆಚಾರ್ಯರ ಉಪದೇಶವಿದೆ. ಎಲ್ಲರೂ ವರ್ತಮಾನ ಭವವನ್ನು ಸಾರ್ಥಕ ಮಾಡಿಕೊಳ್ಳಿರೆಂದು ಕಳಕಳಿಕೆಯಿಂದ ಹೇಳುತ್ತಾರೆ. ಈ ಅಧ್ಯಾಯದ ಮರ್ಮ ಹೇಗಿದೆ ಎಂದರೆ ಯಾವನು ಶುದ್ಧಾತ್ಮನಲ್ಲಿ ಸ್ಥಿರನಿದ್ದಾನೆ ಅಂಥ ಸಮ್ಯಗ್ದೃಷ್ಟಿ ಜೀವವು ಕೇವಲ ತಿಳಿಯುವುದರಲ್ಲಿಯೇ ಇರುವದರಿಂದ ಅತೀಂದ್ರಿಯ ಆನಂದದಲ್ಲಿದೆ ಮತ್ತು ಅದರ ಭವಿಷ್ಯವೂ ಸಹ ಅದೇ ಇರುತ್ತದೆ. ಭವಿಷ್ಯದಲ್ಲಿ ಸಿದ್ಧರ ಅನಂತ ಸುಖವು ಅವನನ್ನು ಸ್ವಾಗತಿಸಲು ನಿಂತಿರುತ್ತದೆ. ಆದ್ದರಿಂದ ಶುದ್ಧಾತ್ಮನ ಪ್ರಾಪ್ತಿಯೇ ಎಲ್ಲರ ಕರ್ತವ್ಯವಿದೆ. ನಿಶ್ಚಯದಿಂದ ಶುದ್ಧಾತ್ಮನೇ ಎಲ್ಲ ಜನರ ಶರಣಭೂತವಿದೆ.

★★★

## ೩೬. ಸಮಯಸಾರದ ಪರಿಶಿಷ್ಟದಲ್ಲಿಂದ ಅನೇಕಾಂತದ ಸ್ವರೂಪ

ವಸ್ತುವಿನ ಸ್ವರೂಪವು ಅನೇಕಾಂತಮಯ ಇರುತ್ತದೆ. ಅದು ಹೇಗಿದೆಯೋ ಹಾಗೆಯೇ ತಿಳಿಯುವದು ಅತ್ಯಂತ ಅವಶ್ಯಕ ಇರುತ್ತದೆ. ಇಲ್ಲವಾದರೆ ಮಿಥ್ಯಾತ್ವದ ನಾಶ ಮಾಡುವದು ಸಾಧ್ಯವೇ ಇಲ್ಲ. ಅನೇಕಾಂತದ ಸ್ವರೂಪವನ್ನು ಆಚಾರ್ಯ ಅಮೃತಚಂದ್ರರು ಸಮಯಸಾರದ ಟೀಕೆಯ ಪರಿಶಿಷ್ಟದಲ್ಲಿ ತಿಳಿಸಿದ್ದಾರೆ. ಅಲ್ಲಿಂದ ತಿಳಿಯೋಣ.

**ಶ್ಲೋಕ ೨೬೨ :** ಜ್ಞಾನಮಾತ್ರವಾದ ತಮ್ಮಿಂದ ತಾವೇ ಅಥವಾ ಏಕಾಂತವಾದದ ಉಪದೇಶ ಕೇಳಿ ಜ್ಞಾನ ಮಾತ್ರವಾದ ಆತ್ಮತತ್ವದ ಸಂಬಂಧದಲ್ಲಿ ಅನೇಕ ಪ್ರಕಾರದಿಂದ ಪಕ್ಷಪಾತ ಮಾಡಿ ಜ್ಞಾನಮಾತ್ರವಾದ ಆತ್ಮತತ್ವದ ನಾಶ ಮಾಡುತ್ತಾರೆ. ಅವರಿಗೆ (ಅಜ್ಞಾನಿಯಾದ ಜೀವರುಗಳಿಗೆ) ಸ್ಯಾದ್ವಾದವು ಜ್ಞಾನಮಾತ್ರವಾದ ಆತ್ಮತತ್ವದ ಅನೇಕಾಂತ ಸ್ವರೂಪತನವನ್ನು ತಿಳಿಸುತ್ತದೆ. ಒಂದು ವೇಳೆ ತಮ್ಮ ಆತ್ಮನೆಡೆಗೆ ದೃಷ್ಟಿ ಹಾಯಿಸಿದರೆ ಅನುಭವ ಮಾಡಿ ನೋಡಿದರೆ (ಸ್ಯಾದ್ವಾದದ ಉಪದೇಶಕ್ಕನುಸರಿಸಿ) ಜ್ಞಾನಮಾತ್ರವಾದ ಆತ್ಮ ವಸ್ತುವು ತನ್ನಿಂದ ತಾನೇ ಧರ್ಮಯುಕ್ತವಾಗಿ ಪ್ರತ್ಯಕ್ಷ ಅನುಭವ ಗೋಚರವಾಗುತ್ತದೆ. ಆದ್ದರಿಂದ ಚತುರ ಪುರುಷರೇ ನೀವು ಜ್ಞಾನವನ್ನು ತತ್‌ಸ್ವರೂಪ ಅತತ್‌ಸ್ವರೂಪ, ಏಕಸ್ವರೂಪ, ಅನೇಕ ಸ್ವರೂಪ, ತನ್ನ ದ್ರವ್ಯಕ್ಷೇತ್ರ, ಕಾಲ, ಭಾವದಿಂದ ಸತ್‌ಸ್ವರೂಪ, ಪರದ ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ, ಅಸತ್‌ಸ್ವರೂಪ, ನಿತ್ಯ ಸ್ವರೂಪ, ಅನಿತ್ಯಸ್ವರೂಪ ಇವೇ ಮೊದಲಾದ ಅನೇಕ ಧರ್ಮಸ್ವರೂಪಗಳನ್ನು ಪ್ರತ್ಯಕ್ಷ ಅನುಭವ ಗೋಚರ ಮಾಡಿ ಪ್ರತೀತಿಯಲ್ಲಿ ತಂದುಕೊಳ್ಳಿರಿ. ಇದುವೇ ಸಮ್ಯಕ್‌ಜ್ಞಾನವಿದೆ. ಸರ್ವಥಾ ಏಕಾಂತವನ್ನೇ ಮನ್ನಿಸುವದು ಅದು ಮಿಥ್ಯಾಜ್ಞಾನವಾಗಿದೆ.

**ಶ್ಲೋಕ ೨೬೫ :** ಯಾವ ಸತ್ಪುರುಷರು ಅನೇಕಾಂತದ ಜೊತೆಗೆ ಸುಸಂಗತ ದೃಷ್ಟಿಯ ಮೂಲಕ ಅನೇಕಾಂತಮಯ ವಸ್ತುಸ್ಥಿತಿಯನ್ನು ನೋಡುತ್ತಾರೆ. ಅವರು ಈ ಪ್ರಕಾರ ಸ್ಯಾದ್ವಾದದ ಶುದ್ಧಿಯನ್ನು ಪ್ರಾಪ್ತ ಮಾಡಿಕೊಂಡು ತಿಳಿದುಕೊಂಡು ಜಿನದೇವರ ಮಾರ್ಗವನ್ನು ಸ್ಯಾದ್ವಾದದ ಉಲ್ಲಂಘನೆ ಮಾಡದೇ ಜ್ಞಾನ ಸ್ವರೂಪರಾಗುತ್ತಾರೆ ಅಂದರೆ ಸಮ್ಯಗ್ದೃಷ್ಟಿಗಳಾಗುತ್ತಾರೆ.

**ಶ್ಲೋಕ ೨೭೦ :** ಆತ್ಮನಲ್ಲಿ ಅನೇಕ ಶಕ್ತಿಗಳಿಗೆ ಮತ್ತು ಒಂದೊಂದು ಶಕ್ತಿಯ ಗ್ರಾಹಕವು ಒಂದೊಂದು ನಯವಿದೆ. ಆದ್ದರಿಂದ ಒಂದು ವೇಳೆ ನಯಗಳ ಏಕಾಂತ ದೃಷ್ಟಿಯಿಂದ ನೋಡಹೋದರೆ ಆತ್ಮನು ತುಂಡುತುಂಡಾಗಿ ಅವನ ನಾಶವಾಗಬಹುದು. ಹೀಗಾಗುವದರಿಂದ ಸ್ಯಾದ್ವಾದಿಯು ನಯಗಳ ವಿರೋಧವನ್ನು ದೂರ ಮಾಡಿ ಚೈತನ್ಯಮಾತ್ರವಾದ ವಸ್ತುವನ್ನು ಅನೇಕ ಶಕ್ತಿ ಸಮೂಹ ರೂಪ, ಸಾಮಾನ್ಯ ವಿಶೇಷರೂಪ, ಸರ್ವಶಕ್ತಿಮಯ ಒಂದು ಜ್ಞಾನಮಾತ್ರವಾಗಿ ಅನುಭವ ಮಾಡುತ್ತಾನೆ.

ವಸ್ತುವಿನ ಸ್ವರೂಪವೇ ಹೀಗಿದೆ. ಜ್ಞಾನಿಯು ಶುದ್ಧನಯದ ಅವಲಂಬನೆ ಪಡೆದು ಹೀಗೆ ಅನುಭವ ಮಾಡುತ್ತಾನೆ.

**ಶ್ಲೋಕ ೨೭೧ :** ಯಾವ ಈ ಜ್ಞಾನಮಾತ್ರವಾದ ಭಾವವೆಂದರೆ ನಾನೇ ಇದ್ದೇನೆ. ಅದು ಕೇವಲ ಜ್ಞೇಯಗಳ ಜ್ಞಾನ ಮಾತ್ರವೆಂದೇ ತಿಳಿದುಕೊಳ್ಳಬಾರದು. ಆದರೆ ಜ್ಞೇಯಗಳ ಆಕಾರದಿಂದಾಗುವಂಥ ಜ್ಞಾನದ ಅಲೆಗಳ ರೂಪದಲ್ಲಿ ಪರಿಣಮಿಸುತ್ತಿರುವ ಆ ಜ್ಞಾನವು ಜ್ಞೇಯ ಜ್ಞಾತಾಮಯವಾದ ವಸ್ತುಮಾತ್ರವೆಂದು ತಿಳಿದುಕೊಳ್ಳಬೇಕು. ಭಾವಾರ್ಥ ಜ್ಞಾನಮಾತ್ರವಾದ ಭಾವವು ಜ್ಞಾತೃ ಕ್ರಿಯಾರೂಪ ಆಗಿರುವದರಿಂದ ಜ್ಞಾನ ಸ್ವರೂಪವಿದೆ ಮತ್ತು ಅದು ತಾನೇ ನಿಮ್ನ ಪ್ರಕಾರದಿಂದ ಜ್ಞೇಯರೂಪವಿದೆ. ಬಾಹ್ಯಜ್ಞೇಯಗಳು ಜ್ಞಾನದಿಂದ ಭಿನ್ನವಿದ್ದು ಅವು ಜ್ಞಾನದಲ್ಲಿ ಪ್ರವಿಷ್ಟಗೊಳ್ಳುವದಿಲ್ಲ. ಜ್ಞೇಯಾಕಾರಗಳ ಛಾಯೆ ಜ್ಞಾನದಲ್ಲಿ ಬೀಳುವದರಿಂದ ಜ್ಞಾನವು ಜ್ಞೇಯಾಕಾರಗಳ ರೂಪದಿಂದ ಕಂಡುಬರುತ್ತದೆ. ಆದರೆ ಅವು ಜ್ಞಾನದ ತರಂಗಗಳೇ ಇವೆ. ಈ ಜ್ಞಾನ ತರಂಗಗಳೇ ಜ್ಞಾನದಿಂದ ಜ್ಞಾತವಾಗುತ್ತವೆ. ಹೀಗೆ ತಾನೇ ಸ್ವತಃ ತಿಳಿದುಕೊಳ್ಳಲು ಯೋಗ್ಯ ಇರುವದರಿಂದ ಜ್ಞಾನಮಾತ್ರವಾದ ಭಾವವೇ ಜ್ಞೇಯರೂಪವಿದೆ ಮತ್ತು ತಾನೇ ತನ್ನನ್ನು ತಿಳಿಯುವವರೆಗೆ ಇರುವದರಿಂದ ಜ್ಞಾನಮಾತ್ರವಾದ ಭಾವವೇ ಜ್ಞಾತಾ ಇದೆ. ಹೀಗೆ ಜ್ಞಾನಮಾತ್ರವಾದ ಭಾವವು ಜ್ಞಾನ, ಜ್ಞೇಯ ಮತ್ತು ಜ್ಞಾತಾ ಈ ಮೂರೂ ಭಾವಗಳಿಂದ ಯುಕ್ತವಾದ ಸಾಮಾನ್ಯ ವಿಶೇಷ ರೂಪವಾದ ವಸ್ತುವಿದೆ. ಇಂಥ ಜ್ಞಾನಮಾತ್ರವಾದ ಭಾವವೇ ನಾನಿದ್ದೇನೆ. ಹೀಗೆ ಅನುಭವ ಮಾಡುವಂಥ ಪುರುಷನು ಅನುಭವ ಮಾಡುತ್ತಾನೆ.

**ಶ್ಲೋಕ ೧೪೦ :** ಆತ್ಮನು ಜ್ಞಾಯಕಭಾವದಿಂದ ತುಂಬಿಹೋದ ಮಹಾಸ್ವಾದವನ್ನು ತೆಗೆದುಕೊಳ್ಳುತ್ತ (ಹೀಗೆ ಜ್ಞಾನದಲ್ಲಿಯೇ ಏಕಾಗ್ರವಾದ ನಂತರ ಇತರ ಸ್ವಾದವು ಬರುವದಿಲ್ಲವಾದ್ದರಿಂದ ದ್ವಂದ್ವಮಯವಾದ ಸ್ವಾದವನ್ನು ತೆಗೆದುಕೊಳ್ಳುವಲ್ಲಿ ಅಸಮರ್ಥವಿದೆ. (ವರ್ಣಾದಿಕ, ರಾಗಾದಿಕ, ಕ್ಷಾಯೋಪಶಮಿಕ ಜ್ಞಾನದ ಭೇದಗಳ ಸ್ವಾದವನ್ನು ತೆಗೆದುಕೊಳ್ಳುವಲ್ಲಿ ಅಸಮರ್ಥವಿದೆ.) ಆತ್ಮಾನುಭವದ ಸ್ವಾದದ ಪ್ರಭಾವದ ಆಧೀನವಾಗಿರುವದರಿಂದ ನಿಜ ವಸ್ತು ವೃತ್ತಿಯನ್ನು (ಆತ್ಮನ ಶುದ್ಧಪರಿಣತಿಯನ್ನು) ತಿಳಿಯುತ್ತ ಆಸ್ವಾದ ತೆಗೆದುಕೊಳ್ಳುತ್ತ ಈ ಆತ್ಮನು ಜ್ಞಾನದ ವಿಶೇಷ್ಯಗಳ ಉದಯವನ್ನು ಗೌಣ ಮಾಡುತ್ತ ಕೇವಲ ಸಾಮಾನ್ಯ ಜ್ಞಾನದ ಅಭ್ಯಾಸ ಮಾಡುತ್ತ ಸಮಸ್ತ ಜ್ಞಾನವನ್ನು ಏಕತ್ವದಲ್ಲಿ ತರುತ್ತಾನೆ. ಏಕತ್ವದಲ್ಲಿ ಪ್ರಾಪ್ತ ಮಾಡುತ್ತಾನೆ.

ಈ ಒಂದು ಸ್ವರೂಪಜ್ಞಾನದ ಸಿಹಿಸ್ವಾದದ ಎದುರು ಇತರ ರಸಗಳು ಸಪ್ಪೆಯಾಗಿವೆ ಮತ್ತು ಸ್ವರೂಪಜ್ಞಾನದ ಅನುಭವ ಮಾಡುತ್ತಿರುವಾಗ ಎಲ್ಲ ಭೇದಭಾವಗಳು ಅಳಿಸಿಹೋಗುತ್ತವೆ. ಜ್ಞಾನದ ವಿಶೇಷತೆಗಳು ಜ್ಞೇಯದ ನಿಮಿತ್ತದಿಂದಾಗುತ್ತವೆ. ಯಾವಾಗ ಜ್ಞಾನ ಸಾಮಾನ್ಯದ ಸ್ವಾದವನ್ನು ತೆಗೆದುಕೊಳ್ಳಲಾಗುತ್ತದೆ. ಆಗ ಜ್ಞಾನದ ಎಲ್ಲ ಭೇದಗಳೂ ಗೌಣವಾಗಿಬಿಡುತ್ತವೆ. ಒಂದು ಜ್ಞಾನವೇ ಜ್ಞೇಯರೂಪವಾಗಿರುತ್ತದೆ.

**ಶ್ಲೋಕ ೨೭೫ :** ಆತ್ಮನು ಸಹಜ ತನ್ನ ಸ್ವಭಾವವಾದ ತೇಜಃಪುಂಜದಲ್ಲಿ ಮೂರು ಲೋಕಗಳ ಪದಾರ್ಥಗಳು ಮಗ್ನವಾಗಿ ಬಿಡುತ್ತಿರುವದರಿಂದ ಅದರಲ್ಲಿ ಅನೇಕ ಭೇದಗಳಾಗುತ್ತಿರುವದು ಕಂಡುಬರುತ್ತಿದ್ದರೂ ಅದರ ಸ್ವಭಾವವು ಒಂದೇ ಇರುತ್ತದೆ. (ಅಂದರೆ ಕೇವಲ ಜ್ಞಾನದಲ್ಲಿ ಎಲ್ಲ ಪದಾರ್ಥಗಳು ಹೊಳೆಯುತ್ತಿರುವದರಿಂದ ಅನೇಕ ಜ್ಞೇಯಾಕಾರ ರೂಪವಾಗಿ ಕಂಡುಬರುತ್ತವೆ. ಆದಾಗ್ಯೂ ಅದು ಚೈತನ್ಯರೂಪ ಜ್ಞಾನಾಕಾರದ ದೃಷ್ಟಿಯಲ್ಲಿ ಏಕರೂಪವೇ ಇದೆ. ಯಾವುದರಲ್ಲಿ ನಿಜರಸದ ವಿಸ್ತಾರದಿಂದ ಪೂರ್ಣ ಅಚ್ಛಿನ್ನ ತತ್ವೋಪಲಬ್ಧಿಯಿದೆ. (ಅಂದರೆ ಪ್ರತಿಪಕ್ಷವಾದ ಕರ್ಮದ ಅಭಾವವಾಗಿಬಿಡುವದರಿಂದ ಯಾವುದರಲ್ಲಿ ಸ್ವರೂಪಾನುಭವದ ಅಭಾವವಾಗುವದಿಲ್ಲ.) ಮತ್ತು ಯಾವುದರ ಜ್ಯೋತಿಯು ಅತ್ಯಂತ ನಿಯಮಿತವಿದೆ. ಈ ಚೈತನ್ಯ ಚಮತ್ಕಾರವು ಸರ್ವೋತ್ಕೃಷ್ಟ ಆಗಿರುವದರಿಂದ ಮಂಗಲವೂ ಇದೆ. ಯಾವುದು ಸ್ವತಃ ಮರಣ ಹೊಂದುವುದಿಲ್ಲ ಮತ್ತು ಅದರಿಂದ ಇನ್ನೊಂದರ ಮರಣವೂ ಆಗುವದಿಲ್ಲ. ಅದು ಅಮೃತವಿದೆ. ಆದ್ದರಿಂದ ಆತ್ಮನಿಗೆ ಅಮೃತವೆಂದು ಹೇಳಿದ್ದಾರೆ.

ಎಲ್ಲ ಮುಮುಕ್ಷು ಜನರು ಈ ಸಮಯಸಾರ ರೂಪ ಶುದ್ಧಾತ್ಮನಲ್ಲಿ ಸ್ಥಿರವಾಗಿರಿ ಮತ್ತು ಅಕ್ಷಯ ಸುಖದ ಪ್ರಾಪ್ತಿ ಮಾಡಿರಿ. ಆದಾಗ್ಯೂ ನನ್ನ ಛದ್ಮಸ್ಥ ದಶೆಯ ಕಾರಣ ಈ ಪುಸ್ತಕದಲ್ಲಿ ಕೆಲವೊಂದು ಮರೆವಿನಿಂದ ದೋಷಗಳು ಉಳಿದಿದ್ದರೆ ತಾವು ಸುಧಾರಿಸಿಕೊಂಡು ಓದಿರಿ ಮತ್ತು ನನ್ನ ಮೂಲಕ ಜಿನಾಜ್ಞೆಯ ವಿರುದ್ಧ ಸ್ವಲ್ಪವಾದರೂ ಬರೆದಿದ್ದರೆ ನನ್ನ ತ್ರಿವಿಧ ತ್ರಿವಿಧ ಮಿಚ್ಛಾಮಿ ದುಕ್ಕಡಂ ಉತ್ತಮ ಕ್ಷಮಾ.

★★★

## ೩೭. ಹನ್ನೆರಡು ಭಾವನೆಗಳು

ಈ ಹನ್ನೆರಡು ಭಾವನೆಗಳಿಗೆ 'ಅನುಪ್ರೇಕ್ಷೆ'ಗಳೆಂದೂ ಕರೆಯುತ್ತಾರೆ. ಅನುಪ್ರೇಕ್ಷೆ ಎಂದರೆ ಮೇಲಿಂದ ಮೇಲೆ ಚಿಂತಿಸುವದಾಗಿದೆ. ಇವು ಬದುಕಿನ ಮೂಲಭೂತ ವಿಚಾರ, ಪುನರ್‌ಜನ್ಮ, ಕರ್ಮ ಮತ್ತು ಅದರ ನಾಶ, ಸಮತೆ, ಸಂಯಮ, ಅಂತಿಮ ಗುರಿ, ವೈರಾಗ್ಯ ಮುಂತಾದವುಗಳ ಕುರಿತು ಚಿಂತನೆ ಮಾಡಲು ಕಾರಣವಾಗಿವೆ. ಇಲ್ಲಿಯವರೆಗೆ ವೈರಾಗ್ಯಭಾವ ತಾಳಿದವರೆಲ್ಲರೂ ಈ ಭಾವನೆಗಳನ್ನು ಭಾವಿಸಿಯೇ ಇದ್ದಾರೆ. ಇವುಗಳ ಕುರಿತು ಅನೇಕ ಆಚಾರ್ಯರು ಹೇಳಿದ್ದಾರೆ – ೧. ಅನಿತ್ಯ, ೨. ಅಶರಣ, ೩. ಸಂಸಾರ, ೪. ಏಕತ್ವ, ೫. ಅನ್ಯತ್ವ, ೬. ಅಶುಚಿ ೭. ಆಸ್ರವ ೮. ಸಂವರ, ೯. ನಿರ್ಜರಾ, ೧೦. ಲೋಕ ಸ್ವರೂಪ ೧೧. ಬೋಧಿದುರ್ಲಭ ೧೨. ಧರ್ಮ ಸ್ವರೂಪ ಎಂದು ೧೨ ಭಾವನೆಗಳಾಗಿವೆ. ಇವುಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಯೋಣ.

೧. **ಅನಿತ್ಯ ಭಾವನೆ :** ಎಲ್ಲ ಸಂಯೋಗಗಳು ಅನಿತ್ಯವಾಗಿವೆ. ಅಂದರೆ ಅಶಾಶ್ವತವಾಗಿವೆ, ನಾಶವಂತವಿವೆ, ಒಳಿತೆನಿಸುವ ಅಥ ಒಳಿತೆನಿಸದಿರುವ ಮುಂತಾದ ಎಲ್ಲ ಸಂಯೋಗಗಳು ನನ್ನೊಂದಿಗೆ ದಿನನಿತ್ಯ ಇರುವಂಥವುಗಳಲ್ಲ. ಅರಮನೆ, ಆಸ್ತಿ, ಅಂತಸ್ತು, ಸಂಪತ್ತು, ಚೇತನ, ಅಚೇತನಗಳು ಎಲ್ಲವೂ ಅಶಾಶ್ವತಗಳೇ ಇವೆ. ಅಂದಬಳಿಕ ಇವುಗಳ ಕುರಿತು ಮೋಹ ಮಾಡುವದು, ನನ್ನವೆಂದು ಮಿಥ್ಯಾಭಾವ ತಾಳುವದು ದುಃಖದ ಕಾರಣವಿದೆ. ಅವುಗಳಲ್ಲಿ 'ನನ್ನತನ'ವನ್ನು ನನ್ನದೆನ್ನುವ ಭಾವನೆಯನ್ನು ತ್ಯಾಗ ಮಾಡಬೇಕು.

೨. **ಅಶರಣ ಭಾವನೆ :** ನನ್ನ ಪಾಪಗಳ ಉದಯದ ಸಮಯದಲ್ಲಿ ಮರಣದ ಸಮಯದಲ್ಲಿ ತಾಯಿ, ತಂದೆ, ಪತ್ನಿ, ಪುತ್ರ, ಇಂದ್ರ, ಸಂಪತ್ತು ಮುಂತಾದವರು ಯಾರೂ ಸಹ ರಕ್ಷಿಸುವವರಿಲ್ಲ. ಅವರ್‍ಯಾರೂ ನನ್ನ ದುಃಖ ನಾಶ ಮಾಡುವವರು ಅಲ್ಲ. ಆದ್ದರಿಂದ ಅವರ ಮೇಲಿನ ಮೋಹವನ್ನು ತ್ಯಾಗ ಮಾಡಬೇಕು. ಅವರೆಲ್ಲರಲ್ಲಿಯ 'ನನ್ನವರು' ಎಂಬ ಭಾವ ಬಿಡಬೇಕು. ಆದರೆ ಕರ್ತವ್ಯ ಮಾತ್ರ ಪೂರ್ಣ ರೀತಿಯಿಂದ ಮಾಡಬೇಕು.

೩. **ಸಂಸಾರ ಭಾವನೆ :** ಸಂಸಾರ ದುಃಖಮಯವಿದೆ. ಕರ್ಮದ ಆಸ್ರವಕ್ಕೆ ಕಾರಣವಿದೆ. ಒಂದು ಸಮಯದ ಸುಖದ ಸಲುವಾಗಿ ಅನಂತಕಾಲ ದುಃಖ ಅನುಭವಿಸಬೇಕಾಗುತ್ತದೆ. ಇಂತಹ ಸಂಸಾರವು ಯಾರಿಗೆ ರುಚಿಸುವದು ? ಯಾರಿಗೂ ಇಲ್ಲ. ಆದರೂ ಸಹ ಅನಂತ ಜೀವಗಳು ಅದರಲ್ಲಿಯೇ ಮಗ್ನವಾಗಿವೆ. ಕಾರಣ ಅಜ್ಞಾನದಿಂದ. ಮೋಹದಿಂದ ದೂರವಾಗಿರಿ. ಜ್ಞಾನಿಗಳಾಗಿರಿ. ಸಂಸಾರದಿಂದ ಬಿಡುಗಡೆಯಾಗಿ ಅಂದರೆ ನಿರ್ಮೋಹಿಯಾಗಿ ಜೀವಿಸಿರಿ. ಆನಂದದಿಂದ ಬಾಳಿರಿ.

೪. **ಏಕತ್ವ ಭಾವನೆ :** ಅನಾದಿ ಕಾಲದಿಂದ ನಾನೊಬ್ಬನೇ ಸಂಸಾರದಲ್ಲಿ ಅಲೆಯುತ್ತಿದ್ದೇನೆ. ಒಬ್ಬಂಟಿಗನಾಗಿಯೇ ದುಃಖ ಅನುಭವಿಸುತ್ತಿದ್ದೇನೆ. ಮರಣ ಸಮಯದಲ್ಲಿಯೂ ಸಹ ಯಾರೂ ನನ್ನೊಂದಿಗೆ ಬರಲು ತಯಾರ ಇಲ್ಲ. ನನ್ನದೆಂದು ಹೇಳುತ್ತಿರುವ ಈ ಶರೀರವೇ ನನ್ನೊಂದಿಗೆ ಬರುವದಿಲ್ಲ. ಆದ್ದರಿಂದ ಎಲ್ಲರ ಹಾಗೂ ಎಲ್ಲವುಗಳ ಮೇಲಿನ ಮೋಹಭಾವ ಬಿಟ್ಟು ನಾನೊಬ್ಬನೇ ಇದ್ದೇನೆಂದು ಆತ್ಮನಲ್ಲಿಯೇ ಇರುವದರ ಪ್ರಯತ್ನ ಮಾಡುವದು ಒಳ್ಳೆಯದು.

೫. **ಅನ್ಯತ್ವ ಭಾವನೆ :** ನನ್ನವರೆಂದು ನಂಬಿರುವ ಹೆಂಡತಿ, ತಾಯಿ, ತಂದೆ, ಮಕ್ಕಳು, ಶರೀರ, ಸಂಪತ್ತು ಮುಂತಾದವು ಎಲ್ಲವೂ ನನ್ನಿಂದ ಬೇರೆಯೇ ಇವೆ. ಇವು ಎಂದೂ ನನ್ನವಾಗಲು ಸಾಧ್ಯವಿಲ್ಲ. ಎಲ್ಲವೂ ಸ್ವತಂತ್ರವಾಗಿವೆ. ಅವು ಬೇರೆ, ನಾನು ಬೇರೆ ಎಂಬ ಅನ್ಯತ್ವ ಭಾವನೆ ದಿನಾಲು ಭಾವಿಸಬೇಕು. ರಾವಣನು ಸಾಯುವಾಗ ಅವನ ಬಂಧುಗಳು, ವಿದ್ಯಾದೇವತೆಗಳು, ಚಕ್ರರತ್ನ ಇತ್ಯಾದಿ ಯಾವವೂ ಅವನ ರಕ್ಷಣೆಗೆ ಬರಲಿಲ್ಲ. ಇನ್ನು ನಮ್ಮ ಪಾಡೇನು ? ಆದ್ದರಿಂದ ಎಲ್ಲವನ್ನು ಅನ್ಯವೆಂದೂ, ನಾನೊಬ್ಬನೇ ಇದ್ದೇನೆಂದೂ ದಿನಾಲು ಭಾವಿಸಬೇಕು.

೬. **ಅಶುಚಿ ಭಾವನೆ :** ನಾವು ನಮ್ಮ ಶರೀರವನ್ನು ಸುಂದರ, ಸ್ವಚ್ಛ ಇಡಲು ದಿನಾಲು ಪ್ರಯತ್ನಿಸುತ್ತೇವೆ. ಭಾವ ಮಾಡುತ್ತೇವೆ. ಇನ್ನೊಬ್ಬರ ಶರೀರವನ್ನು ನೋಡಿ ಆಕರ್ಷಣವಾಗುತ್ತದೆ. ಆದರೆ ಈ ಶರೀರದ ಮೇಲಿನ ಚರ್ಮವನ್ನು ಸರಿಸಿದೊಡನೆ ಅಲ್ಲಿ ಕೇವಲ ಮಾಂಸ, ರಕ್ತ, ಕೀವು, ಮಲ, ಮೂತ್ರ, ಎಲುಬು ಇವೇ ಕಂಡು ಬರುತ್ತವೆ. ಇವೆಲ್ಲವೂ ಅಶುಚಿ ಇವೆ. ಆದ್ದರಿಂದ ನಮ್ಮದಾಗಲೀ ಇನ್ನೊಬ್ಬರದಾಗಲೀ ಈ ಅಶುಚಿಯಾಗಿರುವ ಶರೀರವನ್ನು ಮೋಹಿಸದೇ ಇದು ನಿನ್ನಾತ್ಮನನ್ನು ನೀನು ಧ್ಯಾನಿಸುತ್ತಿರು.

೭. **ಆಸ್ರವ ಭಾವನೆ :** ಪುಣ್ಯ ಮತ್ತು ಪಾಪ ಈ ಎರಡೂ ನನ್ನ ಸಲುವಾಗಿ (ಆತ್ಮನ) ಆಸ್ರವ ಇರುತ್ತವೆ. ಕ್ರೋಧ, ಮಾನ, ಮಾಯೆ, ಲೋಭ ಹಾಗೂ ಮನಸ್ಸು ಇವುಗಳಿಂದಲೂ ಆಸ್ರವ ಆಗುತ್ತದೆ. ಆಸ್ರವದಿಂದ ಪಾಪ, ಪುಣ್ಯಬಂಧವಾಗಿ ಎರಡೂ ಸಂಸಾರಕ್ಕೆ, ದುಃಖಕ್ಕೆ ಕಾರಣ ಇವೆ. ಆದ್ದರಿಂದ ವಿವೇಕಪೂರ್ವಕವಾಗಿಮೊದಲು ಪಾಪದ ತ್ಯಾಗ ಮಾಡುವದು ನಂತರ ಕೇವಲ ಆತ್ಮಪ್ರಾಪ್ತಿಯ ಲಕ್ಷ್ಯದಿಂದ ಶುಭಭಾವದಲ್ಲಿ ಇರುವದು ಕರ್ತವ್ಯವಾಗಿದೆ.

೮. **ಸಂವರ ಭಾವನೆ :** ಪಾಪಾಸ್ರವವನ್ನು ಅಂದರೆ ಪಾಪಾಸ್ರವಕ್ಕೆ ನಿಮಿತ್ತವಾದ ಕಾರಣಗಳನ್ನು ತಡೆಯುವದೇ ಸಂವರವಾಗಿದೆ. ಇದಕ್ಕಾಗಿ ಸಂಯಮ ಪಾಲಿಸಬೇಕಾಗುತ್ತದೆ. ನಿಜವಾದ ಕಾರ್ಯಕಾರಿ ಸಂವರದ ಪ್ರಾರಂಭವು ಸಮ್ಯಗ್ದರ್ಶನದಿಂದಲೇ ಆಗುತ್ತದೆ. ಆದ್ದರಿಂದ ಅದರ ಲಕ್ಷ್ಯದಿಂದ ಪಾಪಗಳ ತ್ಯಾಗ ಮಾಡಿ ಕೇವಲ ಒಂದು ನಿಜವಾದ ಸಂವರದ ಲಕ್ಷ್ಯದಿಂದ ದ್ರವ್ಯ ಸಂವರವನ್ನು ಪಾಲಿಸಬೇಕು.

೯. **ನಿರ್ಜರಾ ಭಾವನೆ :** ಪರಿಗ್ರಹಗಳನ್ನು ನಿರ್ಮೋಹದಿಂದ ನೋಡುತ್ತ ಸಂಯಮವನ್ನು ಪಾಲಿಸುತ್ತ ೧೨ ತಪಗಳನ್ನು ಆಚರಿಸುತ್ತ ಶುದ್ಧ ಪರಿಣಾಮದಲ್ಲಿದ್ದರೆ ನಿರ್ಜರೆಯಾಗುತ್ತದೆ. ಈ ನಿಜವಾದ ನಿರ್ಜರೆಯೂ ಸಹ ಸಮ್ಯಗ್ದರ್ಶನದಿಂದಲೇ ಪ್ರಾರಂಭವಾಗುತ್ತದೆ. ಅದರ ಲಕ್ಷ್ಯದಿಂದಲೇ ಪಾಪಗಳ ತ್ಯಾಗ ಮಾಡಿ ಕೇವಲ ಒಂದು ನಿರ್ಜರಾ ಭಾವನೆಯಿಂದ ಇದ್ದು ಯಥಾಶಕ್ತಿ ತಪಸ್ಸನ್ನು ಆಚರಿಸಬೇಕು.

೧೦. **ಲೋಕಸ್ವರೂಪ ಭಾವನೆ :** ಮೊದಲು ಲೋಕದ ಸ್ವರೂಪವನ್ನು ತಿಳಿಯಬೇಕು. ನಂತರ ಚಿಂತನ ಮಾಡಬೇಕು. "ನಾನು ಅನಾದಿಯಿಂದ ಈ ಲೋಕದಲ್ಲಿ ಎಲ್ಲ ಪ್ರದೇಶಗಳಲ್ಲಿ ಅನಂತ ಸಲ ಹುಟ್ಟಿದ್ದೇನೆ ಮತ್ತು ಮರಣ ಹೊಂದಿದ್ದೇನೆ. ನಾನು ಅನಂತ ದುಃಖವನ್ನು ಅನುಭವಿಸಿದ್ದೇನೆ. ಇದು ಎಲ್ಲಿಯ ತನಕ ಚಾಲೂ ಇಡಬೇಕು ? ಅಂದರೆ ಇದನ್ನು ಕೊನೆ ಮಾಡುವ ಸಲುವಾಗಿ ಸಮ್ಯಗ್ದರ್ಶನದ ಅವಶ್ಯಕತೆಯಿದೆ. ಆದ್ದರಿಂದ ಆ ಸಮ್ಯಗ್ದರ್ಶನದ ಪ್ರಾಪ್ತಿಯ ಉಪಾಯ ಮಾಡಬೇಕು. ನಂತರ ಲೋಕದಲ್ಲಿ ಇರುವಂಥ ಅನಂತ ಸಿದ್ಧ ಭಗವಂತರು ಮತ್ತು ಸಂಖ್ಯಾತ ಅರಹಂತ ಭಗವಂತರು ಮತ್ತು ಸಾಧು ಭಗವಂತರ ವಂದನೆ

ಮಾಡುವದು ಹಾಗೂ ಈ ಲೋಕದ ಆಕಾರ ಕುರಿತು ಚಿಂತನೆ ಮಾಡುತ್ತ ಈಗ ನಾನೆಲ್ಲಿ ಇದ್ದೇನೆ. ಮುಂದೆ ಎಲ್ಲಿಗೆ ಹೋಗಬೇಕಾಗಿದೆ ಮುಂತಾಗಿ ಚಿಂತಿಸುವದು ಲೋಕ ಸ್ವರೂಪ ಭಾವನೆಯಾಗಿದೆ.

**೧೧. ಬೋಧಿ ದುರ್ಲಭ ಭಾವನೆ :** ಬೋಧಿ ಅಂದರೆ ತತ್ವಗಳ ಪರಿಜ್ಞಾನವೇ ಆಗಿದೆ. ಅಂದರೆ ಸಮ್ಯಗ್ದರ್ಶನವೇ ಆಗಿದೆ. ಪರಮಾತ್ಮನ ಮೂಲಕ ಉಪದೇಶಿಸಿದ ದ್ರವ್ಯ ಪದಾರ್ಥ ಮೊದಲಾದವುಗಳ ವಸ್ತು ಸ್ಥಿತಿಯನ್ನು ತಿಳಿದು ನಂಬುವದು ಬೋಧಿ ಲಕ್ಷಣವಾಗಿದೆ. ರತ್ನತ್ರಯಗಳು ಬೋಧಿಯ ಸಾರವಾಗಿವೆ. ಅನಾದಿಕಾಲದಿಂದ ಇದರ ಅಭಾವದಿಂದಲೇ ನಾನು ಸಂಸಾರದಲ್ಲಿ ಅಲೆಯುತ್ತಿದ್ದೇನೆ. ಇದರ ಮೇಲಿಂದ ಸಮ್ಯಗ್ದರ್ಶನದ ದುರ್ಲಭತೆಯು ಗೊತ್ತಾಗುತ್ತದೆ. ವರ್ತಮಾನ ಕಾಲದಲ್ಲಿ ಸಮ್ಯಗ್ದೃಷ್ಟಿಗಳು ತೀರ ಕಡಿಮೆ ಇರುತ್ತಾರೆ.

**೧೨. ಧರ್ಮ ಭಾವನೆ :** ಅನಾದಿಯಿಂದಲೂ ಇರುವ ಕರ್ಮದ ನಾಶಕ್ಕೆ ಧರ್ಮವೇ ಮೂಲವಾಗಿದೆ. ದಾನ, ಪೂಜೆ, ಶೀಲ, ಉಪವಾಸ, ಅಹಿಂಸೆ, ವ್ರತ ಪಾಲನೆ, ಧರ್ಮದ ೧೦ ಲಕ್ಷಣಗಳ ಜ್ಞಾನ, ಶ್ರಾವಕ ಧರ್ಮಪಾಲನೆ, ಸದಾಚಾರ ಮುಂತಾದವುಗಳನ್ನು ಪಾಲಿಸುತ್ತ ಶಾಂತಿಯಿಂದ ಭೇದವಿಜ್ಞಾನ ಪಾಲಿಸುತ್ತ ಸಾಗಬೇಕು. ವರ್ತಮಾನ ಕಾಲದಲ್ಲಿ ಧರ್ಮದ ಸ್ವರೂಪದಲ್ಲಿ ಬಹಳ ವಿಕೃತಿಗಳು ಪ್ರವೇಶ ಮಾಡಿವೆ. ಆದ್ದರಿಂದ ಧರ್ಮದ ಸತ್ಯಸ್ವರೂಪವನ್ನು ಶೋಧ ಮಾಡಿ ಚಿಂತನ ಮಾಡುತ್ತ ಪೂರ್ಣ ಪುರುಷಾರ್ಥ ಮಾಡುತ್ತ ಅದನ್ನು ಪ್ರಾಪ್ತ ಮಾಡಿಕೊಳ್ಳುವಲ್ಲಿ ನಿರಂತರ ತೊಡಗಿರಬೇಕು.

★★★

## ೩೮. ದಿನಾಲು ಚಿಂತಿಸಬೇಕಾದ ಬೀಜ ವಾಕ್ಯಗಳು

೧. ಏಕ ಸಮಕಿತ ಪಾಯೆ ಬಿನಾ, ಜಪತಪ ಕ್ರಿಯಾ ಫೋಕ ।
ಜೈಸಾ ಮುರ್ದಾ ಸಿಂಗಾರನಾ, ಸಮಝು ಕಹೇ ತಿಲೋಕ ॥

ಅಂದರೆ ಸಮ್ಯಗ್ದರ್ಶನ ರಹಿತ ಎಲ್ಲ ಕ್ರಿಯೆಗಳು ಜಪ, ತಪ, ಶ್ರಾವಕ ವ್ರತಗಳು, ಕ್ಷುಲ್ಲಕ ವ್ರತ, ಸಾಧುತನ ಮುಂತಾದವು ಹೆಣಕ್ಕೆ ಶೃಂಗಾರ ಮಾಡಿದಂತೆ ನಿರರ್ಥಕವಿವೆ.

ಭಾವಾರ್ಥ : ಸಮ್ಯಗ್ದರ್ಶನದ ಹೊರತು ಯಾವುದೇ ಕ್ರಿಯೆಯು ಜಪ, ತಪ, ಶ್ರಾವಕತ್ವ, ಕ್ಷುಲ್ಲಕತ್ವ, ಸಾಧುತ್ವ ಎಲ್ಲವೂ ಭವದ ಕೊನೆಗಾಣಿಸುವಲ್ಲಿ ಸಮರ್ಥ ಇರುವದಿಲ್ಲ. ಇದರ ಅರ್ಥ – ಸಮ್ಯಗ್ದರ್ಶನ ರಹಿತ ಜೀವಗಳು ಏನೂ ಮಾಡಲೇಬಾರದು ಎಂದಲ್ಲ. ಆದರೆ ಅವುಗಳಿಂದಲೇ ಸಂತುಷ್ಟರಾಗಿ ಅಲ್ಲಿಯೇ

ನಿಲ್ಲಬೇಡಿ. ಅಷ್ಟಕ್ಕೇ ಕೃತಕೃತ್ಯರೆಂದು ತಿಳಿಯದೇ ಎಲ್ಲ ಮುಂದಿನ ಪ್ರಯತ್ನವನ್ನು ಕೇವಲ ಒಂದು ನಿಶ್ಚಯ ಸಮ್ಯಗ್ದರ್ಶನದ ಪ್ರಾಪ್ತಿಯ ಸಲುವಾಗಿಯೇ ಪ್ರಯತ್ನಿಸಬೇಕು.

೨. **ಭಗವಂತರ ದರ್ಶನ ಮಾಡುವ ವಿಧಿವಿಧಾನಗಳು** – ಭಗವಂತರ ಗುಣಗಳ ಚಿಂತನ ಮಾಡುವದು ಮತ್ತು ಅವರು ಭಗವಾನರಾಗುವ ಸಲುವಾಗಿ ಯಾವ ಮಾರ್ಗದ ಮೇಲೆ ನಡೆದರು. ಆ ಮಾರ್ಗದ ಮೇಲೆ ನಾನು ನಡೆಯಬೇಕೆಂಬ ದೃಢ ನಿರ್ಣಯ ಮಾಡುವದು ಇದುವೇ ನಿಜವಾದ ದರ್ಶನವಿದೆ.

೩. ಸಂಪೂರ್ಣ ಸಂಸಾರ ಮತ್ತು ಸಾಂಸಾರಿಕ ಸುಖಗಳ ಕುರಿತು ವೈರಾಗ್ಯದ ಹೊರತು ಮೋಕ್ಷಮಾರ್ಗದ ಪ್ರಾರಂಭವಾಗುವದು ಅತ್ಯಂತ ದುರ್ಲಭವಿದೆ. ಸಂಸಾರ ಸುಖಗಳ ಕುರಿತಾಗಿ ರುಚಿರಹಿತ ಸಮ್ಯಗ್ದರ್ಶನದ ಪ್ರಾಪ್ತಿ ಆಗುವದು, ದುರ್ಲಭವಿದೆ.

೪. ಜೀವನಿಗೆ ನಾಲ್ಕು ಸಂಜ್ಞಾ / ಸಂಸ್ಕಾರಗಳಾದ ಆಹಾರ, ಭಯ, ಮೈಥುನ, ಪರಿಗ್ರಹ ಇವು ಅನಾದಿಯಿಂದ ಇವೆ. ಈ ಸಂಜ್ಞೆಗಳ ವಿಚಾರ ಅವನಿಗೆ ಸಹಜವಾಗಿಯೇ ಆಗುತ್ತದೆ. ಈ ವಿಚಾರಗಳಿಂದ ಬಿಡುಗಡೆ ಪಡೆಯಬೇಕು. ಆದರೆ ಸ್ವಂತದ ರುಚಿಯ ಶೋಧನೆ ಮಾಡಬೇಕು. ಎಲ್ಲಿಯವರೆಗೆ ಈ ಸಂಜ್ಞೆಗಳು ರುಚಿಸುತ್ತವೆ ಅಥವಾ ಇವುಗಳಲ್ಲಿ ಸುಖವು ಕಂಡುಬರುವದು ಅಲ್ಲಿಯವರೆಗೆ ಅವುಗಳಿಂದ ಬಿಡುಗಡೆ ಸಿಗುವದು ಅತ್ಯಂತ ಕಠಿಣವಿದೆ. ಹೇಗೆಂದರೆ ನಾಯಿಯು ಎಲುಬನ್ನು ಜಗಿಯುತ್ತದೆ. ಆಗ ಒಸಡುಗಳಿಂದ ರಕ್ತ ಬರುತ್ತದೆ. ಅದರ ಸ್ವಾದದಿಂದ ನಾಯಿಗೆ ಆನಂದ ಎನಿಸುತ್ತದೆ. ರಕ್ತವು ಎಲುಬಿನಿಂದಲೇ ಬರುತ್ತದೆಂದು ತಿಳಿಯುತ್ತದೆ. ಇದು ಅದರ ಭ್ರಮೆಯಿದೆ. ಇದೇ ತರಹ ಜೀವವು ಅನಾದಿಯಿಂದ ಭ್ರಮೆಯಲ್ಲಿಯೇ ಬದುಕುತ್ತಿದೆ. ಈ ಪ್ರಕಾರ ಎಲ್ಲಿಯ ತನಕ ಅದಕ್ಕೆ ಆಹಾರ, ಮೈಥುನ, ಪರಿಗ್ರಹ ಮತ್ತು ಭಯ ರುಚಿಸುತ್ತದೆ, ಅಲ್ಲಿಯವರೆಗೆ ಅವನಿಗೆ ಸಂಸಾರದ ಕೊನೆಯು ಆಗುವದೇ ಇಲ್ಲ. ಈ ಕಾರಣ ಮೋಕ್ಷ ಬಯಸುವವನು ಈ ಸಂಸ್ಕಾರಗಳನ್ನು ಬೇರುಸಹಿತ ಹೊರಹಾಕುವ ಪುರುಷಾರ್ಥ ಮಾಡಬೇಕು. ಮೊಟ್ಟಮೊದಲು ಈ ಸಂಜ್ಞೆಗಳ ಕುರಿತು ಆದರ ಭಾವ ಬಿಡಬೇಕು. ಅವುಗಳ ಕುರಿತು ವೈರಾಗ್ಯಭಾವ ತಾಳುವ ಪುರುಷಾರ್ಥ ಮಾಡಬೇಕು. ಇದರ ಸಲುವಾಗಿ ಮನಸ್ಸನ್ನು ದೃಢಗೊಳಿಸಿ ಸತ್ಯ ಮಾತು ಮತ್ತು ನಿಜವಾದ ಅಂದರೆ ಯಥಾರ್ಥದಿಂದ ತಿಳಿವಳಿಕೆಯನ್ನು ಪಡೆಯಬೇಕು.

೫. ತಮಗೆ ಏನು ರುಚಿಸುತ್ತದೆ ? ಇದುವೇ ಆತ್ಮಪ್ರಾಪ್ತಿಯ ಥರ್ಮಾಮೀಟರ. ಇದೇ ಪ್ರಶ್ನೆಯ ಮೇಲೆ ವಿಚಾರ ಮಾಡಿರಿ. ಎಲ್ಲಿಯ ತನಕ ಉತ್ತರದಲ್ಲಿ ಯಾವುದೇ ಸಂಸಾರದ ಇಚ್ಛೆ / ಅಪೇಕ್ಷೆ ಉಂಟಾದರೆ ಅಲ್ಲಿಯ ತನಕ ಅವನ ಗತಿ ಸಂಸಾರದ ಕಡೆಗೇನೇ ಇದೆ ಎಂದು ತಿಳಿಯುವದು. ಯಾವಾಗ ಉತ್ತರ ಕೇವಲ ಆತ್ಮ ತೃಪ್ತಿ ಇದ್ದರೆ ತಿಳಿಯುತ್ತದೆ. ಏನೆಂದರೆ ತಮ್ಮ ಸಂಸಾರದ ದಂಡೆಯು ಬಹಳ ಸಮೀಪ

ಬಂದಿರುತ್ತದೆ. ಅದರ ಸಲುವಾಗಿ ಪುರುಷಾರ್ಥ ಹೆಚ್ಚಿಸುವದೊಂದೇ ಕೇವಲ ಆತ್ಮತೃಪ್ತಿಯ ಉಪಾಯವೆಂದು ತಿಳಿಯುವದು.

೬. ಯಾರಿಗೆ ಆತ್ಮನ ರುಚಿ ಜಾಗೃತವಾಗಿದೆ ಮತ್ತು ಕೇವಲ ಅದರದೇ ವಿಚಾರ ಬರುತ್ತದೆ. ಅದರ ಪ್ರಾಪ್ತಿಯ ಉಪಾಯ ವಿಚಾರ ಮಾಡುತ್ತಾನೆಂದರೆ ಅವನ ಭಕ್ತಿ ಯಥಾರ್ಥವಿದೆ. ಅವನು ನಿಜವಾದ ಭಕ್ತಿ ಮಾರ್ಗದಲ್ಲಿ ಇದ್ದಾನೆ. ಆದ್ದರಿಂದ ಎಲ್ಲಿಯತನಕ ತಮಗೆ ಏನು ರುಚಿಸುತ್ತದೆ. ಇದರ ಉತ್ತರದಲ್ಲಿ ಯಾವುದೇ ಸಂಸಾರಿಕ ಇಚ್ಛೆ, ಆಶೆ ಇದೆ ಅಥವಾ ಯಾವುದೇ ವ್ಯಕ್ತಿಯೇ ಇರಲಿ ಅಲ್ಲಿಯವರೆಗೆ ತನ್ನ ಭಕ್ತಿ ಸಂಸಾರದ ಕಡೆಗೇನೇ ಇದೆ ಎಂದು ತಿಳಿಯುವದು ಮತ್ತು ಯಾವಾಗ ಉತ್ತರವು ಕೇವಲ ಒಂದು ಆತ್ಮತೃಪ್ತಿ ಇದ್ದರೆ ತಿಳಿಯುವದು ಏನೆಂದರೆ ಸಂವೇಗವನ್ನು ಭಕ್ತಿ ಎಂದು ತಿಳಿಯುವದು. ಏಕೆಂದರೆ ವೈರಾಗ್ಯವು ಅಂದರೆ ನಿರ್ವೇದ ಸಹಿತವೇ ಆತ್ಮಪ್ರಾಪ್ತಿಯ ಸಲುವಾಗಿ ಕಾರ್ಯಕಾರಿ ಇದೆ.

೭. ಆಹಾರದಾನ, ಅಭಯದಾನ, ಜ್ಞಾನದಾನ, ಔಷಧದಾನ ಇವುಗಳಲ್ಲಿ ಅಭಯದಾನವು ಅತಿಶ್ರೇಷ್ಠವಿದೆ. ಆದ್ದರಿಂದ ಎಲ್ಲರಿಗೂ ಪ್ರತಿದಿವಸ ಜೀವನದಲ್ಲಿ ಪ್ರತಿಯೊಂದು ಕಾರ್ಯದಲ್ಲಿ ಜೀವಹಿಂಸೆ ಅತ್ಯಂತ ಕಡಿಮೆ ಆಗುವಂತೆ ಪ್ರಯತ್ನಪೂರ್ವಕ ಸಾವಧಾನದಿಂದ ಇರುವದು ಅತ್ಯಂತ ಅವಶ್ಯಕವಿದೆ.

**ಪ್ರಶ್ನೆ : ಸಂಪತ್ತು ಪುಣ್ಯದಿಂದ ಪ್ರಾಪ್ತವಾಗುತ್ತದೆಯೋ ಅಥವಾ ಶ್ರಮದಿಂದ ಪ್ರಾಪ್ತವಾಗುತ್ತದೆಯೋ ?**

**ಉತ್ತರ :** ಸಂಪತ್ತು ಮುಖ್ಯವಾಗಿ ಪುಣ್ಯದಿಂದ ಆಗುತ್ತದೆ. ಧನದ ಪ್ರಾಪ್ತಿಯಲ್ಲಿ ಪುಣ್ಯದ ಯೋಗದಾನ ಹೆಚ್ಚಾಗಿದ್ದು, ಶ್ರಮವು ಅಂದರೆ ಪುರುಷಾರ್ಥದ ಯೋಗದಾನವು ಕಡಿಮೆ ಇರುತ್ತದೆ. ಏಕೆಂದರೆ ಯಾರ ಜನ್ಮವು ಶ್ರೀಮಂತ ಪರಿವಾರದಲ್ಲಿ ಆಗುತ್ತದೆ ಅವನಿಗಂತೂ ಪ್ರಯತ್ನದ ಹೊರತು ಸಂಪತ್ತು ಪ್ರಾಪ್ತವಾಗುತ್ತದೆ ಮತ್ತು ಜನರು ವ್ಯಾಪಾರದಲ್ಲಿ ಬಹಳ ಶ್ರಮ ಮಾಡಿದ ಬಳಿಕವೂ ಸಹ ಸಂಪತ್ತು ಕಳೆಯುತ್ತಿರುವುದು ಕಂಡು ಬರುತ್ತದೆ. ಧನ ಗಳಿಸುವ ಸಲುವಾಗಿ ಪ್ರಯತ್ನ ಅವಶ್ಯವಿದೆ. ಎಷ್ಟೋ ಜನರಿಗೆ ಅಲ್ಪ ಪ್ರಯತ್ನದಿಂದ ಹೆಚ್ಚು ಸಂಪತ್ತು ದೊರೆಯುತ್ತದೆ. ಆದರೆ ಇನ್ನೊಬ್ಬರಿಗೆ ಬಹಳಷ್ಟು ಪ್ರಯತ್ನಪಟ್ಟರೂ ಕಡಿಮೆ ಸಂಪತ್ತು ಪ್ರಾಪ್ತವಾಗುತ್ತದೆ. ಇದರಿಂದ ನಿಶ್ಚಿತವಾಗಿ ತಿಳಿದುಬರುವದೇನೆಂದರೆ ಸಂಪತ್ತು ಪ್ರಯತ್ನದ ಅಪೇಕ್ಷೆಗಿಂತ ಪುಣ್ಯವನ್ನು ವರಿಸುತ್ತದೆ. ಆದ್ದರಿಂದ ಯಾರಿಗೆ ಸಂಪತ್ತಿನ ಸಲುವಾಗಿ ಶ್ರಮ ಮಾಡುವದು ಅವಶ್ಯಕ ಇರುತ್ತದೆ, ಅವರು ಧರ್ಮದಿಂದ ನಡೆದುಕೊಂಡು ಬಹಳ ಹೆಚ್ಚಿನ ಶ್ರಮ ಪಡಬೇಕಾಗುತ್ತದೆ. ಇದರಿಂದ ಅನಂತಕಾಲದ ದುಃಖವು ದೂರವಾಗುತ್ತದೆ ಮತ್ತು ಜೊತೆ ಜೊತೆಗೆ ಪುಣ್ಯದ ಕಾರಣ ಧನವೂ ಸಹ ಸಹಜವಾಗಿಯೇ ಪ್ರಾಪ್ತಿಯಾಗುತ್ತದೆ ಹೇಗೆ ಗೋದಿ ಬಿತ್ತಿದ ಬಳಿಕ ಜೊತೆಯಲ್ಲಿಯೇ ಹುಲ್ಲು ತನ್ನಿಂದ ತಾನೇ ಪ್ರಾಪ್ತವಾಗುತ್ತದೆ. ಅದೇ ಪ್ರಕಾರ ಸತ್ಯಧರ್ಮ ಮಾಡುವದರಿಂದ

ಪಾಪವು ಹಗುರವಾಗುತ್ತದೆ ಮತ್ತು ಪುಣ್ಯವು ತೀವ್ರವಾಗುತ್ತದೆ. ಇದರಿಂದ ಭವಮುಕ್ತಿಯ ಜೊತೆಜೊತೆಗೆ ಧನ ಮತ್ತು ಸುಖ ತನ್ನಿಂದ ತಾನೇ ಪ್ರಾಪ್ತವಾಗುತ್ತವೆ. ಭವಿಷ್ಯದಲ್ಲಿ ಅವ್ಯಾಬಾಧ ಸುಖರೂಪಿ ಮುಕ್ತಿಯು ದೊರೆಯುತ್ತದೆ.

೮. ಪುರುಷಾರ್ಥದಿಂದ ಧರ್ಮವಾಗುತ್ತದೆ ಮತ್ತು ಪುಣ್ಯದಿಂದ ಸಂಪತ್ತು ಸಿಗುತ್ತದೆ. ಅಂದರೆ ಪೂರ್ಣ ಪುರುಷಾರ್ಥವನ್ನು ಧರ್ಮದಲ್ಲಿ ತೊಡಗಿಸಬೇಕು ಮತ್ತು ಧನ ಗಳಿಸುವಲ್ಲಿ ಕಡಿಮೆ ಸಮಯ ಕಳೆಯಬೇಕು. ಏಕೆಂದರೆ ಸಂಪತ್ತು ಶ್ರಮದ ಅನುಪಾತದಲ್ಲಿ ದೊರೆಯುವದಿಲ್ಲ. ಆದರೆ ಪುಣ್ಯದ ಅನುಪಾತದಲ್ಲಿ ದೊರೆಯುತ್ತದೆ.

೯. ಅನಾದಿಯಿಂದ ಪುದ್ಗಲದ ಮೋಹದಲ್ಲಿ ಮತ್ತು ಅದರದೇ ಶೋಧದಲ್ಲಿ ಜೀವವು ದಂಡ ಪಡೆಯುತ್ತಲೇ ಬಂದಿದೆ. ತನ್ನ ಮೋಹದ ಕಾರಣದಿಂದ ಅವನು ಅನಂತ ದುಃಖ ಭೋಗಿಸುತ್ತ ಬಂದಿದೆ. ಆದ್ದರಿಂದ ಶೀಘ್ರವಾಗಿ ಪುದ್ಗಲದ ಮೋಹ ಬಿಡುವದು ಯೋಗ್ಯವಿದೆ. ಆದರೆ ಅವನು ಕೇವಲ ಮೌಖಿಕ ರೂಪದಿಂದ ವಾಸ್ತವದಲ್ಲಿ ಇಲ್ಲ. ಹೇಗೆಂದರೆ ಧರ್ಮದ ಎತ್ತರೆತ್ತರ ಮಾತುಗಳನ್ನು ಆಡುವವನೂ ಸಹ ಪುದ್ಗಲದ ಮೋಹದಲ್ಲಿ ಜಾಲದಲ್ಲಿ ಬಿದ್ದಂತೆ ಕಾಣುತ್ತದೆ. ಈ ಜೀವವು ಅನಾದಿಯಿಂದ ಇದೇ ಪ್ರಕಾರ ತನ್ನನ್ನೇ ಮೋಸ ಮಾಡುತ್ತ ಬಂದಿದೆ. ಆದ್ದರಿಂದ ಎಲ್ಲ ಆತ್ಮಾರ್ಥಿಗಳಿಗೆ ನಮ್ಮ ಪ್ರಾರ್ಥನೆ ಏನಂದರೆ ತಾವು ತಮ್ಮ ಜೀವನ ಅತ್ಯಂತ ಸರಳತನದಿಂದ ಸಾಗಿಸಿರಿ. ಪುದ್ಗಲದ ಅವಶ್ಯಕತೆಯನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿರಿ. ಜೀವನ ಪರ್ಯಂತ ಎಲ್ಲ ಪ್ರಕಾರದ ಪರಿಗ್ರಹದ ಸೀಮೆಯನ್ನು ಮಾಡಿಕೊಳ್ಳಿರಿ. ಸಂತೋಷವು ಅತಿಶಯ ಅವಶ್ಯಕವಿದೆ. ಸಂತೋಷಿ ವ್ಯಕ್ತಿ ಮಾತ್ರ ಆತ್ಮಪ್ರಾಪ್ತಿಯ ಲಕ್ಷ್ಯದ ಸಲುವಾಗಿ ಜೀವನ ಸಾಗಿಸುತ್ತಾನೆ. ಇವನೇ ತನ್ನ ಜೀವನಿಗೆ ಅನಂತ ದುಃಖಗಳಿಂದ ರಕ್ಷಿಸುತ್ತಾನೆ ಮತ್ತು ಅನಂತ ಅವ್ಯಾಬಾಧ ಸುಖವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ.

೧೦. ಕರ್ಮಗಳು ಬಂಧವಾಗುವಾಗ ಆಗುವ ಭಾವವೇ ಆ ಕರ್ಮಗಳ ಉದಯ ಕಾಲದಲ್ಲಿ ಅದೇ ಭಾವ ಉಂಟಾಗುತ್ತದೆ. ಅದರಿಂದ ಹಳೇ ಕರ್ಮ ನಿರ್ಜರೆಯಾಗಿ ಹೊಸ ಕರ್ಮಗಳು ಬಂಧಿಸುತ್ತವೆ. ಇದನ್ನು ಅನುಬಂಧ ಎಂದು ಕರೆಯುತ್ತಾರೆ. ಈ ಅನುಬಂಧವು ಅಭಿಪ್ರಾಯದ ಫಲವಿದೆ. ಆದ್ದರಿಂದ ಎಲ್ಲ ಪುರುಷಾರ್ಥದ ಅಭಿಪ್ರಾಯ ಬದಲಿಸುವಲ್ಲಿ ತೊಡಗಬೇಕು. ಅಂದರೆ ಅದನ್ನು ಸಮ್ಯಕ್ ಮಾಡುವಲ್ಲಿ ಹಚ್ಚಬೇಕು.

೧೧. ಸ್ವರೂಪದಿಂದ ನಾನು ಸಿದ್ಧಸಮಾನನಾಗಿದ್ದರೂ ಸಹ ರಾಗದ್ವೇಷಗಳು ನನ್ನ ಮೇಲೆ ಕಲಂಕ ಸಮಾನ ಇವೆ. ಆದ್ದರಿಂದ ಅವನ್ನು ತೊಳೆಯುವ (ನಾಶ ಮಾಡುವ) ಧ್ಯೇಯದಿಂದ ದೃಢತೆ ಮತ್ತು ಧೈರ್ಯದಿಂದ ಧರ್ಮರೂಪಿ ಪುರುಷಾರ್ಥ ಮಾಡಬೇಕು.

೧೨. ಸಂತೋಷ, ಸರಳತೆ, ನಿಷ್ಕಪಟತನ, ಸಮತಾಭಾವ, ಸಹಿಷ್ಣುತೆ, ಸಹನಶೀಲತೆ, ನಮ್ರತೆ, ಜಿಪುಣತನ, ವಿವೇಕ ಮುಂತಾದ ಉತ್ತಮ ಗುಣಗಳು ಜೀವನದಲ್ಲಿ ಇರುವದು ಅತ್ಯಂತ ಅವಶ್ಯಕವಿದೆ.

೧೩. ತಪಸ್ಸಿನಲ್ಲಿ ವಿಶುದ್ಧ ಬ್ರಹ್ಮಚರ್ಯವನ್ನು ಪಾಲಿಸುವದು ಅತಿ ಶ್ರೇಷ್ಠವಿದೆ.

೧೪. ಸಂಸಾರಿಕ ಜೀವಗಳು ನಿಮಿತ್ತವಾಸಿ ಆಗುತ್ತವೆ. ನಿಯಮದಿಂದ ಉಪಾದಾನದಲ್ಲಿಯೇ ಕಾರ್ಯದ ಪರಿಣಮನವಾಗುತ್ತದೆ. ಆದರೆ ಆ ಉಪಾದಾನದಲ್ಲಿ ಕಾರ್ಯವಾಗುವಾಗ ನಿಮಿತ್ತದ ಉಪಸ್ಥಿತಿ ಅವಿನಾಭಾವಿ ಆಗೇ ಆಗುತ್ತದೆ. ಆದ್ದರಿಂದ ವಿವೇಕದಿಂದ ಮುಮುಕ್ಷು ಜೀವರು ತಿಳಿಯುತ್ತಾರೆ. ಏನಂದರೆ ಕಾರ್ಯವು ಉಪಾದಾನದಲ್ಲಿ ಆದರೂ ಈ ಕಾರಣದಿಂದ ಅವರಿಗೆ ಸ್ವಚ್ಛಂದತೆಯಿಂದ ಯಾವುದೇ ನಿಮಿತ್ತ ಪಡೆವರೆ ಅನುಮತಿ ದೊರೆಯುವದಿಲ್ಲ. ಆದ್ದರಿಂದಲೇ ಅವರು ಕ್ಷುದ್ರ ನಿಮಿತ್ತಗಳಿಂದ ಭಯಭಾವದಿಂದ ದೂರವೇ ಇರುತ್ತಾರೆ.

೧೫. ಸಾಧಕನು ಆತ್ಮನ ಹಿತದ ಸಲುವಾಗಿ ಟಿ.ವಿ., ಸಿನೇಮಾ, ನಾಟಕ, ಮೊಬೈಲ್, ಇಂಟರ್‌ನೆಟ್ ಮುಂತಾದ ಕ್ಷುದ್ರ ನಿಮಿತ್ತಗಳಿಂದ ದೂರ ಇರುವದು ಅವಶ್ಯಕವಿದೆ. ಏಕೆಂದರೆ ಉತ್ತಮಗಳಿಂದ ಉತ್ತಮ ಭಾವನೆ, ಕ್ಷುದ್ರ ನಿಮಿತ್ತಗಳಿಂದ ಕ್ಷುದ್ರ ಭಾವನೆ ಉಂಟಾಗಲು ತಡವಾಗುವದಿಲ್ಲ. ಆದ್ದರಿಂದ ಈ ಎಲ್ಲ ಕ್ಷುದ್ರ ನಿಮಿತ್ತಗಳು ಅನಂತ ಸಂಸಾರ ಅರ್ಥಾತ್ ಅನಂತ ದುಃಖದ ಕಾರಣವಾಗುವಲ್ಲಿ ಸಮರ್ಥ ಇರುವದರಿಂದ ಅವನ್ನು ತ್ಯಜಿಸಬೇಕು.

೧೬. ತಾಯಿ ತಂದೆಯರ ಉಪಕಾರದ ಋಣ ತೀರಿಸುವದನ್ನು ಬೇರೆ ಯಾವುದೇ ಕಾರಣಗಳಿಂದ ತಪ್ಪಿಸಬಾರದು. ಕೇವಲ ಅವರಿಗೆ ಧರ್ಮಪ್ರಾಪ್ತಿ ಮಾಡಿಸಿಯೇ ಬಿಡಬೇಕು. ಆದ್ದರಿಂದ ತಾಯಿ ತಂದೆಯರ ಸೇವೆ ಮಾಡಲೇಬೇಕು. ಅವರ ಸ್ವಭಾವ ಅನುಕೂಲ ಇರದಿದ್ದರೂ ಸಹ ಅವರ ಪೂರ್ಣ ಸೇವೆ ಮಾಡಬೇಕು ಮತ್ತು ಅವರಿಗೆ ಧರ್ಮ ಪ್ರಾಪ್ತಿ ಮಾಡಿಸಬೇಕು. ಇದರ ಸಲುವಾಗಿ ಮೊದಲು ಸ್ವತಃ ಧರ್ಮವನ್ನು ಪ್ರಾಪ್ತಿ ಮಾಡಿಕೊಳ್ಳುವದು ಬಹಳ ಅವಶ್ಯಕವಿದೆ.

೧೭. ಧರ್ಮದ ಅಪಮಾನ ಆಗಬಾರದು. ಆದ್ದರಿಂದ ತನ್ನ ಸ್ವಂತದ ನಡತೆಯ ಮೇಲೆ ಎಲ್ಲ ಜನರು ತಮ್ಮ ಪರಿವಾರದಲ್ಲಿ, ಉದ್ಯೋಗದಲ್ಲಿ, ಸಂಘಟಿತ ಕಾರ್ಯಕ್ರಮಗಳಲ್ಲಿ ಮುಂತಾದ ಕಡೆಗಳಲ್ಲಿ ಹಾಗೂ ಸಮಾಜದಲ್ಲಿ ತಮ್ಮ ವ್ಯವಹಾರ ಒಳ್ಳೆಯದಾಗಲಿ ಎಂಬ ಧ್ಯಾನ ಇಡುವದು ಅತ್ಯಂತ ಅವಶ್ಯಕವಿದೆ.

೧೮. ಅಪೇಕ್ಷೆ, ಆಗ್ರಹ, ಆಸಕ್ತಿ, ಅಹಂಕಾರ ಹೊರ ಹಾಕುವದು ಸಹ ಅತ್ಯಂತ ಅವಶ್ಯಕ ಇರುತ್ತದೆ.

೧೯. ಸ್ವಂತದ ದೋಷಗಳನ್ನು ನೋಡು. ಪರರ ದೋಷಗಳನ್ನು ನೋಡಬೇಡ. ಪರರ ಉತ್ತಮ ಗುಣಗಳನ್ನು ನೋಡು ಮತ್ತು ಅವನ್ನು ಸ್ವೀಕಾರ ಮಾಡು. ಇದು ಸಹ ಅತ್ಯಂತ ಅವಶ್ಯಕ ಕಾರ್ಯವಾಗಿದೆ.

೨೦. ಅನಾದಿಯಿಂದ ಬಂದ ಇಂದ್ರಿಯಗಳ ಗುಲಾಮಿತನ ಬಿಡುವದು ಅವಶ್ಯಕ ಮತ್ತು ಯೋಗ್ಯವಿದೆ.

೨೧. ಯಾವ ಇಂದ್ರಿಯದ ವಿಷಯದಲ್ಲಿ ಎಷ್ಟು ಹೆಚ್ಚು ಆಸಕ್ತಿ ಮತ್ತು ಯಾವ ಇಂದ್ರಿಯದ ದುರುಪಯೋಗ ಹೆಚ್ಚು ಆಗುವದು, ಅಷ್ಟು ಆ ಇಂದ್ರಿಯಗಳು ಭವಿಷ್ಯದಲ್ಲಿ ಅನಂತ ಕಾಲದ ತನಕ ದೊರೆಯಲಾರದ ಸಂಭಾವನೆ ಹೆಚ್ಚಾಗಿರುತ್ತದೆ.

೨೨. ನನ್ನಲ್ಲಿಯ ಕ್ರೋಧ, ಮಾನ, ಮಾಯಾ ಹಾಗೂ ಲೋಭ ಇವು ಪ್ರಬಲವಾದ ವೈರಿಗಳಿದ್ದಾರೆ. ಇವರ ಹೊರತು ವಿಶ್ವದಲ್ಲಿ ಯಾರೂ ನನ್ನ ವೈರಿಗಳು ಇಲ್ಲವೇ ಇಲ್ಲ.

೨೩. ಒಂದೇ ಒಂದು ಕಷಾಯವು ಅನಂತ ಸಲ ಹಿಂತಿರುಗಿ ಬರುವಲ್ಲಿ ಸಮರ್ಥ ಇದೆ. ಒಂದು ವೇಳೆ ನನ್ನಲ್ಲಿ ಆ ಕಷಾಯಗಳ ವಾಸವಿದೆ ಆದರೆ ನನ್ನದೇನು ಆಗುವದು ? ಆದ್ದರಿಂದ ಬೇಗನೇ ಎಲ್ಲ ಕಷಾಯಗಳ ನಾಶವನ್ನು ಬಯಸುವದು ಮತ್ತು ಅದರದೇ ಪುರುಷಾರ್ಥ ಮಾಡುವದು ಒಳ್ಳೆಯದು.

೨೪. ಅಹಂಕಾರ ಮತ್ತು ಮಮಕಾರ ಇವು ಅನಂತ ಸಂಸಾರದ ಕಾರಣವಾಗಿರುವಲ್ಲಿ ಸಮರ್ಥ ಇರುತ್ತವೆ. ಆದ್ದರಿಂದ ಅವುಗಳಿಂದ ಉಳಿದುಕೊಳ್ಳುವ ಉಪಾಯ ಮಾಡಬೇಕು.

೨೫. ಕೇವಲ ನಮ್ಮ ದುರ್ಗುಣಗಳ ನಿಂದೆ ಮಾಡಬೇಕು. ಬೇರೆಯವರ ದುರ್ಗುಣಗಳನ್ನು ನೋಡಿ ಮೊಟ್ಟಮೊದಲು ನಮ್ಮ ಭಾವನೆಗಳನ್ನು ಸುಧಾರಿಸಿಕೊಳ್ಳಬೇಕು. ಒಂದು ವೇಳೆ ಅವರ ದುರ್ಗುಣಗಳು ನನ್ನಲ್ಲಿಯೂ ಇದ್ದರೆ ತಕ್ಷಣ ಹೊರಹಾಕಬೇಕು. ಅವುಗಳ ಕುರಿತು ತಿರಸ್ಕಾರ ಅಥವಾ ಕರುಣಾಭಾವ ಇಡಬೇಕು. ಏಕೆಂದರೆ ಎರಡನೆಯವರ ನಿಂದೆಯಿಂದ ನಮಗೆ ಬಹಳ ಕರ್ಮಬಂಧ ಆಗುತ್ತದೆ. ಯಾರೂ ಎರಡನೆಯವರ ಮನೆಯ ಕಸವನ್ನು ತಮ್ಮ ಮನೆಯಲ್ಲಿ ತರುವದಿಲ್ಲ. ಇದೇ ಪ್ರಕಾರ ಎರಡನೆಯವರ ನಿಂದೆ ಮಾಡುವದರಿಂದ ಅವರ ಕರ್ಮ ಸ್ವಚ್ಛವಾಗುತ್ತದೆ ಮತ್ತು ನಮಗೆ ಕರ್ಮಗಳ ಬಂಧವಾಗುತ್ತದೆ.

೨೬. ಈರ್ಷೆ ಮಾಡುವುದಾದರೆ ಕೇವಲ ಭಗವಾನರೊಂದಿಗೆ ಮಾಡಬೇಕು. ಕೇವಲ ಭಗವಾನ ಆಗುವ ಸಲುವಾಗಿ ಭಗವಾನರೊಂದಿಗೆ ಈರ್ಷೆ ಮಾಡಬೇಕು. ಬೇರೆ ಯಾವ ಕಾರಣದಿಂದಲೂ ಬೇಡ. ಇದರ ಹೊರತು ಯಾರೊಡನೇ ಆಗಲಿ ಈರ್ಷಾ ಮಾಡುವದರಿಂದ ಅತ್ಯಂತ ದುಃಖ ಕೊಡುವಂಥ ಅನಂತ ಕರ್ಮಗಳ ಬಂಧವಾಗುತ್ತದೆ. ಮತ್ತು ಜೀವವು ವರ್ತಮಾನದಲ್ಲಿಯೂ ದುಃಖಿ ಆಗಿರುತ್ತದೆ.

೨೭. ಪ್ರತಿ ಸಮಯದಲ್ಲಿಯೂ ಜಾಗೃತಿ ಇರಬೇಕು. ಪ್ರತಿಯೊಂದು ತಾಸಿನಲ್ಲಿಯೂ ನಮ್ಮ ಮನಸ್ಸಿನ ಪರಿಣಾಮಗಳ ತಪಾಸಣೆ ಮಾಡುತ್ತಿರಬೇಕು. ಮನಸ್ಸಿನ ಒಲವು ಯಾವ ಕಡೆಗೆ ಇದೆ ಎಂಬುದನ್ನು ನೋಡಬೇಕು. ತಪ್ಪಿದ್ದಲ್ಲಿ ಸುಧಾರಣೆ

ಮಾಡಿಕೊಳ್ಳಬೇಕು. ಲಕ್ಷ್ಯ ಮಾತ್ರ ಒಂದೇ ಆತ್ಮ ಪ್ರಾಪ್ತಿಯದೇ ಇರಬೇಕು. ಇದೇ ಭಾವನೆಯನ್ನು ದಿನಾಲು ದೃಢಗೊಳಿಸುತ್ತ ಇರಬೇಕು.

೨೮. ಅನಂತಕಾಲದ ತನಕ ಇರಲು ಸ್ಥಾನಗಳು ಎರಡೇ ಇವೆ. ಒಂದು ಸಿದ್ಧ ಅವಸ್ಥೆ ಮತ್ತು ಇನ್ನೊಂದು ನಿಗೋದ. ಮೊದಲನೆಯದರಲ್ಲಿ ಅನಂತ ಸುಖ ಇದೆ ಮತ್ತು ಎರಡನೆಯದರಲ್ಲಿ ಅನಂತ ದುಃಖವಿದೆ. ಆದ್ದರಿಂದ ನಿಮ್ಮ ಭವಿಷ್ಯವನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಎಲ್ಲರೂ ಕೇವಲ ಮೋಕ್ಷದ ಸಲುವಾಗಿಯೇ ಪ್ರಯತ್ನ ಮಾಡಬೇಕು.

೨೯. ಏನು ಆಗುತ್ತದೆಯೋ ಅದು ಒಳ್ಳೆಯದಕ್ಕಾಗಿಯೇ ಆಗುತ್ತದೆ. ಹೀಗೆ ಮನ್ನಿಸಬೇಕು. ಇದರಿಂದ ಆರ್ತಧ್ಯಾನ ಮತ್ತು ರೌದ್ರಧ್ಯಾನಗಳಿಂದ ಉಳಿದುಕೊಳ್ಳಬಹುದು. ಅಂದರೆ ಹೊಸ ಕರ್ಮಗಳ ಆಸ್ರವದಿಂದ ಉಳಿದುಕೊಳ್ಳಲು ಸಾಧ್ಯವಾಗುತ್ತದೆ.

**೩೦. ಪ್ರಶ್ನ : ನಾನು ಯಾರ ಪಕ್ಷವನ್ನು ಹಿಡಿಯಲಿ ? ಯಾವ ಸಂಪ್ರದಾಯವನ್ನು ಅಥವಾ ಯಾವ ವ್ಯಕ್ತಿ ವಿಶೇಷವನ್ನು ನನ್ನದೆಂದು ಮನ್ನಿಸಲಿ ?**

**ಉತ್ತರ :** ಕೇವಲ ನಮ್ಮ ಆತ್ಮನ ಪಕ್ಷವನ್ನೇ ಹಿಡಿಯಬೇಕು. ಏಕೆಂದರೆ ಅದರಲ್ಲಿಯೇ ನನ್ನ ಕಲ್ಯಾಣವಿದೆ. ಬೇರೆ ಯಾರದೇ ಪಕ್ಷ ಹಿಡಿಯಬಾರದು. ಏಕೆಂದರೆ ಅದರಲ್ಲಿ ನನ್ನ ಉದ್ಧಾರ ಸ್ವಲ್ಪವೂ ಇರುವದಿಲ್ಲ. ಪಕ್ಷ ಹಿಡಿಯುವದು ರಾಗ-ದ್ವೇಷದ ಕಾರಣವಿದೆ. ಯಾವಾಗ ಕೇವಲ ನನ್ನ ಆತ್ಮನ ಪಕ್ಷ ಹಿಡಿದುಕೊಳ್ಳುವೆವೋ ಆಗ ಅದರಲ್ಲಿ ಎಲ್ಲ ಜ್ಞಾನಿಗಳ ಪಕ್ಷ ಸಮಾವೇಶವಾಗುತ್ತವೆ.

೩೧. ಕಡಿಮೆ ಕಡಿಮೆ ಎಂದರೂ ಜೈನರು ರಾತ್ರಿಯಲ್ಲಿ ಯಾವುದೇ ಕಾರ್ಯಕ್ರಮ ಭೋಜನ ಸಮಾರಂಭ ಇಟ್ಟುಕೊಳ್ಳಬಾರದು. ಯಾವುದೇ ಪ್ರಸಂಗದಲ್ಲಿ ಹೂ ಮತ್ತು ಮದ್ದು ಸುಡುವದು ಮಾಡಬಾರದು.

೩೨. ವಿವಾಹವು ಸಾಧಕನ ಸಲುವಾಗಿ ಅನಿವಾರ್ಯ ಎಂದಾಗಿರುವದು ಮಹೋತ್ಸವ ಅಲ್ಲ. ಯಾವ ಸಾಧಕನು ಪೂರ್ಣ ಬ್ರಹ್ಮಚರ್ಯ ಪಾಲಿಸುವವನಾಗದಿದ್ದರೆ ಅವನ ಸಲುವಾಗಿ ವಿವಾಹ ವ್ಯವಸ್ಥೆಯ ಸಹಾಯ ತೆಗೆದುಕೊಳ್ಳುವದು ಯೋಗ್ಯವಿದೆ. ಅದರಿಂದ ಸಾಧಕನು ತನ್ನ ಸಂಸಾರವನ್ನು ನಿರ್ವಿಘ್ನವಾಗಿ ಶ್ರಾವಕಧರ್ಮದ ಅನುಸಾರ ಕಳೆಯಬಹುದು ಮತ್ತು ತನ್ನ ಅನಿವಾರ್ಯತೆಯನ್ನು ಸಹ ಯೋಗ್ಯ ಮರ್ಯಾದೆ ಸಹಿತ ಪೂರ್ಣ ಮಾಡಬಹುದು. ಹೀಗೆ ವಿವಾಹವು ಮಹೋತ್ಸವ ಆಗುವದಿಲ್ಲ. ಏಕೆಂದರೆ ಅನಿವಾರ್ಯತೆಗೆ ಉತ್ಸವವನ್ನಾಗಿ ಮಾಡುತ್ತಾನೆ. ಆದ್ದರಿಂದ ಸಾಧಕನಿಗೆ ವಿವಾಹವು ಬಹಳ ಅವಶ್ಯಕತೆ ಅನಿಸಿದರೇನೇ ಮಾಡಬೇಕು. ಅದೂ ಸಹ ಬಹಳ ಸರಳವಾಗಿ ಮಾಡಬೇಕು. ಎರಡನೆಯದು ಇಲ್ಲಿ ಹೇಳಿದ ಅನುಸಾರವಾಗಿ ವಿವಾಹವನ್ನು ಅನಿವಾರ್ಯವಾಗಿ ತಿಳಿದು ಆಚರಿಸಬೇಕು. ಆದರೆ ಅದನ್ನು

ಧರ್ಮದೊಂದಿಗೆ ಜೀವನ ಸಾಗಿಸಬೇಕು. ನಮಗೆ ಈ ವಿವಾಹರೂಪಿ ಅನಿವಾರ್ಯವು ಭವಿಷ್ಯದಲ್ಲಿ ಮತ್ತೆಂದೂ ಆಗಬಾರದೆಂದು ಭಾವಿಸಬೇಕು. ಇದರಿಂದ ಪಾರಾಗಿ ಬೇಗನೇ ಆತ್ಮಕಲ್ಯಾಣ ಮಾಡಿಕೊಂಡು ಸಿದ್ಧತ್ವವನ್ನು ಪಡೆಯುಬೇಕು.

೩೩. ಜನ್ಮವಂತೂ ಆತ್ಮನಿಗೆ ಅನಾದಿಕಾಲದಿಂದ ಅಂಟಿಕೊಂಡ ಭವರೋಗವೇ ಆಗಿದೆ. ಆದರೆ ಮಹೋತ್ಸವವಲ್ಲ. ಯಾರಿಗೆ ಜನ್ಮವಿದೆ, ಅವನಿಗೆ ಮರಣವೂ ಅವಶ್ಯವಿದೆ. ಆತ್ಮನ ಜನ್ಮ ಮರಣ ರೂಪಿ ಚಕ್ರವು ತಿರುಗುತ್ತಲೇ ಇರುತ್ತದೆ. ಅಲ್ಲಿಯವರೆಗೆ ಅವನಿಗೆ ಅನಂತ ದುಃಖಗಳಿಂದ ಬಿಡುಗಡೆ ಸಿಗುವದಿಲ್ಲ. ಪ್ರತಿಯೊಂದು ಜೀವನಿಗೆ ಕೇವಲ ಒಂದು ಸಿದ್ಧತ್ವದ ಅಂದರೆ ಜನ್ಮ ಮರಣದಿಂದ ಶಾಶ್ವತವಾಗಿ ಬಿಡುಗಡೆಯ ಇಚ್ಛೆ ಮಾಡಬೇಕು. ಆದ್ದರಿಂದ ಸಾಧಕನಿಗೆ ಇಲ್ಲಿ ಹೇಳಿದ ಅನುಸಾರ ಜನ್ಮವನ್ನು ಅನಂತ ದುಃಖದ ಕಾರಣ ಅಂದರೆ ಭವರೋಗ ಎಂದು ತಿಳಿದುಕೊಂಡು ಜನ್ಮದಿವಸ ಮುಂತಾಗಿ ಮಹೋತ್ಸವ ಆಚರಿಸುವದು ಯೋಗ್ಯವಲ್ಲ. ಆ ದಿವಸ ವಿಶೇಷ ಧರ್ಮ ಕಾರ್ಯ ಮಾಡುವದು ಯೋಗ್ಯವಿದೆ. ಇಂಥ ಭಾವನೆ ಭಾವಿಸಿರಿ. ಏನೆಂದರೆ ಈಗ ನನಗೆ ಈ ಜನ್ಮವು ಅನಂತ ದುಃಖಗಳ ಕಾರಣ ಭವರೋಗವಾಗಿದೆ. ಭವಿಷ್ಯದಲ್ಲಿ ಎಂದೂ ಸಹ ಇದು ಸಿಗಬಾರದು. ಸಾಧಕನಿಗೆ ಕೇವಲ ಒಂದು ಸಿದ್ಧತ್ವದ ಪ್ರಾಪ್ತಿಯ ಸಲುವಾಗಿ ಜನ್ಮರಹಿತನಾಗುವ ಸಲುವಾಗಿಯೇ ಸಂಪೂರ್ಣ ಪುರುಷಾರ್ಥ ಮಾಡಬೇಕು.

೩೪. **ಪ್ರಶ್ನ :** ಛದ್ಮಸ್ಥ ಆತ್ಮನ ಪ್ರತಿಯೊಂದು ಪ್ರದೇಶದಲ್ಲಿ ಅನಂತ ಕರ್ಮವರ್ಗಣೆಗಳು ಇರುವದರಿಂದ ಅವನು ಅಶುದ್ಧ ಆತ್ಮನ ರೂಪದಲ್ಲಿಯೇ ಪರಿಣಮಿತ ಆಗುತ್ತಾನೆ. ಆದರೆ ಅದರಲ್ಲಿ ಶುದ್ಧಾತ್ಮನು ಎಲ್ಲಿ ಇರುತ್ತಾನೆ ?

**ಉತ್ತರ :** ಭೇದಜ್ಞಾನದಿಂದ (ಪ್ರಜ್ಞಾಛನ್ನಿಯಿಂದ) ಅಂದರೆ ಜೀವದ ಲಕ್ಷಣದಿಂದ ಜೀವನನ್ನು ಸ್ವೀಕರಿಸಬೇಕು ಮತ್ತು ಪುದ್ಗಲದ ಲಕ್ಷಣದಿಂದ ಪುದ್ಗಲವನ್ನು ದೂರ ಮಾಡಬೇಕು ಮತ್ತೆ ಅದರಲ್ಲಿ ಪ್ರಜ್ಞಾರೂಪಿ ಉಳಿಯಿಂದ (ತೀವ್ರ ಬುದ್ಧಿಯಿಂದ) ವಿಭಾವವನ್ನು ಗೌಣ ಮಾಡಿ ಭೇದಜ್ಞಾನ ಮಾಡುತ್ತಲೇ ಶುದ್ಧಾತ್ಮನ ಪ್ರಾಪ್ತಿ ಆಗುತ್ತದೆ.

೩೫. ಒಂದು ವೇಳೆ ಯಾರೋ ಹೇಳಿದರೇನೆಂದರೆ ಆತ್ಮನು ಹೊರಗಿನಿಂದ ಅಶುದ್ಧ ಮತ್ತು ಒಳಗಿನಿಂದ ಶುದ್ಧ ಇದ್ದಾನೆ. ಆದರೆ ಹೀಗೆ ಹೇಳುವದು ಅಪೇಕ್ಷೆಯಿಂದ ತಿಳಿಯಬೇಕು. ಏಕಾಂತದಿಂದ ಅಂದರೆ ವಾಸ್ತವಿಕ ಅಲ್ಲ, ಆತ್ಮನು ಹೇಗೆ ಹೊರಗೆ ಇರುವನು ಹಾಗೆಯೇ ಒಳಗೂ ಇರುವನು. ಆತ್ಮನು ಒಳಗೆ ಮತ್ತು ಹೊರಗೆ ಪ್ರತಿಯೊಂದು ಪ್ರದೇಶದಲ್ಲಿ ಅನಂತಾನಂತ ಕಾರ್ಮಾಣ ವರ್ಗಣೆಗಳು ಹಾಲು-ನೀರಿನಂತೆ ಸೇರಿಕೊಂಡಿರುವದರಿಂದ ಹೇಗೆ ಅಶುದ್ಧಿಯು ಹೊರಗಿನ ಕ್ಷೇತ್ರದಲ್ಲಿ ಇದೆ, ಅದೇ ರೀತಿ ಒಳಗಿನ ಕ್ಷೇತ್ರದಲ್ಲಿಯೂ ಸಹ ಇರುತ್ತದೆ. ಈ ಅಪೇಕ್ಷೆಯಿಂದ ಹೊರಗೆ ಅಂದರೆ ವಿಶೇಷ ಭಾವ (ವಿಭಾವ ಭಾವ) ಮತ್ತು ಒಳಗೆ ಅಂದರೆ ಸಾಮಾನ್ಯಭಾವ (ಪರಮ ಪಾರಿಣಾಮಿಕ ಭಾವ) ಯಾವದು ಮೂರೂ ಕಾಲಗಳಲ್ಲಿ

ಶುದ್ಧವೇ ಇರುತ್ತದೆ ಮತ್ತು ಅದರಿಂದಲೇ ವ್ಯಕ್ತ ಆತ್ಮನು ಅಶುದ್ಧ ಮತ್ತು ಅವ್ಯಕ್ತ ಆತ್ಮನು ಶುದ್ಧ ಇರುವನು. ಇದೇ ಅಪೇಕ್ಷೆಯಿಂದ ಆತ್ಮನಿಗೆ ಒಳಗಿನಿಂದ ಶುದ್ಧ ಮತ್ತು ಹೊರಗಿನಿಂದ ಅಶುದ್ಧ ಎಂದು ಹೇಳಲಾಗುತ್ತದೆ. ಬೇರೇನೂ ಇಲ್ಲ. ಯಾವದೋ ಆತ್ಮನಲ್ಲಿ ಒಳಗೆ ಏಕಾಂತ ಶುದ್ಧ ಧ್ರುವಭಾವ ಶೋಧಿಸಿದರೆ ಹಾಗೆಯೇ ಏಕಾಂತ ಶುದ್ಧ ಧ್ರುವಭಾವ ಆತ್ಮನಲ್ಲಿ ಇರುವದಿಲ್ಲ. ಯಾವುದೇ ಕಥನವು ಅದರ ಅಪೇಕ್ಷೆಯಿಂದಲೇ ತಿಳಿಯುವದು ಅನಿವಾರ್ಯವಿದೆ, ಇಲ್ಲವಾದರೆ ಹೀಗೆ ಮನ್ನಿಸುವವನು ನಿಯಮದಿಂದ ಭ್ರಮೆಯಲ್ಲಿಯೇ ಇರುವನು.

೩೬. ಒಂಬತ್ತು ತತ್ವಗಳಿಂದ ಭಿನ್ನವಾದ ಸಂಪೂರ್ಣ ಶುದ್ಧ ದ್ರವ್ಯದ ಸಿದ್ಧಿ ಆಗುವದಿಲ್ಲ. ಆದ್ದರಿಂದ ಯಾರಿಗಾದರೂ ಹೀಗೆ ಭ್ರಮೆಯಲ್ಲಿ ಇರುವಂಥ ಅವಶ್ಯಕತೆ ಇರುವದಿಲ್ಲ. ಏನಂದರೆ ಪರ್ಯಾಯದಿಂದ ಭಿನ್ನ ಸರ್ವಥಾ ಶುದ್ಧ ದ್ರವ್ಯದ ಪ್ರಾಪ್ತಿಯಾಗುವದು. ಏಕೆಂದರೆ ಸಾಧನದ ಅಭಾವ ಆಗಿರುವದರಿಂದ ಶುದ್ಧ ದ್ರವ್ಯದ ಪ್ರಾಪ್ತಿ ಆಗುವದಿಲ್ಲ. ಕೇವಲ ಒಂಬತ್ತು ತತ್ವ ಸಂಬಂಧಿ ವಿಕಾರಗಳನ್ನು ಕಡಿಮೆ ಮಾಡುತ್ತಲೇ ಆತ್ಮನು ಶುದ್ಧಾತ್ಮನಾಗುವನು.

೩೭. ಪ್ರಶ್ನೆ : ಬಹಳ ಸಾಧಕರು ಕೇಳುವದೇನೆಂದರೆ ಯಾವಾಗ ತಮಗೆ ಆತ್ಮನ ಅನುಭವ ಆಯಿತು ? ಆಗ ಏನು ಅನಿಸುತ್ತದೆ ?

ಉತ್ತರ : ಸ್ವಾತ್ಮಾನುಭೂತಿಯ ಕಾಲದಲ್ಲಿ ಶರೀರದಿಂದ ಬೇರೆಯಾದ ಇಂಥ ಸಿದ್ಧಸಮಾನ ಆತ್ಮನ ಆಂಶಿಕ ಅನುಭವ ಆಗುತ್ತದೆ. ಅದರಲ್ಲಿ ಶರೀರದ ಯಾವುದೇ ಪ್ರಕಾರದ ಅನುಭವ ಆಗುವದಿಲ್ಲ. ಬಹಳ ಸಾಧಕರು ನಮಗೆ ಪ್ರಶ್ನೆ ಮಾಡುತ್ತಾರೆ – ನಮಗೆ ಪ್ರಕಾಶಮಯ ಆತ್ಮನ ಅನುಭವ ಆಯಿತು ಅಥವಾ ಕೆಲವರು ನಮಗೆ ರೋಮಾಂಚನ ಉಂಟಾಯಿತು ಮುಂತಾಗಿ ಹೇಳುತ್ತಾರೆ. ಇಂತಹ ಸಾಧಕರಿಗೆ ನಾವು ಹೇಳುವದಿಷ್ಟೆ – ಇಂಥ ಭ್ರಮೆಗಳಿಂದ ಮೋಸ ಹೋಗುವದು ಯೋಗ್ಯವಲ್ಲ. ಏಕೆಂದರೆ ಸ್ವಾತ್ಮಾನುಭೂತಿಯ ಕಾಲದಲ್ಲಿ ಶರೀರದ ಯಾವುದೇ ಪ್ರಕಾರದ ಅನುಭವ ಆಗುವದೇ ಇಲ್ಲ. ಕೇವಲ ಸಿದ್ಧಸದೃಶ ಆತ್ಮನ ಅನುಭವ ಅಥವಾ ಆಂಶಿಕ ಸಿದ್ಧಸದೃಶ ಆನಂದದ ಅನುಭವವೇ ಆಗುತ್ತದೆ. ಅಂದರೆ ಆಂಶಿಕ ಸಿದ್ಧತ್ವದ್ದೇ ಬಹಳ ಸ್ಪಷ್ಟವಾದ ಅನುಭವ ಆಗುತ್ತದೆ. ಅದು ಹೇಗೆಂದರೆ ಮತ್ತೆ ಆತ್ಮನ ಸಲುವಾಗಿ ಯಾವುದೇ ಪ್ರಶ್ನೆ ಉಳಿಯುವುದೇ ಇಲ್ಲ. ಎಲ್ಲವೂ ತನ್ನಿಂದ ತಾನೇ ಸ್ಪಷ್ಟವಾಗುತ್ತದೆ. ಸ್ವಾತ್ಮಾನುಭೂತಿಯ ನಂತರ ಶರೀರದ ಕುರಿತು ಭೇದಜ್ಞಾನವು ವರ್ತಿಸುತ್ತದೆ. ಸ್ವಾನುಭೂತಿಯ ನಂತರ ತಾವು ಯಾವಾಗಲಾದರೂ ಸಹ ಕನ್ನಡಿಯ ಎದುರಿಗೆ ಹೋಗುತ್ತೀರಿ. ಆಗ ನಿಮಗೆ ಅನಿಸುತ್ತದೆ. ತಾವು ಯಾವುದೇ ಎರಡನೆಯ ವ್ಯಕ್ತಿ ನೋಡುತ್ತಿರುವಿರಿ ಎಂದು.

೩೮. ಕೆಲವರು ಹೀಗೆ ಮನ್ನಿಸುತ್ತಾರೆ – ಮುಮುಕ್ಷು ಜೀವದ ಯೋಗ್ಯತೆಯು ಅದರ ಸಮಯವು ಪಕ್ವವಾದ ಬಳಿಕ ತನ್ನಿಂದ ತಾನೇ ಆಗುವದು. ಅದರ ಸಲುವಾಗಿ

ಪ್ರಯತ್ನದ ಅವಶ್ಯಕತೆ ಇರುವದಿಲ್ಲ. ಆದರೆ ಅವರಿಗೆ ನಾವು ಪ್ರಶ್ನೆ ಮಾಡುತ್ತೇವೆ – "ತಾವು ಸಂಪಾದಿಸುವ ಹಣ, ಪ್ರತಿಷ್ಠೆ, ಪರಿವಾರ ಮುಂತಾದವುಗಳನ್ನು ಪಡೆಯುವ ಸಲುವಾಗಿ ಪ್ರಯತ್ನ ಮಾಡುತ್ತೀರಿ. ಈ ಪ್ರಯತ್ನದಿಂದ ಅಥವಾ ಪುಣ್ಯದಿಂದ ಸಮಯ ಪಕ್ವವಾದೊಡನೆ ದೊರೆಯುತ್ತವೆಯೋ ?" ಎಂದು ಕೇಳಿದರೆ – "ನಮ್ಮ ಪ್ರಯತ್ನದಿಂದ" ಎಂದರು. ಪ್ರಯತ್ನ ಎಲ್ಲರೂ ಮಾಡುತ್ತಾರೆ. ಆದರೆ ಎಲ್ಲರಿಗೂ ದೊರೆಯುತ್ತವೆಯೋ ಹೇಗೆ ಕೇಳಿದಾಗ – ಸುಮ್ಮನಾದರು. ಆಗ ಹೇಳಿದೆವು – "ನೋಡಿರಿ, ಯಾವುದೇ ಕಾರ್ಯ ಆಗುವ ಸಲುವಾಗಿ ೧. ಸ್ವಭಾವ, ೨. ಕಾಲಲಬ್ಧಿ, ೩. ಪುರುಷಾರ್ಥ, ೪. ಭವಿತವ್ಯ, ೫. ನಿಮಿತ್ತ ಎಂಬ ಐದು ಸಮವಾಯಗಳಾಗುವದು ಅವಶ್ಯಕವಿದೆ. ಇವುಗಳಲ್ಲಿ ಆತ್ಮಸ್ವಭಾವದಲ್ಲಿ ಮಾಡುವಂಥ ಪುರುಷಾರ್ಥವು ಈ ಉಪಾದಾನ ಕಾರಣ ಆಗುವದರಿಂದ ತಾವು ಅದನ್ನು ಗೌಣ ಮಾಡಿ ಕೇವಲ ನಿಮಿತ್ತದ ದಾರಿ ನೋಡುತ್ತ ಆಶೆ ಹಚ್ಚಿಕೊಂಡು ಕುಳಿತರೆ ಕಾರ್ಯವಾಗುವದು ಅತ್ಯಂತ ಕಠಿಣವಿದೆ. ಅಂದರೆ ಆತ್ಮಪ್ರಾಪ್ತಿಯು ಆಗುವದು ಅತ್ಯಂತ ದುರ್ಲಭವಿದೆ. ಪ್ರತಿಯೊಬ್ಬ ಮುಮುಕ್ಷು ತನ್ನ ಪುರುಷಾರ್ಥವನ್ನು ಆತ್ಮಪ್ರಾಪ್ತಿಯ ಕ್ಷೇತ್ರದಲ್ಲಿ ಹೆಚ್ಚು ಸಮಯ ಮಾಡುವದು ಅವಶ್ಯಕವಿದೆ. ಸ್ವಲ್ಪ ಸಮಯ ಜೀವನದ ಆವಶ್ಯಕತೆಗಳನ್ನು ಸಂಗ್ರಹ ಮಾಡುವಲ್ಲಿ ತೊಡಗಿಸಬೇಕು.

೩೯. ಈ ಪುಸ್ತಕದಲ್ಲಿ ನಮ್ಮಿಂದ ಯಾವುದೇ ಮರೆವು ಆಗಿದ್ದರೆ, ಅನುವಾದದಲ್ಲಿ ದೋಷ ಉಂಟಾಗಿದ್ದರೆ ತಾವು ಸುಧಾರಿಸಿಕೊಂಡು ಓದಿರಿ. ನಮ್ಮಿಂದ ಜಿನಾಜ್ಞೆಯ ವಿರುದ್ಧ ಏನಾದರೂ ಅಲ್ಪ ಸ್ವಲ್ಪ ಬರೆಯಲಾಗಿದ್ದರೆ ನಾವು ಮನ, ವಚನ, ಕಾಯಗಳಿಂದ ಕ್ಷಮೆ ಯಾಚಿಸುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

★★★

## ೩೯. ಸಮ್ಯಗ್ದೃಷ್ಟಿಯ ಕೆಲವು ಸಾಮಾನ್ಯ ಲಕ್ಷಣಗಳು

೧. ಸಮ್ಯಗ್ದೃಷ್ಟಿಯ ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ, ಮೋಕ್ಷ ಈ ತತ್ವಗಳಲ್ಲಿ ನಿಜದೇವ, ಗುರು, ಶಾಸ್ತ್ರಗಳಲ್ಲಿ ಹಾಗೂ ತನ್ನ ಆತ್ಮನಲ್ಲಿ ಯಥಾರ್ಥ ಶ್ರದ್ಧೆ ಉಳ್ಳವನಿರುತ್ತಾನೆ.

೨. ಶಂಕಾದಿ ೮ ದೋಷಗಳು, ೮ ಮದಗಳು, ೬ ಅನಾಯತನಗಳು ಮತ್ತು ೩ ಮೂಢತೆಗಳು ಈ ಒಟ್ಟು ೨೫ ದೋಷಗಳಿಂದ ರಹಿತನಾಗಿರುತ್ತಾನೆ.

೩. ನಿಃಶಂಕಿತ, ನಿಕಾಂಕ್ಷಿತ, ನಿರ್ವಿಚಿಕಿತ್ಸ, ಅಮೂಢದೃಷ್ಟಿ, ಉಪಗೂಹನಾಂಗ, ಸ್ಥಿತಿಕರಣ, ವಾತ್ಸಲ್ಯ ಮತ್ತು ಪ್ರಭಾವನಾ ಈ ಎಂಟು ಸಮ್ಯಕ್ತ್ವದ ಅಂಗಸಹಿತ ಇರುತ್ತಾನೆ.

೪. ಸಮತಾಭಾವಿಯಾಗಿರುತ್ತಾನೆ. ಯಾವಾಗಲೂ ಸದಾಚಾರ ಪಾಲಿಸುತ್ತಾನೆ.

೫. ಯಾರಿಗೂ ಪೀಡೆ, ಹಾನಿ ಕೊಡಬಯಸುವದಿಲ್ಲ.

೬. ಪರದ್ರವ್ಯಗಳ ಕುರಿತು ಉದಾಸೀನನಾಗಿರುತ್ತಾನೆ.

೭. ಅಕಸ್ಮಾತ್ ಅವನಿಗೆ ಯಾರಿಂದಲಾದರೂ ತೊಂದರೆಯಾದರೆ, ಹಾನಿಯಾದರೆ ಅದು ತನ್ನ ಪೂರ್ವಕೃತ ಕರ್ಮದ ಉದಯವೆಂದು ಭಾವಿಸುತ್ತಾರೆ. ಅವರಿಗೆ ಯಾವದೇ ರೀತಿ ಪ್ರತೀಕಾರ ಮಾಡುವದಿಲ್ಲ.

೮. ಅಹಂಕಾರ, ಮಮಕಾರ, ಸ್ವಾರ್ಥ, ಇಂದ್ರಿಯಗಳಲ್ಲಿ ಆಸಕ್ತಿ ಇರುವದಿಲ್ಲ.

೯. ಆತ್ಮ ನಿರೀಕ್ಷಣೆಯ ಮೂಲಕ ತನ್ನ ದೋಷಗಳನ್ನು ತಿಳಿದುಕೊಂಡು ಅವನ್ನು ತಿದ್ದಿಕೊಳ್ಳಲು ಪ್ರಯತ್ನಿಸುತ್ತಾನೆ.

೧೦. ರಾಗ, ದ್ವೇಷ, ಮೋಹ, ಮಿಥ್ಯಾತ್ವಗಳಿಂದ ರಹಿತನಾಗಿರುತ್ತಾನೆ.

೧೧. ಮನೆಯಲ್ಲಿದ್ದರೂ ನೀರಲ್ಲಿಯ ಕಮಲಪತ್ರದಂತಿರುತ್ತಾನೆ.

೧೨. ಕುದೇವ, ಕುಗುರು, ಕುಶಾಸ್ತ್ರಗಳಿಗೆ ಎಂದೂ ವಿನಯ ಮಾಡುವದಿಲ್ಲ.

೧೩. ಪಂಚಮ ಕಾಲದಲ್ಲಿ ಜನ್ಮತಃ ಸಮ್ಯಗ್ದೃಷ್ಟಿಗಳು ಹುಟ್ಟುವದಿಲ್ಲ. ಏಕೆಂದರೆ ಪೂರ್ವ ಭವದಲ್ಲಿ ವ್ರತರಹಿತ ಮಿಥ್ಯಾದೃಷ್ಟಿ ಆಗಿರುತ್ತಾನೆ.

೧೪. ಇಲ್ಲಿ ಹುಟ್ಟಿದ ಬಳಿಕ ಕೆಲವೇ ಜೀವಿಗಳಿಗೆ ಸಮ್ಯಗ್ದರ್ಶನ ಪ್ರಾಪ್ತವಾಗುವದು.

೧೫. ಸಮ್ಯಗ್ದೃಷ್ಟಿಯು ಅವ್ರತಿಯಾಗಿದ್ದರೂ ಸಹ ಭವನವಾಸಿ, ವ್ಯಂತರವಾಸಿ, ಜ್ಯೋತಿಷ್ಕವಾಸಿ, ದೇವತೆಗಳಲ್ಲಿ, ಕೆಳಗಿನ ಆರು ನರಕಗಳಲ್ಲಿ, ತಿರ್ಯಂಚಗತಿಯಲ್ಲಿ ಸ್ತ್ರೀಯಾಗಿ, ಅಲ್ಪಾಯುಷಿಗಳಾಗಿ, ದರಿದ್ರರಾಗಿ ಹುಟ್ಟುವದಿಲ್ಲ.

೧೬. ಸಮ್ಯಗ್ದೃಷ್ಟಿಯು ಮೋಕ್ಷಮಾರ್ಗದಲ್ಲಿ ಅತ್ಯಂತ ಆಸಕ್ತಿ, ಅಭಿರುಚಿ, ಶ್ರದ್ಧೆ ಹೊಂದಿರುತ್ತಾನೆ.

೧೭. ಸಮ್ಯಗ್ದೃಷ್ಟಿಯು ಪ್ರಶಮ, ಸಂವೇಗ, ಅನುಕಂಪಾ, ಆಸ್ತಿಕ್ಯ ಎಂಬ ಸಮ್ಯಕ್ತ್ವದ ನಾಲ್ಕು ಲಕ್ಷಣಗಳನ್ನು ಹೊಂದಿರುತ್ತಾನೆ.

೧೮. ಇವನಿಗೆ ತನ್ನ ಆತ್ಮನ ಕುರಿತು ಜ್ಞಾನವಾಗುವದರೊಂದಿಗೆ ವೀತರಾಗಭಾವ ಉಂಟಾಗುತ್ತದೆ.

೧೯. ಇವನಲ್ಲಿ ಶುದ್ಧ ಸಮ್ಯಗ್ದರ್ಶನ, ದೋಷವಿಲ್ಲದ ಕರ್ಮ, ಸುಶೀಲ ಗುಣ, ಉದ್ಯೋಗಾರ್ಥ, ಗುರುಭಕ್ತಿ, ಪ್ರವಚನ ಕುಶಲ, ಬುದ್ಧಿಯಲ್ಲಿ ಪ್ರೌಢತೆ ಎಂಬ ಸಮ್ಯಕ್ತ್ವದ ಸಪ್ತ ಗುಣಗಳು ಇರುತ್ತವೆ.

೨೦. ಸಮ್ಯಗ್ದೃಷ್ಟಿಯು ಶಂಕಾ, ಕಾಂಕ್ಷಾ, ವಿಚಿಕಿತ್ಸಾ, ಮಿಥ್ಯಾದೃಷ್ಟಿಗಳ ಪ್ರಶಂಸೆ ಮತ್ತು ಸಂಸ್ತವ ಮುಂತಾದ ಅತಿಚಾರಗಳಿಂದ ರಹಿತನಾಗಿರುತ್ತಾನೆ.

೨೧. ಪೂರ್ವಕರ್ಮಕ್ಕನುಗುಣವಾಗಿ ಕೆಳಗಿನ ನರಕದ ಬಂಧವಾದ ಬಳಿಕ ಸಮ್ಯಗ್ದರ್ಶನ ಉಂಟಾದರೆ ಆ ಜೀವವು ಮೊದಲ ನರಕದಲ್ಲಿ ಜನ್ಮ ಹೊಂದುತ್ತಾನೆ. ಮುಂದೆ ಕೆಲವೇ ಭವಗಳಲ್ಲಿ ಮೋಕ್ಷ ಹೊಂದುತ್ತಾನೆ.

೨೨. ಸಮ್ಯಗ್ದೃಷ್ಟಿಯು ಯಾವಾಗಲೂ ತೃಪ್ತಿಯಿಂದ, ಆನಂದದಿಂದ, ಶಾಂತಿಯಿಂದ ಇರುತ್ತಾನೆ.

೨೩. ಇವನು ಎಲ್ಲರನ್ನು ದ್ರವ್ಯದೃಷ್ಟಿಯಿಂದಲೇ ನೋಡುತ್ತಾನೆ.

೨೪. ಇವನು ಬೇರೆಯವರಲ್ಲಿಯ ದೋಷಗಳನ್ನು ಎಣಿಸದೇ ಉತ್ತಮ ಗುಣಗಳನ್ನೇ ನೋಡುತ್ತಾನೆ.

೨೫. ಯಾರ ಬಗ್ಗೆಯೂ ವೈರ, ವಿರೋಧಭಾವ ಮಾಡದೇ ಪ್ರೀತಿಯಿಂದ ಇರುತ್ತಾನೆ.

೨೬. ಸಮ್ಯಗ್ದೃಷ್ಟಿಯ ಮಾತುಗಳು ಹಿತಮಿತ ಮತ್ತು ಪ್ರಿಯವಾಗಿರುತ್ತವೆ.

೨೭. ಇವನ ಪ್ರತಿಯೊಂದು ವಿಚಾರಗಳು ಉತ್ತಮವಾಗಿಯೇ ಇರುತ್ತವೆ.

೨೮. ಯಾವಾಗಲೂ ಎಲ್ಲ ಜೀವಿಗಳಿಗೂ ಕಲ್ಯಾಣವಾಗಲಿ ಎಂದು ಬಯಸುತ್ತಾನೆ.

೨೯. ಪರಿಗ್ರಹದಲ್ಲಿ ಉದಾಸೀನನಾಗಿದ್ದು ವ್ರತಗಳನ್ನು ನಿರ್ದೋಷವಾಗಿ ಪಾಲಿಸುತ್ತಾನೆ.

೩೦. ದಿನಾಲು ಧ್ಯಾನ, ಅಧ್ಯಯನ, ವ್ರತ, ತಪ, ಜಪಗಳಲ್ಲಿಯೇ ತೊಡಗಿರುತ್ತಾನೆ.

೩೧. ಇವನು ಮಂದಕಷಾಯಿ ಆಗಿದ್ದು ಮನಸ್ಸನ್ನು ಹಾಗೂ ಇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಂಡಿರುತ್ತಾನೆ.

೩೨. ಎಲ್ಲ ಇಚ್ಛೆಗಳಿಂದ ವಿರಕ್ತನಾಗಲು, ಸ್ಥಿರಚಿತ್ತವುಳ್ಳವನಾಗಿರಲು, ಅಹಿಂಸಕನಾಗಲು, ಆಲಸ್ಯರಹಿತನಾಗಿರಲು ಯಾವಾಗಲೂ ಪುರುಷಾರ್ಥ ಮಾಡುತ್ತಾನೆ.

೩೩. ಶಾಂತ ಪರಿಣಾಮಿಯಾಗಿದ್ದು ಮೋಕ್ಷದ ಕಡೆಗೇನೇ ಲಕ್ಷ್ಯವಿರುತ್ತದೆ.

೩೪. ಧರ್ಮದ ಹತ್ತು ಲಕ್ಷಣಗಳನ್ನು ಚಾಚೂ ತಪ್ಪದೇ ಪಾಲಿಸುತ್ತಾನೆ.

★★★

## ೪೦. ರಾತ್ರಿಭೋಜನದ ಕುರಿತು

ರಾತ್ರಿಭೋಜನ ತ್ಯಾಗವು ಮೋಕ್ಷಮಾರ್ಗದ ಮೇಲೆ ಸಾಗಿರುವಂಥವರಿಗೆ ಅತ್ಯಂತ ಅವಶ್ಯಕವಿದೆ. ಅದರಿಂದ ಆಧುನಿಕ ವಿಜ್ಞಾನದ ಅನುಸಾರವೂ ಸಹ ಅನೇಕ ಲಾಭಗಳಿವೆ. ಹೇಗೆಂದರೆ ರಾತ್ರಿ ಒಂಭತ್ತು ಗಂಟೆಯ ನಂತರ ಶರೀರದ

ಗಡಿಯಾರದ ಅನುಸಾರ ಹೊಟ್ಟೆಯಲ್ಲಿ ಇರುವಂಥ ವಿಷಮಯ ತತ್ವಗಳ ಸ್ವಚ್ಛತೆಯ ಸಮಯವಾಗಿರುತ್ತದೆ. ಆಗ ಹೊಟ್ಟೆಯು ತುಂಬಿದ್ದರೆ ಶರೀರವು ವಿಷ ಸ್ವಚ್ಛತೆಯ ಕಾರ್ಯ ಮಾಡುವದಿಲ್ಲ. ಅಂದರೆ ಹೊಟ್ಟೆಯಲ್ಲಿ ಹೊಲಸು ಹೆಚ್ಚುತ್ತದೆ. ರಾತ್ರಿಭೋಜನ ಮಾಡದಿದ್ದರೆ ಅವರ ಪಚನವು ಒಂಬತ್ತು ಗಂಟೆಯ ತನಕವಾಗುವದರಿಂದ ಅವರ ಶರೀರವು ವಿಷತತ್ವಗಳ ಸ್ವಚ್ಛತೆಯ ಕಾರ್ಯವನ್ನು ಉತ್ತಮ ರೀತಿಯಿಂದ ಮಾಡಬಹುದಾಗಿದೆ.

ಎರಡನೆಯದು ರಾತ್ರಿಯಲ್ಲಿ ಭೋಜನದ ನಂತರ ೨-೩ ಗಂಟೆಗಳ ವರೆಗೆ ಮಲಗಬಾರದು. ಆದ್ದರಿಂದ ಯಾರು ರಾತ್ರಿಯಲ್ಲಿ ತಡಮಾಡಿ ಭೋಜನ ಮಾಡುತ್ತಾರೆ. ಅವರು ತಡಮಾಡಿಯೇ ಮಲಗುತ್ತಾರೆ. ರಾತ್ರಿಯಲ್ಲಿ ಹನ್ನೊಂದರಿಂದ ಒಂದು ಗಂಟೆಯ ವರೆಗಿನ ಗಾಢನಿದ್ರೆಯು ಹೊಟ್ಟೆಯ ಸ್ವಚ್ಛತೆ ಮತ್ತು ಅದರ ಹಾನಿಯನ್ನು ತುಂಬಿಕೊಡುವ ಸಲುವಾಗಿ ಅತ್ಯಂತ ಅವಶ್ಯಕವಿದೆ. ರಾತ್ರಿಭೋಜನ ಮಾಡುವವರ ಸಲುವಾಗಿ ಹಾನಿಯು ಅನಿವಾರ್ಯವೇ ಇದೆ. ಆದ್ದರಿಂದ ಆರೋಗ್ಯದ ದೃಷ್ಟಿಯಿಂದ ರಾತ್ರಿಭೋಜನ ತ್ಯಾಗ ಮಾಡಲೇಬೇಕು. ಇದು ಎರಡನೇ ಲಾಭವಿದೆ.

ಆಯುರ್ವೇದ, ಯೋಗಶಾಸ್ತ್ರ ಮತ್ತು ಜೈನೇತರ ದರ್ಶನಗಳ ಅನುಸಾರವೂ ಸಹ ರಾತ್ರಿಭೋಜನವು ನಿಷಿದ್ಧವಿದೆ. ಜೈನೇತರ ದರ್ಶನದಲ್ಲಿ ರಾತ್ರಿ ಭೋಜನಕ್ಕೆ ಮಾಂಸ ಸೇವಿಸುವದರ ಸಮಾನ ಮತ್ತು ರಾತ್ರಿಯಲ್ಲಿ ನೀರು ಕುಡಿಯುವದಕ್ಕೆ ರಕ್ತ ಕುಡಿಯುವದರ ಸಮಾನವೆಂದು ಹೇಳಿದ್ದಾರೆ. ರಾತ್ರಿಭೋಜನ ಮಾಡುವವರ ಜಪ, ತಪ, ಯಾತ್ರೆ ಎಲ್ಲವೂ ವ್ಯರ್ಥವಾಗುತ್ತವೆ ಮತ್ತು ರಾತ್ರಿಭೋಜನದ ಪಾಪವು ನೂರಾರು ಚಂದ್ರಾಯತನ ತಪಸ್ಸು ಮಾಡುವದರಿಂದಲೂ ತೊಳೆಯುವದಿಲ್ಲ ಎಂದು ಹೇಳಿದ್ದಾರೆ.

ಜೈನದರ್ಶನವು ರಾತ್ರಿಭೋಜನಕ್ಕೆ ಬಹಳ ದೊಡ್ಡ ಪಾಪವೆಂದು ಹೇಳಿದೆ. ಕೆಲವರು ಹೀಗೆ ಹೇಳುತ್ತಾರೆ – "ರಾತ್ರಿಭೋಜನ ತ್ಯಾಗ ಮುಂತಾದ ವ್ರತ ಅಥವಾ ಪ್ರತಿಮೆಗಳು ಸಮ್ಯಗ್ದರ್ಶನದ ನಂತರವೇ ಆಗುತ್ತವೆ ಎಂದು. ಆದರೆ ನಮಗೆ ಈ ರಾತ್ರಿಭೋಜನದಿಂದ ಯಾವ ದೋಷ ಹತ್ತುವದು ? ಎಂದು ಕೇಳುತ್ತಾರೆ. ಅವರಿಗೆ ನಮ್ಮ ಉತ್ತರ ಹೀಗಿದೆ – ರಾತ್ರಿ ಭೋಜನದ ದೋಷವು ಸಮ್ಯಗ್ದೃಷ್ಟಿಯ ಅಪೇಕ್ಷಾ ಮಿಥ್ಯಾದೃಷ್ಟಿಗೆ ಹೆಚ್ಚು ತಗಲುತ್ತದೆ. ಏಕೆಂದರೆ ಮಿಥ್ಯಾದೃಷ್ಟಿಯು ಅದನ್ನು ರಾಗಸಹಿತವಾಗಿ ಸೇವಿಸುತ್ತಾನೆ. ಆದರೆ ಸಮ್ಯಗ್ದೃಷ್ಟಿ ಆವಶ್ಯಕ ಇರದಿದ್ದರೆ ಇಂತಹ ದೋಷಗಳ ಸೇವನೆ ಎಂದೂ ಮಾಡುವದಿಲ್ಲ. ರೋಗ ಬಂದಾಗ ಔಷಧ ರೂಪದಿಂದ ಸೇವನೆ ಮಾಡಬಹುದು ಆನಂದದಿಂದಲ್ಲ ಅಥವಾ ಸ್ವಚ್ಛಂದತೆಯಿಂದಲೂ ಅಲ್ಲ. ಈ ಕಾರಣ ಯಾವದೇ ಪ್ರಕಾರದ ಹಟ ಧರ್ಮಶಾಸ್ತ್ರಗಳ ಮೂಲಕ ಗ್ರಹಣ ಮಾಡಬಾರದು. ಏಕೆಂದರೆ ಧರ್ಮಶಾಸ್ತ್ರಗಳಲ್ಲಿ ಪ್ರತಿಯೊಂದು ಮಾತು ಅಪೇಕ್ಷೆಯಿಂದ ಆಗುತ್ತದೆ. ಆದ್ದರಿಂದ ವ್ರತ ಮತ್ತು ಪ್ರತಿಮೆಗಳು ಪಂಚಮ ಗುಣಸ್ಥಾನದಲ್ಲಿ ಹೇಳಿದ್ದಾರೆ. ಅದರ ಅರ್ಥ ಹೀಗೆ ತಿಳಿಯಬಾರದು. ಹೇಗೆಂದರೆ ಬೇರೆ ಯಾವದೇ ಕೆಳಗಿನ

ಭೂಮಿಕೆಯುಳ್ಳವನಿಗೆ ಅಭ್ಯಾಸದ ಸಲುವಾಗಿ ಅಥವಾ ಪಾಪದಿಂದ ಉಳಿಯುವ ಸಲುವಾಗಿ ಸ್ವೀಕರಿಸಬಾರದು. ರಾತ್ರಿಭೋಜನ ತ್ಯಾಗವು ಎಲ್ಲರ ಸಲುವಾಗಿ ಅವಶ್ಯವಾಗಿ ಸ್ವೀಕರಿಸಲು ಯೋಗ್ಯವಾಗಿದೆ. ಏಕೆಂದರೆ ಯಾರಿಗೆ ದುಃಖ ಪ್ರಿಯ ಇರುವದಿಲ್ಲ. ಅಂಥ ಜೀವರುಗಳು ದುಃಖದ ಕಾರಣರೂಪ ಪಾಪಗಳನ್ನು ಯಾವ ಪ್ರಕಾರ ಆಚರಣೆ ಮಾಡುವ ಸಾಧ್ಯತೆಯಿದೆ ? ಎಂದಿಗೂ ಮಾಡುವದಿಲ್ಲ.

★★★

## ೪೧. ಸಮಾಧಿ ಮರಣ – 'ಚಿಂತನ'

ಎಲ್ಲಕ್ಕಿಂತಲೂ ಮೊದಲು ಮರಣ ಎಂದರೇನು ? ಮತ್ತು ನಿಜವಾಗಿಯೂ ಮರಣವು ಯಾರದಾಗುತ್ತದೆ ? ಇದನ್ನು ತಿಳಿಯುವದು ಬಹಳ ಅವಶ್ಯಕವಿದೆ.

ಆತ್ಮನು ಅಮರನಾಗಿರುವದರಿಂದ ಎಂದೂ ಮರಣಕ್ಕೆ ಪ್ರಾಪ್ತನಾಗುವದಿಲ್ಲ. ಆದರೆ ಆತ್ಮನದು ಪುದ್ಗಲರೂಪಿ ಶರೀರದ ಜೊತೆಗೆ ಏಕಕ್ಷೇತ್ರಾವಗಾಹ ಸಂಬಂಧದ ಕೊನೆ ಆಗುತ್ತದೆ. ಅದನ್ನೇ ಮರಣವೆಂದು ಹೇಳಲಾಗುತ್ತದೆ. ಆದ್ದರಿಂದ ಮರಣ ಅರ್ಥಾತ್ ಆತ್ಮನು ಒಂದು ಶರೀರ ಬಿಟ್ಟು ಬೇರೆ ಶರೀರದಲ್ಲಿ ಹೋಗುವದಾಗಿದೆ.

ಸಂಸಾರದಲ್ಲಿ ಯಾವದೇ ಒಂದು ಮನೆಬಿಟ್ಟು, ಬೇರೆ ಉತ್ತಮವಾದ ಮನೆಯಲ್ಲಿ ಇರಲು ಹೋಗುತ್ತಾರೆ. ಒಬ್ಬನು ಹಳೆಯ ಬಟ್ಟೆಯನ್ನು ಬಿಟ್ಟು ಬದಲಿಸಿ ಹೊಸ ಬಟ್ಟೆ ಧರಿಸುತ್ತಾನೆ. ಆಗ ಯಾರೂ ದುಃಖಿಸುವದಿಲ್ಲ. ರೈಲಿನಲ್ಲಿ ಎಲ್ಲರೂ ತಮ್ಮ ತಮ್ಮ ಸ್ಟೇಶನ್ ಬಂದ ಕೂಡಲೇ ಇಳಿದುಹೋಗುತ್ತಾರೆ. ಆದರೆ ಯಾರೂ ಅದರ ಬಗ್ಗೆ ದುಃಖಿಸುವದಿಲ್ಲ.

ಆದರೆ ಮರಣದ ಪ್ರಸಂಗದಲ್ಲಿ ಏಕೆ ಶೋಕ ಮಾಡುತ್ತಾರೆ ? ಇದರ ಕಾರಣವೇನಂದರೆ ಮೋಹ. ಇದು ಅಜ್ಞಾನವಶಾತ್ ಉಂಟಾಗುತ್ತದೆ. ಅಂದರೆ ಅವರಿಗೆ ಇವನು ನಮ್ಮವನಿದ್ದನೆಂದು ಮನ್ನಿಸಿದ್ದರು. ಆದ್ದರಿಂದ ಶೋಕವಾಗುತ್ತದೆ. ಎಲ್ಲರೂ ತಿಳಿದಿರುತ್ತಾರೆ. ಏನಂದರೆ ಒಂದು ದಿವಸ ಎಲ್ಲರಿಗೂ ಈ ಜಗತ್ತಿನಿಂದ ಹೋಗುವದೇ ಇದೆ. ಆದಾಗ್ಯೂ ತಮ್ಮ ವಿಷಯದಲ್ಲಿ ಎಂದೂ ಯಾವದೇ ವಿಚಾರ ಮಾಡುವದಿಲ್ಲ ಮತ್ತು ಅದರ ಸಲುವಾಗಿ ಅರ್ಥಾತ್ ಸಮಾಧಿ ಮರಣದ ತಯಾರಿಯನ್ನು ಸಹ ಮಾಡುವದಿಲ್ಲ. ಆದ್ದರಿಂದ ಎಲ್ಲರಿಗೂ ತಮ್ಮ ಸಮಾಧಿ ಮರಣದ ವಿಷಯದಲ್ಲಿ ವಿಚಾರ ಮಾಡಿ, ಅದರ ಸಲುವಾಗಿ ತಯಾರಿ ಮಾಡುವದು ಮುಖ್ಯವಾಗಿದೆ.

ಪ್ರಶ್ನೆ : ಸಮಾಧಿಮರಣ ಏನು ಇದೆ ? ಅದರ ತಯಾರಿ ಹೇಗೆ ಆಗುತ್ತದೆ ?

ಉತ್ತರ : ಸಮಾಧಿಮರಣ ಅಂದರೆ ಆತ್ಮಭಾವನೆಯಿಂದ (ಆತ್ಮನಲ್ಲಿ ಸಮಾಧಿಭಾವದಿಂದ) ವರ್ತಮಾನ ದೇಹವನ್ನು ಬಿಡುವದು. ನಾನು ಆತ್ಮನಿದ್ದೇನೆ.

ಹೀಗೆ ಅನುಭವದೊಂದಿಗೆ ಅರ್ಥಾತ್ ಸಮ್ಯಗ್ದರ್ಶನ ಸಹಿತ ಮರಣವನ್ನು 'ಸಮಾಧಿ ಮರಣ' ಎಂದು ಹೇಳಲಾಗುತ್ತದೆ. ಆದ್ದರಿಂದ ಸಮಾಧಿ ಮರಣವು ಮಹತ್ವವಿದೆ. ಏಕೆಂದರೆ ಆ ಜೀವವು ಸಮ್ಯಗ್ದರ್ಶನವನ್ನು ಜೊತೆಯಲ್ಲಿಯೇ ತೆಗೆದುಕೊಂಡು ಹೋಗುತ್ತದೆ. ಇಲ್ಲವಾದರೆ ಸಮಾಧಿ ಮರಣವಾಗದಿದ್ದರೆ ಆ ಜೀವವು ಸಮ್ಯಗ್ದರ್ಶನವನ್ನು ವಾಂತಿ ಮಾಡಿ ಹೋದಂತಾಗುತ್ತದೆ. ಜನರು ಸಮಾಧಿ ಮರಣ ತಯಾರಿಯ ಸಲುವಾಗಿ ಸಲ್ಲೇಖನೆಯ ಭಾವನೆಯನ್ನು ಭಾವಿಸುತ್ತ ತಿಳಿಯುತ್ತಾರೆ. ಕೊನೆಯ ಸಮಯದ ಆಲೋಚನೆ ಮಾಡುತ್ತ / ಮಾಡಿಸುತ್ತ ತಿಳಿಯುತ್ತಾರೆ. ನಿರ್ಯಾಪಕಾಚಾರ್ಯ (ಸಲ್ಲೇಖನ ಸ್ವೀಕರಿಸಿದವನ ನಿರ್ವಹಣೆ ಮಾಡಿಸುವಂಥ ಆಚಾರ್ಯರು) ಶೋಧ ಮಾಡುತ್ತ ತಿಳಿಯುತ್ತಾರೆ. ಆದರೆ ಸಮ್ಯಗ್ದರ್ಶನ ಸಮಾಧಿ ಮರಣದ ಪ್ರಾಣವಿದೆ. ಅದರ ವಿಷಯದಲ್ಲಿ ಜನರು ಅಪರಿಚಿತರಿದ್ದಾರೆಂದು ತಿಳಿದುಬರುತ್ತದೆ. ಆದ್ದರಿಂದ ಸಮಾಧಿ ಮರಣದ ತಯಾರಿಯ ಸಲುವಾಗಿ ಈ ಪೂರ್ಣ ಜೀವನವನ್ನೇ ಕೇವಲ ಸಮ್ಯಗ್ದರ್ಶನದ ಪ್ರಾಪ್ತಿಯ ಉಪಾಯದಲ್ಲಿ ತೊಡಗಿಸುವದು ಯೋಗ್ಯವಾಗಿದೆ. ಏಕೆಂದರೆ ಸಮ್ಯಗ್ದರ್ಶನದ ಹೊರತು ಅನಂತ ಸಲ ಬೇರೆ ಎಲ್ಲವನ್ನು ಮಾಡಿದರೂ ಸಹ ಆತ್ಮನ ಉದ್ಧಾರ ಸಾಧ್ಯವಾಗಿಲ್ಲ. ಭವ ಭ್ರಮಣದ ಕೊನೆ ಆಗುವದಿಲ್ಲ. ಸಮ್ಯಗ್ದರ್ಶನದ ಹೊರತು ಬೇರೆ ಯಾವದೇ ಉಪಾಯ ಮಾಡಿದರೂ ಸಹ ಅಕಸ್ಮಾತ್ ಒಂದೆರಡು ಕೆಲವು ಉತ್ತಮ ಭವಗಳು ದೊರೆಯಬಹುದು. ಆದರೆ ಭವಗಳ ಅಂತ ಆಗುವದಿಲ್ಲ. ಈ ಕಾರಣ ಅನಂತ ದುಃಖಗಳ ಕೊನೆ ಬರುವದೇ ಇಲ್ಲ. ಅಂದರೆ ನರಕ ನಿಗೋದದಿಂದ ಶಾಶ್ವತವಾಗಿ ಉಳಿದುಕೊಳ್ಳುವದು ಆಗುವದಿಲ್ಲ. ಆದ್ದರಿಂದ ಇಂತಹ ದುರ್ಲಭ ಸಮ್ಯಗ್ದರ್ಶನದ ಪ್ರಾಪ್ತಿಯ ತಯಾರಿಯ ಸಲುವಾಗಿ ಈ ಸಂಸಾರದ ಕುರಿತು ವೈರಾಗ್ಯ, ಸಂಸಾರ ಸುಖಗಳ ಕುರಿತು ಉದಾಸೀನತೆ ಮತ್ತು ಶಾಸ್ತ್ರ ಸ್ವಾಧ್ಯಾಯದಿಂದ ಯಥಾರ್ಥ ತತ್ವದ ನಿರ್ಣಯವಾಗುವದು ಅವಶ್ಯಕವಿದೆ.

ಈ ಮನುಷ್ಯ ಭವವು ಅತ್ಯಂತ ದುರ್ಲಭವಿದೆ. ಆದ್ದರಿಂದ ಇದರ ಉಪಯೋಗ ಯಾವುದರಲ್ಲಿ ಮಾಡಬೇಕು. ಈ ವಿಚಾರ ಮಾಡುವದು ಅತ್ಯಂತ ಅವಶ್ಯಕವಿದೆ. ಏಕೆಂದರೆ ಹೇಗೆ ಜೀವನ ಜೀವಿಸುವಿರೋ ಬಹುಶಃ ಹಾಗೆಯೇ ಮರಣವು ಆಗುತ್ತದೆ. ಆದ್ದರಿಂದ ದಿನಾಲು ಜಾಗ್ರತೆಯಿಂದ ಇರುವದು ಅವಶ್ಯಕವಿದೆ. ಜೀವನದಲ್ಲಿ ನೀತಿ, ನ್ಯಾಯ ಅವಶ್ಯಕವಿದೆ. ದಿನಾಲು ಸ್ವಾಧ್ಯಾಯ, ಮನನ, ಚಿಂತನ ಅವಶ್ಯಕವಿದೆ. ಆಯುಷ್ಯದ ಬಂಧವು ಬಹುಶಃ ಯಾವಾಗ ಬೀಳುತ್ತದೆಯೋ ಮತ್ತು ಗತಿಯ ಅನುಸಾರವೇ ಮರಣದ ಸಮಯ ಲೇಶ್ಯೆಯು ಆಗುತ್ತದೆ. ಆದ್ದರಿಂದ ಯಾರು ಸಮಾಧಿಮರಣ ಬಯಸುತ್ತೀರೋ ಅವರು ಪೂರ್ಣ ಜೀವನವನ್ನೇ ಸಮ್ಯಗ್ದರ್ಶನ ಸಹಿತ ಧರ್ಮಮಯವಾಗಿ ಜೀವಿಸುವದು ಅವಶ್ಯಕವಿದೆ. ಜೀವನದ ತುಂಬ ಸಂಪೂರ್ಣ ಪ್ರಯತ್ನ ಸಮ್ಯಗ್ದರ್ಶನದ ಪ್ರಾಪ್ತಿಯ ಸಲುವಾಗಿಯೇ ಮಾಡುವದು ಯೋಗ್ಯವಿದೆ. ಸಮ್ಯಗ್ದರ್ಶನದ ಸಲುವಾಗಿ ಮಾಡಲಾದ ಸಂಪೂರ್ಣ ಶುಭಭಾವ

ಯಥಾರ್ಥ ಇವೆ. ಆದರೆ ಅವು ಭವಗಳ ಕೊನೆ ಮಾಡಲು ಅಯತಾರ್ಥವೆಂದು ಸಿದ್ಧವಾಗುತ್ತದೆ. ಸಮ್ಯಗ್ದರ್ಶನದ ಪ್ರಾಪ್ತಿಯ ನಂತರವೂ ಸಹ ಪ್ರಮಾದ ಮಾಡುವದು ಯೋಗ್ಯ ಇರುವದಿಲ್ಲ. ಏಕೆಂದರೆ ಭಗವಾನರ ಆಜ್ಞೆ ಇದೆ. ಏನಂದರೆ ಒಂದು ಸಮಯವೂ ಸಹ ಪ್ರಮಾದ ಮಾಡಬಾರದು.

ಎಲ್ಲರಿಗೂ ಕೇವಲ ತಮ್ಮ ಪರಿಣಾಮದ ಮೇಲೆಯ ದೃಷ್ಟಿಯನ್ನು ಇಡುವದಿದೆ ಮತ್ತು ಅದರಲ್ಲಿಯೇ ಸುಧಾರಣೆ ಮಾಡುವದಿದೆ. ನಮ್ಮ ಸಲುವಾಗಿ ಯೋಗ್ಯವಾದುದನ್ನೇ ಮಾಡಬೇಕು. ಆರ್ತಧ್ಯಾನ ಮತ್ತು ರೌದ್ರಧ್ಯಾನದ ಸೇವನೆ ಮಾಡಬಾರದು. ಒಂದು ವೇಳೆ ಮರೆವಿನಿಂದ ಅನಾದಿಯ ಸಂಸ್ಕಾರ ವಶದಿಂದ ಆರ್ತಧ್ಯಾನ ಮತ್ತು ರೌದ್ರಧ್ಯಾನ ಉಂಟಾದರೆ ತಕ್ಷಣವೇ ಅದರಲ್ಲಿಂದ ಪಾರಾಗಿ ಅದರ ಕುರಿತು ಪಶ್ಚಾತ್ತಾಪ (ಪ್ರತಿಕ್ರಮಣ) ಮಾಡುವದು. (ಆಲೋಚನಾ) ಮತ್ತು ಭವಿಷ್ಯದಲ್ಲಿ ಹೀಗೆ ಎಂದೂ ಆಗಬಾರದು. (ಪ್ರತ್ಯಾಖ್ಯಾನ) ಹೀಗೆ ದೃಢ ನಿರ್ಧಾರ ಮಾಡಬೇಕು. ಈ ಪ್ರಕಾರ ದುರ್ಧ್ಯಾನದಿಂದ ಉಳಿದುಕೊಂಡು ಪೂರ್ಣ ಪ್ರಯತ್ನವನ್ನು ಸಂಸಾರದ ಕೊನೆಗಾಣಿಸಲು ಇರುವಂಥ ಕಾರಣಗಳಲ್ಲಿಯೇ ತೊಡಗುವದು ಯೋಗ್ಯವಿದೆ. ಹೀಗೆ ಜಾಗ್ರತಿಯಿಂದ ಇರುವದು ಸಂಪೂರ್ಣ ಜೀವನದ ಸಲುವಾಗಿ ಅವಶ್ಯಕವಿದೆ. ಆಗ ಮಾತ್ರ ಮರಣದ ಸಮಯ ಜಾಗ್ರತಿ ಸಹಿತ ಸಮಾಧಿ ಮತ್ತು ಸಮತ್ವಭಾವದಿಂದ ಇರಲು ಸಂಭವ ಇರುತ್ತದೆ. ಇದರಿಂದಲೇ ಸಮಾಧಿಮರಣ ಆಗಬಹುದಾಗಿದೆ. ತಮ್ಮೆಲ್ಲರಿಗೂ ಇಂಥ ಸಮಾಧಿ ಮರಣ ಪ್ರಾಪ್ತವಾಗಲಿ, ಇದುವೇ ನಮ್ಮ ಭಾವನೆಯಿದೆ.

ಜಿನಾಜ್ಞೆಯ ವಿರುದ್ಧ ನಮ್ಮಿಂದ ಏನಾದರೂ ಅಲ್ಪ ಸ್ವಲ್ಪ ಬರೆಯುವಲ್ಲಿ ಮತ್ತು ಅನುವಾದ ಕಾರ್ಯದಲ್ಲಿ ದೋಷಗಳಾಗಿದ್ದರೆ ಮನ, ವಚನ, ಕಾರ್ಯಗಳಿಂದ ಉತ್ತಮ ಕ್ಷಮೆ ಬೇಡುತ್ತೇವೆ.

ಓಂ ಶಾಂತಿ ಶಾಂತಿ ಶಾಂತಿಃ

★★★

## ೪೨. ನಿಸರ್ಗದ ನಿಯಮ – ಯುನಿವರ್ಸಲ್ ಲಾ

### ಎಲ್ಲರಿಗೂ ಸಾಮಾನ್ಯ ರೂಪದಿಂದ ಅನ್ವಯಿಸುವ ವಿಶ್ವವನ್ನು ನಡೆಸುವಂಥ ವ್ಯವಸ್ಥೆ

೧. ನಾನು ಯಾವುದನ್ನು ಕೊಟ್ಟಿದ್ದೆನು, ಅದುವೇ ನನಗೆ ದೊರೆಯುತ್ತದೆ. ನಾನು ಬೇರೆಯವರ ಸಲುವಾಗಿ ಏನನ್ನು ಬಯಸುತ್ತೇನೆ, ಅದುವೇ ನನ್ನ ಜೊತೆಗೆ ಬರುವದು.

೨. ನಾನು ಆತ್ಮನಿದ್ದೇನೆ. ಈ ಶರೀರವು ನನಗೆ ದೊರೆತಂತಹ ಪಾತ್ರವಿದೆ. ಸಾಮಾನ್ಯವಾಗಿ ನನ್ನಿಂದ ಯಾವುದನ್ನು ಬಯಸಲಾಗಿತ್ತು, ಅದೇ ಪಾತ್ರವು ದೊರಕುತ್ತದೆ.

೩. ನನ್ನ ಜೊತೆಗೆ ಯಾವುದು ಸಂಭವಿಸುತ್ತದೆಯೋ ಅದು ನನ್ನ ಭೂತಕಾಲದ್ದೇ ಪ್ರತಿಬಿಂಬ ಇರುತ್ತದೆ. ಅದು ನನ್ನ ಭೂತಕಾಲದ ಕರ್ಮಗಳ ಫಲವಿದೆ. ನಾನು ಯಾವ ಕಾರ್ಯವನ್ನು ಮನ, ವಚನ, ಕಾಯಗಳಿಂದ ಮಾಡಿಲ್ಲವೋ ಅಥವಾ ಮಾಡಿಸಿಲ್ಲವೋ ಅದು ನನ್ನ ಜೊತೆಗೆ ಎಂದೂ ಸಂಭವಿಸುವುದೇ ಇಲ್ಲ.

೪. ಇದರಿಂದ ತಿಳಿದು ಬರುವದೇನೆಂದರೆ ನನ್ನ ಜೊತೆಗೆ ಭೂತ, ವರ್ತಮಾನ ಅಥವಾ ಭವಿಷ್ಯದಲ್ಲಿ ಎಂದೂ ಅನ್ಯಾಯ ಆಗಿರುವದಿಲ್ಲ. ಆಗುವದೂ ಇಲ್ಲ. ಆದ್ದರಿಂದ ನಾನು 'ತಕರಾರು ರಹಿತ ಭಾವ'ದಲ್ಲಿ ಇರಬಹುದಾಗಿದೆ. ನನ್ನ ಜೊತೆಗೆ ಯಾವದು ಆಗುತ್ತದೆಯೋ ಅದು ನನ್ನ ಭೂತಕಾಲದ ಕಾರಣವೇ ಆಗುತ್ತದೆ. ಆದ್ದರಿಂದ ನನ್ನ ಜೊತೆಗೇನೇ ಏಕೆ ? ಎಂಬ ಈ ಪ್ರಶ್ನೆ ಉಪಯುಕ್ತ ಇರುವದಿಲ್ಲ.

೫. ನಾನು ಪುಣ್ಯ ಮಾಡಿ, ಸಪ್ತ ವ್ಯಸನಗಳಿಂದ (ಜೂಜು, ಸೆರೆ ಸೇವನೆ, ಮಾಂಸ ಸೇವನೆ, ವೇಶ್ಯಾಗಮನ, ಕಳ್ಳತನ, ಬೇಟೆಯಾಡುವದು, ಪರಸ್ತ್ರೀಗಮನ ಅಥವಾ ಪರಪುರುಷಗಮನ) ರಹಿತರಾಗಿ ಹಾಗೂ ಕಂದಮೂಲ ಸೇವನೆ, ರಾತ್ರಿಭೋಜನ ಮತ್ತು ಅಭಕ್ಷ್ಯ ಭಕ್ಷಣ (ಉಪ್ಪಿನಕಾಯಿ, ಜೇನುತುಪ್ಪ, ಪಂಚ ಔದುಂಬರ ಫಲ ಬೆಣ್ಣೆ ಮುಂತಾದ) ಇವುಗಳ ತ್ಯಾಗ ಮಾಡಿ ನನ್ನ ಸಲುವಾಗಿ ಸೌಭಾಗ್ಯ ನಿರ್ಮಿಸಿಕೊಳ್ಳಬಹುದಾಗಿದೆ.

೬ ಪಾಪ = ದುಃಖ, ಪುಣ್ಯ = ಸುಖ ಈ ಸಮೀಕರಣ ನೆನಪಿಡಬೇಕು.

೭ ನನಗೆ ದುಃಖದಿಂದಲೂ ಸಹ ಲಾಭ ಮಾಡಿಕೊಳ್ಳುವ ಪದ್ಧತಿ ಕಲಿಯುವದಿದೆ.

೮. ನಾನು ಇಲ್ಲಿ ಕೇವಲ ಕೊಡುವ ಸಲುವಾಗಿ ಬಂದಿದ್ದೇನೆ. ಅದೂ ಸಹ ಯಾವುದೇ ಕರಾರು ರಹಿತ ಅಥವಾ ಅಪೇಕ್ಷಾ ರಹಿತರಾಗಿ ಕೊಟ್ಟು ನಾನು ನನ್ನ ಹಿಂದಿನ ಸಾಲವನ್ನು ತೀರಿಸುತ್ತಿದ್ದೇನೆ ಅಥವಾ ಮತ್ತೆ ಹೊಸ ಸಂಪತ್ತನ್ನು ಕೂಡಿಸುತ್ತಿದ್ದೇನೆ. ಎರಡೂ ಪರಿಸ್ಥಿತಿಗಳಲ್ಲಿ ಲಾಭವು ನನಗೇ ಇದೆ.

೯. ನಾನು ನನ್ನ ಕರ್ತವ್ಯವನ್ನು ಉತ್ಸಾಹದಿಂದ, ಯಾವುದೇ ಅಪೇಕ್ಷೆಯಿಲ್ಲದೆ ಪೂರ್ಣ ಮಾಡಬೇಕು. ಉಳಿದೆಲ್ಲವನ್ನು ಹೀಗೆಯೇ ಮಾಡಬೇಕು. ಯಾವುದೇ ಆಗ್ರಹ, ಅಪೇಕ್ಷೆ ಇಡಬಾರದು. ನಾನು ನನ್ನ ಪರಿವಾರ, ಮಿತ್ರ ಸಹಯೋಗಿಗಳು, ಸಮಾಜ ಮತ್ತು ರಾಷ್ಟ್ರದ ಕುರಿತು ಎಲ್ಲರಿಗೂ ಸಲ್ಲಿಸಬೇಕಾದ ನನ್ನ ಕರ್ತವ್ಯವನ್ನು ಪೂರ್ಣ ನಿಷ್ಠೆಯಿಂದ ನಿರ್ವಹಿಸಬೇಕು.

೧೦. ನಾನು ನನ್ನೊಂದಿಗೆ ಕಠೋರವಾಗಿಯೂ ಮತ್ತು ಬೇರೆಯವರೊಂದಿಗೆ ಮೃದುವಾಗಿಯೂ, ದಯಾಳುವಾಗಿಯೂ ವರ್ತಿಸಬೇಕು.

೧೧. ಯಾವುದು / ಏನು ಆಗುತ್ತಿರುವದು ಅದು ಒಳ್ಳೆಯದಕ್ಕೇನೇ ಆಗುತ್ತಿದೆ ಎಂದು ತಿಳಿಯಬೇಕು. ನಾನು ಇದನ್ನು ಸರಿಯಾಗಿ ಮನ್ನಿಸಿದೆನೆಂದರೆ ಯಾವಾಗಲೂ ಸಕಾರಾತ್ಮಕವಾಗಿಯೇ ಇರುತ್ತೇನೆ.

೧೨. ಜನರೊಂದಿಗೆ ನಾಲ್ಕು ಪ್ರಕಾರವಾಗಿ ವ್ಯವಹರಿಸುವದಿದೆ.

**I)** **ಮೈತ್ರಿ** : ನನಗೆ ಯಾರೊಂದಿಗೂ ವೈರತ್ವ ಇಲ್ಲದಿರುವ ಕಾರಣ ನಾನು ಪ್ರಸನ್ನತೆಯಿಂದ ಇರಲು ಸಾಧ್ಯವಾಗಿದೆ. ನಾನು ಗೆಳೆಯರಿಗೆ / ಇತರರಿಗೆ ಒಳ್ಳೆಯದನ್ನು ಬಯಸುವದರಿಂದ ನನ್ನ ಕಲ್ಯಾಣವಾಗುವದು ಸುನಿಶ್ಚಿತವಿದೆ.

**II)** **ಪ್ರಮೋದ** : ಬೇರೆಯುವರ ಉತ್ತಮ ಗುಣಗಳನ್ನು ನೋಡಿ ಆನಂದಿಸುವದರಿಂದ ಆ ಗುಣಗಳು ನನ್ನಲ್ಲಿಯೂ ಪ್ರಕಟವಾಗುವವು.

**II)** **ಕರುಣೆ** : ಪಾಪಿಗಳನ್ನು, ದೀನದುಃಖಿಗಳನ್ನು ಕಂಡು ನಾನು ಕರುಣೆಯಿಂದ ವರ್ತಿಸಿದರೆ, ನೋಡಿದರೆ ನನ್ನಲ್ಲಿ ಪ್ರಸನ್ನತೆ ಉಂಟಾಗುತ್ತದೆ.

**VI)** **ಮಾಧ್ಯಸ್ಥ** : ಯಾವಾಗ ನನಗೆ ಯಾರೋ ತೊಂದರೆ / ಅಪಮಾನ ಮಾಡಿದರೆ ಆಗ ನಾನು ಯಾವುದೇ ಪ್ರತಿಕ್ರಿಯೆ ನೀಡದೇ ಶಾಂತವಾಗಿ ಇರಬೇಕು. ನಾನೇ ಮನಸ್ಸಿನಲ್ಲಿ ಅವರಿಗೆ ಧನ್ಯವಾದ ಹೇಳಬೇಕು. ಈ ಧನ್ಯವಾದ ಹೇಳುವದೂ ಸಹ ಮೂರು ಚರಣಗಳಿವೆ.

**ಪ್ರಥಮ ಚರಣ** : ನನ್ನ ಭೂತಕಾಲದ ಮರೆವಿನ ಸಲುವಾಗಿ ಕ್ಷಮೆ ಬೇಡುವದು.

**ದ್ವಿತೀಯ ಚರಣ** : ಮತ್ತೊಮ್ಮೆ ಹೀಗೆ ಎಂದೂ ಮರೆಯುವದಿಲ್ಲ ಎಂದು ಹೀಗೆ ಇದನ್ನು ನಿಶ್ಚಿತ ಮಾಡಬೇಕು.

**ತೃತೀಯ ಚರಣ** : ಎದುರಿಗಿರುವವರು, ನನಗೆ ಸ್ವಚ್ಛ ಮಾಡುವಂತಹವರನ್ನು ಮತ್ತು ತೊಂದರೆ ಕೊಡುವವರನ್ನು ಉಪಕಾರಿ ಎಂದು ಮನ್ನಿಸಿ ಅವರಿಗೆ ಧನ್ಯವಾದ ಹೇಳಬೇಕು. ಇದರಿಂದ ನಾನು ಅವರ ಕುರಿತು ತಿರಸ್ಕಾರ ಅಥವಾ ತುಚ್ಛಭಾವದ ವಿಷಚಕ್ರದಿಂದ ಉಳಿದುಕೊಳ್ಳುತ್ತೇನೆ. ಈ ಮೂರೂ ಚರಣಗಳು ನಮಗೆ ಪ್ರಸನ್ನತೆಯ ಸಲುವಾಗಿ ರಕ್ಷಾಕವಚದಂತಿವೆ. ಆದ್ದರಿಂದ ಈ ಸಿದ್ಧಾಂತವು ಸ್ವಾಗತಿಸಲು ಯೋಗ್ಯ ಇದೆ. ಈ ರೀತಿ ನಾನು ನನ್ನಿಂದ ನಾನೇ ನಕಾರಾತ್ಮಕ ಭಾವನೆಗಳಿಂದ ಉಳಿದುಕೊಂಡು ಸಕಾರಾತ್ಮಕ ವಿಚಾರಗಳನ್ನು ಯಾವಾಗಲೂ ಮಾಡುತ್ತಿರಬೇಕು.

೧೩. ನಮ್ಮ ವಿಚಾರಗಳು ಸಕಾರಾತ್ಮಕವಾಗಿಯೂ, ವಿಚಾರಪೂರ್ವಕವಾಗಿಯೂ ಆಗಿರಬೇಕು. ಬಲಪೂರ್ವಕವಾಗಬಾರದು. ಇದರಿಂದ ನಮ್ಮ ಪ್ರಸನ್ನತೆಗೆ

ಭಂಗ ಬರುವದಿಲ್ಲ. ಆದ್ದರಿಂದ ನಮ್ಮ ಮಾರ್ಗವು 'ಸಹಜಯೋಗ'ದ್ದಾಗಿರಬೇಕು. ಹಠಯೋಗದ್ದಾಗಿರಬಾರದು.

೧೪. ಈ ಜೀವನದಲ್ಲಿ ನನಗೆ ನನ್ನ ಶರೀರ ಮತ್ತು ಮನಸ್ಸಿನ ಉಪಯೋಗ ಮಾಡಿಕೊಂಡು ಸಂಸಾರದಿಂದ ಬಿಡುಗಡೆಯಾಗಿ ಮುಕ್ತಿ ಪಡೆಯಬೇಕೆಂಬ ಉದ್ದೇಶ ಇರುವದರಿಂದ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳಲೇ ಬೇಕು.

೧೫. ಸತ್ಯವು ನಮ್ಮೊಳಗೇ ಇರುತ್ತದೆ. ಅದನ್ನು ಎಲ್ಲಿಯೂ ಹೊರಗೆ ಹುಡುಕುವ ಅವಶ್ಯಕತೆಯಿಲ್ಲ. ನಮಗೆ ನಮ್ಮಿಂದ ನಾವೇ ಒಳಗಿನಿಂದ ಬದಲಾಗುವ ಅವಶ್ಯಕತೆಯಿದೆ.

೧೬. ಯಾರು ಸತ್ಯವನ್ನು ಪ್ರಾಪ್ತ ಮಾಡಿಕೊಂಡಿರುವರು. ಅವರು ಅದೇ ಮಾರ್ಗವನ್ನು ಹೇಳುತ್ತಾರೆ. ಅಂಥ ಜನರು ಯಶಸ್ಸು, ಕೀರ್ತಿ, ಸಂಪತ್ತು, ವೈಭವ, ಸನ್ಮಾನ ಮುಂತಾದವುಗಳ ಹಿಂದೆ ಓಡುವದಿಲ್ಲ.

೧೭. ಸಮ್ಯಗ್ದರ್ಶನದ ಪ್ರಾಪ್ತಿಯ ಸಲುವಾಗಿ ನಾವು ಯಾವಾಗಲೂ ಸತ್ಯ ಸ್ವೀಕರಿಸಲು ತಯಾರ ಇರಬೇಕು. ಸತ್ಯವನ್ನು ಸಮ್ಯಗ್ದರ್ಶನದ ಸಲುವಾಗಿ ಸಂಸಾರದ ಇಚ್ಛೆ, ಆಕಾಂಕ್ಷೆ, ಅಪೇಕ್ಷೆ, ಸ್ವಾರ್ಥ, ನಿಂದೆ, ವಂಚನೆ ಮುಂತಾದವುಗಳನ್ನು ಬಿಡುವದು ಅತ್ಯಂತ ಅವಶ್ಯಕವಿದೆ ಮತ್ತು ಮೊದಲ ಕಾರ್ಯವಾಗಿದೆ, ಮನೆ, ಪರಿವಾರ, ಸಂಪತ್ತು ಮುಂತಾದವನ್ನು ಬಿಡುವ ಅವಶ್ಯಕತೆಯಿಲ್ಲ. ಸಂಸಾರದ ಇಚ್ಛೆ, ಅಪೇಕ್ಷೆಗಳನ್ನು ಬಿಡುವ ಸಲುವಾಗಿ ನಮಗೆ ನಾವೇ ಪ್ರತಿ ಎರಡು ತಾಸುಗಳಿಗೊಮ್ಮೆ ಪರೀಕ್ಷಿಸಿಕೊಳ್ಳಬೇಕು. ಮೇಲಿಂದ ಮೇಲೆ ಹನ್ನೆರಡು ಭಾವನೆಗಳ ಚಿಂತನೆ ಮಾಡಿ ಸಂಸಾರದ ಭಾವನೆಗಳನ್ನು ಬೇರು ಸಹಿತ ಕಿತ್ತು ಹಾಕಬೇಕು.

೧೮. ನಾನು ನನ್ನಿಂದಲೇ ಬದಲಾಗಬೇಕಿದೆ. ಬೇರೆಯವರನ್ನು ಬದಲಿಸುವೆನೆಂಬ ಆಗ್ರಹ ಇಡಬಾರದು. ಇದು ಬಹಳ ಕಠಿಣವಿದೆ. ನಿರಾಶಾದಾಯಕ, ಶೋಕ, ಸಂತಾಪ, ಕಷ್ಟ ಮುಂತಾದವುಗಳ ಜನಕವಿದೆ. ಬೇರೆಯವರಿಗೆ ನಾವು ಕೇವಲ ಪ್ರೇರಣೆ / ಮಾರ್ಗದರ್ಶನ ಮಾತ್ರ ಕೊಡಬಹುದು.

೧೯. ಎಲ್ಲ ಸಂಸಾರಿ ಜೀವಿಗಳಿಗೆ ಅನಂತಕಾಲದ ತನಕ ಇರಲು ಎರಡೇ ಸ್ಥಾನಗಳಿವೆ. ೧. ಮೋಕ್ಷ (ಅನಂತ ಹಾಗೂ ಶಾಶ್ವತ ಸುಖ) ಮತ್ತು ೨. ನಿಗೋದ (ಅನಂತ ದುಃಖ). ಒಂದು ವೇಳೆ ಮೋಕ್ಷ ದೊರೆಯದಿದ್ದರೆ ನಿಗೋದದ ಹೊರತು ಯಾವುದೇ ಬೇರೆ ಗತಿಯು ಪ್ರಯತ್ನದಿಂದ ದೊರೆಯಬಹುದು. ಆದ್ದರಿಂದ ನಮಗೆ ಮೋಕ್ಷದ ಸಲುವಾಗಿಯೇ ಸಂಪೂರ್ಣ ಪ್ರಯತ್ನ ಮಾಡುವದಿದೆ ಮತ್ತು ಮಾಡಲೇಬೇಕು.

೨೦. ನಮ್ಮನ್ನು ಬೇರೆಯವರೊಡನೆ ಹೋಲಿಸದೇ ನಮ್ಮ ಭೂತಕಾಲದ ಹೋಲಿಕೆಯೊಂದಿಗೆ ವರ್ತಮಾನ ಕಾಲದ ಸ್ಥಿತಿಯನ್ನು ಹೋಲಿಸಿ

ನೋಡಬೇಕು ಮತ್ತು ಅದನ್ನು ಉತ್ತಮವಾಗಿ ಮಾಡಿಕೊಳ್ಳಬೇಕು. ಈ ತರಹ ನಾವು ದೈನಿಕ ಪ್ರಗತಿಯನ್ನು ಹೊಂದಬೇಕು.

೨೧. ಈ ನಿಯಮಗಳನ್ನು ದಿನಪೂರ್ತಿ ಪಾಲಿಸಬೇಕು. ರಾತ್ರಿ ಮಲಗುವ ಮೊದಲು ನಾವು ಮರೆತಿರುವವುಗಳನ್ನು ತಿದ್ದಿಕೊಳ್ಳಬೇಕು. ನಮ್ಮಿಂದಾದ ತಪ್ಪುಗಳಿಗಾಗಿ ಜಿನೇಂದ್ರ ಭಗವಂತರಲ್ಲಿ ಕ್ಷಮೆ ಯಾಚಿಸಬೇಕು.

# ಲೇಖಕರ ಇತರ ಕೃತಿಗಳು

- **ಮೂಲ ಕೃತಿಗಳು :**


೧. ಚಾರಿತ್ರ ಚಕ್ರವರ್ತಿ ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರು
೨. ದರ್ಶನ
೩. ನಂದಗೋಕುಲ
೪. ಸಮನ್ವಯ ಗೀತೆಗಳು
೫. ಪುಣ್ಯಭೂಮಿ ಭಾರತ
೬. ಸಂಕ್ಷಿಪ್ತ ಜೈನ ಧರ್ಮ ಬೋಧೆ
೭. ಆತ್ಮಧರ್ಮದ ಕಥೆಗಳು
೮. ಯೋಗಿ ಸಂದೇಶ
೯. ಆತ್ಮೋನ್ನತಿಯ ಗೀತೆಗಳು
೧೦. ಕ್ಷೇತ್ರ ಪರಿಚಯ
೧೧. ಸನ್ಮತಿ ದೀಪಿಕೆ
೧೨. ತತ್ವಾರ್ಥಸೂತ್ರ ದೀಪಿಕೆ
೧೩. ತೀರ್ಥಲೋಕ
೧೪. ಆತ್ಮಸಾಧಕಿಯರು
೧೫. ಪಾರ್ಶ್ವನಾಥ ತೀರ್ಥಂಕರರು
೧೬. ದಾನಚಿಂತಾಮಣಿ ಅತ್ತಿಮಬ್ಬೆ
೧೭. ಜೈನ ಹಬ್ಬಗಳು ಹಾಗೂ ನೋಂಪಿಗಳು
೧೮. ಜೈನ ಶ್ರಾವಕ – ಸಂಸ್ಕಾರ ಸಿಂಧು
೧೯. ಆಚಾರ್ಯ ಪರಮೇಷ್ಠಿಗಳು
೨೦. ಸಮ್ಮೇದ ಶಿಖರಜಿ ವೈಭವ
೨೧. ಆತ್ಮದರ್ಶನ
೨೨. ಜೈನ ಧರ್ಮ
೨೩. ನೂರೆಂಟು ದೃಷ್ಟಾಂತ ಕಥೆಗಳು-೧
೨೪. ಭಕ್ತಾಮರ ಸ್ತೋತ್ರ ಹಾಗೂ ಪರಮಾನಂದ ಸ್ತೋತ್ರ
೨೫. ಪ್ರವಚನ ಪರಿಮಳ
೨೬. ಸ್ವಾನುಭವ ಭಾಗ – ೧
೨೭. ಸ್ವಾನುಭವ ಭಾಗ – ೨
೨೮. ನೂರೆಂಟು ದೃಷ್ಟಾಂತ ಕಥೆಗಳು-೨
೨೯. ಸಮವಸರಣ ವೈಭವ
೩೦. ಭೇದ-ಪ್ರಭೇದ ಸಂಗ್ರಹ
೩೧. ಪಟ್ಟದರಸಿ ಇಚ್ಛಾಮಹಾದೇವಿ
೩೨. ಮೃತ್ಯು ಮಹೋತ್ಸವ
೩೩. ಸ್ವಾನುಭವ – ೩
೩೪. ನೋಂಪಿಗಳು ಹಾಗೂ ಕಥೆಗಳು
೩೫. ಸ್ವಾನುಭವ – ೪


- **ಸಂಪಾದಿತ ಕೃತಿಗಳು :**

೩೬. ಗ್ರಾಮ ಸಂಪದ
೩೭. ಪಾರಸಪ್ರಭೆ
೩೮. ವೀರ ಮಾರ್ತಂಡ ಚಾವುಂಡರಾಯ
೩೯. ಕೃಷ್ಣಾತೀರ ಜಿನ ಸಿರಿ
೪೦. ಪರಮಾತ್ಮ ಪ್ರಕಾಶ
೪೧. ಅತಿಶಯಕ್ಷೇತ್ರ ಹುಣಸೀಹಾಳ
೪೨. ಜಿನಧರ್ಮ ಪ್ರವೇಶಿಕಾ

- **ಅನುವಾದಿತ ಕೃತಿಗಳು :**

೪೩. ರತ್ನಕರಂಡಕ ಶ್ರಾವಕಾಚಾರ
೪೪. ಜೈನ ಸಿದ್ಧಾಂತ ಪ್ರವೇಶಿಕಾ
೪೫. ಸತ್ಯಾರ್ಥ ದರ್ಶನ
೪೬. ಅಷ್ಟದ್ರವ್ಯ ಪೂಜೆಯ ಸುಪ್ರಸಿದ್ಧ ಕಥೆಗಳು
೪೭. ಧವಲಾ – ಭಾಗ ೧೬
೪೮. ಜಯಧವಲಾ – ೧೧
೪೯. ಮಹಾಬಂಧ – ೨
೫೦. ಜೈನಧರ್ಮ ತಿಳಿಯಿರಿ
೫೧. ಉಪದೇಶ ಸಿದ್ಧಾಂತ ರತ್ನಮಾಲಾ
೫೨. ಧ್ಯಾನವೇ ಧರ್ಮ
೫೩. ಚಿದ್‌ಕಾಯದ ಆರಾಧನೆ
೫೪. ಆತ್ಮವೈಭವ
೫೫. ಣಮೋಕಾರ ಮಂತ್ರ, ಉಪವಾಸ ವ್ರತ ವಿಧಿ
೫೬. ನವದೇವತೆಗಳು
೫೭. ಹತ್ತು ಆರಾಧನೆಗಳ ಸಂಗ್ರಹ
೫೮. ಆತ್ಮಸಾಧಕಿಯರು
೫೯. ಪದ್ಮಪುರಾಣ
೬೦. ನೂರೆಂಟು ದೃಷ್ಟಾಂತ ಕಥೆಗಳು (ಭಾಗ ೪)
೬೧. ಸಮ್ಯಗ್ದರ್ಶನದ ವಿಧಿ





**ಮೈತ್ರಿ ಭಾವನೆ :**

ಎಲ್ಲ ಜೀವಿಗಳ ಕುರಿತು ನಿರ್ವೈರ ಬುದ್ಧಿ ಇಡುವದು, ಮಿತ್ರತ್ವದ ಚಿಂತನೆ ಮಾಡುವದು, ನನಗೆ ಯಾರೂ ವೈರಿಗಳೇ ಇರುವದಿಲ್ಲ. ಹೀಗೆ ಚಿಂತನೆ ಮಾಡುವದು. ಎಲ್ಲ ಜೀವಗಳ ಹಿತವನ್ನೇ ಬಯಸುವದು.

**ಪ್ರಮೋದ ಭಾವನೆ :**

ಉಪಕಾರಿ ಹಾಗೂ ಗುಣವಂತರ ಕುರಿತು ಉತ್ತಮ ಗುಣಗಳ ಕುರಿತು ಹಾಗೂ ವೀತರಾಗ ಧರ್ಮದ ಕುರಿತು ಪ್ರಮೋದ ಭಾವ ಇಡುವದು.

**ಕಾರುಣ್ಯ ಭಾವನೆ :**

ಅಧರ್ಮಿ ಜೀವಗಳ ಕುರಿತು, ವಿಪರೀತ ಧರ್ಮದಿಂದ ನಡೆಯುವ ಜೀವಗಳ ಕುರಿತು ಹಾಗೂ ಅನಾರ್ಯ ಜೀವಗಳ ಕುರಿತು ಕರುಣಾ ಭಾವ ಇಡುವದು.

**ಮಾಧ್ಯಸ್ಥ ಭಾವನೆ :**

ವಿರೋಧಿಗಳ ಕುರಿತು ಮಧ್ಯಸ್ಥ ಭಾವನೆ ಇರುವದು.

**ಮುಖಪುಟದ ವಿವರಣೆ :**

ನಮ್ಮ ಜೀವನದಲ್ಲಿ ಸಮ್ಯಗ್ದರ್ಶನದ ಸೂರ್ಯೋದಯವಾಗಲಿ. ಮತ್ತು ಅದರ ಫಲಸ್ವರೂಪವಾಗಿ ಅವ್ಯಾಬಾಧ ಸುಖಸ್ವರೂಪ ಸಿದ್ಧ–ಅವಸ್ಥೆಯು ಪ್ರಾಪ್ತಿಯಾಗಲಿ – ಇದೇ ಭಾವನೆಯಿದೆ.